ರಿಜಿಸ್ಟರ್ ನಂ. 793

ಮೈಸೂರು ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿಪ್ರತಿಗೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ೧೨ ಆಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೪] SADHVI · THURSDAY 1-9-1955 ಮೈಸೂರು ಗುರುವಾರ ೧-೯-೧೯೫೫ [ಸಂಚಿಕೆ : ೨೦

ಡಾಮನ್ನಿನಲ್ಲಿ ಪಾಕಿಸ್ತಾನದ ವಿಮಾನ ಬಂದಿಳಿಯಿತು

ದೇವರಾಜೆ ಅರಸಿನವರು ಪುನಃ ದರ್ಬಾರ್ ಭಕ್ಷಿಗಳು

ಇಂದು ಅಧಿಕಾರ ವಹಿಸಿಕೊಂಡರು

ಮೈಸೂರು ೧

ಸುಮಾರು ೮ ತಿಂಗಳ ಹಿಂದೆ ದರ್ಬಾರ್ ಭಕ್ಷಿ ಪದದಿಂದ ನಿವೃತ್ತರಾದ ಸರ್ದಾರ್ ಶ್ರೀ ಎಚ್. ದೇವರಾಜೆ ಅರಸಿನವರನ್ನು ಇಂದಿನಿಂದ ಅದೇ ಹುದ್ದೆಗೆ ಶ್ರೀಮನ್ಮಹಾರಾಜರು ನೇಮಿಸಿದರು. ಶ್ರೀಯುತರು ಇಂದು ಅಧಿಕಾರ ವಹಿಸಿಕೊಂಡರು

ಚಾಕು ಹಾಕಿಕೊಂಡು ಆತ್ಮಹತ್ಯ ಪ್ರಯತ್ನ

ಮೈಸೂರು ತಾಲ್ಲೂಕು ಮೇಳ್ಳಿಯ ವೆಂಕಟೇಗೌಡ ಎಂಬಾತನು ಕುತ್ತಿಗೆ ಕುಯ್ದುಕೊಂಡು ಆತ್ಮಹತ್ಯ ಮಾಡಿಕೊಳ್ಳಲೆತ್ನಿಸುತ್ತಿದ್ದುದನ್ನು ಶ್ರೀ ...ಣ್ಣ ಎಂಬುವರು ಕಂಡು ಪೋಲೀಸರಿಗೆ ತಿಳಿಸಿದರು. ಆಗಿ ವೆಂಕಟೇಗೌಡನನ್ನು ಚಿಕಿತ್ಸೆಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ.

ಬಳ್ಳಾರಿ ಪ್ರಶ್ನೆಯನ್ನು ಪುನಃ ಎತ್ತಲು ಮೈಸೂರಿನ ವಿರೋಧ

ಸಂಸ್ಥಾನಗಳ ಪುನರ್ರಚನಾ ಸಮಿತಿಗೆ ಶಾಸನಸಭಾ ಸದಸ್ಯರ ಮನವಿ

ಮೈಸೂರು ಶಾಸನ ಸಭೆಗಳ ೫೦ ಮಂದಿ ಸದಸ್ಯರು ಸಂಸ್ಥಾನಗಳ ಪುನರ್ರಚನಾ ಸಮಿತಿಗೆ ಮನವಿಯೊಂದನ್ನು ಕಳುಹಿಸಿ, ಮೈಸೂರು ಸಂಸ್ಥಾನದೊಡನೆ ಬಳ್ಳಾರಿ ಜಿಲ್ಲೆಯನ್ನು ವಿಲೀನಗೊಳಿಸಿದುದು ಮತ್ತೆ ಪ್ರಸ್ತಾಪ ಮಾಡಕೂಡದೆಂದು ಒತ್ತಾಯಪೂರ್ವಕವಾಗಿ ಪ್ರಾರ್ಥನೆ ಮಾಡಿರುತ್ತಾರೆ. ಆವರ ನಕಲುಗಳನ್ನು ರಾಷ್ಟ್ರಾಧ್ಯಕ್ಷರಿಗೂ ಪ್ರಧಾನಿ ನೆಹರೂರವರಿಗೂ ಕಳುಹಿಸಿರುತ್ತಾರೆ. ತುಂಗಭದ್ರಾ ಯೋಜನೆಯ ಆಡಳಿತದಲ್ಲಿ ಆದ ಅನಾನುಕೂಲತೆಯ ಕಾರಣದ ಮೇಲೆ ...ಯಲ್ಲಿರುವ ಆಂಧ್ರರು ಮತ್ತು ಆಂಧ್ರ ...ರದವರು ಈ ಪ್ರಶ್ನೆಯನ್ನು ಎತ್ತುವಂತೆ ...ಲು ಹೊರಟಿರುವರೆಂದೂ, ಆಂಧ್ರ ಸಂಸ್ಥಾನ ...ಸನದ ೬೬ ನೇ ನಿಬಂಧನೆಯು ತುಂಗಭದ್ರಾ ಯೋಜನೆ ಬಗ್ಗೆ ಹುಟ್ಟುವ ಎಲ್ಲಾ ತೊಂದರೆಗಳನ್ನೂ ಪರಿಹರಿಸಲು ಕ್ರಮಗಳನ್ನು ಒಳಗೊಂಡಿರುವುದೆಂದೂ ಶಾಸನ ಸಭಾ ಸದಸ್ಯರು ...ರುವರು. ತುಂಗಭದ್ರಾ ಯೋಜನಾ ಸಮಿತಿಯನ್ನು ರಾಷ್ಟ್ರಾಧ್ಯಕ್ಷರೇ ಏರ್ಪಡಿಸಿರುವುದರಿಂದ ...ನ ತೊಂದರೆಗೂ ಅವಕಾಶವಿಲ್ಲವೆಂದೂ, ...ಂದ ಈ ವಿಚಾರಗಳನ್ನು ಗಣನೆಗೆ ತಾರದೆ, ...ರಿಸ್ಥಿತಿಯನ್ನು ಪುನರ್ರಚನಾ ಸಮಿತಿ ...ವ್ಯಸ್ತ ಮಾಡಬಾರದೆಂದೂ ಅವರು ...ಯಪಟ್ಟಿರುವರು.

ಗೋವಾಕ್ಕೆ ನೆನ್ನೆ ಮತ್ತೊಂದು ಸತ್ಯಾಗ್ರಹಿ ತಂಡ

...ರವಾರ ಜಿಲ್ಲೆಯ ಮೂಲಕ ಗೋವಕ್ಕೆ ನೆ... ಮಂದಿ ಸತ್ಯಾಗ್ರಹಿಗಳ ಮತ್ತೊಂದು ತಂಡ ...ಧ್ಯ ಪ್ರದೇಶದ ನರೇಂದ್ರಲಾಲರ ನಾಯಕತ್ವದಲ್ಲಿ ಪ್ರವೇಶ ಮಾಡಿತೆಂದು ಗೊತ್ತಾಗಿದೆ.

ಹೊಸ ವಿಕೇಂದ್ರೀಕೃತ ಕೈಗಾರಿಕೆಗಳ ಸ್ಥಾಪನೆ

ಬೆಂಗಳೂರು ೧

ಕೈಗಾರಿಕಾ ಮಂತ್ರಿ ಶ್ರೀ ಎಚ್. ಎಂ. ಚನ್ನಬಸಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸುತ್ತಾ, ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಕಿರಿದು ವಿಸ್ತರಣಾಗುವುದೆಂದೂ, ಕೈಗಾರಿಕೆಗಳನ್ನು ವಿಕೇಂದ್ರೀಕರಿಸಿ, ಸಂಸ್ಥಾನದ ನಾನಾ ಭಾಗಗಳಲ್ಲಿ ಅವುಗಳನ್ನು ಸ್ಥಾಪಿಸಲಾಗುವುದೆಂದೂ, ಸರ್ಕಾರದವರ ಪ್ರಸ್ತಾವನೆಗೆ ಒಂದಿರುವ ಅಂತ್ರರಗಳು ಬಗೆಹರಿದಿ ವಿಕೇಂದ್ರೀಕರಣವಾಗದೆಂದು ಸೂಚಿಸಿರುವುದಾಗಿಯೂ ತಿಳಿಸಿರುವರು. ಕೇಂದ್ರ ಸರ್ಕಾರದವರೊಡನೆ ಅವರು ಮೈಸೂರು ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಖಾನೆ ವಿಸ್ತರಣವನ್ನು, ಮೈಸೂರು ಗಂಧದೆಣ್ಣೆ ಕಾರ್ಖಾನೆ ವಿಷಯವನ್ನು ಕುರಿತು ಚರ್ಚಿಸಿದರು.

ಪಾಟ್ನಾ ವಿದ್ಯಾರ್ಥಿಗಳಿಂದ ನೆಹರೂರವರಿಗೆ ಕ್ಷಮಾಪಣೆ

ಕಳೆದ ೧೫ನೇ ತಾರೀಕು ಸ್ವಾತಂತ್ರ್ಯೋತ್ಸವದ ದಿನ ಪಾಟ್ನಾ ವಿದ್ಯಾರ್ಥಿಗಳು ರಾಷ್ಟ್ರ ಧ್ವಜದ ಬಗ್ಗೆ ತೋರಿಸಿದ ವರ್ತನೆಗಾಗಿ ಅಲ್ಲಿನ ವಿದ್ಯಾಲಯದ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯು ಒಪ್ಪಿಕೊಂಡ ಬಗ್ಗೆ ಮಿತ್ರರವರು ಪ್ರಧಾನಿ ನೆಹರೂರವರಿಗೆ ಮನವಿಯನ್ನು ಸಲ್ಲಿಸಿ ವಿದ್ಯಾರ್ಥಿಗಳ ಪರವಾಗಿ ಕ್ಷಮಾಪಣೆ ಕೋರಿರುತ್ತಾರೆ. ಈ ಕ್ರಿಯಾ ಸಮಿತಿಯು ಚಳುವಳಿ ನಡೆಸಿದ ಸಮಿತಿಯ ಪ್ರತಿಸ್ಪರ್ಧಿ ಸಮಿತಿಯಾಗಿದೆ. ಬಿಹಾರ ಮತ್ತು ಎಡ ರಾಜಕೀಯ ಪಕ್ಷಗಳ ಪ್ರೇರಣೆ ಮೇಲೆ ಪಾಟ್ನಾ ವಿದ್ಯಾರ್ಥಿ ಕ್ರಿಯಾ ಸಮಿತಿಯು ತ್ರಿವರ್ಣ ಧ್ವಜಕ್ಕೆ ಅವಮಾನ ಮಾಡಿರುವುದನ್ನು ಇತರ ವಿದ್ಯಾರ್ಥಿಗಳು ತಡೆಯಲು ಅಸಮರ್ಥರಾದುದ್ದಕ್ಕಾಗಿ ಮಿತ್ರರವರು ವಿಷಾದಪಟ್ಟಿರುವರು.

ಅರ್ಜೆಂಟೈನಾ ಅಧ್ಯಕ್ಷರು ರಾಜೀನಾಮೆಗೆ ಸಿದ್ಧ

ಅರ್ಜೆಂಟೈನಾ ದೇಶದ ಅಧ್ಯಕ್ಷರಾಗಿ ೯ ವರ್ಷಗಳಿಂದಲೂ ಅಧಿಕಾರದಲ್ಲಿದ್ದ ಪೆರೋನರವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಲು ಮುಂದೆ ಬಂದಿರುತ್ತಾರೆ. ದೇಶದಲ್ಲಿ ಶಾಂತಿ ನೆಲೆಸುವುದನ್ನು ನಿವಾರಿಸಲು ಅವರು ಈ ಕ್ರಮ ಕೈಗೊಳ್ಳುವುದಾಗಿ ಹೇಳಿರುತ್ತಾರೆ. ಅವರ ನೆನ್ನೆ ರಾಜಧಾನಿ ಬ್ಯೂನೋಸ್ ಏರ್ಸ್‌ನಲ್ಲಿ ಅನೇಕ ಕಾರ್ಮಿಕರು ಭಾರಿ ಗುಂಪು ಕೂಡಿ ಮೆರವಣಿಗೆ ನಡೆಸಿ ಅಧ್ಯಕ್ಷರು ರಾಜೀನಾಮೆಯನ್ನು ವಾಪಸು ಪಡೆಯಬೇಕೆಂದು ಒತ್ತಾಯ ಮಾಡಿದರು.

○ರಾಜಧಾನಿಯ ಎರಡನೇ ನ್ಯಾಯಾಧೀಶರು, ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ಕುರಸನೆರೆ ದಿನಸಿ ಅಂಗಡಿಯ ಶ್ರೀ ಸೋಮ, ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಗಣೇಶಾ ಲಾಂಡ್ರಿಯ ಶ್ರೀ ಕೃಷ್ಣಸಿಂಗ್‌ರವರಿಗೆ ತಲಾ ೨ ರೂ. ಮತ್ತು ದೇವರಾಜಾ ಮಾರ್ಕೆಟ್ ಚೌಕದಲ್ಲಿರುವ ಬೀಡಿ ಅಂಗಡಿಯ ಶ್ರೀ ವೆಂಕಟರಮಣ ಅಯ್ಯರ್‌ರವರಿಗೆ ಎರಡು ಮೊಕದ್ದಮೆಗಳಲ್ಲಿ ತಲಾ ೩ ರೂ. ದಂಡವನ್ನು ವಿಧಿಸಿರುವರು.

ಮಕ್ಕಳ ಪುಸ್ತಕ ಭಂಡಾರಕ್ಕೆ ಮಹಾರಾಜರಿಂದ ೪,೦೦೦ ರೂ.

ಮೈಸೂರು ೧

ಮೈಸೂರು ನಗರದ ಕೋಟೆ ಕೃಷ್ಣಿನವರು ಕಟ್ಟಿಸಲಿರುವ ಮಕ್ಕಳ ಪುಸ್ತಕ ಭಂಡಾರದ ಕಟ್ಟಡದ ನಿಧಿಗೆ ಶ್ರೀಮನ್ಮಹಾರಾಜರು ೪,೦೦೦ ರೂ. ಗಳನ್ನು ಉದಾರವಾಗಿ ಕೊಟ್ಟಿರುವರು. ಮೈಸೂರು ರಾಜ್ಯ ರಕ್ಷೆಯ ಬಳಿಯ ಖಾಲಿ ನಿವೇಶನವನ್ನು ಪುರಸಭೆಯವರು ಉಚಿತವಾಗಿ ಕೊಟ್ಟಿರುವ ನಿವೇಶನದಲ್ಲಿ ಕಟ್ಟಡವನ್ನು ಕಟ್ಟಲಾಗುವುದು

ಚಿನ್ನದ ಗಣಿ ರಾಷ್ಟ್ರೀಕರಣ, ಇಷ್ಟವಿದ್ದರೆ ರಾಜೀನಾಮೆ

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ರಾಜರ್ಸನ್‌ಪೇಟೆಯಲ್ಲಿ ಭಾಷಣ ಮಾಡುತ್ತಾ, ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಬಗ್ಗೆ ಸರ್ಕಾರದವರ ನಿರ್ಧಾರವು ಸ್ಪಷ್ಟವಾದುದೆಂದೂ, ಈ ಪ್ರಶ್ನೆಯಲ್ಲಿ ಸರ್ಕಾರವು ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯುವುದಿಲ್ಲವೆಂದೂ ಸಾರಿರುವರು. ತಮ್ಮ ಸರ್ಕಾರದ ನಿಲುವನ್ನು ಯಾರಾದರೂ ಎತ್ತಿ ಹಾಕಿದರೆ ತಾವು ರಾಜೀನಾಮೆ ಕೊಡುವುದಾಗಿಯೂ ಅವರು ವ್ಯಕ್ತಪಡಿಸಿದರು

ಕಂಪೆನಿಯು ಸೆರಮಾರರಿಗೆ ನ್ಯಾಯವಾದ ಪರಿಹಾರವನ್ನು ಕೊಡಬೇಕೆಂಬುದೇ ಮೈಸೂರು ಮತ್ತು ಭಾರತ ಸರ್ಕಾರಗಳ ನೀತಿಯೆಂದು ಅವರು ತಿಳಿಸಿ, ಸೆರಮಾರರಿಗೆ ಈಗಾಗಲೇ ಅವರ ಷೇರಿನ ಮೊತ್ತಕ್ಕೆ ೨೨ ರಷ್ಟು ಹಣವು ಹಾನಿಯಾಗಿರುವುದೆಂದೂ, ಅವರುಗಳಿಗೆ ಎಷ್ಟರ ಮಟ್ಟಿಗೆ ಪರಿಹಾರ ಕೊಡಬೇಕೆಂಬುದನ್ನು ತೀರ್ಮಾನಿಸಲು ಈಗ ಸಾಧ್ಯವಿಲ್ಲವೆಂದೂ ನುಡಿದರು. ರಾಷ್ಟ್ರೀಕರಣವಾದನಂತರ ಗಣಿಯ ಆಡಳಿತದಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯವೀಯಲಾಗುವುದೆಂದೂ ಅವರು ಹೇಳಿರುವರು.

ಪೋರ್ಚುಗೀಸರೊಡನೆ ಮುಂದೆಯೂ ಪಾಕಿಸ್ತಾನದ ಸಹಕಾರ

ಗೋವಾ ವಿಷಯವಾಗಿ ಪೋರ್ಚುಗಲ್ಲಿನೊಡನೆ ಪಾಕಿಸ್ತಾನದ ಸಂಬಂಧದಲ್ಲಿ ಭಾರತದಿಂದ ತಮ್ಮ ಸರ್ಕಾರಕ್ಕೆ ವಿಧಿವತ್ತಾಗಿಯಾಗಲೀ, ಅಥವಾ ಖಾಸಗಿಯಾಗಿ ಆಗಲಿ, ಪ್ರತಿಭಟನೆಯೇನೂ ಬಂದಿಲ್ಲವೆಂದು ಪಾಕಿಸ್ತಾನದ ವಿದೇಶಾಂಗ ಶಾಖಾ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ. ಗೋವಾ ಬಿಕ್ಕಟ್ಟಿಗೆ ಮುಂಚೆ ಪೋರ್ಚುಗಲ್ಲಿನೊಡನೆ ಇದ್ದ ಬಾಂಧವ್ಯವನ್ನು ಈಗಲೂ ಪಾಕಿಸ್ತಾನವು ಹೊಂದಿರುವುದಾಗಿಯೂ, ಪಾಕಿಸ್ತಾನವು ಗೋವಾ ಅಧಿಕಾರಿಗಳಿಗೆ ವಸ್ತ್ರ ಸರಬರಾಜು ಮಾಡುತ್ತಿದೆಯೆಂಬುದು ಆಕ್ಷೇಪಣೆಯ ಮಾತೆಂದೂ ಅವರು ಹೇಳಿರುವರು. ಪೋರ್ಚುಗೀಸರ ಹಡಗುಗಳು ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡು ಗೋವಾಕ್ಕೆ ಬರುವ ಮುಂಚೆ ಪಾಕಿಸ್ತಾನವು ಆ ಹಡಗುಗಳಿಗೆ ನೆಲೆ ಕೊಡಲು ಅಡ್ಡಿಯೇನೂ ಇಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು.

ಡಾಮನ್ನಿಗೆ ಪಾಕಿಸ್ತಾನದ ವಿಮಾನದಲ್ಲಿ ಆಹಾರ ಸರಬರಾಜು

ಪೋರ್ಚುಗೀಸರ ಡಾಮನ್ನಿನ ನಂದಿ ಹಾರ್ಮ ಎಂಬಲ್ಲಿ ಮೊನ್ನೆ ಪಾಕಿಸ್ತಾನದ ವಿಮಾನವೊಂದು ಆ ಪ್ರದೇಶಕ್ಕೆ ಅಗತ್ಯವಾಗಿ ಬೇಕಾಗಿದ್ದ ಆಹಾರ ಸಾಮಗ್ರಿಗಳನ್ನು ಸಾಗಿಸಿಕೊಂಡು ಬಂದುದಾಗಿಯೂ, ಅದರಲ್ಲಿ ಹಲವಾರು ಪೋರ್ಚುಗಲ್ಲಿನ ಅಧಿಕಾರಿಗಳು ಬಂದಿಳಿದರೆಂದೂ ವರದಿಯಾಗಿದೆ. ವಿಮಾನವು ಇಳಿಯುತ್ತಿದ್ದುದನ್ನು ಭಾರತದ ಪ್ರದೇಶದಲ್ಲಿದ್ದ ಪಹರೆಯವರು ನೋಡಿದರೆಂದು ಹೇಳಲಾಗಿದೆ.

ರಾಜ ಧನವನ್ನು ಬೋನಸ್ ಮಾಡಿಕೊಳ್ಳಲು ಹಿಂತರ ಮನವಿ

ರಾಜಧನಗಳನ್ನು ಬೋನಸ್ ಮಾಡಿಕೊಳ್ಳಲು ಹಳೆ ರಾಜರುಗಳಿಗೆ ಭಾರತ ಸರ್ಕಾರದವರು ಪುನಃ ಮನವಿ ಮಾಡುತ್ತಿರುವರೆಂದೂ, ಗೃಹ ಮಂತ್ರಿ ಪಂಡಿತ ಪಂತರು ಮಾಜಿ ರಾಜರುಗಳಿಗೆ ವೈಯಕ್ತಿಕ ಪತ್ರಗಳನ್ನು ಬರೆದು, ಈ ವಿಷಯವಾಗಿ ಅವರುಗಳು ತಮ್ಮ ಜವಾಬು ಗಮನವನ್ನು ಕೊಡುವಂತೆ ಕೋರಿರುವರೆಂದೂ ವರದಿಯಾಗಿದೆ. ನಿಜಾಮರಿಗೆ ೫೦ ಲಕ್ಷ, ಮೈಸೂರು ಮಹಾರಾಜರಿಗೆ ೨೬ ಲಕ್ಷ, ಬರೋಡಾ ಅರಸರಿಗೆ ೨೬½ ಲಕ್ಷ, ಗ್ವಾಲಿಯರ್ ಮಹಾರಾಜರಿಗೆ ೨೫ ಲಕ್ಷ, ತಿರುವಾಂಕೂರು ಮತ್ತು ಜಯಪುರಗಳ ಅರಸರಿಗೆ ತಲಾ ೧೮ ಲಕ್ಷ ಜೋಧ್‌ಪುರದ ಅರಸರಿಗೆ ೧೭½ ಲಕ್ಷ, ಬಿಕನೀರ್, ಪಟಿಯಾಲಾ ರಾಜರಿಗೆ ತಲಾ ೧೭, ಇಂದೂರು ಅರಸರಿಗೆ ೧೫, ಜುನಾಘಡ ನವಾಬರಿಗೆ ೧೫ ರೀವಾ, ನವಾನಗರ, ಭಾವನಗರ ಮತ್ತು ಕೊಲ್ಲಾಪುರಗಳ ಮಹಾರಾಜರುಗಳಿಗೆ ತಲಾ ೧೦ ಮತ್ತು ಕಚ್ ಅರಸರಿಗೆ ೮ ಲಕ್ಷ ರೂ. ಗಳ ರಾಜಧನವನ್ನೀಯಲಾಗುತ್ತಿದೆ. ಇದರಿಂದ ಕೇಂದ್ರಕ್ಕೆ ಒಟ್ಟು ೪ ಕೋಟಿ ರೂ. ವೆಚ್ಚವಾಗುವುದು

ಇಲಿಗಳು ತಿಂದು ನಿಜಾಮರ ೪ ಕೋಟಿ ರೂ. ನೋಟಿನ ನಾಶ

ಹೈದರಾಬಾದಿನ ನಿಜಾಮರು ಇಲಿಗಳ ಹಾವಳಿಯಿಂದ ೪ ಕೋಟಿ ರೂ. ಗಳನ್ನು ಕಳೆದುಕೊಂಡಿರುವರೆಂದು ವರದಿಯಾಗಿದೆ. ತಮ್ಮ ಅರಮನೆಯ ನೆಲಮಾಳಿಗೆಯಲ್ಲಿ ಅವರು ಟ್ರಂಕುಗಳಲ್ಲಿ ಮುಚ್ಚಿಟ್ಟಿದ್ದ ಬ್ಯಾಂಕು ನೋಟುಗಳಲ್ಲಿ ೪ ಕೋಟಿಯಷ್ಟನ್ನು ಇಲಿಗಳು ತಿಂದುಹಾಕಿರುವುದಾಗಿಯೂ, ಅವುಗಳ ಬದಲು ಬೇರೆ ನೋಟುಗಳನ್ನು ಕೊಡುವುದಕ್ಕೆ ಭಾರತ ಸರ್ಕಾರದವರು ಒಪ್ಪಿಲ್ಲವೆಂದೂ ಗೊತ್ತಾಗಿದೆ.

ವಿಶ್ವ ಸಂಸ್ಥೆಗೆ ಮೊರಾಕೊ ಪ್ರಶ್ನೆ

ಫ್ರೆಂಚರ ಉತ್ತರ ಆಫ್ರಿಕದ ಪ್ರಶ್ನೆಯನ್ನು ಭದ್ರತಾ ಸಮಿತಿಗೆ ಕೊಂಡೊಯ್ಯಲು ವಿಶ್ವ ಸಂಸ್ಥೆಯಲ್ಲಿರುವ ಏಷ್ಯಾ ಆಫ್ರಿಕಾ ಗುಂಪಿನವರು ನಿರ್ಧರಿಸಿರುತ್ತಾರೆ. ಈ ಬಗ್ಗೆ ಗುಂಪಿನ ೬ ರಾಷ್ಟ್ರಗಳ ಸಮಿತಿ ಅಧ್ಯಕ್ಷರಾದ ಭಾರತದ ಅರ್ಥರ್ ಲಾಲ್‌ರವರು ಮನವಿಯನ್ನು ಸಿದ್ಧಗೊಳಿಸುವರು. ಅವರಲ್ಲಿ ಇಂಡೊನೇಷ್ಯ, ಸಿರಿಯಾ, ಈಜಿಪ್ಟ್, ಇರಾಕ್ ಮತ್ತು ಲೈಬೀರಿಯಾ ಪ್ರತಿನಿಧಿಗಳಿರುವರು.

ಗೋವಾದಿಂದ ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿ ಅಶಾಂತಿ

ಶಾಂತಿಯಿಂದ ಆದಷ್ಟು ಬೇಗ ಬಗೆಹರಿಸಲು ಮಿ ಜಾರ್ಜರವರ ಸಲಹೆ

ಲಂಡನ್ನಿಗೆ ತೆರಳುವ ಸರ್ ಮಿಜಾರ್ಜ ಇಸ್ತೇಲರು [illegible] ಬಗ್ಗೆ ತಮ್ಮ ಅಭಿಪ್ರಾಯವನ್ನು [illegible], ಆದಷ್ಟು ಬೇಗ ಈ ಪ್ರಶ್ನೆಯನ್ನು [illegible] ಪರಿಹರಿಸುವುದು ಅಗತ್ಯವೆಂದು ತಿಳಿಸಿರುತ್ತಾರೆ. ಬ್ರಿಟನರು ಭಾರತವನ್ನು ಬಿಟ್ಟ [illegible] ಪೋರ್ಚುಗೀಸರು [illegible] ಒಂದು ಆಲೋಚಿಸಬೇಕಾಗಿತ್ತೆಂದೂ, ಈ ಪ್ರಶ್ನೆಯಿಂದ ಪೂರ್ವ ಮತ್ತು ಪಶ್ಚಿಮಗಳಲ್ಲಿ [illegible] ಇರಬಾರದೆಂದೂ [illegible] ತಿಳಿಸಿದರು. ತಾವು ವೈಸರಾಯರು ಪ್ರಧಾನಿಯಾಗಿದ್ದಾಗ [illegible] ಗೋವಾ ಭಾಗವನ್ನು ಖರೀದಿಗೆ ಪಡೆದುಕೊಳ್ಳಬೇಕೆಂಬ ವಿಷಯವನ್ನು ಅವರು ಹೊರಗೆಡಹಿದರು. ಗೋವಾವು [illegible] ಭಾರತದಿಂದ ಪ್ರತ್ಯೇಕವಾಗಿರಬಾರದೆಂಬ [illegible] ಇದನ್ನು ನೋಡುವುದು [illegible] ಪೋರ್ಚುಗೀಸರಿಗೆ ಬ್ರಿಟಿಷರ ಮೂಲಕ [illegible] ಸಿದ್ಧರಾಗಿಯೂ ಅವರು ಹೇಳಿದರು.

ಭೂಮಿಯ ಉಪ ಗ್ರಹದ ಬಗ್ಗೆ ಅಮೇರಿಕಾ ದಾಖಲೆಯ ಅಪಹಾರ

[illegible] ಭೂಮಿಯ ಸುತ್ತಲಿನ ಸಂಬಂಧಿ ಸುಸಂತೆಯ ಕೃತಕ ಉಪ ಗ್ರಹದ ನಿರ್ಮಾಣ ಮಾಡಲಾಗುವುದೆಂದು [illegible] ಪ್ರೊಫೆಸರ್ [illegible] ಅವರ ಬಳಿ ಇದ್ದ [illegible] ಅಪಹರಿಸಲಾಗಿರುವುದೆಂದು [illegible] ಕಲುವು ಮಾಡಲು ಮತ್ತೆಂದು ಪೋಲೀಸರಿಗೆ ದೂರು ಕೊಡಲಾಗಿದೆ.

ವಿಜಯ ಟೆಲಿಗ್ರಾಫ್ ಇನ್ಸ್ಟಿಟ್ಯೂಟ್ ಸಂಘದ ಅಧಿಕಾರ ವರ್ಗ

ಶ್ರೀವಿಜಯ ಟೆಲಿಗ್ರಾಫ್ ಇನ್ಸ್ಟಿಟ್ಯೂಟಿನ ಪ್ರಿನ್ಸಿಪಾಲರಾದ ಶ್ರೀ [illegible] ಅಧ್ಯಕ್ಷತೆಯಲ್ಲಿ ವಿಜಯ ಟೆಲಿಗ್ರಾಫ್ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿ ಸಂಘಕ್ಕೆ ಚುನಾವಣೆಯು ನಡೆಯಿತು. [illegible] ಶ್ರೀ [illegible] ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಆರ್ [illegible] ಕಾರ್ಯದರ್ಶಿಗಳಾಗಿಯೂ ಶ್ರೀ ಕೆ ಆರ್ [illegible] ಸಹ ಕಾರ್ಯದರ್ಶಿಗಳಾಗಿಯೂ, [illegible] ಚುನಾಯಿತರಾದರು.

ದನದ ಮಾಂಸ ಪತ್ತೆ

[illegible] ಅಧಿಕಾರಿಯು [illegible] ಎಂಬಾತನ ಮನೆಯನ್ನು [illegible] ಶೋಧಿಸಿದಾಗ [illegible] ಪಡೆಯದೆ ಇದ್ದ ೨೦ [illegible] ದನದ ಮಾಂಸವು ಪತ್ತೆಯಾಗಿ ಅದನ್ನು ವಶಪಡಿಸಿಕೊಳ್ಳಲಾಯಿತು. ಅವನಿಗೆ [illegible] ೧೦ ರೂ ದಂಡ ವಿಧಿಸಲಾಗಿದೆ.

ಸಟ್ಟಾ ಜೂಜಿಗಾಗಿ ದಸ್ತಗಿರಿ

[illegible] ಮೊನ್ನೆ ರಾತ್ರಿ ಪೋಲೀಸರು ಅಜೀಜ್ ಮತ್ತು [illegible] ಸಟ್ಟಾ ಜೂಜಾಡುತ್ತಿದ್ದಾಗ ಬಂಧಿಸಿದರು. ಅವರ ಬಳಿ ಇದ್ದ ೩ ರೂ [illegible] ವಶಪಡಿಸಿಕೊಳ್ಳಲಾಯಿತು.

ನಂಜನಗೂಡಿನಲ್ಲಿ ಡಿ. ಡಿ. ಟಿ. ಪ್ರಯೋಗ

ನಂಜನಗೂಡಿನಲ್ಲಿ ೨,೦೦೦ ರೂ ವೆಚ್ಚದಿಂದ ೩,೬೦೦ ಮನೆಗಳಿಗೆ ಡಿ ಡಿ ಟಿ ಪ್ರಯೋಗ ಮಾಡುವವ್ಯವಸ್ಥೆ ಮಾಡಲಾಗಿರುವುದೆಂದೂ, ಸಾರ್ವಜನಿಕರು ಈ ಸೌಲಭ್ಯವನ್ನು ಉಪಯೋಗಿಸಿ [illegible] ಪೌರಸಭೆಯವರು ಕೋರಿರುವರು. ಒಂದು ವಾರ ಕಾಲ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗಿದೆ.

ಆಂಧ್ರದಲ್ಲಿ ಪ್ರವಾಹದ ಹಾವಳಿ

ಆಂಧ್ರ ಪ್ರಾಂತದಲ್ಲಿ ಹರಿಯುವ ಗೋದಾವರಿ ನದಿಯಲ್ಲಿ ಪ್ರವಾಹವು ವಿಪರೀತವಾಗಿ, ನಾಶಿಯ ಕೆಳಗಿರುವ ೩,೦೦೦ ಎಕರೆ ಜಮೀನು [illegible] ಮನೆಗಳು ಕುಸಿದುಹೋಗಿವೆ. ೭ ಲಕ್ಷ ರೂ ನಷ್ಟ ಸಂಭವಿಸಿದೆ. ಇನ್ನೂ [illegible] ಕಾಲುವೆಗಳ ದಡಗಳೂ, ಭದ್ರಾಚಲ ಮತ್ತು [illegible] ಎರಡು ಕರೆಗಳೂ ಒಡೆದಿವೆ. ಒಂದು ಕಡೆ ೩೦೦ ಮನೆಗಳು ನಾಶವಾಗಿವೆ. ನೂರಾರು ಜನರು ನಿರಾಶ್ರಿತರಾಗಿರುವರು.

ಮೈಸೂರು ಜಿಲ್ಲಾ ಅರಣ್ಯಾಧಿಕಾರಿಗಳ ವರ್ಗ

ಮೈಸೂರು ಜಿಲ್ಲಾ ಅರಣ್ಯಾಧಿಕಾರಿಗಳಾದ ಶ್ರೀ ಬಿ ಎಚ್ [illegible] ಅವರನ್ನು ಬೆಂಗಳೂರಿನ ಅರಣ್ಯ ಸರ್ವೆ ಮತ್ತು ಯೋಜನಾ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ. ಸೀನಿಯರ್ ಅಸಿಸ್ಟೆಂಟ್ ಫಾರೆಸ್ಟ್ ಕನ್ಸರ್ವೇಟರಾದ ಶ್ರೀ ಬಿ ಪಿ ರಾಮಕೃಷ್ಣರವರನ್ನು ಮೈಸೂರು ಜಿಲ್ಲಾ ಅರಣ್ಯಾಧಿಕಾರಿಗಳಾಗಿ ವರ್ಗ ಮಾಡಲಾಗಿದೆ.

ಮೈಸೂರು ಪಿಂಜ್ರಾಪೋಲ್ ಸೊಸೈಟಿಯಲ್ಲಿ ದನಗಳ ಹರಾಜು

ರಾಜಧಾನಿಯ ಪಿಂಜ್ರಾಪೋಲಿನಲ್ಲಿ ಕೆಲವು [illegible], ಹೋರಿಗಳು ಮತ್ತು ಹೆಣ್ಣು ಕರುಗಳನ್ನು [illegible] ಪಿಂಜ್ರಾಪೋಲ್ ಆವರಣದಲ್ಲಿ ಇದೇ ಸಾಹೆ [illegible] ತಾರೀಖು ಭಾನುವಾರ [illegible] ಗಂಟೆಗೆ ಹರಾಜು ಮಾಡಲಾಗುತ್ತದೆ. ಇದಲ್ಲದೆ ಕೆಲವು [illegible] ಹರಾಜು ಮಾಡಲಾಗುತ್ತದೆ. ಇದೇ ಕಾಲದಲ್ಲಿ ಗುಜ್ಜಾಂಬಳಿ, ಗಬ್ಬಿಣಿ ಮತ್ತು ಕಿರು [illegible] ಹಸುಗಳನ್ನು ಇದೇ ಪಿಂಜ್ರಾಪೋಲಿನಲ್ಲಿ ಹರಾಜು ಮಾಡಲಾಗುತ್ತದೆ. ಇಷ್ಟವುಳ್ಳವರು [illegible] ನಿಬಂಧನೆಗಳಿಗೆ [illegible] ಪೂರ್ತಿ ಹಣ [illegible] ಸುಪರ್ದು ಪಡೆಯಬಹುದೆಂದು ಸೊಸೈಟಿಯ [illegible] ಕಾರ್ಯದರ್ಶಿಗಳಾದ ಶ್ರೀಗಳು ಎಂ [illegible] ಮತ್ತು ಮಾಣಿಕ್‌ಚಂದ್ [illegible] ತಿಳಿಸುತ್ತಾರೆ.

ಮಾರಾಟ ತೆರಿಗೆ ಕೊಡದಿದ್ದ ಹೋಟೇಲು ಮಾಲೀಕರಿಗೆ ದಂಡ

ಮೈಸೂರು ೧

ಮಾರಾಟ ತೆರಿಗೆಯನ್ನು ಕೊಡದಿದ್ದಕ್ಕಾಗಿ ಹೋಟೇಲು ಮಾಲೀಕರುಗಳಾದ ಶ್ರೀಗಳು ಲಕ್ಷ್ಮೀನಾರಾಯಣರಾವ್, ಕೃಷ್ಣರಾವ್ ಮತ್ತು ರಾಮರಾಯರಿಗೆ ನಗರದ ಎರಡನೇ ನ್ಯಾಯಾಧೀಶರು ಕ್ರಮವಾಗಿ ೨೦, ೧೦ ಮತ್ತು ೫ ರೂ ದಂಡವನ್ನು ವಿಧಿಸಿದರು.

ಇತರ ಅಪರಾಧಗಳಿಗೆ ಶಿಕ್ಷೆ

[illegible] ಪಾರ್ಕಿನಲ್ಲಿ ನ್ಯೂಯಾರ್ಕ್ ಹತ್ತಿ ಸಟ್ಟಾ ಜೂಜಾಟವಾಡಿದರೆಂದು ಅನ್ವರ್ ಮತ್ತು ರಷೀದ್ ಎಂಬುವರಿಗೆ ತಲಾ ೧೦ ರೂ ದಂಡವನ್ನು ಎರಡನೇ ನ್ಯಾಯಾಧೀಶರು ವಿಧಿಸಿದರು.

ಸಂತೆಪೇಟೆ ರಸ್ತೆಯಲ್ಲಿ ಜೋಳ, ರಾಗಿ ಮುಂತಾದುವನ್ನು ಮೂಟೆಗಳಲ್ಲಿಟ್ಟುಕೊಂಡು ಮಾರುತ್ತಾ, ರಸ್ತೆ ಸಂಚಾರಕ್ಕೆ ಅಡಚಣೆ ಮಾಡಿದರೆಂದು ನರಸಿಂಹ ಮತ್ತು ರಂಗಪ್ಪ ಎಂಬುವರಿಗೆ ತಲಾ ೫ ರೂ ದಂಡ ಬಿತ್ತು.

ನಜರ್‌ಬಾದಿನ ರಸ್ತೆಗಳಲ್ಲಿ ಹಸುಗಳನ್ನು ಬಿಕ್ಕಾಪಟ್ಟೆ ಓಡಾಡಲು ಬಿಟ್ಟದ್ದಕ್ಕಾಗಿ ರಾಚಯ್ಯ ಎಂಬಾತನಿಗೆ ೪ ರೂ ದಂಡ ಹಾಕಲಾಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಅರಬ್ ರಾಜ್ಯಗಳಿಗೆ ರಷ್ಯದ ಮಿಲಿಟರಿ ಸಾಮಗ್ರಿ

ಅರಬ್ ರಾಜ್ಯಗಳಿಗೆ ರಷ್ಯವು ಮಿಲಿಟರಿ ಸಾಮಗ್ರಿಗಳನ್ನು ಒದಗಿಸಲು ಮುಂದೆ ಬಂದಿರುವುದಾಗಿ ಅಮೇರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ಹೇಳುತ್ತಾರೆ.

SRI RAGHAVENDRA TECHNICAL INSTITUTE

(S R Telegraph Training School Estd 1954)

Chamaraja Road, Mysore

Expert training in Telegraphy & Postal work by our experienced, Retired Government Telegraph Supervisors

N. B Students who are desirous of getting certificates from Phonetic Commercial Institute Trichur can do so by appearing for the examination through this institute

K S RAO, Secretary

ವಕೀಲರು ಕುಡಿದು ವಾದಿಸುವುದು ಕಂಟೆಂಪ್ಟ್ ಆಗುವುದಿಲ್ಲ

ಅಲಹಾಬಾದಿನ ಹೈಕೋರ್ಟಿನವರು [illegible]ರದ ವಕೀಲ ಶ್ರೀ ರತನ್ ಶುಕ್ಲ ಎಂಬುವರ ಮೇಲೆ ತರಲಾಗಿದ್ದ ಕಂಟೆಂಪ್ಟ್ ಆಪಾದನೆಯನ್ನು ವಜಾ ಮಾಡಿ ಅವರನ್ನು ಬಿಡುಗಡೆ ಮಾಡಿರುತ್ತಾರೆ. [illegible] ಪ್ಪುರದ ಜಿಲ್ಲಾ ನ್ಯಾಯಾಧೀಶರ ಬಗ್ಗೆ [illegible] ಅವಹೇಳನ ಮಾಡಿದರೆಂದು ಆಪಾದಿಸಲಾಗಿತ್ತು. ಹೈಕೋರ್ಟಿನವರು ತಮ್ಮ ತೀರ್ಪಿನಲ್ಲಿ, ಕುಡಿದ ಮಂಪಿನಲ್ಲಿ ಮಾತನಾಡುವುದು ಕೋರ್ಟಿಗೆ [illegible]ವಾದರೂ ಎಲ್ಲ ವೇಳೆಯಲ್ಲಿಯೂ ಅದು ಕಂಟೆಂಪ್ಟ್ ಅಪರಾಧವಾಗುವುದಿಲ್ಲವೆಂದು ತಿಳಿಸಿದ್ದಾರೆ. ವಕೀಲರು ಮದ್ಯಪಾನ ಮಾಡಿ ಉಚ್ಚ ನ್ಯಾಯಾಲಯಗಳಲ್ಲಿ ವಾದ ಮಾಡಿರುವ ನಿದರ್ಶನಗಳು [illegible] ವುದಾಗಿ ಹೈಕೋರ್ಟಿನವರು ಹೇಳಿರುವರು.

ಪುದುಚೇರಿ ಸಂಸ್ಥಾನದ ಸಚಿವ ಸಂಬಳ

ಫ್ರೆಂಚರ ಪುದುಚೇರಿ ಪ್ರದೇಶವು ಭಾರತದ ಐಕ್ಯವಾದನಂತರ ಅಲ್ಲಿ ಚುನಾವಣೆಗಳು ನಡೆದು ಇದೇ ಪ್ರಥಮವಾಗಿ ಸ್ಥಾಪಿಸಲ್ಪಟ್ಟ ಸರ್ಕಾರದ ಮಂತ್ರಿಗಳು ಮಾಹೆಯಾನ ೫೦೦ ರೂ ವೇತನ, ೨೦೦ ರೂ ಮನೆ ಬಾಡಿಗೆ ಮತ್ತು [illegible] ಭತ್ಯವನ್ನು ತೆಗೆದುಕೊಳ್ಳಲು ನಿರ್ಧರಿಸಿರುವರು.

ಮೈಸೂರು-ಮದ್ರಾಸ್ ಸರ್ಕಾರಗಳ ಉಣ್ಣೆ ಕೇಂದ್ರ

[illegible] ಉಣ್ಣೆ ಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ [illegible] ರೂ ವೆಚ್ಚದಿಂದ ಕಟ್ಟಡ ಕಟ್ಟಲು [illegible] ಸ್ಟ್ಯಾಂಡರ್ಡ್ ರತ್ನಗಳ [illegible] ಸಮಿತಿಯವರು [illegible] ಮಾಡಿದ್ದಾರೆ. ಮೈಸೂರು, ಮದ್ರಾಸು ಮತ್ತು ಭಾರತ ಸರ್ಕಾರಗಳವರು ಇಲ್ಲಿ ೧೩ ಲಕ್ಷ ರೂ ವೆಚ್ಚದಿಂದ ಕೇಂದ್ರವನ್ನು ಏರ್ಪಡಿಸಲಿರುವರು.

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವ
ಕಡಲೆಕಾಯಿ	೮ ೦ ೦	೧೫
ಎಳ್ಳು	೪೩ ೮ ೦	೪೬ ೧೪
ಹಿಪ್ಪೆಬೀಜ	೧೨ ೧೨ ೦	೧೪ ೦
ಹುರುಳಿ	೩೩ ೧೨ ೦	೩೫ ೦
ಹುಣಸೇಹಣ್ಣು	೪ ೨ ೦	೪ ೬
ಸೀಗೆಕಾಯಿ	೫ ೧೨ ೦	
ತೆಂಗಿನಕಾಯಿ ೧,೧೦೦	೧೨೫ ೦ ೦	೧೬೩ ೮

ಮಧ್ಯವಯಸ್ಕರೇ, ಬಂಜೆಯರಾಗಲೀ

ಗುರಿ ತಪ್ಪಬಹುದು !

ಕೂಡಲೆ ನಿಮ್ಮ [illegible] ಉಪಯೋಗಿಸಬಹುದು

ಡಾ॥ ರಾನಾರವರ

ಒಂದು ವಾರದ ಅವಧಿಯ

ಸೂಚನೆ ಮತ್ತು ಅದ್ಭುತ ಚಿಕಿತ್ಸೆಯು

ನಿಮ್ಮ [illegible] ಪರ್ಯಾಯವಾಗಿ ಬದಲಾಯಿಸಲು ತಪ್ಪುವುದಿಲ್ಲ

ಅಪ್ಪಿನಿಂದ [illegible] ಅದ್ಭುತ ಶಕ್ತಿ ಮತ್ತು ಆನುವಂಶ ಆರೋಗ್ಯ ಹೊಂದಲು ಈ ಪ್ರಖ್ಯಾತ ವೈದ್ಯರ ಪ್ರವೀಣರನ್ನು ಭೇಟಿ ಮಾಡಿರಿ

ಡಾ॥ ಎ. ವಿ. ರಾನಾ

ಅನೇಕ ೪೦ ವರ್ಷಗಳ ಚಿಕಿತ್ಸೆ ಅನುಭವವು ನಿಮ್ಮ ಕಾಲ ಆರೋಗ್ಯ ಮತ್ತು ಹಣವನ್ನು ಉಳಿಸಲು ಸಹಾಯ ಮಾಡಿಕೊಡುತ್ತದೆ ಮತ್ತು ನಿಮ್ಮನ್ನು ಡಾಕ್ಟರು, ವೈದ್ಯರು ಮತ್ತು ಹಕೀಮರ ಕಾಟದಿಂದ ತಪ್ಪಿಸುತ್ತದೆ

ಭೇಟಿಯ ಕಾಲ ಬೆಳಿಗ್ಗೆ 8 ರಿಂದ 12 ಸಂಜೆ 4 ರಿಂದ 8

ರಾನಾ ಮೆಡಿಕಲ್ ಹಾಲ್,

ಎಲ್ ನಂ 1-745 [illegible] ರಸ್ತೆ, ಮೈಸೂರು

(ಮೈಸೂರು ಬ್ಯಾಂಕ್ ಬಳಿ [illegible] 3ನೇ ಕಟ್ಟಡ)

ಒಲಂಪಿಯಾ ಟಾಕೀಸ್

1-9-55 ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಹಾ ಪಿ ಕ್ಚ ರ್ಸ್ ರ ವ ರ

ಸಾಖಿ ಹಾತಿಮ್

SAKHI HATHIM

ಪಾತ್ರ - ದಿಲೀಪ್, ನೂರ್, ಅಲ್ ನಜೀರ್, [illegible], ಎಂ [illegible] ಮತ್ತು [illegible]

ರ ಣ ಜಿ ತ್ ನ

1-9-1955 ರಿಂದ ಅಮೋಘ ಪ್ರಾರಂಭ

ದಿನವೂ ಮೂರು ಪ್ರದರ್ಶನಗಳು

ವಿಜಯಲಕ್ಷ್ಮಿ, ಸಜ್ಜನ್, [illegible], ಮುನಾವರ್ ಸುಲ್ತಾನ ನಟಿಸಿರುವ

TOOFAN - ಟೂ ಫಾ ನ್

Good Opportunity ! JAI HIND ! Join at once !

SHANKARA TUTORIAL INSTITUTE, NANJANGUD

The following coaching classes will be started from 1 9 1955

Tuition by experienced teachers Fees very moderate

1) S S L C 1956 January Examination

2) Hindi Examinations 1956 February

For further particulars apply to –

G S. VENKATASUBBIAH, B Sc , B T

Head Master

Edited, Printed and Published by A R. Nagarajan at Sadhvi Press, D.Subbiah Road, Mysore

ಮೋತಿಲಾಲ್ ಚಿತ್ರಮಂದಿರದಲ್ಲಿ ★

1—9—55ನೇ : ಗುರುವಾರದಿಂದ : ದಿನವೂ 3 ಆಟಗಳು

[illegible]ರವರ, ಆನಂದಸಾಗರದಲ್ಲಿ ತೇಲಿಸುವ ಸುಂದರ ಹಿಂದಿ ಚಿತ್ರ

SILVER SCREEN'S Release

ಆಶಾ, ಗೀತಾಬಾಲಿ ಪಾತ್ರ ವಹಿಸಿರುವ

ಘೋರಾ - ಘೋರಿ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿ ಪ್ರತಿ 3 ಕಾಸು

ಚಂದಾ ದರ — ಏಜಂಟರುಗಳ ಮೂಲಕ ತಿಂಗಳಿಗೆ [illegible] ಅಂಚೆ ಮೂಲಕ ತಿಂಗಳಿಗೆ [illegible] ರೂ. ಬಿಡಿ ಪತ್ರಿಕೆ [illegible]

ಸಂಪುಟ : ೧೮] SADHVI : FRIDAY 2-9-1955 ಮೈಸೂರು ಶುಕ್ರವಾರ ೨-೯-೧೯೫೫ [ಸಂಚಿಕೆ : ೨೨

ಇಸ್ರೇಲ್ ರಾಜ್ಯದ ಸುತ್ತ ಅರಬ್ಬರ ಸೈನ್ಯಗಳ ಶೇಖರಣೆ?

ಹೊಟ್ಟೆ ಬಗೆದುಕೊಂಡು ಆತ್ಮಹತ್ಯ ಪ್ರಯತ್ನ

ಮೈಸೂರು ೨

[illegible]ವೇ ತಾಲ್ಲೂಕು ಕುಪ್ಪೇಗಾಲದ ಚಿಕ್ಕೇಮಂಚಾಚಾರಿ ಎಂಬಾತನು ನೆನ್ನೆ ಕುಡುಗೋಲಿನಿಂದ ಹೊಟ್ಟೆಯನ್ನು ಬಗೆದುಕೊಂಡು ಆತ್ಮಹತ್ಯ ಮಾಡಿಕೊಳ್ಳಲು ಯತ್ನಿಸಿದ್ದನೆಂದು ವರದಿಯಾಗಿದೆ. ಈ[illegible] ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇ[illegible] ಆತ್ಮಹತ್ಯ ಪ್ರಯತ್ನಕ್ಕಾಗಿ ಮೊಕದ್ದಮೆ ದಾ[illegible] ಮಾಡಿಕೊಳ್ಳಲಾಗಿದೆ

[illegible]ಮೆರಿಕಕ್ಕೆ ಉಚ್ಚ ಶಿಕ್ಷಣಕ್ಕಾಗಿ ಪ್ರಯಾಣ

ರಾಜಧಾನಿಯ "ನಮ್ಮ ನಾಡು" ಪತ್ರಿಕೆಯ [illegible]ವಕರಾದ ಶ್ರೀ ಬಿ ಎನ್ ಆಚಾರ್ಯರ ಮ[illegible] ಶ್ರೀ ಬಿ ನಂಜುಂಡಾಚಾರ್ಯರು ಅಮೆರಿಕ [illegible] ಕಾರ್ಮಿಕರ ಯೋಗಕ್ಷೇಮ ಮತ್ತು ಸ್ವವ[illegible] ಯೋಜನೆಯ ಬಗ್ಗೆ ೧॥ ವರ್ಷದ ಶಿಕ್ಷಣ[illegible]ಮಲು ಇಂದು ಕೊಚ್ಚಿಯಿಂದ ಅಮೆರಿಕಕ್ಕೆ [illegible]ಣ ಮಾಡಿದರು

[illegible]ಟುವಿಗಾಗಿ ೧೫ ದಿನ ಕಠಿಣ ಸಜಾ

[illegible]ಂದಿ ಮೊಹಲ್ಲೆಯ ವೆಂಕಟೇಶ ಪನು[illegible] ಎಂಬುವರ ಮನೆಯಲ್ಲಿ ಕೋಳಿ, ಕೊಡ[illegible]ಮುಂತಾದುವನ್ನು ಕಳವು ಮಾಡಿದುದಕ್ಕಾಗಿ [illegible] ಎಂಬಾತನಿಗೆ ನಗರದ ೧ನೇ ನ್ಯಾಯಾ[illegible]ರು ನೆನ್ನೆ ೧೫ ದಿನಗಳ ಕಠಿಣ ಸಜಾ ವಿಧಿಸಿ[illegible]

ಈಜಿಪ್ಟ್ ಮತ್ತು ಇಸ್ರೇಲ್ ಗಡಿಯಲ್ಲಿ ಸೀಸ್ ಫೈರ್?

ಗಾಜಾ ಗಡಿ ಬಳಿ ಭಾರಿ ಘರ್ಷಣೆ

[illegible]ಲಸ್ಟೈನಿನಲ್ಲಿರುವ ವಿಶ್ವ ಸಂಸ್ಥೆಯ ಕದನ [illegible] ವೀಕ್ಷಕರಾದ ಮೇಜರ್ ಜನರಲ್ ಎಡಿ[illegible] ಬರ್ನ್ಸ್‌ರವರು ಮಾಡಿದ್ದ ಕದನ ವಿರಾಮದ [illegible]ನೆಯನ್ನು ಇಸ್ರೇಲು ಸರ್ಕಾರ ನೆನ್ನೆ ಒಪ್ಪಿ[illegible] ಈಜಿಪ್ಟಿನ ಕಡೆಯಿಂದ ಯಾವುದೇ [illegible]ರು ಧಾಳಿಗಳೂ ನಡೆಯದಿದ್ದರೆ ಇಸ್ರೇಲೂ ಯಾವ ಮಿಲಿಟರಿ ಕಾರ್ಯಕ್ರಮವನ್ನೂ ಕೈ[illegible] ಕೊಳ್ಳುವುದಿಲ್ಲವೆಂದು ಇಸ್ರೇಲ್ ಸರ್ಕಾರದವರು [illegible]ತ್ತಾರೆ. ಈ ಹಿಂದೆಯೇ ಈಜಿಪ್ಟ್ ಸ[illegible] ಸೀಸ್‌ಫೈರಿಗೆ ಒಪ್ಪಿತ್ತು

ಮಧ್ಯೆ ಗಾಜಾ ಪ್ರದೇಶದಲ್ಲಿ ಕದನ ವಿರಾ[illegible]ಪ್ಪಂದವು ೧೦ ದಿನಗಳಿಂದಲೂ ಉಲ್ಲಂಘನೆ[illegible] ಕದನಗಳು ನಡೆಯುತ್ತಿದ್ದುದು ನೆನ್ನೆ ಬೆ[illegible]ರವಾದ ಪ್ರಮಾಣದಲ್ಲಿ ಹೋರಾಟವಾಯಿ[illegible], ಇಸ್ರೇಲ್ ಸೈನಿಕರು ಈಜಿಪ್ಟಿನ ಸೈನ್ಯ[illegible] ನುಗ್ಗಿ ಕೋಟೆ ಕಟ್ಟಿದ ಅನೇಕ ಗಡಿ [illegible]ಗಳನ್ನು ಹಿಡಿದರೆಂದೂ ವರದಿಯಾಗಿದೆ. [illegible] ಬುಧವಾರ ಈಜಿಪ್ಟಿನವರು ಧಾಳಿ ಮಾಡಿ [illegible]ಂದಿ ಇಸ್ರೇಲಿಗಳನ್ನು ಕೊಂದುದಕ್ಕೆ ಇದು [illegible]ರವೆಂದು ಹೇಳಲಾಗಿದೆ

[illegible]ಯ ಕದನದಲ್ಲಿ ೬೦ ಮಂದಿ ಈಜಿಪ್ಟಿನ[illegible]ಡಿದು, ಬೇರೆ ೪೦ ಮಂದಿಗೆ ಗಾಯವಾ[illegible]ವಾಗಿ ಇಸ್ರೇಲ್ ಸೈನ್ಯ ಇಲಾಖೆಯಿಂದ [illegible]ಗಿದೆ

ಅರಮನೆ ಕಟ್ಟಡಗಳಿಗೆ ಪೌರಸಭಾ ತೆರಿಗೆ ವಿನಾಯಿತಿ

ಬೆಂಗಳೂರು ೨

ಮೈಸೂರು ನಗರಸಭೆ ಪೌರಸಭಾ ೨ ನೆ ವ[illegible] ಪ್ರಕಾರ ವಿಧಿಸಲಾಗುವ ತೆರಿಗೆಗಳನ್ನು ರಾಜಧಾನಿಯಲ್ಲಿ ಅರಮನೆಗೆ ಸೇರಿದ ಅಷ್ಟ[illegible], ನೊ[illegible]ರು ಗ್ಯಾರೆಜು, ಅರಮನೆ ಕಛೇರಿ ಮತ್ತು ಮೋ[illegible] ಖಾನೆಗಳಿಗೆ ವಿಧಿಸದಂತೆ ಸರ್ಕಾರದವರು ವಿನಾಯಿತಿಯನ್ನು ಕೊಟ್ಟಿದ್ದಾರೆ

ಗೋವೆಗೆ ೨೧ ಜನರ ಮತ್ತೊಂದು ಸತ್ಯಾಗ್ರಹಿಗಳ ಪಡೆ

ಸುಜನ ತಿಸ ಪತ್ರಿಕೋದ್ಯಮಿ ಶ್ರೀ [illegible] ಸ್ವಾಮಿರವರ ನೇತೃತ್ವದಲ್ಲಿ ನಿನ್ನೆ ೨೧ ಮಂದಿ ಸತ್ಯಾಗ್ರಹಿಗಳು ಪಾರವಾರದ ಗಡಿ ಸಮೀಪ[illegible]ಗೊ ಪ್ರವೇಶಿಸಿದುದಾಗಿ ವರದಿಯಾಗಿದೆ. ಇವರೆಲ್ಲರನ್ನೂ ಪೋರ್ಚುಗೀಸ್ ಸೈನಿಕರು ಎಳೆದು ಹೊಡೆದು, [illegible]ಯಿಂದ ಹೊರಗೆ [illegible] ಬಿಡರೆಂದು ಗೊತ್ತಾಗಿದೆ

ಅರ್ಜೆಂಟೈನಾ ಅಧ್ಯಕ್ಷರಿಂದ ರಾಜೀನಾಮೆ ವಾಪಸು

ಅರ್ಜೆಂಟೈನಾ ಅಧ್ಯಕ್ಷ ಪೆರಾನ್ ರವರು ತಮ್ಮ ಅ[illegible] ಧಿಕಾರಕ್ಕೆ ರಾಜೀನಾಮೆ [illegible] ವಾಪಸು ಪಡೆದಿರುತ್ತಾರೆ. ಅವರೇ ಅಧಿಕಾರದಲ್ಲಿ ಮುಂದುವರಿಯಬೇಕೆಂದು ಸೂಚಿಸಲು ರಾಜಧಾನಿ ಬ್ಯೂನೋಸ್ ಏರ್ಸ್‌ನಲ್ಲಿರುವ ಅಧ್ಯಕ್ಷರ ಅರಮನೆ ಮುಂದೆ ಅಸಂಖ್ಯಾತ ಜನರು ಪ್ರದರ್ಶನ ನಡೆಸಿದರು. ಇಲ್ಲಿನ [illegible] ಕಾರ್ಖಾನೆಗಳು, ಅಂಗಡಿಗಳೂ ಬಂದಾಗಿದ್ದುವು. ಸರ್ಕಾರಿ ನೌಕರರೂ, ಕಾರ್ಮಿಕರೂ ಸೇರಿ ಅಧ್ಯಕ್ಷರಿಗೆ ಬೆಂಬಲವನ್ನು ಸೂಚಿಸಿದರು. ಅಧ್ಯಕ್ಷರು ಜನರನ್ನುದ್ದೇಶಿಸಿ ಭಾಷಣ ಮಾಡಿ, ವಿರೋಧ ಪಕ್ಷದವರ ಹಿಂಸಾ ಪ್ರವೃತ್ತಿಯನ್ನು ಸರ್ಕಾರವು ತಡೆಗಟ್ಟುವುದೆಂದು ತಿಳಿಸಿದರು

ಕೇಡಿಗಳ ಬಂಧನ

ಜೈಬು ನಿಸ್ಸಾರ್ ಹಯಾತ್ ಎಂಬುವನು ಮೊನ್ನೆ ರಾತ್ರಿ ಲಕ್ಷ್ಮೀವಿಲಾಸ ಅಗ್ರಹಾರದಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದನೆಂದು ಬಂಧಿಸಲಾಗಿದೆ. ಕನ್ನೇಗೌಡನಕೊಪ್ಪಲು ದೇವಯ್ಯ ಎಂಬುವನು ಮೊನ್ನೆ ರಾತ್ರಿ ಚಾಮುಂಡಿಪುರದ ಶಂಕರನಾರಾಯಣರಾಯರು ಮತ್ತು ಜೋರಮ್ಮ ಎಂಬುವರ ಮನೆಗಳಿಂದ ೫೦ ರೂ ಬೆಲೆಯ ಪಾತ್ರೆಗಳನ್ನು ಕದ್ದು ತೆಗೆದುಕೊಂಡು ಹೋಗುತ್ತಿದ್ದಾಗ ಕ್ರೈಂ ಬ್ರಾಂಚ್ ಪೋಲೀಸರು ಬಂಧಿಸಿರುವರು. ನಾಲ್ಕೈದು ದಿವಸಗಳಿಗೆ ಸಂಬಂಧಪಟ್ಟಂತೆ ಕದ್ದ ಸುಮಾರು ೩೦೦ ರೂ. ಚಿನ್ನ ಬೆಳ್ಳಿ ವಸ್ತುಗಳು ಮತ್ತು ಬಟ್ಟೆಗಳು ದೊರೆತಿವೆ

ಕೃಷ್ಣ ಜಯಂತೀ ಮಹೋತ್ಸವ

ರಾಜಧಾನಿಯ ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಇದೇ ತಿಂಗಳು ೧೦ನೇ ತಾ॥ ನಿಂದ [illegible] ರ ವರೆಗೆ ಶ್ರೀ ಕೃಷ್ಣ ಜಯಂತಿ ಉತ್ಸವವನ್ನು ಏರ್ಪಡಿಸಲಾಗಿದೆ. ಇದರ ಅಂಗವಾಗಿ ಸಂಗೀತ ಮತ್ತು ಹರಿಕಥೆಗಳನ್ನು ನಿತ್ಯವೂ ಸಂಜೆ ೭॥ ಗಂಟೆಗೆ ನಡೆಸಲಾಗುವುದು

ಇಸ್ರೇಲ್ ಸುತ್ತಲೂ ಅರಬ್ ರಾಜ್ಯಗಳ ಸೈನ್ಯ ಶೇಖರಣೆ

ಇಸ್ರೇಲಿನ ಸುತ್ತಲೂ ಅರಬ್ ರಾಜ್ಯಗಳು ಸೈನ್ಯಗಳನ್ನು ಶೇಖರಿಸುತ್ತಿರುವುದೆಂದೂ, ಯಹೂದ್ಯರ ಪ್ರದೇಶವನ್ನು ನ[illegible] ಕರಿಗಾಮ[illegible] [illegible]ಮಾದ ಪಟ್ಟಣ್ನ ಕೊಡಲ ಸುವುದೆಂದೂ ಸಿರಿಯಾ ದೇಶದಿಂದ [illegible] ವರದಿಯಾಗಿದೆ. ಅರಬ್ ಸೈನಿಕರು ಕರ್ದೆ ಭಾಗಗಳಿಗೆ ಸಾಗಣೆ[illegible]ಯಾಗುತ್ತಿರುವರೆಂದು ಯಹೂದಿ ಭಾಷೆಯಲ್ಲಿ ಪತ್ರಿಕೆಯೊಂದು ತಿಳಿಸಿರುತ್ತದೆ

ಡಮೂವಿಗೂ ಪಾಕಿಸ್ತಾನದ ವಿಮಾನದಲ್ಲಿ ಆಹಾರ ಸರಬರಾಜು

[illegible] ಥಿಯಮಂಡದ [illegible] ಇರುವ ಪೋರ್ಚುಗೀಸರ ಚಿಕ್ಕ ವಸಾಹತಾದ ಡಮೂವಿಗೂ ಪಾಕಿಸ್ತಾನದಿಂದ ವಿಮಾನದಲ್ಲಿ ನಿತ್ಯದ ಆವಶ್ಯಕತೆಗಳ ಸಾಮಗ್ರಿಗಳನ್ನು ಒದಗಿಸಲಾಗುತ್ತಿರುವುದೆಂದು ವರದಿಯಾಗಿದೆ. ಆಹಾರ ಸಾಮಗ್ರಿಗಳನ್ನು ಕರಾಚಿಯಿಂದ ವಿಮಾನದಲ್ಲಿ ಸಾಗಿಸಿ, ಭಾರತವು ಹಾಕಿರುವ ಆರ್ಥಿಕ ದಿಗ್ಬಂಧನವನ್ನು ಎದುರಿಸಲು ಯತ್ನಿಸಲಾಗುತ್ತಿರುವುದೆಂದು ಹೇಳಲಾಗಿದೆ. ಎರಡು ತಿಂಗಳ ಹಿಂದೆ ಡಮೂವಿನಲ್ಲಿ ಹೊಸದಾಗಿ ವಿಮಾನ ನಿಲ್ದಾಣವನ್ನು ನಿರ್ಮಿಸಲಾಯಿತು

ಕಂಟೆಂಪ್ಟ್ ಅಪರಾಧಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ದಂಡ

ಮಣಿಪುರ ಸಂಸ್ಥಾನದ ಜುಡಿಷಿಯಲ್ ಕ[illegible]ಮಿಷನರರಾದ ವ್ರಜನಾರಾಯಣರವರು ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಪಿ ಎಸ್ ಮುಂದರಂರವರಿಗೆ ಕಂಟೆಂಪ್ಟ್ ಆಫ್ ಕೋರ್ಟ್ ಅಪರಾಧಕ್ಕಾಗಿ ೫೦ ರೂ ದಂಡವನ್ನು ವಿಧಿಸಿ, ಇದೇ ಕಾರಣಕ್ಕಾಗಿ ಅಲ್ಲಿನ ಜೈಲು ಸೂಪರಿಂಟೆಂಡೆಂಟರಾದ ಟಿ ಸಿ ಟೈಬಂರವರಿಗೆ ಎಚ್ಚರಿಕೆಯಿತ್ತಿರುವರು. ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಮುಖಂಡ ಅಚ್ಚೈಸಿಂಗ್‌ರವರು ಮೊಕದ್ದಮೆಯನ್ನು ಹೂಡಿದ್ದರು. ಕಳೆದ ಏಪ್ರಿಲ್ ತಿಂಗಳಲ್ಲಿ ಅಚ್ಚೈಸಿಂಗ್ ಮತ್ತು ಇತರ ಆರು ಜನರನ್ನು ಬಂಧಿಸಿದ ಸಂಬಂಧದಲ್ಲಿ ಅವರು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿತ್ತೆಂದೂ, ಜೈಲು ಬಾಗಿಲು ಬಳಿ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಅವರನ್ನು ಪುನಃ ಬಂಧಿಸಲಾಯಿತೆಂದೂ ಅರ್ಜಿದಾರರು ತಿಳಿಸಿದ್ದರು. ಕಂಟೆಂಪ್ಟ್ ಅಪರಾಧವು ನಡೆದಿರುವುದೆಂದು ಜುಡಿಷಿಯಲ್ ಕಮಿಷನರರು ತೀರ್ಪಿತ್ತರು

ಜಿಲ್ಲಾ ಆರೋಗ್ಯಾಧಿಕಾರಿಗಳ ವರ್ಗ

ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳಾದ ಶ್ರೀ ಸಿ ಗೋಪಾಲರಾಜ ಚಟ್ಟಿಯವರನ್ನು ಬೆಂಗಳೂರಿನಲ್ಲಿರುವ, ಅಂಟು ರೋಗಗಳ ಶಾಸ್ತ್ರಕ್ಕೆ ಸಂಬಂಧಿಸಿದ ಶಾಲಾ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ. ಕೋಲಾರದ ಚಿನ್ನದ ಗಣಿಗಳಲ್ಲಿರುವ ವೈದ್ಯಾಧಿಕಾರಿಗಳಾದ ಶ್ರೀ ಡಿ ಕೆ. ನಂಜುಂಡಯ್ಯನವರು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳಾಗುವರು

ನಗರದ ಪ್ರಮುಖ ಕಾಂಗ್ರೆಸ್ಸಿಗರಿಂದ ಶಿಸ್ತು ಭಂಗವೇ

ಷೋ ಕಾಸ್ ನೋಟೀಸು ಜಾರಿ

ಮೈಸೂರು ೨

ನಗರದ ದಕ್ಷಿಣ ವಾರ್ಡು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಎನ್ ಗೋಪಾಲರಾವ್ ಮತ್ತು ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರುಗಳಾದ ಶ್ರೀ[illegible]ಗಳು ಎ ರಾಮಣ್ಣ, ಬಿ ಬಾಲಯ್ಯ ಮತ್ತು ಆರ್. ಎಸ್ ಮುರಳಿಯವರಿಗೆ ನಗರ ಕಾಂಗ್ರೆಸ್ ಸಮಿತಿಯವರು ನೆನ್ನೆ ನೋಟೀಸು ಕೊಟ್ಟು, ಶಿಸ್ತು ಭಂಗ ನಡೆಸಿರುವರೆಂದು ಅವರ ಮೇಲೆ ಏಕೆ ಕ್ರಮ ಜರುಗಿಸಬಾರದೆಂದು ಕೇಳಿರುವರು. ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರ ಆಯ್ಕೆ ಸಂಬಂಧವಾಗಿ ಅವರು ಕಾಂಗ್ರೆಸ್ ಅಧ್ಯಕ್ಷರ ಮತ್ತು ಸಂಸ್ಥೆಯ ಅವಹೇಳನ ಮಾಡಿದರೆಂದು ಆಪಾದಿಸಲಾಗಿದೆ

ಸೊಪ್ಪು ಕುಯ್ಯಲು ಹೋಗಿ ಭಾವಿಗೆ ಬಿದ್ದು ಮರಣ

ಮೈಸೂರು ತಾಲ್ಲೂಕು ನಜ್ಜಿಮಂಡಿಯ ಶ್ರೀ ನಂಜುಂಡೇಗೌಡರ ಮಗಳು ಮಾದಮ್ಮ ಎಂಬ ತರುಣಿಯು ನೆನ್ನೆ ಸೊಪ್ಪು ಕುಯ್ಯಲು ಹೋಗಿ ಭಾವಿಗೆ ಬಿದ್ದು ಮರಣ ಹೊಂದಿದಳೆಂದು ತಿಳಿದು ಬಂದಿದೆ

ನೆಹರೂ, ವಿಶ್ವೇಶ್ವರಯ್ಯನವರಿಗೆ ಭಾರತರತ್ನ ಪ್ರಶಸ್ತಿ ದಾನ

೭ನೇ ತಾರೀಕು ಡೆಲ್ಲಿಯಲ್ಲಿ ಸಮಾರಂಭ

ಮೈಸೂರಿನ ಮಾಜಿ ದಿವಾನರಾದ ಡಾ॥ ಎಂ ವಿಶ್ವೇಶ್ವರಯ್ಯನವರಿಗೆ ರಾಷ್ಟ್ರಾಧ್ಯಕ್ಷರು ಈ ತಿಂಗಳು ೭ನೇ ತಾರೀಕು ಡೆಲ್ಲಿಯ ಸಮಾರಂಭದಲ್ಲಿ ಭಾರತರತ್ನ ಪ್ರಶಸ್ತಿಯನ್ನು ದಯಪಾಲಿಸಲಿರುವರು. ಮದ್ರಾಸು ಗೌರ್ನರ ಶ್ರೀ [illegible] ಭಗವಾನ್ ದಾಸರಿಗೂ ಮತ್ತು ಪ್ರಧಾನಿ ನೆಹರೂರವರಿಗೂ ಅದೇ ಸಮಾರಂಭದಲ್ಲಿ ಭಾರತರತ್ನ ಪ್ರಶಸ್ತಿಗಳನ್ನು ಕೊಡಲಾಗುವುದು

ಕವಿ ಸಮ್ಮಾನ ಸಭೆ

ಇಲವ ಬವ ರಸ್ತೆಯಲ್ಲಿರುವ ಕುಂಚಿಟಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಪಿ॥ ಎಂ ಎಸ್ ಮಹದೇವದಾಸ್‌ರವರಿಂದ ಶನಿಮಹಾತ್ಮೆ ಕಥೆಯು ಶ್ರೀಗಳಾದ ಬಿ ನಂಜಪ್ಪ ಮತ್ತು ಕ್ರೀಡಪ್ಪನವರ ಪಕ್ಕ ವಾದ್ಯದೊಡನೆ ನಡೆಯುತ್ತದೆ

ನಿವಾರ್ಣೇಗೌಡರು ನೂತನ ಎಕ್ಸೈಜು ಕಮಿಷನರ್

ಸ್ವಂ ಮ ಕಂಡಿ] ಬೆಂಗಳೂರು ೨

ರಜಾದಿಂದ ಈ ತಿಂಗಳು ೧೬ನೇ ತಾ॥ ಕೆಲಸಕ್ಕೆ ಹಿಂದಿರುಗುವ ಶ್ರೀ ಎ ಸಿ ನಿವಾರ್ಣೇಗೌಡರನ್ನು ಸಂಸ್ಥಾನದ ಎಕ್ಸೈಜು ಕಮಿಷನರರನ್ನಾಗಿಯೂ, ಶ್ರೀ ತಿಪ್ಪೇರುದ್ರಯ್ಯನವರನ್ನು ಹಿಂದುಳಿದ ವರ್ಗ ಮತ್ತು ಅಭಿವೃದ್ಧಿ ಇಲಾಖಾ ಕಮಿಷನರನ್ನಾಗಿಯೂ ನೇಮಿಸಲಾಗಿದೆ

ದಕ್ಷಿಣಕ್ಕೆಲ್ಲಾ ಒಂದೇ ಸಂಸ್ಥಾನವಾಗಬೇಕು

ಮದ್ರಾಸ್ ಮೇಯರರ ಸಲಹೆಗೆ ಮೈಸೂರು ಮುಖ್ಯಮಂತ್ರಿಯವರ ಉತ್ತರ

ಮದ್ರಾಸಿನ ಮೇಯರರು ಮೈಸೂರು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಗೌರವಾರ್ಥವಾಗಿ ಕಳೆದ ಸೋಮವಾರ ಔತಣವನ್ನು ಏರ್ಪಡಿಸಿದರು. ಅವರು ಭಾಷಣ ಮಾಡಿ, ಮದ್ರಾಸು ಮೈಸೂರು ಮತ್ತು ತಿರುವಾಂಕೂರು ಕೊಚ್ಚಿ ಸಂಸ್ಥಾನಗಳನ್ನು ಒಂದು ಆಡಳಿತಕ್ಕೆ ಒಳಪಡಿಸಿ, ದಕ್ಷಿಣ ಪ್ರದೇಶವೆಂದು ನಾಮಕರಣ ಮಾಡಬಹುದೆಂದು ಸೂಚಿಸಿದರು. ಮುಖ್ಯಮಂತ್ರಿಯವರು ಉತ್ತರವಿತ್ತು, ಇಂತಹ ಪುನರ್ರಚನೆಯು ಅವಶ್ಯವಾದರೆ ತಾವು ಅದಕ್ಕೆ ಅಡ್ಡಿ ಬರುವುದಿಲ್ಲವೆಂದೂ ಆದರೆ ಈಗಿನ ಭಾವಾವೇಶದ ಪ್ರೇಮಾಂಧತ್ವದ ಕಾಲದಲ್ಲಿ ಇಂತಹ ಒಂದೇ ಸಂಸ್ಥಾನವಾಗಬೇಕೆಂಬುದು ಅದ್ಭುತ ಕಲ್ಪನೆಯಾಗುವುದೆಂದೂ, ಮೇಯರರ ಸಲಹೆಯು ಸ್ವಾಗತಾರ್ಹವಾಗಿರುವುದಾದರೂ ಆ ಬಗ್ಗೆ ಜನರ ಅಭಿಪ್ರಾಯವನ್ನು ಎದುರು ನೋಡಬೇಕೆಂದೂ ಹೇಳಿದರು.

ಉಪಯೋಗಿಸದೆ ಇರುವ ಮನೆಗಳಿಗೆ ೪॥ ಲಕ್ಷ ರೂ. ಬಾಡಿಗೆ

ಕಲ್ಕತ್ತದಲ್ಲಿ ಎರಡು ವರ್ಷ ಕಳೆದ ಒನೇ ಡಿಸೆಂಬರ್ ವರೆಗೆ ಕೇಂದ್ರ ಸರ್ಕಾರದ ಅಂಚೆ ಮತ್ತು ತಂತಿ ಇಲಾಖೆಯವರು ೪,೬೦,೦೦೦ ರೂ. ಗಳನ್ನು ಕಟ್ಟಡಗಳನ್ನು ಉಪಯೋಗಿಸದೆ ತೆತ್ತಿರುವರೆಂದು ಲೆಕ್ಕ ತನಿಖೆ ಸಮಿತಿಯವರು ತಿಳಿಸಿರುವರು. ಒಂದು ಭವನಕ್ಕೆ ತಿಂಗಳಿಗೆ ೮ ಸಾವಿರ ರೂ. ಬಾಡಿಗೆ ಕೊಡಲು ಒತ್ತಿದೆಯೆಂದೂ, ಅದು ಇನ್ನೂ ಮುಂದುವರಿಯುತ್ತಿರುವುದಾಗಿಯೂ, ಈ ಅನಾವಶ್ಯಕ ವೆಚ್ಚವನ್ನು ತಪ್ಪಿಸಲು ಪುನರ್ವ್ಯವಸ್ಥೆ ಬಗ್ಗೆ ಪರಿಶೀಲಿಸಬೇಕೆಂದೂ ಸಮಿತಿಯವರು ಸೂಚಿಸಿರುವರು.

ಸಂಸ್ಥಾನದಲ್ಲಿ ಕೈಗಾರಿಕಾ ಎಸ್ಟೇಟುಗಳು

ಸಂಸ್ಥಾನದಲ್ಲಿ ಹಲವು ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸುವ ವಿಷಯವು ಸರ್ಕಾರದ ಗಮನದಲ್ಲಿರುವುದೆಂದೂ, ಅದಕ್ಕಾಗಿ ದ್ವಿತೀಯ ಯೋಜನೆಯಲ್ಲಿ ೫೦ ಲಕ್ಷ ರೂ. ಗಳನ್ನು ಒದಗಿಸಲು ಆಲೋಚಿಸಲಾಗುತ್ತಿದೆಯೆಂದೂ ತಿಳಿದುಬಂದಿದೆ.

ಪುನಃ "ಸ್ವಂತ ಟೆಲಿಫೋನ್" ಪದ್ಧತಿ

ಒಂದು ವರ್ಷದ ಹಿಂದೆ ಕೈಬಿಡಲಾಗಿದ್ದ "ನಿಮ್ಮ ಸ್ವಂತ ಟೆಲಿಫೋನ್" ಪದ್ಧತಿಯನ್ನು ಬೆಂಗಳೂರಿನಲ್ಲಿ ಪುನಃ ಜಾರಿಗೆ ತರಲಾಗುವುದೆಂದು ಗೊತ್ತಾಗಿದೆ.

ಕೊಲೆಯ ಆಪಾದನೆ ಮೊಕದ್ದಮೆಯಲ್ಲಿ ಖುಲಾಸೆ

ಎಂಟಿಕೊಪ್ಪಲಿನ ರಾಜಮ್ಮ ಮತ್ತು ಜಯಮ್ಮ ಎಂಬುವರುಗಳು ಆ ಜಯಮ್ಮ ಮತ್ತು ಪುಟ್ಟಮ್ಮ ಎಂಬುವರ ಮೇಲೆ ಕಸುವಿನ ಸಂಬಂಧವಾಗಿ ಹೂಡಿದ್ದ ಕ್ರಿಮಿನಲ್ ಮೊಕದ್ದಮೆಯಲ್ಲಿ ನೆನ್ನೆ ಒಂದನೇ ನಗರ ನ್ಯಾಯಾಧೀಶರು ಆಪಾದಿತರಿಬ್ಬರನ್ನೂ ಖುಲಾಸೆ ಮಾಡಿರುವರು.

ನಂಜನಗೂಡು ಟೌನ್ ಅಭಿವೃದ್ಧಿಗೆ ೫ ಲಕ್ಷ ರೂ. ಬೇಕು

ಕೇಂದ್ರ ಮತ್ತು ಮೈಸೂರು ಸರ್ಕಾರಗಳಿಗೆ ಪೌರಸಭೆಯ ಕೋರಿಕೆ

ನಂಜನಗೂಡು ೧

ಇಲ್ಲಿನ ಪೌರಸಭೆಯ ತಿಂಗಳುಗಟ್ಟಲೆ ಅಧಿವೇಶನವು ಶ್ರೀ ಎಂ. ಕೆ. ಮರಿಕೆಂಪಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ದ್ವಿತೀಯ ಪಂಚ ವಾರ್ಷಿಕ ಯೋಜನೆ ಸಂಬಂಧವಾಗಿ ಈ ಪಟ್ಟಣವನ್ನು ಅಭಿವೃದ್ಧಿಗೊಳಿಸಲು ೫ ಲಕ್ಷ ರೂ. ಗ್ರಾಂಟನ್ನು ಕೊಡುವಂತೆ ಕೇಂದ್ರ ಮತ್ತು ಮೈಸೂರು ಸರ್ಕಾರಗಳನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಟೌನಿನಲ್ಲಿ ಡಿ.ಡಿ.ಟಿ. ಪ್ರಯೋಗದ ಕಾರ್ಯಕ್ರಮಕ್ಕಾಗಿ ೫೦೦ ರೂ. ಗಳನ್ನು ಮಂಜೂರು ಮಾಡಲಾಯಿತು. ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟಿಗೆ ೨೦೦ ರೂ. ಗ್ರಾಂಟು ಕೊಡಬೇಕೆಂದು ತೀರ್ಮಾನವಾಯಿತು. ಪೌರಸಭಾ ಕಛೇರಿ ಆವರಣದಲ್ಲಿ ೫ ಅಂಗಡಿ ಮಳಿಗೆಗಳನ್ನೂ, ಒಂದು ಸುಂಕದ ಕಟ್ಟೆಯನ್ನು ಕಟ್ಟಬೇಕೆಂದೂ ತೀರ್ಮಾನವಾಯಿತು.

ಅಮೆರಿಕದ ವರ್ಣಭೇದ ನೀತಿಗೆ ಭಾ॥ರಾಯಭಾರಿಯ ಪ್ರತಿಕ್ರಿಯೆ

ಅಮೆರಿಕದ ದಕ್ಷಿಣದ ಸಂಸ್ಥಾನಗಳಲ್ಲೊಂದಾದ ಟೆಕ್ಸಾಸಿನ ಹೌಸ್ಟನ್ ನಗರದ ಹೋಟೆಲೊಂದರಲ್ಲಿ ಬಿಳಿಯರ ಜೊತೆಯಲ್ಲಿ ಊಟ ಮಾಡಕೂಡದೆಂದು ನಿಷೇಧಿಸಲ್ಪಟ್ಟ ಭಾರತದ ರಾಯಭಾರಿ ಗಗನ ವಿಹಾರಿಲಾಲ್ ಮೆಹತಾರವರು ಅದೇ ಊರಿನ ಮೇಯರರು ನಗರ ಹೋಟೆಲಿನಲ್ಲಿ ತಮ್ಮ ಗೌರವಾರ್ಥವಾಗಿ ಸತ್ಕಾರಕೂಟವನ್ನು ಏರ್ಪಡಿಸುವುದನ್ನು ತಿರಸ್ಕರಿಸಿರುತ್ತಾರೆ. ನೀಗ್ರೋಗಳಿಗೂ, ಬಿಳಿಯರಿಗೂ ಒಂದೇ ಕಡೆ ಭೋಜನವನ್ನು ಏರ್ಪಡಿಸಬಾರದೆಂದು ಆ ಸಂಸ್ಥಾನದ ಕಾನೂನು ವಿಧಿಸಿರುತ್ತದೆ.

ಮೈಸೂರು ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟರ ಕಛೇರಿ,
ಲಾಲ್‌ಬಾಗ್, ಬೆಂಗಳೂರು-೨
ತಾ॥ 16-8-1955

ಪ್ರಕಟಣೆ

ಈ ಮೂಲಕ ಸಮಸ್ತ ಜನಗಳ ತಿಳುವಳಿಕೆಗೆ ಪ್ರಕಟಿಸುವುದೇನೆಂದರೆ, ಮೈಸೂರು ಪ್ಯಾಲೆಸ್ ತಂತ್ರಾಲಯಕ್ಕೆ ಸೇರಿದ 3 ಎಮ್ಮೆಗಳು ಮತ್ತು ಒಂದು ಕೋಣವನ್ನು 10ನೇ ಸೆಪ್ಟೆಂಬರ್ 1955ನೇ ತಾರೀಖು ಶನಿವಾರ ಬೆಳಿಗ್ಗೆ 9 ಘಂಟೆಗೆ ಮೈಸೂರು ಕೃಷ್ಣರಾಜೇಂದ್ರ ಜೂಆಲಾಜಿಕಲ್ ಗಾರ್ಡನ್ಸ್ ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ಹರಾಜು ಷರತ್ತುಗಳು ಮತ್ತು ಮುಂತಾದ ವಿವರಗಳನ್ನು ಮೈಸೂರಿನಲ್ಲಿರುವ ಸರ್ಕಾರಿ ಉದ್ಯಾನಗಳು ಮತ್ತು ತೋಟಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಕಛೇರಿ ಅಥವಾ ಮೈಸೂರು ಜೂ ಗಾರ್ಡನ್ ಕ್ಯೂರೇಟರ್‌ರವರ ಕಛೇರಿಯಿಂದ ಪಡೆಯಬಹುದು.

(ರುಜು) ಎಂ. ಹೆಚ್. ಮರಿಗೌಡ,
ಸೂಪರಿಂಟೆಂಡೆಂಟ್

SREE GANESH TALKIES

Now in its crowded SECOND WEEK
From 3-9-55 :: Daily 3 Shows

ಕೇಂದ್ರದವರ ವೇತನ ಮಟ್ಟಕ್ಕೆ ವಿಶ್ವವಿದ್ಯಾಲಯಗಳಲ್ಲಿ ಸಂಬಳ

ಕೇಂದ್ರ ಸರ್ಕಾರದವರು ಕೊಡುತ್ತಿರುವ ಸಂಬಳಗಳ ಮಟ್ಟಕ್ಕೆ ಎಲ್ಲ ವಿಶ್ವವಿದ್ಯಾಲಯಗಳ ಉಪಾಧ್ಯಾಯರ ವೇತನಗಳನ್ನು ಹೆಚ್ಚಿಸಲು ಕ್ರಮಕೈಗೊಳ್ಳುವಂತೆ ವಿಶ್ವವಿದ್ಯಾಲಯಗಳ ಗ್ರಾಂಟುಗಳ ಸಮಿತಿಯವರು ಮೈಸೂರು ಮತ್ತು ಇತರ ವಿಶ್ವವಿದ್ಯಾಲಯಗಳಿಗೆ ಸೂಚಿಸಿರುವರೆಂದು ಗೊತ್ತಾಗಿದೆ. ಇದಕ್ಕಾಗಿ ತಗಲುವ ವೆಚ್ಚದಲ್ಲಿ ಶೇಕಡ ೮೦ ರಷ್ಟನ್ನು ಸಮಿತಿಯವರು ವಹಿಸಲು ಒಪ್ಪಿರುವರೆಂದೂ ಹೇಳಲಾಗಿದೆ. ಉಳಿದುದನ್ನು ಸಂಸ್ಥಾನ ಸರ್ಕಾರಗಳು ವಹಿಸಬೇಕಾಗಿದೆಯೆಂದೂ, ಈ ಸಲಹೆಗೆ ಮೈಸೂರು ಸರ್ಕಾರದ ಒಪ್ಪಿಗೆಯನ್ನು ಸಮಿತಿಯು ಎದುರು ನೋಡುತ್ತಿರುವುದಾಗಿಯೂ ಹೇಳಲಾಗಿದೆ.

ಮಹಿಳಾ ಸದನದ ವಾರ್ಷಿಕೋತ್ಸವ

ರಾಜಧಾನಿಯ ದೇವರಾಜ ಮೊಹಲ್ಲೆಯಲ್ಲಿರುವ ಮಹಿಳಾ ಸದನದ ೧೭ನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ಹಿರಿಯ ಶಾಸನ ಸಭಾ ಸದಸ್ಯೆ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ರಿಂದ ೮ ಅನ್ನಪೂರ್ಣ ಮತ್ತು ಜೆ. ಸಿ. ಸರೋಜ ದೇವರ ನಾಮ ೭ ೩೦ ಶ್ರೀಮತಿ ಪ್ರಸಾದ್ ಸಂಗೀತ ಮಧ್ಯಾಹ್ನ ೧ ೪೦ ಮತ್ತು ೧ ೫೦ ರೆಕಾರ್ಡ್ ೩ ೩೦ ಜಗತ್—ಮಕ್ಕಳ ಕಾರ್ಯಕ್ರಮ ಸಂಜೆ ೫ ೩೦ ಶ್ರೀಮತಿ ಪ್ರಸಾದ್—ಕಂಠಶ್ರೀ ವಚನ ಗಾನ ೬ ೧೫ ಜೆ. ಸಿ. ಅನ್ನಪೂರ್ಣ ಮತ್ತು ಜೆ. ಸಿ. ಸರೋಜ—ಕನ್ನಡ ಗೀತೆ ೭ ೫ ವಾರ್ತಾವಳಿ ೮-೩೦ ಭಾರತ ಮತ್ತು ವಿಶ್ವ ಶಾಂತಿ ಸಾಧನೆ ಭಾಷಣ ಎಸ್. ಕೃಷ್ಣಶರ್ಮ ೮ ಟಿ. ವಿ. ಗುರುರಾಜಾಚಾರ್—ಕಥಾ ಕಾಲಕ್ಷೇಪ ೯ ೧೫ ನಾಗಸ್ವರ ೯-೩೦ ರಾಷ್ಟ್ರೀಯ ಕಾರ್ಯಕ್ರಮ ಗುಜರಾತ್ ಸೌರಾಷ್ಟ್ರ ಸಂಗೀತ ದೆಹಲಿ ಪುನಃಪ್ರಸಾರ

● ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಮಧ್ಯಪ್ರದೇಶ ಸರ್ಕಾರದವರು ೩ ಲಕ್ಷ ಎಕರೆ ಜಮೀನನ್ನು ಕೊಡಲು ನಿರ್ಧರಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	೮ ೮ ೦	೧೫ ೮ ೦
ಎಳ್ಳು	೪೧ ೧೨ ೦	೪೭ ೮ ೦
ಹುಚ್ಚೆಳ್ಳು	೩೦ ೦ ೦	
ಹುರುಳಿ	೨೭ ೪ ೦	೩೫ ೪ ೦
ಹೆಸರು	೩೯ ೦ ೦	
ಹಲಸಂದೆ	೩೨ ೦ ೦	೩೫ ೦ ೦
ಉದ್ದು	೪೬ ೪ ೦	
ಧನಿಯ	೩೨ ೧೨ ೦	
ಹುಣಸೇಹಣ್ಣು	೭ ೦ ೦	೪ ೪ ೦

ಶ್ರೀಗಾಯತ್ರಿ ಟಾಕೀಸ್

2-9-55 ರಿಂದ 4 ದಿನಗಳು
ಪ್ರತಿ ದಿನ 3 ಪ್ರದರ್ಶನಗಳು
ಟ್ವೆಂಟಿಯತ್ ಸೆಂಚುರಿಯವರ ಸಿನಿಮಾಸ್ಕೋಪ್, ಡಿಲಕ್ಸ್ ವರ್ಣರಂಜಿತ ಚಿತ್ರ

ಬ್ಲಾಕ್ ವಿಡೋ

ಪಾತ್ರ— ವಾನ್ ಹೆಫ್ಲಿನ್, ಜಿಂಜರ್ ರೋಜರ್ಸ್

— ಬೆಳಗಿನ ಪ್ರದರ್ಶನ —
ಶನಿವಾರ ಮತ್ತು ಭಾನುವಾರಗಳಲ್ಲಿ
ಕೈಂಡ್ ಲೇಡಿ

Edited, Printed and Published by A R Nagarajan at Sadhvi Press, D Subbiah Road, Mysore

ಗಣೇಶಾ ಚಿತ್ರಮಂದಿರದಲ್ಲಿ ಹೊಸ ವಿಧಾನದ ಪ್ರದರ್ಶನ

ಗಣೇಶಾ ಚಿತ್ರ ಮಂದಿರದಲ್ಲಿ ಕಳೆದ ಶುಕ್ರವಾರದಿಂದ ಪ್ರದರ್ಶಿಸಲ್ಪಟ್ಟ "ದಿ ಬ್ಲ್ಯಾಕ್ ಶೀಲ್ಡ್ ಆಫ್ ಫಾಲ್‌ವರ್ತ್" ಎಂಬ ಚಿತ್ರ ಕಥಾವಸ್ತುವು ಹದಿನೈದನೆಯ ಶತಮಾನಕ್ಕೆ ಸಂಬಂಧಿಸಿದುದು. ವಿರೋಧಿಗಳ ಕುತಂತ್ರಗಳಿಗೆ ಗುರಿಯಾಗಿ ಆಸ್ತಿಪಾಸ್ತಿಗಳನ್ನು ಹಾಳುಮಾಡಿಕೊಂಡು ಕೊನೆಗೆ ಪ್ರಾಣವನ್ನೂ ಕಳೆದುಕೊಳ್ಳುತ್ತಿದ್ದ ಒಬ್ಬ ಪಾಳೆಯಗಾರನು ತನ್ನ ಶೌರ್ಯ ಸಾಹಸಗಳಿಂದ, ಧೀರೆಯಾದ ಕಾಲ್ಪನೆಯ ಹೃದಯವನ್ನು ಮೆಚ್ಚಿಸಿ ಪುನಃ ಸ್ಥಾನಮಾನಗಳನ್ನು ಪಡೆಯುವನು. ಈ ಬಗೆಯ ಚಿತ್ರಗಳಲ್ಲಿ ಬರುವ ಶೌರ್ಯ, ಸಾಹಸ ಮತ್ತು ಪ್ರಣಯ ಸನ್ನಿವೇಶಗಳೆಲ್ಲ ಈ ಚಿತ್ರದಲ್ಲಿ ಇವೆ. 'ಹೌಡಿನಿ' ಚಿತ್ರದ ನಟ ಪ್ರಸಿದ್ಧ ನಟ 'ಟೋನಿ ಕರ್ಟಿಸ್' ಚುರುಕಿನ ನಟನೆಯಿಂದ ಅಭಿನಯಿಸಿರುವುದು ಈ ಚಿತ್ರದ ವಿಶೇಷ ಎನ್ನಬಹುದು. ಇದರ ಜೊತೆಗೆ ಹರ್ಬರ್ಟ್ ಮಾರ್ಷಲ್ಲರ ಅಭಿನಯವೂ ಉತ್ತಮವಾದುದು.

ಇವೆಲ್ಲಕ್ಕಿಂತ ಪ್ರಧಾನವಾದ ಅಂಶವೆಂದರೆ ಚಿತ್ರವು ನವ್ಯ ವಿಧಾನವಾದ ಸಿನಿಮಾಸ್ಕೋಪ್ ರೂಪದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಈ ವಿಧಾನದಿಂದ ಗಣೇಶಾ ಚಿತ್ರ ಮಂದಿರವು ಬಹು ಸೂಕ್ತವಾದುದು. ವರ್ಣರಂಜಿತ ಚಿತ್ರದ ನಿಸರ್ಗ ಸೌಂದರ್ಯದ ದೃಶ್ಯಗಳು, ಮಂದಿರದ ಅಗಲಕ್ಕೂ ಹಬ್ಬಿದ್ದು ಅಗಾಧ ಮತ್ತು ಉತ್ತಮ ರೂಪದಲ್ಲಿ ಕಾಣಬರುತ್ತವೆ. ಇದರ ಜೊತೆಗೆ ಮುಖ್ಯ ಚಿತ್ರಗಳಂತೆ ಅಲ್ಲದೆ, ಪಾತ್ರಧಾರಿಗಳ ಮಾತುಗಳು ಧ್ವನಿವರ್ಧಕದಲ್ಲಿದ್ದರೆ ಅಲ್ಲಿಂದಲೇ ಬರುವುದು ಚಿತ್ರಕ್ಕೆ ಒಂದು ಸ್ವಾಭಾವಿಕತೆಯ ಮೆರುಗನ್ನು ಕೊಟ್ಟಿದೆ. ಈ ಅಗಾಧವಾದ ದೃಶ್ಯಗಳನ್ನು ಮುಂಚೆಯೇ ಹೋಗಿ ಆದಷ್ಟು ದೂರದಿಂದ ನೋಡಿದಲ್ಲಿ ಅವುಗಳ ಪೂರ್ಣ ಸ್ವರೂಪವನ್ನು ಕಂಡು ಆನಂದಿಸಬಹುದು.

ಅಸಿಸ್ಟೆಂಟ್ ಕಮಿಷನರರಾಗಿ ಬಡ್ತಿ

ಅಮಲ್ದಾರ್ ಶ್ರೀ ಮುನಿದೇವಯ್ಯನವರಿಗೆ ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿಕೊಟ್ಟು ಮೈಸೂರು ವಿಶ್ವೇಶ್ವರಯ್ಯ ನಾಲಾ ವಿಶೇಷಾಧಿಕಾರಿಯಾಗಿ ವರ್ಗಾಯಿಸಲಾಗಿದೆ.

ಮುದ್ದು ಮಾಗಳೇ, ಬಂಧುಗಳೇ ಗುರಿ ತಪ್ಪಬೇಡಿ!
ಸೂಕ್ತ ಚಿಕಿತ್ಸೆಗೆ ಬನ್ನಿ

ಡಾ॥ ರಾಣಾರವರ
ಒಂದು ವಾರದ ಅವಧಿಯ
ನೂತನ ಮತ್ತು ಅದ್ಭುತ ಚಿಕಿತ್ಸೆಯು
ನಿಮ್ಮ ನರಗಳೆಲ್ಲವನ್ನೂ ಹರ್ಷದಾಯಕವಾಗಿ ಬಲಪಡಿಸಲು ತಪ್ಪುವುದಿಲ್ಲ
ಅದ್ದರಿಂದ ಹೊಸ ತಾರುಣ್ಯ, ಅದ್ಭುತ ಶಕ್ತಿ ಮತ್ತು ಆನಂದದ ಆರೋಗ್ಯ ಹೊಂದಲು ಈ ಕ್ಲಿನಿಕ್ಕಿನ ಪ್ರವೀಣರನ್ನು ಭೇಟಿ ಮಾಡಿ

ಡಾ॥ ಎ. ಬಿ. ರಾಣಾ
ಅನೇಕ ವರ್ಷಗಳ ಚಿಕಿತ್ಸೆ ಅನುಭವದ ಬಳಿಕ ಕಾಲ, ಆರೋಗ್ಯ ಮತ್ತು ಹಣವನ್ನು ಉಳಿಸುತ್ತದೆ ಮತ್ತು ನಿಮ್ಮನ್ನು ವಾಸ್ತವ, ವೈದ್ಯರು ಮತ್ತು ಔಷಧಿಗಳ ಕಾಟದಿಂದ ತಪ್ಪಿಸುತ್ತದೆ
ಭೇಟಿಯ ಕಾಲ ಬೆಳಿಗ್ಗೆ 8 ರಿಂದ 12
ಸಂಜೆ 4 ರಿಂದ 8

ರಾಣಾ ಮೆಡಿಕಲ್ ಹಾಲ್,
ಎಲ್. ನಂ 1-745 ಅಶೋಕಾ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ ಹಾರ್ಡ್ವಿಕ್ ಬಳಿ 3ನೇ ಕಟ್ಟಡ)

NATIONAL LEAGUE,
Anathalaya Buildings, Mysore

Offers Brilliant Coaching to
S. S. L. C. Students
(JANUARY 1956)

* First session classes for Jan 56 in full swing
* Second session classes commence shortly
* Separate section for lady candidates

JOIN AT ONCE

— WANTED —
Two experienced part time Arts Graduates who can handle optional Geography. Apply immediately

Organiser

Good Opportunity! JAI HIND! Join at once!

SHANKARA TUTORIAL INSTITUTE, NANJANGUD

The following coaching classes will be started very shortly
Tuition by experienced teachers. Fees very moderate

1) S S L C. 1956 January Examination
2) Hindi Examinations 1956 February

For further particulars apply to—
G S. VENKATASUBBIAH, B Sc., B.T
Head Master

ರಿಜಿಸ್ಟರ್ ನಂ. 792

ವ್ಯಾಪಾರ ಪ್ರಕಟನೆಗಳನ್ನು
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಆಣೆ

ಮೈಸೂರು ಸಿಲ್ಕು
ಧರ್ಮಾವರಂ, ಕಾಂಚೀ, ದಿಂಡಿಗಲ್, ಕೊಳ್ಳೇಗಾಲ
ಜರಿಬಂಗಾರ್ ಸೀರೆಗಳು
ಒಂದಿನ ಇಂದೇ ಬೇಟಿ ಕೊಡಿ
M. T. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು

ಸಂಪುಟ: ೦೪] SADHVI SATURDAY 3 9 1955 ಮೈಸೂರು ಶನಿವಾರ ೩-೯-೧೯೫೫ [ಸಂಚಿಕೆ ೨೩೪

ಗೋವಾ ವಿಮೋಚನೆಗೆ ಅಂತರ್ರಾಷ್ಟ್ರೀಯ ಸತ್ಯಾಗ್ರಹಿ ಪಡೆ

ಚೌ ಎನ್ ಲೈ ಭೇಟಿಯೇ?

ಪೂರ್ವ (ಪೂರ್ವ ಏಷ್ಯಾ) ದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳ ಬಗ್ಗೆ ನೆಹರೂರವರೊಂದಿಗೆ ಚರ್ಚಿಸಲು ಚೀಣದ ಪ್ರಧಾನಿ ಚೌ ಎನ್ ಲೈ ಅವರು ದೆಹಲಿಗೆ ಬರುವರೆಂದು ಲಂಡನ್ನಿನ ಪತ್ರಿಕೆಯೊಂದು ತಿಳಿಸಿದೆ.

ಮಂಜಯ್ಯ ಹೆಗ್ಗಡೆಯವರ ನಿಧನ

ಧರ್ಮಸ್ಥಳದ ದೇವಸ್ಥಾನದ ಧರ್ಮಾಧಿಕಾರಿ ಶ್ರೀ ಮಂಜಯ್ಯ ಹೆಗ್ಗಡೆಯವರು ನಿನ್ನೆ ರಾತ್ರಿ ಕಾಲವಾದರೆಂದು ತಿಳಿದು ಬಂದಿದೆ. ಅವರು ಪರಮ ಸಾತ್ವಿಕರಾಗಿ ಧರ್ಮಸ್ಥಳದಲ್ಲಿ ಅನೇಕ ವಿಧ್ಯ ಧರ್ಮದ ಕಾರ್ಯಗಳನ್ನು ನಡೆಸಿದವರು. ಅವರಿಗೆ ಕಲೆ ಮುಂತಾದವುಗಳಲ್ಲಿ ವಿಶೇಷ ಆಸಕ್ತಿ ಇದ್ದಿತು. ಧರ್ಮಸ್ಥಳಕ್ಕೆ ಭೇಟಿಯಿತ್ತ ಎಲ್ಲ ಜನ ಮತ್ತು ವಿದ್ವಾಂಸರುಗಳಿಗೂ ಅವರು ಆದರದಿಂದ ಸನ್ಮಾನ ಮಾಡುತ್ತಿದ್ದರು.

ಮುವ್ವಾರು ಆಧಾರದ ಮೇಲೆ ಸ್ಪರ್ಧಿಗಳ ಆಯ್ಕೆಯಿಲ್ಲ

ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಆರಿಸುವಾಗ ಜಾತಿಯನ್ನು ಗಮನಕ್ಕೆ ತರಲಾಗುವುದೆಂದು ತಿಳಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಕಾರ್ಯಕರ್ತರಿಗೂ ಸಮ್ಮೇಳನದಲ್ಲಿ ಮತದ ಅಭಿಪ್ರಾಯ ಸೂಚಿಸಲ್ಪಟ್ಟಿತೆಂದು ಯಾಗಿದೆ. ಉಮೇದುವಾರನ ಯೋಗ್ಯತೆ ಅವನ ಹಿಂದಿನ ಚರಿತ್ರೆಯನ್ನು ಮಾತ್ರ ನೋಡಬೇಕೆಂದೂ ಅಭಿಪ್ರಾಯಪಡಲಾಗಿದೆ.

ಕೋಲಾರದಲ್ಲಿ ವೆಂಕಟೇಶ ಸಭೆ

ಕೋಲಾರದ ಶ್ರೀ ವೆಂಕಟೇಶ ಸಭೆಯು ನಗರದ ... ದಲ್ಲಿ ನಡೆಯುವುದು. ಶ್ರೀ ನಿನ ... ದ ಸಂಪ್ರದಾಯಾನುಯಾಯಿಗಳೆಲ್ಲರೂ ಭಾಗವಹಿಸುವಂತೆ ಸಭೆಯ ಅಧ್ಯಕ್ಷರು ... ಅಧ್ಯಕ್ಷರು ... ರಾಗಿರುತ್ತಾರೆ.

... ಸಂಘದ ಆರಂಭ ಭಾಷಣ

... ದ ತ್ಯಾಗರಾಜಾ ನಗರದಲ್ಲಿರುವ ... ಸಾಹುಕಾರ್ ಸಿದ್ದಪ್ಪನವರ ವಿದ್ಯಾಲಯದ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ 4 ಘಂಟೆಗೆ ಯುವರಾಜ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ... ನವರು ಮಾಡುವರು. ಅದೇ ಕಾಲೇಜಿನ ಇಂಗ್ಲಿಷ್ ಅಧ್ಯಾಪಕರಾದ ಶ್ರೀ ಎ. ... ಪ್ಪನವರು ಅಧ್ಯಕ್ಷತೆ ವಹಿಸುವರು ... ಆಹ್ವಾನವಿದೆ.

ಕುಂಭಾಭಿಷೇಕ

... ಪೇಟೆ ಪ್ಯಾಲೇಸು ರಸ್ತೆಯ ಪಾರ್ಶ್ವದ ಬೆಟ್ಟದಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಕುಂಭಾಭಿಷೇಕವು ನೆರವೇರುವುದು. ಸಹಕರಿಸುವಂತೆ ಭಕ್ತ ಮಂಡಲಿಯು ... ರುತ್ತಾರೆ.

ಭಾರತದ ಸೇನಾನಿ ಜನರಲ್ ಶ್ರೀನಾಗೇಶ್‌ರವರು

ಇವರಿಗೆ ... ದ ರಕ್ಷಣಾ ವ್ಯವಸ್ಥೆಯ ಪ್ರಧಾನ ಸೇನಾ ಜನರಲ್ ... ರು ಲೆಫ್ಟಿನೆಂಟ್ ಜನರಲ್ ... ಮಿಲಿಟರಿ ಅಧಿಕಾರಿಗಳಿಗೆ ... ಪ್ರಶಸ್ತಿಯನ್ನು ... ಶ್ರೀನಾಗೇಶ್‌ರವರು ... ಕೇಂದ್ರಗಳ ... ಬಂದಿದೆ.

ಅಕ್ರಮವಾಗಿ ಸೇಂದಿ ಇಳಿಸಿದುದಕ್ಕೆ ನಾಲ್ವರಿಗೆ ಸಜಾ

ಗುಂಡ್ಲುಪೇಟೆ ...

ಈ ತಾಲ್ಲೂಕಿನ ... ಗ್ರಾಮದಲ್ಲಿ ರಹಸ್ಯವಾಗಿ ಮರಗಳಿಂದ ಸೇಂದಿ ... ಎಂಬುವರು ... ಕಾನ್ಸ್‌ಟೇಬಲ್ ... ಮೇಲೆ ಎಕ್ಸೈಜು ಇನ್ಸ್‌ಪೆಕ್ಟರ್ ... ನ್ಯಾಯಾಧೀಶರ ... ಕೋರ್ಟಿನಲ್ಲಿ ... ತಪ್ಪಿತಸ್ಥರೆಂದು ತೀರ್ಮಾನಿಸಿ ... ಸಜಾ ವಿಧಿಸಲಾಯಿತು.

ಅಕಾಶವಾಣಿ ವಾರ್ತೆ ಕಾರ್ಯಕ್ರಮ

... ಮಿಸ್ ... ಸಂಜೆ ... ಕಾರ್ಯಕ್ರಮ ...

ಸದ್ಗುರು ಸೇವಾ ಮಂಡಲದ ಜ್ಯೋತಿಷ್ಯ ವಿಭಾಗ

ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆ ಆವರಣದಲ್ಲಿ ಶ್ರೀ ಸದ್ಗುರು ಸೇವಾ ಮಂಡಲದವರು ಏರ್ಪಡಿಸಿರುವ ಜ್ಯೋತಿಷ್ಯ ವಿಭಾಗದ ಕಾರ್ಯಕ್ರಮವನ್ನು ಪ್ರತಿ ಭಾನುವಾರ ಬೆಳಿಗ್ಗೆ ... ರಿಂದ ಸಂಜೆ ... ಏರ್ಪಡಿಸಿದೆ. ಮಹಾಜನರು ಇದರ ಪ್ರಯೋಜನವನ್ನು ಪಡೆಯಬೇಕಾಗಿ ಕೋರಿದೆ.

ರಾಜೇಂದ್ರ ಪ್ರಸಾದರಿಂದ ವಿಧಾನ ಸೌಧದ ಆರಂಭ

(ನಮ್ಮ ವರದಿಗಾರ) ಬೆಂಗಳೂರು ...

ವಿಧಾನ ಸೌಧ ಕಟ್ಟಡದ ಆರಂಭೋತ್ಸವವನ್ನು ... ಭಾರತ ರಾಷ್ಟ್ರಪತಿ ... ರಾಜೇಂದ್ರ ಪ್ರಸಾದರು ಆರಂಭಿಸುವರೆಂದು ... ತಿಳಿದು ಬಂದಿದೆ.

ರೈಲಿಗೆ ಸಿಕ್ಕಿ ಆತ್ಮಹತ್ಯೆ

... ಉತ್ತರ ... ರೈಲಿನ ಮುಂದೆ ... ಆತ್ಮಹತ್ಯೆ ಮಾಡಿಕೊಂಡನು.

ಸರ್ಕಾರಕ್ಕೂ ಕಾಂಗ್ರೆಸ್ಸಿನವರಿಗೂ ಸಾಮರಸ್ಯ

ಅವರೀರ್ವರ ಬಹಿರಂಗ ಟೀಕೆಗೆ ಅವಕಾಶವಿಲ್ಲ

ಮುಖ್ಯಮಂತ್ರಿಗಳು ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ... ಸರ್ಕಾರದ ... ಕಾಂಗ್ರೆಸ್ಸಿನವರ ಪ್ರಶ್ನೆಗಳು ... ಮುಖ್ಯಮಂತ್ರಿಗಳು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳು ಒಪ್ಪಿಕೊಂಡಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ... ಕಾಂಗ್ರೆಸ್ ... ಸಚಿವರುಗಳು ... ಮಂತ್ರಿಗಳು ... ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ... ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ... ಸರ್ಕಾರದ ... ಕಾರ್ಯವನ್ನು ... ನ್ಯಾಯ ನಿರ್ಣಯಗಳ ... ಅಧಿಕಾರ ... ಪ್ರದೇಶ ಅಧ್ಯಕ್ಷರಿಗೆ ನಡೆದ ಮುಖ್ಯಮಂತ್ರಿಯವರೊಡನೆ ... ಗೊತ್ತುಮಾಡಲ್ಪಟ್ಟಿತು. ಬಹಿರಂಗವಾಗಿ ಮಂತ್ರಿಮಂಡಲವನ್ನು ಟೀಕಿಸುವುದರಿಂದ ... ವಾಗಿದೆ.

ಮನೆ ದೇವರಿಗೆ ಆಡಿನ ಬದಲು ಮಗನ ಬಲಿ

... ತನ್ನ ... ವರ್ಷದ ಮಗನನ್ನು ದೇವರಿಗೆ ಬಲಿ ಕೊಟ್ಟನೆಂದು ವರದಿಯಾಗಿದೆ. ಬಲಿ ಕೊಡಲು ... ಆಡನ್ನು ಸಾಕುತ್ತಿದ್ದನು ... ದೇವರು ... ಮಗನನ್ನು ಬಲಿ ಕೊಟ್ಟನೆಂದು ಹೇಳಲಾಗಿದೆ.

ಗೋವಾ ಸತ್ಯಾಗ್ರಹಕ್ಕೆ ಅಂತರ ರಾಷ್ಟ್ರೀಯ ತಂಡ

ಗೋವಾವನ್ನು ಶಾಂತಿಯುತವಾಗಿ ವಿಮೋಚನೆಗೊಳಿಸುವ ಚಳವಳಿಯಲ್ಲಿ ಭಾಗವಹಿಸಲು ಅಂತರ ರಾಷ್ಟ್ರೀಯ ಸ್ವಯಂಸೇವಕರ ತಂಡವೊಂದು ಬರುವ ನವೆಂಬರ್ ತಿಂಗಳಲ್ಲಿ ಬೊಂಬಾಯಿಗೆ ಬರಲಿದೆ. ಅವರಲ್ಲಿ ಎಲ್ಲ ಪರರಾಷ್ಟ್ರಗಳ ಸ್ವಯಂಸೇವಕರಲ್ಲದೆ, ವಿಶ್ವದ ಹಲವು ರಾಷ್ಟ್ರಗಳವರು ಇರುವರೆಂದು ಹೇಳಲಾಗಿದೆ. ಅವರುಗಳ ... ವನ್ನು ವಹಿಸಲು ಬೊಂಬಾಯಿಯ ಸರ್ವ ಪಕ್ಷ ಗೋವಾ ವಿಮೋಚನಾ ಸಮಿತಿ ... ಗಣೇಶನ ಹಬ್ಬದ ದಿನದಿಂದ ನಿಧಿ ಸಂಗ್ರಹಿಸಲಿದೆ.

ಅಮರನಾಥ ಝಾರವರ ನಿಧನ

... ಭಾರತದ ಸಂಸ್ಕೃತ ಪಂಡಿತರು ... ಡಾ|| ಅಮರನಾಥ ಝಾರವರು ... ಹೃದಯಬೇನೆಯಿಂದ ನಿನ್ನೆ ನಿಧನರಾದರು. ಅವರಿಗೆ ... ವರ್ಷ ವಯಸ್ಸು. ಇಂಗ್ಲೀಷಿನಲ್ಲಿ ವಿಶೇಷ ಪ್ರವೀಣರಾಗಿದ್ದರಲ್ಲದೆ ಉರ್ದು, ಬಂಗಾಳಿ ಮತ್ತು ಮೈಥಿಲಿ ಸಾಹಿತ್ಯದಲ್ಲಿ ಅವರ ಪಾಂಡಿತ್ಯ ಅಗಾಧವಾಗಿತ್ತು. ... ಕಾಶಿ ವಿಶ್ವವಿದ್ಯಾಲಯಗಳ ವೈಸ್ ಛಾನ್ಸಲರ್ ಮತ್ತು ಉತ್ತರ ಪ್ರದೇಶ ಮತ್ತು ... ಪಬ್ಲಿಕ್ ಸರ್ವಿಸ್ ಕಮೀಷನ್ನುಗಳ ಅಧ್ಯಕ್ಷರಾಗಿದ್ದರಲ್ಲದೆ, ... ಮತ್ತು ... ಸಮಿತಿಗಳಲ್ಲಿ ಭಾರತದ ಪರ ಸದಸ್ಯರಾಗಿದ್ದರು.

ವಿಶ್ವೇಶ್ವರಪುರದ ಸಂಕೇತ ಸಂಘ

... ವಿದ್ಯಾರ್ಥಿ ವೇತನಗಳಿಗೆ ... ವಿದ್ಯಾರ್ಥಿಗಳು ಅರ್ಜಿಗಳನ್ನು ... ತಿಂಗಳು ... ರಿಂದ ... ಸಂಘದ ಕಾರ್ಯದರ್ಶಿಯವರಾದ ಶ್ರೀ ಎಸ್. ಎ. ... ಶ್ರೀ ... ರಲ್ಲಿ ಕಳುಹಿಸಬೇಕೆಂದು ಸೂಚಿಸಲಾಗಿದೆ.

ವಿವಾಹ ಮಹೋತ್ಸವ

... ಜನರಲ್ಲಿ ... ಸೂಪರಿಂಟೆಂಡೆಂಟಾಗಿರುವ ಶ್ರೀ ಎನ್. ... ವರು ತಮ್ಮ ... ಮಗಳ ... ವನ್ನು ಮುದ್ರಿಸಿದ ಶ್ರೀ ಎ. ಕೆ. ರಂಗ... ಪ್ರತಿಯೊಬ್ಬರಿಗೂ ... ಕೊಟ್ಟು ... ವಿವಾಹವನ್ನು ನೆರವೇರಿಸಿದರು.

... ಅಕ್ಟೋಬರ್ ತಿಂಗಳು ... ಮಹಾತ್ಮಾ ಗಾಂಧಿಯವರ ಜಯಂತಿ ... ದಿಂದ ... ಯನ್ನು ... ಎಂದು ತಿಳಿದುಬಂದಿದೆ. ಈಗ ... ಪಡೆಯುವುದಿಲ್ಲ.

ಬಿ. ಸಿ. ಜಿ. ವ್ಯಾಕ್ಸಿನೇಷನ್ನಿನ ಬಗ್ಗೆ ವಿಮರ್ಶೆ

ಪೌರಸಭಾಧಿವೇಶನದಲ್ಲಿ ಚರ್ಚೆ

ಮೈಸೂರು ೨

ಪುರಸಭೆಯ ಮುಂದುವರಿದ ಸಾಮಾನ್ಯ ಅಧಿವೇಶನವು ನೆನ್ನೆ ಮಧ್ಯಾಹ್ನ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಇತ್ತೀಚಿಗೆ ಪುರಸಭೆಯ ಆಡಳಿತ ವರ್ಗದವರು ನಗರದ ಅಭಿವೃದ್ಧಿ ಯೋಜನೆಗಳ ಪಟ್ಟಿಯೊಂದನ್ನು ಸರ್ಕಾರಕ್ಕೆ ಕಳುಹಿಸಿದ್ದುದನ್ನು ಶ್ರೀ ಶ್ರೀಕಂಠಶರ್ಮರು ಪ್ರಸ್ತಾಪಿಸಿ, ಆ ಬಗ್ಗೆ ಸಭೆಯ ಅಭಿಪ್ರಾಯವನ್ನು ಪಡೆಯದಿದ್ದುದಕ್ಕೆ ಆಕ್ಷೇಪಿಸಲಾಗಿ ಈಗ ಕಳುಹಿಸಲಾದ ಯೋಜನೆಗಳನ್ನು ಸಭೆಯು ಬಹಳ ಹಿಂದೆಯೇ ಒಪ್ಪಿತ್ತೆಂದೂ ಅವುಗಳಲ್ಲಿ ಯಾವ ಹೊಸ ವಿಷಯಗಳನ್ನೂ ಸೇರಿಸಿಲ್ಲವೆಂದೂ ಕಮೀಷನರರು ತಿಳಿಸಿದರು. ಅಧ್ಯಕ್ಷರು ಮಾತನಾಡಿ, ಸರ್ಕಾರದವರು ಈಗಾಗಲೇ ೧॥ ಲಕ್ಷ ರೂ. ಗಳ ಸಾಲವನ್ನು ಪುರಸಭೆಯ ನಾನಾ ಅಭಿವೃದ್ಧಿ ಯೋಜನೆಗಳಿಗಾಗಿ ಕೊಟ್ಟಿರುವರೆಂದೂ, ಎರಡನೇ ಪಂಚವಾರ್ಷಿಕ ಯೋಜನೆ ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಸುಮಾರು ೯೭ ಲಕ್ಷ ರೂ. ದೊರಕುವ ಸಂಭವವಿದೆಯೆಂದೂ, ಇದಕ್ಕಾಗಿ ಅವರಿಗೆ ಯೋಜನೆಗಳ ಪಟ್ಟಿಯನ್ನು ಕಳುಹಿಸಲಾಯಿತೆಂದೂ ತಿಳಿಸಿದರು.

ಪುರಸಭೆಯು ಇತ್ತೀಚಿಗೆ ಏರ್ಪಡಿಸಿದ ಎರಡು ಸಮಾರಂಭಗಳಲ್ಲಿ ಖರ್ಚಾಗಿದ್ದ ಲೆಕ್ಕವನ್ನು ಡಾ॥ ಬಿ. ಜಿ. ದಾಸರು ಕೇಳಿ ಆ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ಸೂಕ್ತ ಸಮಾಧಾನವಿತ್ತರು.

ಕಂದಾಯ ವಸೂಲಿಯ ಅತೃಪ್ತಿಕರವಾದ ವಿಷಯವನ್ನು ಶ್ರೀ ಬಿ. ಕೆ. ಪುಟ್ಟಯ್ಯನವರು ಪ್ರಸ್ತಾಪಿಸಿದರು. ಕಾರ್ಯದಲ್ಲಿ ದಕ್ಷತೆಯ ಕೊರತೆಗಾಗಿ ಎಸ್. ಕಲೆಕ್ಟರುಗಳ ಸಂಬಳವನ್ನು ನಿಲ್ಲಿಸಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆಯೆಂದು ಕಮೀಷನರರು ತಿಳಿಸಿದರು.

ದಸರಾ ಸಮೀಪಿಸುತ್ತಿರುವಂತೆ ನಗರದಲ್ಲಿ ಹೆಚ್ಚುತ್ತಿರುವ ಭಿಕ್ಷುಕರ ಹಾವಳಿಯನ್ನು ತಡೆಗಟ್ಟಬೇಕೆಂದು ಶ್ರೀ ಎಂ. ಕೆ. ಲಿಂಗಯ್ಯನವರು ಕೋರಿದರು.

ಅನಂತರ ಪ್ರಶ್ನೋತ್ತರಗಳ ಸಮಯ. ಪಿಟೀಲು ಕೃಷ್ಣಪ್ಪನವರ ರಾಮ ಮಂದಿರದ ಆವರಣದಲ್ಲಿ ಬಿ. ಸಿ. ಜಿ. ಹಾಕಿಸಿಕೊಂಡ ಶ್ರೀಮತಿ ಬಿ. ಎಸ್. ರತ್ನಬಾಯಿ ಎಂಬುವರಿಗೆ ಮುಂದೆ ಕಾಣಿಸಿದ ಹಾನಿಯನ್ನು ವಿವರಿಸಿದ ಬಗ್ಗೆ ಶ್ರೀ ಎ. ಜಿ. ದಾಸರು ಹಾಕಿದ ಪ್ರಶ್ನೆಗೆ ಅಧ್ಯಕ್ಷರು ಉತ್ತರವಿತ್ತು ಮಂದಿರದ ಟ್ರಸ್ಟಿಗಳು ಆ ಸ್ಥಳವನ್ನು ತಮಗೆ ಕೇಳಿದರೆಂದು ಆಕ್ಷೇಪಣೆ ಎತ್ತಿದರೆಂದೂ, ಇದು ಇತ್ಯರ್ಥವಾಗುವವರಲ್ಲಿ ದಸರಾ ರಜೆಯ ಅವಧಿಯು ಮುಗಿಯುವವರೆಗೆ ಅದನ್ನು ಬಿಟ್ಟುಕೊಡಲಿಲ್ಲವೆಂದೂ ತಿಳಿಸಿದರು. ಈ ಸಮಸ್ಯೆಯನ್ನು ಲೀಗಲ್ ಸಮಿತಿಯು ಪರಿಶೀಲಿಸುತ್ತಿದೆಯೆಂದೂ ಸಹ ತಿಳಿಸಲಾಯಿತು.

ಪುರಸಭಾಧ್ಯಕ್ಷರು ಸಭೆಗಳನ್ನು ನಡೆಸಲು ಸಮರ್ಪಕವಾಗಿ ತಕ್ಕ ರೀತಿಯಲ್ಲಿರುವಂತಹ ಸಮವಸ್ತ್ರವನ್ನು ಧರಿಸಬೇಕೆಂದೂ, ಸಾಮಾನ್ಯವಾದ ಜುಬ್ಬ ಮತ್ತು ಟೋಪಿಗಳನ್ನು ಧರಿಸಿ ಸಭಾಧ್ಯಕ್ಷತೆ ವಹಿಸಬಾರದೆಂದೂ ಡಾ॥ ಬಿ. ಜಿ. ದಾಸರು ಅಧ್ಯಕ್ಷರಿಗೆ ಸೂಚಿಸಿದರು. ಈ ಬಗ್ಗೆ ಸಭೆಯು ಅಭಿಪ್ರಾಯಪಟ್ಟ ರೀತಿಯಲ್ಲಿ ವರ್ತಿಸಲು ತಾವು ಸಿದ್ಧವೆಂದು ಅಧ್ಯಕ್ಷರು ತಿಳಿಸಿದರು.

ಬಿ. ಸಿ. ಜಿ. ಪ್ರಯೋಗದ ಉಪಯುಕ್ತತೆ ಬಗ್ಗೆ ಈಗ ವಿವಾದವಿರುವ ಕಾರಣ ಅದನ್ನು ನಿಲ್ಲಿಸಲು ಸರ್ಕಾರವನ್ನು ಪ್ರಾರ್ಥಿಸಬೇಕೆಂಬುದಾಗಿ ಶ್ರೀ ಸಿ. ಎನ್. ನಾರಾಯಣರಾಯರು ತಂದ ನಿರ್ಣಯವನ್ನು [illegible] ಮತಗಳಿಂದ ತಿರಸ್ಕರಿಸಲಾಯಿತು. ಬ್ರಿಟಿಷ್ ತಜ್ಞರ ಅಭಿಪ್ರಾಯವು ಬರುವವರೆಗೆ ನಿಲ್ಲಿಸಬೇಕೆಂಬುದಾಗಿ ಶ್ರೀ ಎಂ. ಎಸ್. ತಿಮ್ಮಯ್ಯನವರು ತಿದ್ದುಪಡಿಯನ್ನು ಸೂಚಿಸಿದರು. ಅದೂ ಸಹ ಬಿದ್ದುಹೋಯಿತು.

ಡಾ॥ ಬಿ. ಜಿ. ದಾಸರು ನಿರ್ಣಯವನ್ನು ಸಮರ್ಥಿಸುತ್ತಾ—ಸಾಮೂಹಿಕ ಇನಾಕ್ಯುಲೇಷನ್ ಅಪಾಯಕಾರಿಯಾದುದೆಂಬುದು ತಜ್ಞರ ಅಭಿಪ್ರಾಯವೆಂದೂ, ಈ ಇನಾಕ್ಯುಲೇಷನ್ ಬಗ್ಗೆ ಅತ್ಯಲ್ಪ ಮಂದಿ ಮಾತ್ರ ತರಬೇತನ್ನು ಹೊಂದಿದ್ದಾರೆಂದೂ, ತರಬೇತಿಲ್ಲದವರಿಂದ ಇನಾಕ್ಯುಲೇಷನ್ ಮಾಡಿಸಿ ನಮ್ಮಲ್ಲಿ ಎಷ್ಟೋ ಮಕ್ಕಳಿಗೆ ಪರಿಸ್ಥಿತಿಯು ವಿಪರೀತಕ್ಕೆ ತಿರುಗಿರುವುದು ಸರ್ವವಿದಿತವೆಂದೂ, ಈ ಕಾರಣ ಅದನ್ನು ನಿಲ್ಲಿಸುವುದು ಸೂಕ್ತವೆಂದೂ ಅಭಿಪ್ರಾಯಪಟ್ಟರು. ಶ್ರೀಗಳಾದ ಶ್ರೀಕಂಠಶರ್ಮ ಮತ್ತು ಹೆಚ್. ಎಂ. ಮುದ್ದಯ್ಯನವರುಗಳು ನಿರ್ಣಯವನ್ನು ಸಮರ್ಥಿಸಿದರು.

ಶ್ರೀಗಳ ವಿ. ಎಸ್. ಲಿಂಗಣ್ಣ, ಎಂ. ಕೆ. ಲಿಂಗಯ್ಯ ಮತ್ತು ವೆಂಕಟಲಿಂಗಯ್ಯನವರು ನಿರ್ಣಯವನ್ನು ವಿರೋಧಿಸಿ, ಈ ಇನಾಕ್ಯುಲೇಷನ್ನಿನಿಂದ ಅಪಾಯವೇನೂ ಆಗಿಲ್ಲವೆಂದೂ, ಸರ್ಕಾರದವರೇ ಅನೇಕ ನಿಪುಣರ ಸಲಹೆಯಿಂದ ಚಳುವಳಿಯನ್ನು ಕೈಗೊಂಡಿದ್ದಾರೆಂದೂ, ಅದರಿಂದ ವೃಥಾ ವಾದ ಮಾಡುವುದರಿಂದ ಉಪಯೋಗವಿಲ್ಲವೆಂದೂ ಅಭಿಪ್ರಾಯಪಟ್ಟರು. ನಿರ್ಣಯವು ತಿರಸ್ಕೃತವಾಯಿತು.

ಸಾಂಕ್ರಾಮಿಕ ರೋಗಗಳ ಮತ್ತು ಕ್ಷಯರೋಗದ ಆಸ್ಪತ್ರೆಗಳಲ್ಲಿ ಬಡವರಿಗೆ ಉಚಿತ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸರ್ಕಾರವನ್ನು ಪ್ರಾರ್ಥಿಸುವ ಶ್ರೀ ನಾರಾಯಣರಾಯರ ಮತ್ತೊಂದು ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಗರದ ಶಾಲೆಗಳಲ್ಲಿ ಒತ್ತಡವನ್ನು ತಪ್ಪಿಸಲು ಹೆಚ್ಚು ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೆಂದೂ ಮತ್ತು ಸಾಕಾದಷ್ಟು ಉಪಾಧ್ಯಾಯರನ್ನು ನೇಮಿಸಬೇಕೆಂದೂ, ನಗರದ ವಿವಿಧ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ಈಗಿನ ಸೀಟುಗಳ ಪ್ರಮಾಣವನ್ನು ಹೆಚ್ಚಿಸಬೇಕೆಂದೂ ಸರ್ಕಾರವನ್ನು ಕೋರುವ ಶ್ರೀ ಬಿ. ಜಿ. ದಾಸರ ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದುವು.

ಸಭೆಯು ೫ನೇ ತಾರೀಕಿಗೆ ಮುಂದುವರಿಯಿತು.

ನೆಹರೂರವರ ಜೀವನದ ಧ್ಯೇಯ

ದೇಶದಲ್ಲಿ ಪ್ರತಿಯೊಬ್ಬನಿಗೂ ಸಾಕಾದಷ್ಟು ಆಹಾರ, ಬಟ್ಟೆ, ವಸತಿ, ಕುಡಿಯುವ ನೀರು, ಸ್ವಾಸ್ಥ್ಯ, ವಿದ್ಯೆ ಮತ್ತು ಉದ್ಯೋಗಗಳ ಸೌಕರ್ಯಗಳನ್ನು ಕಲ್ಪಿಸುವವರೆಗೂ ತಾವು ವಿರಮಿಸುವುದಿಲ್ಲವೆಂದು ಪ್ರಧಾನಿ ನೆಹರೂರವರು ಅಸ್ಸಾಮಿನ ದಿಬ್ರುಗಢದಲ್ಲಿ ಭಾಷಣ ಮಾಡುತ್ತಾ ತಿಳಿಸಿರುವರು.

ಅಕ್ಕಿ ಗಿರಣಿ ವಾಸನೆಯಿಂದ ತೊಂದರೆ

ಸರಸ್ವತಿಪುರದ ಪ್ರಾಥಮಿಕ ಶಾಲಾ ಮಗ್ಗುಲಲ್ಲಿರುವ ಅಕ್ಕಿ ಗಿರಣಿಯೊಂದರಲ್ಲಿ ದಿನವೂ ಬೆಳಗ್ಗೆಯಿಂದ ಸಂಜೆವರೆಗೆ ಕುದಿಸಲು ಅಕ್ಕಿ ತಯಾರು ಮಾಡುವುದಕ್ಕಾಗಿ ಭತ್ತವನ್ನು ಬೇಯಿಸಲಾಗುತ್ತಿದೆ. ಇದರಿಂದ ಗಾಳಿಯು ಕೆಟ್ಟು, ಎಲ್ಲರ ಮನೆಗಳಿಗೂ ವಾಸನೆ ಹರಡಿ ಆರೋಗ್ಯಕ್ಕೆ ಕೆಡುಕುಂಟಾಗುತ್ತಿದೆ. ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ಎಷ್ಟೋ ಬಾರಿ ಅರಿಕೆ ಮಾಡಿಕೊಂಡರೂ ಪ್ರಯೋಜನವಿಲ್ಲವಾಗಿದೆ. ಈಗಲಾದರೂ ಪೌರಸಭೆಯವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅಲ್ಲಿನ ನಿವಾಸಿಗಳೊಬ್ಬರು ಕೋರಿರುತ್ತಾರೆ.

ಶಾರದಾ ವಿಲಾಸ ಲಾ ಕಾಲೇಜ್ ತರಗತಿ ಕಾಲ

ಮೈಸೂರಿನ ಶಾರದಾ ವಿಲಾಸ ಲಾ ಕಾಲೇಜಿನಲ್ಲಿ ತರಗತಿಗಳು ಸಾಯಂಕಾಲ ೫-೩೦ ರಿಂದ ೭ ಗಂಟೆಯವರೆಗೆ ನಡೆಯುತ್ತವೆ. ಸಂಜೆ ವೇಳೆಯಲ್ಲಿ ತರಗತಿಗಳನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಸಾಮಾನ್ಯವಾಗಿ ಸಂಜೆ ಹೊತ್ತು ಕ್ರೀಡೆ ಮುಂತಾದ ಮನರಂಜನ ಕಾರ್ಯಗಳಲ್ಲಿ ಕಳೆಯಬಹುದಾಗಿರುವುದರಿಂದ, ತರಗತಿಯಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಬೆಳಿಗ್ಗೆ ಹೊತ್ತು ತರಗತಿಗಳನ್ನು ನಡೆಸಬೇಕು. ವಿದ್ಯಾರ್ಥಿಗಳ ಬಹುಮತದ ಸಮ್ಮತಿಯಿದೆ. ಬೆಂಗಳೂರಿನ ಲಾ ಕಾಲೇಜಿನಲ್ಲಿಯೂ ಸಹ ತರಗತಿಗಳು ಬೆಳಗ್ಗೆ ಹೊತ್ತು ನಡೆಯುತ್ತಿವೆ. ಈ ತೊಂದರೆಯನ್ನು ಗಮನಿಸಿ ಕಾಲೇಜಿನ ಅಧಿಕಾರವರ್ಗದವರು ಮತ್ತು ವಿಶ್ವವಿದ್ಯಾಲಯದವರು ತರಗತಿಗಳು ಬೆಳಗ್ಗೆ ಹೊತ್ತು ನಡೆಯುವಂತೆ ಏರ್ಪಡಿಸುವರೆಂದು ನಂಬಿರುತ್ತೇವೆ.

— ಲಾ ಕಾಲೇಜಿನ ವಿದ್ಯಾರ್ಥಿಗಳು

ವಿವಿಧ ಅಪರಾಧಗಳಿಗೆ ಶಿಕ್ಷೆಗಳು

ಮೈಸೂರು ೩

ನ್ಯೂಯಾರ್ಕ್ ಹತ್ತಿ ದರದ ಜೂಜಾಟಕ್ಕಾಗಿ ಶಿವ ಮತ್ತು ಗುಳ್ಳ ಎಂಬಿಬ್ಬರಿಗೆ ತಲಾ ೧೦ ರೂ., ದನಗಳನ್ನು ಬೀದಿಯಲ್ಲಿ ಬಿಟ್ಟು ಸಂಚಾರಕ್ಕೆ ಅಡಚಣೆಯುಂಟುಮಾಡಿದುದಕ್ಕಾಗಿ ಅಜರ್ ಬಾದಿನ ಲಕ್ಕಯ್ಯ ಮತ್ತು ಕೃಷ್ಣಪ್ಪ ಎಂಬುವರಿಗೆ ತಲಾ ೫ ರೂ. ಮತ್ತು ಸಂತೇಪೇಟೆ ನಾರಾಯಣಾಚಾರ್ಯರ ಹೋಟೇಲಿನಲ್ಲಿ ಅನೀತಿ ವ್ಯಾಪಾರಕ್ಕಾಗಿ ಕರಿಯ ರಾಜಮ್ಮ ಎಂಬುವಳಿಗೆ ೩೦ ರೂ. ದಂಡವನ್ನು ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರು ವಿಧಿಸಿದರು.

ನಾಳೆ ಮೈಸೂರಿಗೆ ಭಾರತದ ನೌಕಾಧಿಕಾರಿಯ ಭೇಟಿ

ಭಾರತದ ನೌಕಾಧಿಕಾರಿಗಳಾದ ವೈಸ್ ಅಡ್ಮಿರಲ್ ಎಸ್. ಹೆಚ್. ಕಾರ್ಲಿಲ್‌ರವರು ನಾಳೆ ಮೈಸೂರಿಗೆ ಭೇಟಿ ಕೊಟ್ಟು ೫ನೇ ತಾರೀಕು ಬೆಂಗಳೂರಿಗೆ ಹಿಂದಿರುಗುವರು.

ಬಿಂದಿಗೆ ಕಳುವು

ರಾಜಧಾನಿಯ ಹೊಸ ಬಂಡೀಕೇರಿಯಲ್ಲಿ ಒಂದು ಕಡೆ ನಲ್ಲಿ ಬಳಿ ಇಡಲಾಗಿದ್ದ ಶ್ರೀ ಜವರಯ್ಯ ಎಂಬುವರ ಸುಮಾರು ೧೫ ರೂ. ಬೆಲೆ ಬಾಳುವ ಬಿಂದಿಗೆಯ ಅಪಹಾರ ಸಂಬಂಧದಲ್ಲಿ ಮೂವಮ್ಮ ಎಂಬಾಕೆಯ ಮೇಲೆ ಅನುಮಾನದಿಂದ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ.

ಪ್ರಾರಂಭ ಭಾಷಣ

ರಾಜಧಾನಿಯ ವೈಸ್‌ರಾಯ್ ರಸ್ತೆಯಲ್ಲಿರುವ ಶಾರದಾ ನಿಕೇತನ ವಿದ್ಯಾರ್ಥಿ ನಿಲಯದ ಶಾರದಾ ಯೂನಿಯನ್ನಿನ ಪ್ರಸಕ್ತ ಸಾಲಿನ ಪ್ರಾರಂಭ ಭಾಷಣವನ್ನು ನಾಳೆ ಸಂಜೆ ೬॥ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರು ಮಾಡುವರು. ಸಂಘದ ಅಧ್ಯಕ್ಷರಾದ ಶ್ರೀ ಸಿ. ಕೆ. ರಾಮಣ್ಣನವರು ಅಧ್ಯಕ್ಷತೆ ವಹಿಸುವರು.

ಹಿಂದಿ ಶಿಕ್ಷಣ ತರಗತಿಗಳು

ರಾಜಧಾನಿಯ ಹಿಂದಿ ಪ್ರಚಾರ ಸಭೆಯವರು ಇದೇ ೫ನೇ ತಾರೀಕು ಸೋಮವಾರದಿಂದ ನಿತ್ಯವೂ ಸಂಜೆ ೫॥ ರಿಂದ ೭ ಗಂಟೆವರೆಗೆ ದಕ್ಷಿಣ ಭಾರತ ಸಭೆಯ ಪ್ರಾಥಮಿಕ, ಮಾಧ್ಯಮ, ರಾಷ್ಟ್ರಭಾಷಾ, ಪ್ರವೇಶಿಕಾ, ವಿಶಾರದ ಮತ್ತು ಪ್ರವೀಣ ಪರೀಕ್ಷೆಗಳಿಗೆ ವಿವಿಧ ಕೇಂದ್ರಗಳಲ್ಲಿ ತರಗತಿಗಳನ್ನು ಏರ್ಪಡಿಸಿರುವರು. ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕೇಂದ್ರ ವಿದ್ಯಾಲಯ, ನಂಜರಾಜ ಅಗ್ರಹಾರದ ಅಮೃತವಲ್ಲಿ ಸ್ಟೋರ್ಸ್, ವಾಣಿವಿಲಾಸ ಮೊಹಲ್ಲಾದ ಬಾಲಿಕೆಯರ ಮಾಧ್ಯಮಿಕ ಶಾಲೆ, ಸರಸ್ವತಿಪುರದ ಗಾಯತ್ರಿ ಸಮಾಜ ಮತ್ತು ಚಾಮುಂಡಿಪುರದ ಸಮೀರ ಬೋಧಕ ವಿದ್ಯಾಲಯಗಳಲ್ಲಿ ಕೇಂದ್ರಗಳನ್ನು ತೆರೆಯಲಾಗಿದೆ. ಸಾಕಾದಷ್ಟು ವಿದ್ಯಾರ್ಥಿಗಳು ಬಂದರೆ ಬೆಳಗ್ಗೆಯೂ ಪಾಠಗಳನ್ನು ನಡೆಸಲಾಗುವುದು.

ಮೈಸೂರು-ನಂಜನಗೂಡು ರೈಲಿಗೆ ಹೆಚ್ಚು ಗಾಡಿಗಳು ಅವಶ್ಯಕ

ಮೈಸೂರು-ನಂಜನಗೂಡುಗಳ ನಡುವೆ ಓಡಾಡುವ ರೈಲುಗಳಲ್ಲಿ ಗಾಡಿಗಳ ಸಂಖ್ಯೆಯು ಬಹಳ ಕಡಿಮೆಯಾಗಿರುವುದರಿಂದ ಜನರಿಗೆ ತುಂಬಾ ಅನಾನುಕೂಲವಾಗಿರುವುದೆಂಬುದಾಗಿ ಅನೇಕ ಬಾರಿ ಅಧಿಕಾರಿಗಳಿಗೆ ಮನವಿ ಮಾಡಿಕೊಳ್ಳಲಾಗಿದೆಯೆಂದೂ, ನಂಜನಗೂಡಿನಿಂದ ಬೆಳಗ್ಗೆ [illegible]ಕ್ಕೆ ಹೊರಡುವ ರೈಲಿಗೂ ಗಾಡಿಗಳನ್ನೂ, ಮೈಸೂರಿನಿಂದ ಸಂಜೆ ೫.೩೦ ಕ್ಕೆ ಹೊರಡುವ ರೈಲಿಗೆ ೪ ಗಾಡಿಗಳನ್ನೂ ಹಾಕಿ ಅನುಕೂಲ ಪಡಿಸಬೇಕೆಂದೂ ಅಲ್ಲಿನ ನಿವಾಸಿಯೊಬ್ಬರು ತಿಳಿಸಿರುತ್ತಾರೆ.

ಪುರಸಭಾ ಸದಸ್ಯರ ಅನರ್ಹತೆ ಬಗ್ಗೆ ಅಧ್ಯಕ್ಷರ ಅರ್ಜಿಗೆ ತಡೆ

ಅಗರ ಮಾಂಬಳ್ಳಿ ೨

ಅಗರ-ಮಾಂಬಳ್ಳಿ ಪುರಸಭಾಧ್ಯಕ್ಷರು, ಶ್ರೀ ಎ. ರಾಮಚಂದ್ರಯ್ಯನವರು ಸದಸ್ಯರಾಗಲು ಅನರ್ಹರೆಂಬ ಬಗ್ಗೆ ೧೬-೫-೫೫ರಲ್ಲಿ ಹೊರಡಿಸಿದ ಆಜ್ಞೆಯನ್ನು ಮೈಸೂರು ಸರ್ಕಾರದವರು ರದ್ದು ಮಾಡಿರುವರೆಂದು ಇಂದು ನಡೆದ ಪುರಸಭೆಯ ವಿಶೇಷಾಧಿವೇಶನದಲ್ಲಿ ಅಧ್ಯಕ್ಷ ಶ್ರೀ ಬಿ. ಚಿಕ್ಕಣ್ಣಸ್ವಾಮಿಯವರು ತಿಳಿಸಿದರು. ಶ್ರೀ ಎ. ವಿ. ರಾಮಚಂದ್ರಯ್ಯನವರೂ ಸಹ ಸಭೆಯಲ್ಲಿ ಹಾಜರಿದ್ದರು. ನಗರಕ್ಕೆ ಸಂಬಂಧಿಸಿದಂತೆ ೨ನೇ ಪಂಚವಾರ್ಷಿಕ ಯೋಜನೆಗೆ ತಕ್ಕ ಕಾರ್ಯಕ್ರಮವನ್ನು ಗೊತ್ತುಪಡಿಸಲು ಪುರ ಪ್ರಮುಖರ ಸಭೆಯೊಂದನ್ನು ಭಾನುವಾರ ಕರೆದು ಅಭಿಪ್ರಾಯ ಸಂಗ್ರಹಿಸಿ ಅನಂತರ ನಿರ್ಧರಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಈ ಪುರಸಭೆಗಾಗಿ ಮಂಜೂರಾಗಿರುವ ೨೫ ಸಾವಿರ ರೂ. ಗಳನ್ನು ಪಡೆಯಬಹುದೆಂದೂ, ನಗರಭವನವನ್ನು ಕಟ್ಟಿಸಲು ತಕ್ಕ ಕಾರ್ಯಕ್ರಮ ಗೊತ್ತುಪಡಿಸಬಹುದೆಂದೂ ಸಹ ಸಭೆಯು ಅಭಿಪ್ರಾಯಪಟ್ಟಿತು.

ಕಳೆದ ಬುಧವಾರ ಟಿ. ನರಸೀಪುರದಲ್ಲಿ [illegible] ಟೆಲಿಫೋನನ್ನು ಪ್ರಾರಂಭಗೊಳಿಸಲಾಯಿತು.

SREE GANESH
TALKIES
NOW RUNNING
Upto 5-9-1955
BLACK SHIELD OF FALWORTH
IN CINEMASCOPE
FROM 6—9—55
ALWAYS A BRIDE

ಬಡವನಾಗಲೀ, ಬಲ್ಲಿದನಾಗಲೀ
ಗುರಿ ತಪ್ಪಬಹುದು!
ಸೂಕ್ತ ಸಮಯದಲ್ಲಿ ಉಪಯೋಗಿಸಬಹುದು
ಆದರೆ
ಡಾ॥ ರಾಣಾರವರ
ಒಂದು ವಾರದ ಅವಧಿಯ
ಹೊಸ ಮತ್ತು ಅದ್ಭುತ ಚಿಕಿತ್ಸೆಯು
ನಿಮ್ಮ ನಿರಾಶೆಗಳೆಲ್ಲವನ್ನೂ ದೂರಮಾಡುವುದಾಗಿ
ಸಂಪೂರ್ಣಸಲು ತಪ್ಪುವುದಿಲ್ಲ
ಅದ್ಭುತ ಹೊಸ ತಾರುಣ್ಯ, ಅದ್ಭುತ ಶಕ್ತಿ ಮತ್ತು ಅನುಪಮ ಆರೋಗ್ಯ ಹೊಂದಲು ಈ ಪ್ರಖ್ಯಾತ ಲೈಂಗಿಕ ಪ್ರವೀಣರನ್ನು ಭೇಟಿ ಮಾಡಿರಿ
ಡಾ॥ ಎ. ವಿ. ರಾಣಾ
ಅವರ ೪೦ ವರ್ಷಗಳ ಚಿಕಿತ್ಸೆ ಅನುಭವವು ನಿಮ್ಮ ಕಾಲ ಆರೋಗ್ಯ ಮತ್ತು ಹಣವನ್ನು ಉಳಿತಾಯ ಮಾಡಿಕೊಡುತ್ತದೆ ಮತ್ತು ನಿಮ್ಮನ್ನು ದಾಕ್ತರು, ವೈದ್ಯರು ಮತ್ತು ಹಕೀಮರ ಕಾಟದಿಂದ ತಪ್ಪಿಸುತ್ತದೆ
ಭೇಟಿಯ ಕಾಲ ಬೆಳಗ್ಗೆ 8 ರಿಂದ 12
ಸಂಜೆ 4 ರಿಂದ 8
ರಾಣಾ ಮೆಡಿಕಲ್ ಹಾಲ್,
ಎಲ್. ನಂ. 1-745 ಅಶೋಕಾ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ ದ್ವಾರದಿಂದ 3ನೇ ಕಟ್ಟಡ)

Edited, Printed and Published by A R Nagarajan at Sadhvi Press, D Subbiah Road, Mysore

ಪ್ರಭುದೇವಾ ಥಿಯೇಟರ್
(ಕನ್ನಡ ಟಾಕೀಸ್)
2-9-55 ರಿಂದ 2ನೇ ವಾರ ★ ಕನ್ಯಾಶುಲ್ಕಂ ★
ಮುಂದಿನ ಬದಲಾವಣೆ ವಿಜಯಾರವರ ತಮಿಳು ಚಿತ್ರ ● ಮಿಸ್ಸಿಯಮ್ಮ ●
ಪಾತ್ರ – ಜೆಮಿನಿ ಗಣೇಶ್, ಸಾವಿತ್ರಿ, ತಂಗವೇಲು, ಸಾರಂಗಪಾಣಿ, ಜಮುನ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಆಫೀಸ ಪತ್ರಿಕೆ ೬ ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೪] SADHVI : SUNDAY 4-9-1955 ಮೈಸೂರು ಭಾನುವಾರ ೪-೯-೧೯೫೫ [ಸಂಚಿಕೆ : ३४

ಗಾಜಾದಲ್ಲಿ ಪುನಃ ಇಸ್ರೇಲ್-ಈಜಿಪ್ಟ್ ಫಿರಂಗಿ ಕದನ

ನಗರದಲ್ಲಿ ಕಳ್ಳತನಗಳು

ಮೈಸೂರು ೪

ನಂಜನಗೂಡಿನ ವರ್ತಕರಾದ ಸೈಯದ್ ಹಾ...ಂ ಎಂಬುವರು ಮೊನ್ನೆ ರಾಜಧಾನಿಯ ದೇವ...ಜಾ ಮಾರ್ಕೆಟ್ಟಿನ ಮುಂಭಾಗದ ಸ್ಟ್ಯಾಂಡಿನಲ್ಲಿ ...ಟ್ಟಿದ್ದ. ಸುಮಾರು ೬೦೦ ರೂ. ಬೆಲೆ ಬಾಳುವ ...ದಿ ಸೈಕಲೊಂದನ್ನು ಯಾರೋ ಅಪಹರಿಸಿರು...ರೆಂದು ಪೋಲೀಸರಿಗೆ ದೂರು ಕೊಡಲಾಗಿದೆ

ನಗರದ ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ...ಷ್ಣಸ್ವಾಮಿ ಅಯ್ಯಂಗಾರ್ಯರ ಮನೆಯಲ್ಲಿ ಮೊ... ಆರ್.ಕೆ ದಾಸ್, ದೊರೆಸ್ವಾಮಿ ಮತ್ತು ಅಂ...ಡಿ ಕ್ರಿಜ್ ಎಂಬುವರು ಸುಮಾರು ೧೩೦ ರೂ ...ಲೆ ಬಾಳುವ ಎರಡು ಗಡಿಯಾರಗಳನ್ನು ಕದ್ದು ...ಗಿ ಮೇಲ್ಕಂಡ ಮೂವರನ್ನು ವಶಕ್ಕೆ ತೆಗೆದು ಮಾ...ರಣೆ ನಡೆಸಲಾಗುತ್ತಿದೆ

ಅನೆಸಾರೋಟು ರಸ್ತೆಯಲ್ಲಿ ಪುರುಷೋತ್ತಮ, ...ಮಯ್ಯ ಮತ್ತು ಚಿಕ್ಕಸ್ವಾಮಿಗೌಡ ಎಂಬುವ... ಮೊನ್ನೆ ಸಟ್ಟಾ ಜೂಜಾಡುತ್ತಿದ್ದುದನ್ನು ಪತ್ತೆ... ಅವರಿಂದ ೧೫ ರೂ ಅನ್ನು ವಶಪಡಿಸಿಕೊ...ಲಾಗಿದೆ

ಜಿಲ್ಲೆಗಳಿಗೆ ಗೃಹ ಮಂತ್ರಿಗಳು

ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಈ ತಿಂ...ಳ ಮೂರನೇ ವಾರದಲ್ಲಿ ಹಾಸನದ ಜಿಲ್ಲಾ... ನಗರದಲ್ಲಿ ಸೇರುವ ಕೇಂದ್ರ ರೇಷ್ಮೆ ಸಮಿತಿ...ಯಲ್ಲಿ ಭಾಗವಹಿಸುವರು

ಮುದ್ರಣಾಲಯದ ಕಾರ್ಮಿಕರಿಂದ ಮುಷ್ಕರಕ್ಕೆ ಬೆಂಬಲ

ರಾಜಧಾನಿಯ ಪ್ರೆಸ್ಸಿ ಮುದ್ರಣಾಲಯದ ಕೆ...ಲಸಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸಿ...ಕೊಳ್ಳಲು ಮುಷ್ಕರ ನಡೆಸಬೇಕೇ ಅಥವಾ ಬೇ...ಡವೇ ಎಂಬ ವಿಷಯವಾಗಿ ಮೊನ್ನೆ ರಹಸ್ಯ ಮತ...ದಾನ ಮಾಡಿದರು ಹೋಟೆಲು ಕಾರ್ಮಿಕರ ಸಂ...ಘದ ಕಾರ್ಯದರ್ಶಿ ಶ್ರೀ ಎಸ್ ಆರ್ ಶಾ...ಸ್ತ್ರಿಯವರು ಮತದಾನದ ಅಧಿಕಾರಿಗಳಾಗಿದ್ದರು. ... ಮಂದಿ ಕಾರ್ಮಿಕರು ಮುಷ್ಕರ ನಡೆಸಬೇಕೆಂ...ದೂ, ಒಬ್ಬರು ಅದನ್ನು ವಿರೋಧಿಸಿಯೂ ಅಭಿ...ಪ್ರಾಯ ಸೂಚಿಸಿದರು. ಶ್ರೀ ಬಿ. ಬಾಲಯ್ಯನವರ ಅಧ್ಯಕ್ಷತೆ ವಹಿಸಿದ್ದರು

ರಾಜಧನದ ಮೋತಾಕ್ಕೆ ನಿಜಾಮರ ಅಸಮ್ಮತಿ

ತಮಗೆ ಬರುವ ರಾಜಧನವನ್ನು ಕಡಿಮೆಯಾಗಿಯೇ ...ಟ್ಟುಕೊಳ್ಳುವಂತೆ ನೆಹರೂರವರು ...ಜ ಅರಸರುಗಳಿಗೆ ಮಾಡಿರುವ ಮನವಿಯಂತೆ ...ನ್ನು ಧನವನ್ನು ಕಡಿಮೆ ಮಾಡಿಕೊಳ್ಳಲು ಹೈದ...ರಾಬಾದಿನ ನಿಜಾಮರು ಸಮ್ಮತಿಸಿಲ್ಲವೆಂದು ತಿಳಿ...ದುಬಂದಿದೆ. ಸರ್ಕಾರದ ಉಪಯೋಗಕ್ಕಾಗಿ ತ... ಭವನವಾವುದನ್ನೂ ಸಹ ಕೊಡಲು ನಿಜಾ...ಮು ಒಪ್ಪಿಲ್ಲ ತಮ್ಮ ಸ್ವಂತ ಜಮೀನುಗಳನ್ನು ...ರ್ಕಾರಕ್ಕೆ ಕಳೆದ ವರ್ಷ ನಿಜಾಮರು ಒಪ್ಪಿಸಿ, ...ಮೂಲಕ ೬೫ ಲಕ್ಷ ರೂ. ಧನವನ್ನು ಅವರು ...ರ್ಕಾರಕ್ಕೆ ಬಿಟ್ಟುಕೊಟ್ಟಿರುವರೆಂದೂ ಹೇಳಲಾ...

...ಕಾರಕ್ಕೆ ಈ ವರ್ಷ ೭೦೬ ಕೋಟಿ ರೂ ...ಯಷ್ಟು ವಿದೇಶಗಳಿಂದ ಬರಲಿರುವುದೆಂದು ...ದು ಬಂದಿದೆ

ಗಾಜಾ ಪ್ರದೇಶದಲ್ಲಿ ಪುನಃ ಫಿರಂಗಿ ಹೋರಾಟ

ಶಾಂತಿ ಸ್ಥಾಪನೆ ಪ್ರಯತ್ನ ವಿಫಲ

ಗಾಜಾ ಗಡಿ ಪ್ರದೇಶದಲ್ಲಿ ನೆನ್ನೆ ಈಜಿಪ್ಟಿನ ಫಿರಂಗಿಗಳು ಇಸ್ರೇಲಿನ ಎರಡು ಪಟ್ಟಣಗಳ ಮೇಲೆ ಗುಂಡುಗಳನ್ನು ಹಾರಿಸಿದುವೆಂದೂ, ... ಸಿಡಿಸಿದುವೆಂದೂ ವರದಿಯಾಗಿದೆ ... ದಿಂದ ... ನಡೆದ ... ಕ್ಷಣಗಳು ಶಾಂತಿಯ ... ದ ... ಭಂಗಗೊಂಡಿರುವುವೆಂದು ... ಗಿದೆ ... ಮೇಲೆ ಇಸ್ರೇಲ್ ... ಸೇನ ... ನಡೆಸಿರುತ್ತದೆ ಇಸ್ರೇಲಿನ ... ಳ್ಳಿಯನ್ನು ಈಜಿಪ್ಟಿನ ... ಗಿಯೂ ಮತ್ತೊಂದು ಕಡೆ ... ಮಾಡಿದುದಾಗಿಯೂ ಹೇಳಲಾಗಿದೆ ಕಳೆದ ಗು...ರುವಾರದ ವರೆಗೆ ಎರಡು ಕಡೆಯವರ ... ಮಂದಿಗೆ ಸಾವುನೋವುಗಳಾಗಿವೆ

ಭಾರತ ಸರ್ಕಾರದ ಬಾಂಡುಗಳಿಗೆ ನಿಜಾಮರಿಂದ ೩೦ ಕೋಟಿ ರೂ.

ಹೈದರಾಬಾದು ನಿಜಾಮರು ಭಾರತ ಸರ್ಕಾರದ ೩೦ ಕೋಟಿ ರೂ ಬಾಂಡುಗಳನ್ನು ಕೊಂಡು ಹಣವನ್ನು ಕೊಟ್ಟಿರುವರೆಂದೂ, ಹೈದರಾಬಾದು ಸರ್ಕಾರಕ್ಕೆ ೧೫ ಕೋಟಿ ರೂ ಸಾಲವಿತ್ತಿರುವರೆಂದೂ ಆ ಸಂಸ್ಥಾನದ ಮುಖ್ಯ ಮಂತ್ರಿ ಬಿ ರಾಮಕೃಷ್ಣರಾಯರು ತಿಳಿಸಿರುವರು ತುಂಗಭದ್ರ ಯೋಜನೆಯ ನಿರ್ಮಾಣಕ್ಕೆ ಅವರು ಪ್ರತಿ ವರ್ಷವೂ ತಮಗೆ ರಾಜಧನವಾಗಿ ಬರುವ ೫೦ ಲಕ್ಷ ರೂ ಗಳನ್ನು ಎತ್ತಿಯಿಟ್ಟಿದ್ದು ಸಾಲವಾಗಿ ಕೊಡುತ್ತಿರುವರೆಂದೂ, ಆ ಯೋಜನೆಯು ಮುಗಿದನಂತರ ನಾಗಾರ್ಜುನಕೊಂಡ ಯೋಜನೆಗೆ ಅದನ್ನು ಕೊಡುವರೆಂದೂ ರಾಮಕೃಷ್ಣರಾಯರು ಹೇಳಿರುತ್ತಾರೆ

ದೇಹದ ರಕ್ತವಿತ್ತು ರಾಷ್ಟ್ರೀಯ ಪರಿಹಾರ ನಿಧಿಗೆ ದಾನ

ನಾಗಪುರದ ಸರ್ಕಾರಿ ಕಛೇರಿಯ ಗುಮಾಸ್ತ ಡಬ್ಲ್ಯೂ ವಿ ಅಗೋನೆಕರ್‌ರವರು ನೆಹರೂರವರ ರಾಷ್ಟ್ರೀಯ ಪರಿಹಾರ ನಿಧಿಗೆ ೧೫ ರೂ ಗಳನ್ನು ತಮ್ಮ ದೇಹದ ರಕ್ತದಾನದ ಮೂಲಕ ಕೊಟ್ಟಿರುವರೆಂದು ವರದಿಯಾಗಿದೆ ದೇಶದ ನಾನಾ ಭಾಗಗಳಲ್ಲಿ ಪ್ರಕೃತಿ ವಿಕೋಪದಿಂದ ಆಗಿರುವ ಅನಾಹುತಗಳನ್ನು ಕೇಳಿ ಅವರು ಮರುಕಗೊಂಡು, ಸ್ಥಳೀಯ ಆಸ್ಪತ್ರೆಗೆ ಹೋಗಿ ಅಲ್ಲಿ ೧೫ ರೂ. ಗಳ ಬದಲಿಗಾಗಿ ತಮ್ಮ ರಕ್ತವನ್ನು ಕೊಟ್ಟು, ಹಣವನ್ನು ಪ್ರಧಾನಿಯವರ ನಿಧಿಗೆ ಮನಿಯಾರ್ಡರ್ ಮಾಡಿದುದಾಗಿ ಹೇಳಲಾಗಿದೆ

ಬರ್ಮಾ ಸರ್ಕಾರದ ವಿಮಾನ ಮುರಿದು ೯ ಮಂದಿ ಮರಣ

ಬರ್ಮಾ ಸರ್ಕಾರದ ಸರ್ವಿಸ್ ವಿಮಾನವೊಂದು ರಂಗೂನಿಗೆ ೩೦೦ ಮೈಲಿ ದೂರದಲ್ಲಿರುವ ಮೈಕ್‌ಟಿಲದಲ್ಲಿ ಉರುಳಿಬಿದ್ದು, ೬ ಮಂದಿ ಪ್ರಯಾಣಿಕರೂ ೩ ಜನ ಚಾಲಕರೂ ಮೃತಪಟ್ಟರೆಂದು ವರದಿಯಾಗಿದೆ

ಜಂಬೂಸವಾರಿಯು ಅಶೋಕಾ ರಸ್ತೆಯಿಂದ ವಾಪಸಾಗಬೇಕು

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೪

ದಸರಾ ಜಂಬೂಸವಾರಿಯು ಸಯ್ಯಾಜಿರಾವ ರಸ್ತೆ ಮೂಲಕ ಬನ್ನಿಮಂಟಪಕ್ಕೆ ತೆರಳಿ ವಾಪಸು ಬರುವಾಗ, ಅಶೋಕಾ ರಸ್ತೆ ಮೂಲಕ ಬರುವಂತೆ ಮಾಡಬೇಕೆಂದು ಮೊನ್ನೆ ಪೌರಸಭೆಯ ಅಧಿವೇಶನದಲ್ಲಿ ಶ್ರೀ ಚೌಡಯ್ಯನವರು ಮಂಡಿಸಿದ್ದು, ಶ್ರೀ ಹೆಚ್. ಎಂ ಮುದ್ದಯ್ಯನವರಿಂದ ಅನುಮೋದಿಸಲ್ಪಟ್ಟ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಜನರ ಗುಂಪು ನುಗ್ಗಿ ಪೌರಸಭಾಧಿವೇಶನಕ್ಕೆ ಅಡ್ಡಿ

ಕಾಕಿನಾಡದ ಪೌರಸಭೆಯ ಅಧಿವೇಶನವು ಕಳೆದ ಗುರುವಾರ ನಡೆದಾಗ ಒಬ್ಬ ಸದಸ್ಯನನ್ನು ಹೊರಕ್ಕೆ ಕಳುಹಲು ಅಧ್ಯಕ್ಷರು ಪೋಲೀಸರ ನೆರವನ್ನು ಕರೆದಾಗ, ಒಪ್ರೇಶನ್ ಜನರ ಗುಂಪೊಂದು ಸಭಾಸ್ಥಳಕ್ಕೆ ನುಗ್ಗಿ, ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿದುದಾಗಿ ವರದಿಯಾಗಿದೆ ಪೋಲೀಸರು ಪರಿಸ್ಥಿತಿಯನ್ನು ಹತೋಟಿಗೆ ತಂದರು ತಮ್ಮ ಪಕ್ಷದವರು ಕೇಳಿದ್ದ ಪ್ರಶ್ನೆಗಳನ್ನು ಅಧ್ಯಕ್ಷರು, ಅನುಚಿತವಾದ ಕಡೆಯಲ್ಲಿಟ್ಟರೂ, ಮೊದಲು ತೆಗೆದುಕೊಂಡಾಗ ವಾಗ್ವಾದ ಉಂಟಾಯಿತು

ತೆರಿಗೆಯನ್ನು ಹೆಚ್ಚಿಸಲು ರಾಜ್ಯಾಂಗದ ತಿದ್ದುಪಡಿ

ವೃತ್ತಿ, ವ್ಯಾಪಾರ ಸೌಕರ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳ ಮೇಲೆ ವಿಧಿಸುವ ತೆರಿಗೆಗಳ ಪರಮಾವಧಿಯನ್ನು ಹೆಚ್ಚಿಸಲು ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ

ಉತ್ತರ ಆಫ್ರಿಕಕ್ಕೆ ಹೆಚ್ಚು ಫ್ರೆಂಚ್ ಸೈನ್ಯ

ಆಲ್ಜೀರಿಯದಲ್ಲಿ ದಂಗೆಕೋರರನ್ನು ಅಡಗಿಸಲು ಫ್ರೆಂಚರು ಇನ್ನೂ ೬,೦೦೦ ಸೈನಿಕರನ್ನು ಅಲ್ಲಿಗೆ ಕಳುಹಲಿದ್ದಾರೆ ಅದು ಒಟಾಲಿಯನ್ನುಗಳು ಈ ತಿಂಗಳು ೨೦ಕ್ಕೆ ಅಲ್ಲಿಗೆ ತೆರಳಲಿವೆ ಇದುವರೆಗೆ ೧,೨೦೦ ಮಂದಿ ದಂಗೆಕೋರರು ಮಡಿದಿರುತ್ತಾರೆ ೧ ಲಕ್ಷ ಫ್ರೆಂಚ್ ಸೈನಿಕರು ಅಲ್ಲಿ ಇರುವರು

ಪಾಕಿಸ್ತಾನದಿಂದ ಗೋವಾಕ್ಕೆ ೨೨ ಸಾವಿರ ಮೂಟೆ ಅಕ್ಕಿ

ಪೋರ್ಚುಗೀಸ್ ಅಧಿಕಾರಿಗಳು ಪಾಕಿಸ್ತಾನದೊಡನೆ ಒಪ್ಪಂದ ಮಾಡಿಕೊಂಡು ಗೋವಾಕ್ಕೆ ಅಲ್ಲಿಂದ ೨೨ ಸಾವಿರ ಮೂಟೆ ಅಕ್ಕಿಯನ್ನು ತರಿಸಿಕೊಳ್ಳುವರೆಂದು ವರದಿಯಾಗಿದೆ. ಈ ಸ್ವದೇಶ ಕಾರದ ಅಂಗವಾಗಿ ಈಗಾಗಲೇ ಗೋವಾಕ್ಕೆ ೧೦ ಸಾವಿರ ಮೂಟೆ ಅಕ್ಕಿ ಬಂದಿದೆ

ವಿಮಾನ ನಾಶದ ಬಗ್ಗೆ ರಾಷ್ಟ್ರೀಯ ಚೀಣೀಯರ ದಸ್ತಗಿರಿಗೆ ಆಜ್ಞೆ

ಇಂಡೋನೇಷ್ಯದ ಬಾಂಡುಂಗಿನಲ್ಲಿ ನಡೆದ ಏಷ್ಯಾ-ಆಫ್ರಿಕಾ ಸಮ್ಮೇಳನದಲ್ಲಿ ಕೆಲವು ಚೀಣಾ ಅಧಿಕಾರಿಗಳು ಭಾಗವಹಿಸಲು ಪ್ರಯಾಣ ಹೊರಟ ಭಾರತದ ಕಾಶ್ಮೀರ ಪ್ರಿನ್ಸೆಸ್ ವಿಮಾನವು ನಾಟುನಾ ಸಮುದ್ರದಲ್ಲಿ ಮುರಿದುಬಿದ್ದ ಸಂಬಂಧವಾಗಿ ಅದರ ನಾಶಕ್ಕೆ ಕಾರಣನಾದವನೆಂದು ಹೇಳಲಾದ ಚೌ ಮಿಂಗ್ ಎಂಬ ರಾಷ್ಟ್ರೀಯ ಚೀಣೀಯನನ್ನು ದಸ್ತಗಿರಿ ಮಾಡುವಂತೆ ಹಾಂಗ್ ಕಾಂಗ್ ಮ್ಯಾಜಿಸ್ಟ್ರೇಟರು ವಾರಂಟನ್ನು ಹೊರಡಿಸಿರುವರು

ಬಿ. ಸಿ. ಜಿ. ವ್ಯಾಕ್ಸಿನೇಷನ್ ಬಗ್ಗೆ ವೈದ್ಯರ ಬಾಯಿಗೆ ಬೀಗ

ಸರ್ಕಾರದ ಕ್ರಮಕ್ಕಾಗಿ ರಾಜಾಜಿಯವರ ಆಕ್ಷೇಪಣೆ

ಬಿ ಸಿ ಜಿ ವ್ಯಾಕ್ಸಿನೇಷನ್ನಿನಿಂದ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಕೇಂದ್ರ ಮತ್ತು ಪ್ರಾಂತ ಸರ್ಕಾರಗಳು ವೈದ್ಯರುಗಳನ್ನು ಹೆದರಿಸಿ ಅವರ ಬಾಯಿ ಕಟ್ಟಿರುವುವೆಂದು ರಾಜಾಜಿಯವರು ತಿಳಿಸಿರುತ್ತಾರೆ ಬಿ ಸಿ ಜಿ ಬಗ್ಗೆ ವೈದ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸದಂತೆ ಸರ್ಕಾರದವರು ನಿರ್ಬಂಧಪಡಿಸಿರುವರೆಂದೂ, ವೈದ್ಯರನ್ನು ಕೆಲಸದಿಂದ ತೆಗೆದುಹಾಕುವುದಾಗಿ ಎಚ್ಚರಿಕೆ ಕೊಡಲಾಗಿದೆಯೆಂದೂ ರಾಜಾಜಿಯವರು ಹೇಳುತ್ತಾರೆ ಇಂತಹ ಆಜ್ಞೆಯು ಅತಿ ಅನ್ಯಾಯವಾಗಿರುವುದೆಂದೂ, ಸ್ವಪ್ರತಿಷ್ಠೆಯಿಂದ ಪ್ರಾರಂಭಿಸಿದ ನೀತಿಯನ್ನು ಸರ್ಕಾರದವರು ಅನುಸರಿಸಬಾರದೆಂದೂ ಅವರು ಸೂಚಿಸಿರುವರು

ಪೋರ್ಚುಗೀಸ್ ಹಡಗುಗಳಿಗೆ ಭಾರತದ ರೇವು ಸೌಕರ್ಯದ ರದ್ದು

ಪೋರ್ಚುಗೀಸರ ಹಡಗುಗಳಿಗೆ ಭಾರತದ ಯಾವ ರೇವಿನಲ್ಲೂ ತಂಗುವುದೇ ಮುಂತಾದ ಸೌಕರ್ಯಗಳನ್ನು ಕೊಡಕೂಡದೆಂದು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಭಾರತದ ರೇವು ಕೆಲಸಗಾರರ ಸಂಘದವರು ಸರ್ಕಾರಕ್ಕೆ ಮನವಿ ಮಾಡಿ, ಗೋವಾದೊಡನೆ ವ್ಯಾಪಾರ ಮಾಡುವ ಎಲ್ಲಾ ವಿದೇಶೀ ಹಡಗುಗಳನ್ನು ಸರ್ಕಾರದವರು ಬಹಿಷ್ಕರಿಸಬೇಕೆಂದು ಕೋರಿದ್ದರು

ಸತ್ಯಾಗ್ರಹಿಗಳನ್ನು ದಂಡಿಸಿದ್ದ ಪೋರ್ಚುಗೀಸ್ ನೌಕರರ ಗಡೀಪಾರು

ಗೋವಾ ಸತ್ಯಾಗ್ರಹಿಗಳನ್ನು ಹಿಡಿದು ಬಡಿಯಲು ನಿರಾಕರಿಸಿದ ಮೂವರು ಪೋರ್ಚುಗೀಸ್ ಸಿಪಾಯಿಗಳನ್ನೂ, ಒಬ್ಬ ಅಧಿಕಾರಿಯನ್ನೂ ಪೋಲೀಸರನ್ನೂ ಗೋವಾ ಅಧಿಕಾರಿಗಳು ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನ್ನಿಗೆ ಗಡೀಪಾರು ಮಾಡಿರುವುದಾಗಿ ಗೊತ್ತಾಗಿದೆ. ಅದೇ ರೀತಿ ಮಾಡಿದ ಗೋವಾ ಪೋಲೀಸರನ್ನು ಅಧಿಕಾರಿಗಳು ಹೊಡೆದು, ಬಂಧಿಸಿರುವರು

ವಾ ರ ಭ ವಿ ಷ್ಯ

ತಾ| ೪-೯-೫೫ ರಿಂದ ೧೦-೯-೫೫ ರ ವರೆಗೆ

ಮೇಷ —ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳ ತೃಪ್ತಿಕರ ಪರಿಸ್ಥಿತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸಂಭವ.

ವೃಷಭ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಸ್ಥಿತಿ ಅತೃಪ್ತಿಕರ ಆತ್ಮರಿಂದ ವಂಚನೆ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಪ್ರಗತಿ

ಮಿಥುನ —ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಚೆನ್ನಾಗಿರುವುದು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ

ಕರ್ಕ —ಆರೋಗ್ಯ ಅಸಮರ್ಪಕ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಕಿರುಕುಳ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಸಿಂಹ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ಕುಟುಂಬದ ಅನಾರೋಗ್ಯ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ನೌಕರಿಯಲ್ಲಿ ಕಿರುಕುಳ

ಕನ್ಯಾ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಸ್ಥಿತಿ ಬಿಗಡಾಯಿಸುವುದು ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ಸಮಸ್ಯೆ

ತುಲಾ —ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರವಾಗಿರುವುದು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಶಂಸೆ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ವೃಶ್ಚಿಕ —ಆರೋಗ್ಯ ಚೆನ್ನಾಗಿರುವುದು ಆರ್ಥಿಕ ಪರಿಸ್ಥಿತಿ ಉತ್ತಮ ಕೈಗೊಂಡ ಕಾರ್ಯಗಳಲ್ಲಿ ಪ್ರಗತಿ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ಧನು —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಸ್ಥಿತಿ ತೃಪ್ತಿಕರವಾಗಿರುವುದು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಶುಭಕಾರ್ಯಗಳು ಜರುಗುವುವು

ಮಕರ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಮುಗ್ಗಟ್ಟು ಹೆಚ್ಚುವುದು ವೃಥಾ ಕಲಹ ಸಂಭವ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ ಅಪಘಾತ ಭಯ ನೌಕರಿಯಲ್ಲಿ ಕಿರುಕುಳ

ಕುಂಭ —ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಅಸಮರ್ಪಕ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ ನೌಕರಿಯಲ್ಲಿ ಬಡ್ತಿ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು

ಮೀನ —ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರವಾಗಿರುವುದು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಶಂಸೆ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ಮೊಹರಿಲ್ಲದ ಬಟ್ಟಿನ ಉಪಯೋಗಕ್ಕಾಗಿ ದಂಡ

ನರಸಿಂಹರಾಜ ಮೊಹಲ್ಲಯಲ್ಲಿರುವ ಶೌ ಛ ಅಂಗಡಿ ಸಂಜಶೆಟ್ಟಿ ಎಂಬುವರು ಅಂಕೇಗೌಡ ಎಂಬಾತನಿಗೆ ಮೊಹರಿಲ್ಲದ ಬಟ್ಟುಬಟ್ಟು ಸೌದೆಯನ್ನು ಮಾರಿದ್ದಕ್ಕೂ ಮತ್ತು ೧೯೫೪ ರಲ್ಲಿ ಪರೀಕ್ಷಿಸಲ್ಪಟ್ಟ ಬಟ್ಟನ್ನು ಪುನಃ ಪರೀಕ್ಷೆ ಮಾಡಿಸದೆ ಉಪಯೋಗಿಸಿದ್ದಕ್ಕೂ ಒಟ್ಟು ೩೦ ರೂ ದಂಡ ವಿಧಿಸಲಾಗಿದೆ

ಹಿಂದಿ ತರಗತಿಗಳು

ಚಾಮರಾಜನಗರದ ಆರವಿಂದ ಹಿಂದೀ ಮಂದಿರದ ಆಶ್ರಯದಲ್ಲಿ ನಾಳೆಯಿಂದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರಥಮ, ಮಾಧ್ಯಮ, ರಾಷ್ಟ್ರಭಾಷಾ ಮತ್ತು ಪ್ರವೇಶಿಕಾ ತರಗತಿಗಳು ನಡೆಯುತ್ತವೆ ಸ್ತ್ರೀಯರಿಗೂ ಮತ್ತು ಸರ್ಕಾರಿ ನೌಕರರಿಗೂ ಪ್ರತ್ಯೇಕ ತರಗತಿಗಳ ವ್ಯವಸ್ಥೆಯನ್ನು ಮಾಡಲಾಗಿದೆ ಉಳಿದ ವಿವರಗಳನ್ನು ಮಂದಿರದವರಿಂದ ಪಡೆಯಬಹುದು

○ ಸಂಸ್ಥಾನದ ಯೋಜನಾ ಸಲಹಾ ಮಂಡಲಿಯು ಇದೇ ೯ನೇ ತಾರೀಖು ಬೆಂಗಳೂರು ಆಹಾರ ಕಛೇರಿಯಲ್ಲಿ ಸೇರುವುದು

ಗುಬ್ಬಿ ಕಂಪನಿ ನಾಟಕಗಳಿಗೆ ಟೌನ್‌ಹಾಲ್ ಮೈದಾನ ಕೊಡಲಿ

ಜಂಬಲೆ ಅಣ್ಣಯ್ಯ ಪಂಡಿತರ ಪಾರ್ಕಿನಲ್ಲಿ ನಾಟಕರಂಗಕ್ಕೆ ತಾತ್ಕಾಲ ಕೊಡಬಾರದೆಂಬ ಸಾರ್ವಜನಿಕಾಭಿಪ್ರಾಯವನ್ನು ಸೂಚಿಸುವುದಕ್ಕೆ ಆ ಪಾರ್ಕನ್ನು ಕಲ್ಪಿಸಿ, ಅವನ್ನು ಕಲ ದ್ವೇಷ ಮುಂತಾಗಿ ಟೀಕಿಸಿ ಪ್ರಕಟಣೆಗಳು ಬಂದಿರುವುದು ವಿಷಾದಕರ ಕಲೆಗೆ ಸಂಪೂರ್ಣ ಉತ್ತೇಜನ ನೀಡಬೇಕೆಂದು ಒತ್ತಾಯಪಡಿಸುವುದಕ್ಕಾಗಿ ಮಾಮೂಲಿನಂತೆ ಟೌನ್‌ಹಾಲ್ ಮೈದಾನವನ್ನೇ ಈ ಕಾರ್ಯಕ್ಕೆ ಕೊಡಬೇಕೆಂದು ನಾವು ಕೋರುತ್ತೇವೆ ಟೌನ್‌ಹಾಲಿನ ಸುತ್ತಲೂ ವಿಶೇಷವಾದ ಖಾಲಿ ಜಾಗಗಳಿವೆ ಅನೇಕ ವರ್ಷಗಳಿಂದಲೂ ಅಲ್ಲಿಯೇ ಗುಬ್ಬಿ ಕಂಪೆನಿ ನಾಟಕಗಳು ನಡೆಯುತ್ತಿವೆ ಈ ಪ್ರದೇಶವು ನಾಟಕ ಪ್ರದರ್ಶನಗಳಿಗೆ ಹೆಸರು ಗೊಂಡಿದೆ ನೆರೆಹೊರೆಯಲ್ಲಿ ಯಾವ ಸಂಸಾರಿಕರ ಮನೆಯಾಗಲೀ, ವಿದ್ಯಾರ್ಥಿ ನಿಲಯಗಳಾಗಲೀ ಇರುವುದಿಲ್ಲ ಅಲ್ಲಿ ಸ್ಥಳವನ್ನು ಕೊಟ್ಟರೆ ಯಾರ ಆಕ್ಷೇಪಣೆಯೂ ಇರುವುದಿಲ್ಲ ನಾಟಕ ಸಂಸ್ಥೆಯವರೂ ಅದನ್ನು ಸ್ವಾಗತಿಸುವರು ಆದ್ದರಿಂದ ಆ ಸ್ಥಳವನ್ನೇ ಕೊಡಬೇಕೆಂದು ನಾವು ಒತ್ತಿ ಹೇಳುತ್ತೇವೆ

ಇವರ ಮೇಲೂ ಅಲ್ಲಿ ಕೊಡಲಾಗದೆಂದು ಯಾವ ನೆರೂ ಹೇಳುವ ಬಾಡಿಗೆ ಅಂತಹ ವಿರೋಧ ಕಾರಣಗಳು ಇಷ್ಟೂ ಇವೆ ನಾವು ಸ್ಪಷ್ಟರಾಯನಿಕರಿ ಸರ್ಕಾರ ಆನ್ವಯಿಸುವದೆಂದು ಒತ್ತಿ ಹೇಳುತ್ತೇವೆ

ಸುಬ್ಬರಾಯನಕೆರೆ ಮೈದಾನವು ಒಂದು ಪಾರ್ಕು ಇಲ್ಲಿ ಈಗಾಗಲೆ ಉದ್ಯಾನವನವು ರೂಪುಗೊಳ್ಳುತ್ತಿದೆ ಬ್ಯಾಂಡ್ ಸ್ಟ್ಯಾಂಡ್ ಇದ್ದರೆ ಬ್ಯಾಂಡ್ ಬಾರಿಸುವುದೇ ತಪ್ಪಿದೆ

ರೇಡಿಯೋ ಕೇಳಲು ಸಾರ್ವಜನಿಕರು ನೀರು ನರು ಆಟಪಾಟಗಳಿಗಾಗಿ ಅನೇಕ ಮಕ್ಕಳು ಬರುವರು ಸುತ್ತಮುತ್ತಲೂ ನೂರಾರು ಸಂಸಾರಿಕರೂ ನೂರಾರು ವಿದ್ಯಾರ್ಥಿಗಳೂ ವಾಸಮಾಡುತ್ತಿರುವರು

ಮಳೆ ಬಂದ ದಿನಗಳಲ್ಲಂತೂ ಇಲ್ಲಿನ ಭಾರಿ ಚರಂಡಿಯಲ್ಲಿ ದೊಡ್ಡ ಪ್ರವಾಹದಂತೆ ನೀರು ಹರಿದು, ಹೆಂಗಸರು ಮಕ್ಕಳುಗಳಿಗೆ ಎಷ್ಟೋ ಅಪಾಯವುಂಟಾಗುವ ಸ್ಥಿತಿಯೇ ಇರುತ್ತದೆ ಅಲ್ಲಿ ನಾಟಕಗಳಿಗೆ ಅವಕಾಶ ಕೊಡುವುದರಿಂದ ಮೇಲ್ಕಂಡ ಎಲ್ಲರಿಗೂ ತೊಂದರೆಯಾಗುವುದು ಇದನ್ನು ಈಗಾಗಲೇ ವ್ಯಕ್ತಪಡಿಸಲಾಗಿದೆ

ಪಾರ್ಕಿನಲ್ಲಿ ನಾಟಕಗಳಿಗೆ ಅವಕಾಶ ಕೊಡುವುದು ಎಷ್ಟು ಅನುಚಿತವಾದುದೆಂದು ಬೇರೆ ಹೇಳಬೇಕಾಗಿಲ್ಲ ಇನ್ನು ಮುಂದೆಯೂ ನಾಟಕ, ಸರ್ಕಸ್, ಸಿನಿಮಾ ಸಂಸ್ಥೆಯವರು ಅಂತಹ ಸ್ಥಳಗಳನ್ನು ಕೇಳಲು ಅವಕಾಶಮಾಡಿಕೊಟ್ಟಂತಾಗುವುದು ನಿಷಾದ್‌ಬಾಗ್, ಕರ್ಜನ್ ಪಾರ್ಕ್, ಲಾಂಡರ್ಸ್ ಪಾರ್ಕ್, ಮನುವನ ಮುಂತಾದ ಕಡೆಗಳಲ್ಲಿಯೂ ಸ್ಥಳವನ್ನು ಕೇಳಬಹುದಲ್ಲವೇ?

ಈ ಪ್ರಸಂಗದಲ್ಲಿ ನೆರೆಹೊರೆಯ ಒಬ್ಬಿಬ್ಬ ವ್ಯಕ್ತಿಗಳನ್ನು ಚತುರೋಪಾಯದಿಂದ ಪ್ರೇರೇಪಿಸಿ ಸಮ್ಮತಿ ಪಡೆಯಲು ಪ್ರಯತ್ನಗಳಾಗುತ್ತಿರುವುದು ತೀರ ಖಂಡನೀಯ ಸುಬ್ಬರಾಯನ ಕೆರೆ ಮೈದಾನದಲ್ಲಿ ನಾಟಕ ಪ್ರದರ್ಶನಗಳಿಗೆ ಸಾರ್ವಜನಿಕಾಭಿಪ್ರಾಯವು ಸಂಪೂರ್ಣ ವಿರೋಧವಾಗಿದೆಯೆಂದು ಹೇಳಲು ನಾವು ಸವಾಲು ಮಾಡುತ್ತೇವೆ ಹೀಗಿದ್ದರೂ ಅಲ್ಲಿಯೇ ನಡೆಸಬೇಕೆಂದು ಹಟ ಮಾಡುವುದು ಸಂಸ್ಥೆಯವರಿಗೂ, ಅವರ ಹಿತೈಷಿಗಳಿಗೂ ಸೂಕ್ತವಲ್ಲ

ಒಂದು ದೇವಸ್ಥಾನವನ್ನು ಕಟ್ಟಬೇಕಾದರೂ ನೆರೆಹೊರೆಯವರ ಅಭಿಪ್ರಾಯವನ್ನು ತಿಳಿಯಲಾಗುತ್ತಿದೆ ಹೀಗಿರುವಲ್ಲಿ ಮಹಾಜನರ ಪ್ರತಿಭಟನೆಯಿರುವ ಅಂಶಕ್ಕೆ ಪೌರಸಭೆಯವರು ಸಮ್ಮತಿ ಕೊಡದೆ ಟೌನ್ ಹಾಲ್ ಮೈದಾನದಲ್ಲಾಗಲೀ, ಜೀವಣ್ಣರಾಯನ ಕಟ್ಟೆಯಲ್ಲಾಗಲೀ ಅಥವಾ ಬೇರೆ ಎಲ್ಲಾದರೂ ಸ್ಥಳವನ್ನು ಕೊಟ್ಟು ಕಲೆಗೆ ನಿಜವಾದ ನೆರವನ್ನು ನೀಡಲೆಂದು ಹಾರೈಸುತ್ತೇವೆ — ಕಲಾಭಿಮಾನಿಗಳು

Edited, Printed and Published by A. R Nagarajan at Sadhvi Press, D Subbiah Road, Mysore

ಹರಳುಕೋಟೆ ದೇವಸ್ಥಾನದ ರಿಪೇರಿ ಅಗತ್ಯ

ಚಾಮರಾಜನಗರಕ್ಕೆ ಸೇರಿದ ರಾಮಸಮುದ್ರ ಗ್ರಾಮದ ದಕ್ಷಿಣ ಭಾಗಕ್ಕೆ ಸುಮಾರು ಒಂದು ಮೈಲಿ ದೂರದಲ್ಲಿರುವ ಹರಳುಕೋಟೆಯಲ್ಲಿ ದ್ವಾಪರ ಯುಗದ ಬಭ್ರುವಾಹನನು ಆಳುತ್ತಿದ್ದನೆಂಬುದು ಚಾರಿತ್ರಾರ್ಹವಾದ ವಿಷಯವಾಗಿದೆ ಈಗಲೂ ಅಲ್ಲಿ ಇತಿಹಾಸದ ಚಿಹ್ನೆಗಳ ಗುರುತುಗಳು ಮತ್ತು ಮಹತ್ವಪೂರಿತವಾದ ವಿಚಾರವು ಕಂಡುಬರುತ್ತಲಿವೆ ಇಲ್ಲಿ ಪರ್ವಕ್ಕೊಮ್ಮೆ ಪ್ರತಿ ಶ್ರಾವಣ ಶುದ್ಧದಲ್ಲೂ ಪೂಜೆ ನಡೆಯುತ್ತಲಿದೆ ಈಗ ದೇವಾಲಯದ ಕೆಲವು ಅಂಕಣಗಳಲ್ಲಿ ಬಿರುಕು ಬಿಟ್ಟಿದೆ ಇದುವರೆವಿಗೂ ಸಂಬಂಧಪಟ್ಟ ಇಲಾಖೆಯವರು ಇದನ್ನು ಮನಸ್ಸಿಗೆ ತೆಗೆದುಕೊಂಡಿಲ್ಲ ಇಂತಹ ಮಹತ್ವದ ಸ್ಥಳಗಳಮೇಲೆ ಸರ್ಕಾರದವರು ಮನಸ್ಸಿಟ್ಟು ದೇವಾಲಯದ ಕಟ್ಟಡವನ್ನು ಜೀರ್ಣೋದ್ಧಾರ ಮಾಡಬೇಕಾಗಿ ಪ್ರಾರ್ಥನೆ

ಬಿ. ಎಸ್. ನಾರಾಯಣಸ್ವಾಮಿ,
ದೊಡ್ಡರಾಯಪೇಟೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಪೇಜ್ ಎಸ್ ತಮ್ಮಯ್ಯ ಸಾಗರ್ ಸ್ಟರ್ ಮಧ್ಯಾಹ್ನ ೧ ೩೦ ಎ.ಐ.ಆರ್ ೧ ೫೦ ಸಂಗೀತ ೨ ೫೫ ಗ್ರಾಮಸ್ಥರಿಗಾಗಿ ೩ ೪೫ ರೇಡಿಯೋ ಸಂ ೪ ೩೦ ಪೇಜ್ ಎಸ್ ತಮ್ಮಯ್ಯ ಸಂಗಡಿಗರು ಗಾನ ವಿಹಾರ ೬-೧೫ ಅಬ್ದುಲ್ ಗಫೂರ್-ಹಿಂದಿ ಗೀತ ೬ ೫ ಸಂಗೀತ ೭ ೩೦ ಅಬ್ದುಲ್ ಗಫೂರ್ ವಿನೋದ ೮ ೮ ಮತ್ತು ೯ ೩೦ ಬಿ ಎಸ್ ರಾಜಯ್ಯಂಗಾರ್ ಸಂಗೀತ ೮ ೩೦ ೮ ಸ್ತ್ರೀಯರ ಕಾರ್ಯಕ್ರಮ ಭಾಷಣ ದಿಲ್ಲಿ ಪ್ರಸಾರ ೯-೧೫ ವಾರ್ತೆ-ಇಂಗ್ಲೀಷ್ ಭಾಷಣ

ದಸರೆಯ ಜನಪ್ರಿಯ ಪ್ರಕಟನೆ
ಈಗ ಪ್ರಕಟವಾಗಿದೆ—ಖರೀದಿ ಮಾಡಿರಿ
ಗಂಡುಗಲಿ ಕುಮಾರ ರಾಮ
ಮಲ್ಲೂರು ಶ್ರೀನಿವಾಸ ತೋಟದವರ ಐತಿಹಾಸಿಕ ಕಾದಂಬರಿ
ಬೆಲೆ ೧ ೦ ೦
ಅಚ್ಚಿನಲ್ಲಿದೆ— ವಿಶಾಂಗಿನಿ
ನಾಡಿನ ಹೊಯ್ಸಳರ ವಿಷಯ—ವಿ ವಾ ರ
ಪಚ್ಚಿದನದ ಮೇಲೆ ಬರೆದ ತಾಳೆ ಓಲೆ ಕಾದಂಬರಿ
— ಪುಸ್ತಕ ದೊರೆಯುವ ಸ್ಥಳ —
ನ್ಯೂಸ್ ಪೇಪರ್ ಹೌಸ್, ಮೈಸೂರು.

ಕೋಲಾರ ಗ್ರಾಮದಲ್ಲಿ ಘರ್ಷಣೆಯಿಂದ ೨೧ ಮಂದಿಗೆ ಗಾಯ

ಕೋಲಾರದ ತಾಲ್ಲೂಕಿಗೆ ಸೇರಿದ ತಿಪ್ಪಸಂದ್ರ ಗ್ರಾಮದಲ್ಲಿ ಮೊನ್ನೆ ಊರಿನ ಗೋಮಾಳದ ವಿಷಯವಾಗಿ ಅಲ್ಲಿನ ನಿವಾಸಿಗಳಿಗೂ, ಅಕ್ಕಪಕ್ಕದ ಗ್ರಾಮಸ್ಥರಿಗೂ ಘರ್ಷಣೆಯಾಗಿ ೨೧ ಮಂದಿಗೆ ಪೆಟ್ಟು ಬಿದ್ದು ಅವರುಗಳನ್ನು ಕೋಲಾರದ ಆಸ್ಪತ್ರೆಗೆ ಸಾಗಿಸಲಾಗಿದೆಯೆಂದು ತಿಳಿದುಬಂದಿದೆ ಗೋಮಾಳದ ಇತ್ಯರ್ಥಕ್ಕಾಗಿ ಪಂಚಾಯಿತಿ ನಡೆಯುತ್ತಿದ್ದಾಗ ಮಾತು ವಿಕೋಪಕ್ಕೆ ತಿರುಗಿ ಹೊಡೆದಾಟವಾಯಿತೆಂದು ಹೇಳಲಾಗಿದೆ

ಸಿ. ಪಿ. ಸಿ. ವೃತ್ತಿ ಶಿಕ್ಷಣಾಲಯದ ವಿದ್ಯಾರ್ಥಿಗಳ ಸಂಘ

ಸಿ ಪಿ ಸಿ ವೃತ್ತಿ ಶಿಕ್ಷಣಾಲಯದ ವಿದ್ಯಾರ್ಥಿಗಳ ಸಂಘದಲ್ಲಿ ಚುನಾವಣೆಯು ಶ್ರೀ ನಿ ನ್, ಶ್ರೀ ಹೆಚ್. ಎಲ್ ಚಿಕ್ಕೇಗೌಡರು ಅಧ್ಯಕ್ಷರಾಗಿಯೂ, ಶ್ರೀ ಬಿ. ಲಿಂಗಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀ ಎ. ಚಾಮುಂಡಯ್ಯನವರು ಇಂಡೋರ್ ಗೇಮ್ಸ್ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಕೆ. ಚಿಕ್ಕೇಗೌಡ, ಕೆ. ಸುಬ್ಬಯ್ಯ, ಎಸ್. ಮಂಜುನಾಥ ಮತ್ತು ಎಸ್ ಪಟೇಲ ವ್ಯಕ್ತಿಯವರು ಸದಸ್ಯರಾಗಿರುವರು.

NATIONAL LEAGUE,
Anathalaya Buildings, Mysore
Offers Brilliant Coaching to
S. S. L. C. Students
(JANUARY 1956)
* First course classes for Jan. 1 in full swing
* Second session classes commence shortly
* Separate section for lady candidates
JOIN AT ONCE
— WANTED —
Two experienced part time Arts Graduates who can handle opt on Geography Apply immediately
"Organiser"

Good Opportunity! *JAI HIND!* *Join at once!*
SHANKARA TUTORIAL INSTITUTE, [illegible]
The following coaching classes will be started very shortly
Tuition by experienced teachers Fees very moderate
1) S S L C 1956 January Examination
2) Bank Examinations 1956 February
For further particulars apply to —
G S VENKATASUBBIAH B.Sc., B.T.,
Head Master

ಮೈಸೂರು ದಸರಾ ವಸ್ತು ಪ್ರದರ್ಶನ 1955

(ತಾರೀಖು 16 10—1955 ರಿಂದ ತಾರೀಖು 6—11—1955ರ ವರೆಗೆ)

—: ಕಲಾ ವಿಭಾಗದಲ್ಲಿ ವಿಶೇಷ :—

ಈ ವರ್ಷವೂ ದಸರಾ ವಸ್ತು ಪ್ರದರ್ಶನದ ಅಂಗವಾಗಿ ಎಂದಿನಂತೆ ವಸ್ತು ಪ್ರದರ್ಶನದ ಆವರಣದಲ್ಲಿ ನೂತನವಾಗಿ ರಚಿಸಿರುವ ರಂಗಮಂಟಪದಲ್ಲಿ 1) ಸಂಗೀತ, 2) ನೃತ್ಯ, 3) ನಾಟಕ, 4) ವಿವಿಧ ವಿನೋದಾವಳಿಗಳು, ಮತ್ತು ಯಕ್ಷಗಾನ ಬಯಲಾಟ, ಕೋಲಾಟ, ಮುಂತಾದ ಗ್ರಾಮ ಕಲೆಗಳನ್ನು ಏರ್ಪಡಿಸಲಾಗುವುದು ಅಲ್ಲದೆ ಈ ಕೆಳಗೆ ಕಂಡ ವಿವಿಧ ಸ್ಪರ್ಧೆಗಳನ್ನೂ ಏರ್ಪಡಿಸಲಾಗುವುದು —

1 ಸಂಗೀತ — i) ಬಾಯಿ ಹಾಡುಗಾರಿಕೆ (ಸೀನಿಯರ್ ಮತ್ತು ಜೂನಿಯರ್)
ii) ವಾದ್ಯ ಸಂಗೀತ
2 ದೇವರನಾಮ, 3 ಆಧುನಿಕ ಗೀತೆಗಳು, 4 ಸಿನೀಮಾ ಹಾಡುಗಳು
5 ಭಾರತ ವಾಚನ, ಕಾವ್ಯ ವಾಚನ, 6 ಲಾವಣಿ, 7 ಕರ್ತನ

ಈ ಮೇಲ್ಕಂಡವುಗಳಲ್ಲಿ ಭಾಗವಹಿಸಲಿಚ್ಛಿಸುವವರು ತಾ|| 20—9—1955 ರ ಒಳಗೆ ದಸರಾ ವಸ್ತು ಪ್ರದರ್ಶನದ ಕಾರ್ಯದರ್ಶಿಗಳ ಕಛೇರಿಗೆ ಬರಹದ ಮೂಲಕ ತಿಳಿಸಬೇಕೆಂದು ಕೋರಿದೆ

ಮೈಸೂರು
2-9-55
ವಿ. ಎಸ್. ಕೃಷ್ಣ ಅಯ್ಯರ್,
ಪ್ರಧಾನ ಕಾರ್ಯದರ್ಶಿ,
ದಸರಾ ವಸ್ತು ಪ್ರದರ್ಶನ ಸಮಿತಿ, ಮೈಸೂರು

ರಿಜಿಸ್ಟರ್ ನಂ. ೭೭೨

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ ೩ ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ೩೦ ಕಾಸು
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೩೯] SADHVI MONDAY 5-9-1955 ಮೈಸೂರು ಸೋಮವಾರ ೫-೯-೧೯೫೫ [ಸಂಚಿಕೆ : ೨೮

ಭಾರತೀಯರಿಂದ ಗೋವೆ ಸತ್ಯಾಗ್ರಹಕ್ಕೆ ಕಾಂ॥ ವಿರೋಧ

ಕಾಲೇಜು ಅಧ್ಯಾಪಕರು ಮತ್ತು ಶಿಕ್ಷಕರುಗಳ ಸಂಬಳದ ಮಟ್ಟ

ವಿಶ್ವವಿದ್ಯಾಲಯಗಳ ಗ್ರಾಂಟ್ ಕಮಿಷನ್ನಿನ ಸಲಹೆ

ಮೈಸೂರು .

...ಲ್ಲಿನ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ ಶ್ರೀ ಎ ಎಲ್ ಮೊದಲಿಯಾರ್‌ರವರು ಒಂದು ...ಯುತ್ತು, ಕೇಂದ್ರ ವಿಶ್ವವಿದ್ಯಾಲಯಗಳ ...ಟು ಸಮಿತಿಯವರು ನಾನಾ ಕಾಲೇಜುಗಳ ...ಧ್ಯಾಪಕರುಗಳ ಸಂಬಳ, ಭತ್ಯ ಮುಂತಾ...ನ್ನು ಹೆಚ್ಚಿಸುವಂತೆ ಕೇಂದ್ರ ಮತ್ತು ಪ್ರಾಂತ ...ರಗಳಿಗೆ ಪತ್ರ ಬರೆದಿರುವರೆಂದೂ, ಈ ವಿ...ಕ್ಕೆ ಅತ್ಯಧಿಕ ಪ್ರಾಧಾನ್ಯತೆ ಕೊಡುವಂತೆ ...ರುವರೆಂದೂ ತಿಳಿಸಿರುವರು ಸಮಿತಿಯವ ...ಸೂಚಿಸಿರುವ ಸಂಬಳದ ರೀತಿಗಳ ಮಟ್ಟವು ...ತಿ ಇವೆ —

...ಕ್ಚರರುಗಳು ೨೫೦–೨೫–೫೦೦ ರೂ, ...ಗಳು ೫೦೦–೫೦–೮೦೦ ರೂ, ಪ್ರೊಫೆಸ ...೮೦೦–೫೦–೧೨೫೦ ರೂ ಉಳಿದ ವರ್ಗ ಅಧ್ಯಾಪಕರಿಗೆ, ಯಾರಿಗೇ ಆಗಲಿ ೧೫೦ ...ಗೆ ಕಡಿಮೆ ಸಂಬಳವಿರಕೂಡದು

...ರುವ ವರ್ಷ ಏಪ್ರಿಲ್ ೧ರಿಂದ ಈ ಹೊಸ ...ಯ ವೇತನಗಳನ್ನು ಜಾರಿಗೆ ತರುವಂತೆ ..., ಇದಕ್ಕಾಗಿ ಎಷ್ಟು ಹಣ ಬೇಕೆಂಬುದನ್ನು ...ದ್ಯಾಲಯಗಳು ತಿಳಿಸಬೇಕೆಂದೂ ಗ್ರಾಂ... ಸಮಿತಿಯವರು ಕೋರಿರುವರು

...ಲಿಯೇಟ್ ಆದ ಕಾಲೇಜುಗಳು ಗ್ರಾಂ... ಸಮಿತಿಯವರ ವ್ಯಾಪ್ತಿಗೆ ಒಳಪಡುವುದರಿ...ಂದ ಅವರಲ್ಲಿರುವ ಉಪಾಧ್ಯಾಯರುಗಳ ...ಗೂ ಸೂಕ್ತ ರೀತಿಯಂತೆ ಸಂಬಳವನ್ನು ಹೆಚ್ಚಿ... ಕೇಂದ್ರ ಮತ್ತು ಪ್ರಾಂತ ಸರ್ಕಾರಗಳನ್ನು ...ಯವರು ಕೋರಿರುವರು ಅವರುಗಳ ಸಂ... ಈ ರೀತಿ ಇರಬೇಕೆಂದು ಸಲಹೆ ಮಾಡ...

— ಪ್ರಿನ್ಸಿಪಾಲರಿಗೆ ೬೦೦ರಿಂದ ೮೦೦ ...ಇಲಾಖಾ ಮುಖ್ಯಸ್ಥರಿಗೆ ೪೦೦–೭೦೦ ...ಪ್ರಥಮ ದರ್ಜೆ ಅಧ್ಯಾಪಕರಿಗೆ ೩೦೦–... ...ರೂ, ಎರಡನೆಯ ದರ್ಜೆಯವರಿಗೆ ೨೦೦ ...೦೦ ರೂ ಈ ಸಂಸ್ಥೆಗಳಲ್ಲಾಗುವ ಹೆಚ್ಚು ...ನ್ನು ಕೇಂದ್ರ ಮತ್ತು ಪ್ರಾಂತ ಸರ್ಕಾರಗ... ...ಸಿಕೊಳ್ಳುವಂತೆ ಸಮಿತಿಯು ಶಿಫಾರಸು ...ಮಾಡುತ್ತದೆಂದು ಹೇಳಲಾಗಿದೆ

...ಗ್ರೆಸ್ಸಿನ ಕೇಂದ್ರ ಚುನಾವಣಾ ಸಮಿತಿಗೆ ಇಂದಿರಾ ಗಾಂಧಿ

...ಗ್ರೆಸ್ಸಿನ ಕೇಂದ್ರ ಚುನಾವಣಾ ಸಮಿತಿ... ...ಸ್ಥಾನಗಳಿಗೆ ಚುನಾವಣೆಯು ನೆನ್ನೆ ನಡೆ... ...ಯಾದವರ ಪುತ್ರಿ ಇಂದಿರಾ ಗಾಂಧಿ, ಲಾ... ...ಬಹದ್ದೂರ್ ಶಾಸ್ತ್ರಿ, ಕಾಮರಾಜ ನಾಡಾರ್, ...ಜಯರಾಮ್ ಮತ್ತು ಯು ಎಸ್. ಮಲ್ಯರ... ...ಯಶಸ್ವಿಯಾಗಿರುವರು ೧೭ ಮಂದಿ ಉಮೇ...ದುವಾರರುಗಳಲ್ಲಿ ೧೧ ಜನರು ವಾಪಸು ಪಡೆದ... ...ಕೆ. ವಿ. ಗಾಡ್ಗಿಳ್ ಮತ್ತು ಗುರುಮುಖ್ ...ಮುಸಾಫಿರ್‌ರವರು ಪರಾಜಿತರಾದರು ...ಶ್. ನಿಜಲಿಂಗಪ್ಪನವರೂ ಸ್ಪರ್ಧಿಸಿ, ಉ... ...ಮೇದುವಾರಿಕೆಯನ್ನು ವಾಪಸು ಪಡೆದರು

ಭಾರತದ ಪ್ರಧಾನ ನೌಕಾಧಿಕಾರಿ

ವೈಸ್ ಅಡ್ಮಿರಲ್ ಕಾರ್ಲಿಲ್‌ರವರು ನಗರಕ್ಕೆ ಆಗಮಿಸಿರುವರು

ಗೋವಾ ಬಗ್ಗೆ ವೈಯಕ್ತಿಕ ಅಥವ ಸಾಮೂಹಿಕ ಸತ್ಯಾಗ್ರಹ ಕೂಡದು

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಣಯ

ಗೋವಾ ಬಗ್ಗೆ ವೈಯಕ್ತಿಕ ಅಥವಾ ಸಾಮೂಹಿಕ ಸತ್ಯಾಗ್ರಹವನ್ನು ನಡೆಸಕೂಡದೆಂದು ನೆನ್ನೆ ದೆಹಲಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯು ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿತು ಗೋವಾ ಸಮಸ್ಯೆಯನ್ನು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ದೃಷ್ಟಿಯಿಂದ ಪರಿಗಣಿಸಬೇಕೆಂದೂ, ಪಕ್ಷದ ಆಧಾರದ ಮೇಲೆ ಪರಿಶೀಲಿಸಲಾಗದೆಂದೂ ಸಮಿತಿಯು ಅಭಿಪ್ರಾಯಪಟ್ಟು, ಭಾರತ ಸರ್ಕಾರದ ನಿಲುವಿಗೆ ಜನಸಾಮಾನ್ಯರು ಬೆಂಬಲ ನೀಡುವಂತೆ ಕೋರಿತ್ತದೆ ಗೋವಾ ವಿಮೋಚನೆ ಕಾರ್ಯವನ್ನು ಮುಂದುವರಿಸಲು ಸರ್ಕಾರದವರು ತಮ್ಮ ಶಾಂತಿಯ ನೀತಿಗೆ ಅನ್ವಯಿಸುವಂತೆಯೇ ಎಲ್ಲ ಕ್ರಮಗಳನ್ನೂ ನಡೆಸುವರೆಂದು ಸಮಿತಿಯು ವಿಶ್ವಾಸ ಸೂಚಿಸಿರುತ್ತದೆ

ಗೋವಾದಲ್ಲಿ ಕಳೆದ ೧೫ನೇ ತಾರೀಕು ಪೋರ್ಚುಗೀಸರು ಅಮಾನುಷ ರೀತಿಯಲ್ಲಿ ಗುಂಡು ಹಾರಿಸಿದುದನ್ನು ಸಮಿತಿಯು ಖಂಡಿಸಿ ಗುಂಡಿ ನೇಟಿಗೆ ತುತ್ತಾದವರಿಗೆ ಸಂತಾಪವನ್ನು ಸೂಚಿಸಿರುತ್ತದೆ

ಕ್ಯಾಲಿಫೋರ್ನಿಯದಲ್ಲಿ ಶಖೆಯಿಂದ ೬೫ ಜನರ ಮರಣ

ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ವಿಪರೀತ ಶಖೆಯುಂಟಾಗಿ ಒಂದೇ ರಾತ್ರಿಯಲ್ಲಿ ೬೫ ಮಂದಿ ಮೃತಪಟ್ಟಿರುವರು. ಬಿಸಿಲು ತಾಪದಿಂದ ಪ್ರತಿ ವರ್ಷವೂ ಸುಮಾರು ೫೦ ಮಂದಿ ಸಾಯುತ್ತಿದ್ದರು ವೃದ್ಧರೂ, ರೋಗಪೀಡಿತರೂ ತಾಪದಿಂದ ತುಂಬಾ ಆಯಾಸಗೊಂಡಿರುವರೆಂದು ತಿಳಿದುಬಂದಿದೆ

ಕನ್ಯಾಪಹಾರಕ್ಕಾಗಿ ಮೂವರ ದಸ್ತಗಿರಿ

ಜಾಮೀನಿನ ಮೇಲೆ ಬಿಡುಗಡೆ

ಮೈಸೂರು ೪

ಇಲ್ಲಿನ ಹೆಡ್ ಪೋಸ್ಟಾಫೀಸಿನ ಗುಮಾಸ್ತರಾದ ಶ್ರೀ ಎನ್ ಎನ್ ಎ ... ರವರ ... ... ಸುಮಾರು ... ...

...ಮೇಲೆ ಬಿಡಲಾಗಿದೆ

ಶಿಕ್ಷಕ ... ಬಂಧನ

...

ವಿದ್ಯಾವಂತ ನಿರುದ್ಯೋಗಿಗಳಿಗಾಗಿ ೨೦೦ ಕೋಟಿ ರೂ. ಪರಿಹಾರ

ವಿದ್ಯಾವಂತ ನಿರುದ್ಯೋಗಿಗಳಿಗೆ ಪರಿಹಾರ ಕಾಣುವ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧೫೦ ರಿಂದ ೨೦೦ ಕೋಟಿ ರೂ ಗಳನ್ನು ಒಂದೇ ಮೊತ್ತದಲ್ಲಿ ತೆಗೆದಿಡಬೇಕೆಂದು ಕೇಂದ್ರ ಯೋಜನಾ ಮಂತ್ರಿ ಗುಲ್ಜಾರಿಲಾಲ್ ನಂದಾರವರು ಸಲಹೆ ಮಾಡಿರುತ್ತಾರೆ ಈ ಸಮಸ್ಯೆಯನ್ನು ಪ್ರಾದೇಶಿಕವಾಗಿ ಪರಿಹರಿಸಬೇಕೆಂದೂ ಅವರು ಸೂಚಿಸಿರುವರು

ಗಂಗೆಯಲ್ಲಿ ಎರಡು ದೋಣಿಗಳು ಮುಗುಚಿ ೩೬ ಮಂದಿ ಮರಣ

ಕಾಶಿ ಬಳಿ ಲಲಿತಾಘಾಟ್ ಮತ್ತು ರಾಮ ಘಾಟುಗಳ ನಡುವೆ ಗಂಗೆಯಲ್ಲಿ ಎರಡು ದೋಣಿಗಳು ನೆನ್ನೆ ಮಗುಚಿ ಅನೇಕ ಮಹಿಳೆಯರೂ ಸೇರಿ, ೩೬ ಮಂದಿ ಮುಳುಗಿಹೋದರೆಂದು ವರದಿಯಾಗಿದೆ ನದಿಯಲ್ಲಿ ತುಂಬಾ ಪ್ರವಾಹವಿದ್ದುದೇ ಈ ದುರ್ಘಟನೆಗೆ ಕಾರಣವೆಂದು ಹೇಳಲಾಗಿದೆ ... ಹೆಂಗಸರನ್ನು ರಕ್ಷಿಸಿ ಆಸ್ಪತ್ರೆಗೆ ಕಳುಹಿಸಲಾಯಿತು ಒಂದು ದೋಣಿಯಲ್ಲಿ ೫೫ ಮಂದಿಯೂ, ಮತ್ತೊಂದರಲ್ಲಿ ... ಜನರೂ ಇದ್ದರು ಎರಡನೆಯ ದರಲ್ಲಿ ... ಮಂದಿಯನ್ನು ರಕ್ಷಿಸಲಾಯಿತು ಎ... ...ಜನರು ಸಂಚಕೋತ್ಸವ ಯಾತ್ರೆ ಹೊರಟಿದ್ದರು

ಎಸ್. ಗೋಪಾಲಗೌಡ ಮತ್ತು ಇನ್ನಿಬ್ಬರ ಮೇಲೆ ಶಿಸ್ತಿನ ಕ್ರಮ

ಪ್ರಜಾ ಸಮಾಜವಾದಿ ಪಕ್ಷದ ಸಂಸ್ಥಾನ ಶಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಗೋಪಾಲಗೌಡ, ಸದಸ್ಯರುಗಳಾದ ಶ್ರೀಗಳು ಕೆ ಕಣ್ಣನ್ ಮತ್ತು ಬಾಸು ಕೃಷ್ಣಮೂರ್ತಿಯವರುಗಳು ಪಕ್ಷದ ಐಕ್ಯತೆಗೆ ಧಕ್ಕೆ ತರುವಂತಹ ಮತ್ತು ಪಕ್ಷದ ನಡವಳಿಕೆ ಮತ್ತು ನಿಯಮಗಳಿಗೆ ವಿರುದ್ಧವಾದ ಚಟುವಟಿಕೆಗಳನ್ನು ನಡೆಸುತ್ತಿದ್ದರೆಂಬ ಕಾರಣದ ಮೇಲೆ ಅವರುಗಳನ್ನು ಕೇಂದ್ರ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ರೋಹಿಂಗ್‌ರವರು ಸಸ್ಪೆಂಡ್ ಮಾಡಿರುವರೆಂದು ತಿಳಿದುಬಂದಿದೆ

ಜಮೀನು ಅಡಮಾನ ಬ್ಯಾಂಕಿನ ರಜತೋತ್ಸವ

ಮಹಾರಾಜರ ಅಧ್ಯಕ್ಷತೆಯಲ್ಲಿ ನವೆಂಬರ್‌ನಲ್ಲಿ

ಮೈಸೂರು ೪

ಸಂಸ್ಥಾನದ ಜಮೀನು ಅಡಮಾನ ಬ್ಯಾಂಕಿನ ರಜತೋತ್ಸವವು ಬರುವ ನವೆಂಬರ್ ತಿಂಗಳು ೧೩ನೇ ತಾರೀಕು ಬೆಂಗಳೂರಿನಲ್ಲಿ ನೆರವೇರುವುದು ಶ್ರೀಮನ್ಮಹಾರಾಜರು ಅಧ್ಯಕ್ಷತೆ ವಹಿಸುವರು ಈ ಸಂಬಂಧವಾಗಿ ಮಹಾರಾಜರ ಒಪ್ಪಿಗೆಯನ್ನು ಪಡೆಯಲು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್ ಅನಂತರಾಮಯ್ಯನವರು ಮಹಾರಾಜರನ್ನು ಇಂದು ಭೇಟಿ ಮಾಡಿದ್ದರು

ಪೌರಸಭಾ ಕಾಂಗ್ರೆಸ್ ... ೧೦೦ ರೂ. ದಂಡ

ಪೌರಸಭೆಯವರು ಒಪ್ಪಿಸದ ನಕಾಶೆಯ ವಿರೋಧವಾಗಿ ಮಂಡಿ ಮೊಹಲ್ಲಾದಲ್ಲಿ ತನ್ನ ಮನೆಯ ಹೊರಗಡೆ ಮೇಲಂತಸ್ತಿನ ಮೆಟ್ಟಿಲನ್ನು ಕಟ್ಟಿ ಪಕ್ಕದ ಮನೆಯವರಿಗೆ ತೊಂದರೆಪಡಿಸಿ, ಅದನ್ನು ಕೆಡವುವಂತೆ ನೋಟೀಸು ಕೊಟ್ಟರೂ ಕ್ರಮ ಕೈಗೊಳ್ಳದಿದ್ದ ಕಾರಣ, ಹೊಗೆಸೊಪ್ಪು ವ್ಯಾಪಾರಿ ಶ್ರೀ ಮಹಮದ್ ಗೌಸ್ ಖಾನ್ ಎಂಬುವರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನ್ಯಾಯಾಧಿಪತಿ ಅಪರಾಧಿಗೆ ಈ ದಿನ ೧೦೦ ರೂ ದಂಡ ತಪ್ಪಿದರೆ ೧ ತಿಂಗಳು ಸಾದಾ ಸಜಾ ವನ್ನು ವಿಧಿಸಿದರು

ಸೇವಾ ದಳದ ಕಾರ್ಯಕರ್ತರ ಸಭೆ

ನಗರದಲ್ಲಿರುವ ಭಾರತ ಸೇವಾ ದಳದ ಮಾಜಿ ಮತ್ತು ಹಾಲಿ ಕೇಂದ್ರ ನಾಯಕ ಅಧಿಕಾರಿಗಳೆಲ್ಲರ ಒಂದು ಕಾರ್ಯಕರ್ತರ ಸಭೆಯು ನಾಳೆ ಸಂಜೆ ೫.೩೦ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿರುವ ಸೇವಾದಳದ ಕಾರ್ಯಾಲಯದಲ್ಲಿ ಶ್ರೀ ಎ ಪಿ ಎ ರಾಮುಲ್‌ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಎಲ್ಲಾ ಕಾರ್ಯಕರ್ತರೂ ಬರಬೇಕಾಗಿ ಕೋರಲಾಗಿದೆ

ವ್ಯಾಕ್ಸಿನೇಷನ್ನಿನಿಂದ ೭೩೪ ದನಗಳ ಸಾವು

ನಮ್ಮ ಸಂಸ್ಥಾನದ ಪಶುವೈದ್ಯ ಇಲಾಖೆಯವರು ತಯಾರಿಸಿದ ವ್ಯಾಕ್ಸಿನೊಂದನ್ನು ದನಗಳಿಗೆ ಚುಚ್ಚಿದ ಪರಿಣಾಮವಾಗಿ ೭೩೪ ದನಕರುಗಳು ಮೃತಪಟ್ಟಿವೆಂದೂ ತಮ್ಮ ವರ್ತಕನವಲ್ಲಿ ದನವು ... ... ಪ್ರಯೋಗ ... ... ಸಲಾಗುತ್ತಿರುವುದೆಂದು ವರದಿಯಾಗಿದೆ

ಎರಡನೇ ಯೋಜನೆಯಲ್ಲಿ ೧೧ ಕೋಟಿ ಜನರಿಗೆ ಉದ್ಯೋಗ

ಎ. ಐ. ಸಿ. ಸಿ. ಅಧಿವೇಶನದ ನಿರ್ಣಯ

೪,೩೦೦ ಕೋಟಿ ರೂ ವೆಚ್ಚದಿಂದ ನಡೆಸಲಾಗುವ ದ್ವಿತೀಯ ಪಂಚವಾರ್ಷಿಕ ಯೋಜನೆಯು ಅಂತ್ಯವಾಗುವುದರೊಳಗೆ ೧ ಕೋಟಿ ೩೦ ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಬೇಕೆಂದು ದೆಹಲಿಯಲ್ಲಿ ಸೇರಿದ್ದ ಎ ಐ ಸಿ ಸಿ ಸಭೆಯು ನಿರ್ಣಯವೊಂದರಲ್ಲಿ ಸೂಚಿಸಿದೆ ದ್ವಿತೀಯ ಯೋಜನೆಗಾಗಿ ಜನರು ಹೆಚ್ಚು ತೆರಿಗೆ ಕೊಡಬೇಕೆಂದೂ ಕೋರಿದೆ.

ವಿದ್ಯಾವಂತ ಸ್ತ್ರೀಯರು ಗ್ರಾಮಾಂತರದಲ್ಲಿ ನೆಲಸಬೇಕು

ಮಹಿಳಾ ಸದನದ ೧೭ನೇ ವಾರ್ಷಿಕೋತ್ಸವದಲ್ಲಿ ಎಂ. ಆರ್ ಲಕ್ಷ್ಮಮ್ಮನವರ ಭಾಷಣ

ಮೈಸೂರು ೫

ರಾಜಧಾನಿಯ ದಿವಾನರ ಛತ್ರಹಾರದಲ್ಲಿರುವ ಮಹಿಳಾ ಸದನದ ೧೭ ನೇ ವಾರ್ಷಿಕೋತ್ಸವವ ಸಂಸ್ಥಾನದ ಸಮಾಜ ಕಲ್ಯಾಣ ಸಲಹಾ ಸಮಿತಿ ಅಧ್ಯಕ್ಷಿಣಿಯರೂ, ಸೋದರಿ ಪತ್ರಿಕೆಯ ಸಂಪಾದಕಿಯರೂ ಆದ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ಮೊನ್ನೆ ನೆರವೇರಿತು.

ಬಾಲಕಿಯರಿಂದ ಪ್ರಾರ್ಥನೆ ಮತ್ತು ಅಧ್ಯಕ್ಷರಾದ ಶ್ರೀಮತಿ ಸಿ ಆರ್ ಸುಬ್ಬಮ್ಮನವರಿಂದ ಸ್ವಾಗತ ಭಾಷಣವಾದನಂತರ ಕಾರ್ಯದರ್ಶಿ ಶ್ರೀಮತಿ ವಿಶಾಲಾಕ್ಷಮ್ಮನವರು ಸದನದ ೫೪-೫೫ನೇ ವರ್ಷದ ವರದಿಯನ್ನು ಓದಿದರು. ಈ ಹದಿನೇಳು ವರ್ಷಗಳಲ್ಲಿ ಸದನವು ಸಾವಿರಾರು ಮಂದಿ ಮಹಿಳೆಯರಿಗೆ ಹಿಂದಿ, ಹೊಲಿಗೆ, ನೂಲುವುದು, ಸಂಗೀತ, ವೀಣೆ ಮೊದಲಾದ ವಿಷಯಗಳಲ್ಲಿ ಶಿಕ್ಷಣ ವಿತ್ತು, ಕಳೆದ ವರ್ಷದಿಂದ ಬಾಲ ವಿಹಾರವನ್ನು ಸಹ ತೆರೆದಿರುವ ವಿಚಾರವನ್ನು ತಿಳಿಸಿದರು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸದನವು ಕೊಡುತ್ತಿರುವ ವಿಶೇಷ ಗಮನವನ್ನು ವಿವರಿಸಲಾಯಿತು

ನಂತರ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದವರಿಗೂ, ಪರೀಕ್ಷೆಗಳಲ್ಲೂ ತೇರ್ಗಡೆ ಹೊಂದಿದ್ದವರಿಗೂ ಸುಮಾರು ೬೦ ಬಹುಮಾನಗಳನ್ನು ಹಂಚಲಾಯಿತು ಸಭೆಗೆ ದಯಮಾಡಿಸಿದ್ದ ಆಂಧ್ರ ಪ್ರಾಂತದ ಸಮಾಜ ಕಲ್ಯಾಣ ಸಲಹಾ ಸಮಿತಿ ಅಧ್ಯಕ್ಷಿಣಿಯರಾದ ಶ್ರೀಮತಿ ಎ ಸಿ ಕೃಷ್ಣರಾಯರು ಭಾರತದ ಮಹಿಳೆಯರ ಏಳಿಗೆ ವಿಷಯವಾಗಿಯೂ, ಆಂಧ್ರ ಮಹಿಳಾ ಮಂಡಲಿಯು ಸಾಧಿಸಿರುವ ಪ್ರಗತಿಯನ್ನೂ ಕುರಿತು ಭಾಷಣ ಮಾಡಿದರು

ಅಧ್ಯಕ್ಷರು ಮಾತನಾಡಿ ಸ್ತ್ರೀಯರು ಮತ್ತು ಮಕ್ಕಳ ಪುರೋಭಿವೃದ್ಧಿಗಾಗಿ ಭಾರತ ಸರ್ಕಾರದವರು ಸಮಾಜ ಕಲ್ಯಾಣ ಸಮಿತಿಯನ್ನು ಏರ್ಪಡಿಸಿರುವರೆಂದೂ, ಅದರ ಕೆಲಸಕಾರ್ಯಗಳು ಗ್ರಾಮಾಂತರದಲ್ಲಿ ಹೆಚ್ಚುಹೆಚ್ಚಾಗಿ ನಡೆಯಬೇಕೆಂದೂ ತಿಳಿಸಿದರು ವಿದ್ಯಾವಂತರಾದ ಮಹಿಳೆಯರು ಹಳ್ಳಿಗಳಲ್ಲಿ ನೆಲಸಿ ಸೇವೆ ಸಲ್ಲಿಸುವಂತೆ ಆಗಬೇಕೆಂದೂ, ಸ್ವದೇಶೀ ವಸ್ತುಗಳನ್ನೇ ಉಪಯೋಗಿಸಬೇಕೆಂದೂ ಸೂಚಿಸಿದರು ಸದನದವರು ಖಾದಿಗೆ ಈಯುತ್ತಿರುವ ಉತ್ತೇಜನವನ್ನು ಪ್ರಶಂಸಿಸಿದರು

ಉಪಾಧ್ಯಕ್ಷಿಣಿ ಶ್ರೀಮತಿ ಎಂ ಬಿ ಜಾನಕಿಯವರಿಂದ ವಂದನಾರ್ಪಣೆ, ಶ್ರೀಮತಿಯರಾದ ಅನಸೂಯ ಮತ್ತು ರಾಜೇಶ್ವರಿಯವರಿಂದ ಸಂಗೀತ, ವಿದ್ಯಾರ್ಥಿನಿಯರು ಮತ್ತು ಮಕ್ಕಳಿಂದ ಕೋಲಾಟ, 'ವಿಷಘಳಿಗೆ' ಎಂಬ ಕನ್ನಡ ಮತ್ತು 'ಮೈ ಡೀ ಪಾಸ್ ಮಯೀ' ಎಂಬ ಹಿಂದಿ ಪ್ರಹಸನ ನಾಟಕಗಳು, 'ಅಳಿಯಂದಿರು ಬರುತ್ತಾರೆ' ಎಂಬ ಏಕಪಾತ್ರ ನಾಟಕಾಭಿನಯ, ಭಸ್ಮಾಸುರ ಮೋಹಿನಿ ನೃತ್ಯಗೀತೆ ಮುಂತಾದವು ನಡೆದುವು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಧರ್ಮಸ್ಥಳದ ಹೊಸ ಉತ್ತರಾಧಿಕಾರಿಗಳು

ದಿವಂಗತ ಮಂಜಯ್ಯ ಹೆಗ್ಗಡೆಯವರ ಸ್ಥಾನದಲ್ಲಿ ಅಲ್ಲಿನ ಕ್ಷೇತ್ರ ಪಾಲಕ ಉತ್ತರಾಧಿಕಾರಿಗಳಾಗಿ ಶ್ರೀ ರತ್ನ ವರ್ಮರಾಜ ಹೆಗ್ಗಡೆಯವರು ಅಧಿಕಾರಕ್ಕೆ ಬಂದಿರುವರು

SREE GANESH
TALKIES
THE BLACK SHIELD OF FALWORTH
CINEMASCOPE
Technicolor Picture
Extended for another Two days in its Smash Second Week
At the Demand of the Public

ತಿರುಪತಿ ದೇವಸ್ಥಾನದ ಪಂಚ ವಾರ್ಷಿಕ ಯೋಜನೆ

ಅರ್ಚಕರು, ಶಿಲ್ಪಿಗಳು ಮತ್ತು ಕೀರ್ತನಕಾರರ ಶಿಕ್ಷಣ ಶಾಲೆ

ತಿರುಪತಿ ತಿರುಮಲೆ ದೇವಸ್ಥಾನದ ಸಮಿತಿಯವರು ೧ ಕೋಟಿ ೧೫ ಲಕ್ಷ ರೂ ವೆಚ್ಚದಿಂದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಪಂಚ ವಾರ್ಷಿಕ ಯೋಜನೆಯೊಂದನ್ನು ಮಂಜೂರು ಮಾಡಿರುತ್ತಾರೆ. ಅರ್ಚಕರು, ಶಿಲ್ಪಿಗಳು, ಕೀರ್ತನಕಾರರು ಮತ್ತು ಕುರುಡ ಮೂಗರುಗಳಿಗಾಗಿ ಶಾಲೆಗಳನ್ನು ಏರ್ಪಡಿಸಲಿರುವರು ದೇವಸ್ಥಾನದ ಅಭಿವೃದ್ಧಿ ಕ್ರಮದ ಅಂಗವಾಗಿ, ಆನಂದನಿಲಯ ವಿಮಾನಕ್ಕೆ ೧೫ ಲಕ್ಷ ರೂ ವೆಚ್ಚದಿಂದ ಚಿನ್ನದ ಮುಲಾಮು ಹಾಕಿಸಲೂ, ಸ್ವಾಮಿ ಪುಷ್ಕರಣಿಯನ್ನು ಉತ್ತಮಪಡಿಸಲೂ ಏರ್ಪಾಡು ಮಾಡಲಾಗುವುದು

ನಾಯಿಗಾಗಿ ಜಗಳದಲ್ಲಿ ೩೦ ಮಂದಿಗೆ ಗಾಯ

[illegible] ಒಂದಿನಲ್ಲಿ ನಾಯಿಯೊಂದನ್ನು ನೆರೆಮನೆಯವನು ಹೊಡೆದನೆಂಬ ಕಾರಣಕ್ಕಾಗಿ ಎರಡು ಪಕ್ಷಗಳಿಗೆ ಜಗಳವಾಗಿ ೩೦ ಮಂದಿಗೆ ಲಾಠಿ ಮತ್ತು ಕಲ್ಲೇಟುಗಳಿಂದ ಗಾಯವಾದುದಾಗಿ ಗೊತ್ತಾಗಿದೆ

ಯುವಕರ ಸಂಘಕ್ಕೆ ಕಾಣಿಕೆ

ರಾಜಧಾನಿಯ ಇಟ್ಟಿಗೆಗೂಡಿನಲ್ಲಿರುವ ಮೋಟಾರ್ ಬಾಡಿ ಬಿಲ್ಡರ್ಸ್ ಶ್ರೀ ಪಿ ವೈದ್ಯಲಿಂಗ ಆಚಾರಿಯವರ ಪುತ್ರ ಚಿ॥ ಪಿ ಷಣ್ಮುಗರವರಿಗೂ, ಕಾಂಚಿಪುರಂ ಶ್ರೀ ಕೆ ಮುನಿಸ್ವಾಮಿ ಆಚಾರಿಯವರ ಪುತ್ರಿ ಚಿ॥ ಸೌ॥ ವಳ್ಳಿಯಮ್ಮಾಳ್ ರವರಿಗೂ ಕಳೆದ ೩೦ನೇ ತಾರೀಕು ನಡೆದ ವಿವಾಹದ ಸಂದರ್ಭದಲ್ಲಿ ಇಟ್ಟಿಗೆಗೂಡು ಯುವಕರ ಸಂಘಕ್ಕೆ ಹದಿನೈದು ರೂ ಗಳು ಕಾಣಿಕೆಯಾಗಿ ಸಂದಾಯವಾಗಿರುತ್ತವೆ

ಇಂಗ್ಲಿಷ್ ಸೆಮಿನಾರ್ ಚುನಾವಣೆ

ಕಳೆದ ೩೦ನೇ ತಾರೀಕು ಯುವರಾಜಾ ಕಾಲೇಜಿನಲ್ಲಿ "ಇಂಗ್ಲಿಷ್ ಸೆಮಿನಾರ್" ಸಂಘದ ಚುನಾವಣೆ ನಡೆದು, ಶ್ರೀ ಕೆ ಟಿ ನರಸಿಂಹೇಗೌಡರು ಕಾರ್ಯದರ್ಶಿಯಾಗಿಯೂ, ಶ್ರೀ ಕೆ ವಿ ಸಿಂಗೇಗೌಡರು ಉಪ ಕಾರ್ಯದರ್ಶಿಯಾಗಿಯೂ ಮತ್ತು ಶ್ರೀಗಳಾದ ನಾರಾಯಣ ಮತ್ತು ಮಹದೇವಪ್ಪನವರು ಸದಸ್ಯರಾಗಿಯೂ ಸರ್ವಾನುಮತದಿಂದ ಚುನಾಯಿತರಾದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕ್ಕೆ. ಎಲ್ ಕೃಷ್ಣರಾವ್ ಕನ್ನಡ ಗೀತೆಗಳು ೭–೩೦ ರೆಕಾರ್ಡ್ ಮಧ್ಯಾಹ್ನ ೧–೪೦ [illegible] ೧–೫೦ ವನಿತಾ ವಿಭಾಗ ೨–೧೫ ಪ್ರೌಢ ಶಾಲೆಗಳಿಗಾಗಿ ೨–೪೫ ರೆಕಾರ್ಡ್ ಸಂಜೆ ೫–೪೦ ಮತ್ತೂರು ಎಂ ಟಿ ಶ್ರೀನಿವಾಸಯ್ಯಂಗಾರ್ ವೀಣೆ [illegible] ಕಾರ್ಯಕ್ರಮ ೭–೩ [illegible] ಸಂಗೀತ ೭–೪೦ ದಾಕ್ಷಿಣಾತ್ಯ ಸಂಗೀತ ಕಲಾ [illegible] ಎಂ. ಎ. [illegible] ಭಾಷಣ ೮ ೩೦ ಗೀತೆಗಳು [illegible]

ಶ್ರೀಗಾಯತ್ರಿ ಟಾಕೀಸ್
ಕಡೇ ದಿನ ಬ್ಲ್ಯಾಕ್ ವಿಡೊ
6–9–55 ರಿಂದ . ೩ ದಿನಗಳು ಮಾತ್ರ
ಟ್ವೆಂಟಿಯತ್ ಸೆಂಚುರಿಯವರ [illegible] ಚಿತ್ರ
ದಿ ರೇಯ್ಡ್ – ಪಾತ್ರ:– ವಾನ್ ಹೆಫ್ಲಿನ್, ಆನಾ ಬ್ಯಾಂಕ್ರಾಫ್ಟ್

೩॥ ವರ್ಷದ ಮಗುವಿನ ಕೊಲೆಗಾಗಿ ತಂದೆಗೆ ಜೀವಾವಧಿ ಶಿಕ್ಷೆ

ಮೈಸೂರು ೫

ನಂಜನಗೂಡು ತಾಲ್ಲೂಕಿನ ಮಲ್ಲೂಪುರದ ಮಾದಪ್ಪ ಉರುಫ್ ಮೂಗಪ್ಪ ಎಂಬಾತನು ಶಿವಸ್ವಾಮಿ ಎಂಬ ತನ್ನ ೩॥ ವರ್ಷದ ಮಗುವನ್ನು ಭಾವಿಗೆ ತಳ್ಳಿ ಕೊಲೆ ಮಾಡಿದ್ದನೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಈ ದಿನ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಮುನಿಸ್ವಾಮಯ್ಯನವರು ತೀರ್ಪಿತ್ತು ಅಪಾದಿತನು ತಪ್ಪಿತಸ್ಥನೆಂದು ತಿಳಿಸಿ ಅವನಿಗೆ ಜೀವಾವಧಿ ಸಜವನ್ನು ವಿಧಿಸಿದರು ಹೆಂಡತಿಯ ಬಗ್ಗೆ ಸಂಶಯದಿಂದ ಅವನು ಈ ರೀತಿ ಮಾಡಿದನೆಂದು ಭಾವಿಸಲಾಗಿದೆ

ಕಾಲೇಜ್ ಕ್ರಾನಿಕಲ್

ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ಕೋಲ್ಯಂಡ ಶಿರೋನಾಮೆಯುಳ್ಳ, ವಿದ್ಯಾರ್ಥಿಗಳ ಇಂಗ್ಲಿಷ್-ಕನ್ನಡ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ವಿದ್ಯಾರ್ಥಿಗಳ ವಾಣಿಯಾಗಲು ಪತ್ರಿಕೆಯು ತನ್ನ ಆಶಯವನ್ನು ಸೂಚಿಸಿದೆ ಅವರುಗಳಿಗೆ ಸಂಬಂಧಪಟ್ಟಂತೆ ಸುದ್ದಿಗಳನ್ನು ಸಹ ಕೊಡಲಾಗಿದೆ ಮಾಸ ಪತ್ರದಲ್ಲಿ ವಾಗ್ದೇವಿಯ ಚಿತ್ರವೂ, ಬಳಿಕ [illegible] ಕ್ಕೆ ಡಾ॥ ರಾಧಾಕೃಷ್ಣನ್ ರವರ [illegible] ಇವೆ. ರಾಧಾಕೃಷ್ಣನ್ ರವರು ತಮ್ಮ ಸಂದೇಶದಲ್ಲಿ ದೇಹ ಶ್ರಮದ ಬಗ್ಗೆ ಗೌರವವನ್ನು ತಿಳಿಸಿ, ವಿದ್ಯಾರ್ಥಿಗಳಲ್ಲಿ ಸಾಮೂಹಿಕ ಜೀವನದ ಅನುಭವವು ಬೆಳೆಯಬೇಕೆಂದು ಸೂಚಿಸಿದ್ದಾರೆ ಶ್ರೀ ಹೆಚ್ ಆರ್ ಮಲ್ಲಾರಾಧ್ಯರು ಸಂಪಾದಕರು ಮತ್ತು ಪ್ರಕಟಣಕಾರರಾಗಿರುವರು ಈ ಪತ್ರಿಕೆಯು ತನ್ನ ಉದ್ದೇಶವನ್ನು ಸಾಧಿಸಲೆಂದು ಹಾರೈಸುತ್ತೇವೆ

AUCTION SALE

CHEVROLET VAN

It is hereby notified for general information that the Chevrolet Van MY 7285 Z, belonging to the Mysore State Adult Education Council will be sold by Public Auction at the Central Office, 1253 Krishnamurthipuram, Mysore on 15th September 15 at 3 P.M

The van is a 1947 model with accommodation for 20 persons and also suitable for propaganda purposes.

The vehicle is available for inspection at 1253, Krishnamurthipuram, Mysore during office hours

The van will be sold to the highest bid above Rs 4,000 and the full amount of the bid should be paid immediately after the sale. The decision of the Officer conducting the sale to accept or reject any bid without assigning any reason therefor, is final.

Chief Executive Officer

ಪ್ರಭುದೇವಾ ಥಿಯೇಟರ್
(ಸ ದ್ಯಾ ಟಾ ಕೀ ಸ್)
8–9–55ರಿಂದ : [illegible] : [illegible]
ವಿಕ್ರಮ್ ರವರ ತಮಿಳು ಚಿತ್ರ
ಜೈಗೋಪಿ
ಪಾತ್ರ – [illegible]

ಯಳಂದೂರು ವಿದ್ಯಾರ್ಥಿ ನಿ...

ನರಸಿಂಗರಾವ್ ಪೂರ್ಣಯ್ಯನವರ ಸ್ಮಾ... ಯಳಂದೂರು ವಿದ್ಯಾನಿಧಿಯ ವಾರ್ಷಿಕ ಸ... ಯು ಯಳ 'ಗಾರು ಜಹಗೀರುದಾರರ ಛ... ಲ್ಲಿ ಇದೇ ೧೮ನೇ ತಾರೀಕು ಭಾನುವಾರ ಬೆ... ೧೧ ಗಂಟೆಗೆ ಸೇರುವುದು. ಈ ನಿಧಿಗೆ ಸಂಬಂ... ಪಟ್ಟಂತೆ ೧೯೫೪ನೇ ಜುಲೈ ೩೦ ರಿಂದ ೧೯೫... ೩೦ ರ ವರೆಗಿನ ವರದಿಯು ಪ್ರಸ್ತು... ಈ ವರ್ಷದಲ್ಲಿ ರೂ ೧೮೫–೫–೦ ವಸೂಲಾ... ರೂ ೧೭೭–೧೧–೦ ವೆಚ್ಚವಾಗಿದೆ. ಕಳೆದ ವರ್ಷಕ್ಕಿಂತ ಸ್ವಲ್ಪ ಹೆಚ್ಚು ಧನವು ಬಂದಿದ್ದರೂ ನಿರೀಕ್ಷಿಸಿದ್ದಷ್ಟು ದೊರೆತಿಲ್ಲ. ಈ ವರ್ಷ ೪೭ ವಿದ್ಯಾರ್ಥಿಗಳಿಗೆ ೧೩೦೪ ರೂ. ಹಂಚಲಾಗಿದೆ ನಿಧಿಯು ಪ್ರಾರಂಭವಾದ ೩೫ ವರ್ಷಗಳಲ್ಲಿ ಈ ವರೆಗೆ ೩೮,೦೭೭ ರೂ. ವಸೂಲಾಗಿ, [illegible] ರೂ ವೆಚ್ಚವಾಗಿದೆ. ಎಲ್ಲಾ ಕೋಮಿನ [illegible] ಬಡ ವಿದ್ಯಾರ್ಥಿಗಳಿಗೆ ಈವರೆಗೆ ೩೩,೭೫೮ ರೂ. ಗಳನ್ನು ಸಹಾಯವಾಗಿ ಕೊಡಲಾಗಿದೆ ಶ್ರೀ [illegible] ಕೆ ಸುಬ್ರಹ್ಮಣ್ಯ ಅಯ್ಯರ್ ರವರು ೧,೦೦೦ ರೂ. ದಾನ ಮಾಡಿರುವಂತೆ ಇತರರೂ ಉದಾರ ಮನಸ್ಸು ಮಾಡಿದರೆ ಒಂದು ಶಾಶ್ವತವಾದ ನಿಧಿಯನ್ನು ಏರ್ಪಡಿಸಲು ಅನುಕೂಲವಾಗುವುದು

ಕೋಳಿಯ ಲಿಂಗ ಪರಿವರ್ತನೆ

ಲಕ್ನೋ ವಿಶ್ವ ವಿದ್ಯಾಲಯದ ಪ್ರಾಣಿಶಾಸ್ತ್ರ ಶಾಲೆಯಲ್ಲಿರುವ ರ್ಹೋಡ್ ದ್ವೀಪದ ಜಾತಿಯ ಕೋಳಿಯು ಈಗ ಹುಂಜನಾಗುತ್ತಿರುವುದೆಂದು ವರದಿಯಾಗಿದೆ ಅದಕ್ಕೆ ಮೂರು ವರ್ಷ ವಯಸ್ಸು ೧ನೇ ವರ್ಷದಲ್ಲಿ ಅದು ೮ ಮೊಟ್ಟೆಗಳನ್ನೂ ಎರಡನೇ ವರ್ಷದಲ್ಲಿ ಒಂದನ್ನೂ ಇಟ್ಟಿದ್ದಿತು. ಈ ವರ್ಷ ಮೊಟ್ಟೆಯನ್ನೇ ಹಾಕಿಲ್ಲ ಅಲ್ಲದೆ ಹುಂಜಗಳನ್ನೂ ಸಹ ಹತ್ತಿರ ಸೇರಿಸುತ್ತಿಲ್ಲ. ಅದರ ಲಿಂಗದಲ್ಲಿ ಪರಿವರ್ತನೆಯಾಗುತ್ತಿರುವುದೆಂದು ಹೇಳಲಾಗಿದೆ

NOTIFICATION

Sealed tenders are invited from qualified contractors with experience in construction of buildings and allied structural steel work for the construction of a hall 36 ft. x 36 ft. size in the premises of the C.F.T.R.I. Mysore

The schedule of quantities in respect of this work may be obtained during office hours and the tender submitted in triplicate with an earnest deposit of Rs 500 (Rs. five hundred only) in cash or by cheque on any local Bank

The last date for submitting the tender which will have to be addressed to the Director, Central Food Technological Research Institute, Cheluvamba Vilas Mansion, V. V. Mohalla Post, Mysore, is 16th September 1955 before 1 P.M.

P. S :- All the steel sections M.S Plates & cement required for the work will be supplied by the Institute and the cost thereof including handling and percentage charges recovered from the bill.

Edited, Printed and Published by A. R. Nagarajan at Sadhvi Press, D.Subbiah Road, Mysore

ಲೈಸೆನ್ಸ್ ನಂ. 792

ಸಂಸ್ಥಾಪಕ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೮] SADHVI TUESDAY 6-9-1955 ಮೈಸೂರು ಮಂಗಳವಾರ ೬-೯-೧೯೫೫ [ಸಂಚಿಕೆ : ೨೬

ಗೋವಾ ಪ್ರಜೆಗಳ ಸಂಚಾರಕ್ಕೆ ಪೋರ್ಚುಗೀಸರ ನಿರ್ಬಂಧ

[illegible] ಇನಾಕ್ಯುಲೇಷನ್ನಿನಿಂದ ಆಗುತ್ತಿರುವ ತೊಂದರೆಗಳು

[illegible] ಸರ್ಕಾರಕ್ಕೆ ನಾಗರಿಕರ ಮನವಿ

ಮೈಸೂರು ೬

[illegible] ನಗರದ ಪೌರಸಭಾ ಆರೋಗ್ಯ ಇಲಾಖೆಯವರು [illegible] ಆರು ತಿಂಗಳಿಂದಲೂ [illegible] ಮಾಡುತ್ತಿರುವ ವಿವಿಧ ರೀತಿಯ [illegible] ಇನಾಕ್ಯುಲೇಷನ್ನುಗಳಿಂದ ಉಂಟಾಗುತ್ತಿರುವ [illegible] ತೊಂದರೆಗಳನ್ನು ಕುರಿತು ಸಂಸ್ಥಾನದ ಆರೋಗ್ಯ ಮತ್ತು ವಿದ್ಯಾ ಮಂತ್ರಿಗಳಿಗೆ ಡಾ॥ ಎಸ್. ನಾರಾಯಣರಾವ್ ಮತ್ತು ೩೦ ಮಂದಿ [illegible] ಕರು ಮನವಿ ಪತ್ರ ಬರೆದಿರುತ್ತಾರೆ

[illegible] ಕಾರಿಗಳ ಸಮಕ್ಷಮವನ್ನು [illegible] ಇನಾಕ್ಯುಲೇಷನ್ನಿನಲ್ಲಿರುವ ಹಲವಾರು ದೋಷಗಳನ್ನು ಪೌರಸಭಾ ಆರೋಗ್ಯ [illegible] ಗಳಿಗೆ ತಿಳಿಸಿದ್ದರೂ ಅವುಗಳ ನಿವಾರಣೆಗೆ [illegible] ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಅವರು ಹೇಳುತ್ತಾರೆ. ಇನಾಕ್ಯುಲೇಷನ್ [illegible] ಮಕ್ಕಳಿಗಾಗಲೀ, ಅವರ ತಾಯಿ [illegible] ಗಳಿಗಾಗಲೀ, ಪೂರ್ವಭಾವಿ ತಿಳುವಳಿಕೆ ಕೊಡುವುದು, ಮಗುವಿನ ಆರೋಗ್ಯ ಸ್ಥಿತಿಯನ್ನು ಪರೀಕ್ಷಿಸದೆ ಎಲ್ಲರಿಗೂ ಏಕ ಕಾಲದಲ್ಲಿ [illegible] ಇನಾಕ್ಯುಲೇಷನ್ ಹಾಕುವುದು, [illegible] ಕೂಡಲೇ ಅನುಭವಿಸುವ ಮಕ್ಕಳಿಗಾದ [illegible] ಗಮನಿಸದೆ ಮಕ್ಕಳನ್ನು ಮನೆಗಳಿಗೆ [illegible] ದರಿಂದ ಮಕ್ಕಳಿಗೆ ಬಾಯಿಯಲ್ಲೇ ಕಲೆ [illegible] ವಾಂತಿ, ಜ್ವರ, ಮತ್ತು ಸುಸ್ತು ಇವೇ [illegible] ತೊಂದರೆಗಳುಂಟಾಗುತ್ತಿರುವುವೆಂದೂ, ಬಾಲಕರಿಗೆ ಇಷ್ಟು ಹೆಚ್ಚಿನ ತೊಂದರೆ [illegible] ಆರೋಗ್ಯಾಧಿಕಾರಿಗಳಾಗಲೀ ಅಥವಾ [illegible] ಆರೋಗ್ಯಾಧಿಕಾರಿಗಳಾಗಲೀ ಅವ [illegible] ನಿಸದೆ, ಅವರಿಂದ ಮಕ್ಕಳ ತಾಯಿ [illegible] ಅನವಶ್ಯಕವಾದ ಚಿಂತೆಯಾಗುವುದಲ್ಲದೆ, [illegible] ಮನೋವ್ಯಥೆಗೂ ಕಾರಣವಾಗಿರು [illegible] ಮನವಿಯು ತಿಳಿಸುತ್ತದೆ

[illegible] ಕಾರಣಗಳಿಗಾಗಿ ಕೆಳಗೆ ಸೂಚಿಸಿರುವ [illegible] ದರೂ ಅಧಿಕಾರಿಗಳು ತೆಗೆದುಕೊಳ್ಳ [illegible] ಬೇಕೆಂದು ಪ್ರಮುಖ ನಾಗರೀಕರನ್ನು ಪ್ರಾರ್ಥಿಸಿರುತ್ತಾರೆ.—

[illegible] ಪೋಷಕರುಗಳಿಗೆ ಮುಂಚಿತವಾಗಿ ತಿಳುವಳಿಕೆ [illegible] ಮು, ಇನಾಕ್ಯುಲೇಷನ್ ಸಮಯದಲ್ಲಿ [illegible] ಗಳು ಹಾಜರಿದ್ದು ಮಕ್ಕಳ ಬಗ್ಗೆ [illegible] ಬೇಕಾದ ಎಚ್ಚರಿಕೆ ಕ್ರಮವನ್ನು [illegible] ಅವಕಾಶ ಕೊಡುವುದು, ವೈದ್ಯರು [illegible] ಆರೋಗ್ಯವನ್ನು ಮೊದಲೇ ಪರೀಕ್ಷಿಸಿ [illegible] ತಿಳಿದುಕೊಳ್ಳುವುದು, ಇನಾಕ್ಯುಲೇಷನ್ [illegible] ಮಾಡಿದನಂತರ ವೈದ್ಯರು ಮಕ್ಕಳನ್ನು [illegible] ಪರೀಕ್ಷಿಸುವುದು

[illegible] ಗಳನ್ನು ಕೈಗೊಂಡರೆ ಹೆಚ್ಚು ತೊಂದರೆ [illegible] ಮಕ್ಕಳ ಆರೋಗ್ಯ [illegible] ಯಾಗುತ್ತದೆಂದೂ, ಆದ್ದರಿಂದ [illegible] ಈ ವಿಷಯವನ್ನು ಗಮನಿಸಿ ಸಂ [illegible] ಸೂಕ್ತ ತಿಳುವಳಿಕೆಯನ್ನು ಕೊಡ [illegible] ಕೋರಲಾಗಿದೆ.

ಮಕ್ಕಳ ಪುಸ್ತಕ ಭಂಡಾರಕ್ಕೆ ಉದಾರ ಸಹಾಯ

ಮೈಸೂರು ೬

ರಾಜಧಾನಿಯ [illegible] ನಡೆಸುತ್ತಿರುವ ಮಕ್ಕಳ ಪುಸ್ತಕ ಭಂಡಾರಕ್ಕೆ ಶ್ರೀ ಎಸ್. ಕೆ. [illegible], ಶ್ರೀಮತಿಯವರಾದ [illegible] ಮ್ಮ ದೇವೇಗೌಡ ಮತ್ತು [illegible] ರವರು ತಲಾ ೫೦ ರೂ ಗಳನ್ನು ಕೊಟ್ಟಿರುತ್ತಾರೆ. [illegible] ಉಪಕರಣಗಳನ್ನು ಶ್ರೀ ಎಸ್ [illegible] ಉಚಿತವಾಗಿ ಕೊಡಲಿರುವರು. [illegible] ಮತ್ತು ಸ್ಯಾನಿಟರಿ ಸೌಲಭ್ಯಗಳನ್ನು ಶ್ರೀ ಎ. ಎಸ್ [illegible] ರವರು ಒದಗಿಸುವರು

[illegible] ಹಾಕಿಕೊಂಡು ಮರಣ

ರಾಜಧಾನಿ ಸುಣ್ಣದ ಕೇರಿಯ ೧೧೭ ನೇ ನಂಬರ್ ಮನೆಯಲ್ಲಿ [illegible] ಶ್ರೀ [illegible] ಸ್ವಾಮಿ ಚೆಟ್ಟಿಯಾರರ ಧರ್ಮಪತ್ನಿ ಮನವೆಂಕಟ ಚಲಪತಿ ಚೆಟ್ಟಿ [illegible] ಈ ದಿನ [illegible] ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ವರದಿಯಾಗಿದೆ [illegible] ತಿಳಿದುಬಂದಿಲ್ಲ

ಮೋಸದಿಂದ ಬೈಸಿಕಲ್ ಪಲಾಯನ

ಮೈಸೂರು [illegible] ಶ್ರೀ ಎ. ಸಿ. ಮುನಿವೀರಯ್ಯನವರ ಬೈಸಿಕಲ್ಲನ್ನು ಕಳೆದ ತಿಂಗಳು ೧೯ನೇ ತಾರೀಖು [illegible] ಎಂಬುವನು [illegible] ತೆಗೆದುಕೊಂಡು ಹೋಗಿ ಮಾರಿರುವನೆಂದು [illegible] ಜಿಲ್ಲಾ ಪೋಲೀಸ್ [illegible] ಸಂಬಂಧಿಸಿ [illegible] ಹಲವಾರು ಮೋಸದ ಕೃತ್ಯ ನಡೆಸಿದ್ದನೆಂದು ಗೊತ್ತಾಗಿದೆ

ಕೋರ್ಟಿನ ಆವರಣದಲ್ಲಿ ಜೇಬಿಗೆ ಕೈ ಹಾಕಿದ್ದಕ್ಕೆ ದಂಡ

ನಗರದ ಕೋರ್ಟುಗಳ ಆವರಣದಲ್ಲಿ [illegible] ಮಾಡಿದರೆಂದು ಹನುಮಯ್ಯ, ರಂಗಯ್ಯ, ಮಾದಪ್ಪ ಮತ್ತು ಸ್ವಾಮಿ [illegible] ರವರ ಮೇಲೆ ಲಕ್ಷ್ಮೀಪುರದ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ಆಪಾದಿತರಿಗೆ ತಲಾ [illegible] ರೂ ದಂಡ ವಿಧಿಸಿದರು

ಅಂಗಡಿ ಬೀಗ ಮುರಿದು ಕಳವು

ಒಂಟಿಕೊಪ್ಪಲಿನ [illegible] ರಸ್ತೆಯಲ್ಲಿರುವ ಶ್ರೀ ಬಿ. ಎಸ್. ಧನಪಾಲಶೆಟ್ಟಿರವರ ಅಂಗಡಿಯಲ್ಲಿ ನಿನ್ನೆ ರಾತ್ರಿ ಬೀಗ ಮುರಿದು ಸುಮಾರು [illegible] ರೂ ಬೆಲೆ ಬಾಳುವ ಬಟ್ಟೆ ಮತ್ತು [illegible] ಗಳನ್ನು ಅಪಹರಿಸಲಾಗಿದೆಯೆಂದು ತಿಳಿದುಬಂದಿದೆ

ಡಾ॥ ಎಸ್. ಎಸ್. ನಾರಾಯಣಶಾಸ್ತ್ರಿಯವರ ನಿಧನ

ಬೆಂಗಳೂರಿನ ಕಾನೂನು ವಿಜ್ಞಾನ ಕಾಲೇಜಿನಲ್ಲಿ ಮನಶ್ಶಾಸ್ತ್ರದ ಪ್ರೊಫೆಸರ್ ಆಗಿದ್ದ ಡಾ॥ ಎಸ್. ಎಸ್. ನಾರಾಯಣಶಾಸ್ತ್ರಿಯವರು ನಿನ್ನೆ ಮಧ್ಯಾಹ್ನ [illegible] ಹೃದಯಸ್ತಂಭನದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮೈಸೂರು ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರು. ಅವರಿಗೆ ೫೨ ವರ್ಷ ವಯಸ್ಸಾಗಿತ್ತು.

ಭಾರತದ ಉಪಾಧ್ಯಕ್ಷ ಡಾ॥ ಎಸ್. ರಾಧಾಕೃಷ್ಣನ್‌ರವರು

ನಿನ್ನೆ ಇವರಿಗೆ ೬೭ ವರ್ಷ ತುಂಬಿತು. ರಾಜ್ಯಸಭೆಯಲ್ಲಿ ಇವರನ್ನು ಸದಸ್ಯರು ಅಭಿನಂದಿಸಿದರು. [illegible] ಕೇಂದ್ರ ಮತ್ತು ಪ್ರಾಂತಗಳ [illegible] ಪಾರ್ಲಿಮೆಂಟ್ ಸದಸ್ಯರು [illegible] ರ ಭವನಕ್ಕೆ ಹೋಗಿ [illegible], ಅವರಿಗೆ ದೀರ್ಘಾಯುಸ್ಸನ್ನು ಹಾರೈಸಿದರು

ಚಿಕ್ಕಮಗಳೂರಿನಲ್ಲಿ ಭಾರಿ ದರೋಡೆ

ಪೂರ್ವಭಾವಿ ಎಚ್ಚರಿಕೆ ಕೊಟ್ಟು ಬರೋಡಾ ಕಳ್ಳರ ಸಾಹಸ

ಮುಂದೆ ನಡೆಸಲಿರುವ ಕಳ್ಳತನದ ಬಗ್ಗೆ ಪೋಲೀಸರಿಗೆ ಪೂರ್ವಭಾವಿ ಸೂಚನೆ ಕೊಟ್ಟು [illegible] ಚಿಕ್ಕಮಗಳೂರಿನಲ್ಲಿ ನಿನ್ನೆ ರಾತ್ರಿ [illegible] ಮಾಡಿ ರೂಪಾಯಿಗಳನ್ನು ದರೋಡೆ ಮಾಡಿದ ಪ್ರಸಂಗ ನಡೆದಿದೆ [illegible] ಪೋಲೀಸರ ಸಹಾಯ [illegible] ಗಂಟೆ ನಂತರ [illegible] ಮೇಲೆ ಪೋಲೀಸರು [illegible] ನಗರ [illegible] ಪತ್ತೆಯಿಲ್ಲ [illegible] ಎಂದು ಹೇಳಲಾಗಿದೆ. ಬುಕ್ಕಿನ [illegible] ಮೇಲೆ ಒಂದು ಕಾಗದವನ್ನು ಅಂಟಿಸಲ್ಪಟ್ಟಿತ್ತು. ಕಳ್ಳರ ಸಮೂಹದಲ್ಲಿ ೧೦ ಮಂದಿ ಇರುವರೆಂದೂ, [illegible] ಬಳಿ [illegible] ವಿಶ್ವವಿದ್ಯಾಲಯದ [illegible], ನಮ್ಮೊಡನೆ ಎಸ್ಸೆಸ್ಸೆಲ್ಸಿ [illegible] ಪೋಲೀಸರಿಗೂ ಪೂರ್ವಭಾವಿಯಾಗಿ ತಿಳುವಳಿಕೆ ಕೊಡಲಾಗಿತ್ತೆಂದೂ ಎರಡರಲ್ಲಿ ಸೂಚಿಸಲಾಗಿತ್ತು. ಮುಂದೆ ಹಾಸನದಲ್ಲಿ ಕಳ್ಳತನ ಮಾಡಲಾಗುವುದೆಂದೂ ನಮೂದಿಸಲಾಗಿದೆ. ಅಂಗಡಿ ಮೇಜು [illegible] ಗಳನ್ನೂ ಕಿತ್ತಿರುವುದರಿಂದ ಸುಮಾರು ೨,೦೦೦ ರೂ ನಷ್ಟವಾಗಿದೆ

[illegible] ಇದು ಸಂಬಂಧಪಟ್ಟ ಪೋಲೀಸರು [illegible] ಜಿಲ್ಲಾ ವರದಿ ವ್ಯಕ್ತಿಗಳನ್ನು ಸಂಬಂಧಪಟ್ಟವರಾಗಿ ಅನೇಕ ದನಕರುಗಳು ಸತ್ತು ಹೋಗುವ [illegible] ಮಾಲೀಕರುಗಳಿಗೆ ಸರ್ಕಾರದವರು [illegible] ರೂ ಪರಿಹಾರವನ್ನು ಕೊಟ್ಟಿರುತ್ತಾರೆ

ಗೋವಾ ಪ್ರಜೆಗಳ ಸಂಚಾರಕ್ಕೆ ಅಡ್ಡಿ

ಗೋವಾದೊಳಗೆ ರಾಷ್ಟ್ರೀಯರ ಚಳುವಳಿಯನ್ನು ದಮನ ಮಾಡಲು ಅಧಿಕಾರಿಗಳು ಜನರ [illegible] ಮೇಲೆ ನಿರ್ಬಂಧ ಹಾಕಿರುವರು. [illegible] ಗಳ ಅಪ್ಪಣೆಯಿಲ್ಲದೆ ಒಂದು ಹಳ್ಳಿಯಿಂದ ಇನ್ನೊಂದು [illegible] ಗುಂಪನ್ನು ಕಳೆದಿರುವ [illegible] ಪ್ರತಿಬಂಧಿಸಲಾಗಿದೆ. ನಗರಗಳಲ್ಲಿರುವವರೂ ಅನುಮತಿ ಪಡೆಯಬೇಕಾಗಿದೆ

ಗೋವಾ ಬಗ್ಗೆ ಕಾಂಗ್ರೆಸ್ಸಿನ ನೀತಿಯ ಖಂಡನೆ

ಅಧಿಕಾರಿ ಪಕ್ಷದ "ವಿನಾಶ ಕೃತ್ಯವೆಂದು" ವಿರೋಧಿಗಳ ಆಪಾದನೆ

ಗೋವಾ ವಿಮೋಚನ ಸತ್ಯಾಗ್ರಹದ ಬಗ್ಗೆ [illegible] ಮಾಡಿರುವ [illegible] ಯನ್ನು [illegible] ಮುಂದಿನ ಕ್ರಮ ಜರುಗಿಸುವ ಬಗ್ಗೆ ಎಸ್. [illegible], [illegible] ಕೃಪಲಾನಿ, ಅಶೋಕ ಮೆಹ [illegible] ಗೋರೆ [illegible] ಭೂಪೇಶಗುಪ್ತ, ಶ್ರೀಧರ್ [illegible] ಮಹಾಜನ್, [illegible], ಡಾ॥ [illegible] ಮತ್ತು ಇತರ [illegible] ವಿರೋಧ ಪಕ್ಷಗಳ ನಾಯಕರು ಪರಿಶೀಲನೆಯನ್ನು ನಡೆಸುತ್ತಾರೆ. ಅವರು ಹೇಳಿಕೆ [illegible], ಕಾಂಗ್ರೆಸ್ ಪಕ್ಷದ ನೀತಿಯು ರಾಷ್ಟ್ರದ [illegible] ತಾತ್ಕಾಲಿಕವಲ್ಲವೆಂದು ತಿಳಿಸುತ್ತಾ [illegible] ಎಲ್ಲ ಪಕ್ಷಗಳ ಬೆಂಬಲದೊಂದಿಗೆ, ವಿರೋಧಿಸ [illegible] ಚಳವಳಿಯನ್ನು ನಡೆಸುತ್ತಿರುವಾಗ ಅವನ್ನು ಅಧಿಕಾರ [illegible] ಪಕ್ಷದವರು ವಿನಾಶಗೊಳಿಸಲೆತ್ನಿಸಿರುವರೆಂದೂ [illegible] ಸ್ವಾತಂತ್ರ್ಯ [illegible] ಸತ್ಯಾಗ್ರಹಿಗಳು ಗೋವಾವನ್ನು ಪ್ರವೇಶಿಸುವಾಗ [illegible] ಸತ್ಯಾಗ್ರಹಿಗಳ ಪ್ರಯೋಗ [illegible] ಅವರುಗಳ ಹೇಳ, [illegible] ಈ ಪಾತಕ ಪ್ರಯತ್ನ [illegible] ಮಾಡಿದೆಯೆಂದೂ ಆಪಾದಿಸಿರುವರು

ಪೋಲೆಂಡಿನ ಸೈನ್ಯದ ಸಂಖ್ಯೆಯಲ್ಲಿ ಇಳಿತ

ಪೋಲೆಂಡು ತನ್ನ ಸೈನ್ಯದಲ್ಲಿ ೪೭,೦೦೦ [illegible] ಗಳನ್ನು ಕಡಿಮೆ ಮಾಡಲು ನಿರ್ಧರಿಸಿರುವುದೆಂದು ಗೊತ್ತಾಗಿದೆ. ರುಮೇನಿಯವೂ ಸಹ ಇದೇ ರೀತಿ ಸೈನ್ಯದಲ್ಲಿ ಕಡಿತ ಹಾಕಿದೆ

ಕೋಳಿಗಳನ್ನು ಕಳೆಕಳನಾಗಿ ಹಿಡಿದು ಕೊಂಡು ಹೋದುದಕ್ಕೆ ದಂಡ

ನಾರಾಯಣ ಎಂಬಾತನು ಕೋಳಿಗಳ ಕಾಲನ್ನು ಕಟ್ಟಿ ತಲೆ ಕೆಳಗು ಮಾಡಿ ಹಿಡಿದುಕೊಂಡು ಹೋಗುತ್ತಿದ್ದನೆಂದು, ಪ್ರಾಣಿಗಳಿಗೆ ಚಿತ್ರಹಿಂಸೆ ಮಾಡಿದ ಆಪಾದನೆ ಮೇಲೆ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಿನ್ನೆ ಆತನಿಗೆ ೫ ರೂ ದಂಡ ವಿಧಿಸಲಾಯಿತು

ಕಳ್ಳಾಪಹಾರದ ಸಂಬಂಧದಲ್ಲಿ ಯಾರ ದಸ್ತಗಿರಿಯೂ ಆಗಿಲ್ಲ

ನಗರದ ಪೆರ್ಫೋರ್ಮೆನ್ಸ್ ಆಫೀಸಿನ ಸುಮಾಸ್ತರಾದ ಶ್ರೀ ಎಸ್ ಎಚ್ ಎ [illegible] ರವರ ಮನೆಯ [illegible] ಸುಮಾರು [illegible] ಅಪಹಾರದ ಸಂಬಂಧದಲ್ಲಿ ಯಾರನ್ನೂ ದಸ್ತಗಿರಿ ಮಾಡಿಲ್ಲವೆಂದು ತಿಳಿದುಬಂದಿದೆ.

ಗಾಜಾ ಬಳಿ ಪುನಃ ಕದನಸ್ತಂಭನ

ಗಾಜಾ ಪ್ರದೇಶದಲ್ಲಿ ಈಜಿಪ್ಟ್ ಮತ್ತು ಇಸ್ರೇಲ್ ಪಡೆಗಳಿಗೆ ಘರ್ಷಣೆಯು ನಿಂತು ಮತ್ತೆ ಶಾಂತ್ರಿ ೮ ಗಂಟೆಯಿಂದ ಜಾರಿಗೆ ಬಂದಿದೆ. ವಿಶ್ವಸಂಸ್ಥೆಯ ವೀಕ್ಷಕರಾದ ಮೇ॥ ಜ॥ ಬರ್ನ್ಸ್‌ರವರು ಕಡೆಗೂ ಅಲ್ಲಿ ಶಾಂತಿಯನ್ನು ಸಾಧಿಸಿರುತ್ತಾರೆ.

ಗೋವಾದಲ್ಲಿ ಸಾಮಗ್ರಿಗಳ ಅಭಾವ-ಒಂದಕ್ಕೆ ೩ರಷ್ಟು ಬೆಲೆ

ಗೋವಾದಲ್ಲಿ ನಿತ್ಯವೂ ಬಳಸುವ ಪದಾರ್ಥಗಳು ಅಭಾವವಾಗುತ್ತಾ ಬಂದು ಬೆಲೆಯು ಶೇಕಡ ಇನ್ನೂರು ಮುನ್ನೂರರಷ್ಟು ಹೆಚ್ಚಿರುವುದೆಂದೂ, ಅಕ್ಕಿಯು ಮಾತ್ರ ಕಡಿಮೆ ಬೆಲೆಗೆ ಸಿಕ್ಕುತ್ತಿರುವುದೆಂದೂ ಗೊತ್ತಾಗಿದೆ. ೯ ಆಣೆಗೆ ೧ ಸೇರು ಅಕ್ಕಿ ದೊರೆಯುತ್ತಿದೆ. ೧ ನಿಂಬೆಹಣ್ಣಿಗೆ ೪ ಆಣೆ ಮತ್ತು ಬಾಳೆಹಣ್ಣಿಗೆ ೨ ಆಣೆ ಆಗಿದೆ.

ಅನುಮಾನದ ಮೇಲೆ ಕೇಡಿಯ ಬಂಧನ

ಹಲವಾರು ಬಾರಿ ಶಿಕ್ಷೆ ಅನುಭವಿಸಿರುವ ಪಿಟ್ರಿ ಪಾಪ ಎಂಬ ಕೇಡಿಯು ಮೊನ್ನೆ ರಾತ್ರಿ ರಾಜಮಾರ್ಗದ ಒಡಾಣದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ನಂಮ ಎಂಟಿಕಾಪ್ಪಲು ಪೊಲೀಸರು ಬಂಧಿಸಿರುವರು.

ಸತ್ಕಾರ ಕೂಟ

ಉಚ್ಚ ಶಿಕ್ಷಣಕ್ಕಾಗಿ ತೆರಳಿದ ಶ್ರೀ ಆರ್ ಮರಿಸ್ವಾಮಿ ನಾಥನ್‌ರವರ ಗೌರವ ಪ್ರದ ಗಿರಿಂ ಟ್ ಜೋಸೆಫ್ ಮಾಧ್ಯಮಿಕ ಶಾಲಾ ಉಪಾಧ್ಯಾಯರುಗಳು ಮೊನ್ನೆ ಸತ್ಕಾರ ಕೂಟವನ್ನು ಏರ್ಪಡಿಸಿ, ಶುಭಾಶಯವನ್ನು ಕೋರಿ ಬೀಳ್ಕೊಟ್ಟರು.

ಮೈಸೂರು ಕೇಸ್ಮೆ ನೊಟ್ಟೆ ಕೇಂದ್ರಗಳಿಗೆ ಕೇಂದ್ರದ ಸಹಾಯ

ಕುರಿಗಳು, ಬಿಡದಿ ಮತ್ತು ದೊಡ್ಡಬಳ್ಳಾಪುರಗಳಲ್ಲಿ ಕೇಸ್ಮೆ ನೊಟ್ಟೆ ಕೇಂದ್ರಗಳನ್ನು ಸ್ಥಾಪಿಸಲು ಭಾರತ ಸರ್ಕಾರದವರು ೩,೬೬,೦೦೦ ರೂ ಗಳ ಸಹಾಯವನ್ನು ಕೊಟ್ಟಿರುವರು. ಮೈಸೂರು ಸಂಸ್ಥಾನದಲ್ಲಿ ಕೊಟ್ಟಿದ ಒಕ್ಕಿ ಕೈ ಗಾರಿಕೆಗಾಗಿ ೩,೦೦೦ ರೂ ಗ್ರಾಂಟನ್ನು ಮಂಜೂರು ಮಾಡಲಾಗಿದೆ.

ಗುಂಡ್ಲುಪೇಟೆಯ ' ಮಿತ್ರ ಕೂಟ '

ಗುಂಡ್ಲುಪೇಟೆಯ ಮಿತ್ರ ಕೂಟದ ೨ನೇ ವಾರ್ಷಿಕೋತ್ಸವವು ಕಳೆದ ಸೋಮವಾರ ಇಲ್ಲಿನ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಧಿಕಾರಿ ಶ್ರೀ ಹುಚ್ಚಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಜಾನಪದ ಗೀತೆಗಳು, ಮತ್ತು ದೇಶಭಕ್ತಿ ಪದಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಶ್ರೀ ಜಿ ಎಸ್ ನಾರಾಯಣ್‌ರವರು ಮೈಸೂರು ಭಾರತ ಸಹಕಾರವನ್ನು ಕುರಿತು, ಶ್ರೀ ಜಿ ಬಿ ಚಿಕ್ಕಣ್ಣನವರು ಸಂಘ ಜೀವನದ ವಿಷಯವಾಗಿಯೂ, ಶ್ರೀ ಮ ಶಿ ರಂಗಸ್ವಾಮಿಯವರು ಸಮಾಜ ಶಿಕ್ಷಣದ ವಿಷಯವಾಗಿಯೂ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ತರುಣರು ಸಮಾಜಕ್ಕೂ, ರಾಷ್ಟ್ರಕ್ಕೂ ಕೈಲಾದ ಸಹಾಯವನ್ನು ಮಾಡಬೇಕೆಂದು ಸೂಚಿಸಿ,ಸಂಘಕ್ಕೆ ನೆರವನ್ನು ನೀಡುವುದಾಗಿ ತಿಳಿಸಿದರು. ಶ್ರೀ ಪಿ ಅಬ್ದುಲ್ ವಹೀದ್‌ರವರು ವಂದನಾರ್ಪಣೆ ಮಾಡಿದರು.

ವಿದ್ಯಾ ದಾನ-ಭೂದಾನಕ್ಕೆ ೧೧೦ ಎಕರೆ ಜಮೀನು

ಚನ್ನಪಟ್ಟಣದ ತಾಲ್ಲೂಕು ಮೈಲನಾಯಕನಹಳ್ಳಿ ಗ್ರಾಮದ ಪಟೇಲರಾದ ಶ್ರೀ ಬಿ ಸಿ ರಾಮೇಗೌಡರು ಸರ್ಕಾರದ ವಿದ್ಯಾ ದಾನ ಭೂದಾನ ಚಳುವಳಿಗೆ ೧೧೦ ಎಕರೆ ಮುಷ್ಕಿ ಜಮೀನನ್ನು ಕೊಟ್ಟಿರುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫ ರಾಜಾ ಪಟ್ಟಿ ಹಿಂದೂಸ್ತಾನಿ ಸಂಗೀತ ಮಧ್ಯಾಹ್ನ ೧ ಕ ಕೊಳಲು ೧-೫೦ ಎಸ್. ಅನಂತಪದ್ಮನಾಭರಾವ್ ವೀಣೆ ೩ ೧೫ ಪ್ರಶ್ನೋತ್ತರ ಚರ್ಚೆಗಾಗಿ ೩ ೪೫ ವಿಶಾರದ್. ಸಂಜೆ ೫-೪೦ ಮತ್ತು ೬ ೧೫ ಶಿ ಎಸ್ ವಿಶ್ವನಾಥಶಾಸ್ತ್ರಿ ಸಂಗೀತ ೬ ಹಿಂದಿ ಪಾಠ ೬ ೧೫ ಕನ್ನಡ ಗೀತೆಗಳು ೭ ೫ ಚರ್ಚೆ ೭ ೪೦ ಗಾನ್ನ ವೃಂದ ೮ ೮-೦೫ ಹಿಸ್ಟ್ ಹಿಂದೂಸ್ತಾನಿ ಸಂಗೀತ ೮ ೩೦ ಕೇಂದ್ರ ಉಪ ವಿದ್ಯಾ ಮಂತ್ರಿ ಶಿ ಎಸ್ ಶ್ರೀಮಾಲಿಯವರ ಭಾಷಣ ೮-೫೫ ಹಳ್ಳಿ ಹಾಡುಗಳು

೫ ವರ್ಷದಲ್ಲಿ ಚೀಣದ ವಿಮೋಚನೆ ಆಗುವುದೆಂದು ಚಿಯಾಂಗ್

ಚೀಣವನ್ನು ಐದು ವರ್ಷಗಳಲ್ಲೇ ಸಂಪೂರ್ಣವಾಗಿ ವಿಮೋಚನೆಗೊಳಿಸಲಾಗುವುದೆಂದು ರಾಷ್ಟ್ರೀಯ ಚೀಣದ ಅಧ್ಯಕ್ಷ ಚಿಯಾಂಗ್ ಕೈಷೇಕ್‌ರವರು ಭವಿಷ್ಯ ನುಡಿದಿರುತ್ತಾರೆ. ತಮ್ಮ ಸೈನ್ಯಗಳು ಇತರ ರಾಷ್ಟ್ರಗಳ ಬೆಂಬಲ ಪಡೆದು ಅಥವಾ ಪಡೆಯದೆ ಯಾವ ಘಳಿಗೆಯಲ್ಲಾದರೂ ಚೀಣದ ಮುಖ್ಯ ಭೂಮಿಯ ಮೇಲೆ ಧಾಳಿ ನಡೆಸಲು ಸಿದ್ಧವಾಗಿರುವುವೆಂದೂ ಅವರು ಹೇಳಿರುವರು.

ವಿಮಾನ ಗಂಟಲಿಗೆ ಸಿಕ್ಕಿ ಬಾಲಕನ ಮರಣ

ಮದ್ರಾಸಿನ ಬಳಿ ಪೂನಾಮಲ್ಲಿಯಲ್ಲಿ ಮೊನ್ನೆ ಮುನಿಸ್ವಾಮಿ ಎಂಬ ೧೨ ವರ್ಷದ ಬಾಲಕನು ಕಾಲುವೆಯಲ್ಲಿ ವಿಮಾನ ಓಡಿಯುತ್ತಿದ್ದಾಗ, ಎರಡು ಸಣ್ಣ ದಾರಗಳು ದೊರೆತುವೆಂದೂ ಅವನ್ನು ಅವನು ಬಾಯಿಯಲ್ಲಿ ಕಚ್ಚಿ ಹಿಡಿದು ಪುನಃ ವಿಮಾನ ಓಡಿಯಲೆತ್ನಿಸಿದಾಗ ಒಂದು ವಿಮಾನ ನುಸುಳಿ ಅವನ ಗಂಟಲಲ್ಲಿ ಸಿಕ್ಕಿಕೊಂಡು ಶ್ವಾಸ ಬದ್ಧವಾಗಿ ಬಾಲಕನು ಮೃತಪಟ್ಟನೆಂದೂ ವರದಿಯಾಗಿದೆ.

ಖಾದಿ ಅಭಿವೃದ್ಧಿಗಾಗಿ ಸಂಸ್ಥಾನಕ್ಕೆ ೬೫ ಸಾವಿರ ರೂ

ಖಾದಿ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಅಖಿಲ ಭಾರತ ಖಾದಿ ಮತ್ತು ಕೈಗಾರಿಕಾ ಬೋರ್ಡಿನವರು ಮೈಸೂರು ಸಂಸ್ಥಾನಕ್ಕೆ ಎಪ್ಪತ್ತೈದು ಸಾವಿರ ರೂ ಗಳನ್ನು ಕೊಟ್ಟಿರುವರು.

ಕೃಷ್ಣ ಜಯಂತೀ ಉತ್ಸವ

೦ ಚಂದ್ರಾಪುರಿ ಕೊಂಡಿಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಇದೇ ೧೦ನೇ ತಾರೀಖಿನಿಂದ ೧೧ರ ವರೆಗೆ ಶ್ರೀ ಕೃಷ್ಣ ಜಯಂತಿ ಉತ್ಸವದ ಅಂಗವಾಗಿ ಪ್ರತಿನಿತ್ಯವೂ ಹರಿಕಥೆ ಸಂಗೀತ ಕಚೇರಿ ಮುಂತಾದುವು ಯಥಾಪ್ರಕಾರ ನಡೆಸಲ್ಪಡುವುವು. ಪೂರ್ಣ ಸಹಕಾರ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ದೇವಸ್ಥಾನದ ಸಂಚಾಲಕರಾದ ಶ್ರೀ ಹೆಚ್ ಶ್ರೀನಿವಾಸಯ್ಯಂಗಾರ್ಯರು ಕೋರುತ್ತಾರೆ.

ಕೌಟಿಲ್ಯನ ಅರ್ಥ ಶಾಸ್ತ್ರದ ಮೈಕ್ರೊ ಫಿಲಂ

ಮೈಸೂರು ಪ್ರಾಚ್ಯ ಸಂಶೋಧನಾ ಶಾಲೆಯ ಲ್ಲಿರುವ ಪ್ರಾಚೀನ ಗ್ರಂಥಗಳ ಮೈಕ್ರೊ ಫಿಲಂ ತೆಗೆದುಕೊಳ್ಳುವ ಏಕ ಕಡಿನ ಸಂಬಂಧವಾಗಿ ಈಗ ಬ್ಯಾನೆ ಕೌಟಿಲ್ಯನ ಅರ್ಥ ಶಾಸ್ತ್ರದ ಮೂಲ ಪ್ರತಿಯ ಫಿಲಂ ಅನ್ನು ತೆಗೆಯಲ್ಪಟ್ಟಿದೆ. ಅದಕ್ಕಾಗಿ ಇತರ ಗ್ರಂಥಗಳೂ ಸಿದ್ಧವಾಗುತ್ತಿವೆ. ಮೈಕ್ರೊ ಫಿಲಂ ತೆಗೆದ ಪ್ರತಿಗಳು ೬೦೦ ವರ್ಷಗಳವರೆಗೆ ಬಾಳಿಕೆ ಬರುವುವೆಂದು ಶಾಲೆಯ ಮುಖ್ಯಾಧಿಕಾರಿಗಳಾದ ಶ್ರೀ ಹೆಚ್ ದೇವೀರಪ್ಪನವರು ತಿಳಿಸಿರುತ್ತಾರೆ.

ಟ್ರಾಫಿಕ್ ನಿಬಂಧನೆ ಉಲ್ಲಂಘನೆಗಾಗಿ ದಂಡ

ಪ್ರಸಿದ್ಧನ್ನು ಎಡಗಡೆ ಬದಲು ಬಲಗಡೆ ಬಿಟ್ಟು ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಚಿಕ್ಕ ಜಾತ್ರೆ ಎಂಬಾತನಿಗೆ ೫ ರೂ ದಂಡವನ್ನು ವಿಧಿಸಲಾಗಿದೆ.

ವರಲಕ್ಷ್ಮಿ ಲಲಿತಕಲಾ ಶಾಲೆಗಳ ಸಂಶೋಧನೆ ಸಮಿತಿ ಆರಂಭ

ರಾಜಧಾನಿಯ ಶ್ರೀ ವರಲಕ್ಷ್ಮಿ ಲಲಿತ ಕಲಾ ಶಾಲೆಗಳ ಸಂಶೋಧನಾ ಸಮಿತಿಯ ಆರಂಭೋತ್ಸವವನ್ನು ನಾಳೆ ಸಂಜೆ ೬ ಗಂಟೆಗೆ ಮೈಸೂರು ಚಾನ್ಸಲರಾದ ಶ್ರೀ ವಿ ಎಲ್ ಡಿಸೋಜಾರವರು ಸಹಕಾರ ಭವನದಲ್ಲಿ ನೆರವೇರಿಸುವರು. ಸಂಸ್ಥೆಯ ನೃತ್ಯ, ನಾಟಕ ಮತ್ತು ಸಂಗೀತ ಶಾಲೆಯ ಅಧ್ಯಕ್ಷರಾದ ಶ್ರೀ ಬಿ ಎಸ್ ಪುಟ್ಟಸ್ವಾಮಯ್ಯನವರು ಅಧ್ಯಕ್ಷತೆ ವಹಿಸುವರು.

ಉ ಪ ನ್ಯಾ ಸ

ಬಿ ಎ ಮತ್ತು ಎ ಎಸ್‌ಸಿ ಸಪ್ಲಿಮೆಂಟರಿ ವಿದ್ಯಾರ್ಥಿಗಳಿಗಾಗಿ ನಾಳೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಶ್ರೀ ಎಂ ಯಾಮುನಾಚಾರ್ಯರು ಶಲ್ಯ ಎಂಬ ಪಠ್ಯ ಪುಸ್ತಕದ ವಿಷಯವಾಗಿ ಉಪನ್ಯಾಸ ಮಾಡುವರು. ಸಕಲರಿಗೂ ಸ್ವಾಗತವಿದೆ.

ನೇಪಾಳದ ದಂಗೆಕೋರ ನಾಯಕ ಕೆ. ಐ. ಸಿಂಗರ ಬಂಧನ

ಕೆಲವು ವರ್ಷಗಳ ಹಿಂದೆ ಚೀಣಕ್ಕೆ ತಲೆ ತಪ್ಪಿಸಿಕೊಂಡು ಹೋಗಿದ್ದ ಡಾ॥ ಕೆ ಐ ಸಿಂಗ್‌ರವರು ಕಳೆದ ವಾರ ನೇಪಾಳವನ್ನು ಪ್ರವೇಶಿಸಿದರು. ಅವರನ್ನು ಕೂಡಲೇ ಮಿಲಿಟರಿಯವರು ಬಂಧಿಸಿದರು. ಅವರನ್ನೂ, ಅವರ ೧೭ ಜನ ಹಿಂಬಾಲಕರನ್ನೂ ಮಿಲಿಟರಿ ಕಾವಲಿನಲ್ಲಿ ರಾಜಧಾನಿಗೆ ಕರೆತರಲಾಗುವುದು. ರಸ್ತೆಯುದ್ದಕ್ಕೂ ವಿಶೇಷ ಕಾವಲನ್ನಿಡಲಾಗುವುದು.

ಅಲ್ಪಾವಧಿ ಸಾಲ ವಾಪತಿಯಾಗಿಲ್ಲ

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿಯ ಮಾರಪಟ್ಟಣ, ಶಿಂಗವಾಡಿ, ನಿಟ್ರೆ ಮತ್ತು ಕೊರವಳ್ಳಿ ಗ್ರಾಮಸ್ಥರಿಗೆ ಅಲ್ಪಾವಧಿ ಸಾಲವು ಮಂಜೂರಾಗಿ ಮೂರು ತಿಂಗಳು ಕಳೆದಿದ್ದರೂ ಸಹಾ ಇದುವರೆವಿಗೂ ಹಣವು ವಾಪತಿಯಾಗಿಲ್ಲವೆಂದೂ, ಈ ತಾಲ್ಲೂಕಿನ ಇತರ ಎಲ್ಲಾ ಗ್ರಾಮಗಳ ಸೊಸೈಟಿಗಳಲ್ಲೂ ಬಹಳ ಹಿಂದೆಯೇ ಹಣವನ್ನು ಹಂಚಿರುವರೆಂದೂ, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಗಮನವಿತ್ತು, ಕೂಡಲೇ ಹಣ ಮಂಜೂರು ಮಾಡಿಸಿ ಸಹಾಯ ಮಾಡಬೇಕೆಂದೂ ಆ ಗ್ರಾಮಗಳ ರೈತರು ಕೋರಿರುತ್ತಾರೆ.

ಕೃಷ್ಣಾಪುರದಲ್ಲಿ ಶ್ರೀ ಕೃಷ್ಣ ಜಯಂತಿ

ಟಿ ನರಸೀಪುರದ ತಾಲ್ಲೂಕು ಕೃಷ್ಣಾಪುರದ ಶ್ರೀ ಸಂತಾನಗೋಪಾಲಕೃಷ್ಣಸ್ವಾಮಿಯವರ ದೇವಾಲಯದಲ್ಲಿ ಇದೇ ೧ನೇ ತಾರೀಖಿನ ಆರಾಧ್ಯ ಶ್ರೀ ಕೃಷ್ಣೋತ್ಸವವು ನಡೆಯುವುದು. ೫ನೇ ತಾರೀಖು ಶ್ರೀ ಗೋವಿಂದರಾಜ ವೆಟ್ಟಾ ಸೇವೆ, ಪ್ರತೀಕ್ಷವೂ, ಶ್ರೀ ರುಕ್ಮಿಣೀ ಕಲ್ಯಾಣೋತ್ಸವವೂ ಏರ್ಪಾಡಾಗಿವೆ.

ಸರ್ಕಾರಕ್ಕೆ ನಗರದ ಬಸ್ ಸರ್ವಿಸ್ ಕೆಲಸಗಾರರ ಮನವಿ

ಮೈಸೂರು ಸಿಟಿ ಬಸ್ ಕೆಲಸಗಾರರ ಸಭೆಯು ಜಿಲ್ಲಾ ಮಜೂರು ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ಸೇರಿ, ಬರುವ ತಿಂಗಳಿಂದ ಸಿಟಿ ಬಸ್ ಸರ್ವಿಸ್ಸನ್ನು ಸರ್ಕಾರದವರು ರಾಷ್ಟ್ರೀಕರಣ ಮಾಡಿಕೊಳ್ಳುವಾಗ ಅವರ ಈಗಿನ ಕೆಲಸಗಾರರನ್ನೇ ಸರ್ವಿಸ್ಸಿಗೆ ಸೇರಿಸಿಕೊಳ್ಳಬೇಕೆಂದು ಒತ್ತಾಯಪೂರ್ವಕವಾದ ಮನವಿ ಮಾಡಿಕೊಳ್ಳಲಾಯಿತು.

ಹಿಂದಿ ತರಗತಿಗಳು

ಬರುವ ಫೆಬ್ರವರಿ ತಿಂಗಳು ನಡೆಯುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರಾಥಮಿಕದಿಂದ ವಿಶಾರದವರೆಗಿನ ಪರೀಕ್ಷೆಗಳಿಗೆ ಮೂವರು ಶಾಲೆಯನ್ನುಳಿದು ಸೇವಾ ಸಂಘದವರು ತರಗತಿಗಳನ್ನು ಏರ್ಪಡಿಸಿರುವರು. ಸೇರಬಯಸುವವರು ನಾಳೆಯೊಳಗಾಗಿ ತಿಳಿಸಬೇಕೆಂದೂ, ಗೊತ್ತಾದಷ್ಟು ಹೆಚ್ಚು ಮಂದಿ ವಿದ್ಯಾರ್ಥಿನಿಯರು ಸೇರಿದಲ್ಲಿ ಅವರಿಗಾಗಿ ಪ್ರತ್ಯೇಕ ತರಗತಿಯನ್ನು ನಡೆಸಲಾಗುವುದೆಂದೂ ಸಂಘದ ಕಾರ್ಯದರ್ಶಿಗಳು ತಿಳಿಸಿರುವರು.

ಗೋವಾ ಸತ್ಯಾಗ್ರಹಿಗಳ ಕಣ್ಣು ಕೀಳುವುದಾಗಿ ಬೆದರಿಕೆ

ಗೋವಾಕ್ಕೆ ಪುನಃ ಪ್ರವೇಶಿಸುವ ಭಾರತೀಯ ಸತ್ಯಾಗ್ರಹಿಗಳನ್ನು ಗುಂಡಿನಿಂದ ಹೊಡೆದು ಕೊಲ್ಲಲಾಗುವುದೆಂದೂ, ಅಥವಾ ಅವರ ಕಣ್ಣುಗಳನ್ನು ಕೀಳಲಾಗುವುದೆಂದೂ ಕಳೆದ ೧೫ನೇ ತಾರೀಖು ಗೋವಾಕ್ಕೆ ಪ್ರವೇಶಿಸಿ, ಹೊಡೆದು ಅಟ್ಟಿಸಲ್ಪಟ್ಟ ಸತ್ಯಾಗ್ರಹಿಗಳಿಗೆ ಪೋರ್ಚುಗೀಸರು ತಿಳಿಸಿರುವರು.

ಅಮಲ್ದಾರರಿಗೆ ಸತ್ಕಾರ

ಮಂಡ್ಯದ ವಿಶ್ವೇಶ್ವರಯ್ಯ ಶಾಲಾ ಅಧಿಕಾರಿಗಳಿಗೆ ವರ್ಗವಾಗಿ ಹೋದ ಅಮಲ್ದಾರ್ ಮುನಿಸಿಪಾಲಿಟಿಯವರು ಶ್ರೀ ಕೃಷ್ಣಪ್ಪನವರಿಗೆ ಶ್ರೀ ವೆಂಕಟಸ್ವಾಮಿಶೆಟ್ಟಿ ಛತ್ರದ ಮ್ಯಾನೇಜರಾದ ಶ್ರೀ ವೆಂಕಟಾಚಲಪತಿಶೆಟ್ಟರು ಕಳೆದ ವಾರ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಭೆಯವರಿಂದ ಕೊಡುವ ಹಣದ ಜೊತೆಗೆ ಶ್ರೀ ವೆಂಕಟಾಚಲಪತಿಶೆಟ್ಟರು ಹೆಚ್ಚು ಹಣ ಕೊಟ್ಟು, ಸಹಾಯ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯಗಳನ್ನು, ೫ ಮಂದಿಗೆ ಉಚಿತ ವಸತಿ ಸೌಕರ್ಯವನ್ನು ಕಲ್ಪಿಸಿರುವರು.

ಶ್ರೀಮನ್ಮಹಾರಾಜರವರಿಗೆ ಅಭಿನಂದನೆ

ಮೊನ್ನೆ ಸಂಜೆ ನಗರದ ಅರಮನೆ ಹುಜೂರ್ ಕಾರ್ಯದರ್ಶಿಯವರ ಕಛೇರಿ ಕಳೆ ಪಡೆ ನೌಕರರು ಶ್ರೀಮನ್ಮಹಾರಾಜರವರು ಅಧ್ಯಕ್ಷ ಪ್ರವಾಸದಿಂದ ಯಶಸ್ವಿಯಾಗಿ ಮುಗಿಸಿಕೊಂಡು ಹಿಂದಿರುಗಿದುದಕ್ಕಾಗಿ ಅವರಿಗೆ ಶ್ರೇಯಸ್ಸನ್ನು ಕೋರಲು ಛಸೇರಿ ಶ್ರೀ ಚಾಮುಂಡಾಂಬಿಕೆಯು ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಿ ದೀರ್ಘಕಾಲ ಮೈಸೂರು ಸಂಸ್ಥಾನವನ್ನು ಆಳುವಂತೆ ಕಾಪಾಡಬೇಕೆಂದು ಪ್ರಾರ್ಥಿಸಿದರು. ಫೋಟೋ, ಭೋಜನ ಕೂಟ ಮುಂತಾದ ಕಾರ್ಯಕ್ರಮಗಳು ಮುಗಿದನಂತರ ಜಯಕಾರದೊಡನೆ ಸಭೆ ಮುಕ್ತಾಯವಾಯಿತು.

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ. ವರೆಗೆ
ಕಡಲೇಕಾಯಿ	೬ ೮ ೦	೮ ೮
ಎಳ್ಳು	೪೩ ೮ ೦	೪೬ ೮
ಹೊಂಗೆಬೀಜ	೧೩ ೮ ೦	
ಹಿಪ್ಪೆ	೮ ೮ ೦	೮ ೧
ಹಿಪ್ಪೆಬೀಜ	೩೦ ೧೨ ೦	
ಕುಸುಬೆ	೩೩ ೮ ೦	೩೬ ೧
ಹೆಸರು	೩೫ ೦ ೦	೩೭ ೦
ಉದ್ದು	೩೯ ೦ ೦	
ಹುರುಳಿ	೪೫ ೧೦ ೦	
ಧನಿಯ	೩೫ ೧೦ ೦	
ಹುಣಸೇಹಣ್ಣು	೩ ೮ ೦	೪ ೫
ಮೆಣಸಿನಕಾಯಿ	೫ ೫ ೦	೫ ೧
ತೆಂಗಿನಕಾಯಿ ೧,೧೦೦	೧೩೮ ೮ ೦	೨೦೦ ೦

Edited, Printed and Published by A R Nagarajan at Sadhvi Press, D Subbiah Road, Mysore

Good Opportunity! JAI HIND! Join at once!
SHANKARA TUTORIAL INSTITUTE, NANJANGUD
The following coaching classes will be started very shortly
Tuition by experienced teachers Fees very moderate
1) S S L C 1956 January Examination
2) Hindi Examinations 1956 February
For further particulars apply to –
G S VENKATASUBBIAH, B.Sc., B.T.
Head Master

ಪ್ರಭುದೇವಾ ಥಿಯೇಟರ್
(ಚ ಡ್ಡಾ ಟಾ ಕೀ ಸ್)
8—9—55ರಿಂದ : ಗುರುವಾರದಿಂದ : ಆಶೋಕ ಕ್ಯಾರಕ್ಟರ್
ವಿಕ್ರಮ್‌ರವರ
ತಮಿಳು ಚಿತ್ರ
ಜೈ ಗೋ ಪಿ
ಪಾತ್ರ – ಜಗಯ್ಯ, ಜಿ ವರಲಕ್ಷ್ಮಿ, ರೇಲಂಗಿ, ಜಮುನಾ, ಮುಕ್ಕಾಮಲ ಮೊದಲಾದವರು

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಮೈಸೂರು ಸಿಲ್ಕು
ಧರ್ಮಾವರಂ, ಜಾರ್ಜೆಟ್,
ದಿಂಡಿಗಲ್, ಕೊಳ್ಳೇಗಾಲ
ಜರತಾರ್ ಸೀರೆಗಳು
ಒಂದಿಸಲ ಬಂದೀ ಭೇಟಿ ಕೊಡಿ
M.V. ಭೋಜಯ್ಯ
ಸಿ. ಎ. & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು

ಸಂಪುಟ : ೧೮] SADHVI WEDNESDAY 7-9-1955 ಮೈಸೂರು ಬುಧವಾರ ೭-೯-೧೯೫೫ [ಸಂಚಿಕೆ : ೨೬

ಮಹಾನದಿ ಪ್ರವಾಹದಲ್ಲಿ ೧೫೦ ಜನರು ಕೊಚ್ಚಲ್ಪಟ್ಟರು

ಮಹಾನದಿ ಪ್ರವಾಹದಲ್ಲಿ ... ಮಂದಿ ಕೊಚ್ಚಿಹೋದರು

...ಕ್ಷ ನಿರಾಶ್ರಿತರಿಗೆ ಸೈನ್ಯದ ನೆರವು

...ನಗಳಲ್ಲಿ ಜನರಿಗೆ ಆಹಾರ ಸರಬರಾಜು

...ಸ್ಸಾ ಪ್ರಾಂತದ ೧೬೦ ಮೈಲಿ ತೀರ ಪ್ರ...ಲ್ಲಿ ನೂರು ವರ್ಷಗಳಿಂದ ಇಲ್ಲದಂತಹ ಪ್ರ... ಒಂದು ೬ ಲಕ್ಷ ಜನರು ನೀರಿನಿಂದ ...ವರಿಯಲ್ಪಟ್ಟು ಕಂಗಪಿಸುತ್ತಿರುವರೆಂದು ...ಾಗಿದೆ ... ನದಿ ಮತ್ತು ಬ್ರಾಹ್ಮಣಿ ... ಅನೇಕ ಕಡೆ ದಡ ಒಡೆದು ಹರಿಯುತ್ತಿ...ದೂ, ಮಹಾನದಿ ... ಮಟ್ಟ ... ...ದೆಯೆಂದೂ, ೧೮೭೨ರಲ್ಲಿ ... ಅದ...ಂದೂ ಹೇಳಲಾಗಿದೆ ಇತರ ನದಿಗಳ...ವ ಮಟ್ಟವನ್ನು ಮುಟ್ಟಿವೆ ನದಿಗಳ ...ಲ್ಲಿ ... ಗಂಟೆಯೂ ...

...ನದಿಗೆ ... ಎಂಬಲ್ಲಿ ...ಘಾತ ... ಎಂಬುದನ್ನು ನದಿಯು ಒಡೆದು ... ಕಟಕ್ ಜಿಲ್ಲೆಗೆ ಪ್ರವಾಹವು ವ್ಯಾ...೧೫೦ ಜನರು ನೀರಿನಿಂದ ಕೊಚ್ಚಿಹೋ...ಮು ವರದಿಯಾಗಿದೆ ಸಹಸ್ರಾರು ಜನ...ಗಳ ಮತ್ತು ದಿಣ್ಣೆಗಳ ಮೇಲೆ ಆಶ್ರಯ...ತ್ತಾರೆ ... ಪ್ರವಾಹದ ...೦೦ ಹಳ್ಳಿಗಳಿಗೆ ವ್ಯಾಪಿಸಿ, ೬ ಲಕ್ಷ ...ಂಜನರಿಗೆ ಈಡಾಗಿರುವರು

...ಡೆಗಳಲ್ಲಿ ಜನರನ್ನು ರಕ್ಷಿಸಿ ಅವರಿಗೆ ಆ...ತ್ತು ಬಟ್ಟೆ ಒದಗಿಸುವಂತೆ ಸೈನ್ಯವನ್ನು ...ಲಾಗಿದೆ

...ತರಾವರಂಗ ವಿಮಾನಗಳಿಂದ ಆಹಾ...ರಬರಾಜು ಮಾಡಲು ಕ್ರಮ ಕೈಗೊಳ್ಳ... ...ಕ್ಕುಡ್ ಆಣೆಕಟ್ಟಿನ ಇಂಜನಿಯ...ವಾಹವನ್ನು ತಡೆಗಟ್ಟುವ ಕ್ರಮ ಕೈ...ಬಿಡಲಿರುವರು

...ಲಿಟರಿ ದೋಣಿಗಳೂ, ಪಶ್ಚಿಮ ಒಂ...ಿ ಮೋಟಾರು ದೋಣಿಗಳೂ ರಕ್ಷಣಾ ...ಕೈಗೊಳ್ಳುವುವು

ಸಿ. ಜಿ. ಬಗ್ಗೆ ವೈದ್ಯರ ...ಯಕ್ಕೆ ಪ್ರತಿಬಂಧಕವಿಲ್ಲ

...ಜಿ ವ್ಯಾಕ್ಸಿನೇಷನ್ನಿನ ಬಗ್ಗೆ ವೈದ್ಯ... ಅಭಿಪ್ರಾಯ ಸೂಚಿಸಲು ಅಡ್ಡಿಪಡಿಸಿ...ೂಚನೆಯನ್ನೂ ಹೊರಡಿಸಿಲ್ಲವೆಂದು ...ೋಗ್ಯ ಮಂತ್ರಿ ರಾಜಕುಮಾರಿ ಅ...ರವರು ತಿಳಿಸಿರುತ್ತಾರೆ. ವ್ಯಾಕ್ಸಿನೇಷ...ರಿಣಾಮಗಳ ಅಭ್ಯಾಸದ ಬಗ್ಗೆ ತನಿಖೆ...ರುವುವೆಂದೂ, ಅವುಗಳಿಗೆ ಆಧಾರವೇ... ಅವರು ಹೇಳಿರುವರು

ಜೂ ಜ ಕ ಪ ತ್ತೆ

...ಪೇಟೆ ಮೈಸೂರು ಆನಂದ ಭವನದ ... ಜೂಜಾಡುತ್ತಿದ್ದ ಚಿಕ್ಕೇಗೌಡ, ಬು... ಮತ್ತು ವೆಂಕಟಸ್ವಾಮಿ ಎಂಬುವರ...ಸಿನವರು ಬಂಧಿಸಿ, ಸ್ಥಳದಲ್ಲಿ ದೊರೆತ ...ಳನ್ನು ವಶಪಡಿಸಿಕೊಂಡು ಮೊಕದ್ದ...ು ಮಾಡಿಕೊಂಡಿರುವರು.

ಪಂಡಿತ ನೆಹರೂ

ಈ ದಿನ ಭಾರತರಕ್ಷ ಎಂಬ ರಾಷ್ಟ್ರದ ಅಕ್ಕಾಂಕ ಹಿಂದಿ... ಪ್ರತಿಷ್ಠೆಯನ್ನು ... ನವರಿಗೆ ಸಮರ್ಪಿಸುವರು

ಹೈದರಾಬಾದಿನ ವಿಭಜನೆ ಉಚಿತ

ಕನ್ನಡ ಭಾಗಗಳು ಮೈಸೂರಿಗೆ ಸೇರುವುವೆಂದು ಆಂಧ್ರ ಮುಖ್ಯಮಂತ್ರಿ ಹೇಳಿಕೆ

ಹೈದರಾಬಾದು ಸಂಸ್ಥಾನವನ್ನು ವಿಭಜಿಸುವುದು ಉಚಿತವೆಂದು ಆಂಧ್ರ ಸಂಸ್ಥಾನದ ಮುಖ್ಯಮಂತ್ರಿ ಬಿ. ಗೋಪಾಲರೆಡ್ಡಿಯವರು ತಿಳಿಸಿರುತ್ತಾರೆ ವಿಭಜನೆಯಾದನಂತರ ಮರಾಠಾವಾಡಿಯನ್ನು ಬೊಂಬಾಯಿ ಸಂಸ್ಥಾನಕ್ಕೂ, ಕನ್ನಡ ಭಾಗಗಳನ್ನು ಮೈಸೂರಿಗೂ ಸೇರಿಸಲಾಗುವುದೆಂದು ಅವರು ಹೇಳಿರುವರು ಉಳಿದ ತೆಲುಗು ವಿಭಾಗವು ಹಾಗೆಯೇ ಪ್ರತ್ಯೇಕ ಸಂಸ್ಥಾನವಾಗಿ ಉಳಿಯುವುದೆಂದೂ, ಎರಡು ತೆಲುಗು ಸಂಸ್ಥಾನಗಳು ಇರುವುದು ಸಂಭವನೀಯವೆಂದೂ ಅವರು ತಿಳಿಸಿರುವರು. ಭಾರತದಲ್ಲಿ ಒಟ್ಟು ೧೫ ಅಥವಾ ೧೬ ಸಂಸ್ಥಾನಗಳಿರುವಂತೆ ಪುನರ್ರಚನಾ ಸಮಿತಿಯವರು ಶಿಫಾರಸು ಮಾಡಬಹುದೆಂದೂ ಅವರು ಹೇಳಿರುವರು ಮಹಾ ಆಂಧ್ರವಾದಿಗಳಂತೆ ತೆಲಂಗಾಣ ಹೈದರಾಬಾದು ಸಂಸ್ಥಾನವು ಪ್ರತ್ಯೇಕವಾಗಿರಬೇಕೇ ಅಥವಾ ಆಂಧ್ರದೊಡನೆ ಸೇರಬೇಕೇ ಎಂಬ ವಿಷಯವನ್ನು ಅಲ್ಲಿನ ಶಾಸನ ಸಭೆಯ ಅಭಿಮತಕ್ಕೆ ಬಿಡಲಾಗುವುದೆಂದೂ ಗೋಪಾಲರೆಡ್ಡಿಯವರು ಹೇಳಿರುವರು

ಮೈಸೂರು ವಿಶ್ವವಿದ್ಯಾಲಯಕ್ಕೆ ಕೇಂದ್ರದಿಂದ ೧ ಲಕ್ಷ ರೂ.

ಪ್ರಸಕ್ತ ಸಾಲಿನಲ್ಲಿ ೧೩ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದವರು ಒಟ್ಟು ೧೬,೪೮,೫೦೫ ರೂ ಗಳ ಧನ ಸಹಾಯ ಮಾಡಿರುವರೆಂದೂ, ಮೈಸೂರು ವಿಶ್ವವಿದ್ಯಾಲಯಕ್ಕೆ ೧,೦೧,೦೦೦ ರೂ ಮತ್ತು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೮೦ ಸಾವಿರ ರೂ. ಗಳನ್ನು ಕೊಡಲಾಗಿದೆಯೆಂದೂ ಗೊತ್ತಾಗಿದೆ

ಗೋವಾದಲ್ಲಿ ಪೋರ್ಚುಗೀಸರ ಆಧಿಪತ್ಯ ಕೊನೆಗಾಣಲೇಬೇಕು

ಭಾರತದಲ್ಲಿ ವಿದೇಶೀ ಆಸ್ತಿಕೆ ಇರಕೂಡದೆಂದು ನೆಹರೂ ಹೇಳಿಕೆ

ಗೋವಾದಲ್ಲಿ ಪೋರ್ಚುಗೀಸರ ಆಧಿಪತ್ಯವು ಕೊನೆಗಾಣಬೇಕು ... ... ಪ್ರಧಾನಿ ನೆಹರೂರವರು ರಾಜ್ಯ ಸಭೆಯಲ್ಲಿ ತಿಳಿಸಿದರು ... ... ಗೋವಾ ಒಪ್ಪಂದ ... ... ಭಾರತೀಯರು ... ... ಭಾರತೀಯರು ಒಪ್ಪುವುದಿಲ್ಲವೆಂದೂ ಅವರು ಹೇಳಿರುವರು

... ... ಸಮಸ್ಯೆ ... ಯಾಗಲಿ, ವೈಯಕ್ತಿಕವಾಗಿಯಾಗಲಿ ಸತ್ಯಾಗ್ರಹವು ಸರಿಯಲ್ಲವೆಂದೂ, ... ಗೋವಾ ... ... ನೆಹರೂರವರು ... ... ಗೋವಾ ಸಮಸ್ಯೆಯು ... ... ಭಾರತ ಸರ್ಕಾರದವರು ... ... ಸರ್ಕಾರದ ಮೇಲೆ ಸತ್ಯಾಗ್ರಹ ಮಾಡುವಂತಿಲ್ಲವೆಂದೂ ... ... ವರು

೨೦೦ ಮಹಿಳೆಯರೊಡನೆ ಸುಭದ್ರಾಬಾಯಿಯವರ ಸತ್ಯಾಗ್ರಹ

ಆಗಸ್ಟ್ ೧೫ ರಂದು ಗೋವವನ್ನು ಪ್ರವೇಶಿಸಿ ... ... ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸುಭದ್ರಾ ಬಾಯಿಯವರು ಮತ್ತೆ ಅಕ್ಟೋಬರ್ ... ರಂದು ಗಾಂಧಿ ಜಯಂತಿ ದಿನ ೨೦೦ ಮಹಿಳೆಯರೊಡನೆ ಗೋವವನ್ನು ಪ್ರವೇಶಿಸಿ ಸತ್ಯಾಗ್ರಹ ನಡೆಸುವುದಾಗಿ ತಿಳಿಸಿರುವರು.

ಪ್ರಾದೇಶಿಕ ಸ್ಕೌಟುಗಳ ಸಮ್ಮೇಳನ

ಸಿರಿಯಾಪಟ್ಟಣದ ಸ್ಕೌಟ್ ಸಮಿತಿಯ ಆಶ್ರಯದಲ್ಲಿ ಒದುವ ೧೧ರ ... ... ಭಾನುವಾರ ಸಂಜೆ ೫ ಗಂಟೆಗೆ ಪ್ರಾದೇಶಿಕ ಸ್ಕೌಟ್ ಸಮ್ಮೇಳನವು ಸಂಸ್ಥಾನದ ಚೀಫ್ ಸ್ಕೌಟ್ ಕಮಿಷನರರಾದ ಶ್ರೀ ಕೆ. ಬಿ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರುವುದು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರಯ್ಯನವರು ಆರಂಭೋತ್ಸವವನ್ನು ನಡೆಸುವರು. ವಿಧಾನ ಸಭಾ ಸದಸ್ಯರಾದ ಶ್ರೀ ಡಿ ದೇವರಾಜ ಅರಸ್ ರವರು ಪಾರಿತೋಷಕಗಳನ್ನು ವಿತರಿಸುವರು.

ಗೆಸ್ಟ್ ಕ್ವಾರ್ಟರ್ಸಿನಲ್ಲಿ ಕಳವು

ಇಂಡಿಯನ್ ಗೆಸ್ಟ್ ಕ್ವಾರ್ಟರ್ಸಿನ ಒನೇ ನಂಬರು ರೂಮಿಗೆ ನೆನ್ನೆ ಮಧ್ಯಾಹ್ನ ಯಾರೋ ನುಗ್ಗಿ ಅಲ್ಲಿ ವಾಸಿಸುತ್ತಿದ್ದ ಯು ಬಿ ರಾಮಚಂದ್ರ ಎಂಬುವರಿಗೆ ಸೇರಿದ ಟ್ರಂಕನ್ನು ಮುರಿದು ೧೫೫ ರೂ. ಬಾಳುವ ಬಟ್ಟೆ ಮತ್ತು ನಗವನ್ನು ಅಪಹರಿಸಿರುವರೆಂದು ವರದಿಯಾಗಿದೆ.

ತಂದೆತಾಯಿಗಳ ಒಪ್ಪಿಗೆ ಪಡೆದು ವ್ಯಾಕ್ಸಿನೇಷನ್ ಹಾಕಬೇಕು

ಪೌರಸಭೆಯಲ್ಲಿ ಚರ್ಚೆ

ಮೈಸೂರು ೭

ನಗರದ ... ಗಳಲ್ಲಿ ಮಕ್ಕಳಿಗೆ ವ್ಯಾಕ್ಸಿನೇಷನ್ ಹಾಕುವ ವಿಷಯವು ಮೊನ್ನೆ ಪೌರಸಭೆಯಲ್ಲಿ ... ಗೆ ಒಂದಿತ್ತು ಶ್ರೀಗಳಾದ ಎಂ ಎನ್ ... ... ಕೆ ಸಿದ್ದಯ್ಯ, ಎಂ. ಕೆ ಲಿಂಗಯ್ಯ, ... ಮತ್ತು ಎಸ್ ಗೋವಿಂದಯ್ಯನವರು ಮಾತನಾಡಿ, ವ್ಯಾಕ್ಸಿನೇಷನ್ ಕ್ರಮ ಕೈಗೊಳ್ಳುವ ಮುಂಚೆ ಮಾತಾಪಿತೃಗಳಿಗೆ ಪೂರ್ವಭಾವಿ ತಿಳುವಳಿಕೆ ಕೊಡುವುದು ಅಗತ್ಯವೆಂದು ತಿಳಿಸಿದರು ಈ ವಿಚಾರವನ್ನು ಕುರಿತು ಆರೋಗ್ಯ ಮಂತ್ರಿಗಳೊಡನೆ ಚರ್ಚಿಸುವುದಾಗಿ ಅಧ್ಯಕ್ಷರು ಉತ್ತರವಿತ್ತರು

ಸುಬ್ಬರಾಯನ ಕೆರೆ ಮೈದಾನದಲ್ಲಿ ಗುಬ್ಬಿ ಕಂಪೆನಿಯವರು ನಾಟಕಗಳನ್ನು ಅಭಿನಯಿಸಲು ಮಾಹೆಯಾನಾ ೫೦೦ ರೂ ಬಾಡಿಗೆ ಮೇಲೆ ... ಸ್ಥಳವನ್ನು ಕೊಡಬಹುದೆಂದು ಸಭೆಯು ನಿರ್ಧರಿಸಿತು

ನಗರದಲ್ಲಿ ಡಿಫ್ತೀರಿಯಾ ರೋಗವು ಹೆಚ್ಚಿ, ಅದು ಮಕ್ಕಳಿಗೆ ಹರಡಿದ ವಿಷಯವನ್ನು ಸಭೆಯು ಪರಿಶೀಲಿಸಿ, ನಿವಾರಣೆ ಕ್ರಮಕ್ಕಾಗಿ ಒಬ್ಬ ವೈದ್ಯರನ್ನು ನೇಮಿಸಲು ತೀರ್ಮಾನಿಸಲಾಯಿತು

ಸೈಕಲ್ ಕಳ್ಳನ ಬಂಧನ

ಮಧ್ವಾಚಾರ್ ರಸ್ತೆಯಲ್ಲಿರುವ ಪೌರಸಭಾ ಸದಸ್ಯರಾದ ಶ್ರೀ ಕೆ ... ... ನವರ ಅಂಗಡಿಯಿಂದ ಸೈಕಲ್ಲನ್ನು ತೆಗೆದುಕೊಂಡು ಅದರ ಡೈನಮೊ ಮತ್ತು ಬೆಲ್ಲನ್ನು ಕಳಚಿ ಸೈಕಲ್ ಸ್ಟೀಂನ್ನು ... ಬಿಟ್ಟು ... ... ಮುಕ್ಕು... ಎಂಬುವನನ್ನು ಪೋಲೀಸಿನವರು ಪತ್ತೆ ಹಚ್ಚಿ ಬೈಸಿಕಲ್ಲನ್ನು ವಶಪಡಿಸಿಕೊಂಡು ಆತನ ಮೇಲೆ ಕ್ರಮ ಜರುಗಿಸುತ್ತಿದ್ದಾರೆ

೧ಸಂಸ್ಥಾನದಲ್ಲಿ ರೆವಿನ್ಯೂ ಬೋರ್ಡು ... ... ಸ್ಥಾಪಿತವಾಗಲಿರುವುದು ರೆವಿನ್ಯೂ ಕಮೀಷನರ್ ಶ್ರೀ ಜಿ. ಎಲ್. ನಾಗರಾಜರಾಯರನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಶಿವಮೊಗ್ಗ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಬಿ ಜಿ ಕೋಸಲರಾಂ, ಎಕ್ಸೈಜು ಕಮಿಷನರ್ ಮತ್ತು ಸ್ಥಳೀಯ ಸಂಸ್ಥೆ ... ... ಕಮಿಷನರುಗಳು ಸದಸ್ಯರಾಗಿರುವರು

ಸಂಸ್ಥಾನದ ಮಂತ್ರಿಗಳಿಗೆ ರಾಮನಗರದಲ್ಲಿ ಸನ್ಮಾನ

೪೮ ತೇರಿನ ಎತ್ತಿನ ಗಾಡಿಗಳ ರಥದಲ್ಲಿ ಮೆರವಣಿಗೆ

ರಾಮನಗರದ ಪೌರಸಭೆಯವರು ಮತ್ತು ತಾಲ್ಲೂಕಿನ ಪ್ರಮುಖರ ಸ್ವಾಗತ ಸಮಿತಿಯವರು ನಾಳೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ ಮತ್ತು ಅವರ ಸಹೋದ್ಯೋಗಿ ಮಂತ್ರಿಗಳ ಗೌರವಾರ್ಥವಾಗಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿರುವರು ನಾಳೆ ಸಚಿವರುಗಳನ್ನು ೪೮ ಜೋಡಿ ಎತ್ತುಗಳನ್ನು ಕಟ್ಟಿರುವ ಅಲಂಕೃತ ರಥದಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಗುವುದು

ವಿವಿಧ ಅಪರಾಧಗಳಿಗೆ ಶಿಕ್ಷೆ

ಮೈಸೂರು ೭

ಗಣೇಶ ಚಿತ್ರ ಮಂದಿರದಲ್ಲಿ ಘೂಮಪಾನ ಮಾಡುತ್ತಿದ್ದುದಕ್ಕಾಗಿ ಒರ್ಬೇಸ್, ರಾಜಗೋಪಾಲ್, ಸಬಾಸ್ಟಿನ್, ನಾರಾಯಣಸ್ವಾಮಿ ಮತ್ತು ಲಿಂಗಯ್ಯನವರಿಗೆ ತಲಾ ೨ ರೂ, ಅಂಗಡಿಯಲ್ಲಿ ಪ್ರಯಾಣಿಕರನ್ನು ಕೂಡಿಸಿದುದಕ್ಕಾಗಿ ಡ್ರೈವರ್ ಶಿವರಾಮದಾಸ್ ಎಂಬುವನಿಗೆ ೧೦ ರೂ ಮೋಟಾರ್ ಅಪರಾಧದಲ್ಲಿ ಅಪರಾಧ ಮಾಡಿದುದಕ್ಕಾಗಿ ಶಿವಣ್ಣ ಮತ್ತು ಸಿದ್ದಯ್ಯ ಎಂಬುವರಿಗೆ ತಲಾ ೩ ರೂ ಜುಲ್ಮಾನೆಯನ್ನು ಮೊನ್ನೆ ನಗರ ನ್ಯಾಯಾಧೀಶರು ವಿಧಿಸಿದರು

ಸೈಕಲ್‌ನಲ್ಲಿ ಡಬ್ಬಲ್ ರೈಡಿಂಗ್ ಮಾಡಿದುದಕ್ಕಾಗಿ ರಮಸ್ವಾಮಿ ಎಂಬಾತನಿಗೆ ೩ ರೂ, ದೀಪವಿಲ್ಲದೆ ಸೈಕಲ್ ಓಡಿಸಿದುದಕ್ಕಾಗಿ ೩ ಸುಬ್ಬರಾಯಪ್ಪ ಎಂಬಾತನಿಗೆ ೩ ರೂ ಮತ್ತು ಮೋಟಾರ್ ಅಪರಾಧದಲ್ಲಿ ಅಪರಾಧ ಮಾಡಿದುದಕ್ಕಾಗಿ ಸುಬ್ಬೇಗೌಡನಿಗೆ ೫ ರೂ; ಚನ್ನಪ್ಪನಿಗೆ ೩ ಮತ್ತು ಸೋಮಶೇಖರ್, ಮಾದಪ್ಪ, ಮರಿಸ್ವಾಮಿ, ಲಕ್ಷ್ಮಯ್ಯ ಮತ್ತು ನರಸಯ್ಯ ಎಂಬುವರಿಗೆ ತಲಾ ೩ ರೂ ಜುಲ್ಮಾನೆಯನ್ನು ನಿನ್ನೆ ಮೊದಲಾದ ಲಕ್ಷ್ಮೀಪುರಂ ಪೋಲೀಸರು ಮೊಕದ್ದಮೆ ಗಳನ್ನು ಹೂಡಿದ್ದರು

ಅನೀತಿ ವ್ಯಾಪಾರಕ್ಕೆ ಶಿಕ್ಷೆ ವಿರುದ್ಧ ಅಪೀಲು ವಜಾ

[illegible] ಎಂಬುವನಿಗೆ ೪೦ ರೂ ಜುಲ್ಮಾನೆ ಯನ್ನು ಅನೀತಿ ವ್ಯಾಪಾರಕ್ಕಾಗಿ [illegible] ನ್ಯಾಯಾಲಯಕ್ಕೆ ಕರೆದುಕೊಂಡು [illegible] ವಿರುದ್ಧವಾಗಿ ಹೂಡಿದ್ದ ಅಪೀಲನ್ನು ಮೊನ್ನೆ [illegible] ನ್ಯಾಯಾಧೀಶರು ವಜಾ ಮಾಡಿ ಶಿಕ್ಷೆಯನ್ನು ಖಾಯಂ ಮಾಡಿರುವರು.

ಶಿವಾನಂದ ಸರಸ್ವತಿಯವರ ಜನ್ಮ ದಿನೋತ್ಸವ

ಹಿಮಾಲಯ ಋಷಿಕೇಶದಲ್ಲಿರುವ ದಿವ್ಯ ಜೀವನ ಸಂಘದ ಮೈಸೂರು ಶಾಖೆಯ ಆಶ್ರಯದಲ್ಲಿ ಸಂಘದ ಸ್ಥಾಪಕರಾದ ಶ್ರೀ ಸ್ವಾಮಿ ಶಿವಾನಂದ ಸರಸ್ವತಿಯವರ ೬೯ನೇ ಜನ್ಮ ದಿನೋತ್ಸವವು ನಾಳೆ ಸಂಜೆ ೬ ಗಂಟೆಗೆ ಶ್ರೀ ಲೋಕನಾಥ ಮಂದಿರದಲ್ಲಿ ನೆರವೇರುವುದು ಶ್ರೀಮಾನ್ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಶ್ರೀ ಬಿ ಗುರುಮೂರ್ತಿ ಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು ಶ್ರೀಗಳಾದ ಬಿ ವೆಂಕಟರಾಮು ಎಸ್ ಅನಂತನಾರಾಯಣ ಮತ್ತು ಎನ್. ಸತ್ಯನಾರಾಯಣ ಭಾಷಣಗಳು ನಡೆಯುವುವು ಸರ್ವರಿಗೂ ಸ್ವಾಗತವಿದೆ

ಎಜುಕೇಷನ್ ಇನ್ಸ್ಟಿಟ್ಯೂಟು ಸಂಘದ ಚುನಾವಣೆ

ರಾಜಧಾನಿಯ ಎಜುಕೇಷನ್ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿ ಚುನಾವಣೆಯು ನೆನ್ನೆ ನಡೆದು ಶ್ರೀ ಎಸ್. ಶ್ರೀನಿವಾಸನವರು ಅಧ್ಯಕ್ಷರಾಗಿಯೂ, ಶ್ರೀಮತಿ ಸಿ ಆರ್ ಶ್ರೀರಂಗರವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ರಾಮಚಂದ್ರರವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು ಶ್ರೀಮತಿಯರಾದ ವಿ ಟಿ ಕೆ ಸುಧಿ ಮತ್ತು ಕಲಾವತಿ ಡೋರಾ, ಶ್ರೀಗಳಾದ ಶಿವರಾಂ ಪಾಷ ಆರ್, ಲಕ್ಷ್ಮೀನಾರಾಯಣ ಮತ್ತು ಎಚ್ ಎಸ್ ವೆಂಕಟರಾಯರು ಸದಸ್ಯರುಗಳಾಗಿ ಚುನಾಯಿತರಾದರು ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಸಿದ್ದಲಿಂಗಯ್ಯನವರು ಪೆಟ್ರನ್ ಆಗಿರುವರು ಪ್ರೊ|| ಎಸ್ ಸುಂದರರವರು ಉಪಾಧ್ಯಾಯರ ಪರ ಸಮಿತಿ ಸದಸ್ಯರಾಗಿರುತ್ತಾರೆ

ಕೋಟೆಯಲ್ಲಿ ಕೃಷ್ಣೋತ್ಸವ

ಬರುವ ಶನಿವಾರದಿಂದ ೧೭ನೇ ತಾರೀಕು ವರೆಗೆ ನಿತ್ಯವೂ ಸಂಜೆ ೫|| ಗಂಟೆಗೆ ಕೋಟೆಯ ನಾಲ್ಕು ಬೀದಿಗಳಲ್ಲೂ ಗೋವುಗಳ ಸಮೇತ ದೇವರ ಉತ್ಸವವು ನಡೆಯುವುದು ಉರಿಯಡಿ, ಪೂತನೀ ಸಂಹಾರ, ಶಕಟಾಸುರ ಸಂಹಾರ, ಬಕಾಸುರ ವಧೆ, ಯಮಳಾರ್ಜುನ ಭಂಜನೋತ್ಸವ, ರಾಸಕ್ರೀಡೆ, ಮಲ್ಲಯುದ್ಧ ಮತ್ತು ರಾಸಕ್ರೀಡೆ ಮತ್ತು ಕಾಮಧೇನು ಅಲಂಕಾರದ ಉತ್ಸವಗಳು ಕ್ರಮವಾಗಿ ನಡೆಯುವುವು

ಪೋಲೀಸರ ಮೇಲೆ ಕೈಮಾಡಿದುದಕ್ಕೆ ೧ ತಿಂಗಳು ಸಜಾ

ಮೈಸೂರು ೬

ನಜರ್‌ಬಾದ್ ನಿವಾಸಿ ಅಪ್ಪಯ್ಯ ಉರುಫ್ ಗುರಯ್ಯ ಎಂಬಾತನು ಕಳೆದ ಡಿಸೆಂಬರಿನಲ್ಲಿ ಟ್ರಾಫಿಕ್ ಪೊಲೀಸ್ ಬಳಿ ಡ್ಯೂಟಿ ಮೇಲಿದ್ದ ಮೂವರು ಪೋಲೀಸರನ್ನು ಹೊಡೆದನೆಂದು ಅವನಿಗೆ ನೆನ್ನೆ ನಗರದ ೧ನೇ ನ್ಯಾಯಾಧೀಶರು ೧ ತಿಂಗಳು ಕಠಿಣ ಸಜಾ ವಿಧಿಸಿದರು

ಕಸ್ತೂರಿ ವಿಷದ ಪ್ರಯೋಗಕ್ಕಾಗಿ ಸೆಷನ್ಸ್ ವಿಚಾರಣೆಗೆ ಗುರಿ

ಶ್ರೀರಂಗಪಟ್ಟಣದ ತಾಲ್ಲೂಕು ಹೊಸೂರು ಗ್ರಾಮದ ಬಸವ ಉರುಫ್ ಬಸವಯ್ಯ ಎಂಬುವನು ಆ ಗ್ರಾಮದ ಚನ್ನವೀರ ಚಾರಿ ಎಂಬುವರಿಗೆ ಕಳೆದ ಜನವರಿಯಲ್ಲಿ ಕಸ್ತೂರಿ ವಿಷ ಬೆರೆತ ರಸಾಯನವನ್ನು ಕೊಟ್ಟನೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಗಂಡುಗಲಿ ಕುಮಾರ ರಾಮ

ಇತಿಹಾಸ ಸಂಶೋಧನೆಯಲ್ಲಿ ಸುಪ್ರಸಿದ್ಧರಾಗಿರುವ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರಿಂದ ರಚಿತವಾಗಿ ಎರಡನೇ ಸಲ ರಸಿಕ ರಂಜಿನಿ ಪ್ರಕಟನವರಿಂದ ಪ್ರಕಟಿಸಲ್ಪಟ್ಟಿರುವ "ಗಂಡುಗಲಿ ಕುಮಾರ ರಾಮ" ಎಂಬ ಐತಿಹಾಸಿಕ ಕಾದಂಬರಿಯ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸುತ್ತೇವೆ ೧೩ನೇ ಶತಮಾನದಲ್ಲಿ ಕರ್ನಾಟಕದಲ್ಲಿ ರಾಜ್ಯಭಾರ ಮಾಡುತ್ತಿದ್ದ ವೀರ ಕಂಪಿಲ ದೇವರಾಯನೆಂಬ ರಾಜನ ಮಗನಾದ ಕುಮಾರ ರಾಮನು ಕೇವಲ ೨೦ ವರ್ಷ ವಯಸ್ಸಿನವನಾಗಿದ್ದಾಗಲೇ ತನ್ನ ಪರಾಕ್ರಮದಿಂದ ಅನೇಕ ರಾಜರುಗಳನ್ನು ಸೋಲಿಸಿ ಕೀರ್ತಿಗಳಿಸಿದ ಇತಿಹಾಸವನ್ನು ಶ್ರೀ ಜೋಯಿಸರು ಸ್ವಾರಸ್ಯವಾಗಿ ವಿವರಿಸಿದ್ದಾರೆ ಕರ್ನಾಟಕ ರಾಜ್ಯದ ಗತ ವೈಭವ ಮತ್ತು ಹಿರಿಮೆಯನ್ನು ತಿಳಿಯ ಬಯಸುವವರೆಲ್ಲರೂ ಓದಬೇಕಾದ ಗ್ರಂಥವು ಇದರ ಬೆಲೆ ಒಂದು ರೂ ಪ್ರತಿಗಳು ನ್ಯೂಸ್ ಪೇಪರ್ ಹೌಸ್‌ನವರಲ್ಲಿ ದೊರೆಯುತ್ತವೆ

ಖಡ್ಗವಾಗಲೀ, ಬಂದೂಕವಾಗಲೀ ಗುರಿ ತಪ್ಪಬಹುದು!

ಸೂರ್ಯನು ಪಶ್ಚಿಮದಲ್ಲಿ ಉದಯಿಸಬಹುದು

ಆದರೆ

ಡಾ|| ರಾನಾ ರವರ

ಒಂದು ವಾರದ ಅವಧಿಯ

ನೂತನ ಮತ್ತು ಅದ್ಭುತ ಚಿಕಿತ್ಸೆಯು

ನಿಮ್ಮ ಖಾಯಿಲೆಗಳೆಲ್ಲವನ್ನು ಪರಿಪೂರ್ಣವಾಗಿ ಗುಣಪಡಿಸಲು ತಪ್ಪುವುದಿಲ್ಲ

ಅಲ್ಲದೆ ಹೊಸ ತಾರುಣ್ಯ, ಅಮೃತ ಶಕ್ತಿ ಮತ್ತು ಆನಂದದ ಆರೋಗ್ಯ ಹೊಂದಲು ಈ ಪ್ರಖ್ಯಾತ ವೈದ್ಯರ ಪ್ರತಿಭೆಯನ್ನು ಭೇಟಿ ಮಾಡಿರಿ

ಡಾ|| ಎ. ವಿ. ರಾನಾ

ಅವರ 40 ವರ್ಷಗಳ ಚಿಕಿತ್ಸಾ ಅನುಭವವು ನಿಮ್ಮ ಶೀಲ, ಆರೋಗ್ಯ ಮತ್ತು ಹಣವನ್ನು ಉಳಿತಾಯ ಮಾಡಿಕೊಡುತ್ತದೆ ಮತ್ತು ನಿಮ್ಮನ್ನು ವಾಕ್ಚರು, ವೈದ್ಯರು ಮತ್ತು ನಕಲಿಗಳು ಹಣ ವ್ಯಯ ಮಾಡುವುದರಿಂದ ತಪ್ಪಿಸುತ್ತದೆ

ಭೇಟಿಯ ಕಾಲ: ಬೆಳಿಗ್ಗೆ 8 ರಿಂದ 12
ಸಂಜೆ 4 ರಿಂದ 8

ರಾನಾ ಮೆಡಿಕಲ್ ಹಾಲ್,

ಎಲ್ ನಂ 1-747 ಅಶೋಕ ರಸ್ತೆ, ಮೈಸೂರು (ಮೈಸೂರು ಬ್ಯಾಂಕ್ ಬಳಿ ಬಲಗಡೆ ಬಾಗದಿಂದ 3ನೇ ಕಟ್ಟಡ).

ಗಾಜಾದಲ್ಲಿ ಕದನಸ್ತಂಭನದ ಉಲ್ಲಂಘನೆ: ಇಸ್ರೇಲಿನ ವಿಷಾದ

ಗಾಜಾ ಪ್ರದೇಶದಲ್ಲಿ ಕದನ ಸ್ತಂಭನವಾದ ಏಳು ಗಂಟೆಗಳಲ್ಲಿ ಇಸ್ರೇಲು ಅದನ್ನು ಉಲ್ಲಂಘಿಸಿ, ಈಜಿಪ್ಟಿನವರ ಸೈನ್ಯಗಳ ಮೇಲೆ ಗುಂಡು ಹಾರಿಸಿದುದಾಗಿ ಈಜಿಪ್ಟಿನವರು ಆಕ್ಷೇಪಿಸಿದ್ದುದಾಗಿಯೂ, ಈ ಬಗ್ಗೆ ಇಸ್ರೇಲು ಕ್ಷಮಾಪಣೆ ಸೂಚಿಸಿರುವುದಾಗಿಯೂ ವರದಿಯಾಗಿದೆ ಘರ್ಷಣೆಯ ಪರಿಣಾಮವಾಗಿ ನಾಲ್ವರು ಇಸ್ರೇಲಿಗರು ಮಡಿದರೆಂದು ಹೇಳಲಾಗಿದೆ. ಈಜಿಪ್ಟಿನವರ ಕಡೆ ನಷ್ಟವೇನೂ ಆಗಿಲ್ಲ.

ಬೆಂಗಳೂರು ವಿದ್ಯುಚ್ಛಕ್ತಿ ಶಾಖಾ ಕಛೇರಿಯಲ್ಲಿ ಕಳುವು

ಬೆಂಗಳೂರು ದಂಡಿನಲ್ಲಿರುವ ವಿದ್ಯುಚ್ಛಕ್ತಿ ಶಾಖಾ ಕಛೇರಿಯಲ್ಲಿ ಮೊನ್ನೆ ರಾತ್ರಿ ಕಳ್ಳತನ ನಡೆದು, ಕಬ್ಬಿಣದ ಪೆಟ್ಟಿಗೆಯನ್ನು ಒಡೆದು ೪,೦೦೦ ರೂ. ಗಳನ್ನು ಅಪಹರಿಸಲಾಯಿತೆಂದು ವರದಿಯಾಗಿದೆ ಗುಮಾಸ್ತೆ ನಾಯ್ಡು ಮತ್ತು ಕ್ಯಾಷಿಯರ್ ಚಿಕ್ಕಣ್ಣ ಎಂಬುವರನ್ನು ಈ ಸಂಬಂಧವಾಗಿ ಬಂಧಿಸಲಾಗಿದೆ. ಚಿಕ್ಕಣ್ಣನಿಂದ ೩,೩೦೦ ರೂ ಮತ್ತು ನಾಯ್ಡುವಿನಿಂದ ಸ್ವಲ್ಪ ಹಣವನ್ನು ವಶಪಡಿಸಿಕೊಳ್ಳಲಾಗಿದೆ ಕಳ್ಳತನ ಮಾಡಿದವರು ಗವಾಕ್ಷಿಕ್ಕೆ ಹಗ್ಗದ ಏಣಿ ಕಟ್ಟಿ ಒಳಕ್ಕೆ ಪ್ರವೇಶಿಸಿದರೆಂದು ಹೇಳಲಾಗಿದೆ.

ರಾತ್ರಿ ಹೊತ್ತು ಮನೆ ಬಾಗಿಲು ತಟ್ಟುವವರಿಂದ ಭೀತಿ

ಇತ್ತೀಚೆಗೆ ನಗರದಲ್ಲಿ ಹಲವು ಅಪರಿಚಿತರು ಮಧ್ಯ ರಾತ್ರಿ ಹೊತ್ತು ಅವೇಳೆಯಲ್ಲಿ ಮನೆಗಳಿಗೆ ಬಂದು ಮನೆಯವರ ಹೆಸರನ್ನು ಕೂಗುವುದು, ಅವರ ಕಡೆಯವರಿಗೆ ಅಪಾಯವಾಗಿರುವುದೆಂದು ತಿಳಿಸಿ, ಮನೆಯವರು ಬರಬೇಕೆಂದು ಹೇಳುವುದು ಮತ್ತು ಇತರ ಕಾರಣಗಳನ್ನು ಸೂಚಿಸಿ ಬಾಗಿಲನ್ನು ತೆಗೆಯುವಂತೆ ಮಾಡಿ ಜನರನ್ನು ಭೀತಿಗೊಳಿಸುತ್ತಿರುವರೆಂದೂ, ಈ ಬಗ್ಗೆ ಸಾರ್ವಜನಿಕರೂ, ಪೋಲೀಸಿನವರೂ ಎಚ್ಚರಿಕೆ ವಹಿಸಬೇಕೆಂದೂ ಶ್ರೀ ಎಂ ಪಿ ನರಸಿಂಹಯ್ಯನವರು ತಿಳಿಸಿರುತ್ತಾರೆ

SREE GANESH TALKIES

BLACK SHIELD OF FALWORTH

Extended for Another Two Days 8th and 9th

GALA RELEASE ON 10.9.55

THE LONG GRAY LINE

(Cinemascope—Technicolor)

Starring Tyrone Power and Maureen O'Hara

Edited, Printed and Published by A. R. Nagarajan at Sadhvi Press, D. Subbiah Road, Mysore

ಫುಟ್‌ಬಾಲ್ ಆಟದ ಜಗಳದಲ್ಲಿ ಬಾಲಕನ ಮರಣ

ಜಯಪುರದ ಬಳಿ ಕೋಟಾದಲ್ಲಿ ಕಳೆದ ವ್ಯಾರ ನಡೆದ ಫುಟ್‌ಬಾಲ್ ಪಂದ್ಯದ ಸಂಬಂಧವಾಗಿ ಮೂರನೇ ದಿನ ಎರಡು ಗುಂಪುಗಳಿಗೆ ಘರ್ಷಣೆಯಾಗಿ ಒಬ್ಬ ಬಾಲಕನು ಪೆಟ್ಟು ತಿಂದು ಮೃತಪಟ್ಟನೆಂದು ಗೊತ್ತಾಗಿದೆ ಅವನ ಅಂತ್ಯಕ್ರಿಯೆ ನಡೆಸಲು ಮರವಣಿಗೆ ಹೊರಟಾಯಿತೆಂದೂ, ನಂತರ ಕೋಮುವಾರು ಸೂಚಕವಾದ ಹಲವು ಘಟನೆಗಳು ನಡೆದು ೯ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ. ಹಲವು ಕೈಗಾಡಿಗಳನ್ನು ಸುಟ್ಟುಹಾಕಲಾಗಿದೆ. ಮೆರವಣಿಗೆಯ ಮೇಲೆ ಕಲ್ಲು ತೂರಲಾಯಿತು. ನಗರದಲ್ಲಿ ಪ್ರತಿಬಂಧಕಾಜ್ಞೆ ಮತ್ತು ಕರ್ಫ್ಯೂವನ್ನು ವಿಧಿಸಲಾಗಿದೆ.

ಹಾಲಿವುಡ್ ನಟಿಯೊಡನೆ ಗಾಯಕವಾಡರ ಪ್ರಣಯ

ಬರೋಡದ ಮಾಜಿ ರಾಜರಾದ ಗಾಯಕವಾಡರವರು ಹಾಲಿವುಡ್ಡಿನ ನಟ ವರ್ಜೀನಿಯಾ ಕ್ಲೆಯೊಡನೆ ಪ್ರಣಯವನ್ನಾರಂಭಿಸಿರುವರೆಂದು ವರದಿಯಾಗಿದೆ. ಈಗ ಅವರಿಬ್ಬರೂ ಒಟ್ಟಿಗೆ ಜೆಪ್ಲಿ ಥ್ರೀಟರದಲ್ಲಿ ವಿಹಾರ ಮಾಡುತ್ತಿರುವರು. ಗಾಯಕವಾಡರು ತಮ್ಮ ೨ನೇ ಪತ್ನಿ ಸೀತಾದೇವಿಯವರಿಂದ ಇನ್ನೂ ವಿಚ್ಛೇದನ ಹೊಂದಿಲ್ಲ.

ಮಾಜಿ ಐ. ಎನ್. ಎ. ಅಧಿಕಾರಿಗಳಿಗೆ ಹುದ್ದೆ

ನೇತಾಜಿ ಬೋಸರ ಆಜಾದ್ ಹಿಂದ್ ಫೌಜಿಗೆ ಸೇರಿದ್ದ ೧೭೫ ಮಂದಿಗೆ ಕೇಂದ್ರ ಸರ್ಕಾರದ ವಿವಿಧ ಸಿವಿಲ್ ಇಲಾಖೆಗಳಲ್ಲಿ ಉದ್ಯೋಗಗಳನ್ನು ಕೊಡಲಾಗಿದೆ ಅವರೆಲ್ಲರೂ ಆಜಾದ್ ಹಿಂದ್ ಫೌಜಿಗೆ ಸೇರುವ ಮುಂಚೆ ಭಾರತೀಯ ಸೇನೆಯಲ್ಲಿದ್ದವರು

ಕೃಷ್ಣಾಪುರದಲ್ಲಿ ಕೃಷ್ಣೋತ್ಸವ

ಟಿ ನರಸೀಪುರ ತಾಲ್ಲೂಕು ಕೃಷ್ಣಾಪುರದಲ್ಲಿ ನಾಳಿದ್ದಿನಿಂದ ೧೯ರ ವರೆಗೆ ಶ್ರೀ ಕೃಷ್ಣೋತ್ಸವವು ನೆರವೇರುವುದು ಹಗಲು ಭಾಗವತ ಪಾರಾಯಣವೂ, ಸಂಜೆ ಉತ್ಸವಾದಿಗಳೂ ಜರುಗುವುವು. ನಾಳಿದ್ದಿನಿಂದ ದಿನವೂ ಕ್ರಮವಾಗಿ ಅವತಾರ, ಶಿಕ್ಷೆ, ಪೂತನಿ ಸಂಹಾರ, ಶಕಟಾಸುರ ಮರ್ದನ, ಬಕಾಸುರ ವಧೆ, ಯಮಳಾರ್ಜುನ ಭಂಜನ, ಕಂಸವಧಾ, ರಾಸಕ್ರೀಡೆ, ಮೋಹಿನಿ, ರುಕ್ಮಿಣಿ ಕಲ್ಯಾಣ ಮತ್ತು ನಾಗವಲ್ಲಿ-ಡೋಲೋತ್ಸವಗಳು ನಡೆಯುವುವು.

ಮೈಸೂರು ಪೇಟೆ ಧಾರಣೆ

	ರೂ. ಆಣೆ	ರೂ. ಪೈ
ಕಡಲೇಕಾಯಿ	೭ ೨ ೦	೧೧ ೧೧ ೦
ಎಳ್ಳು	೪೪ ೬ ೦	೪೭ ೨ ೦
ಹರಳುಬೀಜ	೨೫ ೦ ೦	
ಹೊಂಗೆಬೀಜ	೧೫ ೨ ೦	
ಹಿಪ್ಪೆ	೧೫ ೦ ೦	
ಕೊಬ್ಬರಿ	೩೨ ೦ ೦	೪೪ ೨ ೦
ಹುಣಸೆ	೫೧ ೨ ೦	
ಹುರಳಿಕಾಳು	೭ ೧೪ ೦	೪ ೪ ೦
ಹುಣಸೆಬೀಜ	೫ ೧೨ ೦	
ತೆಂಗಿನಕಾಯಿ ೧,೦೦೦	೧೨೮ ೮ ೦	೨೨೪ ೦ ೦

ರಣಜಿತ್ ★ 8-9-55ರ : ಗುರುವಾರದಿಂದ : ಅಶೋಕ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಫಿಲ್ಮಿಸ್ತಾನರವರ ಅಚ್ಚುಮೆಚ್ಚಿನ ಹಿಂದಿ ಕಲಾಕೃತಿ

ಜಾಗೃತಿ ★ JAGRITI

(ಸಂಗೀತ – ಹೇಮಂತ ಕುಮಾರ್)

ಭೂಮಿಕೆ –ರತನ್ ಕುಮಾರ್, ಅಭಿ ಭಟ್ಟಾಚಾರ್ಯ, ಪ್ರಣತಿ ಘೋಷ್ ಮತ್ತು ಬಿಪಿನ್ ಗುಪ್ತ

ಪ್ರತಿ ಸಂಸಾರವೂ ತಪ್ಪದೆ ನೋಡಬೇಕಾದ ಚಿತ್ರ

ಪ್ರಭು ದೇವಾ ಥಿಯೇಟರ್

(ಹವಾ ನಿಯಂತ್ರಿತ)

8—9—55ರ : ಗುರುವಾರದಿಂದ : ಅಶೋಕ ಪ್ರಾರಂಭ

ವಿಕ್ರಮ್‌ರವರ ತಮಿಳು ಚಿತ್ರ

● ಜೈಗೋಪಿ ●

ಪಾತ್ರ:– ನಾಗಯ್ಯ, ಜಿ. ವರಲಕ್ಷ್ಮಿ, ರೇಲಂಗಿ, ಜಮುನಾ, ಮಾಸ್ಟರ್ ವೆಂಕಟೇಶ್ವರರು

ರಿಜಿಸ್ಟರ್ಡ್ ನಂ. ೨೯೩

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೭] SADHVI THURSDAY 8-9-1955 ಮೈಸೂರು ಗುರುವಾರ ೮-೯-೧೯೫೫ [ಸಂಚಿಕೆ : ೨೬

ಪೋರ್ಚುಗೀಸರು ಡಾಮನ್ ಮತ್ತು ಡಯು ತ್ಯಜಿಸುವರೇ?

ರಾಷ್ಟ್ರದ ಮೂವರು ಪ್ರಮುಖರಿಗೆ ಭಾರತರತ್ನ ಪ್ರಶಸ್ತಿ ದಾನ

೧೮ ಮಂದಿಗೆ ಪದ್ಮವಿಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಯ ವಿನಿಯೋಗ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ನ್ನ ದೆಹಲಿಯ ರಾಷ್ಟ್ರಪತಿ ಭವನದ ಸಮಾರಂಭ ದಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂ, ಯ ಡಾಕ್ಟರ್ ಭಗವಾನ್‌ದಾಸ್ ಮತ್ತು ಮೈ ನ ಡಾ॥ ಮೋಕ್ಷಗುಂಡಂ ವಿಶ್ವೇಶ್ವರಯ್ಯನ ಗೆ ಭಾರತದ ಅತ್ಯುತ್ಕೃಷ್ಟ ಪ್ರಶಸ್ತಿಗಳನ್ನು ನಿದರು ನೆಹರೂರವರು ಮಾಡಿದ ಸೇವೆ ಮತ್ತು ನಾಡಿನ ವರ್ಗ ಶಾಂತಿಗಾಗಿ ನಡೆಸುತ್ತಿರುವ ಸಾಹಸದ ಪ್ರಯ ಗಳಿಗಾಗಿ ಪ್ರಶಸ್ತಿಗಳನ್ನು ಕೊಡಲಾಯಿತು ತರ ಡಾ॥ ಭಗವಾನ್‌ದಾಸರಿಗೂ, ವಿಶ್ವೇಶ್ವರ ನವರಿಗೂ ರಾಷ್ಟ್ರಾಧ್ಯಕ್ಷರು ಪ್ರಶಸ್ತಿಗಳನ್ನು ನಿದರು ನೆಹರೂರವರಿಗೆ ಪ್ರಶಸ್ತಿ ಕೊಟ್ಟಾ ಅಲ್ಲಿ ಸೇರಿದ್ದ ಜನರ ಹರ್ಷೋದ್ಗಾರಗಳಷ್ಟೇ ॥ ವಿಶ್ವೇಶ್ವರಯ್ಯನವರಿಗೆ ಕೊಟ್ಟಾಗಲೂ ಹ ಧ್ವನಿಗಳಾದುವು

ಹದಿನೆಂಟು ಮಂದಿಗೆ ಪದ್ಮವಿಭೂಷಣ ಮತ್ತು ಶ್ರೀ ಬಿರುದುಗಳನ್ನು ಕೊಡಲಾಯಿತು ॥ ವಿ. ಕೆ. ಕರ್ವೆ, ಜೆ ಆರ್ ಡಿ ಟಾಟಾ ಮ ವಿ. ಕೆ. ಕೃಷ್ಣಮೆನನ್ನರಿಗೆ ಪದ್ಮವಿಭೂಷಣ ಸ್ತಿಗಳನ್ನು ಕೊಡಲಾಯಿತು ನೆಹರೂ, ಭ ವಾನ್‌ದಾಸ್ ಮತ್ತು ವಿಶ್ವೇಶ್ವರಯ್ಯನವರಿಗೆ ಪ್ರ ಯನ್ನು ಕೊಡಲು ರಾಷ್ಟ್ರಾಧ್ಯಕ್ಷರು ಮೂರು ತದ ಅಮೃತ ಶಿಲೆಯ ಮೆಟ್ಟಿಲನ್ನು ಇಳಿದು ದರು

ಫ್ರಾನ್ಸಿನಲ್ಲಿ ಅನೇಕ ಉತ್ತರ ಆಫ್ರಿಕದವರ ಬಂಧನ

ಫ್ರಾನ್ಸಿನಲ್ಲಿರುವ ಅನೇಕ ಉತ್ತರ ಆಫ್ರಿಕ ರನ್ನು ಬಂಧಿಸಿ, ಶಸ್ತ್ರಾಸ್ತ್ರಗಳನ್ನು ವಶಪಡಿಸಿ ಕ್ಕೊಳ್ಳಲಾಗಿರುವುದೆಂದು ವರದಿಯಾಗಿದೆ ಕಳೆದ ಸೋಮವಾರ ಪ್ಯಾರಿಸ್ ಮತ್ತು ಇತರ ಸ್ಥಳಗಳಲ್ಲಿ ಲೀಸರು ಈ ಬಗ್ಗೆ ಕ್ರಮ ಜರುಗಿಸಿ, ಕಾಗದ ಗಳು ಮತ್ತು ಹಣವನ್ನು ವಶಪಡಿಸಿಕೊಂಡು ಗೊತ್ತಾಗಿದೆ

ಭಾರತದ ಅಂಚೆ ಕಛೇರಿಗಳಲ್ಲಿ ಸಾದಿ ಹುಂಡಿಗಳ ಮಾರಾಟ

ಭಾರತದ ೪೯,೦೦೦ ಅಂಚೆ ಕಛೇರಿಗಳಲ್ಲಿ ಈ ದಿಂದ ೨, ೫, ೧೦, ೨೫, ೫೦ ಮತ್ತು ೧೦೦ ಗಳ ಸಾದಿ ಹುಂಡಿಗಳನ್ನು ಮಾರಾಟ ಮಾ ಲಾಗುವುದು. ಇವನ್ನು ಕೊಟ್ಟು ಭಾರತದ ಎ ಅಂಗೀಕೃತ ಮಾದಿ ಅಂಗಡಿಗಳಲ್ಲಿ ಬಟ್ಟೆಗ ನ್ನು ಕೊಳ್ಳಬಹುದು, ಮಾರ್ಚಿ ೩೧ರ ವರೆಗೂ ಹುಂಡಿಗಳನ್ನು ಮಾರಲಾಗುವುದು. ಹುಂಡಿಯ ವಧಿ ತಿಂಗಳು

ಅನುಮಾನದ ಮೇಲೆ ಬಂಧನ

ನಗರದ ಸೋನಾರ್ ಬೀದಿಯಲ್ಲಿ ನೆನ್ನೆ ರಾತ್ರಿ ೨೦ ಘಂಟೆಯಲ್ಲಿ ಸಂಚರಿಸುತ್ತಿದ್ದ ಕೃಷ್ಣರಾ ಮೊಹಲ್ಲಾ ಕೇಡಿ ಮಾರ್ ಹೈದರಲ್ಲಿಖಾ ಬುವನನ್ನು ಅನುಮಾನದ ಮೇರೆ ಲಕ್ಷ್ಮಿ ರಂ ಪೊಲೀಸಿನವರು ಬಂಧಿಸಿರುವರು

ತುರ್ಕಿಯ ಗ್ರೀಕ್ ಪ್ರಜೆಗಳ ಮೇಲೆ ಧಾಳಿ

ಮೂರು ನಗರಗಳಲ್ಲಿ ಮಾರ್ಷಲ್ ಲಾ ಘೋಷಣೆ

ತುರ್ಕಿಯ ಇಸ್ತಾಂಬುಲ್ ಮತ್ತು ಇಜ್ಮೀರ್ ನಗರಗಳಲ್ಲಿರುವ ಗ್ರೀಕ್ ಜನಾಂಗದ ಪ್ರದೇಶಗಳ ಮೇಲೆ ಕಮ್ಯೂನಿಸ್ಟರಿಂದ ಪ್ರೇರಿತರಾದ ತುರ್ಕರು ಮೊನ್ನೆ ಪ್ರಬಲ ಧಾಳಿ ನಡೆಸಿದ ಪರಿಣಾಮವಾಗಿ ವಿದೇಶ ಆಸ್ತಿ ನಾಶವಾಯಿತೆಂದು ತುರ್ಕಿ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ ತುರ್ಕಿಯ ರಾಜಧಾನಿ ಅಂಕಾರಾ ಇಸ್ತಾಂಬುಲ್ ಮತ್ತು ಇಜ್ಮೀರ್ ನಗರಗಳಲ್ಲಿ ಮಾರ್ಷಲ್ ಲಾ ವನ್ನು ಸರ್ಕಾರದವರು ಘೋಷಿಸಿರುವರು

ಗ್ರೀಕ್ ಜನರ ಮೇಲೆ ತುರ್ಕಿಯಲ್ಲಿ ನಡೆಯು ವ ಕೃತ್ಯಗಳಿಗೆ ಪ್ರತೀಕಾರವಾಗಿ ಗ್ರೀಸಿನಲ್ಲಿರು ವ ತುರ್ಕರ ಮೇಲೆ ಅಲ್ಲಿನ ಜನರು ಬೀಳಬಹು ದೆಂದು ಯೂರೋಪಿನ ತುರ್ಕಿ ಪಕ್ಕದಲ್ಲಿರುವ ಥ್ರೇಸ್ ಪ್ರದೇಶದಲ್ಲಿ ಸಿಪಾಯಿಗಳನ್ನು ಸ್ಥ ಸ್ಥಳಕ್ಕೆ ಕಳುಹಿಸಿ ಗ್ರೀಕ್ ಸರ್ಕಾರದವರು ಎಚ್ಚರಿಕೆ ವಹಿಸಿದ್ದಾರೆ ಇಸ್ತಾಂಬುಲ್ ಮತ್ತು ಇಜ್ಮೀರ್ ಗಳಲ್ಲಿ ಗ್ರೀಕರ ಚರ್ಚುಗಳು ನಾಶವಾಗಿ ಮತ್ತು ಸುಟ್ಟು ಹೋಗಿವೆ ನಿಕೋಸಿಯಾದಲ್ಲಿ ತುರ್ಕಿ ವ್ಯಾಪಾರ ಕಛೇರಿ ಮೇಲೆ ಬೈಬ ಬಾಂಬನ್ನು ಹಾಕಲಾಗಿದೆ

ಅಂತರ ಸಂಸ್ಥಾನದ ಮಾರಾಟ ತೆರಿಗೆ ವಿಧಾಯಕ ಅಕ್ರಮ

ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗುವವರೆಗೂ ಯಾವ ಸಂಸ್ಥಾನವೇ ಆಗಲಿ ಬೇರೊಂದು ಸ್ಥಾನದ ವ್ಯಾಪಾರಿಯು ಕೊಳ್ಳುವ ಪದಾರ್ಥಗಳ ವ್ಯಾಪಾರದ ಮೇಲೆ ತೆರಿಗೆ ವಿಧಿಸಲು ಅಧಿಕಾರವಿಲ್ಲವೆಂದು ಸುಪ್ರೀಂ ಕೋರ್ಟಿನವರು ಬಹುಮತದಿಂದ ತೀರ್ಪು ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಪಾಟ್ನ ಹೈಕೋರ್ಟಿನ ತೀರ್ಪಿನ ವಿರುದ್ಧವಾಗಿ ಬಂಗಾಳದ ಯುನೈಟೆಡ್ ಕಂಪೆನಿಯವರು ಸುಪ್ರೀಂ ಕೋರ್ಟಿನಲ್ಲಿ ತೆರಿಗೆ ಬಗ್ಗೆ ಅಪೀಲು ಮಾಡಿದ್ದರು

ಬಾಳೆ ಗೊನೆ ಕಳ್ಳತನಕ್ಕಾಗಿ ಬಂಧನ

ಬನ್ನಿಮಂಟಪದ ಬಳಿ ಮಹಮದ್ ಇಬ್ರಾಹಿಂರವರ ತೋಟದಲ್ಲಿ ಸುಮಾರು ೬೦ ರೂ ಬೆಲೆ ಬಾಳುವ ೩೭ ಗೊನೆ ಬಾಳೆಕಾಯಿಯನ್ನು ತಿ. ಮಂಡ್ಯನಗರದ ತಾಲ್ಲೂಕಿನ ಹನುಮಂತ ಮತ್ತು ಇತರರು ಅಪಹರಿಸಿ ಶಾಖರವಾಡಿಯ ಅಂಗಡಿಯೊಂದಕ್ಕೆ ನೆನ್ನೆ ಮಾರಲು ಪ್ರಯತ್ನಿಸುತ್ತಿದ್ದಾಗ ಲಕ್ಷ್ಮೀಪುರಂ ಪೊಲೀಸರು ನವರ ನಂಬಂಧದನ್ನು ವಶಗಿರಿ ಮಾಡಿ ಕ್ರಮ ಜರುಗಿಸುತ್ತಿರುವರು

ಮೊಹಾರಾಜರ ಅಧ್ಯಕ್ಷತೆಯಲ್ಲಿ ರೇಡಿಯೊ ರಿಕ್ರಿಯೇಷನ್ ಕ್ಲಬ್ಬಿನ ವಾರ್ಷಿಕೋತ್ಸವ

ಇದೇ ತಿಂಗಳು ೨೫ ನೇ ತಾರೀಕು ಭಾನುವಾರ ಸಂಜೆ ೪ ಗಂಟೆಗೆ ಮೈಸೂರು ಆಕಾಶವಾಣಿ ರಿಕ್ರಿಯೇಷನ್ ಕ್ಲಬ್ಬಿನ ವಾರ್ಷಿಕೋತ್ಸವವು ಶ್ರೀ ಮನ್ಮಹಾರಾಜರ ಅಧ್ಯಕ್ಷತೆಯಲ್ಲಿ ನೆರವೇರು ವುದು

ಡಾ॥ ಎಂ. ವಿಶ್ವೇಶ್ವರಯ್ಯನವರು

ನೆನ್ನೆ ರಾಷ್ಟ್ರಾಧ್ಯಕ್ಷರು ಇವರಿಗೂ, ಮತ್ತು ಡಾ ಭಗವಾನ್‌ದಾಸರಿಗೂ ಪ್ರಧಾನಿ ನೆಹರೂರವರಿಗೂ "ಭಾರತರತ್ನ" ಪ್ರಶಸ್ತಿಗಳನ್ನು ಅರ್ಪಿಸಿದರು

ಹುಣಸೂರಿನಲ್ಲಿ ಕೊಲ್ಯಾಪರಾಧವೇ?

ನಗರದಲ್ಲಿ ಅಪಾದಿತ ಮತ್ತು ಇನ್ನಿಬ್ಬರ ವಶಗಿರಿ

ಮೈಸೂರು ೮

ಹುಣಸೂರಿನಲ್ಲಿ ಇರುವ ಸೀತಮ್ಮ ಎಂಬುವರ ೧೪ ವಯಸ್ಸಿನ ಮಗಳು ಶ್ರೀಮಂತಕಮ್ಮ ಎಂಬಾಕೆಯನ್ನು ಮೈಸೂರಿನ ಸಾತೆ ಸಿಪಾಯಿ ಚೌಡದಾಸ್ ಎಂಬಾತನು ಕಳಿಸಿ ನಗರದ ಎರೆಕಟ್ಟೆಯಲ್ಲಿರುವ ತನ್ನ ತಾಯಿ ತಾಯಮ್ಮ ಎಂಬುವರ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಪ್ರಕರಣ ಒಂದರ ಮೇಲೆ ಪೊಲೀಸಿನವರು ಮೈಸೂರಿನ ಸ್ಥಳದಲ್ಲಿ ಅಪಾದಿತನನ್ನೂ, ಹುಡುಗಿಯನ್ನೂ ಅಪಾದಿತನ ತಾಯಿಯನ್ನೂ ಪತ್ತೆ ಹಚ್ಚಿ ಅವರು ಗಳನ್ನು ವಶಗಿರಿ ಮಾಡಿ ಮುಂದಿನ ಕ್ರಮ ಜರುಗಿಸುತ್ತಿರುವರು

ಗೋವಾ ದೇವಸ್ಥಾನಗಳ ನಗಗಳ ಭದ್ರತೆ ಬಗ್ಗೆ ಸರ್ಕಾರದ ಆಜ್ಞೆ

ಗೋವಾದಲ್ಲಿರುವ ಹಿಂದೂ ದೇವಾಲಯಗಳಿಗೆ ಸೇರಿದ ನಗನು, ಅಭರಣ ಮುಂತಾದ ಎಲ್ಲ ವಿಧವಾದ ಬೆಲೆಬಾಳುವ ವಸ್ತುಗಳನ್ನೂ ಪೋರ್ಚುಗೀಸ್ ಸರ್ಕಾರಿ ಬ್ಯಾಂಕಿನಲ್ಲಿಡುವಂತೆ ಪೋರ್ಚುಗೀಸ್ ಅಧಿಕಾರಿಗಳು ಆಜ್ಞೆ ಮಾಡಿರುತ್ತಾರೆಂದು ವರದಿಯಾಗಿದೆ ಈ ವಿಷಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದೂ ಅಧಿಕಾರಿಗಳು ಸೂಚಿಸಿರುವರೆಂದು ಹೇಳಲಾಗಿದೆ ಇಲ್ಲಿ ಅನೇಕ ಲಕ್ಷ ರೂ ನಗನು ಮತ್ತು ಆಭರಣಗಳಿರುವುದಾಗಿ ಗೊತ್ತಾಗಿದೆ

ಮಾಧ್ಯಮಿಕ ವಿದ್ಯಾಭ್ಯಾಸವನ್ನು ಎಲ್ಲಾ ರಾಷ್ಟ್ರಗಳಲ್ಲೂ ಉತ್ತಮಗೊಳಿಸುವುದಕ್ಕಾಗಿ ಭಾರತ ಸರ್ಕಾರದವರು ೨೨ ಜನ ಸದಸ್ಯರುಳ್ಳ ಅಖಿಲ ಭಾರತ ಮಂಡಲಿಯೊಂದನ್ನು ಸ್ಥಾಪಿಸಿರುವರು ಮಾಧ್ಯಮಿಕ ವಿದ್ಯಾಭ್ಯಾಸ ಸಮಿತಿ ಮಾಡಿರುವ ಸಲಹೆಯ ಮೇಲೆ ಈ ಮಂಡಲಿಯನ್ನು ಸ್ಥಾಪಿಸಲಾಗಿದೆ ಕೇಂದ್ರ ಸರ್ಕಾರದ ವಿದ್ಯಾ ಇಲಾಖಾ ಕಾರ್ಯದರ್ಶಿ ಹುಮಾಯೂನ್ ಕಬೀರ್‌ರವರು ಅಧ್ಯಕ್ಷರು

ಪೋರ್ಚುಗೀಸರು ಡಯೂವನ್ನು ಬಿಟ್ಟುಬಿಡುವರೇ?

ಸೌರಾಷ್ಟ್ರದ ಪಕ್ಕದಲ್ಲಿರುವ ಕಿರಿದಾದ ದ್ವೀಪ ವಾದ ಡಯೂವನ್ನು ಪೋರ್ಚುಗೀಸರು ಬಿಟ್ಟುಬಿಡುವ ಸಾಧ್ಯತೆಯಿದೆ ಅಲ್ಲಿನ ಖಜಾನೆಯಲ್ಲಿದ್ದ ೧೪ ಲಕ್ಷ ರೂ ಗಳನ್ನು ಒಬ್ಬ ಅಧಿಕಾರಿಯು ಗೋವಾಕ್ಕೆ ವಾಪಸು ತೆಗೆದುಕೊಂಡು ಹೋಗಿರುವುದಾಗಿ ವರದಿಯಾಗಿದೆ ಡಯೂ ಗೌರ್ನರರು ಪ ಕ್ಷಿಸಿರುವ ಆಜ್ಞೆಯನ್ನು ವಾಪಸು ಪಡೆಯುವಂತೆ ಅವರನ್ನು ಒತ್ತಾಯಪಡಿಸಲಾಗುತ್ತಿದೆ ಅವರು ಒಪ್ಪದಿದ್ದರೆ, ಅವರನ್ನು ಲಿಸ್ಬನ್ನಿಗೆ ಕಳುಹಿಸಿ ರಾಷ್ಟ್ರದ್ರೋಹಕ್ಕಾಗಿ ವಿಚಾರಣೆಗೆ ಗುರಿಪಡಿಸಲಾಗುವುದು

ಗೋವಾವನ್ನು ಭಾರತೀಯರು ಪ್ರವೇಶಿಸಲು ಅವಕಾಶವಿಲ್ಲ

ಗೋವಾ-ಡಾಮನ್ ಮತ್ತು ಡಯೂ ಗಡಿಗಳಲ್ಲಿ ಭಾರತದ ಪೊಲೀಸರ ಕ್ರಮ

ಗೋವಾ, ಡಾಮನ್ ಮತ್ತು ಡಯೂ ಗಡಿಗಳ ಮೂಲಕ ಭಾರತೀಯರು ಪೋರ್ಚುಗೀಸರ ವಸಾಹತುಗಳನ್ನು ಪ್ರವೇಶಿಸುವ ಸತ್ಯಾಗ್ರಹಕ್ಕೆ ಪೊಲೀಸರು ಅವಕಾಶ ಕೊಡಕೂಡದೆಂದು ಮುಂಬಾಯಿ ಮತ್ತು ಸೌರಾಷ್ಟ್ರ ಸರ್ಕಾರಗಳು ಸೂಚನೆ ಮಾಡಿವೆ ವ್ಯಕ್ತಿಶಃವಾಗಿಯಾಗಲೀ, ಸಾಮೂಹಿಕವಾಗಿಯಾಗಲೀ ಹೋಗುವ ಭಾರತೀಯ ಸತ್ಯಾಗ್ರಹಿಗಳನ್ನು ಒಳಕ್ಕೆ ಬಿಡುವುದಿಲ್ಲವೆಂದು ಹೇಳಲಾಗಿದೆ ಬೆಳಗಾಂನಲ್ಲಿರುವ ಸರ್ವ ಪಕ್ಷಗಳ ಗೋವಾ ವಿಮೋಚನಾ ಸಮಿತಿ ಮುಖಂಡರನ್ನು ಪೊಲೀಸು ಅಧಿಕಾರಿಗಳು ಭೇಟಿ ಮಾಡಿ ಗೋವಾಕ್ಕೆ ಸತ್ಯಾಗ್ರಹಿಗಳನ್ನು ಕಳುಹಿಸದಂತೆ ಕೋರಿದರೆಂದೂ, ಆ ಗೂ ಸತ್ಯಾಗ್ರಹಿಗಳು ಗಡಿಗೆ ಹೋದರೆ ಅವರನ್ನು ತಡೆಯಲಾಗುವುದೆಂದೂ ತಿಳಿಸಲಾಗಿದೆಯೆಂದು ಗೊತ್ತಾಗಿದೆ ಮೊನ್ನೆ ಬೆಳಗಾಂಗೆ ಹೊರಟಿದ್ದ ಎಂಟು ಜನ ಸತ್ಯಾಗ್ರಹಿಗಳನ್ನು ಬೆಳಗಾಂಗೆ ವಾಪಸು ಕರೆತರಲಾಗುವುದು ಸತ್ಯಾಗ್ರಹಿಗಳು ಗಡಿ ಪ್ರವೇಶಿಸದಂತೆ ಪೊಲೀಸರು ನೋಡಲು ಕೋರುವರೆಂದೂ, ಅದಕ್ಕೆ ಒಪ್ಪದಿದ್ದರೆ ಅವರುಗಳನ್ನು ತಡೆಯುವರೆಂದೂ ಹೇಳಲಾಗಿದೆ

ಕ್ವಿಮಾಯ್ ದ್ವೀಪದ ಮೇಲೆ ಕೆಂಪು ಚೀಣಾದ ಫಿರಂಗಿ ಗುಂಡು

ಪ್ರಧಾನ ಚೀಣದ ತೀರದ ಫಿರಂಗಿಗಳು ಕಳೆದ ಭಾನುವಾರ ಅಮಾಯ್ ದ್ವೀಪದ ಹತ್ತಿರವಿರುವ ಕ್ವಿಮಾಯ್ ಮೇಲೆ ೫೦ ರೌಂಡ್ ಗುಂಡು ಹಾರಿಸಿದುವೆಂದು ಗೊತ್ತಾಗಿದೆ ರಾಷ್ಟ್ರೀಯವಾದಿಗಳ ಸುದ್ದಿಯೊಂದು ಅಗ್ನಿ ರಾಷ್ಟ್ರೀಯ ಚೀಣದ ಪ್ರಚಾರ ಪತ್ರ ಪತ್ರಿಕೆಗಳುಳ್ಳ ಗುಂಡುಗಳನ್ನು ಪ್ರತಿಯಾಗಿ ಹಾರಿಸುವುದಾಗಿ ಹೇಳಲಾಗಿದೆ

ಗೋವಾದಲ್ಲಿ ರಾತ್ರಿ ಹೊತ್ತು ಕಂಬಳಿ ಹೊದ್ದು ಸಂಚರಿಸಲು ಅಡ್ಡಿ

ಗೋವೆಯ ಕುಮುಕರಿಂ ಎಂಬಲ್ಲಿ ಜನರು ರಾತ್ರಿ ಹೊತ್ತು ಕಂಬಳಿ ಹೊದ್ದುಕೊಂಡು ಸಂಚರಿಸುವುದನ್ನು ಅಧಿಕಾರಿಗಳು ನಿಷೇಧಿಸಿರುತ್ತಾರೆ -

ಚೀಣದವರಿಂದ ೯ ಮಂದಿ ಅಮೆರಿಕನ್ನರ ಬಿಡುಗಡೆ

ಚೀಣದಲ್ಲಿ ಬಂಧಿತರಾಗಿರುವ ೪೧ ಮಂದಿ ಅಮೆರಿಕನರ ಪೈಕಿ ೯ ಜನರನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು. ಅವರುಗಳೆಲ್ಲರೂ ಸ್ವದೇಶಕ್ಕೆ ಹಿಂದಿರುಗಲು ಅವಕಾಶ ಬೇಡಿ ಅರ್ಜಿ ಹಾಕಿಕೊಂಡಿದ್ದರು.

ಭೂಪಾಲ್ ನದಿಗಳಲ್ಲೂ ಪ್ರವಾಹ

ಭೂಪಾಲ್ ಸಂಸ್ಥಾನದ ಎಲ್ಲಾ ನದಿ ಮತ್ತು ಉಪ ನದಿಗಳಲ್ಲೂ ಪ್ರವಾಹ ಬಂದು, ನಗರದ ಎರಡು ಬಡಾವಣೆಗಳಲ್ಲಿ ನೀರು ನಿಂತಿದೆ. ಒಂದು ಜಿಲ್ಲೆ ಬಿಟ್ಟು ಉಳಿದ ಎಲ್ಲಾ ಪ್ರದೇಶಗಳೂ ರಾಜಧಾನಿಯಿಂದ ಪ್ರತ್ಯೇಕಿಸಲ್ಪಟ್ಟಿವೆ.

ಲಿಟರರಿ ಅಂಡ್ ರಿಕ್ರಿಯೇಷನ್ ಕ್ಲಬ್

ರಾಜಧಾನಿಯ ಲಕ್ಷ್ಮೀಪುರಂ ಮೊಹಲ್ಲೆಯಲ್ಲಿರುವ ಮೇಲ್ಕಂಡ ಸಂಘದ ಸಭೆಯು ಶ್ರೀ ಎ [illegible]ಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ [illegible]ನೇ ತಾರೀಕು ನಡೆದು, ಶ್ರೀ ಸುಬ್ಬರಾಯಪ್ಪನವರ ಸ್ಥಾನದಲ್ಲಿ ಶ್ರೀ ಮುನಿಸ್ವಾಮಿಯವರನ್ನು ಸಂಘದ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಸದಸ್ಯರ ಉಪಯೋಗಕ್ಕಾಗಿ ವಯಸ್ಕರ ಶಿಕ್ಷಣ ಸಮಿತಿಯವರು ಪುಸ್ತಕ ಭಂಡಾರದ [illegible] ತೆರೆದ ಬಗ್ಗೆ ಕೃತಜ್ಞತೆಯನ್ನು ಸೂಚಿಸಲಾಯಿತು. ಕ್ಲಬ್ಬಿನ ಸದಸ್ಯರಾಗಿದ್ದ ಶ್ರೀ [illegible] ಗೌಡರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ವೇದದ ಪಾಠಗಳು [illegible] ಮಧ್ಯಾಹ್ನ [illegible] ಮಹಿಳೆಯರ ಕಾರ್ಯಕ್ರಮ [illegible] ಮತ್ತು [illegible] ಸಂಗೀತ [illegible] ಗೀತೆಯ ಸಂದೇಶ [illegible] ಸಂಗೀತ [illegible] ಕೃಷ್ಣಲೀಲಾ [illegible] ಸುಂದರ[illegible], [illegible], [illegible] ಶ್ರೀ[illegible], [illegible] ಮತ್ತು [illegible] [illegible]

ಒಲಂಪಿಯಾ ಟಾಕೀಸ್

8-9-55 ರಿಂದ : ಅನೋಘ 2 ನೇ ವಾರ

ಸಖೀ ಹಾತಿಮ್

Edited, Printed and Published by A R Nagarajan at Sadhvi Press, D Subbiah Road, Mysore

ಸಿನಿಮಾ ಪ್ರೇಕ್ಷಕರಿಗೂ, ಪೋಲೀಸರಿಗೂ ಘರ್ಷಣೆ

ಫಿರೋಜಾಬಾದಿನಲ್ಲಿ ಎರಡು ಸಿನಿಮಾ ಮಂದಿರಗಳ ಮುಂದೆ ಮೊನ್ನೆ ರಾತ್ರಿ ಪೋಲಿ[illegible], ಪ್ರೇಕ್ಷಕರಿಗೂ ಘರ್ಷಣೆಯಾಗಿ ಒಬ್ಬನು ಪೆಟ್ಟಿನಿಂದ ಸ್ವರ್ಗಸ್ಥನಾಗಿದ್ದಾನೆ. ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ೧೧ ಮಂದಿ ಪೋಲೀಸರಿಗೆ ಗಾಯವಾಗಿದೆ. ಪೋಲೀಸರು ಜನರನ್ನು ಚದರಿಸಲು ಲಾಠಿ ಮಸ್ತಗಳನ್ನು ಹಾರಿಸಿದರು. ಸ್ಥಳೀಯ ವ್ಯಾಪಾರಿಗಳ ಪ್ರತಿಭಟನೆಯ ಸಂಕೇತವಾಗಿ ನಿಲ್ಲಿಸಲಾದ ಸಿನಿಮಾ ಪ್ರದರ್ಶನವೊಂದನ್ನು ತೋರಿಸುವಂತೆ ಜನರು ಒತ್ತಾಯಪಡಿಸಿದುದೇ ಗಲಭೆಗೆ ಕಾರಣವೆಂದು ಹೇಳಲಾಗಿದೆ. ಆ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ.

ನಗರದಲ್ಲಿ ವಿದ್ಯಾರ್ಥಿಗಳ ಕುಸ್ತಿ ಸ್ಪರ್ಧೆ

ಬರುವ ತಿಂಗಳು ೬ ರಿಂದ ೯ ರವರೆಗೆ ನಗರದಲ್ಲಿ ಸಂಸ್ಥಾನದ ವಿದ್ಯಾರ್ಥಿಗಳ ಕುಸ್ತಿ ಸ್ಪರ್ಧೆಯು ನಡೆಯುವುದು. ಮಹಾರಾಜಾ ಕಾಲೇಜಿನ ವ್ಯಾಯಾಮ ಇಲಾಖೆಯವರು ಈ ಬಗ್ಗೆ ವ್ಯವಸ್ಥೆ ಮಾಡಿರುವರು.

ಮೈಸೂರು ಪೇಟೆ ಧಾರಣೆ

	ರೂ ಆಣೆ	ರೂ ವರೆಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಬೆಲ್ಲ	[illegible]	[illegible]
ಹುರುಳಿ	[illegible]	[illegible]
ಹಲಸಂದಿ	[illegible]	[illegible]
ಧನಿಯ	[illegible]	[illegible]
ಹುಣಸೇಹಣ್ಣು	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ ೧,೦೦೦	[illegible]	[illegible]
[illegible]	[illegible]	[illegible]

ಶ್ರೀ ಗಾಯತ್ರಿ ಟಾಕೀಸ್

9 9 55 ರಿಂದ ದಿನವಹಿ 3 ಆಟಗಳು

ಎಂ ಜಿ ಎಂ ರವರ, ಅಪೂರ್ವವಾದ ಚಿತ್ರಿಸಲ್ಪಟ್ಟ ಭವ್ಯ ಸಾಹಸೋತ್ಪಾದಕ ಚಿತ್ರ (ಎಕ್ಸ್‌ಟಿಕ್ ಕಲರಿನಲ್ಲಿ)

ರಾಬರ್ಟ್ ಟೇಲರ್, ಎಲಿನಾರ್ ಪಾರ್ಕರ್ ಪಾತ್ರವಹಿಸಿರುವ

ವ್ಯಾಲಿ ಆಫ್ ದಿ ಕಿಂಗ್ಸ್

ಮರುಭೂಮಿಯ ಕಾದ ಮರಳಿನಂತೆ ಹೃದಯವನ್ನು ಉದ್ರೇಕಗೊಳಿಸುವ ಗುಪ್ತ ಪ್ರೇಮ ಹಾಗೂ ಈಜಿಪ್ಟಿನ ಪಿರಮಿಡ್ಡುಗಳ ಅಲಂಕಾರದ ಸ್ಮಾರಕಗಳಲ್ಲಿನ ಸಾಹಸಮಯ ದೃಶ್ಯಗಳು

ಕಿರು ಚಿತ್ರ

ಟ್ರೆಷರ್ ಆಫ್ ಗೋಲ್ಡನ್ ಕ್ಯಾಂಡಿಲ್

ಬೆಳಗಿನ ಪ್ರದರ್ಶನ ಶನಿವಾರ ಮತ್ತು ಭಾನುವಾರ

ದ ಯು ಲ್ 1119

ಮಾಸ್ಟರ್ ತಾರಾಸಿಂಗರ ಬಿಡುಗಡೆ

ಭಾರತದೊಡನೆ ಸಂಸ್ಥಾನಗಳಿಗೆ ಸಂಬಂಧಪಟ್ಟ ಪೆಪ್ಸು ಸರ್ಕಾರವನ್ನು ಕುರಿತು ಅಮೃತಸರದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರೆಂದು ೪ ತಿಂಗಳ ಸಜಾ ಅನುಭವಿಸುತ್ತಿದ್ದ ಶಿರೋಮಣಿ ಅಕಾಲಿ ಸಿಕ್ಖರ ನಾಯಕ ಮಾಸ್ಟರ್ ತಾರಾಸಿಂಗರನ್ನು ಬಿಡುಗಡೆ ಮಾಡುವಂತೆ ಸೆಷನ್ಸ್ ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ. ಅವರ ಶಿಕ್ಷೆಯನ್ನು [illegible] ದಂಡವನ್ನು ವಜಾ ಮಾಡಿ, ಸಜಾ ಅವಧಿಯನ್ನು ಇಳಿಸಲಾಗಿದೆ.

ಪಾಕಿಸ್ತಾನಕ್ಕೆ ಅಕ್ರಮವಾಗಿ ಚಿನ್ನದ ರವಾನೆ

ಕಳೆದ ೩೧ ನೇ ಜನವರಿಯಿಂದ ೩೦ ನೇ ಜೂನ್ ೨೦ ರವರೆಗೆ ಪಶ್ಚಿಮ ಪಾಕಿಸ್ತಾನದ ಗಡಿಯಲ್ಲಿ ಸುಮಾರು [illegible] ತೊಲ ಚಿನ್ನವು ಅಕ್ರಮವಾಗಿ ಸಾಗುತ್ತಿದ್ದುದನ್ನು ಪತ್ತೆ ಮಾಡಿ ವಶಪಡಿಸಿಕೊಳ್ಳಲಾಗಿದೆಯೆಂದು ಲೋಕ ಸಭೆಯಲ್ಲಿ ತಿಳಿಸಲಾಗಿದೆ.

ಕೋರ್ಟಿನ ಆವರಣದಲ್ಲಿ ಚೇಷ್ಟೆ ಮಾಡಿದ್ದಕ್ಕೆ ದಂಡ

ರಾಜಧಾನಿಯ ನ್ಯಾಯಾಸ್ಥಾನಗಳ ಆವರಣದಲ್ಲಿ ಮೂತ್ರ ವಿಸರ್ಜನೆ ಮಾಡಿದರೆಂಬ ಕಾರಣಕ್ಕಾಗಿ, ವೆಂಕಟಯ್ಯ, ಚಂದ್ರಶೇಖರಯ್ಯ, [illegible]ಯ್ಯ, ಕರೀಂ ಸಾಬ್, ಜಿ ಕೆ ಕಸ್ತೂರಿ, ಕೆ ಎಸ್ ಕೃಷ್ಣಸ್ವಾಮಿ, ಕೆ ರಂಗರಾವ್, ಮಾದಯ್ಯ, [illegible], ಎಂ ಅಬ್ದುಲ್ ಲತೀಫ್, ಎಂ ನಂಜುಂಡಯ್ಯ, ರಾಮಯ್ಯ ಮತ್ತು ರಂಗಪ್ಪ ಇವರುಗಳಿಗೆ ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ತಲಾ ೨ ರೂ ದಂಡವನ್ನು ವಿಧಿಸಿದರು.

ಪ್ರಕಟಣೆ

19೫6ನೇ ಜನವರಿ 1ರಿಂದ 19೫6ರ ಡಿಸೆಂಬರ್ 31ನೇ ತಾರೀಖಿನ ವರೆಗೆ, ಎರಡು ದಿನಕ್ಕೊಂದಾವರ್ತಿ, ಕೆಳಗೆ ಕಂಡ ಸಾಮಾನುಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಅರ್ಜಿಯನ್ನು ಭರ್ತಿ ಮಾಡಿದ, ಅಥವಾ ಕಾಯಿದೆ ಚೆನ್ನಾಗಿ ಬರೆದಿರುವ ೪ ಪ್ರತಿಗಳುಳ್ಳ ಮೊಹರು ಟೆಂಡರುಗಳನ್ನು ಕೆಳಗೆ ರುಜು ಮಾಡಿರುವವರಿಗೆ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ತಮ್ಮ ಕಛೇರಿಯಲ್ಲಿ 19೫೫ನೇ ಅಕ್ಟೋಬರ್ [illegible]ನೇ ತಾರೀಖು ಸೋಮವಾರ ಕಳಗೆ [illegible] ಬಾಗಿರುವ ವೇಳೆಯಲ್ಲಿ ಸ್ವೀಕರಿಸುವರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

		ವೇಳೆ
1	ಆಗತಾನೆ ಕರೆದ ಅಪ್ಪಟ ಹಸುವಿನ ಹಾಲು	10 ಘಂಟೆ
2	ಆಹಾರ ಪದಾರ್ಥಗಳು ಮತ್ತು ಆಸ್ಪತ್ರೆ ಅವಶ್ಯಕತೆಗಳು	11 ಘಂ
3	ಬ್ರೆಡ್ 1ನೇ ಕ್ವಾಲಿಟಿ (ಬೇಯಿಸಿದ)	12 ಘಂ

ಟೆಂಡರು ಪ್ರಕಟಣೆಯ ವಿವರಗಳುಳ್ಳ ನಕಲುಗಳನ್ನೂ, ವರಮಾನ ತೆರಿಗೆ ಮತ್ತು ಮಾರಾಟ ತೆರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟುಗಳ ನಮೂನೆಗಳನ್ನೂ ಮೇಲ್ಕಂಡ ಕಛೇರಿಯಲ್ಲಿ ಕೆಲಸದ ದಿನ ಮತ್ತು ವೇಳೆಗಳಲ್ಲಿ ಅರ್ಜಿ ಕೊಟ್ಟು ಪಡೆಯಬಹುದು.

ಎಚ್. ಎ. ಹನುಮಂತಯ್ಯ,
ಸುಪರಿಂಟೆಂಡೆಂಟ್,
ಕೃಷ್ಣರಾಜೇಂದ್ರ ಮತ್ತು ಚೆಲುವಾಂಬಾ ಆಸ್ಪತ್ರೆಗಳು, ಮೈಸೂರು

MYSORE DASARA EXHIBITION 1955

(16th October 1955 to 6th November 1955)

FLOOD LIGHT TOURNAMENTS

Open to students of all the High Schools, Colleges and to recognised Institutions and Clubs. The competitors should forward the applications together with the entrance fees, through their respective Institutions.

MEN'S EVENTS — *Entrance Fee*

	Event	Entrance Fee
1	Basket ball	Rs 5 per team
2	Volley ball	5 do
3	Kho-kho	3 do
4	Kabadi	3 do
5	Table Tennis	1 8 per singles; 3 per doubles
6	Competitions — a) Obstacle race, b) Shot put, c) Long jump, d) High jump	As 4 per head per event
7	Amateur wrestling	Re 1 per head
8	Body Beautiful (Mr Mysore)	do
9	Weight Lifting	do

LADIES' EVENTS :

	Event	Entrance Fee
1	Throw Ball	Rs 3 per team
2	Tennicoit	do
3	Kho-Kho	do
4	Table Tennis	Rs 1 8 0 per singles and Rs 3 0 0 per doubles

Competitions —
a) Basket ball throw
b) Shot put
c) Potato race d) Musical chair
e) Discus throw f) 50 Metre run
— As. 4 per event per head and Re. 1 for all events

For Juniors under 14 years :
a) Threading the needle
b) Musical chair
c) 50 Metre run
d) 50 Metre skipping
— As 4 per head per event and As 12 for all events

Last date for receipt of applications together with entrance fee is 28th September 1955 before 6 p m

For particulars please apply to :

Mysore, 7th Sept' 55

THE GENERAL SECRETARY,
Dasara Exhibition Committee, Mysore

ಪ್ರಭುದೇವಾ ಥಿಯೇಟರ್

(ಸದ್ವಾ ಟಾಕೀಸ್)

8—9—55ನೇ . ಗುರುವಾರದಿಂದ . ಅಮೋಘ ಪ್ರಾರಂಭ

ವಿಕ್ರಮ್‌ರವರ ತಮಿಳು ಚಿತ್ರ

* ಜೈ ಗೋಪಿ *

ಪಾತ್ರ — ನಾಗಯ್ಯ, ಬಿ ವರಲಕ್ಷ್ಮಿ, ಶೇಷಗಿರಿ, ಜಮುನಾ, ಮಾಸ್ಟರ್ ವೆಂಕಟೇಶ್ವರಲು

ರಣಜಿತ್

8—9—55 ನೇ

ಗುರುವಾರದಿಂದ ಪ್ರಾರಂಭ

ಪ್ರತಿ ದಿನ ೩ ಪ್ರದರ್ಶನಗಳು

ಫಿಲ್ಮಿಸ್ತಾನ್‌ರವರ ಅತ್ಯುತ್ಕೃಷ್ಟ ಹಿಂದಿ ಕಲಾಕೃತಿ

ಜಾಗೃತಿ - JAGRITI

ಸಂಗೀತ **ಹೇಮಂತ ಕುಮಾರ್**

ನಟರು ರತನ್ ಕುಮಾರ್, ಅಭಿಭಟ್ಟಾಚಾರ್ಯ, ಬಿಪಿನ್ ಗುಪ್ತ ಮತ್ತು ಪ್ರಣತಿ ಘೋಷ್

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರ್ತಕರಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ೧-೦-೦ ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೩೮] SADHVI : FRIDAY 9-9-1955 ಮೈಸೂರು : ಶುಕ್ರವಾರ ೯-೯-೧೯೫೫ [ಸಂಚಿಕೆ : ೨೫

ಈಜಿಪ್ಟ್–ಇಸ್ರೇಲುಗಳ ಘರ್ಷಣೆ ತಪ್ಪಿಸಲು ವಿಶ್ವಸಂಸ್ಥೆ ಕ್ರಮ

ಆಂಧ್ರದ ಮುಖ್ಯ ಮಂತ್ರಿಗಳ ಆಗಮನ

[ವಿಶೇಷ ತಂತಿ] ಬೆಂಗಳೂರು ೯

ಆಂಧ್ರದ ಮುಖ್ಯ ಮಂತ್ರಿ ಶ್ರೀ ಬಿ. ಗೋಪಾಲರೆಡ್ಡಿಯವರು ಈ ದಿನ ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು. ನಾಳೆ ಭಾರತದ ಲೋಹಾರು ಸಂಘದ ಸ್ಥಾನ ಶಾಖೆಯ ಆರಂಭೋತ್ಸವವನ್ನು ನೆರವೇರಿಸುವರು.

ಜಾರಿ ಆದ ಇನ್ಸ್‌ಪೆಕ್ಟರರ ರಿಟ್ ಅರ್ಜಿ

ಲಂಚದ ಆಪಾದನೆ ಮೇಲೆ ಕೆಲಸದಿಂದ ವಜಾ ಆದ ಸಬ್ ಇನ್ಸ್‌ಪೆಕ್ಟರ್ ಹನುಮಂತ ಸಿಂಗ್ ಮತ್ತು ದಫೇದಾರ್ ರಾಮಸುಬ್ಬಯ್ಯನವರು ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ ತಮ್ಮನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆಜ್ಞೆ ನೀಡಬೇಕೆಂದು ಕೋರಿರುತ್ತಾರೆ. ನ್ಯಾಯಾಧೀಶರುಗಳಾದ ನಿಟ್ಟೂರು ಶ್ರೀನಿವಾಸರಾವ್ ಮತ್ತು ಹೊಂಬೇಗೌಡರು ಅದನ್ನು ಈ ದಿನ ಅಡ್ಮಿಟ್ ಮಾಡಿಕೊಂಡಿರುವರು.

ನಿವೃತ್ತಿಗೆ ಪೂರ್ವ ರಜೆಗಾಗಿ ಮಲ್ಲಾರಾಧ್ಯರ ಅರ್ಜಿ

ಸಂಸ್ಥಾನದ ವಿದ್ಯಾ ಇಲಾಖಾಧಿಕಾರಿಗಳಾಗಿದ್ದ ಶ್ರೀ ಎ. ಬಿ. ಮಲ್ಲಾರಾಧ್ಯರು ನಿವೃತ್ತಿಗೆ ಪೂರ್ವಭಾವಿಯಾಗಿ ತಮಗಿರುವಷ್ಟು ರಜವನ್ನು ಉಪಯೋಗಿಸಿಕೊಳ್ಳಲು ಅವಕಾಶಬೇಡಿ ಅರ್ಜಿ ಸಲ್ಲಿಸಿಕೊಂಡಿರುವರು.

ಸಂಸ್ಥಾನದ ಜೈಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್

ಸಂಸ್ಥಾನದ ಜೈಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲರ ಹುದ್ದೆಯೊಂದನ್ನು ಸರ್ಕಾರದವರು ೧ ವರ್ಷದ ಅವಧಿಗೆ ಹೊಸದಾಗಿ ಏರ್ಪಡಿಸಿ, ಬಳ್ಳಾರಿ ಜೈಲಿನ ಸೂಪರಿಂಟೆಂಡೆಂಟರಾದ ಶ್ರೀ ಸಿ. ದೊರೆಸ್ವಾಮಿಯವರನ್ನು ಆ ಸ್ಥಾನಕ್ಕೆ ನೇಮಿಸಿರುವರು.

ಪೋರ್ಚುಗೀಸರಿಂದ ಗೋವಾ ವೈದ್ಯರೊಬ್ಬರ ಕೊಲೆ

ಗೋವೆಯ ಟಾರ್ಸ್ಗೆ ಎಂಬ ಹಳ್ಳಿಯ ಡಾ॥ ಜುರಾವ್ ಪರವ್ ಎಂಬುವರನ್ನು ಪೋರ್ಚುಗೀಸ್ ಪೊಲೀಸರು ಗುಂಡು ಹೊಡೆದು ಕೊಂದಿರುವರೆಂದೂ, ವೈದ್ಯರು ಮನೆಗೆ ಬರುತ್ತಿದ್ದಾಗ ಅವರು ಗೋವಾ ವಿಮೋಚನೆ ಚಳುವಳಿಯ ಅಂಗದ ಕಾರ್ಯಕರ್ತರೆಂದು ಭಾವಿಸಿ ಹೊಡೆದು ಕೊಲ್ಲಲಾಯಿತೆಂದೂ ವರದಿಯಾಗಿದೆ.

ದ್ವಿತೀಯ ಯೋಜನೆಯಲ್ಲಿ ಕೊಡಗಿನ ಜಲ್ಪೋಗಳ ಅಣೆಕಟ್ಟು

ಕೊಡಗು ಸರ್ಕಾರದವರು ತಯಾರಿಸಿರುವ ... ಕೋಟಿ ರೂ. ವೆಚ್ಚದ ಜಲ್ಪೋಗಳ ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಯೋಜನೆಯನ್ನು ದ್ವಿತೀಯ ಪಂಚ ವಾರ್ಷಿಕ ಯೋಜನೆ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಾಗಿರುವುದೆಂದು ಗೊತ್ತಾಗಿದೆ. ಅವರಲ್ಲಿ ೧,೫೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪತ್ತಿ ಮತ್ತು ೩೦ ಸಾವಿರ ಎಕರೆ ಜಮಾನಿಗೆ ನೀರು ಸರಬರಾಜಿನ ಏರ್ಪಾಡು ಮಾಡಲಾಗುವುದು. ಮಲಬಾರ್ ಜಿಲ್ಲೆಗೆ ಇದರಿಂದ ಸಹಾಯವಾಗುವುದು.

ನಗರದಲ್ಲಿ ಕಳ್ಳತನಗಳು

ಮೈಸೂರು ೯

ನರಸಿಂಹರಾಜ ಮೊಹಲ್ಲಾ ಕೆಸರೆ ಬ್ಲಾಕಿನಲ್ಲಿ ನೆನ್ನೆ ಮಧ್ಯಾಹ್ನ ರಂಗಯ್ಯ ಎಂಬುವರ ಮನೆ ಬೀಗ ಮುರಿದು, ಪೆಟ್ಟಿಗೆಯಲ್ಲಿದ್ದ ಸುಮಾರು ೧೫೦ ರೂ ಬೆಲೆಯ ಬಟ್ಟೆ ಮತ್ತು ನಗವನ್ನೂ ಅದೇ ಮೊಹಲ್ಲಾದ ತಿಮ್ಮಶೆಟ್ಟರವರ ಮನೆಯ ಹೆಂಚು ತೆಗೆದು ಒಳಗೆ ಇಳಿದು ೪೫೫ ರೂ ಬೆಲೆಯ ಬೆಳ್ಳಿ ಪಾತ್ರೆ ಮುಂತಾದುವನ್ನೂ ಮತ್ತು ಚಾಮುಂಡಿ ಕ್ಲಾರಿಂಗ್ ವರ್ಕ್ಸಿನಲ್ಲಿ ಎಂ. ಪಿ. ಚಾರ್ಲ್ಸ್ ಎಂಬುವರು ತಮ್ಮ ಪೆಟ್ಟಿಗೆಯಲ್ಲಿಟ್ಟಿದ್ದ ೧೦೦ ರೂ ಬೆಲೆಯಾಗುವ ಗಡಿಯಾರದ ಚಿನ್ನದ ಚೈನನ್ನೂ ಅಪಹರಿಸಲಾಗಿದೆಯೆಂದು ದೂರುಗಳು ಬಂದಿವೆ.

ಕಿಂಗ್ ಲಿಯರ್ ನಾಟಕದ ಬಗ್ಗೆ ಉಪನ್ಯಾಸ

ಇಲ್ಲಿನ ಮಹಾರಾಜಾ ಕಾಲೇಜಿನಲ್ಲಿ ನಾಳೆ ಸಂಜೆ ೫ ಗಂಟೆಗೆ ಸೆಪ್ಟೆಂಬರ್ ಬಿ. ಎ. ಮತ್ತು ಬಿ. ಎಸ್‌ಸಿ. ವಿದ್ಯಾರ್ಥಿಗಳಿಗಾಗಿ ಶ್ರೀ ಬಿ. ಸಿ. ಪೆಸ್ಲಿಯವರು ಕಿಂಗ್ ಲಿಯರ್ ನಾಟಕದ ಬಗೆ ಉಪನ್ಯಾಸ ಮಾಡುವರು. ವಿದ್ಯಾರ್ಥಿಗಳೆಲ್ಲರೂ ಬರುವಂತೆ ಕೋರಲಾಗಿದೆ.

ನಾಟಕಾಭಿನಯ

ರಾಜಧಾನಿಯ ಮಾತಾ ಆರ್ಟಿಸ್ಟರವರು ನಾಳೆ ಸಂಜೆ ೬॥ ಗಂಟೆಗೆ ಟೌನ್‌ಹಾಲಿನಲ್ಲಿ ಕನ್ಯಾದಾನ ಎಂಬ ಕನ್ನಡ ಸಾಮಾಜಿಕ ನಾಟಕವನ್ನು ಪೌರಸಭಾ ಕಮೀಷನರ್ ಶ್ರೀ ಎಲ್ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಅಭಿನಯಿಸುವರು.

ಕೃಷ್ಣೋತ್ಸವದ ಸಂಗೀತ ಮತ್ತು ಕೊಳಲು ವಾದನ ಕಛೇರಿಗಳು

ರಾಜಧಾನಿಯ ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೃಷ್ಣಜಯಂತಿ ಕಾರ್ಯಕ್ರಮದ ಅಂಗವಾಗಿ ನಾಳೆ ರಾತ್ರಿ ೮ ಗಂಟೆಗೆ ಡಾ॥ ಬಿ. ಆರ್. ನಾರಾಯಣಾಚಾರ್ಯರ ವೇಣುವಾದನವು ಡಾ॥ ವಿ॥ ಹೆಚ್. ವಿ. ರಾಮರಾಯರ ಪಿಟೀಲು ಮತ್ತು ವಿ॥ ಹೆಚ್. ಟಿ. ನಾಗಣ್ಣನವರ ಮೃದಂಗದೊಡನೆ ಏರ್ಪಾಡಾಗಿದೆ.

ಹಳೇ ಬಂಡಿಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಾಲಯದಲ್ಲಿ ಉತ್ಸವದ ಅಂಗವಾಗಿ ನಾಳೆ ರಾತ್ರಿ ವಿ॥ ಗೌರಿಕುಪ್ಪುಸ್ವಾಮಿಯವರ ಸಂಗೀತ ಕಛೇರಿಯು ನಡೆಯುವುದು.

ಮದ್ದುಗುಂಡಿನ ಭಾಂಗಿ ಸಿಡಿದು ೩ ಜನರ ಮರಣ

ಭೂಪಾಲ್–ಝಾನ್ಸಿ ರೈಲು ಮಾರ್ಗದಲ್ಲಿರುವ ಬೀನಾ ನಿಲ್ದಾಣದಲ್ಲಿ ಒಂದು ಪ್ಲಾಟ್‌ಫಾರಮ್ಮಿನಿಂದ ಮತ್ತೊಂದಕ್ಕೆ ಟ್ರಾಲಿಯಲ್ಲಿ ಹಲವು ಪಾರ್ಸಲ್ಲುಗಳನ್ನು ನೆನ್ನೆ ಸಾಗಿಸುತ್ತಿದ್ದಾಗ ಅವು ಸಿಡಿದ ಪರಿಣಾಮವಾಗಿ ೩ ಜನರು ಮಡಿದು, ಇತರ ಮೂವರಿಗೆ ತುಂಬಾ ಗಾಯವಾಗಿರುವುದಾಗಿ ವರದಿಯಾಗಿದೆ. ೮ ಜನರು ಸ್ವಲ್ಪ ಗಾಯಗೊಂಡಿರುವರು. ಆರು ಭಾಂಗಿಗಳಲ್ಲಿ ಸಿಡಿಮದ್ದು ಇದ್ದುದಾಗಿ ಹೇಳಲಾಗಿದೆ.

ಚೀನಾದಲ್ಲಿ ಭಾರತದ ರಾಯಭಾರಿ

ಶ್ರೀ ಆರ್. ಕೆ. ನೆಹರೂ

ಒರಿಸ್ಸಾ ಪ್ರವಾಹ ಪೀಡಿತರಿಗೆ ವಿಮಾನದಲ್ಲಿ ಆಹಾರ ಸರಬರಾಜು

ಒರಿಸ್ಸಾದ ಮಹಾನದಿ ಮತ್ತು ಬ್ರಾಹ್ಮಣಿಗಳಲ್ಲಿ ಪ್ರವಾಹದಿಂದ ಕಟಕ್ ಜಿಲ್ಲೆಯ ಪ್ರದೇಶದಲ್ಲಿ ನೀರು ನುಗ್ಗಿ ಹಲವು ದಿನಗಳಿಂದ ಅನ್ನಾಹಾರವಿಲ್ಲದೆ ಪರಿತಪಿಸುತ್ತಿರುವ ೩ ಲಕ್ಷ ಜನರಿಗೆ ವಿಮಾನ ಬಲಕ್ಕೆ ಸೇರಿದ ಎರಡು ಡಕೋಟಾಗಳಿಂದ ಬೀಳಿಸಿದ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ. ಭಾರತದ ಸೈನಿಕರು ಮೋಟಾರು ದೋಣಿಗಳಲ್ಲಿ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸಾಗಿಸುತ್ತಿರುವರು. ಪ್ರವಾಹದ ಬಿರುಸು ಕಡಿಮೆಯಾಗಿ ನದಿಗಳಲ್ಲಿ ಅಪಾಯಕರವೆಂದು ಸೂಚಿಸುವ ಮಟ್ಟದಿಂದ ನೀರು ಇಳಿದಿದೆ. ಆ ಪ್ರಾಂತದ ಒಟ್ಟು ೩,೦೦೦ ಚದರ ಮೈಲಿಯಷ್ಟು ಪ್ರದೇಶ ನೀರಿನಲ್ಲಿ ಮುಳುಗಿ ೧೫ ಲಕ್ಷ ಜನರು ಕಷ್ಟಕ್ಕೀಡಾಗಿರುವರೆಂದೂ, ೫ ಕೋಟಿ ರೂ ಗಳಷ್ಟು ನಷ್ಟವಾಗಿದೆಯೆಂದೂ ವರದಿಯಾಗಿದೆ.

ಕಲ್ಕತ್ತದಲ್ಲಿ ೫,೦೦೦ ನಿರುದ್ಯೋಗಿಗಳ ಪ್ರದರ್ಶನ

ಕಲ್ಕತ್ತದಲ್ಲಿ ಮೊನ್ನೆ ೫,೦೦೦ ಜನರು ತಮಗೆ ಉದ್ಯೋಗ ಕಲ್ಪಿಸಬೇಕೆಂದು ಕೂಗುತ್ತಾ, ಶಾಸನ ಸಭೆಯ ಎದುರಿನಲ್ಲಿ ಪ್ರತಿಬಂಧಕಾಜ್ಞೆಯಿರುವ ಪ್ರದೇಶದಿಂದ ಆಚೆ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ. ಪೊಲೀಸರು ಅವರನ್ನು ತಡೆಯಲಾಗಿ ಅವರುಗಳೆಲ್ಲಾ ಕುಳಿತುಬಿಟ್ಟರು. ಅವರ ಪ್ರತಿನಿಧಿಗಳನ್ನು ಸ್ವಲ್ಪ ಹೊತ್ತಿನನಂತರ ಭೇಟಿ ಮಾಡುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿದ ಮೇಲೆ ಪ್ರದರ್ಶನಕಾರರು ಚದುರಿದರು.

ಪೊಲೀಸರ ಸಹಾಯಕ್ಕಾಗಿ ಒಂದೇ ನಂಬರಿಗೆ ಫೋನ್ ಮಾಡಲು ಸೂಚನೆ

ಪೊಲೀಸರ ಜರೂರು ಸಹಾಯವನ್ನು ಅಪೇಕ್ಷಿಸುವ ನಗರದ ಮಹಾ ಜನರು ಲಷ್ಕರ್ ಪೊಲೀಸ್ ಸ್ಟೇಷನ್ನಿನಲ್ಲಿರುವ ಕ್ರೈಂ ಬ್ರಾಂಚ್ ಅಧಿಕಾರಿಗಳಿಗೆ ಫೋನ್ ಮಾಡುವಂತೆ ಕೋರಲಾಗಿದೆ. ಅವರ ರಾಣೆ ಫೋನ್ ನಂಬರು ೬೧೯.

ಗಾಜಾದಲ್ಲಿ ಘರ್ಷಣೆ ತಪ್ಪಿಸಲು ಅಡ್ಡಗಟ್ಟೆ ನಿರ್ಮಾಣ

ವೀಕ್ಷಕರ ಸಲಹೆಗೆ ವಿಶ್ವ ಸಂಸ್ಥೆಯ ಅನುಮೋದನೆ

ಗಾಜಾ ಪ್ರದೇಶದಲ್ಲಿ ಕದಡಲೇ ಶಿಸ್ತು ಮತ್ತು ನೆಮ್ಮದಿಯುಂಟಾಗುವಂತೆ ಮಾಡಲು ಈಜಿಪ್ಟ್ ಮತ್ತು ಇಸ್ರೇಲುಗಳು ಕ್ರಮ ಜರುಗಿಸಬೇಕೆಂದು ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯು ಅನುಮೋದಿಸಿದೆ. ಎರಡು ರಾಷ್ಟ್ರಗಳ ಸೈನ್ಯಗಳಿಗೂ ಘರ್ಷಣೆಯಾಗದಂತೆ ಮಾಡಲು ಗಾಜಾ ಗಡಿಯುದ್ದಕ್ಕೂ ಭಾರಿ ಅಡ್ಡಗಟ್ಟೆಯೊಂದನ್ನು ಏರ್ಪಡಿಸುವಂತೆ ವಿಶ್ವ ಸಂಸ್ಥೆಯ ವೀಕ್ಷಕರಾದ ಮೇಜರ್ ಜನರಲ್ ಎಡ್ಸನ್ ಬರ್ನ್ಸ್‌ರವರು ಮಾಡಿದ್ದ ಸಲಹೆಯನ್ನು ಎಸ್ಟ್ರೆ ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸುಗಳು ಭದ್ರತಾ ಸಮಿತಿಯಲ್ಲಿ ನಿರ್ಣಯವನ್ನು ಮಂಡಿಸಿದ್ದುವು.

ರಾಮನಗರದಲ್ಲಿ ಸಚಿವರುಗಳಿಗೆ ಭಾರಿ ಸ್ವಾಗತ

ಎತ್ತು ಕಟ್ಟಿದ ೩ ಜೋಡು ಕಾರುಗಳಲ್ಲಿ ಮೆರವಣಿಗೆ

ರಾಮನಗರದಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಸಂಸ್ಥಾನದ ಇತರ ೫ ಜನ ಸಚಿವರುಗಳನ್ನು ೪೮ ಜೋಡಿ ಎತ್ತುಗಳನ್ನು ಕಟ್ಟಿದ ಮೂರು ಜೀಪು ಕಾರುಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೊದಲನೆಯದರಲ್ಲಿ ಮುಖ್ಯ ಮಂತ್ರಿಗಳೂ, ಉಳಿದ ಎರಡು ವಾಹನಗಳಲ್ಲಿ ಇತರ ಸಚಿವರೂ ಇದ್ದರು. ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಬಂದಿರಲಿಲ್ಲ. ಪೌರಸಭೆಯ ಅಧ್ಯಕ್ಷರು ಮತ್ತು ಸದಸ್ಯರು ಸಚಿವರುಗಳನ್ನು ಸ್ವಾಗತಿಸಿದರು. ಭಾರತ ಸೇವಾ ದಳದ ೨೦೦ ಸ್ವಯಂಸೇವಕರು ನೌಕರ ರಕ್ಷೆಯನ್ನಿತ್ತರು. ದಾರಿಗಳಲ್ಲಿ "ಲಾಂಗ್ ಲಿವ್ ಅವರ್ ಹೈನೆಸ್" ಎಂದು ಬರೆದ ತೋರಣಗಳನ್ನು ಕಟ್ಟಲಾಗಿತ್ತು. ಮುಖ್ಯ ಮಂತ್ರಿಗಳವರು ೧.೫೦ ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾಗುವ ಟವನ್ನಿನ ನೀರು ಸರಬರಾಜು ಯೋಜನೆಯನ್ನು ಆರಂಭಗೊಳಿಸಿದರು.

ಪ್ರಾದೇಶಿಕ ಭಾಷೆಗಳಲ್ಲಿ ಸುದ್ದಿಗಳ ಪ್ರಚಾರ

ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲೂ ಸುದ್ದಿಗಳನ್ನು ಪ್ರಚಾರ ಮಾಡುವ ವಿಷಯವನ್ನು ಆಲೋಚಿಸಲಾಗುತ್ತಿದೆಯೆಂದೂ, ಬೆಂಗಳೂರಿನಲ್ಲಿ ೫೦ ಕಿಲೋಮೀಟರ್ ರೇಡಿಯೋ ಕೇಂದ್ರವನ್ನು ಸ್ಥಾಪಿಸಿದ ಮೇಲೆ ಅಲ್ಲಿಂದ ಕನ್ನಡ ಪ್ರದೇಶದ ಸುದ್ದಿಗಳನ್ನು ಪ್ರಕಟಿಸುವ ವಿಷಯವನ್ನು ಪರಿಶೀಲಿಸಲಾಗುವುದೆಂದೂ ಕೇಂದ್ರ ವಾರ್ತಾ ಮಂತ್ರಿಗಳು ಪಾರ್ಲಿಮೆಂಟಿನ ಸದಸ್ಯರಾದ ರಾಜಗೋಪಾಲರವರು ತಿಳಿಸಿರುವರು.

ಶ್ರೀ ಆರ್. ಎಸ್. ಮುದಲಿಯವರು ಪತ್ರವೊಂದನ್ನು ಬರೆದು ನಗರ ಕಾಂಗ್ರೆಸ್ ಸಮಿತಿಯವರು ತಮಗೆ ಕಳುಹಿಸಿರುವ ಶಿಸ್ತಿನ ಕ್ರಮದ ನೋಟೀಸಿಗೆ ತಾವು ಉತ್ತರ ಕೊಟ್ಟು, ನೋಟೀಸನ್ನು ವಾಪಸು ಪಡೆಯುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಕನ್ನಡ ಸೇವಾ ಸಂಘದ ವಾರ್ಷಿಕೋತ್ಸವ

ಒ ಬಾ] ವಿಜಯನಗರ —

ವಿಜಯನಗರದ ಕನ್ನಡ ಸೇವಾ ಸಂಘದ ಎರಡನೇ ವಾರ್ಷಿಕೋತ್ಸವವು ಕಳೆದ ಭಾನುವಾರ ಅಲ್ಲಿನ ಆಕಾಶವಾಣಿ ಕೇಂದ್ರದ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಎಂ ಎಂ ಕೆ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ನಡೆಯಿತು

ಪ್ರಾರ್ಥನೆಯಾದನಂತರ ಸಂಘದ ಅಧ್ಯಕ್ಷ ಶ್ರೀ ಎಂ ವಿ ಬೆಟ್ಟಾಚಾರ್ಯರವರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರ ಭಾಷಣಾನಂತರ, ಗೋವಾದಲ್ಲಿ ಮಡಿದ ಹುತಾತ್ಮರಿಗೂ ಮತ್ತು ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರ ನಿಧನಕ್ಕಾಗಿಯೂ ಸಂತಾಪವನ್ನು ಸೂಚಿಸುವ ನಿರ್ಣಯಗಳು ಅಂಗೀಕರಿಸಲ್ಪಟ್ಟುವು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು

ಪ್ರಸಕ್ತ ಸಾಲಿಗೆ ಶ್ರೀ ಎಂ ವಿ ಬೆಟ್ಟಾಚಾರ್ ರವರು – ಅಧ್ಯಕ್ಷರು, ಡಾ॥ ಸಿ ಆರ್ ಶಾಸ್ತ್ರಿ ಮತ್ತು ಶ್ರೀ ಕೆ ನಾರಾಯಣರಾವ್ ಉಪಾಧ್ಯಕ್ಷರು, ಶ್ರೀಗಳಾದ ಕೆ ಎಲ್ ನ..ಗ ಮತ್ತು ಸೂರ್ಯನಾರಾಯಣ್ ಕಾರ್ಯದರ್ಶಿಗಳು, ಶ್ರೀ ಜೆ ಟಿ ವಾಸುದೇವರಾವ್–ಕೋಶಾಧ್ಯಕ್ಷರು ಮತ್ತು ಶ್ರೀಗಳಾದ ಪಿ ವಿ ಅಚಾರ್, ಬಿ ಕೃಷ್ಣಮೂರ್ತಿ, ಸಿ ವಿ ಬಾಬುರಾವ್, ಎಸ್ ಆರ್ ಮಾಧವಮೂರ್ತಿ, ಎಂ ನಾಗರಾಜರಾವ್, ಎಂ ಎಸ್ ಶೆಟ್ಟಿ, ಕೆ ಎಸ್ ಹೊಸ್ಕೋಟೆ, ಎಂ ಎಸ್ ರಾವ್, ಯು ಪಿ ನಾಯಕ್ ಮತ್ತು ಪಿ ಎಸ್ ರಘುರಾಮರಾಯರು ಸದಸ್ಯರಾಗಿ ಚುನಾಯಿತರಾದರು

ಸಂಜೆ ಮೈಸೂರಿನ ಡಾ॥ ಸ್ವರಮೂರ್ತಿಯವರ ಸಂಗೀತವೂ ಮತ್ತು ಸಂಘದ ಸದಸ್ಯರಿಂದ ರಾವ್ ಬಹದ್ದೂರ್ ಎಂಬ ನಾಟಕವೂ ನಡೆದುವು.

ಹೆಂಗಸಿನ ಮೇಲೆ ಸೈಕಲ್ ಬಿಟ್ಟುದಕ್ಕಾಗಿ ದಂಡ

ನಂಜನಗೂಡು ಅಂಗಡಿ ಬೀದಿಯಲ್ಲಿರುವ ಶಿವಪ್ಪನವರ ಮಗ ವಿರೂಪಾಕ್ಷ ಎಂಬುವನು ಮಲ್ಲಮ್ಮ ಎಂಬಾಕೆಯ ಮೇಲೆ ಸೈಕಲ್ ಬಿಟ್ಟುದಕ್ಕಾಗಿ ಸ್ಥಳೀಯ ನ್ಯಾಯಾಧೀಶರು ಅಪರಾಧಿತನಿಗೆ ಕಳೆದ ಮಂಗಳವಾರ ೫ ರೂ ಜುಲ್ಮಾನೆಯನ್ನು ವಿಧಿಸಿದರು

ರಣಜಿತ್

8—9—55 ನೇ ಗುರುವಾರದಿಂದ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ಫಿಲ್ಮಿಸ್ತಾನರವರ ಅಚ್ಚುಮೆಚ್ಚಿನ ಹಿಂದಿ ಕಲಾಕೃತಿ

ಜಾಗೃತಿ - JAGRITI

ಸಂಗೀತ : ಹೇಮಂತ ಕುಮಾರ್

ಭೂಮಿಕೆ ರತನಕುಮಾರ್, ಅಭಿಭಟ್ಟಾಚಾರ್ಯ, ಬಿಪಿನ ಗುಪ್ತ ಮತ್ತು ಪ್ರಣತಿ ಘೋಷ್

Edited, Printed and Published by A. R. Nagarajan at Sadhvi Press, D Subbiah Road, Mysore

ಸಿಂಹಾಸನ ಬಿಡಲು ಮೊರಾಕೊ ಸುಲ್ತಾನರ ನಿರಾಕರಣೆ

ಮೊರಾಕೊದಿನಲ್ಲಿರುವ ಫ್ರೆಂಚರ ರೆಸಿಡೆಂಟ್ ಜನರಲ್ಲರಾದ ಜ॥ ಪಿಯರಿ ಬೋಯರ್ ಡಿಲಟೂರ್‌ರವರು ಅಲ್ಲಿನ ಸುಲ್ತಾನರನ್ನು ಮೊನ್ನೆ ಭೇಟಿ ಮಾಡಿದಾಗ, ಸುಲ್ತಾನ್ ಸಿಡಿ ಮಹಮದ್ ಬಿನ್ ಅರಾಫಾರವರು ತಾವು ಮರಣ ಪರ್ಯಂತವೂ ಸುಲ್ತಾನರಾಗಿಯೇ ಇರಬೇಕೆಂಬುದು ತಮ್ಮ ಅಭಿಲಾಷೆಯೆಂದು ತಿಳಿಸಿರುವರು ತಮ್ಮ ಸಿಂಹಾಸನಾಧಿಪತ್ಯದ ದೈವೀ ಗುಣವನ್ನು ಸುಲ್ತಾನರು ತಿಳಿಸಿ, ದೇವರು ತಮಗೆ ಕರೆ ಕಳುಹುವವರೆಗೂ ಅದೇ ಸ್ಥಾನದಲ್ಲಿರುವುದಾಗಿ ಹೇಳಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬–೫ ಕೆ ಎಲ್. ಸುಧಾಮಣಿ ಪುರಂದರದಾಸರ ದೇವರ ನಾಮಗಳು ೭ ೩೦ ಬಿ ದೊರೆಸ್ವಾಮಿ ಸಂಗೀತ ಮಧ್ಯಾಹ್ನ ೧ ೪೦ ಕ್ಲಾರಿಯೊನೆಟ್ ೧ ೫೦ ಧಾರ್ಮಿಕರಿಗಳು ೨ ೧೫ ಬಾಲ ಜಗತ್ ಮಕ್ಕಳ ಕಾರ್ಯಕ್ರಮ ಸಂಜೆ ೫ ೪೦ ಬಿ ದೊರೆಸ್ವಾಮಿ ಸಂಗೀತ ೬ ೧೫ ಕೆ ಎಲ್ ಸುಧಾಮಣಿ–ಕನ್ನಡ ಗೀತೆಗಳು ೭ ೪೦ ಭಾರತ ಮತ್ತು ವಿಶ್ವ ಸಂಚಿಕೆ–೮ ಟಿ ಭಾಷ್ಯಂ ಭಾಷಣ ೮ ವಾರ–ವಾರ ಸಂಘ–ಹರಿ–ಕಥಾಸಿ ಕೃಷ್ಣ ಭಾಗವತರು ೯ ಕಾಲಕ್ಷೇಪ ೯ ೪೦ ರಾಷ್ಟ್ರೀಯ ಕಾರ್ಯಕ್ರಮ–ನಿಸಾರ್ ಹುಸೇನ್–ಖಾನ್ ಹಿಂದೂಸ್ತಾನಿ ಸಂಗೀತ

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	[illegible]
ಉಚ್ಚೆಳ್ಳು	[illegible]	
ಹಿಪ್ಪೆ	[illegible]	
ಹೊಂಗೆ ಬೀಜ	[illegible]	
ಹುಣಸೆ	[illegible]	[illegible]
ಹುರುಳಿ	[illegible]	
ಧನಿಯ	[illegible]	
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧,೧೦೦ ಕ್ಕೆ	[illegible]	[illegible]

ಮುದ್ದಾದಾಗಲೀ, ಬಂದೂಕವಾಗಲೀ ಗುರಿ ತಪ್ಪಬಹುದು! ಗೋಲ್ಡ್‌ನು ಪತ್ತೆಹಚ್ಚುವಲ್ಲಿ ಉಪಯೋಗಿಸಬಹುದು ಆದರೆ

ಡಾ॥ ರಾ ನಾ ರ ವ ರ

ಹಿಂದು ವಾರದ ಅವಧಿಯ

ನೂತನ ಮತ್ತು ಅದ್ಭುತ ಚಿಕಿತ್ಸೆಯು

ನಿಮ್ಮ ನಿರಾಶೆಗಳೆಲ್ಲವನ್ನೂ ಪರ್ಮನೆಂಟಾಗಿ ಪರಿಹರಿಸಲು ಶಕ್ಯವಿದ್ದ

ಅಷ್ಟರಿಂದ ಹೊಸ ಕಾಮುಕ್ಯ. ಅದ್ಭುತ ಶಕ್ತಿ ಮತ್ತು ಅನುಪಮ ಆರೋಗ್ಯ ಹೊಂದಲು ಈ ಪ್ರಖ್ಯಾತ ವೈದ್ಯರನ್ನು ಭೇಟಿ ಮಾಡಿರಿ

ಡಾ॥ ಎ. ವಿ. ರಾ ನಾ

ಅವರ 40 ವರ್ಷಗಳ ಚಿಕಿತ್ಸಾ ಅನುಭವವು ನಿಮ್ಮ ಕಾಲ, ಆರೋಗ್ಯ ಮತ್ತು ಹಣವನ್ನು ಉಳಿತಾಯ ಮಾಡಿಕೊಡುತ್ತದೆ ಮತ್ತು ನಿಮ್ಮನ್ನು ದಾಕ್ಟರು, ವೈದ್ಯರು ಮತ್ತು ಹಕೀಮರುಗಳಿಗೆ ಹಣ ವ್ಯಯ ಮಾಡುವುದರಿಂದ ತಪ್ಪಿಸುತ್ತದೆ

ಭೇಟಿಯ ಕಾಲ ಬೆಳಗ್ಗೆ 8 ರಿಂದ 12
ಸಂಜೆ 4 ರಿಂದ 8

ರಾನಾ ಮೆಡಿಕಲ್ ಹಾಲ್,

ಎಲ್ ನಂ 1–743 ಅಶೋಕ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ ಪಾರ್ಕ್ ಕಡೆಯಿಂದ 3 ನೇ ಕಟ್ಟಡ)

ಭಾರತದಲ್ಲಿಯೇ ಮುದ್ರಣ ಯಂತ್ರ ಸಾಮಗ್ರಿ ತಯಾರಿಕೆ

ಮುದ್ರಣ ಕೈಗಾರಿಕೆಗೆ ಸಂಬಂಧಪಟ್ಟ ಯಂತ್ರೋಪಕರಣಗಳನ್ನು ಭಾರತದಲ್ಲೇ ತಯಾರಿಸುವ ಸಾಧ್ಯಾಸಾಧ್ಯತೆಯನ್ನು ಭಾರತ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಗೊತ್ತಾಗಿದೆ

● ಉಲುಚುನಾಡು ಮಹಾ ಸಭೆ

ನಾಳಿದ್ದು ಸಂಜೆ ೪ ಘಂಟೆಗೆ ಶಿವರಾಂಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭಾ ಮಂದಿರದಲ್ಲಿ ಶ್ರೀ ಉಲುಚುನಾಡು ಮಹಾ ಸಭೆಯನ್ನು ಏರ್ಪಡಿಸಿರುವುದರಿಂದ ಪರ್ಮಕ್ಕೆ ಸೇರ್ಪಟ್ಟ ಉಲುಚುನಾಡು ಮಹಾ ಜನರೆಲ್ಲರೂ ಸಕಾಲಕ್ಕೆ ಸಭೆಗೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಚಾಮುಂಡೇಶ್ವರೀ

9–9–55 ರಿಂದ ಯಶಸ್ವಿತ 4ನೇ ವಾರ

ಮುಂಗಯ್ಯಾರ್ ತಿಲಕಂ

ಪಾತ್ರ ಶಿವಾಜಿ ಗಣೇಶನ್ ತಂಗವೇಲು ಸಾರಂಗಪಾಣಿ, ಪದ್ಮಿನಿ ರಾಗಿಣಿ ರಾಜ್ಯಂ

ನೋಟೀಸು

ಮೈಸೂರು ಶಿವರಾಂಪೇಟೆ ಮೊಹಲ್ಲಾ ಬಾಲಕೃಷ್ಣರಾವ್ ರೋಡ್ 119ನೇ ನಂಬರು ಮನೆಯ ಔಟ್‌ಹೌಸಿನಲ್ಲಿ ವಾಸವಾಗಿದ್ದ ಶ್ರೀ ಸಿ ಎಲ್ ನರಸಿಂಹಯ್ಯಂಗಾರ್ ರವರಿಗೆ ಮನೆ ಮಾಲೀಕರಾದ ಶ್ರೀಮತಿ ಎಲ್ ಗೌರಮ್ಮನವರು ತಿಳಿಸುವ ನೋಟೀಸು

ನೀವು ನಮ್ಮ ಔಟ್‌ಹೌಸಿನಲ್ಲಿದ್ದು 20–7–55 ರಲ್ಲಿ ಅದನ್ನು ಖಾಲಿ ಮಾಡಿ ಹೊರಟುಹೋಗುತ್ತಿದ್ದಿರಿ ಆಗ ಬಾಕಿ ನಿಂತಿದ್ದ 1 ತಿಂಗಳ ಬಾಡಿಗೆ 1೦ ರೂ ಗಳನ್ನೂ ಮತ್ತು ಕೊಡಬೇಕಾಗಿದ್ದ ಕೈಸಾಲ 15 ರೂ ಗಳನ್ನು ಕೊಡಬೇಕೆಂದು ಕೇಳಿದ್ದಕ್ಕೆ ಆಗ ನೀವು ನಿಮ್ಮ ಸಾಮಾನುಗಳನ್ನೆಲ್ಲಾ ಮನೆ ಮಾಲೀಕರ ವಶ ಇಟ್ಟುಕೊಂಡಿರಬೇಕೆಂದೂ ಅನಂತರ ಹಣವನ್ನು ಕೊಟ್ಟು ಅವುಗಳನ್ನು ಬಿಡಿಸಿಕೊಂಡು ಹೋಗುವುದಾಗಿಯೂ, ಸಾಮಾನುಗಳನ್ನು ಮನೆ ಮಾಲೀಕರ ಮನೆಯ ಒಂದು ಭಾಗದಲ್ಲಿ ಇಟ್ಟುಹೋದಿರಿ ಇದುವರೆಗೂ ನೀವು ಬಂದಿಲ್ಲ ನೀವು ಎಲ್ಲಿರುತ್ತೀರಿ ಎಂಬುದು ನನಗೆ ತಿಳಿಸಲಿಲ್ಲ ಆದ್ದರಿಂದ ಈ ನೋಟೀಸ್ ಮೂಲಕ ಎಚ್ಚರಿಸುವುದೇನೆಂದರೆ ನೀವು ತಾ। 1–10–55 ರೊಳಗಾಗಿ ಮೇಲ್ಕಂಡ ಹಣವನ್ನು ವಾಪಸ ಮಾಡಿ ಸಾಮಾನುಗಳನ್ನು ವಾಪಸು ಪಡೆಯತಕ್ಕದ್ದು ತಪ್ಪಿದಲ್ಲಿ ಮಾರನೇ ದಿನ ಅವುಗಳನ್ನು ಹರಾಜು ಮಾಡಿ ಬಂದ ಉತ್ಪತ್ತಿಯನ್ನು ಜಮಾ ಮಾಡಿಕೊಂಡು, ಮಿಕ್ಕ ಹಣಕ್ಕಾಗಿ ನಿಮ್ಮ ಮೇಲೆ ಕ್ರಮ ಜರುಗಿಸಲಾಗುತ್ತದೆ

ಮನೆ ಮಾಲೀಕರ ಪರ,
ಎಲ್. ಗೌರಮ್ಮ

ಮೋತಿಲಾಲ್ ಟಾಕೀಸ್

9-9-55 ರಿಂದ ಅಪೋಲೋ ಫಿಲ್ಮ್ಸ್

ಪ್ರತಿ ದಿನ 3 ಪ್ರದರ್ಶನಗಳು

ಒ ಪಿ ಫಿಲಂಸ್ ರವರ

ಲಗನ್

ಪಾತ್ರ ನಳಿನಿ ಜಯವಂತ್, ಸಜ್ಜನ್ ಓಂಪ್ರಕಾಶ್ ಮತ್ತು ರಮ್ಮಿ

ಮುಂದಿನ ಬದಲಾವಣೆ

ಭಗವಾನ್ ಆರ್ಟ್ ಪ್ರೊಡಕ್ಷನ್ಸ್‌ರವರ

ಪ್ಯಾರ ದುಷ್ಮನ್

ಪಾತ್ರ ನಿರೂಪಾ, ಸೈಯರ್ ಮತ್ತು ಭಗವಾನ್

City Municipal Office,
Mysore, Dated 2-9-55

ABSTRACT TENDER NOTIFICATION

Re Tender for stitching Uniforms to the Executive & Menial Staffs of the Municipality

Notice is hereby given that sealed tenders will be received by the Undersigned at the Municipal Office up to 4 P M on [illegible] for stitching uniforms

1) Each tender must be accompanied by a certified chellan for having deposited Rs 100 in cash to the Municipal Treasury as earnest money

2) Different Kinds of uniforms to be stitched are detailed in the margin Further particulars and the form in which the tender should be submitted may be had at the office on all working days.

3) Work should be undertaken in the premises of Municipal Office or where the Municipal Commissioner directs

1) Officers Pattern coat with open collar and flapped pockets and trousers 2) Ordinary pattern coat with closed collar and four pockets with flaps and trousers	Superior A & B class 300 sets
1) Ordinary pattern coat with closed collar with three open pockets and trousers	Ordinary C class 600 sets

(Sd.) H LAKSHMAN RAO,
Municipal Commissioner

DON'T MISS THIS OPPORTUNITY

ABIDS GRAND AUCTION SALE

ON SUNDAY the 11-9-1955 at 10 A M at Showrooms

A VERY GOOD COLLECTION OF FURNITURE HOUSEHOLD EFFECTS AND a lot of about 500 BOOKS OF HISTORY, Geography, Hygiene, STORIES, LAW & Sanskrit literature, including New R.W & T W Sofa suites, double seater sofas, small & big Almirahs Iron & wooden single & double cots, mattresses, Pillows, writing & dining tables, arm & armless chairs, Iron & wooden cradles weighing scales, Chinaware Book stands & Racks, Violin Child's Motor car Kodak Cameras, Writing Desk, Photos in glass frames, stools, Electric lamp shades and many more useful articles Inspect them tomorrow.

SREE GANESH TALKIES

Gala Release on 10 9—55 Daily 3 Shows



(In Cinemascope Technicolor)
Featuring — Maureen O Hara, Tyrone Power, Robert Francis and others

To-day : Last day—BLACK SHIELD OF FALWORTH

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಗೌರಿಹಬ್ಬಕ್ಕಾಗಿ
ಮೈಸೂರು ಸಿಲ್ಕು
ಧರ್ಮಾವರಂ, ಕಾಯಿಲ್,
ದಿಂಡಿಗಲ್, ಕೊಳ್ಳೇಗಾಲ
ಜರಿಂವಾರ್ ಸೀರೆಗಳು
ಒಂದಿವೆ ಒಂದೇ ಭೇಟಿ ಕೊಡಿ
M.V. ಭೋಜಯ್ಯ
ಅಂ, ಡ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು . ಫೋನ್ 446

ಸಂಪುಟ - ೧೯] SADHVI · SATURDAY 10-9-1955 ಮೈಸೂರು : ಶನಿವಾರ ೧೦-೯-೧೯೫೫ [ಸಂಚಿಕೆ : ೪೦

ಗೋವಾ ಗಡಿಯೊಳಗೆಲ್ಲಾ ಆಸ್ಫೋಟಕ ಮೈನುಗಳು

ಕುದಿಯುವ ನೀರು ಬಿದ್ದು ಬಾಲಕಿಯ ಮರಣ

ಮೈಸೂರು ೧೦

ರಾಜಧಾನಿಯ ಬಿ ಬಿ ನಾರ್ಡ್ಸ್ಟ್‌ನಲ್ಲಿರುವ ...ತಿ ಧರ್ಮಾವತಿ ಎಂಬುವರ ಮನೆಯಲ್ಲಿ ...ಲಜಾ ಎಂಬ ೫ ವರ್ಷದ ಬಾಲಕಿಯ ಮೇಲೆ ಕುದಿಯುವ ನೀರು ಬಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟ ಅಲ್ಲಿ ಮಗುವು ಮೃತಪಟ್ಟಿತು

...ಲ್ಲೂಕು ಗ್ರಾಮಾಧಿಕಾರಿಗಳ ಸಭೆ

...ಸೂರು ತಾಲ್ಲೂಕು ಗ್ರಾಮಾಧಿಕಾರಿಗಳ ...ಯು ನಾಳಿದ್ದು ಮಧ್ಯಾಹ್ನ ೨ ಗಂಟೆಗೆ ಕೊ...ರಾಮಯ್ಯನವರ ಬೀದಿಯಲ್ಲಿರುವ ವಿದ್ಯಾರ್ಥಿ... ...ಗ್ ಶ್ರೀ ಎಸ್ ಅನಂತರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರುವುದು ಗ್ರಾಮಾಧಿಕಾರಿಗಳ ಕುಂದುಕೊರತೆಗಳನ್ನು ಸಂಸ್ಥಾನಕ್ಕೆ ಆಗಮಿಸಲಿರುವ ಪ್ರಧಾನ ಮಂತ್ರಿಗಳವರಿಗೆ ನಿವೇದಿಸಿಕೊಳ್ಳುವ ...ಗಿ ಸಂಸ್ಥಾನಾದ್ಯಂತ ಗ್ರಾಮಾಧಿಕಾರಿಗಳ ...ಳಿಸುವ ಹೆಚ್ಚಿಸುವ ವಿಷಯವನ್ನು ...ರಿಸಲಾಗುವುದು ತಾಲ್ಲೂಕು ಗ್ರಾಮಾಧಿ...ಗಳೆಲ್ಲರೂ ಬರುವಂತೆ ಕೋರಲಾಗಿದೆ

...ಡಿಕಲ್ ಕಾಲೇಜು ಅಧ್ಯಾಪಕಿಯ ವರ್ಗ

...ಸೂರು ಮೆಡಿಕಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ ಅಸಿಸ್ಟೆಂಟ್ ಸರ್ಜನ್ ಶ್ರೀಮತಿ ...ರ್ ಸರೋಜಿನಿಬಾಯಿಯವರನ್ನು ಚಿಂತಾ... ಆಸ್ಪತ್ರೆ ವೈದ್ಯರಾಗಿ ವರ್ಗಾಯಿಸಲಾಗಿದೆ

ಜೂಜಾಟ ಪತ್ತೆ

...ಧಾನಿಯ ಮಿರ್ಜಾ ಆಸ್ಪತ್ರೆ ಬಳಿ ನೆನ್ನೆ ರಾ... ...ಜೂಜಾಡುತ್ತಿದ್ದ ಎ ನಾರಾಯಣ ಮು... ...ರ ೬ ಜನರನ್ನು ಮುಂದಿ ಪೋಲೀಸರು ಬಂ... ...ಅವರ ಬಳಿ ಇದ್ದ ೮೬-೧೩-೦ ರೂ ...ಮಾನತ್ತು ಪಡಿಸಿಕೊಳ್ಳಲಾಗಿದೆ ಬೆಂಕಿ... ...ದ ಬೀದಿಯಲ್ಲಿ ಶ್ರೀಕಂಠ ಮತ್ತು ವಿಠಲ್ ...ಸ್ಟ್ಯಾ ಜೂಜಾಡುತ್ತಿದ್ದುದು ಪತ್ತೆಯಾಗಿ ...ನ್ನು ಬಂಧಿಸಲಾಯಿತು ಸ್ಥಳದಲ್ಲಿ ೫ ರೂ ...ವಶಪಡಿಸಿಕೊಳ್ಳಲಾಗಿದೆ

ವಿದ್ಯುಚ್ಛಕ್ತಿ ರೈಲುಗಳಿಂದ ಗಾರ್ಡಿನ ಮರಣ

...ಬಾಯಿ ರೀವು ಪ್ರದೇಶದಲ್ಲಿ ಸೆಂಟ್ರಲ್ ...ಲ್ವಾಣದಲ್ಲಿ ಎರಡು ಸಬರ್ಬನ್ ವಿದ್ಯುತ್ ರೈಲುಗಳಿಗೆ ನೆನ್ನೆ ಡಿಕ್ಕಿಯಾಗಿ ಒಬ್ಬ ಗಾರ್ಡ್ ಸತ್ತಿದ್ದು, ೯ ಜನರಿಗೆ ಗಾಯವಾಯಿತು ಮೋಟಾರ್‌ಮನ್ನನಿಗೆ ವರದಿಯೊದೆದು ಆ... ಸೇರಿಸಲ್ಪಟ್ಟಿರುವನು ಉಳಿದವರಿಗೆ ಸ್ವಲ್ಪ ಗಾಯ ತಗುಲಿದೆ

ಅಮದಾಬಾದಿನಲ್ಲಿ ವೈದ್ಯರ ಮುಷ್ಕರ

ಅಮದಾಬಾದಿನಲ್ಲಿ ಪೌರಸಭೆಯವರ ಆಡ...ಳಿತದಲ್ಲಿರುವ ವಾಡಿಲಾಲ್ ಸಾರಾಭಾಯಿ ಆ... ...ಗೌರವ ವೈದ್ಯರ ಬಗ್ಗೆ ಆಡಳಿತ ಸಮಿ... ...ತೋರುತ್ತಿರುವ ವರ್ತನೆಯನ್ನು ಪ್ರ... ...ಯ ೩೩೦ ಮಂದಿ ವೈದ್ಯರುಗಳು ನೆನ್ನೆ ...ಹೂಡಿದರು ಭಾರತದಲ್ಲಿ ವೈದ್ಯರ ಮು...ಷ್ಕರ ನಡೆಯುತ್ತಿರುವುದು ಇದೇ ಮೊದಲು

ಹಡಗಿನ ಪರೀಕ್ಷೆಗಾಗಿ ಸಿಂಹಳಕ್ಕೆ ಪನಾಮಾ ಕರೆ

ಚೀಣಕ್ಕೆ ಶಸ್ತ್ರಾಸ್ತ್ರ ರವಾನೆಯ ಸಂಶಯ

ಗ್ರೀಕರಿಗೆ ಸೇರಿದ ಪನಾಮಾ ರಾಷ್ಟ್ರದಲ್ಲಿ ರಿಜಿಸ್ಟರ್ ಆಗಿರುವ ಹಡಗೊಂದನ್ನು ಕೊಲಂಬೋದಲ್ಲಿರುವ ಅಮೆರಿಕದ ರಾಯಭಾರಿ ಕಛೇರಿಯವರು ಪರೀಕ್ಷಿಸಲು ಪನಾಮಾ ಸರ್ಕಾರದವರು ಸಿಂಹಳ ಸರ್ಕಾರದ ಅನುಮತಿಯನ್ನು ಕೋರಿದ್ದಾರೆ ಹಡಗು ಸೂಯೆಜ್ ಕಾಲುವೆ ದಾಟಿ, ಕೊಲಂಬೋದಿಗೆ ಹೋಗುತ್ತಿರುವುದೆಂದು ಹೇಳಲಾಗಿದೆ ಅದರಲ್ಲಿ ಚೀಣಕ್ಕಾಗಿ ಶಸ್ತ್ರಾಸ್ತ್ರ ರವಾನೆಯಾಗುತ್ತಿರುವುದೆಂದು ಪನಾಮಾ ಸರ್ಕಾರಕ್ಕೆ ಅನುಮಾನ ಬಂದಿದೆ ಬರ್ಕ್ಲೀರಿಯದಲ್ಲಿ ಹಡಗು ಆಹಾರ ಸಾಮಗ್ರಿಗಳನ್ನು ತುಂಬಿಕೊಂಡಿತೆಂದು ಹೇಳಲಾಗಿದೆ

೧೧ ಲಕ್ಷ ರೂ. ಬೆಲೆಯ ಅಕ್ರಮ ರವಾನೆ ಚಿನ್ನದ ವಶ

ಮೊಂಬಾಯಿಯ ಸುಂಕದ ಅಧಿಕಾರಿಗಳು ಮೊನ್ನೆ ಬೆಸ್ಟ್ರಾಸ್ ... ನಾಮಕ ಮತ್ತು ಇ... ಬ್ಬರು ಹಜ್ ಮುಸ್ಲಿಂ ಯಾತ್ರಿಕರಿಂದ ೧೧ ಸಾವಿರ ರೂ ಬೆಲೆಯ ೧,೩೩೦ ತೊಲ ಅಕ್ರಮವಾದ ಚಿನ್ನವನ್ನು ವಶಪಡಿಸಿಕೊಂಡಿರುವರು ನಾವಿಕನ ಬಳಿಯೂ ೧,೨೦೦ ತೊಲ ಚಿನ್ನವು ಸಿಕ್ಕಿತು ಮೂವರನ್ನು ಬಂಧಿಸಲಾಗಿದೆ

ರೀಟಾ ಹೇವರ್ತ್ ಮತ್ತು ಅಲಿಖಾನರ ಪುನಸ್ಸಮಾಗಮ

ಹಾಲಿವುಡ್ಡಿನ ಪ್ರಖ್ಯಾತ ಸಿನಿಮಾ ನಟಿ ರೀಟಾ ಹೇವರ್ತ್ ಳು ಮತ್ತು ಆಕೆಯ ೪ನೇ ಗಂಡ ಡಿಕ್‌ಹೇಮ್ಸ್‌ರವರು ಪರಸ್ಪರದಲ್ಲೇ ಬೇರೆಯಾಗುವರೆಂದು ವರದಿಯಾಗಿದೆ ಆಕೆಯ ೩ನೇ ಗಂಡ ಅಲಿಖಾನರು ಈಗ ಅಮೆರಿಕಕ್ಕೆ ತೆರಳಲಿರುವರು ಅವರಿಬ್ಬರ ಕುಮಾರಿ ಯಾಸ್ಮಿನ್ನಳನ್ನು ಯೂರೋಪಿಗೆ ಕರೆದೊಯ್ಯುವುದು ತಮ್ಮ ಉದ್ದೇಶವೆಂದು ಅಲಿಖಾನರು ಹೇಳುತ್ತಿರುವರು ಅವರಿಬ್ಬರೊಡನೆ ರೀಟಾ ಹೇವರ್ತಳೂ ಯೂರೋಪಿಗೆ ತೆರಳುವಳು

ಗುಜರಾತ್ ಪ್ರವಾಹದಲ್ಲಿ ೫ ಜನರ ಮರಣ

ಉತ್ತರ ಗುಜರಾತ್ ನದಿಗಳಲ್ಲಿ ಕಳೆದ ವಾರದ ಪ್ರವಾಹದ ಪರಿಣಾಮವಾಗಿ ಕಡೆಯ ಪಕ್ಷ ೫ ಮಂದಿ ಮೃತರಾಗಿರುವರೆಂದೂ, ಸಬರಮತಿ ನದಿಯ ಪ್ರವಾಹಕ್ಕೆ ಸಿಕ್ಕಿ ... ಹೆಂಗಸು ಮತ್ತು ಇಬ್ಬರು ಗಂಡಸರು ಕೊಚ್ಚಿಹೋದರೆಂದೂ ಹೇಳಲಾಗಿದೆ ಸರಸ್ವತಿಯಲ್ಲಿ ಇಬ್ಬರು ಮೃತಪಟ್ಟಿರುವರು

೩೦೦ ಕೋಟಿ ರೂ.ಗಳ ಸಂಸ್ಥಾನದ ಎರಡನೇ ಯೋಜನೆ

ಮೈಸೂರು ಸಂಸ್ಥಾನದ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೨೦೦-೩೦೦ ಕೋಟಿ ರೂ ವೆಚ್ಚದಿಂದ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಯೋಜನಾ ಸಲಹಾ ಮಂಡಲಿಯು ಗೊತ್ತುಮಾಡಿದೆ ಬರುವ ತಿಂಗಳಲ್ಲಿ ಇವರ ವರದಿ ಸಿದ್ಧವಾಗುವುದು

ಕೇಂದ್ರದ ಗೃಹ ಮಂತ್ರಿ ಗೋವಿಂದವಲ್ಲಭ ಪಂತ್

ಈ ದಿನ ಇವರ ೬೯ ನೇ ವರ್ಷ ವರ್ಧಂತಿಯು ದೇಶದಲ್ಲಿ ಆಚರಿಸಲ್ಪಡುತ್ತದೆ

ಭದ್ರಾವತಿ ಕಾರ್ಖಾನೆಗೆ ಕೇಂದ್ರದಿಂದ ೪ ಕೋಟಿ ರೂ. ನೆರವು

ಗೃಹ ಮಂತ್ರಿಯವರ ಹೇಳಿಕೆ

ಬೆಂಗಳೂರು ೧೦

ಸಂಸ್ಥಾನದ ಗೃಹ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆಯನ್ನು ೧೨ ರಿಂದ ೧೩ ಕೋಟಿ ರೂ ವೆಚ್ಚದಿಂದ ವಿಸ್ತರಿಸಲಾಗುವುದೆಂದು ತಿಳಿಸಿದರು ಕಾರ್ಖಾನೆಯಲ್ಲಿ ಉಕ್ಕಿನ ತಯಾರಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರದವರು ೩ ಕೋಟಿ ರೂ ಗಳ ಮೊತ್ತ ಸಹಾಯ ಕೊಟ್ಟಿರುವುದಾಗಿಯೂ, ಪ್ರಥಮ ಯೋಜನೆ ಮುಗಿಯುವುದರೊಳಗೆ ಇನ್ನೂ ೧ ಕೋಟಿ ರೂ ಗಳನ್ನು ಕೊಡಲಿರುವರೆಂದೂ ಅವರು ಹೇಳಿದರು

ವರ್ಷಕ್ಕೆ ೧ ಲಕ್ಷ ಟನ್ ಉತ್ಪತ್ತಿ ಮಾಡಬಲ್ಲ ಮತ್ತೊಂದು ಸಿಮೆಂಟ್ ಕಾರ್ಖಾನೆಯನ್ನು ೭೦ ಲಕ್ಷ ರೂ ವೆಚ್ಚದಿಂದ ಸ್ಥಾಪಿಸಲಾಗುವುದೆಂದು ಸಚಿವರು ನುಡಿದರು

ಬೆಳಗಾಮಿನಲ್ಲಿ ಗೋವಾ ಸತ್ಯಾಗ್ರಹಿಗಳ ಬಸ್ಸಿಗೆ ತಡೆ

ಗೋವಾ ಸತ್ಯಾಗ್ರಹದಲ್ಲಿ ಭಾಗವಹಿಸಲು ಬೆಳಗಾಮಿನಿಂದ ನೆನ್ನೆ ಹೊರಟಿದ್ದ ೩೩ ಮಂದಿ ಭಾರತೀಯ ಸತ್ಯಾಗ್ರಹಿಗಳನ್ನು ಪೋಲೀಸರು ತಡೆದರೆಂದೂ, ಹಲವರನ್ನು ಬಸ್ಸಿನಿಂದ ಎತ್ತಿ ಹೊರಕ್ಕೆ ಒಯ್ಯಲಾಯಿತೆಂದೂ ವರದಿಯಾಗಿದೆ ... ಬಸ್ಸು ಸ್ವಂತವಾಹಿನಿಗೆ ಹೊರಟಿತ್ತು ಅದನ್ನು ಪೋಲೀಸರು ಠಾಣೆಗೆ ಕರೆದೊಯ್ದರು ಅಲ್ಲಿ ಸ್ವಯಂಸೇವಕರನ್ನು ಬಿಟ್ಟುಬಿಡಲಾಯಿತು ಏಳು ಜನರನ್ನು ಪೋಲೀಸರು ಅವರ ಊರುಗಳಿಗೆ ಕಳುಹಿದರು ಜಾಸಗೀ ಬಸ್ಸೊಂದರಲ್ಲಿ ಕಳೆದ ಬುಧವಾರ ೨೫ ಸತ್ಯಾಗ್ರಹಿಗಳು ಹೊರಟಾಗ ಬೆಳಗಾಮಿನ ಹೊರಭಾಗದಲ್ಲಿ ಬಸ್ಸನ್ನು ತಡೆದು, ಅದು ಸಂಚಾರಕ್ಕೆ ಅನರ್ಹವಾಗಿದೆಯೆಂದು ಪೋಲೀಸರು ತಿಳಿಸಿದರು

ಗೋವಾದೊಳಗೆ ಗಡಿ ಸುತ್ತಲೂ ಮೈನುಗಳು

ಸತ್ಯಾಗ್ರಹಿಗಳನ್ನು ನಾಶ ಮಾಡಲು ಪೋರ್ಚುಗೀಸರ ಹೊಸ ಕೃತ್ಯ

ಗೋವಾಕ್ಕೆ ಸತ್ಯಾಗ್ರಹಿಗಳು ಬರುವಂತೆ ಮಾಡಲು ಅಧಿಕಾರಿಗಳು ಗಡಿಯುದ್ದಕ್ಕೂ ತಮ್ಮ ಪ್ರದೇಶದ ಹೊಲಗದ್ದೆಗಳಿಗೆ ಮೈನುಗಳನ್ನು (ಆಸ್ಫೋಟಕ ವಸ್ತುಗಳು) ಹಾಕುತ್ತಿರುವರೆಂದು ವರದಿಯಾಗಿದೆ ಸತ್ಯಾಗ್ರಹಿಗಳು ಒಳಗೆ ಪ್ರವೇಶಿಸಿ, ಮುಂದೆ ನಡೆದುಹೋದಾಗ ಅವರ ಕಾಲುಗಳ ಭಾರಕ್ಕೆ ಮೈನುಗಳು ಸಿಡಿದು ಸತ್ಯಾಗ್ರಹಿಗಳು ಸಾಯುತ್ತಾರೆಂದು ಹೇಳಲಾಗಿದೆ ಗೋವಾದೊಳಗಿರುವ ಜನರು ಯಾರೂ ಆ ಪ್ರದೇಶಕ್ಕೆ ಹೋಗದಂತೆ ಅದನ್ನು ನಿಷೇಧಿತ ಪ್ರದೇಶವೆಂದು ಸಾರಲಾಗಿದೆ ಪೋರ್ಚುಗೀಸ್ ಪೋಲೀಸರು ಪತ್ರಿಕೆಯಲ್ಲಿ ಆವಿತುಕೊಂಡು ಅಲ್ಲಿನವರಿಗೆ ಸೂಕ್ತ ಎಚ್ಚರಿಕೆ ಕೊಡುತ್ತಾರೆ ಈ ರೀತಿಯಲ್ಲಿ ಗುಂಡು ಹಾರಿಸದೆ, ಭಾರತೀಯ ಸತ್ಯಾಗ್ರಹಿಗಳು ತಾವಾಗಿಯೇ ಸಾಯಲು ಪೋರ್ಚುಗೀಸರು ಹೊಸ ತಂತ್ರವನ್ನು ಹೂಡಿರುವರೆಂದು ಹೇಳಲಾಗಿದೆ

ಬೆಗ್ಗಣ ದೀಪವನ್ನು ಕೆಡವಿ ಮೂವರ ಸಾವು

ಮುಜಾಫರ್‌ನಗರ ಉತ್ತರಪ್ರದೇಶದ ... ಎಂಬ ... ಎಂಬುವರು ಸಂಸಾರದೊಡನೆ ಮಲಗಿದ್ದಾಗ, ಬೆಗ್ಗಣವೊಂದು ನುಗ್ಗಿ, ಸೀಮೆಎಣ್ಣೆ ದೀಪವನ್ನು ಉರುಳಿಸಿತೆಂದೂ, ಅದರಿಂದ ಹಾಸಿಗೆ ಬಟ್ಟೆಗಳಿಗೆ ಬೆಂಕಿ ತಗುಲಿ ಆತನಿಗೂ, ... ತೀವ್ರ ಗಾಯವಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ ವರದಿಯಾಗಿದೆ ಆತನ ಪತ್ನಿಯೂ, ಇಬ್ಬರು ಮಕ್ಕಳೂ ಸುಟ್ಟ ಗಾಯದಿಂದ ಮಡಿದುದಾಗಿ ಹೇಳಲಾಗಿದೆ

ಉಪನ್ಯಾಸ

ಶಂಕರಪುರಂ ಹೊಸಹಳ್ಳಿ ರಸ್ತೆಯಲ್ಲಿರುವ ... ಸಂಘದ ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಕೃಷ್ಣ ಜಯಂತಿ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜು ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ವಿ ಟಿ ತಿರುನಾರಾಯಣಯ್ಯಂಗಾರ್‌ರವರು "ಶ್ರೀ ಕೃಷ್ಣಾವತಾರ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ದೇವಸ್ಥಾನದ ವಾರ್ಷಿಕೋತ್ಸವ

ಚಾಮರಾಜಪುರದ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ದೇವರ ಸನ್ನಿಧಿಯಲ್ಲಿ ದೇವಸ್ಥಾನದ ವಾರ್ಷಿಕೋತ್ಸವವನ್ನು ನೆರವೇರಿಸಲಾಗುವುದು ದೇವರ ಮಂಟಪೋತ್ಸವ, ಶ್ರೀ ಆರ್ ... ಅವರಿಂದ ೩೦ ನಿಮಿಷ ... ಮತ್ತು ಶ್ರೀ ಎಸ್ ಅನಂತರಂಗಾಚಾರ್ಯರಿಂದ ಭಾಷಣ ನಡೆಯುವುದು ರಾತ್ರಿ ೮ ಗಂಟೆಗೆ ಗಾನಕಲಾ ನಿಪುಣ ... ಎಸ್ ಚಂದ್ರಶೇಖರಯ್ಯನವರ ಸಂಗೀತವೂ, ೧೧ ಗಂಟೆಗೆ ವಿದುಷಿ ... ಗಾಯನವೂ ನಡೆಯುವುವು ಸರ್ವರಿಗೂ ಆಹ್ವಾನವಿದೆ.

ವಿವಿಧ ಅಪರಾಧಗಳಿಗೆ ಶಿಕ್ಷೆ

ಮೈಸೂರು ೧೦

ಕೆಲ್ಲಟ್ರೋ ಆವರಣದಲ್ಲಿ ರೋಗ ಪ್ರಾರ್ಥಿ ತ್ವಗಿ ಆಸ್ಪತ್ರೆ, ಮುಹಮದ್ ಘೌಸ್ ಮತ್ತು ಸಿಯಾ ಬೋಯಿ ಎಂಬುವರಿಗೂ ಸಂಪುನಗೆ ಬಳಿ ಘುಟ್‌ಪಾತಿನಲ್ಲಿ ಪಬ್ಬ ಮಾಡಿದ್ದಕ್ಕಾಗಿ ಭುಜಂಗಯ್ಯ ಎಂಬುವನಿಗೂ ತಲಾ ೨ ರೂ ದಂಡವನ್ನು ನಗರ ನ್ಯಾಯಾಧೀಶರು ವಿಧಿಸಿದರು

ದೀಪವಿಲ್ಲದೆ ಬೈಸಿಕಲ್ಲುಗಳನ್ನು ಬಿಟ್ಟುಕೊಂಡು ಹೋದುದರಿಂದ ಬಶೀರ್ ಅಹಮದ್ ಮತ್ತು ಅಪರಾಧಿಗಳಿಗೆ ನಗರದ ದ್ವಿತೀಯ ನ್ಯಾಯಾಧೀಶರು ತಲಾ ೫ ರೂ ದಂಡವನ್ನು ವಿಧಿಸಲಾಯಿತು

ಸಾರ್ವಜನಿಕ ವಿದ್ಯಾರ್ಥಿ ನಿಲಯ

ಸಾರ್ವಜನಿಕ ವಿದ್ಯಾರ್ಥಿ ನಿಲಯ ಸಂಘದ ಆಶ್ರಯದಲ್ಲಿ ಕಳೆದ ಬುಧವಾರ ಶ್ರೀ ಬಿ ಎಸ್ ಎ ರಾಮರಾಯರಿಂದ ಧ್ವಜಾರೋಹಣವಾಯಿತು. ಶ್ರೀ ಎಂ ವೀರಭದ್ರಾಚಾರಿಯವರಿಂದ ಅತಿಥಿಗಳ ಪರಿಚಯ ಹಾಗೂ ಸ್ವಾಗತ ಭಾಷಣವಾದನಂತರ ಶ್ರೀ ರಾಮರಾಯರು ಪುರಾತನಾದ ದೇಶದ ಉತ್ತಮ ಪ್ರಜೆಯಾಗಿ ದೇಶ ಸೇವೆ ಮಾಡಬೇಕಾದರೆ ಹುಗಿಸಿಂದಲೇ ಸೇವಾ ಮನೋಭಾವನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕೆಂದೂ, ಇಂತಹ ಬೆಳವಣಿಗೆಗೆ ವಿದ್ಯಾರ್ಥಿ ನಿಲಯಗಳೂ, ಸಿ. ಪಾದಕರಂಥ ಸಂಸ್ಥೆಗಳೂ ಬಹಳ ಸಹಕಾರಿಯಾಗುತ್ತವೆಯೆಂದೂ ನುಡಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಐ ಎನ್ ಎ ದಳದಲ್ಲಿ ನೇತಾಜಿ ಸುಭಾಷ್‌ರವರ ಜೊತೆಯಲಿ ತಮ್ಮ ಅನುಭವದ ಕೆಲವು ಸಂಗ್ರಾಮ ಇತಿಹಾಸ ... ಸ್ವಾತಂತ್ರ್ಯ ... ಶ್ರೀ ಜಿ ಹಿರಿ ನಾಯಕರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು

ಸಂಗೀತ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ... ಶ್ರೀ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸಿದ್ಧಿವಿನಾಯಕ ಪಾಠಶಾಲೆಯಲ್ಲಿ ಸಂಗೀತ ವಿದ್ವಾನ್ ಮನೋಹರನ್‌ರವರ ಗಾಯನವನ್ನು ... ಸುಬ್ರಹ್ಮಣ್ಯಂರವರ ಪಿಟೀಲು ಮತ್ತು ... ಅವರ ಮೃದಂಗದೊಡನೆ ನಡೆಯುವುದು

ರಾಜಧಾನಿಯ ಸೀತಾರಾಮ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ಕೃಷ್ಣಜನ್ಮದ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಬಿ ಶ್ರೀನಿವಾಸಯ್ಯಂಗಾರ್ ಸಹೋದರರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು

ಯುವಕರ ಸಾಂಸ್ಕೃತಿಕ ಸಂಘದಲ್ಲಿ ಗಣಪತಿ ಉತ್ಸವ

ಚಿನ್ನಾಚಿಬಿಕ್ಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಗಣಪತಿ ಉತ್ಸವವು ನಡೆಯುತ್ತದೆ ಸರ್ವರೂ ಎಂದಿನಂತೆ ಸಹಕರಿಸಬೇಕಾಗಿ ಕೋರಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

೧೦೩ ನೇ ವಯಸ್ಸಿನಲ್ಲೂ ಮದುವೆ

ಸಿಸಿಲಿನ ಒಂದು ಗ್ರಾಮದಲ್ಲಿ ಜೀವಿಸಿರುವ ... ಗಿರುವ, ... ಒಬ್ಬ ವೃದ್ಧನು ತನ್ನ ... ನೃತ್ಯ ಮಾಡುವುದೇ ... [illegible] ... ಬೈಸಿಕಲ್ ಮೇಲೆ ... ಹೋಗುವನು ...

ಗೋವಾ ಸತ್ಯಾಗ್ರಹಕ್ಕಾಗಿ ವಿದ್ಯಾರ್ಥಿನಿಯ ರಹಸ್ಯ ಯಾತ್ರೆ

ಗುಂಟೂರಿನ ಮೆಡಿಕಲ್ ಕಾಲೇಜು ಮಹಿಳೆಯರ ಹಾಸ್ಟೆಲಿನ ವಿದ್ಯಾರ್ಥಿನಿ ಎಸ್ ಸುಲೋಚನಾ ಎಂಬಾಕೆಯು ಅಧಿಕಾರಿಗಳಿಗೆ ಅರಿವಾಗದಂತೆ ಗಲೀ ತಿಳಿಸದೆ ರಹಸ್ಯವಾಗಿ ಗೋವಾ ಸತ್ಯಾಗ್ರಹದಲ್ಲಿ ಭಾಗವಹಿಸಲು ಬೆಳಗಾವಿಗೆ ಹೊರಟಿರುವ ... ವರ್ತಮಾನ ... ಆಕೆಯು ತನ್ನ ... ಮೇಜಿನೊಳಗೆ ಆಭರಣಗಳನ್ನೂ, ಒಂದು ಪತ್ರವನ್ನೂ ಬಿಟ್ಟುಹೋಗಿದ್ದಳು ಪತ್ರದಲ್ಲಿ ತಾನು ಗೋವಾ ಸತ್ಯಾಗ್ರಹಕ್ಕೆ ಹೋಗುವುದಾಗಿ ನಮೂದಿಸಿದ್ದಳು ಈ ವಿಷಯವನ್ನು ಪೋಲೀಸರಿಗೆ ತಿಳಿಸಲಾಗಿದೆ

ಟರ್ಕಿ ನಗರಗಳಲ್ಲಿ ಟ್ಯಾಂಕು ಮತ್ತು ಸೈನ್ಯಗಳ ಗಸ್ತು

೨೦೦ ಜನರ ಬಂಧನ

ಟರ್ಕಿಯ ಇಸ್ತಾಂಬುಲ್, ಅಂಕಾರಾ ಮತ್ತು ಇಜ್ಮೀರ್ ನಗರಗಳಲ್ಲಿ ಮಿಲಿಟರಿ ಆಡಳಿತವನ್ನು ... ರಾತ್ರಿ ೧೧ ಘಂಟೆಯಿಂದ ... ಕರ್ಫ್ಯೂ ಆಜ್ಞೆಯನ್ನು ವಿಧಿಸಿರುವರು ಟ್ಯಾಂಕುಗಳು ಮತ್ತು ಸೈನಿಕರು ಪತ್ತೆಗಳಲ್ಲಿ ಎರಡು ದಿನಗಳಿಂದಲೂ ಗಸ್ತು ತಿರುಗುತ್ತಿರುವರು ಜನರ ಗುಂಪುಗಳು ... ಗ್ರೀಕರ ... ಸಂಬಂಧವಾದ ... ಪರಿಸ್ಥಿತಿಗಳನ್ನು ಬಿಟ್ಟು ... ಸಭೆಗಳನ್ನು ನಿಷೇಧಿಸಲಾಗಿದೆ ... ನಗರದಲ್ಲಿ ೨೦೦ ಮಂದಿಯ ಬಂಧನವಾಗಿದೆ ಇಸ್ತಾಂಬುಲಿನಲ್ಲಿ ೨,೦೦೦ ಜನರನ್ನು ಪೋಲೀಸರು ಪ್ರಶ್ನಿಸಿ ... ರು

"ಚಾ ಗೃ ತಿ ಚಿ ತ್ರ"

ರಾಜಧಾನಿಯ ರಣಜಿತ್ ಸಿನಿಮಾ ಮಂದಿರದಲ್ಲಿ ನೆನ್ನೆ ಜಾಗೃತಿ ಎಂಬ ಹಿಂದಿ ಚಿತ್ರವು ಆರಂಭವಾಯಿತು. ... ಮತ್ತು ಚಿತ್ರವು ... ನೈಜತೆ ... [illegible] ... ಅವನನ್ನು ನಗರದ ವಸತಿ ಗೃಹಕ್ಕೆ ... ಹೊಸ ... ಅಧ್ಯಾಪಕ ... ಆ ಬಾಲಕನು ... ವಿದ್ಯಾರ್ಥಿ ... ಈ ಚಿತ್ರವನ್ನು ... ಎಲ್ಲರೂ ನೋಡಬೇಕಾದ ಈ ಚಿತ್ರವು ... ತಯಾರಿಸಿದ್ದಾರೆ.

ಸೈಕಲ್ ಕಳವು

ಕೃಷ್ಣರಾಜ ಪೋಲೀಸು ಠಾಣೆ ಬಳಿ ಇರುವ ... ನಗರದ ವರ್ತಕರಾದ ಶ್ರೀ ಎಂ ಪಿ ಭೋಜಯ್ಯನವರ ಬೈಸಿಕಲ್ಲನ್ನು ಯಾರೋ ಕಳವು ಮಾಡಿದರೆಂದು ಪೋಲೀಸರಿಗೆ ದೂರು ಕೊಡಲಾಗಿದೆ

ವರಲಕ್ಷ್ಮಿ ಲಲಿತ ಕಲಾ ಸಂಶೋಧನಾ ಸಮಿತಿಯ ಆರಂಭ

ಮೈಸೂರು ೧೦

ರಾಜಧಾನಿಯ ಶ್ರೀ ವರಲಕ್ಷ್ಮಿ ಲಲಿತ ಕಲಾ ಅಕೆಡೆಮಿಯ ಸಂಶೋಧನಾ ಸಮಿತಿಯ ಪ್ರಕಟಣ ಮಾಲೆಯ ಆರಂಭೋತ್ಸವವನ್ನು ... ಸ್ ... ಶ್ರೀ ಬಿ ... ಅವರು ನೆರವೇರಿಸಿದರು ಸಂಸ್ಕೃತ ನೃತ್ಯ, ನಾಟಕ ಮತ್ತು ಸಂಗೀತ ಅಕೆಡೆಮಿಯ ಅಧ್ಯಕ್ಷರಾದ ಶ್ರೀ ಬಿ ಎಸ್ ... ಅಧ್ಯಕ್ಷತೆ ವಹಿಸಿದ್ದರು

ಶ್ರೀ ಆರ್ ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿ, ಸಂಶೋಧನಾ ಸಮಿತಿಯ ಯೋಜನೆಯನ್ನು ವಿವರಿಸಿದರು ... ಸಾಮ್ರಾಜ್ಯದ ಸಂಸ್ಥಾಪಕರಾದ ವಿದ್ಯಾರಣ್ಯರ ಸಂಗೀತಸಾರ ಮತ್ತು ... ವಿಷಯವನ್ನು ಪ್ರಕಟಿಸಲು ತಮ್ಮ ಸಂಸ್ಥೆಯು ಯೋಜಿಸಿರುವುದಾಗಿಯೂ, ... ಸಂಗೀತ ... ವಿಷಯವನ್ನು ... ಇರುವುದೆಂದೂ ಅವರು ತಿಳಿಸಿದರು

ಶ್ರೀ ... ಅವರು ಭಾಷಣ ಮಾಡಿ ಭಾರತೀಯ ಸಂಸ್ಕೃತಿಯ ಮಹತ್ವವನ್ನು ವಿವರಿಸಿದರು ... ಮತ್ತು ... ಸಂಸ್ಕೃತ ... ಭೌತಿಕ ... ಸಂಗೀತ ... [illegible]

... ಅವರು ಭಾರತ ... ಶ್ರೋತೃಗಳ ... ತಿಳಿಸಿದರು

ರಾಜಧಾನಿಯ ಬೆಳ್ಳಿಕೃಷ್ಣನ ಮೇಲು ಪ್ರದೇಶದಲ್ಲಿ ನೆನ್ನೆ ರಾತ್ರಿ ... ಗಂಟೆ ಹೊತ್ತಿನಲ್ಲಿ ... ಕಯನ್ನು ಒಡೆದು ಓಡುತ್ತಿದ್ದ ... ರ್ ಬೇಗ್ ಎಂಬುವನನ್ನು ... ಪೋಲೀಸರು ... ಮೇಲೆ ಬಂಧಿಸಿದರು

ರಾಮಮಂತ್ರ ಘೋಷಣೆಯೊಡನೆ ಗೋವಾ ಪ್ರವೇಶ

ಗೋವಾ ದಲ್ಲಿ ... ಗೋವಾ ಪ್ರವೇಶ ... ರಾಮಮಂತ್ರ ... ಗೋವಾ ಗಡಿಯನ್ನು ಪ್ರವೇಶಿಸುವ ... ನಡೆಯಾಗಿದೆ

● ... ಸೆರೆವಾಸದ ... ವಿನಾಯಿತಿ ಕೊಟ್ಟಿದ್ದಾರೆ

LATEST ARRIVALS

1 R K Narayan
NEXT SUNDAY Rs 1-8
2 Aligu
BRIDGE ENGINEERING Rs 5-8
3 Junnarkar
MECHANICS OF STRUCTURE
Vol I (1955 Edn) Rs 15-0
4 ... Ikar
SURVEYING & LEVELLING
P... (Revised & Enlarg...
1955 Edn) Rs 10-0
5 ... tion
ELECTRIC TECHNOLOGY ...
25 ...
6 [illegible] (...) Rs 1-8

H VENKATARAMIAH & SONS,
Vidyanidhi Book Depot,
Vidyanidhi Building
NEW STATUE CIRCLE
MYSORE

Edited Printed and Published by A R Nagarajan at Sadhvi Press, D Subbiah Road, Mysore

Office of the Executive Engineer,
Nanjangud Division, Mysore
Dated 9-9-1955

NOTIFICATION

This is to notify for the information of the public that dismantled bricks and brick bats in stacks of P R P. Lines behind the new Exhibition buildings at Mysore, will be sold in public auction by the undersigned or his authorised representative on Tuesday, dated 13th September 1955 at 9 A M at the spot Conditions of sale can be seen on the notice board of the Office of the Executive Engineer, Nanjangud division Mysore

(Sd) M VEDAVYASACHAR,
Executive Engineer Nanjangud Division

SREE GANESH TALKIES

Gala Release on 10 9-55 Daily 3 Shows

(In Cinemascope Technicolor)
Featuring — Maureen O'Hara, Tyrone Power
Robert Francis and others

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಪ್ರತಿಗೆ ... ಕಾಸು

ಗೌರಿಹಬ್ಬಕ್ಕಾಗಿ
ಮೈಸೂರು ಸಿಲ್ಕು
[illegible]
[illegible]
ಜರತಾರ್ ಸೀರೆಗಳು
ಬಂದಿವೆ. ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : SUNDAY 11-9-1955 ಮೈಸೂರು : ಭಾನುವಾರ ೧೧-೯-೧೯೫೫ [ಸಂಚಿಕೆ : ೩೦

ನಾಗರಿಕರ ವಾಪಸಾತಿ ಬಗ್ಗೆ ಅಮೆರಿಕಾ-ಚೀಣಾ ಒಪ್ಪಂದ

ದಕ್ಷಿಣ ಆಫ್ರಿಕದಲ್ಲಿ ಮಹಾರಾಜರ ಪ್ರವಾಸದ ವಿವರ

ರೋಟರಿ ಕ್ಲಬ್ ಸಭೆಯಲ್ಲಿ ಶ್ರೀ. ರಾಮನಾಥಯ್ಯನವರ ಭಾಷಣ

ಮೈಸೂರು ೧೦

ಮಹಾರಾಜರ ಕಾರ್ಯದರ್ಶಿಯವರಾದ ಶ್ರೀ ಪಿ ರಾಮನಾಥಯ್ಯನವರು ನಿನ್ನೆ ದಿನ ಗು ... ಹೋಟೆಲು ಮೆಟ್ರೊಪೋಲಿನಲ್ಲಿ ಸೇರಿದ್ದ ರೋಟರಿ ಕ್ಲಬ್ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ಆಫ್ರಿಕದಲ್ಲಿ ಶ್ರೀಮನ್ಮಹಾರಾಜರೊಡನೆ ತಾವು ಪ್ರವಾಸ ಕೈಗೊಂಡಿದ್ದುದರ ಅನುಭವವನ್ನು ವಿವರಿಸಿದರು

ಆಫ್ರಿಕದ "ಸಫಾರಿ" ಶಿಬಿರಗಳಲ್ಲಿ ೨೩ ದಿನ ... ರಾಷ್ಟ್ರೀಯ ವನಗಳು, ಪ್ರಾಣಿ ಸಂರಕ್ಷಣೆಯ ಪ್ರದೇಶಗಳಲ್ಲಿ ೨೩ ದಿನಗಳ ಕಾಲ ಪ್ರವಾಸ ಮಾಡಿದುದಾಗಿಯೂ, ... ನದಿ ಪ್ರವೇಶದಲ್ಲಿ ಮೊದಲು ತಂಗಿದ್ದು ... ಅಲ್ಲಿ ಮನುಷ್ಯನ ವಾಸದ ಸುಳಿವೇ ... ಎಂದೂ ಅವರು ಹೇಳಿದರು ... ಕಾಡುಮೃಗಗಳನ್ನು ತಾವು ... ವಾಗಿಯೂ, ಅಲ್ಲಿದ್ದ ಕಾಡುಜನರು ದನ ... ಸಾಕಿಕೊಂಡು, ಹಾಲು, ರಕ್ತ ಮತ್ತು ಮಾಂಸವನ್ನು ತಿನ್ನುತ್ತಿದ್ದವನ್ನು ನೋಡಿರುವುದಾಗಿಯೂ ಹೇಳಿದರು

... ಎಂಬ ಜೌಗು ಪ್ರದೇಶದಲ್ಲಿ ಮೈ ... ಮರ್ಮದ ಹೊದಿಕೆ ಬಿಟ್ಟು ಬೇರೆ ಉಡುಪು ... ಯದ ಜನಗಳು ಕಣ್ಣಿಗೆ ಬೀಳುತ್ತಿದ್ದು ... ಆ ಪ್ರದೇಶದಲ್ಲಿ ಅನೇಕ ಸಿಂಹ ... ಮೃಗಗಳು ಮತ್ತು ಆನೆಗಳು ಇದ್ದು ... ಅವರು ನುಡಿದರು ಅಲ್ಲಿ ಹಣ್ಣು ಆನೆ ... ಹಿಂತವಿರುವುದೆಂದೂ ಅವರು ತಿಳಿಸಿ ...

... ರ ಮಹಾರಾಜರು ನ್ಯೋ ... ರಂಗೊರ ... ಭೇಟಿಯಿತ್ತರು ಆ ಪ್ರದೇಶದಲ್ಲಿ ... ರಾಷ್ಟ್ರೀಯ ವನವಿದೆ ಅದರಲ್ಲಿ ೨,೦೦೦ ... ವಿದುದ ಮತ್ತು ನೂರಾರು ಅಡಿಗಳ ಮೈ ... ರ್ಣದ ಆರಿಹೋದ ಭಾರಿ ಜ್ವಾಲಾಮುಖಿಯ ಬಾಯಿ ಬಿರುಕು ಇದೆ ಅದರೊಳಗೆ ... ಆಪ್ ಉಳ್ಳ ಸರೋವರಗಳಿವೆ ಅಲ್ಲಿ ... ವಿಧವಾದ ಪ್ರಾಣಿಗಳು ಜೀವಿಸುತ್ತವೆ. ... ಜನರು ತುಂಬಾ ಸೃಶಕರು. ಅವರ ... ಮತ್ತು ಬಾಯಿಗಳಿಗೆ ನೊಣಗಳು ಮು ... ಎಂಬುದಾಗಿಯೂ ಶ್ರೀ ರಾಮನಾಥಯ್ಯನವರು ತಿಳಿಸಿದರು.

... ಲಂಕಾಣದಲ್ಲಿ ಪಿಕೂರಿ ... ದವರ ಬಂಧನಕ್ಕೆ ಆಜ್ಞೆ

... ಲಂಕಾಣದಲ್ಲಿ ದಂಗೆ ನಡೆಸಲು ಪಿತೂರಿ ... ಎಂದು ಶಂಕೆಗೆ ಗುರಿಯಾಗಿರುವ ಅಲ್ಲಿನ ... ಜನರಲ್ ಮತ್ತು ಇತರ ೪ ಜನ ... ಗಳ ವಸ್ತ್ರಗಿರಿಗೆ, ವಾರಂಟು ಹೊರಡಿಸ ... ಅವರನ್ನು ಪೋಲೀಸರು ಹುಡುಕುತ್ತಿ ... ಹಾಗೊಳಗೆ ೧೮ ಕ್ಕೇ ಕಾಲಾಳು ... ಗಳು ಶರಣಾಗುವಂತೆ ಘೋಷಣೆ ಹೊ ... ರಡಿಸಿದೆ.

ರಷ್ಯಾ-ಪಶ್ಚಿಮ ಜರ್ಮನಿ ಸಂಧಾನದಲ್ಲಿ ಬಿಕ್ಕಟ್ಟು?

ಜರ್ಮನ್ ಯುದ್ಧ ಕೈದಿಗಳ ಖುಲಾಸೆ ಪ್ರಶ್ನೆ ಬಗ್ಗೆ ರಷ್ಯಾ ಅಸಮ್ಮತಿ

ಪಶ್ಚಿಮ ಜರ್ಮನಿಯ ಪ್ರಧಾನಿ ಡಾ॥ ಅಡೆ ನೋರ್‌ರವರು ಮೊನ್ನೆ ರಷ್ಯದ ಮುಖಂಡರೊಡನೆ ಸಂಧಾನವನ್ನು ಆರಂಭಿಸಿದರು ರಷ್ಯದಲ್ಲಿ ೧೦ ವರ್ಷಗಳಿಂದ ಬಂಧಿಸಲ್ಪಟ್ಟಿರುವ ಜರ್ಮನ್ ಯುದ್ಧ ಕೈದಿಗಳನ್ನು ಖುಲಾಸೆ ಮಾಡಬೇಕೆಂದೂ, ಹಾಗೆ ಮಾಡಿದಹೊರತು ಎರಡು ರಾಷ್ಟ್ರಗಳಿಗೂ ಸಂಬಂಧವು ಸಮರ್ಪಕವಾಗಿರುವುದೆಂದು ಭಾವಿಸಲು ಸಾಧ್ಯವಿಲ್ಲವೆಂದೂ ಅವರು ರಷ್ಯದ ನಾಯಕರಿಗೆ ತಿಳಿಸಿದರು ಜರ್ಮನಿಯನ್ನು ವಿಭಜಿಸಿರುವುದು ನ್ಯಾಯಸಮ್ಮತವಲ್ಲವೆಂದು ಅವರು ಸೂಚಿಸಿದರು

ಜರ್ಮನಿ ಪ್ರಧಾನಿಯು ಆಡಿರುವ ಮಾತುಗಳು ತುಂಬಾ ಅಸಮಾಧಾನಕರವಾದುದೆಂದು ರಷ್ಯದ ನಾಯಕ ನಿಕಟಾ ಕ್ರುಶ್ಚೆವ್‌ರವರು ತಿಳಿಸಿದ್ದಾರೆ ಈ ಸಮಸ್ಯೆಯನ್ನು ಮಾನವೀಯ ಪ್ರಶ್ನೆಯಾಗಿ ತೀರ್ಮಾನ ಮಾಡಬೇಕೆಂದು ಜರ್ಮನ್ ಪ್ರಧಾನಿಯು ತಿಳಿಸಿದಾಗ, ರಷ್ಯದ ಪ್ರಧಾನಿ ಬುಲ್ಗಾನಿನ್‌ರವರು ಆ ಬಗ್ಗೆ ಚರ್ಚೆಯನ್ನು ಮುಂದೆ ಮಾಡಿ, ಪೂರ್ವ ಜರ್ಮನಿ ಪ್ರತಿನಿಧಿಗಳು ಈ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವ ವರೆಗೂ ಅದನ್ನು ಚರ್ಚಿಸುವುದು ಸಾಧ್ಯವಿಲ್ಲವೆಂದು ತಿಳಿಸಿದರು

ಇದರಿಂದ ಎರಡು ರಾಷ್ಟ್ರಗಳ ಮಾತುಕತೆಗಳಲ್ಲಿ ಬಿಕ್ಕಟ್ಟುಂಟಾಗುವ ಭೀತಿಯೊದಗಿರುವುದೆಂದು ವರದಿಯಾಗಿದೆ

ಚಕ್ರಬಂಧ ಸ್ಪರ್ಧೆಗಳಿಗೆ ನಿರ್ಬಂಧದ ಶಾಸನ

ತಿಂಗಳಿಗೆ ೧೦೦೦ ರೂ ಗಿಂತ ಹೆಚ್ಚು ಬಹುಮಾನಗಳನ್ನು ಕೊಡುವ ಸ್ಪರ್ಧೆಗಳನ್ನು ನಿಷೇಧಿಸುವ ಬಗ್ಗೆ ಭಾರತ ಸರ್ಕಾರದವರು ಮಸೂದೆಯನ್ನು ಸಿದ್ಧಗೊಳಿಸಿರುವರು ಬರುವ ವಾರ ಅದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗುವುದು. ಇದರಲ್ಲಿ ಚಕ್ರಬಂಧ, ಚಿಟ್ಟುಹೋದ ಪದ, ಚಿತ್ರಗಳ ಮತ್ತು ಪದ ಮತ್ತು ಅಂಕಿಗಳ ಜೋಡಣೆ ಸ್ಪರ್ಧೆಗಳು ಸೇರುವುವು. ಸ್ಪರ್ಧೆಗಳನ್ನು ನಡೆಸುವವರು ರಹದಾರಿಯನ್ನು ಪಡೆಯಬೇಕಾಗುವುದು ಮತ್ತು ಲೆಕ್ಕಪತ್ರಗಳನ್ನು ಇಟ್ಟು, ರಹದಾರಿ ಕೊಡುವ ಅಧಿಕಾರಿಗೆ ತೋರಿಸಬೇಕಾಗುವುದು, ನಿಬಂಧನೆಗಳನ್ನು ಉಲ್ಲಂಘಿಸಿದವರಿಗೆ ೧,೦೦೦ ರೂ ದಂಡ ಇಲ್ಲವೇ ೩ ತಿಂಗಳ ಸಜಾ ಅಥವಾ ಎರಡು ಶಿಕ್ಷೆಗಳನ್ನೂ ವಿಧಿಸಲಾಗುವುದು

ಗೋವಾ ಸತ್ಯಾಗ್ರಹ ತಪ್ಪೆಂದು ವಿನೋಬಾ ಭಾವೆ ಹೇಳಿಕೆ

ಈಗಿನ ಸನ್ನಿವೇಶದಲ್ಲಿ ಗೋವಾದಲ್ಲಿ ಸತ್ಯಾಗ್ರಹ ನಡೆಸುವುದು ಭಾರಿ ತಪ್ಪಾಗುವುದೆಂದು ಆಚಾರ್ಯ ವಿನೋಬಾ ಭಾವೆಯವರು ತಿಳಿಸಿರುತ್ತಾರೆ. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರಿಗೆ ಅವರು ಮೇಲ್ಕಂಡ ಅಭಿಪ್ರಾಯ ಸೂಚಕ ತಂತಿಯನ್ನು ಕಳುಹಿಸಿದರು.

ನಾಗರಿಕರ ವಾಪಸಾತಿ ಬಗ್ಗೆ ಅಮೆರಿಕಾ- ಚೀಣಾ ಒಪ್ಪಂದ

ಭಾರತ ಮತ್ತು ಬ್ರಿಟನ್ನುಗಳ ಸಹಾಯಕ್ಕೆ ಆಹ್ವಾನ

ಅಮೆರಿಕಾ ಮತ್ತು ಚೀಣಾ ನಾಗರಿಕರನ್ನು ಆಯಾ ದೇಶಗಳಿಗೆ ವಾಪಸು ಕಳುಹಿಸುವ ವಿಷಯವಾಗಿ ಜಿನೀವಾದಲ್ಲಿ ಎರಡು ರಾಷ್ಟ್ರಗಳ ರಾಯಭಾರಿಗಳೂ ಒಪ್ಪಂದವಾಗಿದೆ ಚೀಣದ ನಾಗರಿಕರ ವಾಪಸಾತಿಗೆ ಸಹಾಯ ಮಾಡುವಂತೆ ಭಾರತವನ್ನು ಆಹ್ವಾನಿಸಲಾಗುವುದು ಅಮೆರಿಕದಲ್ಲಿರುವ ... ಸ್ವದೇಶಕ್ಕೆ ಮರಳಲು ಇಚ್ಛಿಸಿದ್ದವರು ಯಾವರು, ಆ ವಿಷಯವನ್ನು ವಾಷಿಂಗ್ಟನ್ನಿನಲ್ಲಿರುವ ಭಾರತದ ರಾಯಭಾರಿಗೆ ತಿಳಿಸಬಹುದೆಂದೂ ... ಪ್ರಜೆಗಳು ವಾಪಸಾಗಲು, ಅವಶ್ಯವಿದ್ದರೆ, ಭಾರತ ಸರ್ಕಾರದವರು ಹಣ ಸಹಾಯ ಮಾಡಬಹುದೆಂದೂ ರಾಯಭಾರಿಗಳ ಸಮ್ಮೇಳನದ ಪ್ರಕಟಣೆಯು ತಿಳಿಸಿದೆ. ಹಾಗೆಯೇ ಚೀಣದಿಂದ ವಾಪಸಾಗುವ ಅಮೆರಿಕನ್ನರಿಗೆ ಬ್ರಿಟನ್ನು ಸಹಾಯ ನೀಡುವಂತೆ ಕೋರಲಾಗಿದೆ

ಗಾಂಧಿಜಿಯನ್ನು ಕೊಲ್ಲುವ ಸಂಚು? ... ಕೊಲುವ ಚಿತ್ರ

ಪೌಂಡಿಚೇರಿಯಲ್ಲಿ ಮಹಾತ್ಮ ಗಾಂಧಿಯವರ ಹಸ್ತಪ್ರತಿಯ ಪೋರ್‌ಬಂದರಿನ ನಿವಾಸದ ಪಕ್ಕದ ಮನೆಯೊಂದರಲ್ಲಿ ಮಹಾತ್ಮಾ ಗಾಂಧಿಯವರನ್ನು ಕೊಲ್ಲುವ ಚಿತ್ರವಿರುವ ಬಣ್ಣದ ಪರ್ದೆ ... ಯೊಂದು ಸಿಕ್ಕಿದೆ ಅದನ್ನು ಪೊಲೀಸರು ತೆಗೆದುಕೊಂಡುಹೋಗಿ ನೆಹರೂರವರಿಗೆ ಕಳುಹಿಸಲಾಗುವುದು ಅದನ್ನು ದೆಹಲಿಯ ರಾಷ್ಟ್ರೀಯ ಪ್ರದರ್ಶನ-ಭವನದಲ್ಲಿಡಲಾಗುವುದು

ಕಾಸರಗೋಡು ತಾಲ್ಲೂಕು ಕೇರಳ ಪ್ರಾಂತಕ್ಕೆ?

ತಿರುವಾಂಕೂರು-ಕೊಚ್ಚಿ, ಮಲಬಾರು ಜಿಲ್ಲೆ ಮತ್ತು ಮಂಗಳೂರಿನ ಕಾಸರಗೋಡು ತಾಲ್ಲೂಕುಗಳನ್ನೊಳಗೊಂಡ ಕೇರಳ ಸಂಸ್ಥಾನವನ್ನು ರಚಿಸುವಂತೆ ಸಂಸ್ಥಾನಗಳ ಪುನರ್ರಚನಾ ಸಮಿತಿಯವರು ಶಿಫಾರಸು ಮಾಡಿರುವುದಾಗಿ ತಿರುವಾಂಕೂರಿನ ಮುಖ್ಯಮಂತ್ರಿ ಗೋವಿಂದಮೆನನ್ನರು ತಿಳಿಸಿರುವುದಾಗಿ ವರದಿಯಾಗಿದೆ

ಆಫ್ಘಾನಿಸ್ತಾನ-ಪಾಕಿಸ್ತಾನಗಳಿಗೆ ಪುನಃ ಸೌಹಾರ್ದ

ಧ್ವಜಗಳ ವಿಷಯವಾಗಿ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನಗಳ ನಡುವೆ ಉಂಟಾಗಿದ್ದ ವಿರಸವು ಪರಿಹಾರವಾಗಿ, ಇನ್ನು ಕೆಲ ದಿನಗಳಲ್ಲಿ ಉಭಯ ರಾಷ್ಟ್ರಗಳಿಗೂ ಸಾಮಾನ್ಯ ಸಂಬಂಧವು ಪುನಃ ಆರಂಭವಾಗುವುದೆಂದೂ, ಒಂದು ವಾರದೊಳಗೆ ಕಾಬೂಲಿನಲ್ಲಿ ಪಾಕಿಸ್ತಾನದ ಧ್ವಜ ಮತ್ತು ಪೆಷಾವರಿನಲ್ಲಿ ಆಫ್ಘನ್ನರ ಧ್ವಜವನ್ನು ವೈಭವಪೂರ್ವಕವಾಗಿ ಆರೋಹಣ ಮಾಡಲಾಗುವುದೆಂದೂ ವರದಿಯಾಗಿದೆ.

ಸಾಬೂರವರು ಮೈಸೂರಿನಲ್ಲೇ ನೆಲೆಸುವರೇ!

ಮೈಸೂರು ಸಾಬೂರವರು ಮೆಹಬೂಬ್ ಪ್ರೊಡಕ್ಷನ್ಸಿನವರ 'ಮದರ್ ಇಂಡಿಯಾ' ಚಿತ್ರದಲ್ಲಿ ಪಾತ್ರ ವಹಿಸಲು ಬೊಂಬಾಯಿಗೆ ತೆರಳುತ್ತಾರೆ ಎಂದು ... ಅವರು ಮೈಸೂರಿನಲ್ಲೇ ನೆಲೆಸುವ ಉದ್ದೇಶ ತೋರಿರುವರೆಂದೂ, ಇಮ್ಮಡೇ ಅದ ಸ್ಟುಡಿಯೋವಿನಲ್ಲಿ ಚಿತ್ರಗಳನ್ನು ತೆಗೆಯುವರೆಂದೂ ತಿಳಿದು ಬಂದಿದೆ.

ವಿಶ್ವೇಶ್ವರಯ್ಯನವರಿಗೆ ದೆಹಲಿ ಕನ್ನಡಿಗರ ಸನ್ಮಾನ

ಆಧುನಿಕ ಮೈಸೂರಿನ ನಿರ್ಮಾತೃ ಡಾಕ್ಟರ್ ಎಂ. ವಿಶ್ವೇಶ್ವರಯ್ಯನವರು "ಭಾರತ ರತ್ನ" ಎಂಬ ಅತ್ಯುನ್ನತ ಪ್ರಶಸ್ತಿಯನ್ನು ಪಡೆದುದಕ್ಕಾಗಿ ಅವರನ್ನು ಗೌರವಿಸಲು ದೆಹಲಿಯ ಕರ್ನಾಟಕ ಸಂಘದವರು ಮೊನ್ನೆ ಸಮಾರಂಭವೊಂದನ್ನು ಏರ್ಪಡಿಸಿದ್ದರು ಸಂಘದ ಅಧ್ಯಕ್ಷರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ವಿಶ್ವೇಶ್ವರಯ್ಯನವರ ಪ್ರತಿಭೆಯನ್ನು ಪ್ರಶಂಸಿಸಿ, ರಾಷ್ಟ್ರದ ಅಭಿವೃದ್ಧಿಗಾಗಿ ಯೋಜನೆ ಹಾಕಬೇಕೆಂದು ಅವರು ಮೊದಲೇ ಹೇಳಿದ್ದರೆಂದೂ, ಅವರ ಯೋಜನೆಗಳ ಮೂಲಪುರುಷರೆಂದೂ ತಿಳಿಸಿದರು

ವಿಶ್ವೇಶ್ವರಯ್ಯನವರು ಉತ್ತರವಿತ್ತು, ದೆಹಲಿಯಲ್ಲಿರುವ ಅನೇಕ ಮೈಸೂರಿನವರ ಬಗ್ಗೆ ಸಂತೋಷವನ್ನು ಸೂಚಿಸಿ, ಭಾರತದಲ್ಲಿ ಮೊಟ್ಟಮೊದಲಾಗಿ ಕೃಷ್ಣರಾಜಸಾಗರ ಜಲಾಶಯವನ್ನು ನಿರ್ಮಿಸಲಾಯಿತೆಂದೂ, ಅದು ಇತರ ಸಂಸ್ಥಾನಗಳಿಗೆ ಮಾರ್ಗದರ್ಶನ ಮಾಡಿದುದಾಗಿಯೂ ನುಡಿದರು ಸಮಾರಂಭದಲ್ಲಿ ಡಾ॥ ರಾಧಾಕೃಷ್ಣನ್, ... ಕುಮುದ ಮುಖರ್ಜಿ, ... ಮೊಘರ್ ... , ನಿಜಲಿಂಗಪ್ಪ, ರುಕ್ಮಿಣಿ ಅರುಂಡೇಲ್, ಎಸ್ ಚನ್ನಯ್ಯ ಮುಂತಾದವರು ಭಾಗವಹಿಸಿದರು

ಪಾಕಿಸ್ತಾನಕ್ಕೆ ಗೋವಾ ಒಪ್ಪಿಸಲು ಪೋರ್ಚುಗಲ್ಲಿನ ಯೋಜನೆ

ಭಾರತದ ದಿಗ್ಬಂಧನದಿಂದ ಉಂಟಾಗಿರುವ ಕಷ್ಟ ಪರಿಸ್ಥಿತಿಯನ್ನು ದಾಟಲು ಪೋರ್ಚುಗಲ್ಲಿಗೆ ಪಾಕಿಸ್ತಾನವು ನೀಡಿದ ಸಹಾಯಕ್ಕೆ ಪ್ರತಿಯಾಗಿ ಸೌರಾಷ್ಟ್ರದ ಪಕ್ಕದಲ್ಲಿರುವ ತಮ್ಮ ಚಿಕ್ಕ ವಸಾಹತು ದಿಯುವನ್ನು ಪಾಕಿಸ್ತಾನಕ್ಕೆ ಒಪ್ಪಿಸಬೇಕೆಂದು ಪೋರ್ಚುಗಲ್ಲು ಆಲೋಚಿಸಿರುವುದೆಂದು ವರದಿಯಾಗಿದೆ ಪಾಕಿಸ್ತಾನದ ಹಲವು ಅಧಿಕಾರಿಗಳು ದಮನ್ನಿಗೆ ಈಚೆಗೆ ಭೇಟಿಯಿತ್ತು,ದಿಯುವಿನ ಸಂಬಂಧವಾಗಿ ಮಾತುಕತೆ ನಡೆಸಿದರೆಂದು ವರದಿಯಾಗಿದೆ

ಮಧ್ಯ ಪ್ರದೇಶ ಸರ್ಕಾರದಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸೋಲು.

ಮಧ್ಯ ಪ್ರದೇಶ ಪ್ರಾಂತದ ಮುಖ್ಯ ಮಂತ್ರಿ ರವಿಶಂಕರ ಶುಕ್ಲರವರ ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ಸೂಚಿಸುವ ನಿರ್ಣಯವನ್ನು ಅಲ್ಲಿನ ಶಾಸನ ಸಭೆಯಲ್ಲಿ ನೆನ್ನೆ ಪ್ರಜಾ ಪಕ್ಷದ ವಿ. ವೈ. ತಮಾಸ್ಕರ್‌ರವರು ತಂದು, ಅದು ೧೫೭-೨೦ ಮತಗಳಿಂದ ಬಿದ್ದುಹೋಯಿತು ನಿರ್ಣಯವನ್ನು ಸಮರ್ಥಿಸಲು ೩೦ ಕಾರಣಗಳನ್ನು ಸದಸ್ಯರು ಸೂಚಿಸಿದ್ದರು ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸಲು ಹಿಂದೆ ಮೂರು ಬಾರಿ ಪ್ರಯತ್ನ ನಡೆದಿತ್ತು.

ವಾರ ಭವಿಷ್ಯ

ತಾ॥ ೧೧-೯-೫೫ ರಿಂದ ೧೭-೯-೫೫ ರ ವರೆಗೆ

ಮೇಷ —ಆರೋಗ್ಯ ಸಮರ್ಪಕ ಆರ್ಥಿಕ ಚಿಕ್ಕಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ನಷ್ಟ, ಅನ್ಯರಿಂದ ವಂಚನೆ ನೌಕರಿಯಲ್ಲಿ ವರ್ಗಾವಣೆ ಸಂಭವ

ವೃಷಭ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿಯಿಲ್ಲ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಸಮಸ್ಯೆ

ಮಿಥುನ :—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಕರ್ಕ :—ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಸ್ಥಿತಿ ಅತೃಪ್ತಿಕರ ವೃಥಾ ವಿವಾದ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ನೌಕರಿಯಲ್ಲಿ ಕಿರುಕುಳ ಸ್ನೇಹಿತರಿಂದ ವಂಚನೆ

ಸಿಂಹ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಆಸ್ತಿಪಾಸ್ತಿಗಳ ಬಗ್ಗೆ ವಿವಾದ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಕಿರುಕುಳ

ಕನ್ಯಾ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅಥವಾ ಪ್ರಯಾಣದಲ್ಲಿ ವಿಘ್ನ ನೌಕರಿಯಲ್ಲಿ ನಿರುತ್ಸಾಹ ಕೈಗೊಂಡ ಕಾರ್ಯ ಹಾನಿ

ತುಲಾ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವಿಪ್ರಜ್ಞರ ಪರಿಚಯ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ವೃಶ್ಚಿಕ :—ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಚೆನ್ನಾಗಿರುವುದು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ನೌಕರಿಯಲ್ಲಿ ಪ್ರಶಂಸೆ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಪ್ರವಾಸ ಸಂಭವ

ಧನು —ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ಉದ್ಯೋಗದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ಮಕರ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಸ್ಥಿತಿ ಬಿಗಡಾಯಿಸುವುದು ಅಪಘಾತ ಸಂಭವ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಕಿರುಕುಳ ಕುಟುಂಬದಲ್ಲಿ ಅಶಾಂತಿ

ಕುಂಭ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ನಿರುತ್ಸಾಹ

ಮೀನ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಶಂಸೆ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಪ್ರಯಾಣ ಸುಗಮವಾಗಿರುವುದು

ಸಂಗೀತದ ತ್ರಿಮೂರ್ತಿಗಳಿಗೆ ಸ್ಮಾರಕ

ದಕ್ಷಿಣ ಭಾರತದ ಸಂಗೀತ ತ್ರಿಮೂರ್ತಿಗಳಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಶಾಸ್ತ್ರಿಯವರಿಗೆ ಅವರ ಜನ್ಮಸ್ಥಳವಾದ ತಿರುವಾರೂರಿನಲ್ಲಿ ಸ್ಮಾರಕಗಳನ್ನು ನಿರ್ಮಿಸಲಾಗುವುದು ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ ಈ ತ್ರಿಮೂರ್ತಿಗಳ ಜನ್ಮದಿನೋತ್ಸವಗಳನ್ನು ನೆರವೇರಿಸಲೂ ಏರ್ಪಾಟಾಗುತ್ತಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕನ್ನಡ ಗೀತೆಗಳು ೭ ೩೦ ಎಂ ಬಿ ಹನುಮಂತಪ್ಪ—ನಾಗಸ್ವರ ಮಧ್ಯಾಹ್ನ ೧-೪೦ ಸಿತಾರ್ ೧ ೫೦ ಜಿ ವಿ ರಂಗನಾಯಕಮ್ಮ—ಸಂಗೀತ ೨ ೧೫ ಸ್ತ್ರೀಯರ ಕಾರ್ಯಕ್ರಮ ೨ ೪೫ ರೆಕಾರ್ಡ್ ಸಂಜೆ ೫-೪೦ ಎಂ ಬಿ ಹನುಮಂತಪ್ಪ ನಾಗಸ್ವರ ೬ ... ೬-೧೫ ಮತ್ತು ೭ ೪೦ ಮೋಹನಕಲ್ಯಾಣಿ ಹಿಂದಿ ಗೀತೆ ೭ ೫ ... ಉಪನ್ಯಾಸ ಸಂಗೀತ ... ಮತ್ತು ಸಂಗೀತ ೯-೧೫ ... ಆರ್. ಎಸ್ ... ಇಂಗ್ಲಿಷ್ ಭಾಷಣ ... ೯ ೪೦ ... ಆರ್ ... ಸಂಗೀತ

ಪಂಚಾಯಿತಿ ಹಣದ ದುರುಪಯೋಗಕ್ಕಾಗಿ ಎಚ್ಚರಿಕೆ

ಮೈಸೂರು ೧೧

ಮೈಸೂರು ತಾಲ್ಲೂಕು ಉದ್ಬೂರು ಗ್ರಾಮದ ಶಿವದಂಡನಾಯಕ ಎಂಬುವನು ಪಂಚಾಯಿತಿ ಹಣವನ್ನು ದುರುಪಯೋಗಪಡಿಸಿದನೆಂದು ತಾಲ್ಲೂಕು ಪೊಲೀಸರು ಹೂಡಿದ್ದ ಮೊಕದ್ದಮೆಯನ್ನು ನೆನ್ನೆ ನಗರ ನ್ಯಾಯಾಧೀಶರು ತೀರ್ಮಾನಿಸಿ, ಆಪಾದಿತನು ಚಿಕ್ಕವಯಸ್ಸಿನವನಾದ್ದರಿಂದ ಒಳ್ಳೆಯ ನಡತೆಯಲ್ಲಿರುವಂತೆ ಎಚ್ಚರಿಕೆ ಕೊಟ್ಟು ಜಾಮೀನು ಮೇಲೆ ಬಿಡುಗಡೆ ಮಾಡಿರುವರು

ಜೂಜಾಡುತ್ತಿದ್ದವರಿಗೆ ಜುಲ್ಮಾನೆ

ಬೆಂಕಿ ನವಾಬರ ಬೀದಿಯಲ್ಲಿ ಶ್ರೀಕಂಠ ಮತ್ತಿತರ ಎಂಬುವರು ಸಟ್ಟಾ ಜೂಜಾಡುತ್ತಿದ್ದುದಕ್ಕಾಗಿ ತಲಾ ೫ ರೂ ದಂಡವನ್ನೂ, ನಾರಾಯಣ ಪೇಟೆಯಲ್ಲಿ ೭ ಜನರು ರಾಜಿ ಸಾಲು ಜೂಜಾಡಿದ್ದಕ್ಕಾಗಿ ತಲಾ ೫ ರೂ ಜುಲ್ಮಾನೆ ಮತ್ತು ಕೋರ್ಟ್ ಏಳುವವರೆಗೆ ಸಜಾ ಶಿಕ್ಷೆಯನ್ನೂ, ಸಟ್ಟಾ ಜೂಜಾಡಿದ್ದಕ್ಕಾಗಿ ಕೃಷ್ಣಪ್ಪ ಎಂಬುವನಿಗೆ ೧೫ ರೂ ಜುಲ್ಮಾನೆ ಮತ್ತು ಕೋರ್ಟ್ ಏಳುವವರೆಗೆ ಸಜಾ ಶಿಕ್ಷೆಯನ್ನೂ ನೆನ್ನೆ ನಗರ ನ್ಯಾಯಾಧೀಶರು ವಿಧಿಸಿದರು

ಕೋರ್ಟ್ ಆವರಣದಲ್ಲಿ ಹೇಸಿಗೆ ಮಾಡಿದ್ದಕ್ಕೆ ದಂಡ

ಭಗವಾನ್‌ದಾಸ್, ಲಕ್ಷ್ಮಣದಾಸ್ ಮತ್ತು ರಘುನಾಥ್ ಖತ್ಲಾಲರು ಕೋರ್ಟ್ ಆವರಣದಲ್ಲಿ ಹೇಸಿಗೆ ಮಾಡಿದ್ದಕ್ಕಾಗಿ ತಲಾ ೨ ರೂ ದಂಡವನ್ನು ವಿಧಿಸಲಾಗಿದೆ

ಗೀತಾ ಪಾ ದ ನ

ರಾಜಧಾನಿಯ ''ರಾಮಲೀಲಾ'' ಆಶ್ರಮದಲ್ಲಿ ಮನ ಶ್ರೀ ''ರಾಮದಾಸ ಸ್ವಾಮಿಯವರ ಪೀಠಸ್ಥಾನದಲ್ಲಿ ಶ್ರೀ ಕೃಷ್ಣ ಜಯಂತಿ ಉತ್ಸವದ ಅಂಗವಾಗಿ ನಾಳೆ ರಾತ್ರಿ ೭॥ ಗಂಟೆಗೆ ಜಿ ವಿ ಆರ್ ಎಸ್ ದೊರೆಸ್ವಾಮಿಯವರ ವೀಣಾ ವಾದನ ವಿ ಎಂ ಎಸ್ ಶೇಷಪ್ಪನವರ ಮೃದಂಗ ಮೊದಲಿ ನಡೆಯುವುದು

ಮಾರ್ಕೆಟ್ಟಿನಲ್ಲಿ ಹನಿದ ಬಟ್ಟೆಗಳ ಉಪಯೋಗ

ರಾಜಧಾನಿಯ ಮಾರ್ಕೆಟ್ಟುಗಳಲ್ಲಿ ವ್ಯಾಪಾರಸ್ಥರು ಮುದುಕು ತಕ್ಕಡಿ ಮತ್ತು ಹನಿದ ಬಟ್ಟೆಗಳನ್ನು ಉಪಯೋಗಿಸುತ್ತಿರುವರೆಂದೂ, ಅವರಲ್ಲೂ ಕೆಸರಾಯಿ ಅಂಗಡಿಗಳವರು ಉದ್ದೇಶಪೂರ್ವಕವಾಗಿಯೇ ಹಳೇ ಬಟ್ಟೆಗಳನ್ನೂ, ತಕ್ಕಡಿಗಳನ್ನೂ ಉಪಯೋಗಿಸುತ್ತಿರುವರೆಂದೂ ವಾಚಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಆನಂದಾಳ್ವಾರರ ನಿಧನ

ನಿವೃತ್ತ ಎಕ್ಸಿಕ್ಯೂಟಿವ್ ಇಂಜನಿಯರರಾದ ಶ್ರೀ ಎಸ್ ಆನಂದಾಳ್ವಾರ್‌ರವರು ನೆನ್ನೆ ಬೆಂಗಳೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೬೦ ವರ್ಷ ವಯಸ್ಸಾಗಿತ್ತು ಮೈಸೂರಿನಲ್ಲಿ ನೂತನ ಅರಮನೆ ನಿರ್ಮಾಣ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಸೇರಿರುವ ಕಪಿನಿ ಜಲಾಶಯದ ಸರ್ವೆ ಕಾರ್ಯಗಳನ್ನು ಅವರು ನಿರ್ವಹಿಸಿದ್ದರು

ಖಾದಿ ನೂಲುವಿಕೆಯಲ್ಲಿ ಅಂಬರ್ ಚರಕದಿಂದ ಕ್ರಾಂತಿ

ಇನ್ನಾರು ತಿಂಗಳುಗಳಲ್ಲಿ ಮಾರ್ಕೆಟ್ಟಿಗೆ ಬರುವ ಅಂಬರ್ ಚರಕವು ದೇಶದ ನೂಲು ಕೈಗಾರಿಕೆಯಲ್ಲಿ ಕ್ರಾಂತಿಯನ್ನುಂಟುಮಾಡಲಿರುವುದಾಗಿ ಹೇಳಲಾಗಿದೆ ವಾರ್ಧಾದ ಸರ್ವ ಸೇವಾ ಸಂಘದಲ್ಲಿ ಇದನ್ನು ತಯಾರಿಸಲಾಗಿದೆ ಚರಕವನ್ನು ಒಂದೇ ಕಾಲದಲ್ಲಿ ಇಬ್ಬರು ತಿರುಗಿಸಲು ಅವಕಾಶವಿದೆ ಇದರಿಂದ ಸಾಮಾನ್ಯವಾದ ಚರಕದಲ್ಲಿ ತಯಾರಾಗುವ ನೂಲಿಗೆ ಎಂಟರಷ್ಟು ನೂಲನ್ನು ತೆಗೆಯಬಹುದು ಎಳೆಯು ಒಂದೇ ಸಮನಾಗಿದ್ದು ಮಿಲ್ಲಿನಲ್ಲಿ ಆಗುವಂತಹ ಅತ್ಯುತ್ತಮ ಬಟ್ಟೆಯನ್ನು ತಯಾರಿಸಬಹುದು ಒಂದು ಮಗುವೂ ಸಹ ಇದನ್ನು ನಡೆಸುವಷ್ಟು ಸುಲಭವಾಗಿರುವುದು ಮತ್ತು ಸಾಮಾನ್ಯ ಚರಕದಲ್ಲಿ ಆಗುವಷ್ಟು ಆಯಾಸವು ಇದರಲ್ಲಿ ತೋರದೆ, ಹೆಚ್ಚು ಕಾಲ ನೂಲಬಹುದು

ಬಾರಾಮುಲಾದಲ್ಲಿ ಬೆಂಕಿಯಿಂದ ೫೦ ಮನೆಗಳ ನಾಶ

ಕಾಶ್ಮೀರದ ಬಾರಾಮುಲಾ ನಗರದಲ್ಲಿ ಮೊನ್ನೆ ರಾತ್ರಿ ಬೆಂಕಿಯುಂಟಾಗಿ ೫೦ ಮನೆಗಳು ಭಸ್ಮವಾದವು ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಬಹಳ ಕಷ್ಟಪಟ್ಟು ಬೆಂಕಿಯನ್ನಾರಿಸಿದರು

ಯೋಜನಾ ಮಂಡಲಿಯ ಕಾರ್ಮಿಕ ಸಲಹೆಗಾರರ ಸಮಿತಿ

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳನ್ನು ನಡೆಸುವಾಗ ಕಾರ್ಮಿಕರ ಜವಾಬ್ದಾರಿಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರದ ಕೈಗಾರಿಕಾ ಇಲಾಖೆಯವರು ಏನು ಕ್ರಮವನ್ನು ಕೈಗೊಂಡು, ಯೋಜನಾ ಮಂಡಲಿಗೆ ಕಾರ್ಮಿಕರ ಸಮಸ್ಯೆ ಬಗ್ಗೆ ಸಲಹೆ ನೀಡಲು ೧೧ ಜನ ಸದಸ್ಯರುಳ್ಳ ಒಂದು ಸ್ಥಾಯಿ ಸಮಿತಿಯನ್ನು ಕೇಂದ್ರ ಮಂತ್ರಿ ಗುಲ್ಜಾರಿಲಾಲ್ ನಂದಾರವರ ಅಧ್ಯಕ್ಷತೆಯಲ್ಲಿ ರಚಿಸಿದರು

ಒರಿಸ್ಸಾ ಪ್ರವಾಹ ಪೀಡಿತರಿಗೆ ವಿಮಾನದಲ್ಲಿ ೭೫ ಟನ್ ಆಹಾರ

ಭಾರತದ ವಿಮಾನ ಬಲದ ಮೂರು ಡಕೋಟಾಗಳು ಇದುವರೆಗೆ ಆರು ದಿನಗಳಲ್ಲಿ ೭೫ ಟನ್ ಆಹಾರವನ್ನು ಒರಿಸ್ಸಾ ತೀರ ಪ್ರದೇಶದಲ್ಲಿ ಪ್ರವಾಹ ಪೀಡಿತರಿಗೆ ಒದಗಿಸಿರುತ್ತವೆ

ಜಯ ಸ್ಕೌಟು ಗ್ರೂಪಿನ ವಾರ್ಷಿಕೋತ್ಸವ

ಮೈಸೂರು ಜಯ ಸ್ಕೌಟು ಗ್ರೂಪಿನ ೧೫ನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ೩೦ಕ್ಕೆ ಜೂಬಿಲಿ ರಸ್ತೆಯಲ್ಲಿರುವ ಗ್ರೂಪು ಕೇಂದ್ರದಲ್ಲಿ ನಡೆಯುತ್ತದೆ

ಅಮಲ್ದಾರರಿಗೆ ಸತ್ಕಾರ

ಮೈಸೂರು ತಾಲ್ಲೂಕಿನಿಂದ ವರ್ಗವಾದ ಅಮಲ್ದಾರ್ ಶ್ರೀ ಎ ಸಿ ಮುನಿದೇವಯ್ಯನವರ ಗೌರವಾರ್ಥವಾಗಿ ಮೊನ್ನೆ ವರುಣ ಹೋಬಳಿ ಗ್ರಾಮಾಧಿಕಾರಿಗಳೂ ಮತ್ತು ಹೋಬಳಿ ಕೈಗಾರಿಕಾ ಸಂಘದ ಡೈರೆಕ್ಟರುಗಳೂ ಇಂದ್ರ ಭವನದಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು,

VIDYA TUTORIAL COLLEGE

Dalvoy High School Buildings, Mysore

THE BEST INSTITUTE IN MYSORE FOR TUITION

September Session Successfully Concluded

Next Session For March 1956 Examinations Commences On

VIJAYA DASAMI DAY (26-10-55)

For INTER (Commerce, Arts, Science), B A, B Sc

ALL PARTS — — ALL SUBJECTS

Good Opportunity ! JAI HIND ! Join at once !

SHANKARA TUTORIAL INSTITUTE, NANJANGUD

The following coaching classes will be started very shortly

Tuition by experienced teachers Fees very moderate

1) S S L C. 1956 January Examination

2) Hindi Examinations 1956 February

For further particulars apply to -

G S. VENKATASUBBIAH, B.Sc., B T.

Head Master

೧೫ ವರ್ಷದನಂತರ ಹಿಂದಿಯು ಅಧಿಕಾರಿ ಭಾಷೆಯಾಗಬೇಕು

ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನ ಸಲಹೆ

ಇಂಗ್ಲಿಷಿನ ಬದಲು ಹಿಂದಿಯನ್ನು ಅಧಿಕಾರಿ ಭಾಷೆಯಾಗಿ ತೆಗೆದುಕೊಳ್ಳಲು ಇನ್ನೂ ೧೫ ವರ್ಷ ಕಾಲ ಬೇಕೆಂದೂ, ಈ ... ರಾಜ್ಯಾಂಗದಲ್ಲಿ ... ವಶಾಶವಾಗಬೇಕೆಂದೂ ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನವರು ಅಭಿಪ್ರಾಯಪಟ್ಟಿರುವರು ಕೇಂದ್ರ ಸರ್ಕಾರದ ನೌಕರಿಗಳಿಗೆ ... ದಿ ಪರೀಕ್ಷೆಯನ್ನು ಕಡ್ಡಾಯ ಮಾಡಕೂಡದೆಂದು ಸಿಂಡಿಕೇಟು ಸೂಚಿಸಿದೆ

೧೧ ಜನ ಅಮೆರಿಕನ್ನರ ಬಿಡುಗಡೆ

ಗೃಹ ಬಂಧನದಲ್ಲಿರುವ ೧೦ ಜನ ಅಮೆರಿಕನ್ ನಾಗರಿಕರನ್ನು ಬಿಡುಗಡೆಮಾಡಿ ಹಾಂಗ್‌ಕಾಂಗಿಗೆ ಕಳುಹಲಾಗುವುದೆಂದು ಚೀನಾ ಸರ್ಕಾರದವರು ಅಮೆರಿಕಕ್ಕೆ ತಿಳಿಸಿರುವರು ... ಪೈಕಿ ಇಬ್ಬರು ಮಹಿಳೆಯರು, ಐವರು ಪಾದ್ರಿಗಳು

ದೇಶದ ನಾಯಕರ ವಾಣಿಗಳು

ಮಹಾತ್ಮಾಗಾಂಧಿ, ಟಾಗೂರ್, ಸರ್ದಾರ್ ಪಟೇಲ್, ಸರೋಜಿನಿನಾಯ್ಡು, ಸಿ ಎಫ್ ಆ್ಯಂಡ್ರೂಸ್, ವಿ ಎಸ್ ಶ್ರೀನಿವಾಸಶಾಸ್ತ್ರಿ, ಶಾಸ್ತ್ರಿ ... ಲಾಲ್ ಕವಿ ಮುಂತಾದವರ ಭಾಷಣಗಳು ಸದಾಕಾಲಕ್ಕೂ ಇರುವಂತೆ ಅವನ್ನು ಶಾಶ್ವತವಾಗಿ ರೆಕಾರ್ಡ್ ಮಾಡಿ ಇಡಲು ಭಾರತ ಸರ್ಕಾರದವರು ಏರ್ಪಾಡು ಮಾಡಲಿರುವರು

ಇಂಜನಿಯರಿಂಗ್ ಇನ್‌ಸ್ಟಿಟ್ಯೂಟ್ ಸಂಘದ ಆರಂಭ ಭಾಷಣ

ಭಾರತದ ಮಾಜಿ ರಾಜರುಗಳಿಗೆ ಕೊಡಲಾಗುತ್ತಿರುವ ರಾಜಧನವು ವಿಪರೀತ ಹೆಚ್ಚೆಂದೂ, ಆದರೆ ೫೦೦ ಕ್ಕೂ ಹೆಚ್ಚು ಸಂಸ್ಥಾನಗಳನ್ನು ರಕ್ತಪಾತವಿಲ್ಲದ ರೀತಿಯಲ್ಲಿ ವಿಲೀನಗೊಳಿಸುವುದರಿಂದ ರಾಜಧನ ಕೊಡುವುದಕ್ಕೆ ಒಪ್ಪಬೇಕಾಯಿತೆಂದೂ ಪ್ರಧಾನಿ ನೆಹರೂರವರು ನುಡಿದರು. ಈ ರೀತಿ ಒಪ್ಪಂದ ಮಾಡಿಕೊಳ್ಳದಿದ್ದರೆ, ದಂಗೆಯೇ ನಡೆಯಬಹುದಾಗಿತ್ತೆಂದೂ, ಹಾಗಿದ್ದಲ್ಲಿ ನಾನಾ ರೀತಿಯ ವಿನಾಶ ಕೃತ್ಯಗಳು ಜರುಗಿ ಅವುಗಳಿಂದ ರಾಷ್ಟ್ರದ ಪ್ರಗತಿಗೆ ಧಕ್ಕೆಯೊದಗುತ್ತಿತ್ತೆಂದೂ ಅವರು ಹೇಳಿ, ಈ ದೃಷ್ಟಿಯಿಂದ ರಾಜಧನದ ಪಾವತಿಯನ್ನು ಗಮನಿಸಬೇಕಾಗಿದೆಯೆಂದು ತಿಳಿಸಿರುವರು.

ಬರ್ಮಾದ ದಂಗೆಕೋರರಿಂದ ೧೧ ಜನ ಪ್ರಯಾಣಿಕರ ಕೊಲೆ

ಬರ್ಮಾದ ದಂಗೆಕೋರರು ಮೊನ್ನೆ ಪ್ರಯಾಣಿಕರ ರೈಲಿನ ಮೇಲೆ ಧಾಳಿ ನಡೆಸಿ ೧೧ ಜನರನ್ನು ಕೊಂದರೆಂದು ವರದಿಯಾಗಿದೆ.

ವಸ್ತು ಪ್ರದರ್ಶನದಲ್ಲಿ ತುದಿ ಎರಚಿ ಮತ್ತು ಕಳುವಿನ ಪ್ರಯತ್ನ

ಮೈಸೂರು ೨೨

ಮೈ ಮೇಲೆ ಚೆಲ್ಲಿದರೆ ಕಡಿತವುಂಟಾಗುವ ಪುಡಿಯೊಂದನ್ನು ಎರಚಿ ಕಳ್ಳತನ ಮಾಡುವ ಮತ್ತೊಂದು ಪ್ರಯತ್ನವು ನೆನ್ನೆ ದಸರಾ ವಸ್ತುಪ್ರದರ್ಶನದಲ್ಲಿ ನಡೆಯಿತೆಂದು ವರದಿಯಾಗಿದೆ. ಈ ಹಿಂದೆ ಇದೇ ಆಪಾದನೆಯ ಮೇಲೆ ಬಂಧಿಸಲ್ಪಟ್ಟ ಉಮಾಶಂಕರ್ ಎಂಬುವನ ಸಹಚಾರಿಯೆಂದು ಹೇಳಲಾದ ಅಮರ್‌ಸಿಂಗನು ಈ ಕೃತ್ಯದಲ್ಲಿ ತೊಡಗಿದ್ದಾಗ ಮಂಡಿ ಪೊಲೀಸರು ಪತ್ತೆ ಹಚ್ಚಿ ಅವನನ್ನು ಬಂಧಿಸಿ, ತನಿಖೆ ನಡೆಸುತ್ತಿರುವರು. ಮಹಾಜನರು ಇಂತಹ ಸಂದರ್ಭ ವಿಷಯದಲ್ಲಿ ಜಾಗ್ರತೆಯಿಂದಿರಬೇಕೆಂದು ಕೋರಲಾಗಿದೆ.

ವಸ್ತು ಪ್ರದರ್ಶಕರ ಸಂಘದ ಅಧಿಕಾರ ವರ್ಗ

ಅಖಿಲ ಭಾರತ ವಸ್ತು ಪ್ರದರ್ಶಕರ ಸಂಘದ ಮೈಸೂರು ಶಾಖೆಯ ಅಧ್ಯಕ್ಷರಾಗಿ ಶ್ರೀ ಎಂ ಸಿ ನಟರಾಜಸ್ವಾಮಿಯವರೂ, ಉಪಾಧ್ಯಕ್ಷರಾಗಿ ಶ್ರೀ ಮಂಜುನಾಥಮೂರ್ತಿಯವರೂ ಮತ್ತು ಕಾರ್ಯದರ್ಶಿಗಳಾಗಿ ಶ್ರೀ ಕೆ ಎಸ್ ಗುರುಮೂರ್ತಿಯವರೂ ನೆನ್ನೆ ನಡೆದ ಚುನಾವಣೆಯಲ್ಲಿ ಆರಿಸಲ್ಪಟ್ಟರು.

ಭಾರತದಲ್ಲಿ ಶಕ್ತಿ ಉತ್ಪಾದನೆಗೆ ಸಗಣಿಯೇ ಮೂಲಾಧಾರ

ಮಾನವ ಜನಾಂಗವು ಅಣುಶಕ್ತಿಯ ಉಪಯೋಗವನ್ನು ಕಂಡುಹಿಡಿದಿದೆಯಾದರೂ, ಭಾರತವು ಇನ್ನೂ ಸಗಣಿಯಿಂದ ಶಕ್ತಿಯನ್ನು ಉತ್ಪತ್ತಿ ಮಾಡುವ ಯುಗದಲ್ಲೇ ಇದೆಯೆಂದು ಪ್ರಧಾನಿ ನೆಹರೂರವರು ಹೇಳಿರುವರು. ಭಾರತದಲ್ಲಿ ಸಗಣಿಯೇ ಶಕ್ತಿ ಉತ್ಪಾದನೆಯ ಮೂಲ ವಸ್ತುವಾಗಿದೆಯೆಂದೂ ಅವರು ನುಡಿದಿರುವರು.

ವಸ್ತು ಪ್ರದರ್ಶನದಲ್ಲಿ ಅಮೋಘ ಸಂಗೀತ ಕಛೇರಿ

ದಸರಾ ವಸ್ತು ಪ್ರದರ್ಶನದಲ್ಲಿ ಕಳೆದ ಬುಧವಾರ ಏರ್ಪಡಿಸಲಾಗಿದ್ದ ವಿ|| ಎಸ್ ವಿಶ್ವನಾಥರವರ ಸಂಗೀತವು ಬಹಳ ಉತ್ತಮವಾಗಿತ್ತು. ಗೌಳ ರಾಗದ ಶ್ರೀ ಮಹಾಗಣಪತಿ ಕೃತಿಯಿಂದ ಆರಂಭಿಸಿ ಆಂದೋಳಿಕ ರಾಗದ ರಾಗಸುಧಾರಸ, ಚಿತ್ತರಂಜನಿಯ ನಾದತನುಮನಿಶಂ ಕೃತಿಗಳನ್ನು ಹಾಡಿದನಂತರ ಷಣ್ಮುಖಪ್ರಿಯ ರಾಗವನ್ನು ವಿಸ್ತಾರವಾಗಿ ಪೋಷಿಸಿ ಮುದ್ದೇಶ್ವರ ಕೃತಿಯಲ್ಲಿ "ಸನ್ನುತಾಂಗ ಶ್ರೀ" ಎಂಬಲ್ಲಿ ನೆರವಲು ಮಾಡಿ ಸ್ವರ ಕಲ್ಪನೆ ಮಾಡಿದರು. ನಂತರ ರಾಮನಾಥಪ್ರಿಯದ 'ಅಂದಾನೆನ್ನು ನೆರನಮ್ಮಿತಿ' ಮತ್ತು ಬೇಗಡೆ ರಾಗದ ನಾದೋಪಾಸನೆ ಎಂಬ ಕೃತಿಗಳನ್ನು ಹಾಡಿದರು. ಪುನ್ನಾಗವರಾಳಿ ರಾಗದ ಏಹಿ ಅನ್ನಪೂರ್ಣೇ ಕೃತಿಯನಂತರ ದೇವರನಾಮಗಳೊಡನೆ ಮುಕ್ತಾಯಗೊಳಿಸಿದರು. ನಾದತನುಮನಿಶಂ ಕೃತಿಗೆ ಸ್ವರ ವಿನ್ಯಾಸವನ್ನು ಸ್ವಲ್ಪ ಕಡಿಮೆ ಮಾಡಿದ್ದರೆ ಕಛೇರಿಯು ಇನ್ನೂ ಹೆಚ್ಚು ರಂಜಿಸುತ್ತಿತ್ತು.

—ಕಲಾಭಿಮಾನಿ

ವಾರ ಭವಿಷ್ಯ

ತಾ॥ ೨೩-೧೦-೫೫ ರಿಂದ ೩೦-೧೦-೫೫ರ ವರೆಗೆ

ಮೇಷ—ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದಲಿ ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ಕಿರುಕುಳ ವರ್ಗಾವಣೆ ಸಂಭವ

ವೃಷಭ—ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಪ್ರಗತಿಗೆ ಅಡ್ಡಿ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಮಿಥುನ—ಆರೋಗ್ಯ ಅಸಮರ್ಪಕ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು. ವೃಥಾ ಕಲಹ ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ ಉದ್ಯೋಗದಲ್ಲಿ ಸಮಸ್ಯೆ ವ್ಯಾಪಾರವ್ಯವಹಾರಗಳಲ್ಲಿ ನಷ್ಟ

ಕರ್ಕ—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಸಿಂಹ—ಆರೋಗ್ಯ ಸಮರ್ಪಕ. ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ನೌಕರಿಯಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಉನ್ನತಿ ಧನಲಾಭ

ಕನ್ಯಾ—ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವೃಥಾ ಕಲಹ ಸಂಭವ ನೌಕರಿಯಲ್ಲಿ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ನಿರುತ್ಸಾಹ

ತುಲ—ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಹೊಸ ಉದ್ಯಮಗಳನ್ನು ಮುಂದೂಡುವುದು ಉತ್ತಮ ವ್ಯಾಪಾರವ್ಯವಹಾರಗಳಲ್ಲಿ ನಷ್ಟ

ವೃಶ್ಚಿಕ—ಆರೋಗ್ಯ ಸಾಧಾರಣ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಆರ್ಥಿಕ ಪರಿಸ್ಥಿತಿ ಸಮರ್ಪಕ ನೌಕರಿಯಲ್ಲಿ ಪ್ರಗತಿ ಕಡಿಮೆ.

ಧನು—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಅತ್ತರಿಂದ ಸಹಕಾರ

ಮಕರ—ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ನಿರಾಶಾದಾಯಕ ಫಲಗಳು ಉದ್ಯೋಗದಲ್ಲಿ ಸಮಸ್ಯೆ ವೃಥಾ ವ್ಯಸನಪ್ರ

ಕುಂಭ—ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವುವು

ಮೀನ—ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ಶತ್ರುಗಳಿಂದ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ತೊಂದರೆ ಅಪ್ತರಿಂದ ವಂಚನೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನವಾವರಣ ಕೀರ್ತನೆ ೭-೩೦ ಎಂ ಮುನಿವೆಂಕಟಪ್ಪ ನಾಗಸ್ವರ ಮಧ್ಯಾಹ್ನ ೧-೪೦ ಕಲಿಯಿರಿ. ೧-೫೦ ಸಂಗೀತ. ೨-೧೫ ಕೆ ಎಸ್ ಶಂಕರ ರಾಮಯ್ಯ ...... ೩-೪೫ ಬಿ ಎಸ್ ರಾಜಯ್ಯಂಗಾರ್ ಸಂಜೆ ೫-೪೦ ಎಂ ಮುನಿವೆಂಕಟಪ್ಪ ನಾಗಸ್ವರ ೬-೧೫ ವಿಚಾರ ೭-೫ ಕಥಾ ಸಮ್ರಾಟ್ ವ್ಯಾಗರಾಜ ರಾಮಚಂದ್ರರಾವ್ ೭-೩೦ ಜಾನಪದ ಕಥೆಯ ನಾಟಕ ಎಸ್ ಎಂ ರಾವ್ ೭-೪೦ ಏಕ ಸಂಸ್ಥೆ ದಿನಚರಿ ...... ೮-೪೦ ಸಿದ್ಧ ಸಂಸ್ಥೆ ದಿನಚರಿ ...... ೯-೪೦ ...... ೧೦-೪೦ ...... ಸಂಗೀತ ಕಾರ್ಯಕ್ರಮ ...... ೧೦ ಎಂ ರಕ್ಷೆ ...... ಮತ್ತು ಎಂ ೭ ಸುಮಿತ್ರ

BEST MEALS
To Suit Your Taste & Pocket
at
VENKATESHA LODGE
Jaganmohan Palace Road
MYSORE
TIFFIN & COFFEE
Our Speciality
Please Visit & Enjoy

ದಶಾವತಾರ ನಾಟಕದ ಪ್ರಾರಂಭ

ಶ್ರೀಮನ್ಮಹಾರಾಜರಿಂದ ಶುಭ ಸಂದೇಶ

ಮೈಸೂರು ೨೩

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಂಸ್ಥೆಯವರು ಹೊಸದಾಗಿ ತಯಾರಿಸುವ ದಶಾವತಾರ ನಾಟಕದ ಆರಂಭೋತ್ಸವವನ್ನು ನಿನ್ನೆ ರಾತ್ರಿ ಸುಬ್ಬರಾಯನಕೆರೆ ಮೈದಾನದಲ್ಲಿ ಹಾಕಿರುವ ಧನಲಕ್ಷ್ಮಿ ನಾಟಕಮಂದಿರದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆರವೇರಿಸಿದರು ವಿಧಾನಸಭಾ ಸದಸ್ಯರೂ, ವರ್ತಕರೂ, ನಗರದ ಇತರ ಸಾವಿರಾರು ಮಂದಿ ಗಣ್ಯ ಮಹಿಳೆಯರೂ, ಮಹನೀಯರೂ ಅಕ್ಕರೆಯಿಂದ ನೆರೆದಿದ್ದರು

ನಾಟ್ಯಕಲಾ ವಿಶಾರದ ಶ್ರೀ ಎಂ ಸಿ ಮಹದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿ ಗುಬ್ಬಿ ಸಂಸ್ಥೆಯು ತನ್ನ ೭೦ನೇ ವಾರ್ಷಿಕೋತ್ಸವದಲ್ಲಿ ಕಲಾಭಿಮಾನಿಗಳಿಗೆ ಸಮರ್ಪಿಸಿದ ದಶಾವತಾರ ನಾಟಕಕ್ಕೆ ಸರ್ವರೂ ಸಂಪೂರ್ಣವಾದ ಪ್ರೋತ್ಸಾಹವನ್ನಿತ್ತು ನಾಟಕ ಕಲೆಯ ಬೆಳವಣಿಗೆಗೆ ನೆರವಾಗಬೇಕೆಂದು ಕೋರಿದರು

ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಮೆಚ್ಚಿ, ನಾಟಕ ಕಲೆಗೆ ಸರ್ವರ ಬೆಂಬಲವೂ ಇರಬೇಕೆಂದು ಹಾರೈಸಿ ದಶಾವತಾರ ನಾಟಕಕ್ಕೆ ಜಯವನ್ನು ಕೋರಿ ಶ್ರೀಮನ್ಮಹಾರಾಜರು ಕಳುಹಿಸಿದ್ದ ವಿಶೇಷ ಸಂದೇಶವನ್ನು ಮಹದೇವಸ್ವಾಮಿಯವರು ಓದಿದರು

ನಮ್ಮ ದೇಶದಲ್ಲಿ ನಾಟಕ ಕಲೆಗೆ ಹಿಂದೆಲೂ ಇದ್ದ ಸ್ಥಾನಮಾನಗಳನ್ನು ಅಧ್ಯಕ್ಷರು ಸ್ಮರಿಸಿ ಕಾಲಕ್ರಮದಲ್ಲಿ ಈ ಕಲೆಯು ಸ್ಥಿತಿಗೆ ಬಂದಿತ್ತಾದರೂ, ಇತ್ತೀಚೆಗೆ ಅದರ ಪುನರುಜ್ಜೀವನಕ್ಕಾಗಿ ಸರ್ಕಾರದವರೂ, ಸಾರ್ವಜನಿಕರೂ ವಿಶೇಷವಾದ ಗಮನವನ್ನು ಕೊಡುತ್ತಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ ಸಾರ್ವಜನಿಕರು ಅದಕ್ಕೆ ಹೆಚ್ಚುಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕೋರಿದರು

ಕಲೆಯ ಬೆಳವಣಿಗೆಗೆ ಆಧಾರಸ್ತಂಭವಾದವರು ನಾಡಿನ ಸಾರ್ವಜನಿಕರೇ ಎಂದು ಗುಬ್ಬಿ ವೀರಣ್ಣನವರು ಹೇಳಿ ಮಹಾಜನರ ಬಲವು ದೊರೆತಂತೆಲ್ಲಾ ತಾವು ದಶಾವತಾರವನ್ನು ಮಾತ್ರವೇ ಅಲ್ಲದೆ ೧೧ ಮತ್ತು ೧೨ನೇ ಅವತಾರಗಳನ್ನೂ ಕೂಡ ಮಾಡಿ ತೋರಿಸಬಲ್ಲವರಾಗಿರುವುದಾಗಿ ಹೇಳಿದರು

ಹುಡುಗ ತಪ್ಪಿಸಿಕೊಂಡಿದ್ದಾನೆ

ಕನ್ನೇಗೌಡನ ಕೊಪ್ಪಲಿನ 2793ನೇ ನಂಬರು ಮನೆಯಲ್ಲಿ ವಾಸವಾಗಿರುವ ಮಂಜ ೧೫ ವರ್ಷದ ಬಿಳಿಯ ಬಣ್ಣದ ಹುಡುಗ ಕಾಣಿಸುತ್ತಿದ್ದಾನೆ ಹಸರು ಅರ್ಧ ತೋಳಿನ ಷರ್ಟನ್ನು, ಕೆಂಪು ಗೀರಿನ ನಿಕ್ಕರನ್ನೂ ಹಾಕಿದ್ದಾನೆ ಯಾರಿಗಾದರೂ ಸಿಕ್ಕಿದಲ್ಲಿ ಕೆಳಗೆ ಕಂಡವರಿಗೆ ತಿಳಿಸಬೇಕಾಗಿ ವಿನಂತಿ

ಕೆ. ಎಸ್. ರಂಗರಾವ್,
1234 ಕೃಷ್ಣಮೂರ್ತಿಪುರ, ಮೈಸೂರು
ಫೋ ನಂ 503 ಅಥವಾ 660

ದಸರಾದಲ್ಲಿ ವಿಮಾನ ವಿಹಾರ

5 ದಿವಸಗಳು ಮಾತ್ರ

ತಾ 23-10-55 ರಿಂದ 27-10-55 ರ ವರೆಗೆ

ಪ್ರತಿನಿತ್ಯ ಬೆಳಿಗ್ಗೆ 8 ರಿಂದ 12 ಘಂಟೆ ಮತ್ತು ಮಧ್ಯಾಹ್ನ 3 ರಿಂದ ಸೂರ್ಯಾಸ್ತದವರೆಗೆ

ಸ್ಥಳ ಮಂಡಕಳ್ಳಿ ಏರೋಡ್ರೋಂ

ವಿವರ ...... ಚಿಕ್ಕ ಗಡಿಯಾರ ಬಳಿ ಮೈಸೂರು ...... ಫೋನ್ 640 ಮೈಸೂರು

ನಿರ್ಲಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲು ಬೆಂಗಳೂರು

ಉತ್ತಮವಾದ ಊಟ ತಿಂಡಿ
ಮತ್ತು
ಮಧುರವಾದ ಕಾಫಿಗೆ
★
ವಸಂತ ಭವನ
ತ್ಯಾಗರಾಜ ರೋಡ್, ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್
ಅಶೋಕಾ ರೋಡ್, ಮೈಸೂರು.
ಮೆಚ್ಚಿಗೆಯ ಆಭರಣಗಳನ್ನು ಹೊಸ ಹೊಸ ನಮೂನೆಗಳಲ್ಲಿ ನಮ್ಮ ಸ್ವಂತ ಭವನದಲ್ಲಿ
ಕೊರ್ಗ್ ಮ್ಯಾನ್ ಷನ್ನಿನಲ್ಲಿ
ತೆರೆಯುತ್ತಿದೆ ಎಂದಿನಂತೆ ನಮ್ಮ ಗಿರಾಕಿಗಳು ನಮ್ಮ ಬಳ್ಳಿಗಳು ...... ವಿನಂತಿ

THE CITY TUTORIAL COLLEGE, MYSORE
The oldest and the best institution with experienced staff and ideal equipment
THREE SEPARATE CLASSES FOR THE S S L C EXAM
1 A REGULAR CLASS for failed candidates only. Rs. 20 only for the full course. Timings 11-30 A M to 4-30 P M
2 EVENING CLASSES for School going students and Primary school teachers Rs 18 only for the full course. 5-30 to 9 P M
3 MORNING CLASSES for private and school going students Rs 15 only for the full course. 7 30 A M to 10 30 A M
Classes will work till the last day of the examination Spl attention is given for all the subjects New Texts will be fully revised
Please enquire at — C T C V V Market, MYSORE

ಹಲವು ಬಗೆ ರೋಗಗಳನ್ನು ಗುಣಪಡಿಸುವ ಔಷಧಗಳು
ಸಂತಾನ ಸಿಂಧೂರ
ಬಸಿರು ಸಂಬಂಧದ ಹೊಟ್ಟೆ ನೋವನ್ನು ನಿವಾರಿಸಿ ...... ಗರ್ಭಾಶಯ ...... ಕೊನೆ ಹುಟ್ಟಿಸುತ್ತದೆ
ಮದನ ವಿಲಾಸ
ಈ ಗುಳಿಗೆಗಳು ...... ನರಗಳನ್ನು ವೃದ್ಧಿ ...... ಹೋಗಲಾಡಿಸುತ್ತದೆ
ದಾಂಪತ್ಯ ಜೀವನವನ್ನು ಪ್ರಾರಂಭವಾಗಿ 16-18 ವರ್ಷ ಸಂತಾನವಿಲ್ಲದವರೂ ಶಾಸ್ತ್ರೋಕ್ತವಾಗಿ ...... ದ್ವಾರ
ಬೆಲೆ ರೂ 6—0 0 ...... ಪ್ರತ್ಯೇಕ
ತಯಾರಕರು ಎ ರಾಮಸ್ವಾಮಿ ಅಯ್ಯರ್ ಸನ್ ಅಂಡ್ ಕಂಪೆನಿ,
628 ...... ಕೃಷ್ಣ ಮೆಡಿಕಲ್ ...... ರಸ್ತೆ, ಮೈಸೂರು

ಪ್ರಭಾ ★ ಈಗ ಪ್ರದರ್ಶಿತವಾಗುತ್ತಿದೆ.
ವಿ ಶಾಂತಾರಾಂರವರ ವರ್ಣರಂಜಿತ ಹಿಂದಿ ಚಿತ್ರ
ಝನಕ್ ಝನಕ್ ಪಾಯಲ ಬಾಜೆ
...... ನೃತ್ಯ ...... ಜನಸಂದಣಿಯಿಂದ ...... ಪ್ರದರ್ಶನದ ಕಾಲಗಳನ್ನು ಬದಲಾಯಿಸಲಾಗಿದೆ
ಮಧ್ಯಾಹ್ನ 1 ಗಂಟೆಗೆ ಮ್ಯಾಟಿನಿ, ಮೊದಲನೇ ಪ್ರದರ್ಶನ ಸಂಜೆ 6 ಗಂಟೆಗೆ
ಎರಡನೇ ಪ್ರದರ್ಶನ ರಾತ್ರಿ 10 ಗಂಟೆಗೆ ಮಧ್ಯರಾತ್ರಿ ಪ್ರದರ್ಶನ ರಾತ್ರಿ 1 ಗಂಟೆಗೆ

Devidayal STAINLESS STEEL BOMBAY 2
AVAIL THE GOLDEN OPPORTUNITY
For Mysore Dasara Exhibition Season, For 15 Days Only
FROM 21st OCTOBER TO 6th NOVEMBER 1955
ALL DEVIDAYAL'S STAINLESS STEEL UTENSILS WILL BE SOLD AT
The MOST CONCESSIONAL RATES With GUARANTEE SLIPS
AT EXHIBITION
Block 'D', Stall Nos. 12 & 13

ಅಲಿಷ್ಟೋ ನಂ. 792

JOTHI ELECTRIC LAUNDRY
Nazarbad, Mysore
The only Electric Laundry in the City equipped with latest triplex dry cleaning Machine
Exquisite Dry Cleaning of
WOLLENS, SILKS, GEORGETTES, Etc.

ಇಂದಿನ ಪತ್ರಿಕೆ 3 ಕಾಸು

ಆಕರ್ಷಣೀಯ ಪರಿಸ್ಥಿತಿಯಲ್ಲಿ
ಮೈಸೂರಿನ 3 ಮೈಲಿ ದೂರದಲ್ಲಿ
ಬೆಂಗಳೂರು ರಸ್ತೆಯಲ್ಲಿ ಉತ್ತಮ
ವ್ಯವಸಾಯ ಭೂಮಿ
ಎಸ್ಟೇಟು
ಕ್ರಯ ಅಥವಾ ಗುತ್ತಿಗೆಗೆ
ಇದೆ
ಎಸ್. ರಾಮರಾವ್,
ಪ್ಲೀಡರ್,
ವಿ. ವಿ. ಮೊಹಲ್ಲ, ಮೈಸೂರು

[ಸಂ. ೧೯] SADHVI . MONDAY 24-10-1955 ಮೈಸೂರು : ಸೋಮವಾರ ೨೪-೧೦-೧೯೫೫ [ಸಂಚಿಕೆ ೯೩

ರಾಜಪ್ರಮುಖರ ಹುದ್ದೆ ರದ್ದಿಗೆ ಮುಖ್ಯಮಂತ್ರಿಗಳ ಒಪ್ಪಿಗೆ

ಸಭೆಯಲ್ಲಿ ಗಣ್ಯರಿಗೆ ಸನ್ಮಾನ

ದಾವಣಗೆರೆಯ ಚಂದ್ರಣ್ಣ ಮತ್ತು ...ಪ್ಪನವರಿಗೆ ಚಿನ್ನದ ಹಾರಗಳು

ಮೈಸೂರು ೨೩

...ಜನಿಕ ಸೇವೆಗಳಿಗಾಗಿ ನೆನ್ನೆ ರಾಜಪ್ರಮುಖರಿಗೆ ಕಂಡಂತೆ ಸನ್ಮಾನ ಮಾಡಲಾಯಿತು.

...ಸ್ತ್ರೀಯ ವಿದ್ಯಾ ಪ್ರಗತಿಗಾಗಿ ಮಹಿಳಾ ಕಾಲೇಜು ಸ್ಥಾಪನೆಗೆ ೧॥ ಲಕ್ಷ ರೂ ದಾನ ಕೊಟ್ಟ ದಾವಣಗೆರೆಯ ಶ್ರೀ ಚಂದ್ರಣ್ಣನವರಿಗೆ ಚಿನ್ನದ ಹಾರ

ಸಾರ್ವಜನಿಕ ಆಸ್ಪತ್ರೆಗಾಗಿ ೧ ಲಕ್ಷ ರೂ ಕೊಟ್ಟ ದಾವಣಗೆರೆಯ ಶ್ರೀ ಚಿಗಟೇರಿ ...ನವರಿಗೆ ಚಿನ್ನದ ಹಾರ

ಸಾರ್ವಜನಿಕ ಧರ್ಮ ಛತ್ರಕ್ಕಾಗಿ ೩೫ ಸಾವಿರವನ್ನು ಕೊಟ್ಟ ತುಮಕೂರಿನ ಶ್ರೀಮತಿ ...ಮ್ಮನವರಿಗೆ ಬೆಳ್ಳಿ ತಟ್ಟೆ ೪) ಅದೇ ...ಗೆ ತುಮಕೂರಿನ ಶ್ರೀ ಟಿ ಅನಂತ... ...ರಿಗೆ ಬೆಳ್ಳಿ ತಟ್ಟೆ

...ದರ್ಶನದ ಸಂಗೀತ ಸ್ಪರ್ಧೆಯಲ್ಲಿ ಗೆದ್ದವರು

...ವಸ್ತು ಪ್ರದರ್ಶನದಲ್ಲಿ ನಡೆದ ಸಂಗೀತ ...ಲ್ಲಿ ಕೆಳಗೆ ಕಂಡವರು ಜಯಶಾಲಿಗಳಾದರು ...ಜೂನಿಯರ್ - ಪ್ರಥಮ ಸ್ಥಾನ ...ಗಳು ಶ್ರೀನಾಥ್, ಕನಕಲಕ್ಷ್ಮಿ ಮ... ...ಜರ್. ಕೃಷ್ಣ ಸೀನಿಯರ್ ಪ್ರಥಮ ಸ್ಥಾನ ಎಂ. ಕೆ. ಸರಸ್ವತಿ, ಎಂ... ...ತ್ತು ಕೆ ಎಂ ಸರೋಜಿನಿ ವಾದ್ಯ ... ಪ್ರಥಮ ಮೂರು ಸ್ಥಾನ ಕೆ ವಿ ಕೆ ... ಎಸ್ ಗೋಪಾಲರಾವ್ ಮತ್ತು ಶ್ರೀನಿವಾಸ...

...ವಾಣಿ ನಾಳೆ ಕಾರ್ಯಕ್ರಮ

...ಚಿತ್ರಿತ ಸಮಾಚಾರ ಕೀರ್ತನೆ ...ವಿ. ವೆಂಕಟರಮಣಯ್ಯ ಪಟೇಲು ಮ... ...ಮತ್ತು ... ಬಿ ಎಂ ಶಿವಪ್ಪ ... ವನಿತಾ ವಿಹಾರ–ಮಹಿಳೆಯರ ಕಾ... ...ಮ ವಿಚಾರಗಳು ಸಂಜೆ ... ... ಸಮ್ಮೇಳನ ... ಪುಟ್ಟಪ್ಪ, ...ಸಮೇಶ್ವರಭಟ್ಟ, ಎಂ ಗೋಪಾಲಕೃ... ... ಎಸ್ ನರಸಿಂಹಸ್ವಾಮಿ ಮತ್ತು ...ಂದಾಚಾರ್ ... ಬಾಲಜಗತ್ ಮಕ್ಕ... ... ಕಥಾಸರಿತ್ಸಾಗರ ಕಾರ್ಯಕ್ರಮ ... ...ತನಾರಾಯಣ ... ಭೂಪತಿವರ್ಮ ...ನಗೌಡರ ಭಾಷಣ ... ...ೊಳೀಕ ತಿರುಚನಾಪಳ್ಳಿ ಪ್ರದರ್ಶನಾತ ... ...ವಿ–ಉರ್ದು ಗೀತೆಗಳ ರಿಕಾರ್ಡ ... ವೆಂಕಟರಮಣಯ್ಯ–ಪಟೇಲು

...ಮಧ್ವ ಜಯಂತ್ಯುತ್ಸವ

...ಭಾರತ ಮಾಧ್ವ ಮಹಾ ಮಂಡಲಿ...ರು ಶಾಖೆಯ ಆಶ್ರಯದಲ್ಲಿ ಮಧ್ವ ...ತ್ಸವವು ನಾಳೆ ಮಧ್ಯಾಹ್ನ ೪ ಗಂಟೆಗೆ ...ಸಪುರದಲ್ಲಿರುವ ವ್ಯಾಸರಾಜ ಮಠದ ...ಬ್ರಹ್ಮಣ್ಯ ಮಠಾಧೀಶರಾದ ಶ್ರೀ ವಿಶ್ವ... ...ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ... ವಿಶ್ವವಿದ್ಯಾಲಯದ ನಿವೃತ್ತ ಅ... ...ಂಟ್ರೋಲರ್ ಶ್ರೀ ನರಸಿಂಹಮೂ... ...ಭಾಷಣ ಮಾಡುವರು

ವಿ. ಆರ್. ನಾಯ್ಡುರವರಿಗೆ ಮುಖ್ಯ ಮಂತ್ರಿತ್ವದ ಭರವಸೆಯೇ!

ಶಾಸನ ಸಭೆಯಲ್ಲಿ ವಿಷಯದ ಚರ್ಚೆಗೆ ಅವಕಾಶ ದೊರೆಯಲಿಲ್ಲ

ಮೈಸೂರು ೨೩

ಶಾಸನ ಸಭೆಯಲ್ಲಿ ಸದಸ್ಯರು ... ಉಪ ... ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದಾಗ, ಮಂತ್ರಿಗಳಿಗೆ ಕಳಿಸ ... ಹೇಳಲಾಗುತ್ತಿದೆ ಹಿಂದೆ ಉಪ ಮಂತ್ರಿಗಳು ... ... "ನನ್ನನ್ನು ಒಂದು ದಿನ ಮುಖ್ಯ ಮಂತ್ರಿಯಾಗಿ ಮಾಡುತ್ತೇನೆ" ಎಂದು ಮುಖ್ಯ ಮಂತ್ರಿ ಹನುಮಂತಯ್ಯನವರು ಹೇಳುತ್ತಿದ್ದರು, ಹಾಗೆ ಮಾಡಲಿಲ್ಲ, ಆ ರೀತಿ ಮಾಡಿದ್ದರೆ ಜಾಗ್ರತೆಯಾಗಿ ಕೆಲಸಗಳನ್ನು ... ...ತ್ತು–ಎಂದು ಶ್ರೀ ವಿ ಆರ್ ನಾಯ್ಡುರವರು ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಕಾಲಾನಂತರ ಹೇಳುತ್ತಿದ್ದಾಗ ಈ ವಿಷಯದ ಚರ್ಚೆಗೆ ಅವಕಾಶ ಕೊಡಲು ಸಾಧ್ಯವಿಲ್ಲವೆಂದು ಸಭಾಧ್ಯಕ್ಷ ಶ್ರೀ ಹೆಚ್ ಎಸ್ ರುದ್ರಪ್ಪನವರು ಅದನ್ನು ತಳ್ಳಿಹಾಕಿದರು

ಮದ್ರಾಸಿನ ಪಂಚಾಯತಿ ಮಂತ್ರಿ ಶ್ರೀ ... ಸುಬ್ರಹ್ಮಣ್ಯಂರವರು ಈ ದಿನ ಶಾಸನ ಸಭೆಯ ವಿಶೇಷ ಅತಿಥಿಗಳ ಸ್ಥಾನದಲ್ಲಿ ಕುಳಿತು ಕಾರ್ಯಕಲಾಪಗಳನ್ನು ವೀಕ್ಷಿಸಿದರು

ರಾಜ ಪ್ರಮುಖರ ಪದ್ಧತಿಯ ರದ್ದಿಗೆ ಮುಖ್ಯಮಂತ್ರಿಗಳ ಒಪ್ಪಿಗೆ

ದೆಹಲಿಯಲ್ಲಿ ಸೇರಿದ್ದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಸಂಸ್ಥಾನಗಳ ಪುನರ್ರಚನಾ ಸಮಿತಿ ವರದಿಯ ಬಗ್ಗೆ ಎರಡು ದಿನಗಳವರೆಗೆ ಚರ್ಚೆಯಾಗಿ ಬರುವ ವರ್ಷ ಅಕ್ಟೋಬರ್ ೩೧ರೊಳಗೆ ಭಾರತದಲ್ಲಿ ನೂತನ ಸಂಸ್ಥಾನಗಳ ಪುನರ್ರಚನೆಯಾಗಬೇಕೆಂಬ ಅಭಿಪ್ರಾಯವನ್ನು ಸೂಚಿಸಲಾಯಿತು ಸಂಸ್ಥಾನಗಳ ಪುನರ್ರಚನೆ ಮಸೂದೆಯನ್ನು ಪಾರ್ಲಿಮೆಂಟಿನ ಮೇ ತಿಂಗಳ ಅಧಿವೇಶನದಲ್ಲಿ ಅಂಗೀಕರಿಸಲಾಗುವುದೆಂದು ಗೊತ್ತಾಗಿದೆ ವಿವಿಧ ಸಂಸ್ಥಾನಗಳ ವ್ಯತ್ಯಾಸವನ್ನು ರದ್ದುಗೊಳಿಸಲು ಸಭೆಯು ಒಪ್ಪಿತು ಇದರಿಂದ ರಾಜ ಪ್ರಮುಖರ ಹುದ್ದೆಗಳ ರದ್ದಿಯಾತಿಗೆ ಅಂಗೀಕಾರವಿತ್ತಂತಾಗಿದೆ ಮುಂದೆ ಸಂಸ್ಥಾನಗಳು ಮತ್ತು ಕೇಂದ್ರ ಸರ್ಕಾರದ ಆಡಳಿತದಲ್ಲಿರುವ ಪ್ರದೇಶಗಳು ಎಂಬ ಎರಡು ಬಗೆಯ ಪ್ರಾಂತಗಳು ಮಾತ್ರ ಇರುವುವು

ನಗರದಲ್ಲಿ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರ ಕಾರ್ಯಕ್ರಮ

ಮೈಸೂರು ೨೩

ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು ಎನ್ ಧೇಬರ್‌ರವರು ಇದೇ ೨೭ನೇ ತಾರೀಖು ನಗರಕ್ಕೆ ಆಗಮಿಸುವ ಸಂದರ್ಭದಲ್ಲಿ ಆ ದಿನ ೧೧॥ ಘಂಟೆಗೆ ಅವರನ್ನು ಸ್ವಾಗತಿಸಲು ನಗರದ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ಶ್ರೀರಂಗಪಟ್ಟಣದ ಉಕ್ಕಡದ ಬಳಿ ಬರಬೇಕೆಂದು ಕಾಂಗ್ರೆಸ್ ಕಾರ್ಯದರ್ಶಿಗಳು ಕೋರಿರುತ್ತಾರೆ

ಆ ದಿನ ಮಧ್ಯಾಹ್ನ ೩ ಘಂಟೆಗೆ ಪುರ ಭವನದಲ್ಲಿ ಪೌರಸನ್ಮಾನಪತ್ರವನ್ನು ಒಪ್ಪಿಸಲಾಗುವುದು ಸಂಜೆ ೬ ಘಂಟೆಗೆ ಚಾಮರಾಜ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ

ಸಂಸ್ಥಾನದ ರೈತರ ಸಾಲ ೩೩ ಕೋಟಿ ರೂ.

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಮೈಸೂರು ೨೩

ಸಂಸ್ಥಾನದ ರೈತರುಗಳಿಗೆ ಒಟ್ಟು ೩೩ ಕೋಟಿ ರೂ ಗಳಷ್ಟು ಸಾಲವಿರುವುದೆಂದೂ, ಈ ಬಗ್ಗೆ ... ರಲ್ಲಿ ವಿಶೇಷಾಧಿಕಾರಿಯಾಗಿದ್ದ ಶ್ರೀ ನಾಗಪ್ಪನವರು ಪರೀಕ್ಷೆ ನಡೆಸಿ ವರದಿಯೊಂದನ್ನು ನೀಡಿದ್ದರೆಂದೂ, ಈ ದಿನ ಶಾಸನ ಸಭೆಯಲ್ಲಿ ಸಚಿವ ... ನಾಗನಗೌಡರು ಶ್ರೀಮತಿ ಎಲ್ ವಿ ಸುಬ್ಬಮ್ಮನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ರೈತರ ಋಣ ಭಾರವನ್ನು ಪರಿಹರಿಸಲು ಮಾರಟೋರಿಯಂ (ನಿಶ್ಚಿತ ಅವಧಿ) ಶಾಸನವನ್ನು ತರುವ ಆಲೋಚನೆಯಿಲ್ಲವೆಂದೂ, ಆ ಶಾಸನವನ್ನು ಜಾರಿಗೆ ತರುವುದರಿಂದ ಸಾಲಗಾರರಿಗೆ ತಾವು ಕೊಟ್ಟ ಸಾಲ ಹಿಂದಿರುಗುವುದೇ ಹೋಗುವುದೆಂಬ ಭಯ ಹುಟ್ಟಿ, ಅವರುಗಳು ರೈತರಿಗೆ ಸಾಲ ಕೊಡಲು ಹಿಂಜರಿಯುವರೆಂದೂ, ರೈತರ ಸಾಲ ... ತೀರಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೆಂದೂ ಮತ್ತೊಂದು ಪ್ರಶ್ನೆಗೆ ಉತ್ತರವೀಯಲಾಯಿತು

ಜಮೀನು ಅಡಮಾನ ಬ್ಯಾಂಕುಗಳು ಸುಲಭ ... ಸಾಲಗಳನ್ನು ಕೊಡುತ್ತಿರುವುದರಿಂದ ರೈತರ ಋಣ ಭಾರವು ಕ್ರಮಕ್ರಮವಾಗಿ ಕಡಿಮೆಯಾಗುತ್ತಿದೆಯೆಂದೂ ತಿಳಿಸಲಾಯಿತು

ಜಿಲ್ಲೆಯಲ್ಲಿ ಸರ್ಕಾರದ ... ವಶಕ್ಕೆ ತೆಗೆದುಕೊಂಡಿರುವ ವಸ್ತುಗಳ ಬಗ್ಗೆ ಶ್ರೀ ಬಿ ರಾಚಯ್ಯನವರು ಕೇಳಿದ ಪ್ರಶ್ನೆಗೆ ಸಚಿವ ಶ್ರೀ ... ನವರು ಜಿಲ್ಲೆಯ ... ವಿವರಗಳನ್ನು ತಿಳಿಸಿದ ... ಜಿಲ್ಲೆಯಲ್ಲಿನ ... ಬಗ್ಗೆ ... ಪ್ರಶ್ನೆ ಕೇಳುವುದಾಗಿ ಶ್ರೀ ... ಯ್ಯನವರು ಹೇಳಲು, ಸಚಿವರು ಕೊಟ್ಟಿರುವ ಉತ್ತರ ಸರಿಯಿಲ್ಲದಿದ್ದರೆ ಸರಿಯಾದ ಉತ್ತರವನ್ನು ಕೊಡುವಂತೆ ಸಭಾಧ್ಯಕ್ಷರು ಸೂಚನೆಯಿತ್ತರು

ಕೊಲೆ ಅಪಾದನೆಯಲ್ಲಿ ಇಬ್ಬರಿಗೆ ಸಜಾ

ಒಬ್ಬನ ಖುಲಾಸೆ

ಮೈಸೂರು ೨೩

ನಂಜನಗೂಡು ತಾಲ್ಲೂಕು ಹಳ್ಳದಿಣ್ಣೆ ಗ್ರಾಮದ ಕರಿಯ ಎಂಬುವನನ್ನು ಕಳೆದ ವರ್ಷ ಅದೇ ಗ್ರಾಮದ ಮರಿನಂಜ, ಕರಿಯ ಮತ್ತು ನಂಜಪ್ಪ ಎಂಬುವರು ಕೊಲೆ ಮಾಡಿದರೆಂದು ನಂಜನಗೂಡು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಈ ದಿನ ಸೆಷನ್ಸ್ ನ್ಯಾಯಾಧೀಶರು ತೀರ್ಪಿತ್ತು ಮರಿನಂಜನಿಗೆ ಎರಡು ವಿಧಿಗಳ ಮೇರೆ ೭ ವರ್ಷ ಮತ್ತು ೬ ತಿಂಗಳು ಕಠಿಣ ಶಿಕ್ಷೆಯನ್ನೂ ನಂಜಪ್ಪನಿಗೆ ಎರಡು ವಿಧಿಗಳ ಪ್ರಕಾರ ೩ ವರ್ಷ ೬ ತಿಂಗಳು ಕಠಿಣ ಶಿಕ್ಷೆಯನ್ನೂ ವಿಧಿಸಿ, ಮತ್ತೊಬ್ಬ ಅಪರಾಧಿ ಕರಿಯನನ್ನು ಖುಲಾಸೆ ಮಾಡಿರುತ್ತಾರೆ

ವಿಶ್ವ ಸಂಸ್ಥೆ ದಿನಾಚರಣೆ ಮುಕ್ತಾಯ ಸಮಾರಂಭ

ಮೈಸೂರು ೨೪

ವಿಶ್ವ ಸಂಸ್ಥೆ ದಿನಾಚರಣೆಯ ಮುಕ್ತಾಯ ಸಮಾರಂಭವು ಈ ಪ್ರಾತಃಕಾಲ ಪುರಭವನದಲ್ಲಿ ಪುರಸಭಾ ಉಪಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು

ವಿಶ್ವ ಸಂಸ್ಥೆಯ ಧ್ವಜಾರೋಹಣವಾದ ನಂತರ ಶ್ರೀಗಳಾದ ಎಂ ವಿ ಕೃಷ್ಣರಾವ್, ಎಂ ಯಾಮುನಾಚಾರ್ಯ ಮತ್ತು ಟಿ ಎಲ್ ಕಾಂತರಾಜರವರುಗಳು ಭಾಷಣ ಮಾಡಿ, ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು ಮತ್ತು ಉಪಯೋಗಗಳನ್ನು ವಿವರಿಸಿದರು

ಶ್ರೀಮನ್ಮಹಾರಾಜರೂ ಮತ್ತು ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳೂ ಸಮಾರಂಭಕ್ಕೆ ಸಂದೇಶಗಳನ್ನು ಕಳುಹಿಸಿದ್ದರು ಶ್ರೀಮನ್ಮಹಾರಾಜರು ತಮ್ಮ ಸಂದೇಶದಲ್ಲಿ ವಿಶ್ವ ಸಂಸ್ಥೆಯು ವಿಶ್ವ ಶಾಂತಿಗಾಗಿಯೂ ಮತ್ತು ತನ್ನ ವಿವಿಧ ಅಂಗ ಸಂಸ್ಥೆಗಳ ಮೂಲಕ ಆರ್ಥಿಕ, ಸಾಮಾಜಿಕ ಪ್ರಗತಿಗಾಗಿಯೂ ಶ್ರಮಿಸುತ್ತಿರುವುದನ್ನು ಪ್ರಶಂಸಿಸಿದರು

ವಿಶ್ವ ಸಂಸ್ಥೆಯಲ್ಲಿ ಒಳ್ಳೆಯದೂ ಮತ್ತು ಕೆಟ್ಟದೂ ಇರುವುದರಿಂದ ಒಳ್ಳೆಯ ಅಂಶದ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಶ್ರಮಿಸಬೇಕೆಂದೂ, ಇದರಲ್ಲಿ ವಿಶೇಷವಾಗಿ ಯುವಕರು ಭಾಗವಹಿಸಬೇಕೆಂದೂ ವಿಶ್ವ ಸಂಸ್ಥೆಯ ಕಾರ್ಯದರ್ಶಿಯವರು ತಮ್ಮ ಸಂದೇಶದಲ್ಲಿ ತಿಳಿಸಿರುವರು

ಸಂಸ್ಥಾನಗಳ ಪುನರ್ರಚನೆಯಿಂದ ಹುದ್ದೆಗಳ ಖೋತಾ ಇಲ್ಲ

ಸಂಸ್ಥಾನ ಪುನರ್ರಚನೆಯಾದ ಪರಿಣಾಮವಾಗಿ ಆಡಳಿತ ಸಿಬ್ಬಂದಿಯ ಖೋತಾ ಆಗಬಾರದೆಂದು ದೆಹಲಿಯಲ್ಲಿ ಸೇರಿದ್ದ ಮುಖ್ಯಮಂತ್ರಿಗಳ ಸಭೆಯಲ್ಲಿ ಅಭಿಪ್ರಾಯಪಡಲಾಗಿದೆ

ಗ್ರಾಮಗಳಲ್ಲಿ ಖಾದಿ ಪ್ರದರ್ಶನಕ್ಕೆ ಏರ್ಪಾಡು

ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಭಾರತ ಸರ್ಕಾರವು ೭ ಲಕ್ಷ ರೂ ಗಳನ್ನು ಮಂಜೂರು ಮಾಡಿರುತ್ತಾರೆ ಗ್ರಾಮಾಂತರದಲ್ಲಿ ಖಾದಿ ಮತ್ತು ಗೃಹ ಕೈಗಾರಿಕಾ ಪ್ರದರ್ಶನಗಳನ್ನು ನಡೆಸಲು ೩॥ ಲಕ್ಷ ರೂ ಅನ್ನು ಅಖಿಲ ಭಾರತ ಖಾದಿ ಸಮಿತಿಗೆ ಕೊಡಲಾಗಿದೆ

ಸಂಯುಕ್ತ ಮಹಾರಾಷ್ಟ್ರದ ಸ್ಥಾಪನೆಗೆ ಚಳುವಳಿ

ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯು ಅದರ ಅಧ್ಯಕ್ಷ ಶಂಕರರಾವ್ ದೇವರಿಗೆ ಪರಿಷತ್ತಿನ ಚಟುವಟಿಕೆಗಳನ್ನು ಮುಂದುವರಿಸಲು ಪೂರ್ಣಾಧಿಕಾರವನ್ನು ಕೊಟ್ಟಿದೆ ಬೊಂಬಾಯಿ ನಗರವನ್ನು ಮುಖ್ಯ ಪಟ್ಟಣವಾಗಿಟ್ಟುಕೊಂಡು ಪ್ರಾಂತದ ರಚನೆಯನ್ನು ಮಾಡುವಂತೆ ಕೇಂದ್ರ ...

ಸಂಸ್ಥಾನದಲ್ಲಿ ಅನುವಂಶಿಕ ಗ್ರಾಮಾಧಿಕಾರಿಗಳ ಪದ್ಧತಿ

ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ರೆವಿನ್ಯೂ ಕಮೀಷನರರ ಹೇಳಿಕೆ

ಮೈಸೂರು ೨೪

ಅನುವಂಶಿಕ ಗ್ರಾಮಾಧಿಕಾರ ಪದ್ಧತಿಯು ... ಗ್ರಿ ಕಾರಿಂದಸ್ನು ... ರ್ಕಾರದವರು ಇನ್ನೂ ಏನನ್ನೂ ನಿರ್ಧರಿಸಿಲ್ಲ ಮುಂದೆ ಈ ಪ್ರಶ್ನೆಯು ಬಂದಾಗ ಗ್ರಾಮಾಧಿಕಾರಿಗಳ ಸಲಹೆಯನ್ನು ಪಡೆಯಲಾಗುವುದು—ಎಂಬುದಾಗಿ ಸಂಸ್ಥಾನದ ರೆವಿನ್ಯೂ ಕಮಿಷನರ್ ಶ್ರೀ ಜಿ ಎಲ್ ನಾಗರಾಜರಾಯರು ಸಂಸ್ಥಾನದ ಗ್ರಾಮಾಧಿಕಾರಿಗಳ ಆರನೆಯ ಸಮ್ಮೇಳನದ ಆರಂಭೋತ್ಸವವನ್ನು ಪುರಭವನದಲ್ಲಿ ನೆನ್ನೆ ನೆರವೇರಿಸುತ್ತಾ ನುಡಿದರು ವಿಧಾನ ಸಭಾ ಸದಸ್ಯ ಶ್ರೀ ಆರ್ ಅನಂತರಾಮುರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ಪ್ರಾರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಸ್ ಶೇಷಗಿರಿರಾಯರು ಎಲ್ಲರಿಗೂ ಸುಸ್ವಾಗತವನ್ನು ಬಯಸಿದರು ಅನಂತರ ಶ್ರೀಮತಿ ವಸುಮತಿ ಮುಂತಾದವರಿಂದ ಗೀತೆಗಳಾದುವು ಕಾರ್ಯದರ್ಶಿ ಶ್ರೀ ಎಸ್ ಎಲ್ ನರಸಿಂಹಯ್ಯನವರು ಅಧ್ಯಕ್ಷರಿಗೆ ಬಿನ್ನವತ್ತಳೆಯೊಂದನ್ನರ್ಪಿಸಿದರು

ಸಂಸ್ಥಾನದ ಇತಿಹಾಸದಲ್ಲಿ ಗ್ರಾಮಾಧಿಕಾರಿಗಳು ವಹಿಸಿರುವ ಪಾತ್ರವನ್ನು ಮತ್ತು ಎಂತಹ ಮಹತ್ವದ ಬದಲಾವಣೆಗಳಾದರೂ ಗ್ರಾಮಾಧಿಕಾರ ಉಳಿದಿರುವ ಅಂಶವನ್ನೂ ಅದರಲ್ಲಿ ಉಲ್ಲೇಖಿಸಲಾಗಿತ್ತು

ಇಂತಹ ವ್ಯವಸ್ಥೆಯನ್ನು ರದ್ದುಗೊಳಿಸುವುದೆಂದೂ ಒಂದು ವೇಳೆ ಅದು ರದ್ದಾಗುವುದಾದರೆ ಭಾರತದ ಎಲ್ಲಾ ಪ್ರಾಂತಗಳಿಗೂ ಸಮನಾಗಿರುವಂತೆ ಬದಲಾವಣೆ ಮಾಡಬೇಕೆಂದೂ ಕೋರಿ ಅನುವಂಶಿಕ ಪದ್ಧತಿಯ ಭವಿಷ್ಯದ ಬಗ್ಗೆ ಗ್ರಾಮಾಧಿಕಾರಿಗಳ ಪ್ರಾತಿನಿಧ್ಯ ಪಡೆದಿರುವ ಸಮಿತಿಯೊಂದನ್ನು ರಚಿಸಬೇಕೆಂದೂ ಅದರಲ್ಲಿ ಪ್ರಾರ್ಥಿಸಲಾಗಿತ್ತು

ಅನಂತರ ಶ್ರೀ ಜಿ ಎಲ್ ನಾಗರಾಜರಾಯರು ಅನೇಕ ಶತಮಾನಗಳ ಕಾಲದಿಂದಲೂ ಅನುವಂಶಿಕವಾಗಿ ನಡೆದುಬಂದಿರುವ ಗ್ರಾಮಾಧಿಕಾರಿಗಳ ಪದ್ಧತಿಯನ್ನು ಮೈಸೂರು ಸರ್ಕಾರದವರು ಮುಂದುವರಿಸಿಕೊಂಡುಬಂದಿದ್ದಾರೆಂದೂ, ಕಾಲವು ಬದಲಾದಂತೆ ಗ್ರಾಮಾಧಿಕಾರಿಗಳ ಜವಾಬ್ದಾರಿಯೂ ಹೆಚ್ಚುತ್ತಿದೆಯೆಂದೂ, ಇನ್ನು ಮುಂದೆ ಯೋಜನೆಯಿಂದ ಅವರಿಗೆ ಮತ್ತೂ ಹೆಚ್ಚಿನ ಕೆಲಸದ ಹೊರೆಯು ಬೀಳಲಿದೆಯೆಂದೂ, ಅದನ್ನು ಅವರು ಸೇವಾ ಮನೋಭಾವದಿಂದ ಒಪ್ಪಬೇಕೆಂದೂ ಹೇಳಿದರು ಅನಂತರ ಕಾರ್ಯದರ್ಶಿಯವರು ವರದಿಯನ್ನು ಓದಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ರಾಷ್ಟ್ರದ ಆಡಳಿತದಲ್ಲಿ ಗ್ರಾಮಾಧಿಕಾರಿಗಳ ಪಾತ್ರವನ್ನು ಪ್ರಶಂಸಿಸಿ, ಅವರು ದೇಶವೆಂಬ ರಥಕ್ಕೆ ಕೇವಲ ನಾಲ್ಕನೆಯ ಗಾಲಿಯಲ್ಲದೆ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ಅಕ್ಷ(ಅಚ್ಚು)ವಂತೆ ಇದ್ದಾರೆಂದು ಹೇಳಿದರು

ಜನತೆಯ ಮತ್ತು ಸರ್ಕಾರದ ಸಂಪರ್ಕಕ್ಕೆ ಕಾರಣರಾದ ಅವರುಗಳು ಸರ್ಕಾರಕ್ಕೆ ಬೇಕಾಗುವ ಅಂಕಿ-ಅಂಶಗಳನ್ನೊದಗಿಸಿ ತಮ್ಮ ರಾಷ್ಟ್ರದ ಯೋಜನೆಯಲ್ಲಿ ತಮ್ಮ ಪಾತ್ರ ನಿರ್ವಹಿಸಬೇಕೆಂದು ಸೂಚಿಸಿದರು

DALVOY HIGH SCHOOL,
MYSORE
(Coaching Section)

Offers excellent Coaching by expert teachers for S. S. L. C students of Jan 56 Admissions between 9 & 10 30 A.M For further details contact the undersigned

S N SUBBAKRISHNAN
B A B Com
Secretary

ಕರ್ನಾಟಕದೊಡನೆ ಐಕ್ಯಕ್ಕೆ ಕೊಡಗಿನಲ್ಲಿ ವಿರೋಧ

ಕೊಡಗನ್ನು ಕರ್ನಾಟಕದೊಡನೆ ಐಕ್ಯಗೊಳಿಸಬೇಕೆಂಬ ಶಿಫಾರಸಿನ ವಿರುದ್ಧ ಜನಾಭಿಪ್ರಾಯವನ್ನು ಸಂಗ್ರಹಿಸಲು ಅಲ್ಲಿ ಪ್ರಯತ್ನಗಳು ನಡೆಯುತ್ತಿವೆಯೆಂದು ವರದಿಯಾಗಿದೆ ಕೊಡಗಿನ ವಿಲೀನವನ್ನು ವಿರೋಧಿಸಲು ಸರ್ವ ಪಕ್ಷಗಳ ಸಮ್ಮೇಳನವೊಂದನ್ನು ಶಾಸನ ಸಭಾಧ್ಯಕ್ಷ ಶ್ರೀ ಬಿ ಎಸ್ ಕುಶಾಲಪ್ಪನವರು ಕರೆಯಲಿರುವರೆಂದು ಗೊತ್ತಾಗಿದೆ ಫಜಲಾಲಿ ಸಮಿತಿ ಶಿಫಾರಸಿನ ವಿರುದ್ಧ ಸಾರ್ವಜನಿಕರ ಬೆಂಬಲವನ್ನು ಸಂಗ್ರಹಿಸುವಂತೆ ಅವರು ಎಲ್ಲ ಪಕ್ಷಗಳ ನಾಯಕರಿಗೂ ಮನವಿ ಮಾಡಿಕೊಂಡಿರುವರೆಂದು ತಿಳಿದು ಬಂದಿದೆ

ವೀರ್ಯ ವೃದ್ಧಿಗೂ, ನರಗಳ ಶಕ್ತಿಗೂ

ಸಾಲಾಮಿಸ್ರಿ ಹಲ್ವ

ನಂ 3 (Regd)
ಎಸ್. ರಂಗಯ್ಯ ಶೆಟ್ಟಿ,
ಶಿವರಾಂಪೇಟೆ, ಮೈಸೂರು

VIDYA TUTORIAL
COLLEGE
(Dalvoy High School Buildings)
MYSORE
The Best Institute in Mysore

MARCH 1956 SESSION COMMENCES

Admissions Start on Auspicious
VIJAYADASAMI DAY (26-10 55)
INTER Commerce Arts Science
DEGREE B A B Sc B Com
1st B E
(All Parts All Subjects)
LADIES ALSO ADMITTED
Enquiries 9 to 10 A M
5 30 to 8.30 P M

SRI
RAGHAVENDRA TECHNICAL INSTITUTE (Estd 1954)
(S R Telegraph Training School)
Chamaraja Road, Mysore

1 **Expert Training in Telegraphy and Postal work**
2 **Telephone Operator's Course &**
3 **Wireless Telegraphy**

Classes for 2 & 3 will commence from 15th Nov 1955 Students desirous of joining are requested to apply in writing, with a remittance of Rs 5 & Rs 10 respectively For details please contact the secretary

---

ಗಡಿಯಾರ ಸಿಕ್ಕಿದೆ

ನಮ್ಮ ಪತ್ರಿಕೆ ಹಂಚುವವನೊಬ್ಬನಿಗೆ ರಸ್ತೆಯಲ್ಲಿ ಒಂದು ಪಾಕೆಟ್ ಗಡಿಯಾರವು ಸಿಕ್ಕಿರುತ್ತದೆ ಅದರ ವಾರೀಸುದಾರರು ತಕ್ಕ ರುಜುವಾತನ್ನು ಕೊಟ್ಟು ಸಾಧ್ವಿ ಪತ್ರಿಕಾಲಯದಲ್ಲಿ ಪಡೆಯಬಹುದು

Edited Printed and Published by A R Nagarajan at Sadhvi Press D Subbiah Road, Mysore

---

ಮನೆ ಭೋಗ್ಯಕ್ಕಿದೆ

ಕೃಷ್ಣಮೂರ್ತಿಪುರದ 4ನೇ ಅಗ್ರಹಾರದಲ್ಲಿ ಸುಮಾರು 31 ಮೂ ಪಾಡಿಗೆ ಅಂಗಳವಿನ, ನಾಲ್ಕು ಕೊಠಡಿ ಹಾಲ್, ದೇವ, ಕ್ಲೋಸ್, ಭಾವಿ, 2 ಕಡೆ ರಸ್ತೆ ಇರುವ ಮಾರ್ಡ್ನ ಸಂಸಾರಕ್ಕೆ ಅನುಕೂಲವಾದ ಕೊಡಲಿ ಸಾ ಫೀನಿಕ್ಕೆ ಕೊಡಲ್ಪಡುವ ವಿಶಾಲವಾದ ಮನೆ

ರೂ 3,000

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು.

GREETINGS TO THE

GRADUATES

OF THE YEAR
For your

Convocation Robes

Please call on us

EXCELSIOR TAILORING HOUSE

Sayaji Rao Road,
MYSORE

Advance reservation assures definite delivery of the robes

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರೋಡ್, ಮೈಸೂರು.

ಸುಪ್ರಸಿದ್ಧವಾದ ಅಂಗಡಿಯ ಶಾಖೆಯನ್ನು ಹೊಸ ಸ್ವಂತ ಕಟ್ಟಡದಲ್ಲಿ ನಮ್ಮ ಸ್ವಂತ ಭವನವಾದ

ಕೊರ್ಗ್ ಮ್ಯಾನ್ ಷನ್ನಿನಲ್ಲಿ

ತೆರೆಯುತ್ತೇವೆ ಎಂದಿನಂತೆ ನಮ್ಮ ಗಿರಾಕಿಗಳು ಮತ್ತು ಹಿತೈಷಿಗಳು ಪ್ರೋತ್ಸಾಹ ನೀಡಬೇಕಾಗಿ ವಿನಂತಿ

NATIONAL LEAGUE,
Ananthalaya Buildings, Mysore

Offers Excellent Coaching by experienced and able teachers to –

S. S. L. C Students (Jan. 56)

Separate Section will be opened very shortly
Join at once

V. RAJAGOPAL,
Organiser

After serving a million efficiently in Laundry work,
We are glad in offering our services to all

★

By the opening of our only Branch

S. E. L. DRY CLEANING

SERVICE

at the New Statue Circle, Mysore

★

Proprietor – L. SRIKANTIAH

Shivananda Electric Laundry,

H O 24 V V Market Buildings, Mysore (Estd 1946)

ನಿಮ್ಮ ಆಕರ್ಷಣೀಯ ಫೋಟೋ

ಪೋಸ್ಟ್ ಕಾರ್ಡ್ ಸೈಜಿಗೆ ಒಂದು ರೂಪಾಯಿ

★

ಮುರುಗನ್ ಅಂಡ್ ಕಂಪೆನಿ.

'L' 14. ದಸರಾ ವಸ್ತು ಪ್ರದರ್ಶನ, ಮೈಸೂರು

Devidayal STAINLESS STEEL BOMBAY 3

ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಿರಿ!

ದಸರಾ ವಸ್ತು ಪ್ರದರ್ಶನಕ್ಕಾಗಿ 15 ದಿನಗಳು ಮಾತ್ರ

1955 ನೇ ಅಕ್ಟೋಬರ್ 21 ರಿಂದ ನವೆಂಬರ್ 6 ರವರೆಗೆ

ದೇವಿದಯಾಳ್ ರವರ ಎಲ್ಲಾ ಸ್ಟೇನ್ ಲೆಸ್ ಸ್ಟೀಲ್ ಪಾತ್ರೆಗಳೂ

ರಿಯಾಯಿತಿ ದರದಲ್ಲಿ ಗ್ಯಾರಂಟಿ ಚೀಟಿಗಳೊಡನೆ

ವಸ್ತು ಪ್ರದರ್ಶನದಲ್ಲಿ ಮಾತ್ರ ದೊರಕುತ್ತವೆ

'ಡಿ' ಬ್ಲಾಕ್ ಸ್ಟಾಲ್ ನಂ. 12 ಮತ್ತು 13

ಟೆಲಿಫೋನ್ ನಂ. 792

ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಅರ್ನಿ, ದಿಂಡಿಗಲ್
ಸಿಲ್ಕ್ ಮತ್ತು ನೂಲಿನ ಸೀರೆಗಳು ... ಎಲ್ಲಾ ... ದೊರೆಯುವ ಸ್ಥಳ
ವಿ. ಭೋಜಯ್ಯ ಅಂಡ್ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು . ಫೋನ್ 446

ಬಿಡಿಪ್ರತಿ ... 3 ಕಾಸು

FOR SALE
or
LEASE
On Attractive Terms
ONE WELL-DEVELOPPED
ESTATE
On Belagola Road
Two miles distant
Last Price Rs 65,000
CLEAN SALE
S RAMARAO,
Srikantavilas,
V. V. Mohalla, Mysore

ಪುಟ : ೧೪] SADHVI : TUESDAY 25 10-1955 ಮೈಸೂರು : ಮಂಗಳವಾರ ೨೫-೧೦-೧೯೫೫ [ಸಂಚಿಕೆ : ೬೩

ಕರ್ನಾಟಕ ಏಕೀಕರಣಕ್ಕೆ ಗ್ರಾಮಾಧಿಕಾರಿಗಳ ಬೆಂಬಲ

ರಾಜಸಭೆಯಲ್ಲಿ ಚಿನ್ನದ ಹಾರಗಳ ಸನ್ಮಾನ

ಮುಳ್ಳಂದೂರು ಜಹಗೀರ್‌ದಾರಿಣಿ ಮತ್ತು ಇತರ ಮೂವರಿಗೆ

ಮೈಸೂರು ೨೪

... ಅರಮನೆಯಲ್ಲಿ ನಡೆದ ರಾಜಸಭೆಯಲ್ಲಿ ... ಮೂರು ಜಹಗೀರ್‌ದಾರಿಣಿ ಶ್ರೀಮತಿ ಮಾ... ಪೂರ್ಣಯ್ಯನವರಿಗೂ, ಇತರ ಮೂ... ಸುವರ್ಣ ಹಾರಗಳನ್ನು ಕೊಟ್ಟು ಸನ್ಮಾ... ಯಿತು ಶ್ರೀಮತಿಯವರು ಮಾಧ್ಯಮಿಕ ...ಗಿ ೭೫,೦೦೦ ರೂಪಾಯಿ ಬೆಲೆ ಬಾಳುವ ...ವನ್ನು ಮತ್ತು ವಿದ್ಯಾ ದಾನ ಭೂದಾನ ...೨೦ ೦೦೦ ರೂ ನ ಜಮೀನನ್ನು ದಾನ ... ಕೊಟ್ಟಿರುತ್ತಾರೆ

...ನಗರದ ಕಂಟ್ರಾಕ್ಟರ್ ಶ್ರೀ ತಿರುವೇಂಗಡವೆ... ಮಾರ್‌ರವರಿಗೂ ಚಿನ್ನದ ಹಾರವನ್ನು ಕೊ...ಯಿತು ಇವರು ಚಾಮುಂಡೇಶ್ವರಿ ಮತ್ತು ...ಪ್ರಸನ್ನೇಶ್ವರ ದೇವಾಲಯಗಳನ್ನು ನಿರ್ಮಿ...ವಾತೆ ಒದಗಿಸಿದವರ ತೋಟದ ಬಳಿ ಧರ್ಮ...ವನ್ನು ವಳವಾಯು ಸ್ಕೂಲಿನಲ್ಲಿ ಕಟ್ಟಿಸಿದರು ...ಕಾಶಿ ವಿಶ್ವೇಶ್ವರಸ್ವಾಮಿ ದೇವಸ್ಥಾನ, ಸು... ರಾಮ ಮಂದಿರ ಮುಂತಾದ ಕಾರ್ಯಗ... ಲಕ್ಷ ೩ ಸಾವಿರ ರೂ ವೆಚ್ಚದಿಂದ ...ಕೊಟ್ಟಿರುತ್ತಾರೆ

...ಮೈಸೂರಿನ ದೊರೆಯ್ಯ ಬಸವಯ್ಯ ಅಂ... ಸನ್ಸ್‌ನ ಶ್ರೀ ಎಂ ಬಿ ಬಸವಯ್ಯನವರು ...ರ್ಣ ಹಾರವನ್ನು ಪಡೆದವರ ಪೈಕಿ ಮತ್ತೊ...ಬ್ಬರು ಇವರು ಈಶ್ವರ ದೇವಾಲಯದ ಜೀ...ರ್ಣೋದ್ಧಾರ, ಕೊಳದ ನಿರ್ಮಾಣ, ನವಗ್ರಹ ...ಯ ಮತ್ತು ರಾಘವೇಂದ್ರಸ್ವಾಮಿ ದೇ...ಲಯದ ಅಭಿವೃದ್ಧಿ, ಕೆಂಗಲ್ಲಿನಲ್ಲಿ ಧರ್ಮ ಶಾ...ಲೆಗಳಿಗಾಗಿ ೩ ಲಕ್ಷ ರೂ ಗಳನ್ನೂ ಮತ್ತು ...ಮಂದಿರ ಮತ್ತು ಇತರ ವಿದ್ಯಾ...ಸಂಸ್ಥೆಗಳಿಗಾಗಿ ಉದಾರವಾಗಿ ಧನ ಸಹಾಯವ...ನ್ನು ಮಾಡಿರುವರು

...ಕೊಪ್ಪದ ಕಾಫಿ ಪ್ಲಾಂಟರ್ ಲೋಕ ಸೇವಾ...ನಿರತ ಎ. ಎಸ್. ದೇವೇಗೌಡರು ಚಿನ್ನದ ಹಾ...ರವನ್ನು ಪಡೆದವರ ಪೈಕಿ ನಾಲ್ಕನೆಯವರು ಇ...ವರು ... ಪ್ರೌಢ ಶಾಲಾ ಕಟ್ಟಡಕ್ಕಾಗಿ ...೦೦೦ ರೂ ವಿದ್ಯಾ ದಾನ ಭೂದಾನಕ್ಕಾಗಿ ...೦೦೦ ರೂ ಬೆಲೆಯ ೪೦ ಎಕರೆ ಜಮೀನನ್ನು, ...ವೈದ್ಯ ಶಾಲೆಗಾಗಿ ೪,೦೦೦ ರೂ ಮತ್ತು ...ಪ್ಪದ ನಗರಾಭಿವೃದ್ಧಿಗಾಗಿ ೪,೦೦೦ ರೂ ...ನ್ನು ದಾನವಾಗಿ ಕೊಟ್ಟಿರುತ್ತಾರೆ

ಹಾಸನ ಜಿಲ್ಲೆಯ ರಾಯರಕೊಪ್ಪಲಿನ ಶ್ರೀ ಎ ನಂಜಪ್ಪಗೌಡರಿಗೆ ಬೆಳ್ಳಿಯ ತಟ್ಟೆಯ...ನ್ನು ಸನ್ಮಾನಿಸಲಾಯಿತು ಇವರು ಮಾಧ್ಯ...ಮಿಕ ಶಾಲಾ ಕಟ್ಟಡಕ್ಕಾಗಿ ೧೦,೦೦೦ ರೂ ಗಳ...ನ್ನು ಕೊಟ್ಟಿರುವರು

...ಹಳೇಬೀಡಿನ ಕಾಫಿ ಪ್ಲಾಂಟರ್ ಶ್ರೀ ಮನಂತೇ...ಗೌಡರಿಗೆ ಬೆಳ್ಳಿ ತಟ್ಟೆಯ ಸನ್ಮಾನ ಮಾಡಲಾಗಿ... ಇವರು ವಿದ್ಯಾ ದಾನಕ್ಕಾಗಿ ೫ ಎಕರೆ ತರಿ ...ಎಕರೆ ಖುಷ್ಕಿ ಜಮೀನು ಮತ್ತು ಶಾಲಾ ಕ...ಟ್ಟಡ, ಉಪಾಧ್ಯಾಯರ ವಸತಿ ಗೃಹಗಳಿಗಾಗಿ ...೦೦೦ ರೂ. ದಾನವನ್ನು ಕೊಟ್ಟಿರುತ್ತಾರೆ

ಉಚಿತ ಗೃಹಗಳ ಆರಂಭೋತ್ಸವ

ಮೈಸೂರು ೨೪

ಪುರಸಭಾ ನೌಕರರ ವಾಸಕ್ಕಾಗಿ ಒಂಟಿಕೊಪ್ಪಲಿನಲ್ಲಿ ಶ್ರೀ ಎ ವಿ ಗೋವಿಂದರಾಜ ನಾಯುಡುರವರು ಉಚಿತವಾಗಿ ಕಟ್ಟಿಸಿಕೊಟ್ಟಿರುವ ೮ ಮನೆಗಳ ಆರಂಭೋತ್ಸವವನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ನಿನ್ನೆ ನೆರವೇರಿಸಿದರು

ಶ್ರೀಮತಿ ರಂಗಮ್ಮ ನಾರಾಯಣ ಪ್ರಾರ್ಥನೆಯಾದನಂತರ ಪುರಸಭಾ ಉಪಾಧ್ಯಕ್ಷ ಶ್ರೀ ಎಸ್ ಸಂಜೀವಯ್ಯನವರು ಸ್ವಾಗತ ಭಾಷಣ ಮಾಡಿ, ಶ್ರೀ ನಾಯುಡುರವರ ಮತ್ತು ಅವರ ಮನೆತನದವರ ಔದಾರ್ಯವನ್ನು ಕೊಂಡಾಡಿದರು

ಶ್ರೀ ನಿಜಲಿಂಗಪ್ಪನವರು ಭಾಷಣ ಮಾಡಿ ಜನತೆಗೆ ಸೌಲಭ್ಯವನ್ನು ಒದಗಿಸಿಕೊಡುವುದರಲ್ಲಿ ಸರ್ಕಾರದವರೊಡನೆ ಸಾರ್ವಜನಿಕರು ಸಹಕರಿಸಿ ಧರ್ಮ ಕಾರ್ಯಗಳಿಂದ ಸಹಕರಿಸಬೇಕೆಂದು ಮನವಿ ಮಾಡಿಕೊಂಡರು

ಮೈಸೂರು ಸುಂದರ ನಗರವೆಂದು ಖ್ಯಾತಿ ಪ್ರಸಿದ್ಧವಾಗಿದ್ದಾಗ್ಯೂ ಸಹ ಕೆಲವು ಪ್ರದೇಶಗಳು ಇನ್ನೂ ಹಿಂದುಳಿದಿರುವುದನ್ನು ಅವರು ಪ್ರಸ್ತಾಪಿಸಿ, ಪುರಸಭೆ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ವಿವರಿಸಿದರು ಜನರು ಸೌಲಭ್ಯಗಳನ್ನು ಪಡೆಯಬೇಕಾದರೆ ಸರ್ಕಾರಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದೂ, ಇದಕ್ಕಾಗಿ ಹೆಚ್ಚು ತೆರಿಗೆಗಳಿಗೆ ಸಿದ್ಧವಾಗಿರಬೇಕೆಂದೂ ಅವರು ನುಡಿದರು ಶ್ರೀ ಸಂಜೀವಯ್ಯನವರು ವಂದನಾರ್ಪಣೆ ಮಾಡಿದರು

ಸೂಚನೆ

ವಿಜಯದಶಮಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ

ವ್ಯವಸ್ಥಾಪಕ

ಪ್ರಜಾ ಮಂಡಲದ ಬಹಿರಂಗ ಸಭೆ ನಿರ್ಣಯ

ರಾಜಧಾನಿಯ ಪ್ರಜಾ ಮಂಡಲದ ಆಶ್ರಯದಲ್ಲಿ ನೆನ್ನೆ ಬಹಿರಂಗ ಸಭೆ ನಡೆದು ಕರ್ನಾಟಕ ಏಕೀಕರಣವನ್ನು ಸ್ವಾಗತಿಸಬೇಕೆಂದೂ, ಮೈಸೂರು ಮಂತ್ರಿಮಂಡಲವನ್ನು, ಶಾಸನ ಸಭೆಯನ್ನು ರದ್ದುಗೊಳಿಸಿ, ಮಹಾರಾಜರಿಗೆ ರಾಜ್ಯಾಡಳಿತವನ್ನು ವಹಿಸಬೇಕೆಂದೂ ಪ್ರಧಾನಿ ನೆಹರೂರವರನ್ನು ಕೋರುವ ನಿರ್ಣಯಗಳನ್ನು ಅಂಗೀಕರಿಸಲಾಯಿತು

ವಿದ್ಯಾಧಿಕಾರಿಗಳಲ್ಲಿ ಖಾಸಗಿ ಶಾಲಾ ಉಪಾಧ್ಯಾಯರ ನಿಯೋಗ

ಖಾಸಗಿ ಪ್ರೌಢಶಾಲಾ ಉಪಾಧ್ಯಾಯರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ವಿದ್ಯಾ ಇಲಾಖಾಧಿಕಾರಿಗಳಲ್ಲಿ ಕಳೆದ ೧೭ನೇ ತಾರೀಖು ನಿಯೋಗ ಹೋಗಿ, ಸಹಾಯ ಪಡೆದ ಶಾಲೆಗಳಿಗಾಗಿ ಗ್ರಾಂಟು, ಉಪಾಧ್ಯಾಯರ ಸೇವಾವಧಿ ಬಡ್ತಿ, ಪ್ರಾವಿಡೆಂಟ್ ನಿಧಿ, ತುಟ್ಟಿ ಭತ್ಯೆ ರಜಾ ನಿವೃತ್ತಿ, ಮುಂತಾದ ವಿಷಯಗಳ ಬಗ್ಗೆ ಇರುವ ಸಮಸ್ಯೆಗಳನ್ನು ವಿವರಿಸಿದರು ವಿದ್ಯಾಧಿಕಾರಿಗಳು ಅವರಿಗೆ ಸಾಧ್ಯವಾದ ಸಹಾಯಗಳನ್ನು ಒದಗಿಸಲು ಪ್ರಯತ್ನಪಡುವುದಾಗಿ ಭರವಸೆಯಿತ್ತರೆಂದು ಗೊತ್ತಾಗಿದೆ

ಕರ್ನಾಟಕ ಪ್ರಾಂತ ರಚನೆಗೆ ಗ್ರಾಮಾಧಿಕಾರಿಗಳ ಬೆಂಬಲ

ಮೈಸೂರು ೨೪

ನೆನ್ನೆ ಇಲ್ಲಿ ಆರಂಭವಾದ ಗ್ರಾಮಾಧಿಕಾರಿಗಳ ಸಮ್ಮೇಳನದ ನೆನ್ನೆಯ ಅಧಿವೇಶನದಲ್ಲಿ ಕರ್ನಾಟಕ ಪ್ರಾಂತ ರಚನೆಯನ್ನು ಸ್ವಾಗತಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು ಮೈಸೂರಿನ ಹೆಸರನ್ನು ಉಳಿಸುವಂತೆಯೂ ಮತ್ತು ಶ್ರೀಮನ್ಮಹಾರಾಜರನ್ನು ರಾಜಪ್ರಮುಖರಾಗಿ ಅಥವಾ ಗವರ್ನರಾಗಿ ಮುಂದುವರಿಸುವಂತೆಯೂ ನಿರ್ಣಯದಲ್ಲಿ ಸೂಚಿಸಲಾಗಿದೆ

ಪಾಕಿಸ್ತಾನದ ಗಡಿ ಬಳಿ ಅಸ್ಘಾನ ಗುಡ್ಡಗಾಡಿನವರ ಕೇಂದ್ರೀಕರಣೆಯೇ?

ಕಳೆದ ವಾರ ಕರಾಚಿಯಿಂದ ಅಫ್ಘನ್ ರಾಯಭಾರಿಯನ್ನು ವಾಪಸು ಕರೆಸಿಕೊಂಡ ಮೇಲೆ ಈಗ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ಗಡಿ ಬಳಿ ಗುಡ್ಡಗಾಡಿನವರ ಎರಡು ಮತ್ತು ಶಿಬಿರ ಕೇಂದ್ರೀಕೃತವಾಗುತ್ತಿರುವುದೆಂದು ಪಾಕಿಸ್ತಾನದ ವಿದೇಶಾಂಗ ಇಲಾಖಾಧಿಕಾರಿಯೊಬ್ಬರು ತಿಳಿಸಿದ್ದಾರೆ ಪಾಕಿಸ್ತಾನದೊಳಗೆ ಗುಡ್ಡಗಾಡಿನವರು ನುಗ್ಗುವಂತೆ ಅಫ್ಘನ್ ಸರ್ಕಾರದವರು ಪ್ರೇರೇಪಿಸಿದರೆ, ಪಾಕಿಸ್ತಾನ ಸರ್ಕಾರದವರು ತಮಗೆ ವಿಶ್ವಾಸವಾಗಿರುವ ಗುಡ್ಡಗಾಡಿನವರ ಸಹಾಯ ಪಡೆದು ತಕ್ಕ ಪ್ರತಿಕ್ರಿಯೆ ನಡೆಸುವರೆಂದೂ ಅಧಿಕಾರಿಯು ಹೇಳಿರುವರು

ಪಶ್ಚಿಮ ಒಕ್ಕೂಟಕ್ಕೆ ಸೇರಲು ಸಾರ್ ವಿರೋಧ

ಜರ್ಮನಿ ಮತ್ತು ಫ್ರಾನ್ಸ್‌ಗಳ ನಡುವೆ ಇರುವ ಸಾರ್ ಪ್ರದೇಶದಲ್ಲಿ ಕಳೆದ ಭಾನುವಾರ ಜನಮತಗಣನೆ ತೆಗೆದುಕೊಂಡಾಗ ಅಲ್ಲಿನ ಜರ್ಮನ್ ಭಾಷೆಯಾಡುವ ೬ ಲಕ್ಷ ನಿವಾಸಿಗಳು ಪಶ್ಚಿಮ ಯೂರೋಪ್ ಒಕ್ಕೂಟಕ್ಕೆ ಸೇರುವುದಕ್ಕೆ ೨/೩ ಭಾಗದಿಂದ ಸಮ್ಮತಿಸಲಿಲ್ಲ ಆದರ ಪರಿಣಾಮವಾಗಿ ಅಲ್ಲಿನ ಪ್ರಧಾನಿ ಜೋಹಾನ್ಸ್ ಹಾಫ್‌ಮನ್‌ರವರು ರಾಜೀನಾಮೆಯಿತ್ತರು

ಸಿಂಹಾಸನದಿಂದ ಬಾವೊಡಾಯರ ಉಚ್ಚಾಟನೆ

ದಕ್ಷಿಣ ವಿಯಟ್ನಾಮಿನ ದೊರೆ ಬಾವೊಡಾಯರ ಭವಿಷ್ಯವನ್ನು ನಿರ್ಧರಿಸಲು ಅಲ್ಲಿನ ಪ್ರಧಾನಿ ಡೀಂ ರವರು ತೆಗೆದುಕೊಂಡ ಜನಮತಗಣನೆಯಲ್ಲಿ ಬಾವೊಡಾಯರನ್ನು ದೊರೆಯಾಗಿ ಉಳಿಸಿಕೊಳ್ಳಲು ಜನಸಾಮಾನ್ಯರು ಇಷ್ಟಪಡದಿರುವುದು ವ್ಯಕ್ತವಾಗಿದೆ ಫ್ರೆಂಚ್ ಸರ್ಕಾರದವರು ಅವರಿಗೆ ಕೊಟ್ಟಿದ್ದ ಮನ್ನಣೆಯನ್ನು ವಾಪಸು ತೆಗೆದುಕೊಂಡು, ವಿಯಟ್ನಾಮಿಗೆ ಡೀಂ ರವರೇ ಅಧಿಪತಿಯೆಂದು ಒಪ್ಪಿರುತ್ತಾರೆ ಬಾವೊಡಾಯರು ಕಳೆದ ೧೦ ತಿಂಗಳಿಂದಲೂ ಫ್ರಾನ್ಸಿನ ಫ್ರೆಂಚ್ ಸರ್ಕಾರದ ಆಶ್ರಯದಲ್ಲಿ ಇದ್ದರು ಅಧಿಕಾರಕ್ಕಾಗಿ ಅವರಿಗೂ ಪ್ರಧಾನಿಯವರಿಗೂ ಹೋರಾಟವಾಗಿ ಕಡೆಗೆ ಪ್ರಧಾನಿಯವರೇ ಜಯಶಾಲಿಗಳಾಗಿರುತ್ತಾರೆ

೫೫ ವರ್ಷಗಳ ನಂತರ ರಾಷ್ಟ್ರಾದ್ಯಂತ ಪಾನ ನಿರೋಧ

ತನಿಖೆ ಸಮಿತಿಯ ಶಿಫಾರಸು

೧೯೫೮ನೇ ಏಪ್ರಿಲ್ ೧ಕ್ಕೆ ರಾಷ್ಟ್ರಾದ್ಯಂತ ಪೂರ್ಣವಾಗಿ ಪಾನ ನಿರೋಧವು ಜಾರಿಗೆ ಬರಬೇಕೆಂದು ಪಾನ ನಿರೋಧ ತನಿಖೆ ಸಮಿತಿಯವರು ಯೋಜನಾ ಮಂಡಲಿಗೆ ಶಿಫಾರಸು ಮಾಡಿರುತ್ತಾರೆ ಸಮಿತಿಯವರು ಭೇಟಿಯಿತ್ತ ಸಂಸ್ಥಾನಗಳೆಲ್ಲಾ ಈ ಕ್ರಮಕ್ಕೆ ಬೆಂಬಲ ದೊರೆತಿರುವುದಾಗಿಯೂ ಅವರು ಹೇಳಿರುವರು ಈ ಸಾಲಾವೈಂಗೊಳಗೆ ಸರ್ಕಾರಗಳು ಪೂರ್ಣ ಪಾನ ನಿರೋಧ ನೀತಿಯನ್ನೂ, ಅದರ ಜಾರಿ ಅವಧಿ ವಿಷಯವನ್ನೂ ಒಪ್ಪಿ, ಈ ಕಾರ್ಯಕ್ರಮವು ಯಶಸ್ವಿಯಾಗುವಂತೆ ಮಾಡಲು ಸಾರ್ವಜನಿಕರನ್ನು ಸಿದ್ಧಗೊಳಿಸಬೇಕೆಂದೂ ಸಮಿತಿಯವರು ಸೂಚಿಸಿರುವರು ಭಾರತ ಸರ್ಕಾರದವರೂ ಪಾನ ನಿರೋಧವು ರಾಷ್ಟ್ರೀಯ ನೀತಿಯೆಂದು ಘೋಷಿಸಬೇಕೆಂದೂ ಕ್ರಮಕ್ರಮವಾಗಿ ಜನರಲ್ಲಿ ಪ್ರಚಾರ, ಕುಡಿತದ ಮೇಲೆ ನಿರ್ಬಂಧ ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಸಲಹೆ ಮಾಡಲಾಗಿದೆ ಬರುವ ಏಪ್ರಿಲಿನಿಂದ ಗ್ರಾಮ ಮತ್ತು ಪಟ್ಟಣಗಳಲ್ಲಿ ಸೇಂದಿ ಅಂಗಡಿಗಳ ಸಂಖ್ಯೆ ಇಳಿಸುವುದು, ವಾರದಲ್ಲಿ ಹೆಚ್ಚು ದಿನ ಅಂಗಡಿಗಳನ್ನು ಮುಚ್ಚುವುದು, ಭಟ್ಟಿ ತಯಾರಿಕೆಯನ್ನು ಕಡಿಮೆ ಮಾಡುವುದು, ಕೈಗಾರಿಕಾ ಪ್ರದೇಶಗಳಲ್ಲಿ ಅಂಗಡಿ ಮುಚ್ಚುವುದು—ಇವೇ ಮುಂತಾದ ಆರು ಕ್ರಮಗಳನ್ನು ಸಮೀಪ ಕಾಲದಲ್ಲಿ ಅನುಸರಣೆ ಮಾಡಲು ಸೂಚಿಸಲಾಗಿದೆ ಸಮಿತಿಯ ಸದಸ್ಯರೊಬ್ಬರಾದ ಶ್ರೀ ಪಿ ಕೊದಂಡರಾಯರು ಟಿಪ್ಪಣಿ ಸೂಚಿಸಿ ವ್ಯಕ್ತಿಗಳಿಗೆ ಲೈಸೆನ್ಸ್ ಮೇಲೆ ಅನುಮತಿ ಕೊಡುವಂತೆ ಹೇಳಿರುವರು

ಕಾಂಗ್ರೆಸ್ ಚುನಾವಣೆ ಸ್ಥಾನಗಳ ವಿಂಗಡಣೆ

ನಗರದ ಕಾಂಗ್ರೆಸ್ಸಿನ ದಕ್ಷಿಣ ಮತ್ತು ಉತ್ತರ ವಾರ್ಡುಗಳಿಗೆ ಕೆಳಗೆ ಕಂಡಂತೆ ಚುನಾವಣಾ ಸ್ಥಾನಗಳನ್ನು ಗೊತ್ತುಪಡಿಸಲಾಗಿದೆ ಕಿಲ್ಲೆ, ಕೃಷ್ಣರಾಜ, ಚಾಮರಾಜ ಮತ್ತು ದೇವರಾಜ ಮೊಹಲ್ಲಾಗಳಿಗೆ ಕ್ರಮವಾಗಿ ೩, ೬, ೬ ಮತ್ತು ೬, ಮಂಡಿ, ಲಷ್ಕರ್ ಮತ್ತು ನಜರ್‌ಬಾದ್‌ಗಳಿಗೆ ಕ್ರಮವಾಗಿ ೭, ೮, ಮತ್ತು ೫

ವಿರೋಧಿಗಳ ಮೇಲೆ ಮೊಕದ್ದಮೆ ಹೂಡಿದ್ದಕ್ಕೆ ನೋಟೀಸು

ಶ್ರೀರಂಗಪಟ್ಟಣ ತಾಲ್ಲೂಕು ಬಾಬೂರಾಯನ ಕೊಪ್ಪಲಿನ ಶ್ರೀಗಳಾದ ಮುಂಡೇವೇಗೌಡ, ಪುಟ್ಟೇಗೌಡ ಪವರೇಗೌಡ, ಬಿ ಚಾಮಯ್ಯ ಮತ್ತು ಪುಟ್ಟು ಇವರುಗಳು ಅದೇ ಊರಿನ ಇನ್ಷೂರೆನ್ಸ್ ಏಜೆಂಟ್ ಶ್ರೀ ಬಿ ಸಿ ಲಿಂಗಯ್ಯನವರನ್ನು ನೋಡಿದರೆ—ಮ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತರು ನಿರ್ದೋಷಿಗಳೆಂದು ನ್ಯಾಯಾಧೀಶರು ತೀರ್ಪಿತ್ತು, ಮೊಕದ್ದಮೆ ಹೂಡಿದುದರಿಂದ ಅವರ ಮೇಲೆ ಕ್ರಮವನ್ನು ಜರುಗಿಸಬಾರದೇಕೆಂದು ಸಮಜಾಯಿಷಿಯನ್ನು ಕೇಳಿ ಫಿರ್ಯಾದಿ ಲಿಂಗಯ್ಯನವರಿಗೆ ನೋಟೀಸು ಕೊಟ್ಟಿರುವರು

ಮಕ್ಕಳ ದಿನಾಚರಣೆ ಸ್ಪರ್ಧೆಯಲ್ಲಿ ಜಯಶಾಲಿಗಳು

ಮೈಸೂರು ೨೫

ಕಳೆದ ಶನಿವಾರ ದಸರಾ ವಸ್ತು ಪ್ರದರ್ಶನದಲ್ಲಿ ನಡೆದ ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಕೆಳಗೆ ಕಂಡವರು ಜಯಶಾಲಿಗಳಾಗಿರುವರು

ವಿವಿಧ ವೇಷ ಸ್ಪರ್ಧೆ—

೧) ಒಂಟಿಕೊಪ್ಪಲು ಗೋಕುಲದ ಸರ್ದಾರ್ ಪ್ರಾಥಮಿಕ ಶಾಲೆಯ ಕುಮಾರ ಮತ್ತು ಪ್ರೇಮ "ಕುರುಡ"

೨) ಅರಮನೆ ರಿಕ್ರಿಯೇಷನ್ ಕ್ಲಬ್ಬಿನ ರಾಮಪ್ರಸಾದ್ 'ಲಂಬಾಣಿ"

೩) ಒಂಟಿಕೊಪ್ಪಲು ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಎಳು ವರ್ಷದ ನಿರ್ಮಲ "ಬೊಂಬೆ"

ಇತರ ಆಟಗಳು

೧) ವಿಲೋಬಾಲ್ಡ್ ಶಿಶುವಿಹಾರದ ಪೋಕ್ ಡ್ಯಾನ್ಸ್‌-(ಬಸವರಾಜೆ ಅರಸರ ಬಹುಮಾನ)

೨) ಆಕಾಶವಾಣಿ ಮಕ್ಕಳ ಕೂಟ 'ಕೃಷ್ಣ ಗೋಪಿ (ಎಚ್ ಸಿ ಬಯ್ಯಣ್ಣನವರ ಬಹುಮಾನ) ಮತ್ತು ಗುಡ್ ಷೆಪರ್ಡ್ ಕಾನ್ವೆಂಟ್-'ಬಣ್ಣದ ಬೊಂಬೆ"

೩) ಪೌರ ಸಾಮಾಜಿಕ ಯೋಗಕ್ಷೇಮ ಕೇಂದ್ರ, ನಾಗ ನೃತ್ಯ' (ವಿ ಎಸ್ ನರಸಿಂಹಾಚಾರ್ಯರವರ ಬಹುಮಾನ) ಭಾರತಿ ಸ್ತ್ರೀ ಸಮಾಜ ಅರಳಿದ ಹೂವು ಮತ್ತು ವನಿತಾ ಸದನ "ಮ್ಯಾಂಡ್ ಟ್ರಿಪ್"

ವಿಧಾನ ಸಭಾಧ್ಯಕ್ಷ ರುದ್ರಪ್ಪನವರಿಗೆ ಸತ್ಕಾರ

ರಾಜಧಾನಿಯ ಪತ್ರಿಕೆಗಳ ವರ್ತಕರ ಸಂಘದವರು ಕಳೆದ ಶನಿವಾರ ವಿಧಾನ ಸಭಾಧ್ಯಕ್ಷ ಶ್ರೀ ಹೆಚ್ ಎಸ್ ರುದ್ರಪ್ಪನವರ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಸಮಾರಂಭದಲ್ಲಿ ಭಾಗವಹಿಸಿದ ಶ್ರೀಗಳಾದ ಹೆಚ್ ಸಿ. ದಾಸಪ್ಪ, ಎ ಪೀ(ಮುಸ್ವಾಮಿ) ನಾಯುಡು, ವಿ ಎಂ ಇಮಾಂರವರು ಭಾಷಣ ಮಾಡಿ, ಜೀವ ಪತ್ರಿಕೆಗಳಿಗೆ ಮಾರಾಟ ತೆರಿಗೆ ವಿಧಾಯಕದಲ್ಲಿ ವರ್ತಕರ ತೊಂದರೆಗಳನ್ನು ನಿವಾರಿಸುವ ಬಗ್ಗೆ ಸೂಕ್ತ ಸಲಹೆಗಳನ್ನು ಕೊಟ್ಟರು

ದಸರಾದಲ್ಲಿ ವಿಮಾನ ವಿಹಾರ

5 ದಿವಸಗಳು ಮಾತ್ರ

ತಾ 25-10-55 ರಿಂದ 29-10-55 ರ ವರೆಗೆ

ಪ್ರತಿನಿತ್ಯ ಬೆಳಿಗ್ಗೆ 9 ರಿಂದ 12 ಗಂಟೆ ಮತ್ತು ಮಧ್ಯಾಹ್ನ 2 ರಿಂದ ಸಂಧ್ಯಾಕಾಲದವರೆಗೆ

ಸ್ಥಳ: ಮಂಡಕಳ್ಳಿ ಏರೋಡ್ರೋಂ

ದರ: ಒಬ್ಬರಿಗೆ ಟಿಕ್ಕೆಟ್ ರೌಂಡ್ 5 ರೂ

" ಮೈಸೂರು ಸಿಟಿ 10 ರೂ

ವಿವರಗಳಿಗೆ ಫೋನ್ 640 ಮೈಸೂರು

ಗವರ್ನ್‌ಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲು ಬೆಂಗಳೂರು

Edited, Printed and Published by A R Nagarajan at Sadhvi Press, D Subbiah Road, Mysore

ಆರ್. ಎಸ್. ವೀರರಾಜೇಅರಸರಿಗೆ "ಮಿಸ್ಟರ್ ಮೈಸೂರು ಪ್ರಶಸ್ತಿ

ಮೈಸೂರು ೨೫

ನಿನ್ನೆ ದಸರಾ ವಸ್ತು ಪ್ರದರ್ಶನದಲ್ಲಿ ನಡೆದ ಶರೀರ ಸೌಂದರ್ಯ ಸ್ಪರ್ಧೆಯಲ್ಲಿ ಮೈಸೂರು ಟಿಪ್ಪೊ ಕ್ಲಬ್ಬಿನ ಸದಸ್ಯರಾದ ಶ್ರೀ ಆರ್ ಎಸ್. ವೀರರಾಜೆ ಅರಸ್‌ರವರು "ಮಿಸ್ಟರ್ ಮೈಸೂರ್" ಆಗಿ ಆರಿಸಲ್ಪಟ್ಟಿರುವರು. ಸ್ಪರ್ಧೆಯಲ್ಲಿ ಕೆಳಗೆ ಕಂಡವರು ಜಯಶಾಲಿಗಳಾಗಿರುವರು 5' ಅಡಿಗಿಂತ ಕಡಿಮೆ ಎತ್ತರದವರು – ೧) ಬೆಂಗಳೂರಿನ ಎಸ್ ವೀರಯ್ಯ, ೨) ಮೈಸೂರಿನ ಆರ್ ಎಸ್. ಕೃಷ್ಣಾಜಿರಾವ್ ಮತ್ತು ೩) ಬೆಂಗಳೂರಿನ ಎ ಡಬ್ಲ್ಯು ಎಸ್. 5' ರಿಂದ 5½ ಅಡಿ ಎತ್ತರ – ೧) ಮೈಸೂರಿನ ರಾಜಗೋಪಾಲರಾವ್, ೨) ಮೈಸೂರಿನ ಮಹೇಂದ್ರಸಿಂಗ್ ಮತ್ತು ೩) ಬೆಂಗಳೂರಿನ ಷಣ್ಮುಗಂ 5½ ಅಡಿಗಿಂತ ಹೆಚ್ಚಿನವರು – ೧) ಬೆಂಗಳೂರಿನ ಸಿ ಮುತ್ತು, ೨) ಮೈಸೂರಿನ ಆರ್ ಎಸ್ ವೀರರಾಜೆ ಅರಸು ಮತ್ತು ೩) ಮೈಸೂರಿನ ವಿ ಎಲ್ ರಂಗನಾಥ್

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ. ವರೆಗೆ
ಕಡಲೆಕಾಯಿ	೩ ೧೦ ೦	೧೫ ೧೦ ೦
ಎಳ್ಳು	೪೭ ೨ ೦	೫೧ ೮ ೦
ಹರಳುಬೀಜ	೨೩ ೦ ೦	೨೪ ೧೨ ೦
ಹುರುಳಿ	೪೫ ೦ ೦	೪೬ ೧೦ ೦
ಕಡಲೆ	೨೫ ೨ ೦	
ಬತ್ತ	೪೨ ೧೨ ೦	
ಹಲಸಂದೆ	೩೫ ೪ ೦	೫೧ ೨ ೦
ಮೆಣಸಿನಹಣ್ಣು	೨ ೧೪ ೦	೩ ೧೫ ೦
ಎಗೆಕಾಯಿ	೫ ೧೧ ೦	
ಮೆಣಸಿನಕಾಯಿ	೩ ೦ ೦	೧೪ ೧೦ ೦
ತೆಂಗಿನಕಾಯಿ ೧,೦೦೦ ಕ್ಕೆ	೮ ೦	೨೨೫ ೦ ೦

GREETINGS TO THE

GRADUATES

OF THE YEAR

of your

Convocation Robes

Please call on us

EXCELSIOR TAILORING HOUSE

Sayaji Rao Road,
MYSORE

Advance reservation ensures definite delivery of the robes

ವಿಶೇಷ ಪ್ರಕಟಣೆ

ಎಷ್ಟೋ ದಿನಗಳಿಂದಲೂ ಎಲ್ಲರಿಗೂ ಪರಿಚಿತವಾಗಿರುವ, ದೇಶದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ "ಪಾನ್" ಬ್ರ್ಯಾಂಡ್ ಬನೀನುಗಳು ದಸರಾ ವಸ್ತು ಪ್ರದರ್ಶನದ "ಬಿ" ಬ್ಲಾಕ್, ಸ್ಟಾಲ್ ನಂ 34 ನೇ ಅಂಗಡಿಯಲ್ಲಿ ಮಾರಲ್ಪಡುತ್ತವೆ ಮೈಸೂರು ಮತ್ತು ಇತರ ಕಡೆಗಳ ವಸ್ತು ಪ್ರದರ್ಶನಗಳಲ್ಲಿ ಚೆಲ್ಲಿಯ ಮತ್ತು ಚಿನ್ನದ ಪದಕಗಳನ್ನು ಪಡೆದಿರುತ್ತವೆ ಪ್ರಮಾಣಿತವಾದ ಬನೀನುಗಳು ಎಲ್ಲ ಅಂಗಡಿಗಳಲ್ಲೂ ದೊರೆಯುತ್ತವೆ

ಚನ್ನೋಲಿ ಹೊಸೈರಿ ಕಾರ್ಖಾನೆ, ಮೈಸೂರು

ಪೊಲೀಸು ವಾರ್ತೆಗಳು

ಮೈಸೂರು ೨೫

ಕಡಪದ ಮಹಬೂಬ್ ಖುರೇಷ್ ವೆಂಕಟಸ್ವಾಮಿ ಎಂಬುವನು ಮೊನ್ನೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ನುಗ್ಗಲು ಯತ್ನಿಸುತ್ತಿದ್ದಾಗ ಪೊಲೀಸರು ಅವನನ್ನು ಬಂಧಿಸಿದರು

ಮೊಹಿಯುದ್ದೀನ್ ಎಂಬುವನು ಕಳ್ಳತನದಲ್ಲಿ ಕೃಷ್ಣವಿಲಾಸ ಅಗ್ರಹಾರದ ವೆಂಕಟರಮಣಸ್ವಾಮಿ ದೇವಸ್ಥಾನದ ಮೇಲೆ ಹತ್ತುತ್ತಿದ್ದಾಗ ಬಂಧಿಸಲ್ಪಟ್ಟಿರುವನು

ಬಾವಗುಂಟೆಯವರ ಛತ್ರದಲ್ಲಿ ಇಳಿದುಕೊಂಡಿರುವ ಕೊಳ್ಳೇಗಾಲದ ಶ್ರೀ ಜನಾರ್ಧನಶೆಟ್ಟರ ಪತ್ನಿಯವರ ೨॥ ಸಾವಿರ ರೂ ಬೆಲೆಯ ಒಡವೆಗಳನ್ನು ಅಪಹರಿಸಲಾಗಿದೆ

ನಾಳೆ ಮಧ್ಯಾಹ್ನ ವಸ್ತು ಪ್ರದರ್ಶನವಿಲ್ಲ

ಜಂಬೂಸವಾರಿ ಪ್ರಯುಕ್ತ ನಾಳೆ ಮಧ್ಯಾಹ್ನ ದಸರಾ ವಸ್ತು ಪ್ರದರ್ಶನವನ್ನು ತೆರೆಯುವುದಿಲ್ಲವೆಂದು ಸಮಿತಿಯವರು ತಿಳಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ 7 ೫ ಲಲಿತಾ ಶಿವರಾಂ ಉಭಯರು ಹಿಂದೂಸ್ಥಾನಿ ಸಂಗೀತ. ಮಧ್ಯಾಹ್ನ ೧–೪೦ ... ಸಂಜೆ ೬ ೫೦ ... ಗೋಷ್ಠಿ ... ೭ ೧೫ ... ಕನ್ನಡ ಗೀತೆಗಳು ... ಶಿವರಾಂ ಉಭಯರು ಹಿಂದೂಸ್ಥಾನಿ ಸಂಗೀತ ... ರಾಷ್ಟ್ರೀಯ ಕಾರ್ಯಕ್ರಮ–... ಭಾಷಣ ... ಉತ್ಸವದ ವಿವರಣೆ

27- 10—55

ಬೆಳಿಗ್ಗೆ 7 ೫ ಕನ್ನಡ ಗೀತೆಗಳು ... ಪಟ್ಟಣ್ಣ ... ಮಧ್ಯಾಹ್ನ ... ಎಸ್ ಲಕ್ಷ್ಮಣಶಾಸ್ತ್ರಿ–ಸಂಗೀತ. ... ಎಸ್ ಲಕ್ಷ್ಮಣಶಾಸ್ತ್ರಿ ಸಂಗೀತ ... ಕನ್ನಡ ... ಲಲಿತಮ್ಮ ಭಾವಗೀತೆ ... ಪಟ್ಟಣ್ಣ ಪಟೇಲು ... ಹಿಂದಿ ನಾಟಕ–ಕಲ್ಯಾಣ ... ವಿದ್ವಾಂಸ ವಿಮರ್ಶೆ

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರೋಡ್, ಮೈಸೂರು

ಮೇಲ್ಕಂಡ ಅಂಗಡಿಯು ಶಾಖೆಯನ್ನು ಹೊಸ ಸ್ಟ್ಯಾಚ್ಯು ಸರ್ಕಲ್ಲಿನಲ್ಲಿ ನಮ್ಮ ಸ್ವಂತ ಭವನವಾದ

ಕೋರ್ಟ್ ಮ್ಯಾನ್‌ಷನ್ನಿನಲ್ಲಿ

ತೆರೆದಿರುತ್ತೇವೆ ಎಂದಿನಂತೆ ನಮ್ಮ ಗಿರಾಕಿಗಳು ಮತ್ತು ಹಿತೈಷಿಗಳು ಪ್ರೋತ್ಸಾಹ ನೀಡಬೇಕಾಗಿ ವಿನಂತಿ

ಡಾ। ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನ ಪ್ರಯೋಗಗಳು

ಸಂತಾನ ಸಿಂಧೂರ

ಋತು ಸಂಬಂಧವಾದ ಹೊಟ್ಟೆ ನೋವನ್ನು ನಿರ್ಮೂಲ ಮಾಡಿ, ಮಾಸಿಕವನ್ನು ಕ್ರಮಪಡಿಸಿ ಗರ್ಭಾಶಯದ ಬಾಧೆಗಳನ್ನು ನಿವಾರಿಸಿ ಸಂತಾನವನ್ನು ಕೊಡುತ್ತದೆ

ಮದನ ವಿಲಾಸ

... ರಕ್ತಸ್ರಾವ ... ಶೀಘ್ರಸ್ಖಲನವನ್ನು ತಡೆಗಟ್ಟಿ ವೀರ್ಯವನ್ನು ವೃದ್ಧಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ದಾಂಪತ್ಯ ಜೀವನವು ಪ್ರಾರಂಭವಾಗಿ 16–18 ವರ್ಷ ಸಂತಾನವಿಲ್ಲದವರೂ ತಾಯಂದಿರಾಗಿದ್ದಾರೆ

ಬೆಲೆ ರೂ 6—0 -0 ಕ್ಯಾಟಲಾಗ್ ಉಚಿತ

ತಯಾರಕರು ಎ. ರಾಮಸ್ವಾಮಿ ಅಯ್ಯಂಗಾರ್ ಸನ್ ಅಂಡ್ ಕಂಪೆನಿ,

638 ... ಮೈಸೂರು

After serving a million clients in Laundry work,
We are glad in offering our services to all

★

By the opening of our only Branch

S. E. L. DRY CLEANING SERVICE

at the New Statue Circle, Mysore

★

Proprietor—L SRIKANTIAH

Shivananda Electric Laundry,

H O 24 V V Market Buildings, Mysore (Estd 1946)

ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಿರಿ!

Devidayal STAINLESS STEEL BOMBAY.2

ದಸರಾ ವಸ್ತು ಪ್ರದರ್ಶನಕ್ಕಾಗಿ 15 ದಿನಗಳು ಮಾತ್ರ

1955 ನೇ ಅಕ್ಟೋಬರ್ 21 ರಿಂದ ನವೆಂಬರ್ 6 ರವರೆಗೆ

ದೇವಿದಯಾಳ್‌ರವರ ಎಲ್ಲಾ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳೂ

ರಿಯಾಯಿತಿ ದರದಲ್ಲಿ ಗ್ಯಾರಂಟಿ ಚೀಟಿಗಳೊಡನೆ

ವಸ್ತು ಪ್ರದರ್ಶನದಲ್ಲಿ ಮಾರಲ್ಪಡುತ್ತವೆ

ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಏಜೆನ್ಸೀಸ್, 'ಡಿ' ಬ್ಲಾಕ್ ಸ್ಟಾಲ್ ನಂ. 12 ಮತ್ತು 13

ALL SPORTS AND GAMES REQUISITES

TOY PALACE, MYSORE

ಟೆಲಿಫೋನ್ ನಂ. 792

ಗೌರಿ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ದಿಂಡಿಗಲ್
ರೇಷ್ಮೆ ಕುಪ್ಪಸ ಜರಿಯ ಸೀರೆಗಳು ವಿಧವಿಧವಾದ ನಮೂನೆಗಳಲ್ಲಿ
ದಯಮಾಡಿ ಬಂದು ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಾಧ್ವಿ

ಇಂಪೀರಿಯಲ್ ಪತ್ರಿಕೆ 3 ಆಣೆ

ಆಕರ್ಷಣೀಯ ಪರಿಶುದ್ಧತೆ
ಮೈಸೂರಿನಲ್ಲಿ ಪ್ರಖ್ಯಾತ ಜರಿಗಳ ಪತ್ರಿಯನ್ನು ಖರೀದಿ
ಎಸ್ಟೇಟು
ಕ್ರಯ ಮತ್ತು ಗುತ್ತಿಗೆಗೆ
ಎಸ್. ರಾಮರಾವ್,
ಬ್ರೋಕರ್
ಮೈಸೂರು

ಸಂಪುಟ : ೮೮] SADHVI : THURSDAY 27-10-1955 ಮೈಸೂರು : ಗುರುವಾರ ೨೭-೧೦-೧೯೫೫ [ಸಂಚಿಕೆ : ೭೯

- ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರಿಗೆ ಸುಸ್ವಾಗತ -

ಭವದ ಜಂಬೂಸವಾರಿ ಉತ್ಸವ

೫ ಲಕ್ಷ ಜನಸಂದಣಿಯಿಂದ ಮಹಾರಾಜರಿಗೆ ಜಯಕಾರ

ಮೈಸೂರು ೨೫

ನವರಾತ್ರಿ ಉತ್ಸವದ ಅಂಗವಾಗಿ ನೆನ್ನೆ ಜಂಬೂಸವಾರಿಯು ಅಂಬಾವಿಲಾಸ ಅರಮನೆಯಿಂದ ನೆರವೇರಿತು. ಶ್ರೀಮನ್ಮಹಾರಾಜರು ಸಂಜೆ ಅಂಬಾರಿಯಲ್ಲಿ ಆಸನಾರೂಢರಾಗಿ ಬನ್ನಿಮಂಟಪಕ್ಕೆ ಹೋಗಿ, ಅಲ್ಲಿ ಶಮೀ ಪೂಜೆಯನ್ನು ನೆರವೇರಿಸಿ, ಟಾರ್ಚ್ ಲೈಟ್ ಪೆರೇಡಿನನಂತರ ಅರಮನೆಗೆ ಹಿಂದಿರುಗಿದರು.

ಮಾಮೂಲಿನಂತೆ ಒಂಟೆ, ಆನೆ, ಫಿರಂಗಿ ಗಾಡಿಗಳು, ಭಾರತ ಸೇವಾದಳ, ಸ್ಕೌಟುಗಳು, ಎನ್. ಸಿ. ಸಿ. ದಳ, ಸೈನ್ಯದಳ, ರಿಸರ್ವ್ ಪೋಲೀಸು, ಹೈದರಾಬಾದು ಬ್ಯಾಂಡ್ ಮುಂತಾದುವು ಮೆರವಣಿಗೆಯಲ್ಲಿ ಭಾಗವಹಿಸಿದ್ದುವು. ಇದೇ ಮೊದಲಾಗಿ ಭಾರತದ ಸೇವಾದಳ ಮತ್ತು ಎನ್. ಸಿ. ಸಿ. ದಳಗಳ ಮಹಿಳಾ ವಿಭಾಗದವರು ಭಾಗವಹಿಸಿದ್ದರು. ಮಹಾರಾಜರಿಗೆ ಪೌರಸಭೆಯೂ ಸಂಘ ಸಂಸ್ಥೆಗಳು ಹಾರಗಳನ್ನು ಅರ್ಪಿಸಿದವು. ಹೊರಡುವಾಗಲೂ, ಬನ್ನಿಮಂಟಪ ಸೇರಿದಾಗಲೂ, ವಾಪಸಾಗುವಾಗಲೂ ಮತ್ತು ಅರಮನೆಗೆ ಹಿಂದಿರುಗಿದಾಗಲೂ ಎಂದಿನಂತೆ ಕುಶಾಲ ತೋಪುಗಳನ್ನು ಹಾರಿಸಲಾಯಿತು.

ಈ ವರ್ಷ ಅನೇಕರು ಭಾರತದ ನಾನಾ ಭಾಗಗಳಿಂದ ಆಗಮಿಸಿ ಉತ್ಸವವನ್ನು ನೋಡಿ ಆನಂದಪಟ್ಟರು. ಶ್ರೀಮನ್ಮಹಾರಾಜರಿಗೆ ಶ್ರೀರಕ್ಷೆಯನ್ನು ಕೋರಿ ಹರ್ಷಧ್ವನಿಗೈದರು. ಮೆರವಣಿಗೆಯನ್ನು ೫ ಲಕ್ಷ ಜನರು ವೀಕ್ಷಿಸಿದರು. ಪೋಲೀಸ್ ವ್ಯವಸ್ಥೆಯು ತೃಪ್ತಿಕರವಾಗಿತ್ತು.

ಈ ಸಾರಿ ವಿಶ್ವವಿದ್ಯಾಲಯದಲ್ಲಿ ಒಟ್ಟು ೩,೦೮೫ ಪದವೀಧರರು

ಅವರ ಪೈಕಿ ೪೨೭ ಜನ ಮಹಿಳೆಯರು

ಮೈಸೂರು ೨೬

ಈ ವರ್ಷ ಮೈಸೂರು ವಿಶ್ವವಿದ್ಯಾಲಯದಲ್ಲಿ ಒಟ್ಟು ೩,೦೮೫ ಜನರು ವಿವಿಧ ಪದವಿಗಳನ್ನು ಪಡೆದವರು. ಅ ಪೈಕಿ ೪೨೭ ಜನ ಮಹಿಳೆಯರು. ಇಂದು ನಡೆದ ಪದವೀದಾನ ಸಮಾರಂಭದಲ್ಲಿ ... ಜನರು ಖುದ್ದಾಗಿಯೂ, ... ಜನರು ಗೈರುಹಾಜರಾಗಿಯೂ ಪದವಿಗಳನ್ನು ಪಡೆದರು. ... ಗಳನ್ನು ಪಡೆದ ... ಜನರ ಪೈಕಿ ... ಜನ ಪುರುಷರು, ... ಮಂದಿ ಮಹಿಳೆಯರು. ವಿವಿಧ ಬಹುಮಾನಗಳನ್ನು ಪಡೆದ ... ಜನರ ಪೈಕಿ ... ಜನ ಪುರುಷರು, ... ಜನ ಮಹಿಳೆಯರು.

ಆಕಾಶವಾಣಿ ಕಲಾವಿದರನ್ನು ಬೀಳ್ಕೊಡುವ ಸಮಾರಂಭ

ಆಕಾಶವಾಣಿ ಕೇಂದ್ರವು ರಾಜಧಾನಿಯಿಂದ ಬೆಂಗಳೂರಿಗೆ ವರ್ಗವಾಗಲಿರುವ ಸಂದರ್ಭದಲ್ಲಿ ಬೆಂಗಳೂರಿಗೆ ಹೋಗುವ ಅಲ್ಲಿನ ಕಲಾವಿದರುಗಳ ಗೌರವಾರ್ಥವಾಗಿ ನಾಳೆ ಬೆಳಿಗ್ಗೆ ೧೧ ಗಂಟೆಗೆ ... ಕೃಷ್ಣ ಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಗಿದೆ. ಲೋಕಸಭಾ ಸದಸ್ಯ ಶ್ರೀ ಎಂ. ... ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ನಗರಕ್ಕೆ ಕಾಂಗ್ರೆಸ್ ಅಧ್ಯಕ್ಷರ ಆಗಮನ

ಕೋಲ್‌ಗೇಟ್ ಬಳಿ ಸ್ವಾಗತ

ಮೈಸೂರು ೨೬

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಧೇಬರ್‌ರವರು ಈ ದಿನ ಮಧ್ಯಾಹ್ನ ಎರಡು ಘಂಟೆಗೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಶ್ರೀರಂಗಪಟ್ಟಣದ ಕೋಲ್‌ಗೇಟ್ ಬಳಿ ಸಚಿವರುಗಳಾದ ಕಡಿದಾಳ ಮಂಜಪ್ಪ, ಟಿ. ಚನ್ನಯ್ಯ, ಹೆಚ್. ಎಂ. ಚನ್ನಬಸಪ್ಪ ಮತ್ತು ಸಿದ್ದವೀರಪ್ಪನವರೂ ಪೌರಸಭಾಧ್ಯಕ್ಷರೂ, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರೂ, ಕಾಂಗ್ರೆಸ್ ಕಾರ್ಯಕರ್ತರುಗಳೂ ಮತ್ತು ಪುರಪ್ರಮುಖರೂ ಅವರಿಗೆ ಹಾರ ತುರಾಯಿಗಳನ್ನರ್ಪಿಸಿ ಸುಸ್ವಾಗತವನ್ನು ಬಯಸಿದರು. ಶ್ರೀ ಎ. ರಾಮಣ್ಣನವರು ಕರ್ನಾಟಕ ಪತ್ರಿಕೆಯವರ ಪರವಿಯೊಂದನ್ನು ಸಲ್ಲಿಸಿದರು. ಧೇಬರರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಮನೆಯಲ್ಲಿ ಬಿಡಾರ ಮಾಡಿರುತ್ತಾರೆ.

ಟೌನ್‌ಹಾಲಿನಲ್ಲಿ ಧೇಬರರ ಭಾಷಣ

ಈ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣ ಮಾಡುವರು. ಸಂಜೆ ೭ ಗಂಟೆಗೆ ಅವರು ವಸ್ತು ಪ್ರದರ್ಶನವನ್ನು ಸಂದರ್ಶಿಸುವರು.

ದಸರಾ ಉತ್ಸವವು ನಿರಂತರವಾಗಿ ನಡೆಯಲಿ

ಮದ್ರಾಸು ಮಂತ್ರಿ ಸಿ. ಸುಬ್ರಹ್ಮಣ್ಯಂರವರ ಹೇಳಿಕೆ

ಮೈಸೂರು ೨೬

ದಾಸಪ್ರಕಾಶ ಹೋಟೇಲುಗಳ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ನೆನ್ನೆ ದಸರಾ ದರ್ಬಾರ್ ಕಛೇರಿಯಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು.

ಉಪಾಹಾರಾನಂತರ ಶ್ರೀ ಕೆ. ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಮದರಾಸಿನ ಹಣಕಾಸಿನ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ಉತ್ತರಿಸುತ್ತ, ತಾವು ಮೈಸೂರು ದಸರಾ ಉತ್ಸವದಲ್ಲಿ ಇದೇ ಮೊದಲಾಗಿ ಭಾಗವಹಿಸಿರುವುದಾಗಿಯೂ, ಅದು ಅತಿ ಮನಮೋಹಕವಾಗಿರುವುದೆಂದೂ ತಿಳಿಸಿದರು. ಈಗಿನ ಉತ್ಸವವೇ ಕಡೆಯದೆಂದು ಹಲವರು ಭಾವಿಸಿರುವರೆಂದೂ, ಆ ಸುದ್ದಿಯು ತಪ್ಪಾಗಿ ಪರಿಣಮಿಸಲೆಂದೂ ಅವರು ಹೇಳಿ, ಸಂಸ್ಥಾನಗಳ ಪುನರ್ರಚನೆಯಲ್ಲಿ ಮೈಸೂರಿನ ಭವಿಷ್ಯವು ಯಾವ ರೀತಿಯಾದರೂ ದಸರಾ ಉತ್ಸವವು ಮಾತ್ರ ಸದಾ ಮುಂದುವರಿಯುವಂತಾಗಬೇಕೆಂದು ಅಭಿಪ್ರಾಯಪಟ್ಟರು.

ಮೈಸೂರು ಮತ್ತು ಮದ್ರಾಸುಗಳಿಗೆ ನಿಕಟ ಬಾಂಧವ್ಯವಿರುವುದಾಗಿಯೂ, ಮೈಸೂರು ಮಹಾರಾಜರನ್ನು ಮದ್ರಾಸಿನವರು ತಮ್ಮ ಮಹಾರಾಜರೆಂದು ಭಾವಿಸಿರುವುದಾಗಿಯೂ ಹೇಳಿದರು. ಶ್ರೀ ಸೀತಾರಾಮರಾಯರ ಉದ್ಯಮಕ್ಕೆ ಯಶಸ್ಸನ್ನು ಕೋರಿ, ಪ್ರವಾಸಿಗರ ಸೇವೆಯೇ ಅವರ ಮುಖ್ಯ ಗುರಿಯಾಗಿರುವುದನ್ನು ಪ್ರಶಂಸಿಸಿದರು.

ವಿಶ್ವವಿದ್ಯಾಲಯಗಳ ಶಿಕ್ಷಣದ ಗುರಿ

ಘಟಿಕೋತ್ಸವದಲ್ಲಿ ಪ್ರೊ|| ಭ್ಯಾಕರ್‌ರವರ ಭಾಷಣ

ಮೈಸೂರು ೨೬

ಜೀವನವು ಸಾರವತ್ತಾಗಿರಲು ಅವಶ್ಯಕವಾದ ಮತ್ತು ಉತ್ಕೃಷ್ಟವಾದ ಗುಣಾತಿಶಯಗಳನ್ನು ರೂಪಿಸಲು ಸಾಧ್ಯವಾಗುವಂತಹ ತರಬೇತು ಕೊಡುವುದು ವಿಶ್ವವಿದ್ಯಾಲಯ ಶಿಕ್ಷಣದ ಒಂದು ಗುರಿಯಾಗಿರಬೇಕು. ಮಾನವೀಯ ಗುಣಗಳನ್ನು ಬೆಳೆಸಿ ಅವು ಸದಾ ಇರುವಂತೆ ಮಾಡುವುದೇ ಮೌಲ್ಯಯುತವಾದ ಶಿಕ್ಷಣದ ಉದ್ದೇಶ. ವಿಶಾಲ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುವುದು, ದ್ವೇಷ ಸಾಧನೆಗಳ ಕಿತ್ತುವುದು ಇವೇ ಮುಂತಾದುವುಗಳಿಗೆ ದಾರಿ ಮಾಡಿಕೊಟ್ಟರೆ, ವಿಶ್ವವಿದ್ಯಾಲಯಗಳನ್ನು ಮುಚ್ಚುವುದೇ ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ. ಅಧಿಕಾರದ ಹಂಬಲ ಮತ್ತು ಪ್ರಗತಿ ಸಾಧನೆಯ ದೃಷ್ಟಿಕೋನದಿಂದ ಜೀವನದ ಮುಖ್ಯ ತಿರುಳನ್ನೇ ಮರೆಯಬಾರದು. ಉದಾತ್ತ ಭಾವನೆಯನ್ನು ರೂಪಿಸಿ ಸ್ವತಂತ್ರ ಜೀವನವು ಬೇಕೆಂಬುದನ್ನು ಮಾಡುವುದೇ ವಿಶ್ವವಿದ್ಯಾಲಯದ ಮುಖ್ಯ ಗುರಿಯಾಗಿದೆ. ಮಾನವ ಕುಲಕ್ಕೆ ಉಪಕಾರ ಮಾಡುವ ವಿಜ್ಞಾನವನ್ನು ಹೇಳಿಕೊಡಬೇಕಾದುದು ವಿಶ್ವವಿದ್ಯಾಲಯಗಳ ಕರ್ತವ್ಯ—ಎಂಬುದಾಗಿ ಈ ದಿನ ಕ್ರಾಫರ್ಡ್ ಭವನದಲ್ಲಿ ಸೇರಿದ್ದ ೩೬ನೇ ಘಟಿಕೋತ್ಸವದಲ್ಲಿ ಭಾರತ ಸರ್ಕಾರದ ವಿಜ್ಞಾನ ಸಂಶೋಧನೆ ಇಲಾಖಾ ಮಂಡಲಿಯ ಡೈರೆಕ್ಟರ್ ಪ್ರೊಫೆಸರ್ ಎಂ. ಎಸ್. ಭ್ಯಾಕರ್‌ರವರು ಭಾಷಣ ಮಾಡುತ್ತಾ ತಿಳಿಸಿದರು. ಶ್ರೀಮನ್ಮಹಾರಾಜರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಭ್ಯಾಕರ್‌ರವರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು —ಮಾನವೀಯ ಶಾಸ್ತ್ರ ಮತ್ತು ವಿಜ್ಞಾನ ಶಾಸ್ತ್ರಗಳ ಪರಸ್ಪರ ಸಂಬಂಧವನ್ನು ನಾವು ಅರಿಯಬೇಕು. ಭಾರತವು ಯಾಂತ್ರಿಕವಾಗಿ ಮುಂದುವರಿದ ಇತರ ರಾಷ್ಟ್ರಗಳ ಸಮಾನಕ್ಕೆ ಈಗ ಸೇರಿದೆ. ನಮ್ಮ ದೇಶದಲ್ಲಿ ವಿಜ್ಞಾನವು ಪ್ರಗತಿ ಸಾಧಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಈಗಾಗಲೇ ನಾನಾ ಶಾಸ್ತ್ರೀಯ ಶಾಲೆಗಳನ್ನು ತೆರೆಯಲಾಗಿದೆ. ಅಂತಹ ವಿದ್ಯೆಯನ್ನು ಕಲಿಸುವುದರಲ್ಲಿ ವಿಶ್ವವಿದ್ಯಾಲಯಗಳು ಜೊತೆ ಸೇರಬೇಕಾಗಿದೆ.

ಮಾನವೀಯ ತತ್ತ್ವಜ್ಞಾನದ ವಿಷಯವಾಗಿ ಭಾರತವು ಪುರಾತನ ಕಾಲದಿಂದಲೂ ಆಸಕ್ತಿ ಹೊಂದಿದೆ. ನಮ್ಮ ನಾಟಕ ಮತ್ತು ಕವಿತೆಗಳು ಭಾರತೀಯ ಸಾಹಿತ್ಯವನ್ನು ಸಮೃದ್ಧಿಗೊಳಿಸಿವೆ. ದಕ್ಷಿಣ ಭಾರತದ ನಾನಾ ದೇವಾಲಯಗಳಲ್ಲಿರುವ ಶಿಲ್ಪ ಕಲೆಯು ಸೌಂದರ್ಯದ ಮಟ್ಟವನ್ನು ಸೂಚಿಸುತ್ತದೆ. ಆಧುನಿಕ ಕಾಲದಲ್ಲಿ ಮಹಾತ್ಮಾ ಗಾಂಧಿಯವರ ಧ್ಯೇಯವು ಸಕಲ ಮಾನವ ವರ್ಗವನ್ನು ತನ್ನ ಕಡೆಗೆ ತಿರುಗಿಸಿದೆ.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತಿನ ವಿಷಯವು ಒಂದು ಸಮಸ್ಯೆಯಾಗಿದೆ. ಅದು

ರಚನಾತ್ಮಕ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಬೇಕು

ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಅಧ್ಯಕ್ಷ ಧೇಬರರ ಕರೆ

(ಸ್ವಂ ಸು ತಂತಿ) ಬೆಂಗಳೂರು ೨೬

ಈ ದಿನ ಬೆಳಿಗ್ಗೆ ಕಾಂಗ್ರೆಸ್ ಕೇಂದ್ರ ಕಛೇರಿಯಲ್ಲಿ ಅಧ್ಯಕ್ಷ ಧೇಬರರು ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡಿ, ರಚನಾತ್ಮಕ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೋರಿದರು. ವಿಶಾಲ ದೃಷ್ಟಿಯಿಂದ ಕೆಲಸ ಮಾಡಬೇಕೆಂದು ಸೂಚಿಸಿದರು. ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕಾಂಗ್ರೆಸ್ ಕೆಲಸಗಾರರ ತಂಡಗಳನ್ನು ಏರ್ಪಡಿಸಬೇಕೆಂದು ಹೇಳಿದರು. ಮಾತ್ರವಲ್ಲದೆ, ಕ್ರಿಯೆಗೂ ಇರುವ ಭಾರಿ ಅಂತರವನ್ನು ನಿವಾರಿಸಿ ಸಂಸ್ಥೆಯನ್ನು ಬಲಪಡಿಸಲು ಕ್ರಿಯಾತ್ಮಕವಾದ ಪ್ರಯತ್ನಗಳಲ್ಲಿ ತೊಡಗಬೇಕೆಂದು ನುಡಿದರು.

ವಿಶಾಲಾಂಧ್ರದ ರಚನೆ

ಬರುವ ಅಕ್ಟೋಬರ್ ೨ನೇ ತಾರೀಖು ಗಾಂಧಿ ಜಯಂತಿ ದಿನ ನೂತನ ಸಂಸ್ಥಾನಗಳ ರಚನೆ ಯಾಗಲಿದೆಯೆಂದೂ, ಅಂದು ಆಂಧ್ರ ಪ್ರಾಂತ ಜೊತೆಗೆ ತೆಲಂಗಾಣ ಪ್ರದೇಶವೂ ಸೇರಿ ವಿಶಾಲಾಂಧ್ರದ ಸ್ಥಾಪನೆಯಾಗಲಿದೆಯೆಂದೂ ಆಂಧ್ರದಲ್ಲಿ ಹೈದರಾಬಾದು ಐಕ್ಯವಾಗುವುದಕ್ಕೆ ಆಂಧ್ರ ಮತ್ತು ಹೈದರಾಬಾದು ಮುಖ್ಯಮಂತ್ರಿಗಳು ಒಪ್ಪಿರುವರೆಂದೂ ಗೊತ್ತಾಗಿದೆ.

ತಾತ್ಕಾಲಿಕ ಉದ್ವೇಗದಿಂದ ಉಂಟಾಗುವ ಒಂದು ಸಮಸ್ಯೆ ಪೋಲೀಸರಿಗೆ ಹೆದರಿ ನಾವು ಶಿಸ್ತನ್ನು ಪಾಲಿಸುವುದಿಲ್ಲ; ಜೀವನದ ಉತ್ತಮ ಆದರ್ಶಗಳನ್ನು ಅನುಸರಿಸಿ ನಮ್ಮ ನಡೆನುಡಿಯನ್ನು ರೂಪಿಸುತ್ತೇವೆ. ಇದು ವಿದ್ಯಾರ್ಥಿಗಳಿಗೆಲ್ಲ ಅನ್ವಯಿಸುತ್ತದೆ.

ಭಾಷಾ ವಿಷಯವಾಗಿ ಸಮಸ್ಯೆಯೊಂದು ಎದ್ದಿದೆ. ಹಿಂದಿಯು ಭಾರತದ ರಾಷ್ಟ್ರಭಾಷೆಯಾಗಿ ಪರಿಗಣಿಸಲ್ಪಟ್ಟಿದೆ. ಅದರ ಬಗ್ಗೆ ವಿವಾದವೇ ಇಲ್ಲ. ಅದನ್ನು ಒಪ್ಪಿಕೊಂಡಮೇಲೆ ವಿಶ್ವವಿದ್ಯಾಲಯಗಳಲ್ಲಿ ಯಾವುದು ಶಿಕ್ಷಣ ಮಾಧ್ಯಮವಾಗಬೇಕೆಂಬುದು ಈಗಿನ ಪ್ರಶ್ನೆ. ಹಲವಾರು ವರ್ಷಗಳಿಂದ ಇದ್ದ ಇಂಗ್ಲೀಷನ್ನು ಬಿಡಲಾದೀತೇ ? ಎಂಬ ವಿಷಯವು ನಾಯಕರ ಪರಿಶೀಲನೆಯಲ್ಲಿದೆ. ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಹೇಳಬೇಕಾದರೆ, ನಮ್ಮ ಭಾಷೆಗಳಿಗೆ ವಿಜ್ಞಾನದ ಪದಗಳನ್ನು ಸೇರಿಸಿಕೊಳ್ಳಲು ಸ್ವಲ್ಪ ಕಾಲ ಹಿಡಿಯುವುದು. ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳ ವ್ಯಾಪ್ತಿಯನ್ನು ನಿರ್ದಿಷ್ಟವಾಗಿ ಅರಿಯಬೇಕು. ರಾಷ್ಟ್ರೀಯ ಐಕ್ಯತೆಗೆ ಭಾಷೆಯು ಒಂದು ಸಾಧನ. ಇದಿಗೆ ಮುಖ್ಯ ಗಮನವನ್ನು ನಾವು ಕೊಡಬೇಕು. ಹಾಗೆಂದರೆ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸಬೇಕೆಂದರ್ಥವಲ್ಲ. ಹಿಂದಿ ಮತ್ತು ದಕ್ಷಿಣದ ಭಾಷೆಗಳ ಗ್ರಂಥಗಳನ್ನು ಪರಸ್ಪರ ತರ್ಜುಮೆ ಮಾಡಲು ಪ್ರಯತ್ನವಾಗಬೇಕು.

ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಕೊಟ್ಟಿರುವ ಶಿಕ್ಷಣದಿಂದ ಅವರು ಮುಂದೆ ನಮ್ಮ ನಾಡಿನ ಯೋಗ್ಯ ನಾಗರೀಕರಾಗಿ ಬಾಳಲು ಅವಕಾಶವಾಗಬೇಕು. ಅದು ವಿದ್ಯಾರ್ಥಿಗಳ ಮನದಲ್ಲಿ ಸದಾ ಪವಿತ್ರ ಮಂದಿರದಂತೆ ಬೆಳಗಲಿ.

ಬೆಂಗಳೂರಿನ ಮೂವರಿಗೆ

ಸುವರ್ಣಹಾರ

ಮೊನ್ನೆ ರಾಜಸಭೆಯಲ್ಲಿ ಸನ್ಮಾನ

ಮೈಸೂರು ೨೭

ಮೊನ್ನೆ ರಾಜಸಭೆಯಲ್ಲಿ ಬೆಂಗಳೂರಿನ ಸುಪ್ರಸಿದ್ಧ ಕೈಗಾರಿಕೋದ್ಯಮಿಗಳೂ ಮತ್ತು ದಾನಿಗಳೂ ಆದ ಶ್ರೀ ಯಾದಾಳಂ ಸುಬ್ಬಯ್ಯಶೆಟ್ಟರಿಗೆ ಸುವರ್ಣ ಹಾರವನ್ನು ಕೊಟ್ಟು ಸನ್ಮಾನಿಸಲಾಯಿತು ಶ್ರೀಯುತರು ಬೆಂಗಳೂರಿಗೆ ಸಮೀಪದಲ್ಲಿ ತಮ್ಮ ಗಿರಿಯಲ್ಲಿರುವ ಸುಬ್ರಹ್ಮಣ್ಯಪುರದಲ್ಲಿ ಸುಬ್ರಹ್ಮಣ್ಯಸ್ವಾಮಿ ಮತ್ತು ವಿಶ್ವೇಶ್ವರ ದೇವಸ್ಥಾನಗಳನ್ನು ೧ ಲಕ್ಷ ೫೦ ಸಾವಿರ ರೂ ವೆಚ್ಚದಲ್ಲಿ ಕಟ್ಟಿಸಿ, ಅವುಗಳಲ್ಲಿ ಸೇವಾ ಕೈಂಕರ್ಯಗಳು ಸಾಂಗೋಪಾಂಗವಾಗಿ ನಡೆಯಲು ೧ ಲಕ್ಷ ೭೦ ಸಾವಿರ ರೂಪಾಯಿಗಳ ನಿಧಿಯನ್ನು ಏರ್ಪಡಿಸಿರುವರು ಅಲ್ಲದೆ ಗಿರಿಜನ ಕಾರ್ಮಿಕ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ೮,೦೦೦ ರೂ ವೆಚ್ಚದಲ್ಲಿ ಪ್ರಾಥಮಿಕ ಶಾಲಾ ಮತ್ತು ಮಾಧ್ಯಮಿಕ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿರುವರಲ್ಲದೆ, ೨೦ ಸಾವಿರ ರೂ ಬೆಲೆಯ ೪೦ ಎಕರೆ ಜಮೀನನ್ನು ದಾನವಾಗಿ ಕೊಟ್ಟಿರುತ್ತಾರೆ

ಬೆಂಗಳೂರಿನ ಸುಪ್ರಸಿದ್ಧ ವಾಣಿಜ್ಯೋದ್ಯಮಿಗಳಾದ ಶ್ರೀ ಸೇಠ್ ರಾಮನಾರಾಯಣ ಚೆಲ್ಲಾರಾಂರವರು ಚಿನ್ನದ ಹಾರವನ್ನು ಪಡೆದವರಲ್ಲಿ ಎರಡನೆಯವರು ಶ್ರೀಯುತರು ಹೆರಿಗೆ ಆಸ್ಪತ್ರೆ ಸಾರ್ವಜನಿಕ ಆಸ್ಪತ್ರೆ, ಕಾಮರ್ಸ್ ಕಾಲೇಜು ಕಟ್ಟಡಗಳಿಗಾಗಿ ಸುಮಾರು ೧೪ ಲಕ್ಷ ರೂ ಗಳನ್ನೂ, ಪುಸ್ತಕ ಭಂಡಾರ ಮುಂತಾದವುಗಳಿಗೆ ೧೧ ಸಾವಿರ ರೂ ಗಳನ್ನೂ ಕೊಟ್ಟಿರುತ್ತಾರೆ

ಬೆಂಗಳೂರಿನ ಶ್ರೀ ಪುರುಷೋತ್ತಮಸಿಂಗ್ ಬಜಾಜ್‌ರವರು ಚಿನ್ನದ ಹಾರ ಪಡೆದ ಮೂರನೆಯವರು ಶ್ರೀಯುತರು ಬೆಂಗಳೂರು ಗಾಂಧಿನಗರದ ಬಾಲಿಕಾ ಪಾಠಶಾಲೆಗೆ ೧೬,೦೦೦ ರೂ ಮತ್ತು ೭,೦೦೦ ರೂ ನ ೫ ಎಕರೆ ಜಮೀನು ಮೈಸೂರಿನ ರಾಮಕೃಷ್ಣ ವಿದ್ಯಾಲಯಕ್ಕೆ ೧೫,೦೦೦ ರೂ, ಡಾ॥ ಮೋದಿಯವರ ನೇತ್ರ ವೈದ್ಯ ಶಿಬಿರಕ್ಕಾಗಿ ೧೫,೭೦೦ ರೂ ಮತ್ತು ಬಸ್ ನಿಲ್ದಾಣದ ಷೆಡ್ಡಿಗಾಗಿ ೩,೦೦೦ ರೂ ಗಳನ್ನು ಕೊಟ್ಟಿರುವರು

"ಸರಸ್ವತಿ" ವಿಶೇಷ ಸಂಚಿಕೆ

ಶ್ರೀಮತಿ ಆರ್ ಕಲ್ಯಾಣಮ್ಮನವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಸರಸ್ವತಿ—ಕನ್ನಡ ಮಾಸಪತ್ರಿಕೆಯ ಈ ವರ್ಷದ ದಸರಾ ವಿಶೇಷ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸುತ್ತೇವೆ ಬೆಂಗಳೂರಿನ ಶ್ರೀಮತಿ ಜಿ ಆರ್ ಲಲಿತರವರು ಇದರ ಪ್ರಕಟಣಕಾರರು ಶ್ರೀಮನ್ಮಹಾರಾಜರು, ರಾಜಮಾತೆಯವರು ಮತ್ತು ಶ್ರೀಮನ್ಮಹಾರಾಣಿಯವರು ಇದಕ್ಕೆ ಶುಭ ಸಂದೇಶಗಳನ್ನು ಕಳುಹಿಸಿದ್ದಾರೆ ಮಹಿಳೆಯರು ಮತ್ತು ಮಕ್ಕಳ ಏಳಿಗೆಗಾಗಿ ೩೦ ವರ್ಷಗಳಿಂದಲೂ ಪತ್ರಿಕೆಯು ದುಡಿಯುತ್ತಿದೆ ಪತ್ರಿಕೆಯು ಸಕಲರ ಆದರಕ್ಕೆ ಪಾತ್ರವಾಗಿದೆ ಬಿಡಿ ಪತ್ರಿಕೆ ಬೆಲೆ ೪ ಆಣೆ

ಆಕಾಶವಾಣಿ ಮಕ್ಕಳ ಸಂಘದ ಬಹುಮಾನ ವಿನಿಯೋಗ ಸಮಾರಂಭ

ಆಕಾಶವಾಣಿ ಮಕ್ಕಳ ಸಂಘದ ಬಹುಮಾನ ವಿನಿಯೋಗ ಸಮಾರಂಭವು ಮೊನ್ನೆ ಶ್ರೀ ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಕುಮಾರಿ ಟಿ ಎಸ್ ಸುಂದರೇಶನವರಿಂದ ಸ್ವಾಗತ ಭಾಷಣವಾದನಂತರ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿ ಮಕ್ಕಳಿಗೆ ಹಿತ ನುಡಿಗಳನ್ನಿತ್ತರು

ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿ

ನಜರಬಾದ್, ಮೈಸೂರು

ಅತ್ಯಾಧುನಿಕ ಟ್ರಿಪ್ಲೆಕ್ಸ್ ಡ್ರೈ ಕ್ಲೀನಿಂಗ್ ಯಂತ್ರದಿಂದ ಸುಸಜ್ಜಿತವಾಗಿರುವ ವಿದ್ಯುಚ್ಛಕ್ತಿ ಲಾಂಡ್ರಿಯು ನಗರದಲ್ಲಿ ಇದೊಂದೇ ಆಗಿದೆ
ಉಲ್ಲನ್, ರೇಷ್ಮೆ, ಜಾರ್ಜೆಟ್ ಮುಂತಾದ ಬಟ್ಟೆಗಳನ್ನು ಅತ್ಯುತ್ತಮವಾಗಿ ಡ್ರೈ ಕ್ಲೀನಿಂಗ್ ಮಾಡಿಕೊಡಲಾಗುತ್ತದೆ

"ಪ್ರಾರ್ಥನೆ"

ಆರವಟಿಗೆಯಲ್ಲಿರುವ ಧಾರವಾಡ ಜಿಲ್ಲಾ ಸರ್ವೋದಯ ಯೋಜನೆಯವರು ಪ್ರಕಟಿಸಿರುವ 'ಪ್ರಾರ್ಥನೆ" ಎಂಬ ಕಿರುಹೊತ್ತಿಗೆಯನ್ನು ಆದರದಿಂದ ಸ್ವೀಕರಿಸಿದ್ದೇವೆ ಮಹಾತ್ಮಾಗಾಂಧಿಜಿಯವರು ನಿತ್ಯವೂ ಬೆಳಿಗ್ಗೆ ಮತ್ತು ಸಂಜೆ ಮಾಡುತ್ತಿದ್ದ ಪ್ರಾರ್ಥನಾ ಪದ್ಯಗಳನ್ನೂ, ಅವುಗಳ ಕನ್ನಡ ರೂಪಾಂತರವನ್ನೂ ಇದರಲ್ಲಿ ಕೊಡಲಾಗಿದೆ ಮಹಾತ್ಮರಿಗೆ ಪ್ರಿಯರಾದ ಹಳ್ಳಿಗರಿಗೆ ಅರ್ಥವಾಗುವಂತೆ ಆರವಟಿಗೆಯ ಶ್ರೀ ನರಸಿಂಹದಾಬಡೆಯವರು ಕನ್ನಡದಲ್ಲಿ ಪದ್ಯಗಳನ್ನು ರಚಿಸಿರುತ್ತಾರೆ ಮಹಾತ್ಮರ ಪ್ರಾರ್ಥನೆಯಲ್ಲಿ ಆಸಕ್ತಿಯುಳ್ಳವರಿಗೂ, ಸರ್ವೋದಯ ತತ್ವದ ಅಭಿಮಾನಿಗಳಿಗೂ ಪುಸ್ತಕವು ಉಪಯುಕ್ತವಾಗಿದೆ ಇದರ ಬೆಲೆ ಎರಡು ಆಣೆ

DALTON HIGH SCHOOL,

MYSORE

(Coaching Section)

Offers excellent Coaching by expert teachers for S S L C students of Jan 56 Admissions betw en 9 & 10 30 A M For further details contact the undersigned

S N SUBBAKRISHNAN
B A B Com
Secretary

Edited, Printed and Published by A R Nagarajan at Sadhvi Press, D Subbiah Road Mysore

ಕೈಗಾರಿಕಾ ನೌಕರರ ಗೃಹ ವಸತಿ ಮನೆಗಳನ್ನು ಕಟ್ಟಿಕೊಡಲು ಕೇಂದ್ರ ಸರ್ಕಾರದವರು ಆಗಸ್ಟ್ ಮತ್ತು ಸೆಪ್ಟೆಂಬರ್ ಗಳಲ್ಲಿ ೨ ಕೋಟಿ ೩ ಲಕ್ಷ ರೂ ಗಳನ್ನು ಮಂಜೂರು ಮಾಡಿರುತ್ತಾರೆ

SRI

RAGHAVENDRA TECHNICAL INSTITUTE (Estd 1954)

(S R Telegraph Training School)
Chamaraja Road, Mysore

1 Expert Training in Telegraphy & Postal work
2 Telephone Operator's Course
3 Wireless Telegraphy 4 Months

Classes for 2 & 3 will commence from 15th Nov 1955 Students desirous of joining are requested to apply in writing, with a remittance of Rs 5 & Rs 10 respectively For details please contact the Secretary

SRI GAYATHRI TALKIES

To-Day Last Day

AFRICA ADVENTURE

From 28-10-1955

20th Century's

WOMAN'S WORLD

(Cinemascope in Technicolor)

It is a great big Wonderful Woman's World — because men are in it

Starring - Clifton Webb, Cornel Wilde and June Allyson

ಹರಾಜು ಮಾರಾಟ

1955 ನೇ ಅಕ್ಟೋಬರ್ 30 ನೇ ತಾರೀಖು ಭಾನುವಾರ ಬೆಳಿಗ್ಗೆ 11 ಘಂಟೆಗೆ

ಮೈಸೂರು ಇಂಡಿಯನ್ ಬ್ಯಾಂಕ್ ಲಿಮಿಟೆಡ್ (ಲಿಕ್ವಿಡೇಷನ್‌ನಲ್ಲಿರುವವರು) ರವರ ಸೂಚನೆ ಮೇರೆ, ನಂಜನಗೂಡಿನ ದಿ ಕಾವೇರಿ ಸ್ಟೀಲ್ ಸೇಫ್ ಮ್ಯಾನ್ಯುಫ್ಯಾಕ್ಚರಿಂಗ್ ಲಿಮಿಟೆಡ್ ರವರು ತಯಾರಿಸುವ ಸ್ಟೀಲ್ ಟ್ರಂಕ್ಸ್, ಕುರ್ಚಿಗಳು, [illegible] ಮತ್ತು [illegible] ಮತ್ತು ಪುಸ್ತಕದ ಕಪಾಟ್‌ಗಳ ಭಾರಿ ಸರಕನ್ನು ನಗದು ಆಧಾರದಲ್ಲಿ ಹರಾಜು ಮಾಡಲಾಗುವುದು ಅವುಗಳನ್ನು ಈ ದಿನದಿಂದ ಅವಲೋಕಿಸಬಹುದು

ಅಬೀದ್ ಅಂಡ್ ಕಂಪೆನಿ, ಆಕ್ಷನಿಯರ್ಸ್,

ಸ್ಟಾಪ್ಪ ಚೌಕ ಫೋನ್ 474 ಮೈಸೂರು

After serving a million clients ently in Laundry work,
We are glad in offering our services to all

★

By the opening of our only Branch

S. E. L. DRY CLEANING

SERVICE

at the New Statue Circle, Mysore

★

Proprietor - L SRIKANTIAH

Shivananda Electric Laundry,

H O 24 V V Market Buildings, Mysore (Estd 1946)

ಮೈಸೂರು ಸರ್ಕಾರದ

ವಿಮಾ ಇಲಾಖೆ

(ಸಾರ್ವಜನಿಕ ಶಾಖೆ)

ಅಂಕಿಅಂಶಗಳಿಂದಲೇ ವ್ಯಕ್ತವಾಗುತ್ತದೆ!

★

1954-55 ರಲ್ಲಿ ಹೊಸ ವ್ಯವಹಾರವು 1·82 ಕೋಟಿ ರೂಗಳಿಗೂ ಮೀರಿದೆ

ನಿಧಿಯು 4·79 ಕೋಟಿ ರೂ. ಗಳಿಗೂ ಮೀರಿದೆ

ವಿಮೆ ಮಾಡಲ್ಪಟ್ಟ ಮೊಬಲಗು 13 87 ಕೋಟಿ ರೂ

ವಿಲೆ ಮಾಡಲ್ಪಟ್ಟಿರುವ ಕ್ಲೈಮು ಮೊಬಲಗು 2·45 ಕೋಟಿ ರೂ. ಗಳಿಗೆ ಮೀರಿದೆ

ಅತಿ ಹೆಚ್ಚಿನ ಬೋನಸ್

(ಹೋಲ್ ಲೈಫ್ ರೂ 20. - ಎಂಡೋಮೆಂಟ್ ರೂ. 17.)

— ಪ್ರೀಮಿಯಂ ದರದಲ್ಲಿ ಇಳಿತಾಯ —

★

ಮೋಟಾರು ವಾಹನಗಳ ವಿಮೆಯನ್ನೂ

ಸುಲಭ ದರದಲ್ಲಿ ಅಂಗೀಕರಿಸಲಾಗುವುದು

ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಿರಿ!

ದಸರಾ ವಸ್ತು ಪ್ರದರ್ಶನಕ್ಕಾಗಿ 15 ದಿನಗಳು ಮಾತ್ರ

1955 ನೇ ಅಕ್ಟೋಬರ್ 21 ರಿಂದ ನವೆಂಬರ್ 6 ರವರೆಗೆ

ದೇವಿದಯಾಳ್ ರವರ ಎಲ್ಲಾ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು

ರಿಯಾಯಿತಿ ದರದಲ್ಲಿ ಗ್ಯಾರಂಟಿ ಚೀಟಿಗಳೊಡನೆ

ವಸ್ತು ಪ್ರದರ್ಶನದಲ್ಲಿ ದೊರಕಲ್ಪಡುತ್ತವೆ

ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಏಜೆನ್ಸೀಸ್, 'ಡಿ' ಬ್ಲಾಕ್ ಸ್ಟಾಲ್ ನಂ. 12 ಮತ್ತು 13

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

FOR SALE
or
LEASE
On Attractive Terms
ONE WELL-DEVELOPPED
ESTATE
On Belagola Road
Two miles distant
Last Price Rs 65,000
CLEAN SALE
S RAMARAO,
Srikantavilas,
V V Mohalla Mysore

ಪುಟ ೧೪] SADHVI FRIDAY 28-10-1955 ಮೈಸೂರು ಶುಕ್ರವಾರ ೨೮-೧೦-೧೯೫೫ [ಸಂಚಿಕೆ : [illegible]

ಪಾಕಿಸ್ತಾನದ ಗಡಿ ಬಳಿ ಆಫ್ಘಾನಿಸ್ತಾನದ ಸೈನ್ಯಶೇಖರಣೆ

ಮೈಸೂರು ಸಂಸ್ಥಾನವು ಈಗಲೂ ದಾರಿ ತೋರಲಿ

ಪೌರಸನ್ಮಾನ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಢೇಬರರ ಭಾಷಣ

ಮೈಸೂರು [illegible]

ಮೈಸೂರು ಸಂಸ್ಥಾನದ ಹಿರಿಮೆಯನ್ನು ನಾನು [illegible] ಕೇಳಿ ತಿಳಿದಿದ್ದೆ. ಇಲ್ಲಿಗೆ ಬಂದು [illegible] ಅದರಲ್ಲಿ ಅತ್ಯುತ್ಪ್ರೇಕ್ಷೆಯೇನೂ [illegible] ನನಗೆ ಗೊತ್ತಾಗಿದೆ. [illegible] ಜನರ ವರ್ತನೆ [illegible] ಇಲ್ಲಿ ಕಂಡುಬರುತ್ತದೆ. [illegible] ಪ್ರಭುತ್ವದಲ್ಲಿಯೂ ಸಂಸ್ಥಾನವು ಎಂದಿ[illegible] ಪ್ರಗತಿ ಪಥದಲ್ಲಿ ಮುನ್ನಡಿಯಿಟ್ಟಿರುತ್ತದೆ. [illegible] ಮಾರ್ಗದರ್ಶನ ಮಾಡಲಿ—ಎಂಬುದಾಗಿ [illegible] ಅಧ್ಯಕ್ಷ ಢೇಬರ್‌ರವರು ನೆನ್ನೆ [illegible] ನಡೆದ ಪೌರ ಸನ್ಮಾನ ಸಮಾರಂಭದಲ್ಲಿ [illegible]

[illegible] ನಂತರ, ಪೌರಸಭಾಧ್ಯಕ್ಷ ಶ್ರೀ [illegible] ಬಿನ್ನವತ್ತಳೆಯನ್ನು [illegible] ಅಧ್ಯಕ್ಷರು ಮುಂದುವರಿದು ಈ ರೀ[illegible]

[illegible] ಅವಶ್ಯಕತೆಗಳಿಗೆ ಅನುಸಾರವಾಗಿ [illegible] ಪುನರ್ವಿಂಗಡಣೆ ಮಾಡಬೇಕಾಗು[illegible] ಪ್ರಭುಗಳಿಗೂ ಪ್ರಜೆಗಳಿಗೂ ಸೌಹಾರ್ದ [illegible] ಮನಸ್ಸನ್ನು ಪರಿವರ್ತಿಸಲು [illegible] ಹಿಂದೆ ನಮ್ಮ ರಾಜರುಗಳು [illegible] ತಮ್ಮ [illegible] ಸ್ವಾತಂತ್ರ್ಯದ ಜೀವನಕ್ಕೆ [illegible] ಪರಸ್ಪರ [illegible] ಸೌಹಾರ್ದದಿಂದ ಎಲ್ಲ [illegible] ಭಾರತ[illegible]

[illegible] ದೇಶದ ಹಕ್ಕೆಯನ್ನು [illegible] ಪರಸ್ಪರ [illegible] ನಾವು ಮನಗಂಡಿದ್ದೇವೆ. [illegible] ಅನುಸರಿಸಬೇಕು.

[illegible] ಸಮಾನವಾದ ನ್ಯಾಯವನ್ನು [illegible] ನೂತನ ಸಮಾಜದ ರಚನೆಯಲ್ಲಿ [illegible] ಇವರಲ್ಲಿ ಪ್ರತಿ[illegible] ತ್ಯಾಗಕ್ಕೆ [illegible] ನಮ್ಮ ನೆಚ್ಚಿನ ನಾಯಕ[illegible] ಮಾರ್ಗದರ್ಶನದಿಂದ [illegible] ನಮ್ಮ ದೇಶದ [illegible] ಕೃತಕೃತ್ಯ[illegible]

ನಾಯಕರಿಗೂ, ಕಾರ್ಯಕರ್ತರಿಗೂ ನಿಕಟ ಸಂಪರ್ಕ ಬೇಕು

ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಢೇಬರರ ಭಾಷಣ

ಮೈಸೂರು [illegible]

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ನೆನ್ನೆ [illegible] ನಗರ ಕಾಂಗ್ರೆಸ್ [illegible] ಕಾರ್ಯಕರ್ತರನ್ನುದ್ದೇಶಿಸಿ [illegible] ಮಾಡಿದರು. [illegible] ನಾರಾಯಣಸ್ವಾಮಿ [illegible] ಮಾಡಿದನಂತರ ಶ್ರೀ ಢೇಬರ್‌ರವರು [illegible] ಸಂಸ್ಥಾನಗಳ ಪುನರ್ವಿಂಗಡಣಾ ಸಮಿತಿ[illegible] ವರದಿಯನ್ನು [illegible] ಕಾಂಗ್ರೆಸ್ [illegible] ನಾಯಕರಿಗೂ ನಿಕಟವಾದ ಸಂಪರ್ಕವಿರ[illegible] ಬೇಕೆಂದೂ, ಕೆಲಸಗಾರರನ್ನು [illegible] ಮೈಸೂರಿನ [illegible]

ಕಾಂಗ್ರೆಸ್ ಅಧ್ಯಕ್ಷರ ಗೌರವಾರ್ಥವಾಗಿ ಭೋಜನ ಕೂಟ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಢೇಬರ್‌ರವರ ಗೌರ[illegible] ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ [illegible] ಚೆನ್ನಯ್ಯನವರು ನೆನ್ನೆ ರಾತ್ರಿ ಭೋಜನ [illegible] ಸಂಸ್ಥಾನದ ಎಲ್ಲ ಮಂತ್ರಿಗಳೂ, ಮದ್ರಾಸಿನ [illegible] ಮುಖ್ಯ ಮಂತ್ರಿ ಶ್ರೀ [illegible] ಮಂಗಳೂರಿನ ಶ್ರೀ ಯು ಶ್ರೀನಿವಾಸ ಮಲ್ಯರವ[illegible] ಸಂಸ್ಥಾನದ ಅನೇಕ ಪ್ರಮುಖರೂ ಬಂದಿ[illegible]

ಆಫ್ಘಾನಿಸ್ತಾನಕ್ಕೆ ಚೆಕೊಸ್ಲೊವೇಕಿಯಾ ಶಸ್ತ್ರಾಸ್ತ್ರ?

ಚೆಕೊಸ್ಲೊವೇಕಿಯ ಸರ್ಕಾರದ [illegible] ಆಫ್ಘನ್ ಸರ್ಕಾರದ [illegible] ಯೋಗವೊಂದು [illegible] ಚೆಕೊಸ್ಲೊವೇಕಿಯದಲ್ಲಿ [illegible] ಹೊಸ ವಿಧದ ಶಸ್ತ್ರಾಸ್ತ್ರಗಳ ಪರಿಶೀಲನೆ ನಡೆಸು[illegible]

ಆಕಾಶವಾಣಿ ಹಾಡಿ ಕಾರ್ಯಕ್ರಮ

[illegible]

ಸಮುದ್ರದ ಅಲೆಗಳನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ

ಇಂದಿನ ಪರಿಸ್ಥಿತಿಗೆ ತಕ್ಕಂತೆ ಎಲ್ಲರೂ ನಡೆಯಬೇಕು

[illegible] ಕಾಂಗ್ರೆಸ್ ಅಧ್ಯಕ್ಷ ಢೇಬರರ ಭಾಷಣ

ಮೈಸೂರು [illegible]

ಕಾಂಗ್ರೆಸ್ ಅಧ್ಯಕ್ಷ ಶ್ರೀ ಢೇಬರ್‌ರವರು ನೆನ್ನೆ [illegible] ಸಮುದ್ರದ ಅಲೆಗಳನ್ನು ತಡೆಗಟ್ಟಲು [illegible] ವರ್ತಮಾನಗಳನ್ನು ಅನುಸರಿಸಿ ನಡೆಯುವುದೇ ಶ್ರೇಯಸ್ಕರವೆಂದೂ [illegible]

[illegible] ಗುಡುಗಿದರು.

[illegible]

ಸ್ವಾತಂತ್ರ್ಯವು ಬಂದನಂತರ ಅತ್ಯಂತ ವೇಗ[illegible] ಪರಿವರ್ತನೆ [illegible] ಕಾಲದಲ್ಲಿ ನಾವು [illegible]

[illegible] ಮೈಸೂರಿನ [illegible]

[illegible] ಈ ವರ್ಷ ಪ್ರಶಸ್ತಿ ಪತ್ರ ಸ್ವೀಕಾರ

ಮೈಸೂರು [illegible]

ಶ್ರೀ [illegible] ಕೇಶವಮೂರ್ತಿ [illegible] ಪದವಿ ಪರೀಕ್ಷೆಯ[illegible] ಪ್ರಶಸ್ತಿ ಪತ್ರವನ್ನು [illegible] ವರ್ಷದನಂತರ ನೆನ್ನೆ ನಡೆದ [illegible] ಸ್ವೀಕರಿಸಿದರು.

ಮೈಸೂರಿನ [illegible] ಒಂದು [illegible] ಮತ್ತು [illegible] ಮೈಸೂರು [illegible] ಸರ್ಕಾರದವರು [illegible]

ಪಾಕಿಸ್ತಾನದ ಗಡಿ ಬಳಿ ಆಫ್ಘಾನಿಸ್ತಾನದ ಸೈನ್ಯಗಳು

ಪಾಕಿಸ್ತಾನ-ಆಫ್ಘಾನಿಸ್ತಾನದ ಗಡಿ ಬಳಿ [illegible] ಸೈನ್ಯ ಮತ್ತು ಗುತ್ತಗಾಡಿನವರ [illegible] ಮುಂದುವರಿಯುತ್ತಿದೆಯೆಂದು [illegible] ಪಾಕಿಸ್ತಾನಕ್ಕೆ [illegible]

ಬಲೂಚಿಸ್ತಾನದ ನಾಯಕರ ಬಂಧನ

[illegible] ಗಾಂಧಿಯೆಂದು [illegible]

[illegible] ಅನುಸರಿಸುವುದು ಮೇಲು.

[illegible]

ಸೂಚನೆ

[illegible] ಪತ್ರಿಕೆ [illegible]

—ವ್ಯವಸ್ಥಾಪಕ

ಕರ್ನಾಟಕ ಏಕೀಕರಣಕ್ಕೆ ಪರಿಜನರ ಬೆಂಬಲ

ಮೈಸೂರು ೨೭

ರಾಜಧಾನಿಯ ಅಶೋಕಪುರದಲ್ಲಿ ನೆನ್ನೆ ನಡೆದ ಪರಿಜನರ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕೆ ಬೆಂಬಲ ನೀಡುವ ನಿರ್ಣಯವನ್ನು ಅಂಗೀಕರಿಸಲಾಯಿತು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು ಎನ್ ಢೇಬರ್ ರವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಭಾರತದಲ್ಲಿ ಈಗ ಹೊಸ ಅಧ್ಯಾಯವು ಆರಂಭವಾಗಿದೆಯೆಂದೂ, ಏವತ್ತೂ ಅನುಗುಣವಾಗಿ ಸಕಲ ಪ್ರಜೆಗಳಲ್ಲಿಯೂ ಸಮಾನಭಾವವನ್ನು ಬೆಳೆಸುವುದಕ್ಕಾಗಿ ದಲಿತ ವರ್ಗಕ್ಕೆ ಪ್ರಾಧಾನ್ಯತೆಯನ್ನು ಕೊಡಲಾಗುತ್ತಿದೆಯೆಂದೂ ಹೇಳಿದರು ನಿಮ್ನ ವರ್ಗದವರಿಗೆ ಆಗಿರುವ ಸಾಮಾಜಿಕ ಅನ್ಯಾಯವನ್ನು ನಿವಾರಿಸಿ, ಅವರುಗಳ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಮಹಾತ್ಮಾ ಗಾಂಧಿಯವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯಂತೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ತಿಳಿಸಿದರು ಪರಿಜನರಾದವರೂ ತಮ್ಮ ತಮ್ಮ ಪಂಗಡಗಳಲ್ಲಿರುವ ಭೇದಭಾವಗಳನ್ನು ತೊರೆದು ಎಲ್ಲರಲ್ಲಿಯೂ ಸಮಾನ ಭಾವನೆಯನ್ನು ಬೆಳೆಸಬೇಕೆಂದು ತಿಳಿಸಿದರು

ಮೇಷ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಸಾಧಾರಣ ಉದ್ಯೋಗದಲ್ಲಿ ನಿರುತ್ಸಾಹ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಡಿಮೆ ಪ್ರವಾಸ ಕೈಗೊಳ್ಳಬೇಡಿ

ವೃಷಭ — ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಸ್ಥಿತಿ ಅತೃಪ್ತಿಕರ ಕುಟುಂಬದಲ್ಲಿ ಅಶಾಂತಿ. ಉದ್ಯೋಗದಲ್ಲಿ ಪ್ರಗತಿ ಕಡಿಮೆ ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ

ಮಿಥುನ — ಆರೋಗ್ಯ ಸಾಧಾರಣ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವೃಥಾ ಕಲಹ ಸಂಭವ ನೌಕರಿಯಲ್ಲಿ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಆಪ್ತರಿಂದ ವಂಚನೆ

ಕರ್ಕ :— ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ, ಪ್ರವಾಸ ಸುಖಕರವಾಗಿರುವುದು

ಸಿಂಹ — ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ಕಮ್ಮಿ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ

ಕನ್ಯಾ — ಆರೋಗ್ಯ ಚೆನ್ನಾಗಿರುವುದು ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು [illegible]ರಿಂದ ಕಿರುಕುಳ ನೌಕರಿಯಲ್ಲಿ ಸಮಸ್ಯೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು

ತುಲಾ — ಆರೋಗ್ಯ ಅತೃಪ್ತಿಕರ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ಆಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ವೃಶ್ಚಿಕ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಕೈಗೊಂಡ ಕಾರ್ಯವಿಘ್ನ ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ ನೌಕರಿಯಲ್ಲಿ ಕಿರುಕುಳ ಪ್ರವಾಸ ಕೈಗೊಳ್ಳಬೇಡಿ

ಧನು — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ವಿದ್ವಜ್ಜನರ ಪರಿಚಯ

ಮಕರ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಉತ್ಸಾಹ

ಕುಂಭ — ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಕಡಿಮೆ ಆಪ್ತರಿಂದ ವಂಚನೆ ನೌಕರಿಯಲ್ಲಿ ನಿರುತ್ಸಾಹ ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ

ಮೀನ — ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಕಡಿಮೆ ನೌಕರಿಯಲ್ಲಿ ಸಮಸ್ಯೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು

ದೆಹಲಿ ಕೈಗಾರಿಕಾ ಪ್ರದರ್ಶನದಲ್ಲಿ ಮೈಸೂರಿನ ವಿಭಾಗ

ದೆಹಲಿಯ ಕೈಗಾರಿಕಾ ಪ್ರದರ್ಶನದಲ್ಲಿ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ೫ ಕಲಸಗಾರರು ೩|| ಅಡಿ ಕೈಕಸಬಿನ ಸ್ಟಾಲಿನಲ್ಲಿ ದಂತದ ಕೆತ್ತನೆ ಕೆಲಸದ ಸಾಧನವನ್ನು ಪ್ರದರ್ಶನ ಮಾಡುತ್ತಿರುವರು ಇನ್‌ಸ್ಟ್ರಕ್ಟರ್ ಹೆಚ್ ಎಲ್ ಮಾಯಣ್ಣ, ಶ್ರೀಗಳಾದ ಮೂಡಲಪ್ಪ, ನಾರಣಪ್ಪ, ನಂಜಪ್ಪ ಮತ್ತು ತಮ್ಮಣ್ಣಯ್ಯನವರೂ ಈ ಕೆಲಸದಲ್ಲಿ ತೊಡಗಿರುವರು

ಅಖಿಲ ಕರ್ನಾಟಕ ಅಂತರ ಕಾಲೇಜು ಕನ್ನಡ ಸಣ್ಣ ಕಥೆಗಳ ಸ್ಪರ್ಧೆ

ಮಹಾರಾಜಾ ಕಾಲೇಜಿನ ವಿಶ್ವವಿದ್ಯಾನಿಲಯ ಪತ್ರಿಕಾ ವೃಂದ ಸಂಘದ ಆಶ್ರಯದಲ್ಲಿ ಮೇಲ್ಕಂಡ ಸ್ಪರ್ಧೆಯು ನಡೆಯುವುದು ಡಿಸೆಂಬರ್ ೧೦ ರೊಳಗೆ ಕಥೆಗಳನ್ನು ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಬೇಕು ಕರ್ನಾಟಕದ ಎಲ್ಲ ಕಾಲೇಜು ವಿದ್ಯಾರ್ಥಿವಿದ್ಯಾರ್ಥಿನಿಯರೂ ಭಾಗವಹಿಸಬಹುದು ಫುಲ್‌ಸ್ಕೇಪಿನ ೭ ಪುಟಕ್ಕೆ ಮೀರದಂತೆ ಕಥೆಯನ್ನು ಬರೆದು ಕಳುಹಿಸಬೇಕು ಉತ್ತಮವಾದ ಮೂರು ಕಥೆಗಳಿಗೆ ಬಹುಮಾನಗಳನ್ನು ಕೊಡಲಾಗುವುದು

ಟಿಟೋರವರೊಡನೆ ಡಲ್ಲೆಸರ ಭೇಟಿ

ಅಮೇರಿಕದ ವಿದೇಶಾಂಗ ಮಂತ್ರಿ ಡಲ್ಲೆಸರವರು ಯುಗೋಸ್ಲಾವಿಯದ ಅಧ್ಯಕ್ಷ ಟಿಟೋರವರನ್ನು ಭೇಟಿ ಮಾಡುವ ಉದ್ದೇಶದಿಂದ ಬ್ರಿಯೋನಿ ದ್ವೀಪಕ್ಕೆ ವಿಮಾನದಲ್ಲಿ ಹೊರಡುತ್ತಾರೆ ಯುಗೋಸ್ಲಾವಿಯಾ ಸ್ವತಂತ್ರ ರಾಜ್ಯವಾಗಿರಲು ಅಪೇಕ್ಷಿಸುವುದೂ, ಅಮೇರಿಕವೂ ಆಶಿಸುತ್ತಿರುವುದಾಗಿ ಅವರು ಜಿನೀವಾದಿಂದ ಹೊರಡುವ ಮುಂಚೆ ತಿಳಿಸಿದರು

ಸಂಯುಕ್ತ ಕರ್ನಾಟಕದ ಸ್ಥಾಪನೆಗೆ ೬೨ ಕಾರ್ಮಿಕ ಸಂಸ್ಥೆಗಳ ಬೆಂಬಲ

ಬೆಂಗಳೂರಿನ ೬೨ ಕಾರ್ಮಿಕ ಸಂಘಗಳು ಸಂಯುಕ್ತ ಕರ್ನಾಟಕದ ಸ್ಥಾಪನೆಗೆ ಒತ್ತಾಯ ಮಾಡಿ ಮನವಿಯೊಂದನ್ನು ಹೊರಡಿಸಿವೆ

೧೪ ನೇ ತಾರೀಕು ಮಕ್ಕಳ ದಿನಾಚರಣೆ

ಈ ತಿಂಗಳು ೧೪ ನೇ ತಾರೀಕು ನಗರದಲ್ಲೆಲ್ಲ ಪ್ರತಿವರ್ಷದಂತೆ ಮಕ್ಕಳ ದಿನಾಚರಣೆ ನಡೆಸಲು ಪೌರಸಭೆಯವರು ಏರ್ಪಾಡು ಮಾಡುತ್ತಿರುವರು ಮಕ್ಕಳ ಬಗ್ಗೆ ಜನರಲ್ಲಿ ಉತ್ಸುಕತೆಯನ್ನುಂಟುಮಾಡುವುದೇ ಇದರ ಉದ್ದೇಶ

ಅಭಿನಂದನಾ ಸಭೆ

ರಾಜಧಾನಿಯ ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾಗಿರುವ ಶ್ರೀ ಎನ್ ಶಿವರಾಮ ಶಾಸ್ತ್ರಿಯವರನ್ನು ಅಭಿನಂದಿಸಲು ಕಾಲೇಜಿನ ಸಂಸ್ಕೃತ ಸಂಘದವರು ನಾಳಿದ್ದು ಸಂಜೆ ೫|| ಗಂಟೆಗೆ ಸಮಾರಂಭವೊಂದನ್ನು ಏರ್ಪಡಿಸಿರುತ್ತಾರೆ ಪ್ರಿನ್ಸಿಪಾಲ್ ಶ್ರೀ ಎಲ್ ಸೀಬಯ್ಯನವರು ಅಧ್ಯಕ್ಷತೆ ವಹಿಸುವರು ಕು|| ಎನ್ ವಿ ರಾಜೇಶ್ವರಿ ಮತ್ತು ಎನ್ ವಿ ಅನುಸೂಯರವರ ಸಂಗೀತವು ಏರ್ಪಾಡಾಗಿದೆ

ಸತ್ಕಾರ ಕೂಟ

ಶಾರದಾವಿಲಾಸ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ಶ್ರೀ ಎಸ್ ವೆಂಕಟಪತಯ್ಯನವರ ಮತ್ತು ಈಗಿನ ಪ್ರಿನ್ಸಿಪಾಲ್ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರ ಗೌರವಾರ್ಥವಾಗಿ ಕಾಲೇಜು ವಿದ್ಯಾರ್ಥಿಗಳು ನೆನ್ನೆ ಸಂಜೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಶ್ರೀ ಎಲ್ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ [illegible] ಮುಕುಂದಸ್ವಾಮಿಯವರಿಂದ ಪ್ರಾರ್ಥನೆಯಾದನಂತರ ಶ್ರೀ ಹೆಚ್ ಗಂಗಾಧರಪ್ಪನವರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ರಾಜಮ್ಮ [illegible] ಅವರಿಂದ ಸಂಗೀತವು ನಡೆಯಿತು ವಿದ್ಯಾರ್ಥಿಗಳಾದ ಶ್ರೀ ಶಿವಲಿಂಗೇಗೌಡ ಮತ್ತು ರಾಜಶೇಖರಶೆಟ್ಟರು ಮಾತನಾಡಿ ಮುಖ್ಯ ಅತಿಥಿಗಳ ಗುಣಗಾನ ಮಾಡಿದರು

ಶ್ರೀ ವೆಂಕಟಪತಯ್ಯನವರು ಉತ್ತರವಿತ್ತು, ಸಂಸ್ಥೆಯ ಹಿತಕ್ಕಾಗಿ ವ್ಯಕ್ತಿಗಳು ದುಡಿಯುವುದು ಅಗತ್ಯವೆಂದು ಹೇಳಿ ವಿದ್ಯಾರ್ಥಿಗಳಿಗೆ ಸೂಕ್ತ ಹಿತವಚನಗಳನ್ನಿತ್ತರು ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಮಾತನಾಡಿ, ವಿದ್ಯಾರ್ಥಿಗಳು ಇನ್ನೂ ಹೆಚ್ಚು ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಲು ಶ್ರಮಿಸುವುದಾಗಿ ನುಡಿದರು ಶ್ರೀ ಶ್ರೀಕಂಠಯ್ಯನವರು ಮಾತನಾಡಿ, ಪಾಶ್ಚಾತ್ಯ ದೇಶಗಳಲ್ಲಿ ೮೦ ವರ್ಷಗಳಿಗೂ ಹೆಚ್ಚಿರುವ ವೃದ್ಧರೂ ಅನೇಕ ಕಾರ್ಯಗಳಲ್ಲಿ ಚಟುವಟಿಕೆ ತೋರಿಸುತ್ತಿರುವುದನ್ನೂ ಅವಕ್ಕೆ ಅಲ್ಲಿ ಮನ್ನಣೆಯಿರುವುದನ್ನೂ ವಿವರಿಸಿ ಇಲ್ಲಿ ವಿಶ್ವವಿದ್ಯಾನಿಲಯವು ಆ ರೀತಿ ನಡೆದುಕೊಳ್ಳುತ್ತಿಲ್ಲವೆಂದು ಹೇಳಿದರು ಶ್ರೀ ಅನಂತರಾಮುರವರು ವಂದನಾರ್ಪಣೆ ಮಾಡಿದರು

ಶಾಲೆಗಳಲ್ಲಿ ಅಶಿಸ್ತನ್ನು ಹೋಗಲಾಡಿಸಬೇಕು

ಉಪಾಧ್ಯಾಯರ ಗೋಷ್ಠಿಯಲ್ಲಿ ಸಲಹೆಗಳು

ಮೈಸೂರು ೬

ಹಲವಾರು ದಿನಗಳಿಂದಲೂ ಇಲ್ಲಿ ನಡೆದ ಪ್ರಾದೇಶಿಕ ಮುಖ್ಯೋಪಾಧ್ಯಾಯರು ಮತ್ತು ಶಾಲಾ ಇನ್ಸ್‌ಪೆಕ್ಟರುಗಳ ಗೋಷ್ಠಿಯು ಮೊನ್ನೆ ಮುಕ್ತಾಯಗೊಂಡಿತು ಶಾಲೆಗಳಲ್ಲಿ ಹೆಚ್ಚುತ್ತಿರುವ ಅಶಿಸ್ತನ್ನು ತಪ್ಪಿಸಲು ಪರಿಣಾಮಕಾರಿಯಾದ ಕ್ರಮವನ್ನು ಕೂಡಲೇ ಕೈಗೊಳ್ಳುವಂತೆ ಗೋಷ್ಠಿಯು ಸೂಚಿಸಿತು ಇಲ್ಲದಿದ್ದರೆ ರಾಷ್ಟ್ರೀಯ ಜೀವನದ ಅಸ್ತಿಭಾರಕ್ಕೆ ಅಪಾಯವುಂಟಾಗುವುದೆಂದು ಅಭಿಪ್ರಾಯಪಡಲಾಯಿತು ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ತರಲು ಉಪಾಧ್ಯಾಯರುಗಳು ಕ್ರಮ ಕೈಗೊಳ್ಳಬೇಕೆಂದೂ, ಮಕ್ಕಳಿಗೆ ಪ್ರಾರಂಭದಲ್ಲೇ ಶಿಸ್ತಿನ ಅರಿವನ್ನು ಉಂಟುಮಾಡಿಕೊಡಬೇಕೆಂದೂ ಸಲಹೆ ಮಾಡಲಾಯಿತು

ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸದಿರುವುದು, ಶಾಲೆಯ ಒಳಾಡಳಿತದಲ್ಲಿ ಇತರರು ಪ್ರವೇಶಿಸದಂತೆ ತಡೆಯಲು ಹೆಡ್‌ಮಾಸ್ಟರಿಗೆ ಹೆಚ್ಚು ಅಧಿಕಾರವೀಯುವುದು, ಉಪಾಧ್ಯಾಯರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದು, ಅಧ್ಯಾಪಕರ ವರ್ತನೆ ಬಗ್ಗೆ ಕಟ್ಟುನಿಟ್ಟಾದ ನಿಬಂಧನೆಗಳನ್ನು ತರುವುದು, ಶಾಲೆಗಳಲ್ಲಿ ಮಾತ್ರ ಖಾಸಗೀ ಪಾಠ ಹೇಳಿಕೊಡಲೇರ್ಪಾಡು ಮಾಡುವುದು— ಇವೇ ಮುಂತಾದ ಹಲವು ಪರಿಹಾರಗಳನ್ನು ಗೋಷ್ಠಿಯು ಸೂಚಿಸಿತು ಎಲ್ಲಾ ಶಾಲೆಗಳಲ್ಲೂ ಆಯಾ ಪ್ರದೇಶಕ್ಕೆ ಅನುಗುಣವಾಗಿ ವೃತ್ತಿ ಶಿಕ್ಷಣವನ್ನು ಏರ್ಪಡಿಸಬೇಕೆಂದೂ ಸೂಚಿಸಲಾಯಿತು

ಝುನಕ್ ಝುನಕ್ ಪಾಯಲ್ ಬಾಜೆ ಚಿತ್ರ

ರಾಜಧಾನಿಯ ಪ್ರಭಾ ಚಿತ್ರಮಂದಿರದಲ್ಲಿ ಈಗ ಪ್ರದರ್ಶಿತವಾಗುತ್ತಿರುವ ಝುನಕ್ ಝುನಕ್ ಪಾಯಲ್ ಬಾಜೆ ಚಿತ್ರದ ವೀಕ್ಷಣೆಗಾಗಿ ಪ್ರಭಾ ಚಿತ್ರಮಂದಿರದವರು ಮೊನ್ನೆ ಪತ್ರಿಕಾ ಪ್ರತಿನಿಧಿಗಳನ್ನು ಆಹ್ವಾನಿಸಿದ್ದರು ಈ ವರ್ಣರಂಜಿತ ಚಿತ್ರವು ನೃತ್ಯ ಕಲೆ ಮತ್ತು ಸ್ತ್ರೀ ಪುರುಷ ಸಹಜ ಪ್ರೇಮದ ಸಂಬಂಧವನ್ನೂ ಆಶೆ ಸಂಶಯ, ಭಯ ಸುಖ ಮತ್ತು ಕಷ್ಟಗಳ ಸವಾಲನ್ನೂ, ಅವರ ಪರಿಣಾಮವನ್ನೂ ಸೂಚಿಸಿ ಶ್ರದ್ಧಾವಂತ ಕಲೋಪಾಸಕರ ಪವಿತ್ರ ಪ್ರೇಮವು ಎಂತಹ ಕಷ್ಟ ಬಂದರೂ ಎದುರಿಸಿ, ಸತ್ವಪರೀಕ್ಷೆ ಕಾಲದಲ್ಲಿ ಅಗೋಚರವಾಗಿ ಸಹಾಯವೊದಗಿಸುವುದೆಂಬ ನಂಬಿಕೆಯನ್ನು ಮೂಡಿಸುತ್ತದೆ ಚಿತ್ರದ ಕಥಾವಸ್ತುವು ಒಬ್ಬ ವೃದ್ಧ ಕಲೋಪಾಸಕ ಮಂಗಲಮಹಾರಾಜ್, ಆತನ ಪುತ್ರ ಗಿರಿಧರ ಮತ್ತು ಒಬ್ಬ ನರ್ತನಾಭ್ಯಾಸಿಯಾಗಲಿಚ್ಛಿಸಿದ ಯುವತಿ ನೀಲಾ ಎಂಬುವರ ಸುತ್ತ ಹೆಣೆದುಕೊಂಡಿದೆ ಅಲ್ಲಲ್ಲೇ ಕೆಲವು ಘಟನೆಗಳು ಕೃತಕವೆಂದು ಕಂಡುಬಂದರೂ, ಚಿತ್ರವು ನೃತ್ಯಗೀತೆಯಿಂದ ಪರಿಪೂರ್ಣವಾಗಿದೆ ಒಟ್ಟಿನಲ್ಲಿ ಈ ಕಲೆಬಗ್ಗೆ ಉತ್ತಮ ಭಾವನೆಯನ್ನು ಮೂಡಿಸುವುದು ಕೃಷ್ಣರಾಜಸಾಗರದ ಬೃಂದಾವನ ಮತ್ತು ಇತರ ರಮ್ಯ ಪ್ರದೇಶಗಳನ್ನು ಚಿತ್ರಿಸಿರುವುದು ಮತ್ತೂ ಆಕರ್ಷಕವಾಗಿದೆ ರಾಧಾಕೃಷ್ಣ ನೃತ್ಯ, ಕಡೆಯಲ್ಲಿ ಆಗುವ ನಟರಾಜ ಪಾರ್ವತಿ ನೃತ್ಯವು ಬಹು ಉತ್ತಮವಾಗಿವೆ ಸರ್ವರೂ ಇದನ್ನು ನೋಡಿ ಆನಂದಿಸಬಹುದಾಗಿದೆ

ಪಾಕಿಸ್ತಾನ್ ಮಂತ್ರಿಮಂಡಲದ ಬಿಕ್ಕಟ್ಟು

ನಾಳೆಯಿಂದ ಆರಂಭವಾಗುವ ಪಾಕಿಸ್ತಾನ ರಾಜ್ಯಾಂಗ ಸಭೆಯಲ್ಲಿ ಮಂಡಿಸಬೇಕಾದ ಮಸೂದೆಗಳ ಬಗ್ಗೆ ಪಾಕಿಸ್ತಾನದ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗಿರುವುದೆಂದು ವರದಿಯಾಗಿದೆ [illegible] ಯೂನಿಟ್ ಮಸೂದೆಯನ್ನು ಮಂಡಿಸುವ ಮುನ್ನ ಪ್ರಾದೇಶಿಕ ಸ್ವಾತಂತ್ರ್ಯದ ಮಸೂದೆಯನ್ನು ತರಬೇಕೆಂದು ಹಲವು ಬಂಗಾಳಿ ಮಂತ್ರಿಗಳು ಒತ್ತಾಯ ಮಾಡುತ್ತಾರೆ ಪಶ್ಚಿಮ ಪಾಕಿಸ್ತಾನ ಒಕ್ಕೂಟದ ಮಸೂದೆಯನ್ನು ಮುಂಚೆಯೇ [illegible] ದಂತೆ ಅದನ್ನೂ ತರಬೇಕೆಂದು ಅಭಿಪ್ರಾಯ[illegible]ವಾಗಿದೆ

ವಸ್ತು ಪ್ರದರ್ಶನದಲ್ಲಿ ಜಡೆ ಶೃಂಗಾರ ಸ್ಪರ್ಧೆ

ದಸರಾ ವಸ್ತು ಪ್ರದರ್ಶನದಲ್ಲಿ ಕಳೆದ [illegible] ತಾರೀಕು ಏರ್ಪಾಡಾಗಿದ್ದ ಜಡೆ ಶೃಂಗಾರ ಸ್ಪರ್ಧೆಗೆ ೫-೬ ಮಂದಿ ಮಾತ್ರ ಸ್ಪರ್ಧಿಸಿ[illegible] ೮ ವರ್ಷಕ್ಕಿಂತ ಕಡಿಮೆಯವರು ಮಾತ್ರ ಸ್ಪರ್ಧಿಸಬೇಕೆಂದಿದ್ದರೂ ೧೬ ವರ್ಷದವರಿಗೆ ಬಹುಮಾನವನ್ನು ಕೊಡಲಾಗಿದೆ ಅವನ್ನೂ ಪಕ್ಷಪಾತದಿಂದ ಮಾಡಿರುವಂತೆ ತೋರುತ್ತದೆ [illegible] ವರ್ಷವೂ ಇದೇ ರೀತಿ ಆಯಿತು ವಸ್ತು ಪ್ರದರ್ಶನ ಸಮಿತಿಯವರು ಇನ್ನು ಮುಂದಾದರೂ ಸರಿಯಾದ ವ್ಯವಸ್ಥೆ ಮಾಡುವರೆಂದು ಆಶಿಸುತ್ತೇನೆ ಎಂದು ವಾಚಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಸಯಾಂ-ಬರ್ಮಾ ಗಡಿ ಬಂದ್

ಸಯಾಂ ಮತ್ತು ಬರ್ಮಾ ಗಡಿಯನ್ನು ಮುಚ್ಚುವಂತೆ ಸಯಾಮಿನ ಪ್ರಧಾನಿ ಮಾರ್ಷಲ್ ಪಿಬುಲ್‌ಸಂಗ್ರಾಮ್‌ರವರು ಆಜ್ಞೆ ಮಾಡಿದ್ದಾರೆ ಅಫೀಮಿನ ಕಳ್ಳ ರವಾನೆ ಪ್ರಯತ್ನವನ್ನು ತಡೆಗಟ್ಟಲು ಈ ಕ್ರಮ ಕೈಗೊಂಡುದಾಗಿ [illegible]ಲಾಗಿದೆ ಅಲ್ಲದೆ ಯುನ್ನಾನ್ ಪ್ರದೇಶದ [illegible]ರು ಆಗಾಗ್ಗೆ ದಾಳಿ ನಡೆಸುತ್ತಿರುವುದೂ ಈ ಕ್ರಮ ಕೈಗೊಳ್ಳಲು ಕಾರಣವಾಗಿದೆ

ಮೈಸೂರು ಪೇಟೆ ಧಾರಣೆ

	ರೂ ಆಣೆ	ಮ[illegible]
ಕಡಲೇ ಬೀ	೬ ೪ ೦	೧೩
ಎಳ್ಳು	೩೦ ೧೨ ೦	೩೩
ಹರಳುಬೀಜ	೨ ೯ ೦	೨೪
ಹತ್ತಿ ಬೀಜ	೨೪ ೨ ೦	೨೯
ಉದ್ದು	೪೬ ೦ ೦	೪
ಹೆಸರು	೪೦ ೧೨ ೦	೪೪
ಹಲಸಂದೆ	೧೪ ೨ ೦	೬೩
ತೊಗರಿ	೩೦ ೬ ೦	೩೬
ಹುಣಸೇಹಣ್ಣು	೨ ೧೦ ೦	೩೮
ಮೆಣಸಿನಕಾಯಿ	೪ ೧೦ ೦	೧೩
ಪತ್ತಿ (—ಗೆ ಪೌಂಡಿಗೆ)	೯ ೧೪ ೦	
ತೆಂಗಿನಕಾಯಿ ೧,೦೦೦ ಕ್ಕೆ	೮ ೦	೨೩

ನಿಮ್ಮ ಆಕರ್ಷಣೀಯ ಫೋಟೋ
ಪೋಸ್ಟ್‌ಕಾರ್ಡ್ ಸೈಜಿಗೆ ಒಂದು ರೂಪಾಯಿ
★
ಮುರುಗನ್ ಅಂಡ್ ಕಂಪೆನಿ,
'L' 14. ದಸರಾ ವಸ್ತು ಪ್ರದರ್ಶನ, ಮೈಸೂರು.

NATIONAL LEAGUE,
Anathalaya Buildings,
MYSORE
Offers excellent coaching [illegible]
S S L C Students in all [illegible]
jects (Jan 56)
JOIN AT ONCE
Timings 7-30 to 10 A M
5-30 to 8 P M

ಸರ್ಕಾರಿ ಶಾಲಾ ಅಧ್ಯಾಪಕಿಯರ [illegible]
ಶ್ರೀ ಜಗದಂಬಾ ಶಿಶುವಿಹಾ[illegible]
ದಿವಾನರ ರಸ್ತೆ, ಮೈಸೂರು
ಮೇಲ್ಕಂಡ ಶಿಕ್ಷಣ ತರಗತಿಗಳು ಈಗ ಆರಂಭವಾಗಿವೆ ಈಗಾಗಲೇ ಅರ್ಜಿ ಸಲ್ಲಿಸಿದವರು ಕೂಡಲೇ ಬಂದು ತರಗತಿಗಳಿಗೆ ಸೇರಬೇಕೆಂದು ತಿಳಿಸಲಾಗಿದೆ ಇನ್ನು ಕೆಲವೇ ಸ್ಥಳಗಳಿರುವುದರಿಂದ ಅಪೇಕ್ಷಿಸುವವರು ಕೂಡಲೇ ಬಂದು ಸೇರಬಹುದೆಂದೂ ಸೂಚಿಸಲಾಗಿದೆ

Edited, Printed and Publi[illegible] by A R Nagarajan at Sa[illegible] Press, D Subbiah Road, My[illegible]

ಟೆಲಿಫೋನ್ ನಂ 712

ಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿ
ದರಗಳಿಗೆ ಬರೆಯಿರಿ

ಬಿಡಿಪ್ರತಿ 3 ಕಾಸು

ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
ಆರ್ಣಿ, ಬಿಂಜಿನಿಗ್
ರೇಷ್ಮೆ ಮತ್ತು ಸೂಟಿನ ಸೀರೆಗಳು
ವಿಧವಿಧವಾದ ಡಿಸೈನುಗಳಲ್ಲಿ
ಬಂದಿವೆ ಇಂದೇ ಭೇಟಿ ಕೊಡಿ
M.T. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು - ಫೋನ್ 446

ಪುಟ : ೧೦] SADHVI . MONDAY 7-11-1955 ಮೈಸೂರು ಸೋಮವಾರ ೭-೧೧-೧೯೫೫ [ಸಂಚಿಕೆ : ೫೮

ಭಾರತದ ನಾಯಕರಿಗೆ ಮೈಸೂರು ಅರಸುಗಳ ಮನವಿ

ಮೈಸೂರು ರಾಜಪ್ರಮುಖರ ಸ್ಥಾನ ಉಳಿಯಬೇಕು

ರಾಷ್ಟ್ರಪತಿ ಅಧ್ಯಕ್ಷ ಮತ್ತು ಪ್ರಧಾನಿಗೆ ಅರಸುಗಳ ಮನವಿ

ಮೈಸೂರು ೬

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್, ಪ್ರಧಾನಿ ನೆಹರೂ, ಗೃಹ ಮಂತ್ರಿ ಗೋವಿಂದ ವಲ್ಲಭ ಪಂತ್ ಅವರಿಗೆ ಮೈಸೂರಿನ ಅರಸು ಜನಾಂಗದ ಪರವಾಗಿ ಶ್ರೀ ಬಸವರಾಜೆ ಅರಸ್, ಹೆಚ್ ... ನರಾಜೆ ಅರಸ್, ಎ ಎಲ್ ಚೆನ್ನರಾಜೆ ... ಎಂ ಎಲ್ ರಾಜೆ ಅರಸ್, ಡಿ ಸಿ ... ಪದ್ಮಸ ರ್ ಮತ್ತು ಎಸ್ ದೇವರಾಜ ಅರಸರು ಮನವಿಯೊಂದನ್ನು ಕಳುಹಿಸಿ, ... ರು ರಾಜಪ್ರಮುಖರ ಸ್ಥಾನವನ್ನು ಉಳಿಸಬೇಕೆಂದು ಪ್ರಾರ್ಥಿಸಿರುತ್ತಾರೆ. ಬ್ರಿಟನ್ನಿನಲ್ಲಿ ... ಸ್ತೆಯು ಮೊರೆಯನ್ನು ಉಳಿಸಿಕೊಂಡಿವೆ ... ಗಣರಾಜ್ಯವಾದ ಭಾರತವು ಕಾಮನ್ ... ಲ್ಲಿ ಸೇರಿಸಲ್ಪಟ್ಟಿದೆ ಅದೇ ರೀತಿ ಭಾರತ ... ರಾಜ್ಯಾಂಗದಲ್ಲ ರಾಜಪ್ರಮುಖರ ಹುದ್ದೆಯ ... ಉಳಿಸಿಕೊಳ್ಳಬಹುದು-ಎಂದು ಅವರುಗಳು ... ಈ ರೀತಿ ಅಭಿಪ್ರಾಯಪಟ್ಟಿರುವರು -- ... ರು ವರ್ಷಗಳಿಗಿಂತ ಹೆಚ್ಚು ಕಾಲದ ... ಮೈಸೂರು ಅರಸು ಮನೆತನವು ಸ್ಥಾಪಿತ ... ಸಂಸ್ಥಾನದ ಆಳರಸರು ಎಲ್ಲೆಯನ್ನು ವಿಸ್ತ ... ಮಗೊಳಿಸಿದ್ದರು ಇಲ್ಲಿನ ಪ್ರಜೆಗಳಿಗೂ ... ಗಳಿಗೂ ಯಾವಾಗಲೂ ಸೌಹಾರ್ದ ಸಂ ... ದೆ ಅರಸರುಗಳು ಪ್ರಜಾ ಸತ್ತಾತ್ಮಕರೂ ... ಪರೂ ಆಗಿರುವರು ಮೈಸೂರು ಯಾ ... ಪ್ರಗತಿ ಪಥದಲ್ಲಿ ನಡೆದು, ಮಾದರಿ ... ನವೆಂದು ಹೆಸರು ಪಡೆದಿದೆ ಈ ಪ್ರಗತಿ ... ದರ ರಾಜರುಗಳ ದೂರದರ್ಶಿತ್ವಕ್ಕೆ ಕು ... ದೆ

... ನಗಳ ಪುನರ್ವಿಂಗಡಣಾ ಸಮಿತಿಯು ... ಮುಖರ ಹುದ್ದೆಗಳನ್ನು ರದ್ದುಗೊಳಿಸು ... ಫಾರಸು ಮಾಡಿರುವ ಬಗ್ಗೆ ನಮಗೆ ವಿ ... ಆಗುತ್ತದೆ ಭಾರತದ ರಾಜ್ಯಾಂಗಕ್ಕಿಂತ ... ಕ ಮುಂದೆ ಮೈಸೂರಿನಲ್ಲಿ ಪ್ರಜಾ ಪ್ರತಿ ... ಮತ್ತು ನ್ಯಾಯವಿಧಾಯಕ ಸಭೆಗಳ ... ರಾ ಸನ್ನಿವೇಶಕ್ಕೆ ತಕ್ಕಂತೆ ಮಿತ ಅಧಿ ... ನ್ನು ನಿಸಲಾಗಿತ್ತು ಮೈಸೂರು ಅರ ... ಸಮಯಾದ ಭಾವನೆಯನ್ನು ತೋರು ... ಪ್ರಜೆಗಳ ಹಿತ ಸಾಧನೆ ಮತ್ತು ಶ್ರೇಯ ... ರ ಗುರಿ

... ಪ್ರಮುಖರ ಹುದ್ದೆಗಳನ್ನು ಮುಂದುವರಿ ... ಅಭಿಪ್ರಾಯ ಒಪ್ಪದೆಂದು ಸಮಿತಿಯ ... ರುತ್ತಾರೆ ಮೈಸೂರಿನ ಮಟ್ಟಿಗೆ ವಸ್ತು ... ಸ್ಥಿತಿ ಬೇರೆಯಾಗಿದೆ ಇಲ್ಲಿನ ಪ್ರಜೆಗಳು ... ಮುಖರನ್ನು ಇಟ್ಟುಕೊಳ್ಳಲು ಇಚ್ಛಿಸಿರು ... ರಾಜಪ್ರಮುಖರ ಹುದ್ದೆಯನ್ನು ಮುಂ ... ವರೆ ಅವರು ತಮ್ಮ ಸ್ವಂತ ಹಿತಗಳನ್ನು ... ಳ್ಳುವುದರಲ್ಲಿ ತೊಡಗಿ, ಆ ಸ್ಥಾನದ ಮ ... ಗ ಮಾಡಿಕೊಳ್ಳಬಹುದೆಂದು ಸಮಿತಿ ... ಪಟ್ಟ ಅಭಿಪ್ರಾಯವು ಮೈಸೂರು ರಾ ... ರ ಬಗ್ಗೆ ಸತ್ಯವಾಗುವುದಿಲ್ಲ ಇಲ್ಲಿನ ರಾಜಪ್ರಮುಖರು ಯಾವ ರಾಜಕೀಯ ಪಕ್ಷಕ್ಕೂ ಸೇರಿಲ್ಲ ಅಥವಾ ಯಾರೊಡನೆಯೂ ಜೊತೆಯಿಲ್ಲ ಆದ್ದರಿಂದ ಅವರ ನಿಷ್ಪಕ್ಷಪಾತತೆ ಮತ್ತು ಪ್ರಾಮಾಣಿಕತೆ ಎಗ್ಗೆ ಸಂದೇಹಪಡಲು ಅವಕಾಶವೇ ಇಲ್ಲ

ರಾಜಪ್ರಮುಖರ ಪದ್ಧತಿಯು ಭಾರತದ ರಾಜ್ಯಾಂಗದ ಸ್ವರೂಪಕ್ಕೆ ವ್ಯತಿರಿಕ್ತವಾಗಿರುವುದಿಲ್ಲ, ಆದ್ದರಿಂದ ಅವರ ಸ್ಥಾನವನ್ನು ಮುಂದುವರಿಸುವುದು ಬೇಕೆನ್ನುವರು ರಾಜಪ್ರಮುಖರು ಇತರ ಸಂಸ್ಥಾನಗಳಂತೆ ರಾಜ್ಯಾಂಗದ ಅಧಿಕಾರ ಹೊಂದಿದ ಗೌರ್ನರುಗಳಂತೆಯೇ ... ಮಾತ್ರ ಅನುಭವಿಸಬಹುದು. ಗೌರ್ನರರನ್ನು ಆಗಾಗ್ಗೆ ನೇಮಿಸಲಾಗುವುದು. ರಾಜಪ್ರಮುಖರಿಗೆ ಭಾರತದ ರಾಷ್ಟ್ರಪತಿಯವರಲ್ಲಿ ಸ್ಥಾನವಿರುವುದರಿಂದ ಅವರ ಪ್ರತಿಯೊಂದು ನಿಯಮನಕ್ಕೂ ಒಂದು ವಿಶಾಲತೆಯಿದೆ

ಮೈಸೂರು ಸಂಸ್ಥಾನವು ಭಾರತದಲ್ಲಿ ಒಕ್ಕೂಟವಾದ ಸಮಯದಲ್ಲಿ ಇಲ್ಲಿನ ಅರಸರಿಗೆ ಕೊಟ್ಟ ಸ್ಥಾನಕ್ಕೆ ವರದಿ ಸಮಿತಿಯು ವಿರೋಧವನ್ನು, ಅಸಮಂಜಸವೂ ಆಗಿದೆ ಐಕ್ಯದ ಸಂದರ್ಭದಲ್ಲಿ ಮೈಸೂರು ಹೊಂದಿದ್ದುದು ಮೈಸೂರು ಅರಸರಿಗೆ ಅವರ ಅನುಭವಕ್ಕೆ ಒಪ್ಪಿ ಸೇರಿ ಎಲ್ಲ ಪವಿತ್ರವಾದ ಒಪ್ಪಂದ ಮೂಲಕವಾಗಿ ... ಭಾರತ ಸರ್ಕಾರದವರು ವಾಗ್ದಾನವಿತ್ತಿರುವರು ಈ ವಾಗ್ದಾನವನ್ನು ಸಂಸ್ಥಾನದ "ಐಕ್ಯತೆ ಪ್ರಗತಿ ಮತ್ತು ಶಾಂತಿಗಾಗಿ" ಉಳಿಸಿಕೊಳ್ಳಲಾಗುವುದೆಂದು ನಾವು ನಂಬಿದ್ದೇವೆ ಭಾರತ ಸರ್ಕಾರಕ್ಕೂ, ಮೈಸೂರು ರಾಜರಿಗೂ ಆಗಿರುವ ಒಪ್ಪಂದಕ್ಕೆ ಪವಿತ್ರತೆ ಇದೆ

ಮೈಸೂರು ರಾಜಪ್ರಮುಖರು ಅತ್ಯಂತ ಪ್ರಜ್ಞಾಯುತ ಎಂದರಲ್ಲಿ ಒಪ್ಪಿರಾಗಿ ಪ್ರಜೆಗಳ ಪ್ರೀತಿಗೆ ವಿಶೇಷವಾಗಿ ಪಾತ್ರರಾಗಿರುವರು ಮನರಾಜ್ಯವನ್ನು ನೋಡಿದವರಾರಿಗೇ ಆಗಲಿ ಇದು ವ್ಯಕ್ತವಾಗುವುದು ಈ ಸಂಬಂಧವನ್ನು ಅನವಶ್ಯಕವಾಗಿ ಕೆಡಿಸುವುದರಿಂದ ರಾಜಪ್ರಮುಖರ ಹುದ್ದೆಯ ರದ್ದಿಯಾತಿಯು ಇಲ್ಲಿನ ಪ್ರಜೆಗಳ ಅಭಿಲಾಷೆಗೆ ವಿರೋಧವಾಗಿದೆ ಆದ್ದರಿಂದ ಮೈಸೂರು ರಾಜಪ್ರಮುಖರ ಹುದ್ದೆಯನ್ನು ಉಳಿಸಬೇಕೆಂದು ನಾವು 'ನಮ್ಮ ಶಕ್ತಿಯುಳ್ಳಷ್ಟು' ಒತ್ತಾಯ ಮಾಡಿ ಪ್ರಾರ್ಥಿಸುತ್ತೇವೆ

೧೦ ರಂದು ವಿಶ್ವವಿದ್ಯಾಲಯ ಪರೀಕ್ಷಾ ಫಲಿತಾಂಶಗಳ ಪ್ರಕಟಣೆ

ಬರುವ ಗುರುವಾರ ೧೦ ನೇ ತಾರೀಕು ಬೆಳಗ್ಗೆ ೧೧ ಗಂಟೆಗೆ ವಿಶ್ವವಿದ್ಯಾನಿಲಯದ ಇಂಟರ್ ಆರ್ಟ್ಸ್, ಸೈನ್ಸ್, ಕಾಮರ್ಸ್, ಬಿ ಕಾಂ ಬಿ ಎ, ಬಿ ಎಸ್ ಸಿ, ಬಿ ಎಲ್, ಬಿ ಎ ಆನರ್ಸ್ ಪ್ರಿಲಿಮಿನರಿ, ಬಿ ಎಸ್ ಸಿ ಆನರ್ಸ್ ಪ್ರಿಲಿಮಿನರಿ, ಬಿ ಎಸ್ ಸಿ ಟೆಕ್ಸ್‌ಟೈಲ್ಸ್, ಬಿ ಎಸ್ ಸಿ ಅಗ್ರಿಕಲ್ಚರ್, ಎಲ್ ಎಂ ಪಿ ಮತ್ತು ಇಂಜನಿಯರಿಂಗ್ ಸೆಪ್ಟೆಂಬರ್ ಪರೀಕ್ಷಾ ಫಲಿತಾಂಶಗಳು ಪ್ರಕಟವಾಗುವುವು

ಕಳವು

ಕಸಬ ಹಾದಿನಲ್ಲಿ ಶ್ರೀ ಸುಂದರರಾಜೇ ಅರಸರವರ ಮನೆ ಕೊಟ್ಟಿಗೆಯಲ್ಲಿ ಕಟ್ಟಿದ್ದ ಸುಮಾರು ೫೦೦ ರೂ ಬೆಲೆಯ ಎರಡು ಹಸುಗಳನ್ನು ನೆನ್ನೆ ರಾತ್ರಿ ಅಪಹರಿಸಲಾಗಿದೆ

ಮುಖ್ಯ ಮಂತ್ರಿತ್ವ ಹೋದರೂ ಒಪ್ಪಂದಕ್ಕೆ ಶ್ರಮಿಸುವೆ

ಸಂಸ್ಥಾನದ ಭವಿಷ್ಯದ ಬಗ್ಗೆ ಹನುಮಂತಯ್ಯನವರ ಹೇಳಿಕೆ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ... ಯಲ್ಲಿ ಭಾಷಣ ಮಾಡಿ, ತಾವು ಮುಖ್ಯ ಮಂತ್ರಿತ್ವವನ್ನು ಕಳೆದುಕೊಂಡರೂ ಚಿಂತೆಯಿಲ್ಲವೆಂದೂ, ಏಕೀಕರಣವಾದಿಗಳು ಮತ್ತು ವಿರೋಧವಾದಿಗಳಲ್ಲಿ ಸಾಮರಸ್ಯ ಮತ್ತು ಒಪ್ಪಂದವಾಗಲು ಯತ್ನಿಸುವುದಾಗಿಯೂ ತಿಳಿಸಿದರು ... ಸ್ವಂತ ವಾದವು ಸರಿಯಲ್ಲವೆಂದು ಅವರು ... ಹೇಳಿದರು ... ಬಗ್ಗೆ ಫಜಲ್ ಅಲಿ ಸಮಿತಿ ವರದಿಯು ಅನ್ಯಾಯ ಮಾಡಿದೆಯೆಂದೂ, ... ಮೈಸೂರು ಸಂಸ್ಥಾನದಿಂದ ... ಪ್ರದೇಶದ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಸಿಗುವುದೆಂದೂ ಅವರು ನುಡಿದರು

... ಅವರಿಗೆ ... ಮನವಿಗಳನ್ನು ಅರ್ಪಿ ... ಮೈಸೂರು ... ನಾವು ... ಬೇಕೆಂದು ಜನರು ... ಇದ್ದರು

ಕರ್ನಾಟಕ ಏಕೀಕರಣದ ಬಗ್ಗೆ ಚರ್ಚೆ

ರಾಜರ್ಷಿ ... ಯವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನೆನ್ನೆ ಶ್ರೀ ಡಿ ಸಂ ... ರವರ ಅಧ್ಯಕ್ಷತೆಯಲ್ಲಿ "ಕರ್ನಾಟಕ ಏಕೀಕರಣವು ಮೈಸೂರಿನ ಹಿತ ದೃಷ್ಟಿಯಿಂದ ಹಾನಿಕರ" ಎಂಬ ವಿಷಯದ ಚರ್ಚೆ ನಡೆಯಿತು "ಸಂಯುಕ್ತ ಕರ್ನಾಟಕ ನಿರ್ಮಾಣದಿಂದ ಯಾವ ತರಹದ ಹಾನಿಯೂ ಮೈಸೂರಿಗೆ ತಪ್ಪುವುದಿಲ್ಲ" ವೆಂದು ... ಹುಮತದಿಂದ ತೀರ್ಮಾನಿಸಲ್ಪಟ್ಟಿತು

ವೆಲ್ಲೂರು ವಾದಿಗೆ ನೈಟಿಂಗೇಲ್ ಪದಕ

ದೆಹಲಿಯ ವಾದಿಯರ ಕಾಲೇಜಿನ ಪ್ರಿನ್ಸಿಪಾಲ್ ಮಾರ್ಗರೆಟ್ ಕ್ರೇಗ್ ಮತ್ತು ವೆಲ್ಲೂರಿನ ದಾದಿಯರ ಶಾಲೆ ... ಫ್ಲಾರೆನ್ಸ್ ಟೈಲರ್ ಇವರಿಬ್ಬರಿಗೆ ರಾಷ್ಟ್ರಾಧ್ಯಕ್ಷರು ಫ್ಲಾರೆನ್ಸ್ ನೈಟಿಂಗೇಲ್ ಪದಕಗಳನ್ನು ಕೊಟ್ಟಿರುವರು ... ಪದಕ ... ಮುಂದಿನ ಈ ... ಬಹುಮಾನವನ್ನು ಕೊಡಲಾಗುವುದು

ಕಳ್ಳನೋಟುಗಳ ಸಾಗಾಣಿಕೆ ಪತ್ತೆ

ಕೊಲಂಬೊ ಪೊಲೀಸರು ಭಾರತ ಮತ್ತು ಸಿಂಹಳಗಳ ನಡುವೆ ಕಳ್ಳ ನೋಟುಗಳ ಚಲಾವಣೆಯನ್ನು ಪತ್ತೆ ಹಚ್ಚಿರುತ್ತಾರೆ ಬೊಂಬಾಯಿ ನಗರವು ಈ ಕೃತ್ಯದ ಮುಖ್ಯ ಕೇಂದ್ರವೆಂದೂ, ಸಿಂಹಳ ಮತ್ತು ಭಾರತದಲ್ಲಿ ಇರುವರೆಗೆ ... ಕೋಟಿ ರೂ ನಕಲಿ ನೋಟುಗಳನ್ನು ಚಲಾವಣೆ ಮಾಡಲಾಗಿರುವುದೆಂದೂ ವರದಿಯಾಗಿದೆ ಫೋರ್ಜರಿ ಮಾಡಿದ ನೋಟುಗಳನ್ನು ಭಾರತದಿಂದ ... ಪುಸ್ತಕಗಳ ಹಾಳೆಗಳಲ್ಲಿ ಇಟ್ಟು ಸಾಮಾನ್ಯ ಭಾಗದಲ್ಲಿ ಕಳುಹಿಸಲಾಗುತ್ತಿತ್ತೆಂದೂ, ಅಲ್ಲಿನ ಭಾರತೀಯರು ... ದಲ್ಲಿ ಅವುಗಳನ್ನು ಚಲಾವಣೆ ಮಾಡುತ್ತಿದ್ದರೆಂದೂ ವರದಿಯಾಗಿದೆ

ಮೈ ಸುಟ್ಟು ಯುವತಿ ಮತ್ತು ಮಗುವಿನ ಮರಣ

ಮೈಸೂರು ೬

ವಾಣಿವಿಲಾಸ ಮೊಹಲ್ಲೆಯಲ್ಲಿ ಶ್ರೀಮತಿ ... ಎಂಬ ಸುಮಾರು ೨೦ ವರ್ಷದ ಯುವತಿಯು ಒಲೆ ಹತ್ತಿರ ಕುಳಿತಿದ್ದಾಗ ಬೆಂಕಿಯು ಸೀರೆಗೆ ತಗಲಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟು ನೆನ್ನೆ ಮೃತಪಟ್ಟರು.

ಮೈಸೂರು ತಾಲ್ಲೂಕಿನ ... ನಾರಾಯಣಪ್ಪ ಎಂಬುವರ ೬ ವರ್ಷದ ಮಗ ಸತ್ಯನಾರಾಯಣ ಮನೆಯಲ್ಲಿ ರಾತ್ರಿ ಮಲಗಿದ್ದಾಗ ಪಕ್ಕದಲ್ಲಿ ಇಟ್ಟಿದ್ದ ಸೀಮೆಯೆಣ್ಣೆ ದೀಪವು ಉರುಳಿ ಹಾಸಿಗೆ ಹತ್ತಿಕೊಂಡು ಸುಟ್ಟ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟು ನೆನ್ನೆ ಮೃತನಾದನು

ದರೋಡೆಕಾರರನ್ನು ಹಿಡಿಯುವಲ್ಲಿ ಮೊಕದ್ದಮೆ

ಮುಬ್ಬರಾಯನಕೆರೆ ಬಳಿ ಚಿಕ್ಕ, ನಜೀರ್ ಮತ್ತು ರಾಮ್ ಎಂಬುವರು ಲಕ್ಷ್ಮೀಪುರದ ... ಯ ವರ್ತಕ ... ರಾಮಯ್ಯ ಎಂಬುವರನ್ನು ಹೊಡೆದು ಗಾಯ ಮಾಡಿದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ ಅವರುಗಳು ಕಳವು ಮಾಡಿದ ... ಪಡಿಸಲಾಗಿದೆ

ಪ್ರಸನ್ನ ... ರಸ್ತೆಯಲ್ಲಿರುವ ಶ್ರೀ ಯಾಮುನಾಚಾರ್ಯರ ಮನೆ ಬೀಗ ತೆಗೆದು ಸುಮಾರು ೨೦೦ ರೂ ಬೆಲೆಯ ಬೆಳ್ಳಿ ಸಾಮಾನುಗಳನ್ನು ಅಪಹರಿಸಲಾಗಿದೆ

ಸರ್ಕಾರಿ ಬಸ್ಸು ... ಸ್ಟೇಷನ್ ಮತ್ತು ... ಹಿಂದೆ ಕಳವು ಮಾಡಿದ್ದ ... ಹಿಡಿಯಲಾಗಿದೆ

ಫಜಲಾಲಿ ಸಮಿತಿ ವರದಿ ಬಗ್ಗೆ ಹೆಚ್ಚು ಬದಲಾವಣೆ ಇಲ್ಲ

ನಾಳೆಯಿಂದ ದೆಹಲಿಯಲ್ಲಿ ಆರಂಭವಾಗುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯನ್ನು ಪರಿಶೀಲಿಸಲಾಗುವುದು ಹೆಚ್ಚು ಬದಲಾವಣೆಗಳನ್ನು ಮಾಡದೆ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಲು ಕಾಂಗ್ರೆಸ್ ಪ್ರಕಟಿಸಿದ ಒಪ್ಪುವುದೆಂದು ಹೇಳಲಾಗಿದೆ. ಬೊಂಬಾಯಿ ಸಂಸ್ಥಾನವನ್ನು "ಗುಜರಾತ್", ವಿದರ್ಭ ಸೇರಿದ ಮಹಾರಾಷ್ಟ್ರ ಮತ್ತು ಬೊಂಬಾಯಿ ನಗರಗಳಾಗಿ ವಿಂಗಡಿಸುವ ಏರ್ಪಾಡನ್ನು ಸಮಿತಿಯು ಸರಿಯೆನ್ನಬಹುದು

ಮಹಾರಾಷ್ಟ್ರದ ಮಂತ್ರಿಗಳ ರಾಜೀನಾಮೆಗೆ ಒತ್ತಾಯ

ಬೊಂಬಾಯಿಯಲ್ಲಿ ನೆನ್ನೆ ಶ್ರೀ ... ನಾಗಿಂದ್ ... ಅವರ ಆಶ್ರಯದಲ್ಲಿ ಸೇರಿದ್ದ ... ಪ್ರತಿನಿಧಿಗಳ ಸಭೆಯು ಮಹಾರಾಷ್ಟ್ರ ಪ್ರದೇಶದಿಂದ ಆರಿಸಲ್ಪಟ್ಟಿರುವ ಎಲ್ಲಾ ಮಂತ್ರಿಗಳು, ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳ ಸದಸ್ಯರು ಮುಂತಾದವರು ರಾಜೀನಾಮೆ ಕೊಡುವಂತೆ ಸಂಯುಕ್ತ ಮಹಾರಾಷ್ಟ್ರ ಪರಿಷತ್ತು ಒತ್ತಾಯಿಸಬೇಕೆಂದು ನಿರ್ಣಯ ಮಾಡಿತು ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯು ಮಹಾರಾಷ್ಟ್ರ ಜನರಿಗೆ ತುಂಬಾ ಅನ್ಯಾಯ ಮಾಡಿರುವುದೆಂದು ಸಭೆಯು ತಿಳಿಸಿತು.

ದೆಹಲಿಗೆ ಸಂಸ್ಥಾನದ ನಾನಾ ಮುಖಂಡರ ಯಾತ್ರೆ

ಬೆಂಗಳೂರು ೭

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಂಸ್ಥಾನ ಪುನರ್ವಿಂಗಡಣೆ ಸಮಿತಿ ಶಿಫಾರಸಿನ ಬಗ್ಗೆ ನಾಳೆ ದೆಹಲಿಯಲ್ಲಿ ಚರ್ಚೆ ನಡೆಸಲಿರುವುದರಿಂದ ಮೈಸೂರು ಸಂಸ್ಥಾನ ಮತ್ತು ಕರ್ನಾಟಕದ ಭವಿಷ್ಯವನ್ನು ಕುರಿತು ತಮ್ಮ ನಿಲುವನ್ನು ಸೂಚಿಸಲು ದೆಹಲಿಗೆ ಸಂಸ್ಥಾನದ ನಾನಾ ಮುಖಂಡರು ತೆರಳುತ್ತಿದ್ದಾರೆ. ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಎ. ಭೀಮಪ್ಪನಾಯಕ್, ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ ಮುಂತಾದವರು ಪ್ರಯಾಣ ಮಾಡಿರು ತ್ತಾರೆ. ತುಮಕೂರಿನ ಟಿ. ಸುಬ್ರಹ್ಮಣ್ಯಂ, ವಿಧಾನ ಸಭಾ ಸದಸ್ಯರಾದ ಟಿ. ಹುಚ್ಚೇಗೌಡ, ಜಿ. ಎಚ್. ಇಮಾಂ, ಎಸ್. ಗೋಪಾಲಗೌಡ, ಮಹಾಲಕ್ಷ್ಮಿ, ರಾಮರೆಡ್ಡಿ ಮುಂತಾದವರೂ ತೆರಳುವರು. ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯ, ಬಿ. ಎಂ. ಶ್ರೀನಪ್ಪ ಮುಂತಾದವರು ಈಗಾಗಲೇ ದೆಹಲಿಯಲ್ಲಿರುವರು. ಅವರು ಶ್ರೀ ಕೆ. ಸಿ. ರೆಡ್ಡಿ ಮತ್ತು ಎಂ. ಪಿ. ಕೃಷ್ಣಪ್ಪನವರನ್ನು ಭೇಟಿ ಮಾಡಿದ್ದರು.

ಕರ್ನಾಟಕದ ನಿಯೋಗದ ಪರವಾಗಿ ಚನ್ನಬಸಪ್ಪ ಅಂಬಲಿ, ನಿಜಲಿಂಗಪ್ಪ ಮತ್ತು ಬೊಂಬಾಯಿ ಮಂತ್ರಿ ಎಂ. ಪಿ. ಪಾಟೀಲರು ದೆಹಲಿಯಲ್ಲಿ ರಾಷ್ಟ್ರ ನಾಯಕರೊಡನೆ ಚರ್ಚೆ ನಡೆಸುವರು.

ಗೋವಾದಲ್ಲಿ ಅನೇಕರ ಬಂಧನ

ಗೋವೆಯ ಸತ್ತಾರಿ ತಾಲ್ಲೂಕು ಮತ್ತು ಇತರ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಮೂಹಿಕ ವಸ್ತುಗಿಡಗಳಾಗುತ್ತಿವೆಯೆಂದೂ ರಾಷ್ಟ್ರೀಯರ ಚಳುವಳಿಯನ್ನು ಮಟ್ಟಹಾಕಲು ಅನೇಕ ಗೃಹಗಳ ಶೋಧನೆಯಾಗುತ್ತಿರುವುದಾಗಿಯೂ ವರದಿಯಾಗಿದೆ. ಅಲ್ಲಿ ಪೋರ್ಚುಗೀಸರ ವಿರುದ್ಧ ಚಳುವಳಿಯು ಹೆಚ್ಚಾಗುತ್ತಿರುವುದೆಂದು ಗೊತ್ತಾಗಿದೆ.

ಭಂಗಿ ಕೆಲಸ ಹೋಗಬೇಕೆಂದು ಜಗಜೀವನರಾಂ ಸಲಹೆ

ಭೂಪಾಲಿನಲ್ಲಿ ೯೦ ಸಾವಿರ ರೂ. ವೆಚ್ಚದಿಂದ ಜಿಲ್ಲೆಯ ಸರ್ಕಾರದವರು ಧರ್ಮ ಬಾಜಾರದ ಪ್ರದೇಶದಲ್ಲಿ ಹರಿಜನರಿಗಾಗಿ ನಿರ್ಮಿಸಿರುವ ೩೩ ಬಾಡಿಗೆ ನಿವಾಸಗಳಿರುವ ಎರಡಂತಸ್ತಿನ ಭಾರಿ ಗೃಹದ ಆರಂಭೋತ್ಸವವನ್ನು ನೆರವೇರಿಸುತ್ತಾ, ಕೇಂದ್ರ ಮಂತ್ರಿ ಜಗಜೀವನರಾಂರವರು ಜಾಡಮಾಲಿಗಳ ಕೆಲಸವು ಬಹುಕಾಲ ಮುಂದುವರಿಯಬಾರದೆಂದೂ, ಹೇಸಿಗೆ ತೆಗೆಯುವುದನ್ನು ಒಂದು ಕೋಮಿನವರು ಮಾಡಲು ಬಿಡುವುದು ಮಾನವೀಯತ್ವಕ್ಕೆ ವಿರೋಧವೆಂದೂ ಹೇಳಿರುವರು.

ಬೆಂಗಳೂರು ರೇಡಿಯೋ ಕಾರ್ಯಕ್ರಮ

[illegible]

ಹೈದರಾಬಾದು ಮುಖ್ಯ ಮಂತ್ರಿ ಮೋಟಾರಿಗೆ ಕಲ್ಲೆಸೆತ

ಸಿಕಂದರಾಬಾದಿನಲ್ಲಿ ಆಂಧ್ರದ ಬ್ಯಾಂಕಿನ ಶಾಖೆಯೊಂದನ್ನು ತೆರೆಯಲು ಹೈದರಾಬಾದು ಮುಖ್ಯ ಮಂತ್ರಿ ಬಿ. ರಾಮಕೃಷ್ಣರಾಯರು ಮೊನ್ನೆ ಬಂದಾಗ ವಿಶಾಲಾಂಧ್ರಕ್ಕೆ ವಿರೋಧಿಗಳಾದ ೩,೦೦೦ ಜನರು ಕಪ್ಪು ಬಾವುಟಗಳನ್ನು ಹಿಡಿದು ಪ್ರದರ್ಶನ ಮಾಡಿ, ತೆಲಂಗಾಣ ರಾಜ್ಯವೇ ತಮಗೆ ಬೇಕೆಂದು ಕೂಗಿ ಮುಖ್ಯ ಮಂತ್ರಿಗಳ ಕಡೆಗೆ ಕಲ್ಲುಗಳನ್ನು ಎಸೆದರೆಂದು ವರದಿಯಾಗಿದೆ. ರಾಮಕೃಷ್ಣರಾಯರು ಸ್ವಲ್ಪವೂ ಕಾಳಜಿ ವಹಿಸದೆ ಸುಮ್ಮನಿದ್ದರು. ಸಮಾರಂಭವು ಮುಗಿದ ನಂತರ ವಿಶಾಲಾಂಧ್ರದ ವಿರೋಧಿಗಳ ನಾಯಕ [illegible] ನಾರಾಯಣಸ್ವಾಮಿ ಎಂಬಾತನು ಮುಖ್ಯ ಮಂತ್ರಿಯವರಿಗೆ ತಾನು ಹಿಡಿದಿದ್ದ ಕಪ್ಪು ಬಾವುಟವನ್ನು ಕೊಟ್ಟು, ವಿಶಾಲಾಂಧ್ರಕ್ಕೆ ಜನರು ತೀವ್ರವಾಗಿ ವಿರೋಧವಾಗಿರುವರೆಂದು ತಿಳಿಸಿದಾಗ, ಮುಖ್ಯ ಮಂತ್ರಿಗಳು ಆತನಿಗೆ ಬುದ್ಧಿವಾದ ಹೇಳಿ, ಅಭಿಪ್ರಾಯವನ್ನು ಸೂಚಿಸಲು ಅವನು ತೋರಿಸಿದ ಮಾರ್ಗವು ಸರಿಯಲ್ಲವೆಂದೂ, ಮನವಿಯೊಂದನ್ನು ಸಲ್ಲಿಸಿದರೆ ಮುಂದಿನ ಕ್ರಮ ಜರುಗಿಸುವುದಾಗಿಯೂ ತಿಳಿಸಿದರು. ಪೋಲೀಸರು ಲಾಠಿ ಪ್ರಹಾರ ಮಾಡುವುದರಲ್ಲಿದ್ದು, ಅವರನ್ನು ಮುಖ್ಯ ಮಂತ್ರಿಗಳು ತಡೆದರೆಂದೂ ಹೇಳಲಾಗಿದೆ.

ಇಂಡೋಚೀನಾ ಕಾಟಿಸ್ಟಿಕ ಸಮಿತಿಯಲ್ಲಿ ಒಡಕು

ಭಾರತ ಮತ್ತು ಪೋಲೆಂಡಿಗೂ, ಕೆನಡಕ್ಕೂ ಭಿನ್ನ ಭಾವ

ಇಂಡೋಚೀನಾದ ಉತ್ತರ ಮತ್ತು ದಕ್ಷಿಣ ವಿಯಟ್ನಾಂ ಸರ್ಕಾರಗಳ ನಡುವೆ ಸಂಧಾನದ ಮಾತುಕತೆಗಳನ್ನು ಏರ್ಪಡಿಸುವ ವಿಧಾನದಲ್ಲಿ ಅಂತರ ರಾಷ್ಟ್ರೀಯ ತಾಟಸ್ಥ್ಯ ಸಮಿತಿಯ ೩ ಸದಸ್ಯ ರಾಷ್ಟ್ರಗಳ ಪೈಕಿ ಕೆನಡವು ಭಾರತ ಮತ್ತು ಪೋಲೆಂಡುಗಳ ಅಭಿಪ್ರಾಯ ಭೇದ ಹೊಂದಿದೆಯೆಂದು ಕೆನಡಾ ಮಂತ್ರಿ ಲೆಸ್ಟರ್ ಪಿಯರ್ಸನ್‌ರು ತಿಳಿಸುತ್ತಾರೆ. ಭಾರತವು ಸಮಿತಿಯ ಅಧ್ಯಕ್ಷತೆ ವಹಿಸಿ ಬಹು ಕಠಿಣ ಕಾರ್ಯವನ್ನು ನಿರ್ವಹಿಸುತ್ತಿರುವುದನ್ನು ಅವರು ಪ್ರಶಂಸಿಸುತ್ತಾರೆ.

ದೆಹಲಿಗೆ ಎಸ್. ಚನ್ನಯ್ಯನವರ ಪ್ರಯಾಣ

ದೆಹಲಿಯಲ್ಲಿ ೭ ರ ಸೇರಲಿರುವ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆನ್ನೆ ವಿಮಾನದಲ್ಲಿ ಪ್ರಯಾಣ ಮಾಡಿದರು. ಅವರು ೧೦ ನೇ ತಾರೀಕು ವಾಪಸು ಬರುವರು. ಸಮ್ಮೇಳನದಲ್ಲಿ ಸಂಸ್ಥಾನ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಚರ್ಚಿಸಲಾಗುವುದು.

ರಷ್ಯಾ, ಇರಾಕ್, ಅರೇಬಿಯಾ ಮುಖಂಡರಿಗೆ ಮೈಸೂರು ದಂತದ ಸಾಮಾನು

ಭಾರತಕ್ಕೆ ಆಗಮಿಸಲಿರುವ ರಷ್ಯದ ಪ್ರಧಾನಿ ಬುಲ್ಗಾನಿನ್, ಸೌದಿ ಅರೇಬಿಯದ ಇಬ್ನ್ ಸೌದ್ ಮತ್ತು ಇರಾಕಿನ ದೊರೆಯವರಿಗೆ ಮೈಸೂರು ಮತ್ತು ತಿರುವಾಂಕೂರಿನಲ್ಲಿ ತಯಾರಿಸಲಾಗುತ್ತಿರುವ ದಂತದ ಸಾಮಾನು, ಕಾಶೀ ಪೀತಾಂಬರ, ಕಾಶ್ಮೀರದ ರತ್ನಗಂಬಳಿ ಮತ್ತು ಇತರ ಗಂಧದ ಸಾಮಾನುಗಳನ್ನು ಜ್ಞಾಪಕಾರ್ಥವಾಗಿ ಭಾರತ ಸರ್ಕಾರದವರು ಕೊಡಲಿರುವರು.

ಭಿಕ್ಷಾವೃತ್ತಿ ನೀಗಿಸಲು ೨ ಕೋಟಿ ರೂ. ಯೋಜನೆ

ಭಾರತದಲ್ಲಿರುವ ೨೦ ಲಕ್ಷ ಭಿಕ್ಷುಕರ ಪುನರ್ವ್ಯವಸ್ಥೆಗಾಗಿ ೨ ಕೋಟಿ ರೂ. ಯೋಜನೆಯನ್ನು ಯೋಜನಾ ಮಂಡಲಿಯ ಸಮಾಜ ಕಲ್ಯಾಣ ವಿಭಾಗದವರು ಸಿದ್ಧಗೊಳಿಸಿರುತ್ತಾರೆ. ಮಾದರಿ ಗೃಹಗಳನ್ನೂ, ಆಶ್ರಯ ಸ್ಥಾನಗಳನ್ನೂ ಕಟ್ಟಲು ಆಲೋಚಿಸಲಾಗಿದೆ. ಸಂಸ್ಥಾನದಿಂದ ಸಂಸ್ಥಾನಕ್ಕೆ ಭಿಕ್ಷುಕರ ಓಡಾಟವನ್ನು ನಿಷೇಧಿಸಬೇಕೆಂದು ಸಲಹೆ ಮಾಡಲಾಗಿದೆ. ಭಿಕ್ಷುಕರು ಮಕ್ಕಳನ್ನು ಸ್ವಾರ್ಥಕ್ಕಾಗಿ ತಮ್ಮ ವೃತ್ತಿಯಲ್ಲಿ ಉಪಯೋಗಿಸುವುದನ್ನು ಖಂಡಿಸಲಾಗಿದೆ. ವಿದ್ಯಾವಂತರು ಭಿಕ್ಷಾಟನೆ ನಡೆಸುವುದನ್ನು ತೀವ್ರ ಸಮಸ್ಯೆಯೆಂದು ಪರಿಗಣಿಸಲಾಗಿದೆ. ಹಲವು ಸಂಸ್ಥಾನಗಳಲ್ಲಿ ವಿದ್ಯಾವಂತರು ಈ ವೃತ್ತಿಯನ್ನವಲಂಬಿಸಿರುವರು. ಮದ್ರಾಸಿನಲ್ಲಿ ನಿವೃತ್ತ ಪೋಸ್ಟ್‌ಮಾಸ್ಟರೊಬ್ಬರು ಈ ರೀತಿ ಭಿಕ್ಷೆ ಮಾಡುತ್ತಿದ್ದುದು ವ್ಯಕ್ತಪಟ್ಟಿದೆ. ಮೈಸೂರು ಸಂಸ್ಥಾನದಲ್ಲಿ ಒಂದೇ ವರ್ಷದಲ್ಲಿ ಎರಡು ಸಾವಿರ ಭಿಕ್ಷುಕರನ್ನು ಪೋಲೀಸರು ಬಂಧಿಸಿರುವರು.

ಭೂದಾನ ಚಳುವಳಿ ಭಿಕ್ಷಾಟನೆಯಲ್ಲವೆಂದು ಭಾವೆ

ಆಂಧ್ರದ ಅನಕಪಲ್ಲಿ ತಾಲ್ಲೂಕಿನ ಪರವಾಡ ಎಂಬಲ್ಲಿನ ಇಬ್ಬರು ಜಮೀನುದಾರರು ಕೊಟ್ಟ ದಾನ ಪತ್ರಗಳನ್ನು ಆಚಾರ್ಯ ವಿನೋಬಾ ಭಾವೆಯವರು ಸ್ವೀಕರಿಸಲು ನಿರಾಕರಿಸಿರುತ್ತಾರೆ. ಜಮೀನುದಾರರು ತಮಗಿರುವ ಭೂಮಿಯಲ್ಲಿ ಗಣನೆಗೆ ಬಾರದಿರುವಷ್ಟು ಕಡಿಮೆ ಜಮೀನನ್ನು ದಾನವಾಗಿ ಕೊಡುತ್ತಿರುವರೆಂದೂ, ತಾವು ಭಿಕ್ಷೆಗಾಗಿ ಬಂದಿಲ್ಲವೆಂದೂ ಭೂದಾನ ತತ್ವವನ್ನು ಪ್ರಚಾರ ಮಾಡುವುದಕ್ಕೆ ಬಂದಿರುವುದಾಗಿಯೂ ಅವರು ಹೇಳಿರುತ್ತಾರೆ. [illegible] ತತ್ವವನ್ನು ಒಪ್ಪಿ ದಾನ ಪತ್ರ ಕೊಡುವರೆಂದೂ, ತಾವು ದರಿದ್ರನಾರಾಯಣನ ಪ್ರತಿನಿಧಿಯಾಗಿ ಬಂದಿರುವುದಾಗಿಯೂ, ಬಡವರಿಗೆ ಜಮೀನನ್ನು ಹಂಚುವುದು ಭೂದಾನದ ಗುರಿಯಲ್ಲವೆಂದೂ, ದಾನದ ಮೂಲಕ ಆರ್ಥಿಕ ನ್ಯಾಯವನ್ನು ಸ್ಥಾಪಿಸುವ ಗುರಿಯಿಂದ ಅವರು ನುಡಿದಿರುವರು.

Edited Printed and Published by A. R. Nagarajan at Sadhvi Press, D Subbiah Road Mysore

ಪೋರ್ಚುಗೀಸರ ಗುಂಡಿಗೆ ಭಾರತೀಯನೊಬ್ಬನ ಬಲಿ

ಗೋವಾದಲ್ಲಿ ಬೆಟಿಂ ಎಂಬ ಸ್ಥಳದ ಸಮುದ್ರ ತೀರಯಮೇಲೆ ಲಕ್ಷ್ಮಣರಾವ್ ಎಂಬ ಭಾರತೀಯನೂ ಇತರ ನಾಲ್ವರೂ ದೋಣಿ [illegible] ಹೋಗಿದ್ದರೆಂದೂ ಅವರ ಮೇಲೆ ಗುಂಡು ಹಾರಿಸಲಾಗಿ ಅನೇಕ ಗುಂಡುಗಳು ರಾವ್‌ಗೆ ತಗುಲಿದುವೆಂದೂ, ಪರಿಣಾಮವಾಗಿ ಆಸ್ಪತ್ರೆಯಲ್ಲಿ ಆತನು ಮೃತಪಟ್ಟನೆಂದೂ ವರದಿಯಾಗಿದೆ. [illegible] ಯಲ್ಲಿ ಮದ್ದು ಗುಂಡು ಮತ್ತು ಶಸ್ತ್ರಗಳನ್ನು ವಶಪಡಿಸಿಕೊಳ್ಳಲು ಹೋಗಿದ್ದ ಪೋಲೀಸರೊಡನೆ ಘರ್ಷಣೆಯಾಯಿತೆಂದು ಹೇಳಲಾಗಿದೆ. ಒಬ್ಬ ಪೋರ್ಚುಗೀಸ್ ಪೋಲೀಸನೂ, ಇಬ್ಬರು ಗೋವಾ ಪೋಲೀಸರಿಗೂ ಗಾಯಗಳಾದುವೆಂದೂ ಗೋವಾ ರೇಡಿಯೋ ತಿಳಿಸಿರುತ್ತದೆ.

ಕೊಳಕು ಪ್ರದೇಶಗಳ ನಿರ್ಮೂಲಕ್ಕೆ ನೆಹರೂ ಕರೆ

ಸಂಸ್ಥಾನಗಳ ಸಮಾಜ ಕಲ್ಯಾಣ ಸಚಿವ ಸ್ಥಾನಿಯರ ದ್ವಿತೀಯ ಸಮ್ಮೇಳನವನ್ನು ಪ್ರಧಾನಿ ನೆಹರೂರವರು ಆರಂಭಿಸುತ್ತಾ ದೇಶದಲ್ಲಿರುವ ಎಲ್ಲ ವಿಧವಾದ ಸಾಮಾಜಿಕ ಮತ್ತು ಆರ್ಥಿಕ ಕೆಡಕುಗಳಿಗೆ ಆಶ್ರಯ ಸ್ಥಾನವಾದ ಕೊಳಕು ಪ್ರದೇಶವನ್ನು ನಿರ್ಮೂಲ ಮಾಡಲು ಪ್ರಥಮ ಗಮನ ಕೊಡಬೇಕೆಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಮೌಲಾನಾ ಆಜಾದ್ ಮಾತನಾಡಿ, ಸಮಾಜ ಕಲ್ಯಾಣಕ್ಕಾಗಿ [illegible] ಸಂಸ್ಥೆಗಳಿಗೆ ೪ ಕೋಟಿ ರೂ. ಗಳನ್ನು [illegible] ತಲಾಗಿದೆಯೆಂದು ತಿಳಿಸಿದರು. ಕೇಂದ್ರ ಮಂಡಳಿಯ ಅಧ್ಯಕ್ಷೆ ದುರ್ಗಾಬಾಯಿಯವರು [illegible] ದಿನ ವರ್ಷದ ಕೆಲಸಗಳ ಬಗ್ಗೆ ವಿವರಣೆಯಿತ್ತು ಹಳ್ಳಿಗಳಲ್ಲಿ ಕೆಲಸವನ್ನು ಸಾಗಿಸಲು ೧೫ ಕೋಟಿ ರೂ. ಬೇಕಾಗುವುದೆಂದೂ, ೯೫೦ ಹೊಸ ವಿಸ್ತರಣಾ ಕೇಂದ್ರಗಳನ್ನು ತೆರೆಯಬೇಕಾಗಿದೆಯೆಂದೂ, [illegible],೦೦೦ ಗ್ರಾಮ ಸೇವಕಿಯರು, ೧,೬೦೦ ದಾಯಿಯರು ೬,೦೦೦ ಮಂದಿ ಆಯಗಳಿಗೆ ಶಿಕ್ಷಣ ಕೊಡಬೇಕಾಗಿರುವುದೆಂದೂ ತಿಳಿಸಿದರು.

ವೀರ್ಯ ವೃದ್ಧಿಗೂ, ನರಗಳ ಶಕ್ತಿಗೂ

ಸಾಲಾಮಿಸ್ರಿ ಹಲ್ವ

(Regd)

ಎಸ್. ರಂಗಯ್ಯಶೆಟ್ಟಿ,

[illegible], ಮೈಸೂರು.

ಶೀಘ್ರದಲ್ಲೇ ಬರಲಿದೆ!

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

★

ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ

ಮಹೇಶ್ವರಿ

... ಪಾತ್ರ ...

ಆರ್. ಗಣೇಶ್,

ಸಾವಿತ್ರಿ,

ತಂಗವೇಲು

ಮುಂತಾದವರು

★

THE CHAMPION METROPOLITAN COLLEGE,
Co operators Home, 100 Feet Road, MYSORE

ADMISSIONS

for fresh classes in Typewriting and Shorthand (Leading to October 1956 Exams) are now being received

(Sd) M. S PUTTANNA,
(B Sc N D Com , F I B. (Lon)
Vice-Principal

BEST ROCKING HORSES FOR CHILDREN
— TOY PALACE, MYSORE —

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ-ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು, ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ [illegible]
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ [illegible]

ಸಂಪುಟ : ೧೯] SADHVI : TUESDAY 8-11-1955 ಮೈಸೂರು ಮಂಗಳವಾರ ೮-೧೧-೧೯೫೫ [ಸಂಚಿಕೆ : [illegible]

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳಿಗೆ ನಾಯಕರ ಸೂಚನೆ

ದೆಹಲಿಯಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಭೆ

ನೆಹರೂ, ಪಂತ್ ಮತ್ತು ಢೇಬರ್‌ರವರ ಸೂಚನೆಗಳು

ದೆಹಲಿಯಲ್ಲಿ ನೆನ್ನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಸಭೆಯು ನಡೆದು ೬ ಗಂಟೆಗಳ ಚರ್ಚೆಯ ನಂತರ ಮುಕ್ತಾಯವಾಯಿತು. ಪ್ರಧಾನಿ ನೆಹರೂರವರು ೧೦ ನಿಮಿಷ ಭಾಷಣ ಮಾಡಿ, ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯಲ್ಲಿ ಸೂಚನೆಗಳನ್ನು, ಸಂಬಂಧಪಟ್ಟ ಪಕ್ಷಗಳ ಸಾಮಾನ್ಯ ಒಪ್ಪಿಗೆಯಾದರೆ ಮಾತ್ರ ಮಾರ್ಪಡಿಸಲಾಗುವುದೆಂದೂ, ಹಾಗಿಲ್ಲದಿದ್ದರೆ ಸರ್ಕಾರವು ಸಮಿತಿಯ ಶಿಫಾರಸುಗಳನ್ನು ಒಪ್ಪಬೇಕೆಂದೂ ತಿಳಿಸಿದುದಾಗಿ ವರದಿಯಾಗಿದೆ. ಭಾಷಾವಾರು ಪ್ರಾಂತಗಳ ಪ್ರಶ್ನೆಯು ಬಹಳವಾಗಿ ವಿವಾದಕ್ಕೆ ಎಡೆಕೊಟ್ಟಿರುವುದಾಗಿಯೂ ಅದು ಅದಷ್ಟು ಜಾಗ್ರತೆ ಬಗೆಹರಿಯಬೇಕೆಂದೂ ಅವರು ತಿಳಿಸಿದರು.

ಪಂಡಿತ ಪಂತರು ನೆಹರೂರವರ ಅಭಿಪ್ರಾಯವನ್ನು ಸ್ಪಷ್ಟೀಕರಿಸಿ, ಇಡೀ ದೇಶದ ವಿಷಯವು ವ್ಯಕ್ತಿ ವಿಷಯಗಳಿಗೂ ಪ್ರಧಾನವಾಗಿರುವುದೆಂದು ಹೇಳಿದರು. ಭಾಷಾವಾರು ಭಾವನೆಗೆ ಹೆಚ್ಚು ಮಹತ್ವ ಕಟ್ಟಬಾರದೆಂದೂ, ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಗಮನವೀಯಬೇಕೆಂದೂ ಹೇಳಿದುದಾಗಿ ಗೊತ್ತಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಮಾತನಾಡಿ ಎಲ್ಲ ಪ್ರದೇಶ ಅಧ್ಯಕ್ಷರುಗಳೂ ಪ್ರವರ್ತಿಸಬೇಕು. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು [illegible] ನಿರ್ಧಾರವನ್ನು ಜನಸಾಮಾನ್ಯರಿಗೆ ವಿವರಿಸುವ ಮತ್ತು ಸಮಿತಿ ಶಿಫಾರಸುಗಳನ್ನು [illegible] ತರುವುದರಲ್ಲಿ ಸಹಾಯ ನೀಡುವ [illegible] ವನ್ನು ವಹಿಸಿಕೊಳ್ಳಬೇಕೆಂದೂ, ಎನೇ [illegible] ಅವರು ತಮ್ಮ ಹೊಣೆಯನ್ನು ಬದಲು [illegible] ತಿಳಿಸಿದುದಾಗಿ ಗೊತ್ತಾಗಿದೆ. ಕಾಂಗ್ರೆಸ್ಸು ಈಗ ಸತ್ವ ಪರೀಕ್ಷೆಗೆ ಗುರಿಯಾಗುವದೆಂದೂ, ಪ್ರವಾಹದ ಅಲೆಗಳ ಎದುರಾಗಿ ಈಜಲು ಕಾಂಗ್ರೆಸ್ಸಿನವರು ಅಂಜಬಾರದೆಂದೂ, ಜನರಿಗೆ ಕಾಂಗ್ರೆಸ್ ಅಭಿಪ್ರಾಯವನ್ನು ತಿಳಿಸಬೇಕೆಂದೂ, ಅವರು ಇತರರಂತೆ ಭಾವೋದ್ರೇಕಕ್ಕೆ ಗುರಿಯಾಗಬಾರದೆಂದೂ, ಪರಸ್ಪರ ಭಿನ್ನಾಭಿಪ್ರಾಯವನ್ನು ಒತ್ತಿ ಹೇಳುವ ಬದಲು, ಸ್ನೇಹ ಮತ್ತು ಐಕ್ಯಮತ್ಯಾಭಿಪ್ರಾಯಗಳ ಕಡೆ ಗಮನವೀಯಬೇಕೆಂದೂ ಸೂಚಿಸಿದುದಾಗಿ ಗೊತ್ತಾಗಿದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಮಿತಿ ಶಿಫಾರಸನ್ನು ಎತ್ತಿಹಿಡಿದು, ಅದರಲ್ಲಿ [illegible] ಸಂಬಂಧಪಟ್ಟವರಲ್ಲಿ ಒಪ್ಪಿಗೆ ಅವಶ್ಯಕತೆಯೆಂದು ಸೂಚಿಸುವುದೆಂದು ನಂಬಲಾಗಿದೆ.

ತರುಣರಾಗಲು ಜಪಾನ್ ತರುಣಿಯರ ಅಭಿಲಾಷೆ

ತರುಣಿಯರಾಗುವುದಕ್ಕಿಂತ ತರುಣರಾಗುವುದೆ ಒಳ್ಳೆಯದೆಂದು ಜಪಾನಿನ [illegible] ಟೋಕಿಯೋವಿನ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು ಹೇಳುತ್ತಾರೆ.

ಪೊಲೀಸು ವಾರ್ತೆಗಳು

ಮೈಸೂರು ೮

ಹೊಸ ಬಂಡಿಕೇರಿಯ ನಿವಾಸಿ ನಂಜುಂಡ ಎಂಬಾತನು ನಾಲ್ಕು ಬೆಳ್ಳಿ ನಾಣ್ಯಗಳ ಎಂಬುವುದ [illegible] ಮನೆಯ ಸುಗಳ್ಳರಾದ ಕಳ್ಳನನ್ನು ಮಾರುತ್ತಿದ್ದಾಗ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಅಕ್ಕಿಹೆಬ್ಬಾಳಿನ ನಿವಾಸಿ [illegible] ಎಂಬಾತನು ಮಹಾಜ ಬೀದಿಯಲ್ಲಿ ಸೈಕಲ್ ಪ್ಯಾಂಡಲ್ ಒಂದನ್ನು ಮಾರುತ್ತಿದ್ದಾಗ ಅನುಮಾನದ ಮೇಲೆ ದೇವರಾಜ ಪೊಲೀಸರು ಬಂಧಿಸಲಾಗಿ ಆತನ ಬಳಿ ಒಂದು ಕಳುವಾದ ಸೈಕಲ್ ಸುದ್ದಿ [illegible] ಬಿಡಿ ಭಾಗಗಳು ದೊರಕಿವೆ.

ನೆನ್ನೆ ರಾತ್ರಿ ತನಗಾಗಿ [illegible] ಯಲ್ಲಿ ತಿರುಗುತ್ತಿದ್ದ ಬೆಂಗಳೂರಿನ ಮಹಮದ್ ಯೂಸುಫ್ ಅಲಿಯಾಸ್ ಚೋಟು ಎಂಬಾತನನ್ನು ಮಂಡಿ ಪೊಲೀಸರು ಬಂಧಿಸಿದ್ದಾರೆ.

ಹಳೇ ಸ್ಯಾಚ್ಯುರಿ ತೋಟದ [illegible] ನಲ್ಲಿ ನಿರ್ಮಿಸಲಾಗಿರುವ ಮನೆಯನ್ನು ನೆನ್ನೆ ವಿಚಾರಿಸುತ್ತಿದ್ದಾಗ ಮೇಲಿನಿಂದ ಒಂದು ಬೆಂಚು [illegible] ಬಿದ್ದು ಎಂಬಾತನ ಮೇಲೆ ಬಿದ್ದು ಗಾಯವಾಯಿತು. ಆತನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನಡೆದರೂ ಪ್ರಯೋಜನವಾಗದೆ ನೆನ್ನೆ ಸಂಜೆ ಮೃತಪಟ್ಟನು.

ರೇಡಿಯೋ ಸಂಗೀತ ಸ್ಪರ್ಧೆ ಜಯಶಾಲಿಗಳಿಗೆ ಬಹುಮಾನ

ಅಖಿಲ ಭಾರತ ರೇಡಿಯೋ ಸಂಗೀತ ಸ್ಪರ್ಧೆಯಲ್ಲಿ ಜಯಶಾಲಿಗಳಾದ ೨೨ ಮಂದಿಗೆ ನೆನ್ನೆ ರಾಷ್ಟ್ರಾಧ್ಯಕ್ಷರು ದೆಹಲಿಯಲ್ಲಿ ಬಹುಮಾನಗಳನ್ನು ವಿನಿಯೋಗಿಸಿದರು. ವಿವೇಕ ಮತ್ತು ಆಧ್ಯಾತ್ಮಿಕ ದೃಷ್ಟಿಗಳಿಂದ ಸಂಗೀತವು ಮಾನವನಿಗೆ [illegible] ಶಿಕ್ಷಣವೇದಿಕೆಯಾಗಿರುವುದೆಂದು ಅವರು ತಿಳಿಸಿದರು. ಪ್ರಥಮ ದರ್ಜೆಯವರಿಗೆ ಕಲಾಪರಿಪೂರ್ಣವಾದ ತಟ್ಟೆಗಳನ್ನೂ, ೧೦೦ ರೂ. ನಗದನ್ನೂ, ದ್ವಿತೀಯ ದರ್ಜೆಯವರಿಗೆ ತಟ್ಟೆ ಮತ್ತು ೫೦ ರೂ ಗಳನ್ನೂ ಕೊಡಲಾಯಿತು. ಆ ಸ್ಪರ್ಧೆಯಲ್ಲಿ ಮಂದಿ ಮಹಿಳೆಯರು ಒಬ್ಬಳಿಕೆಯು ಮೈಸೂರು [illegible] ದಂಗದಲ್ಲಿ ದ್ವಿತೀಯ ಬಹುಮಾನವನ್ನು ಪಡೆದಿರುತ್ತಾಳೆ.

ಮೈಸೂರು ಭವಿಷ್ಯದ ಬಗ್ಗೆ ಹೈಕಮಾಂಡಿನ ನಿರ್ಧಾರ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಭೆಯಲ್ಲಿ ನೆನ್ನೆ ಮೈಸೂರಿನ ಶ್ರೀ ಎಸ್. ಚನ್ನಯ್ಯನವರು ಮತ್ತು ಕರ್ನಾಟಕದ ಶ್ರೀ ಚನ್ನಬಸಪ್ಪ ಅಂಬಲಿಯವರು ಪರಸ್ಪರ ವಿರುದ್ಧ ಅಭಿಪ್ರಾಯವನ್ನು ಪ್ರಬಲವಾಗಿ ಮಂಡಿಸಿದರೆಂದೂ, ಈ ವಿಷಯವಾಗಿ ಕಾಂಗ್ರೆಸ್ ಹೈಕಮಾಂಡಿನವರೇ ನಿರ್ಧಾರ ಮಾಡಲಿರುವರೆಂದೂ ವರದಿಯೊಂದು ತಿಳಿಸುತ್ತದೆ. ಮೈಸೂರಿನ ಜನರು ಕರ್ನಾಟಕದ ಪರವಾಗಿರುವರೆಂದು ಶ್ರೀ ಅಂಬಲಿಯವರೂ, ನೂತನ ಸಂಯುಕ್ತ ಪ್ರಾಂತರಚನೆಗೆ ಪ್ರದೇಶ ಕಾಂಗ್ರೆಸ್ಸಿನ ಸಮಿತಿಯ ಬಹು ಮಂದಿ ಸದಸ್ಯರು ಪ್ರತಿಕೂಲರಾಗಿರುವರೆಂದು ಶ್ರೀ ಚನ್ನಯ್ಯನವರೂ ವಾದ ಮಾಡಿದುದಾಗಿ ಹೇಳಲಾಗಿದೆ.

ಆಕ್ಷ್ಯಾನಿಸ್ತಾನಕ್ಕೆ ಜಿ. ವಿ. ಗಣಪತಿ ಅಯ್ಯರ್

ಬೆಂಗಳೂರು ೮

ಮಾಜಿ ಕೈಗಾರಿಕಾ ನಿರ್ದೇಶಕರಾದ ಶ್ರೀ ಜಿ. ವಿ. ಗಣಪತಿ ಅಯ್ಯರ್‌ರವರು ಆಫ್ಘಾನಿಸ್ತಾನದಲ್ಲಿ ಸಣ್ಣ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ಅಲ್ಲಿನ ಸರ್ಕಾರಕ್ಕೆ ಸಲಹೆ ನೀಡಲು ಅವರ ಸೇವೆಯನ್ನು ಭಾರತ ಸರ್ಕಾರ [illegible] ನೀಡಿ ಸರ್ಕಾರದವರು ಪಡೆದಿರುತ್ತಾರೆ. ಶ್ರೀ ಗಣಪತಿ ಅಯ್ಯರ್‌ರವರು ಇನ್ನು [illegible] ತಿಂಗಳಲ್ಲಿ ಅಲ್ಲಿಗೆ ಪ್ರಯಾಣ ಮಾಡುವರು. [illegible] ಮುಂಚೆ ದೆಹಲಿಗೂ ಅವರು ಭೇಟಿ ಕೊಡಲಿರುವರು.

ತುಂಗಭದ್ರ ಯೋಜನೆಯ ಭಾಗಕ್ಕೆ ಮೈಸೂರು ಸೂಪರಿಂಟೆಂಡಿಂಗ್ ಇಂಜನಿಯರ್

ತುಂಗಭದ್ರ ಯೋಜನೆಯ [illegible] ಭಾಗದ ಕೆಲಸಗಳನ್ನು ನಿರ್ವಹಿಸಲು ಮೈಸೂರು ಸೂಪರಿಂಟೆಂಡಿಂಗ್ ಇಂಜನಿಯರೊಬ್ಬರನ್ನು ನೇಮಿಸುವ ವಿಷಯವು ಪರಿಶೀಲನೆಯಲ್ಲಿರುವುದೆಂದು [illegible] ಮತ್ತು ಮೈಸೂರು ಸರ್ಕಾರದ [illegible] ಯಾಗಿ [illegible] ಗೊತ್ತಾಗಿದೆ.

ಫುಟ್‌ಬಾಲ್ ಕ್ರೀಡೆಯ ಪ್ರೇಕ್ಷಕರ ಮೇಲೆ ಗುಂಡು

ನೇಪಲ್ಸ್ ನಗರದಲ್ಲಿ ನೆನ್ನೆ [illegible] ಮತ್ತು ಪಲೇರ್ಮೋ ನಗರದ ಎರಡು ಫುಟ್‌ಬಾಲ್ ಟೀಮುಗಳಿಗೆ ಇಟಲಿ ಛಾಂಪಿಯನ್‌ಶಿಪ್ ಕ್ರೀಡೆಯು ಜರುಗಿ [illegible] ಎಂದು ಪ್ರೇಕ್ಷಕರು ಆಟ ಮುಗಿದ ನಂತರ [illegible] ಮೇಲೆ ಬಿದ್ದರೆಂದೂ ಅವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಬಾಂಬು ಮತ್ತು ಗುಂಡುಗಳ ಪ್ರಯೋಗ ಮಾಡಿದರೆಂದೂ, [illegible] ಗುಂಡಿನೇಟಿನಿಂದ ಮಡಿದರೆಂದೂ ವರದಿಯಾಗಿದೆ. ೧೦೦ ಮಂದಿಗೆ ಪೆಟ್ಟಾಗಿದೆ.

ಹಿಂದೂಸ್ತಾನ್ ಕಾರ್ಖಾನೆಯಲ್ಲಿ ಜೆಟ್ ವಿಮಾನ ತಯಾರಿಕೆ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಜೆಟ್ ಮಾದರಿ ವಿಮಾನಗಳನ್ನು ತಯಾರಿಸಲು ಭಾರತ ಸರ್ಕಾರದವರು ಬ್ರಿಟಿಷ್ ಕಂಪೆನಿಯೊಡನೆ ವ್ಯವಹರಿಸುತ್ತಿರುವರೆಂದು ವರದಿಯಾಗಿದೆ. ಅಲ್ಲದೇ ಈ ದೇಶದಲ್ಲಿ ವಿಮಾನ ಇಂಜಿನ್ನುಗಳ ತಯಾರಿಕೆ ಬಗ್ಗೆಯೂ ಮಾತುಕತೆಗಳು ನಡೆಯುತ್ತಿವೆ. ಈ ಎರಡು ಕೆಲಸಗಳಿಗೆ ಸುಮಾರು ೫ ಕೋಟಿ ರೂ. ಬಂಡವಾಳ ಬೇಕಾಗುವುದೆಂದು ಗೊತ್ತಾಗಿದೆ.

ಮಹಾ ಪಂಜಾಬು ಸಮಿತಿಯಿಂದ ಸತ್ಯಾಗ್ರಹ

ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯ ಶಿಫಾರಸನ್ನು ಪಂಜಾಬಿಗೆ ಸಂಬಂಧಿಸಿದಂತೆ ಸ್ವೀಕರಿಸದಿದ್ದರೆ ಸತ್ಯಾಗ್ರಹ ನಡೆಸುವುದಾಗಿ ಮಹಾ ಪಂಜಾಬು ಸಮಿತಿಯು ಘೋಷಿಸಿದೆ.

ಮೈಸೂರು-ಕರ್ನಾಟಕ ವಾದದ ಬಗ್ಗೆ ದೆಹಲಿಯಲ್ಲಿ ಚರ್ಚೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಚನ್ನಯ್ಯನವರ ತಿಳುವಳಿಕೆ

ದೆಹಲಿಯಲ್ಲಿ ನೆನ್ನೆ ಸೇರಿದ್ದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಸಭೆಯಲ್ಲಿ ಮೈಸೂರಿನ ಶ್ರೀ ಎಸ್. ಚನ್ನಯ್ಯನವರು ಕರ್ನಾಟಕ ಸಂಸ್ಥಾನ ರಚನೆಯ ವಿವಾದಾಸ್ಪದ ವಿಷಯವಾಗಿ ಅಭಿಪ್ರಾಯವೀಯಲು ಕಾಲಾವಕಾಶ ಬೇಡಿದರೆಂದು ತಿಳಿದುಬಂದಿದೆ. ಮೈಸೂರು ಇತರ ಎಲ್ಲ ಕನ್ನಡ ಪ್ರದೇಶಗಳೊಡನೆ ಸೇರಬೇಕೆ ಅಥವಾ ಪ್ರತ್ಯೇಕವಾಗಿ ಉಳಿಯಬೇಕೇ ಎಂಬ ವಿಚಾರವಾಗಿ ಮೈಸೂರು ಪ್ರದೇಶ ಸಮಿತಿಯು ಅಭಿಪ್ರಾಯ ಸೂಚಿಸಲು ಕಾಲಾವಕಾಶ ಬೇಕೆಂದು ಅವರು ಹೇಳಿದುದಾಗಿ ಗೊತ್ತಾಗಿದೆ.

ಹೈಕಮಾಂಡಿನೊಡನೆ ಮೈಸೂರು ನಿಯೋಗದವರ ಭೇಟಿ

ದೆಹಲಿಯಲ್ಲಿ ನೆನ್ನೆ ಮೈಸೂರು ನ್ಯಾಯಾಂಗ ಮಂತ್ರಿ ಎ. ಜಿ. ರಾಮಚಂದ್ರರಾವ್, ಆರೋಗ್ಯ ಮಂತ್ರಿ ಟಿ. ಚನ್ನಯ್ಯನವರ ನೇತೃತ್ವದಲ್ಲಿ [illegible] ಸದಸ್ಯರು ಮತ್ತು ಇತರರು ಕಾಂಗ್ರೆಸ್ ಹೈಕಮಾಂಡಿನವರು ಭೇಟಿಯಾಗಿದ್ದರು. [illegible] ಕಾಂಗ್ರೆಸ್ ನಾಯಕರನ್ನು ಮೈಸೂರು ಪ್ರತ್ಯೇಕತಾ ವಾದವನ್ನಿಟ್ಟು, ಒತ್ತಾಯಪಡಿಸಿದುದಾಗಿ ಗೊತ್ತಾಗಿದೆ. ಕೊಡಗು ಮತ್ತು ಮಂಗಳೂರು ಭಾಗಗಳು ಮೈಸೂರಿಗೆ ಸೇರಬೇಕೆಂದೂ [illegible] ಮತ್ತು ಹೈದರಾಬಾದು ಕನ್ನಡ ಪ್ರದೇಶಗಳು ಸೇರಕೂಡದೆಂದೂ ಅವರು ತಿಳಿಸಿದುದಾಗಿ ಗೊತ್ತಾಗಿದೆ.

ರಾಯಭಾರಿಗೆ ಪಾಕಿಸ್ತಾನದ ಪ್ರತಿಭಟನೆ

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನಗಳಿಗೆ ಆಗಿರುವ ಒಪ್ಪಂದವನ್ನು ಮುರಿಯಲಾಗಿದೆಯೆಂದು ಪಾಕಿಸ್ತಾನ ಸರ್ಕಾರದವರು ಆಫ್ಘಾನ್ ಸರ್ಕಾರಕ್ಕೆ ಪ್ರತಿಭಟನೆ ಸಲ್ಲಿಸಿರುವರೆಂದು ವರದಿಯಾಗಿದೆ. [illegible] ಪರಸ್ಪರ ಅಪಪ್ರಚಾರ ನಡೆಸದೆ ಮತ್ತು ಹಿಂಸೆ ಮತ್ತು ದ್ವೇಷಕ್ಕೆ ದಿಗೊಡದೆ ಇರಬೇಕೆಂದು ಒಪ್ಪಂದವಾಗಿತ್ತು.

ಮಣಿಪುರದಲ್ಲಿ ನೇತಾಜಿ ಸೈನ್ಯದ ಸಾಹಸ ಸ್ಮಾರಕ

ನೇತಾಜಿ ಸುಭಾಷ್‌ಚಂದ್ರರ ಆಜಾದ್ ಹಿಂದ್ ಫೌಜ್ ಸೈನಿಕರು ಮಣಿಪುರ ಸಂಸ್ಥಾನದಲ್ಲಿ ನಡೆಸಿದ ಸಾಹಸಗಳನ್ನು ನೆನಪಿಗೆ ತಂದುಕೊಡುವ ಎರಡು ಸ್ಮಾರಕಗಳನ್ನು ನಿರ್ಮಿಸಲಾಗುವುದು. ಈ ತಿಂಗಳ ೧೬ನೇ ತಾರೀಖು ಢೇಬರ್‌ರವರು ಅಲ್ಲಿಗೆ ಭೇಟಿಯಿತ್ತಾಗ ಮೊದಲಿಂದ ಪ್ರದೇಶಗಳನ್ನು ಪರಿಶೀಲಿಸುವರು.

ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ೩ ಕೋಟಿ ಟನ್ನಿನಷ್ಟು ಹೆಚ್ಚು ಉತ್ಪತ್ತಿ ಮಾಡಬೇಕೆಂದಿರುವ ಕಲ್ಲಿದ್ದಲನ್ನು ತೆಗೆಯಲು ಹೊಸ ಗಣಿಗಳಲ್ಲಿ ಯಂತ್ರಗಳಿಂದ ಕೆಲಸ ಮಾಡಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ.

ದೆಹಲಿಗೆ ನೇಪಾಳದ ದೊರೆಯು ಆಗಮನ

ನೇಪಾಳದ ದೊರೆ ಮಹೇಂದ್ರ ವಿಕ್ರಮಶಾಹ ರವರು ಮೊನ್ನೆ ಪತ್ನೀ ಸಮೇತರಾಗಿ ದೆಹಲಿಗೆ ಆಗಮಿಸಿದರು ಅವರನ್ನು ರಾಷ್ಟ್ರಪತಿ ಪ್ರಧಾನಿ ನೆಹರೂ ಮುಂತಾದವರು ಸ್ವಾಗತಿಸಿದರು ಸಮಸ್ತ ರಾಜಮರ್ಯಾದೆಯಿಂದಲೂ ಅವರಿಗೆ ಸ್ವಾಗತ ನೀಡಲಾಯಿತು ಅವರು ನೆಹರೂರವರೊಡನೆ ಮೆರವಣಿಗೆಯಲ್ಲಿ ತೆರಳಿದರು ಅವರ ವಿಮಾನವನ್ನು ೭೦ ಮೈಲಿಗಳ ದೂರದಲ್ಲೇ ಭಾರತದ ವಿಮಾನಗಳು ಸಂಧಿಸಿ ಪಕ್ಕಗಳಲ್ಲಿ ಗೌರವ ರಕ್ಷೆ ಕೊಡುತ್ತಾ ಬಂದುವು

ಹರಿಕಥಾ ಸಪ್ತಾಹ

ಮಂಡಿ ಮೊಹಲ್ಲಾ ಕಾಮನಗುಡಿ ಬೀದಿ ತ್ರಿಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಚಿಕ್ಕಬಳ್ಳಾಪುರದ ಹರಿಕಥಾ ರತ್ನ ಕಾ|| ಬ್ರ|| ಶ್ರೀ ಅಶ್ವತ್ಥನಾರಾಯಣ ಭಾಗವತರಿಂದ ನಿನ್ನೆಯ ಆ[illegible] ಸಪ್ತಾಹ ರೂಪವಾಗಿ ಹರಿಕಥೆ ಮತ್ತು ಶಾಸ್ತ್ರಕಥೆಗಳು ನಿತ್ಯವೂ ಸಂಜೆ ೭ ಗಂಟೆಗೆ ನಡೆಯುತ್ತವೆ ದಿನದಿನದ ಕಥೆಗಳನ್ನು ಪ್ರತಿ ನಿತ್ಯ ನೋಟೀಸು ಬೋರ್ಡಿನಲ್ಲಿ ಪ್ರಕಟಿಸಲಾಗುತ್ತೆ ಸರ್ವರೂ ದಯಮಾಡಬೇಕಾಗಿ ಪ್ರಾರ್ಥನೆ

ಅಷ್ಟ ತೀರ್ಥೋತ್ಸವ

ಪಶ್ಚಿಮವಾಹಿನಿಯಲ್ಲಿ ನಾಳೆ ನಡೆಯುವ ೬ನೆ ತೀರ್ಥೋತ್ಸವದ ಸಂಬಂಧವಾಗಿ ನಗರದ ದಿವಾನ್ ಪೂರ್ಣಯ್ಯನ ಛತ್ರದಲ್ಲಿ ಮತ್ತು ತೀರ್ಥದ ಬಳಿ ನರ್ತಕರ ಮಂಡಲಿಯವರು ಒಳ್ಳೆ ವೆಳಗ್ಗೆ ನಿತ್ಯ, ದೇವರ ದರ್ಶನ ಮುಂತಾದ ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಪ್ರಿನ್ಸಿಪಾಲರ ಕಚೇರಿ,
ಮೈಸೂರು, ತಾ|| 3—11—1955

ರೀ-ಟೆಂಡರ್ ನೋಟಿಫಿಕೇಷನ್

ಈ ಸಂಸ್ಥೆಗೆ 1956ನೇ ಇಸವಿಯಲ್ಲಿ (1956ನೇ ಜನವರಿ 1 ರ ಲಾಗಾಯ್ತು 1956 ರ ಡಿಸೆಂಬರ್ 31 ರ ವರೆಗೆ ಎರಡು ದಿನಗಳೂ ಸ(ರಿ) ಬೇಕಾಗುವ ಒಂದನೇ ದರ್ಜೆ ಬ್ರೆಡ್" ಸರಬರಾಜಿಗಾಗಿ 1955 ನೇ ನವೆಂಬರ್ 20ನೇ ತಾರೀಕು ದಿನವಾರ ಬೆಳಗ್ಗೆ 10—30 ಗಂಟೆಗೆ ಮೇಲ್ಕಂಡ ಕಛೇರಿಯಲ್ಲಿ ಓಪನ್ ಹಾಗೆ ಪಬ್ಲಿಕ್ ಕವರ್ ಆಗಿರುವಲ್ಲಿ ಬರೆದಿರುವ ನಾಲ್ಕು ಸೈಲ್ ಗಳ್ಳ ಲಕೋಟೆ ಟೆಂಡರನ್ನು ಸ್ವೀಕರಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ

ಟೆಂಡರಿನ ಮೇಲೆ ಮೇಲ್ಕಂಡ ಷರತ್ತುಗಳನ್ನು ನಮೂದಿಸಬೇಕು ವಿವರವಾದ ಟೆಂಡರ್ ನೋಟಿಫಿಕೇಷನ್ನಿನಲ್ಲಿ ಕಾಣಿಸಿರುವಂತೆ ಟೆಂಡರಿನ ಜೊತೆ ನೋಟಿನ ಮುಂದಿನ ಸೂಚಿ ರೂ. ಯಗೆ [illegible] ಪಣವನ್ನು ಡಿಪಾಜಿಟ್ ಆಗಿ ಕಟ್ಟಿ ಬಗ್ಗೆ [illegible] ಚಲನ್ ಮತ್ತು ಇತರ ಸಟಿ ಫಿಕೇಟುಗಳನ್ನು ಲಗತ್ತಿಸಿ ಬರಬೇಕು [illegible] ಯಾವುದನ್ನು ಪರಿಶೀಲಿಸಲಾಗುವುದಿಲ್ಲ ಟೆಂಡರು ನೋಟಿಫಿಕೇಷನ್ನನ್ನು ರಜೆ ದಿನ ಹೊರತು ಉಳಿದ ದಿನಗಳಲ್ಲಿ ಕಛೇರಿಯಲ್ಲಿ 1955ನೇ ನವೆಂಬರ್ 1 ರಿಂದ 1955ನೇ ನವೆಂಬರ್ 20 ರ ವರೆಗೆ ಕೆಲಸದ ವೇಳೆ ನೋಡಬಹುದು

ಸಿ. ದ್ವಾರಕಾನಾಥ್,
ಪ್ರಿನ್ಸಿಪಾಲ್

ವಿಶೇಷವಾಗಿ ಬ್ರಾಹ್ಮಣರಿಂದ ಪಾಶ್ಚಿಮಾತ್ಯ ಪದ್ಧತಿ ಅನುಕರಣೆ

ಅಖಿಲ ಭಾರತ ಮಾನವ ವಿಜ್ಞಾನ ಪ್ರವೀಣರ [illegible] ಸಮಾಜ ಶಾಸ್ತ್ರಜ್ಞರ ಸಮ್ಮೇಳನವನ್ನು ಉದ್ಘಾಟಿಸಿದಲ್ಲಿ ಮೊನ್ನೆ ಬರೋಡಾ ವಿಶ್ವವಿದ್ಯಾಲಯದ ಡಾ|| ಎಂ ಎನ್. ಶ್ರೀನಿವಾಸ್ ರವರು ಮಾತನಾಡಿ, ಬ್ರಾಹ್ಮಣರು ಹೆಚ್ಚು ಹೆಚ್ಚಾಗಿ ಪಾಶ್ಚಿಮಾತ್ಯ ಪದ್ಧತಿಯನ್ನು ಅನುಸರಿಸುತ್ತಿರುವರೆಂದೂ, ಇತರ ಜಾತಿಗಳವರು ಸಂಸ್ಕೃತ ಸಂಸ್ಕೃತಿಯುಳ್ಳವರಾಗುತ್ತಿರುವರೆಂದೂ ತಿಳಿಸಿದರು ಬ್ರಾಹ್ಮಣರು ವರ್ಜಿಸುತ್ತಿರುವ ಪದ್ಧತಿಗಳನ್ನು ಇತರರು ಅನುಕರಿಸುತ್ತಿರುವುದಾಗಿಯೂ ತಿಳಿಸಿದರು ಕೊಡಗಿನಲ್ಲಿ "ಸಂಸ್ಕೃತ ಸಂಸ್ಕೃತಿ"ಯ ಅಚರಣೆಯು ವಿಶೇಷವಾಗಿ ಕಾಣಬರುತ್ತಿರುವುದೆಂದೂ, ಪಾಶ್ಚಿಮಾತ್ಯ ಪದ್ಧತಿ ಅನುಕರಣೆಗೆ ಈ ವಿಧಾನವು ಅವರಿಗೆ ಅಗತ್ಯವಾಗಿ ಕಾಣಬರುವುದೆಂದೂ ಅವರು ನುಡಿದರು

ಅನುಮಾನದ ಮೇಲೆ ಬಂಧನ

ದಸರಾ ವಸ್ತು ಪ್ರದರ್ಶನದಲ್ಲಿ ಮೊನ್ನೆ [illegible] ಸಾಮಾನ್ಯವಾಗಿ ಓಡಾಡುತ್ತಿದ್ದ ಬೆಂಗಳೂರಿನ [illegible] ವ್ಯಕ್ತಿಯನ್ನು ಅನುಮಾನದ ಮೇಲೆ ದಸ್ತಗಿರಿ ಮಾಡಲಾಯಿತು

ಮೈಸೂರು ಪೇಟೆ ಧಾರಣೆ

	ಹೊ ಬಂದ	ಮಾ ಪಡಿಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳುಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಹಲಸಂದೆ	[illegible]	[illegible]
ತೊಗರಿ	[illegible]	[illegible]
ಧನಿಯ	[illegible]	[illegible]
[illegible]	[illegible]	
ಹೊಂಗೆ[illegible]	[illegible]	[illegible]
ಹೊಂಗೆಬೀಜ[illegible]	[illegible]	[illegible]
ಕೆಂಪುಮೆಣಸಿನಕಾಯಿ [illegible]	[illegible]	[illegible]

NATIONAL LEAGUE,

Arathalu[illegible] Buildings
MYSORE

Offers excellent coaching to S S L C Students in all subjects (Jan '56)

JOIN AT ONCE

Timings 7 30 to 10 A M
5 30 to 8 P M

Edited, Printed and Published by A K Nagarajan at Sadhvi Press, D Subbiah Road, Mysore

ಉಪಾಧ್ಯಾಯರುಗಳ ವ್ಯಾಸಂಗ ಗೋಷ್ಠಿ

ಮೈಸೂರು —

ರಾಜಧಾನಿಯ ಜಿಲ್ಲಾ ಶಿಕ್ಷಣ [illegible] ಮತ್ತು ಶಿಕ್ಷಣ ವಿಸ್ತರಣ ಇಲಾಖೆ ಆಶ್ರಯದಲ್ಲಿ ಕಳೆದ ೨೦ನೇ ತಾರೀಕಿನಿಂದ ೨೯ ರ ವರೆಗೆ ಸಂಸ್ಥಾನದ ಜಿಲ್ಲಾ ಬೋರ್ಡು ಮತ್ತು ನಗರದ ಪ್ರೌಢಶಾಲಾ ಉಪಾಧ್ಯಾಯರ ಪ್ರತಿನಿಧಿಗಳು, ಮುಖ್ಯೋಪಾಧ್ಯಾಯರು, ವಾತ್ರಗಳು ಅಧಿಕಾರಿಗಳ ವ್ಯಾಸಂಗ ಗೋಷ್ಠಿಯು ನಡೆಯಿತು. ಪ್ರೌಢಶಾಲೆಗಳ ಉತ್ತಮ ಶಿಕ್ಷ, ಆಡಳಿತ ವ್ಯತ್ಯಾಸ, ಹಣಕಾಸಿನ ಕೊರತೆ ಮುಂತಾದ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆಸುವುದು ಗೋಷ್ಠಿಯ ಉದ್ದೇಶವಾಗಿತ್ತು

ಶಾಲಾ ಆಡಳಿತದಲ್ಲಿ ಸ್ಥಳೀಯರ ಸಹಕಾರ ಪಡೆಯುವುದು, ಉಪಾಧ್ಯಾಯರ ಸಂಬಳ ಸಾರಿಗೆಗಳನ್ನು ತಪ್ಪದೆ ಕಾಲಕ್ಕೆ ಸರಿಯಾಗಿ ಮತ್ತು ಕ್ರಮವಾಗಿ ದೊರಕಿಸುವುದು ಗೋಷ್ಠಿಯ ಮುಖ್ಯ ವಿಷಯವಾಗಿತ್ತು. ತಿರುವಾಂಕೂರು-ಕೊಚ್ಚಿಯಲ್ಲಿರುವಂತೆ ಶಾಲಾ ಫೀಜನ್ನು ಆಯಾ ಸ್ಥಳೀಯ ಸಂಸ್ಥೆಗಳು ಕೊಡುವ ದ್ರವ್ಯ ಸಹಾಯವನ್ನು ವಸೂಲು ಮಾಡುವ ಜವಾಬ್ದಾರಿಯನ್ನು ವಿದ್ಯಾ ಇಲಾಖೆಯವರು ವಹಿಸಿಕೊಂಡು ನಿಯಮಿತ ರೀತಿಯಲ್ಲಿ [illegible] ಮುಖ್ಯೋಪಾಧ್ಯಾಯರು ಸಂಬಳಗಳನ್ನು ತರಿಸಿ ಹಂಚಬೇಕೆಂದು ಶಿಫಾರಸನ್ನು ಮಾಡಬೇಕು ಗೋಷ್ಠಿಯು ತೀರ್ಮಾನಿಸಿತು ಸ್ಥಳೀಯ ಸಂಸ್ಥೆ ಶಾಲಾ ಉಪಾಧ್ಯಾಯರ ಸಂಬಳವನ್ನು ಸರ್ಕಾರಿ ಶಾಲೆಗಳ ಉಪಾಧ್ಯಾಯರ ವೇತನಕ್ಕೆ ಸರಿಗಟ್ಟುವಂತೆ ಮಾಡಬೇ[illegible]

THE MYSORE LAC & PAINT WORKS Ltd.,

MYSORE
Dated [illegible] 11 [illegible]

Notice is hereby given to the share holders of the company that nomination for the appointment of Sri H N Ananthapadmanabha Rao, Chartered Accountant, Sivarampet, Mysore as an auditor of the company for the year 55-56 has been received at the Registered Office of the Company

By Order of the Board
N K RANGA RAO
General Manager & Secretary

ಸ್ವಂತ ಟೆಲಿಫೋನ್ ಪದ್ಧತಿ ರ[illegible]

ದಿಲ್ಲಿ ಅಕ್ಟೋಬರ್ [illegible] ತಿಂಗಳು [illegible] ದಿಲ್ಲಿ ಸ್ವಂತ ಟೆಲಿಫೋನ್ ಪದ್ಧತಿಯನ್ನು [illegible] ಕ್ರಮವಾಗಿ ರದ್ದುಗೊಳಿಸಲಾಗುವುದೆಂದು [illegible] ಪ್ರ ಸಾಗಾಣಿಕೆ ಮಂತ್ರಿ ಜಗಜೀವನ್[illegible] ರವರು ತಿಳಿಸಿರುತ್ತಾರೆ ದ್ವಿತೀಯ ಯೋಜ[illegible] ಅವಧಿಯಲ್ಲಿ ತಮ್ಮ ಇಲಾಖಾ ಕೆಲಸದ ವಿಸ್ತ[illegible] ೨೦ ಕೋಟಿ ರೂ ಯೋಜನೆಯನ್ನು ಸಿದ್ಧ[illegible] ಗಾಗಿರುವುದೆಂದು ಅವರು ಹೇಳಿರುವರು

ವಸ್ತು ಪ್ರದರ್ಶನದಲ್ಲಿ "ಸಾಕು[illegible]" ನಾಟಕಕ್ಕೆ ಬಹುಮಾನ

ವಸ್ತು ಪ್ರದರ್ಶನದಲ್ಲಿ ರಾಜಧಾನಿಯ [illegible] ಆರ್ಟಿಸ್ಟರವರು ಪ್ರದರ್ಶಿಸಿದ "ಸಾಕು[illegible]" ನಾಟಕಕ್ಕೆ ಮೂರನೇ ಬಹುಮಾನವು ದೊರೆ[illegible]

ಕ್ರಮ ಕೈಗೊಳ್ಳಲೂ, ಉಪಾಧ್ಯಾಯರ [illegible]ಕ, ನಿಯಂಗೊಳಿಸುವುದು ಮುಂತಾದ ಸಮ[illegible]ಗಳನ್ನು ಪರಿಹರಿಸಲೂ ಸೂಕ್ತ ಸಲಹೆ [illegible]ಲಾಯಿತು ಮುಖ್ಯವಾಗಿ ಸ್ಥಳೀಯ ಸಂಸ್ಥೆ[illegible]ಲ್ಲಿ ಕೆಲಸ ಮಾಡುವ ಉಪಾಧ್ಯಾಯರ [illegible] ಮಾನಗಳನ್ನು ರಕ್ಷಿಸಿ, ಅವರಿಂದ ತೃಪ್ತಿಕರ[illegible] ಶಿಕ್ಷಣಕಾರ್ಯವು ನಡೆಯುವಂತೆ ಅವಕಾಶ[illegible] ಬೇಕೆಂದು ಗೋಷ್ಠಿಯು ಸೂಚಿಸಿತು.

ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಾ[illegible]ದ ಶ್ರೀ ಎ ಸಿ ದೇವೇಗೌಡರು ಗೋಷ್ಠಿ[illegible] ನೇತೃತ್ವವನ್ನು ವಹಿಸಿದರು ಶ್ರೀಗಳಾದ[illegible] ಆರ್ ಎಸ್ ಗುಪ್ತ ಮತ್ತು ಎ ದೇವಯ್ಯ[illegible]ರು ಸಂಚಾಲಕರಾಗಿದ್ದರು

SREE GAYATHRI TALKIES

To [illegible] Last [illegible]
WHITE FEATHER

From 9-11-55 For 2 d[illegible]
Daily 3 Shows
DANGEROUS CROSSING

From 11 11 55 Daily 3 Sho[illegible]

ಚಾಮರಾಜನಗರ-ರಾಮಸಮುದ್ರ ಟೌನ್ ಮುನಿಸಿಪಾಲಿಟಿ

ಸೈಟುಗಳ ಹರಾಜು ಇಸ್ತಿಹಾರ್

ನೋಟಿಫಿಕೇಷನ್ ನಂ 145/55—56 ತಾ|| 1-11-1955

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ

ಚಾಮರಾಜನಗರದಲ್ಲಿ ಈ ಕೆಳಗೆ ಕಂಡ ಸ್ಥಳಗಳಲ್ಲಿ (40x60) ಮತ್ತು ಸ್ವಲ್ಪ ಬದಲಾವಣೆ ಇರುವ ಸೈಟುಗಳನ್ನು ಮುನಿಸಿಪಲ್ ಪ್ರೆಸಿಡೆಂಟರು ಅಥವ ಅವರಿಂದ ಅಧಿಕಾರ ಪಡೆದವರು ಹರಾಜುದಾರರ ಸಮಕ್ಷ 23 11 1955ನೇ ತಾರೀಖು ಲಾಗಾಯ್ತು ಸ್ಥಳದಲ್ಲಿ ಹರಾಜು ಮಾಡಿಸುತ್ತಾರೆಯಾಗಿ, ಷರತ್ತುಗಳನ್ನು ಮೂಲಕ ಸೈಟುಗಳನ್ನು ಪಡೆಯಬಹುದು ಸೈಟು ಪ್ಲಾನ್ ಮತ್ತು ಇಸ್ತಿಹಾರ್ ಷರತ್ತುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ರಜಾ ಇಲ್ಲದ ದಿನಗಳಲ್ಲಿ ಆಫೀಸು ನಡೆಯುವ ಕಾಲದಲ್ಲಿ ನೋಡಬಹುದು

1	ರಾಮಸಮುದ್ರ ರಸ್ತೆ 366/1 + 1 ರಲ್ಲಿ ಹಾಕಿರುವ ಪೂರ್ವ ಭಾಗದ ಸೈಟುಗಳು (ಆದಿಕರ್ನಾಟಕರ ಕಾಲೋನಿ ಪಕ್ಕದಲ್ಲಿ)	10
2	do ಪಶ್ಚಿಮ ಭಾಗದ ಸೈಟುಗಳು ಎಲೆಕ್ಟ್ರಿಕ್ ಆಫೀಸ್ ಪಕ್ಕ	5
3	ಭುವನೇಶ್ವರಿ ಎಕ್ಸ್ಟೆನ್ಷನ್ ಒಳಗಿನ ಸೈಟುಗಳು	14
4	ಎ ಕೆ ಕಾಲೋನಿ ಪೂರ್ವಭಾಗದ ಸೈಟುಗಳು	16
5	ಪ್ರಸೂತಿ ಹಾಸ್ಪಿಟಲ್ ಹಿಂಭಾಗದ ಸೈಟುಗಳು	17
6	ಕ್ಲಬ್ ಹಿಂಭಾಗದಲ್ಲಿರುವ ಸೈಟುಗಳು	26
7	ಹಾಸನೂರ್ ಫಾರೆಸ್ಟ್ ರಸ್ತೆ ಬಾಜೂ ಸೈಟುಗಳು	24
8	ಗುಂಡ್ಲುಪೇಟೆ ರಸ್ತೆ ಬಾಜೂ ಸೈಟುಗಳು	10
	ಜುಮ್ಲಾ ಸೈಟುಗಳು	156

(ರುಜು) ಅನ್ವರ್ ಪಾಷಾ,
ಅಧ್ಯಕ್ಷರು, ಟೌನ್ ಮುನಿಸಿಪಲ್ ಕೌನ್ಸಿಲ್,
ಚಾಮರಾಜನಗರ ರಾಮಸಮುದ್ರ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕಳುಹಿಸಿ ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿ 3 ಕಾಸು

ಚಂದಾ ದರ

ಸಂಪುಟ: ೧೪] SADHVI : WEDNESDAY 9-11-1955 ಮೈಸೂರು ಬುಧವಾರ ೯-೧೧-೧೯೫೫ [ಸಂಚಿಕೆ: ೬೩

ಮೈಸೂರು-ಕರ್ನಾಟಕದ ಬಗ್ಗೆ ಹೈಕಮಾಂಡಿನ ನಿಲುವು

ಇಂಡೋನೇಷ್ಯಾ ಉಪಾಧ್ಯಕ್ಷರಿಗೆ ಬೆಂಗಳೂರಿನವರ ಸ್ವಾಗತ

ಬೆಂಗಳೂರು ೯

ಇಂಡೋನೇಷ್ಯದ ಉಪಾಧ್ಯಕ್ಷ ಡಾ॥ ಮಹಮ್ಮದ್ ಹಟ್ಟಾರವರು ನೆನ್ನೆ ಮಧ್ಯಾಹ್ನ ಇಲ್ಲಿಗೆ ಆಗಮಿಸಿದರು. ಅವರನ್ನು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೂ, ಹೈಕೋರ್ಟಿನ ನ್ಯಾಯಾಧೀಶರೂ, ಕೈಗಾರಿಕೆ, ರೆವಿನ್ಯೂ ಮತ್ತು ಗೃಹ ಮಂತ್ರಿಗಳೂ ಸ್ವಾಗತಿಸಿದರು. ಇಲ್ಲಿನ ಪೌರಸಭೆಯವರು ಅವರಿಗೆ ಮಾನಪತ್ರವನ್ನು ಅರ್ಪಿಸಿದರು. ಅರ್ಪಣೆಗೆ ಉತ್ತರಕೊಡುತ್ತಾ ಡಾ॥ ಹಟ್ಟಾರವರು ಭಾರತ ಮತ್ತು ಇಂಡೋನೇಷ್ಯಗಳು ತಮ್ಮ ಅಭ್ಯುದಯ ಸಾಧನೆಗೆ ತಮ್ಮನ್ನೇ ಅವಲಂಬಿಸಬೇಕೆಂದು ಸೂಚಿಸಿದರು.

ಕರ್ನಾಟಕ ಪ್ರಾಂತ ರಚನೆಗೆ ಪಂತರ ಬೆಂಬಲ

ಕರ್ನಾಟಕ ಪ್ರಾಂತ ರಚನೆಗೆ ತಾವು ಬೆಂಬಲ ಕೊಡುವುದಾಗಿ ಕೇಂದ್ರ ಗೃಹ ಮಂತ್ರಿ ಗೋವಿಂದವಲ್ಲಭ ಪಂತರು ಶ್ರೀ ಎ. ಭೀಮಪ್ಪನಾಯಕರ ನಾಯಕತ್ವದ ನಿಯೋಗಕ್ಕೆ ಭರವಸೆಯಿತ್ತರೆಂದೂ, ಮೈಸೂರು ಪ್ರತ್ಯೇಕತಾ ವಾದಿಗಳ ಅಭಿಪ್ರಾಯವನ್ನು ಅವರು ಅನುಮೋದಿಸಲಿಲ್ಲವೆಂದೂ ವರದಿಯಾಗಿದೆ.

ಲಂಡನ್ನಿನಲ್ಲಿ ಅಸ್ಸಾಂ ವಿದ್ಯಾರ್ಥಿಯ ಕೊಲೆ

ಲಂಡನ್ ನಗರದ ಬಲ್ಹಾಂ ಪೋಲೀಸು ಠಾಣೆಯ ಬಳಿ ಒಂದು ಭವನದಲ್ಲಿ ಮೂರು ದಿನಗಳ ಹಿಂದೆ ಸೂರ್ಯ ದೇವಪ್ರದತ್ತ ಎಂಬ ೩೦ ವರ್ಷ ವಯಸ್ಸಿನ ಅಸ್ಸಾಂ ವಿದ್ಯಾರ್ಥಿಯೊಬ್ಬನನ್ನು ಕಬ್ಬಿಣದ ಲಾಂಛನದಿಂದ ಹೊಡೆದು ಕೊಲೆಮಾಡಲಾಯಿತೆಂದೂ ಕೊಲೆಗಾರನನ್ನು ಪತ್ತೆ ಹಚ್ಚಲು ಸ್ಕಾಟ್ಲೆಂಡ್ ಯಾರ್ಡಿನವರು ಎಲ್ಲ ಪೋಲೀಸು ಠಾಣೆಗಳಿಗೂ ಸೂಚನೆಯಿತ್ತಿರುವರೆಂದು ವರದಿಯಾಗಿದೆ.

ಮಹಿಳೆಯರಿಂದ ಸಹಕಾರ ವಿಚಾರಣೆ

ನಾಳೆ ಮಧ್ಯಾಹ್ನ ೪-೩೦ ಘಂಟೆಗೆ ಅಖಿಲ ಭಾರತ ಸಹಕಾರ ದಿನದ ಸಮಾರಂಭವನ್ನು ಕೃಷ್ಣರಾಜ ಮೊಹಲ್ಲ ಸೀತಾರಾಮರಾವ್ ರಸ್ತೆಯಲ್ಲಿರುವ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಮನೆಯಲ್ಲಿ ಏರ್ಪಡಿಸಲಾಗಿದೆ. ಶ್ರೀಮತಿ ರಾಮೇಶ್ವರಿ ಕುಪ್ಪಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಮಹಿಳೆಯರೆಲ್ಲರಿಗೂ ಆಹ್ವಾನವಿದೆ.

ಹಸುಗಳನ್ನು ಕದ್ದುದಕ್ಕಾಗಿ ಶಿಕ್ಷೆ

ಬನ್ನೂರ್ ಉರುಫ್ ಕಣ್ಣಾ ಮುರುಗಿ ಎಂಬುವವನು ಕಳೆದ ಏಪ್ರಿಲ್ ೧೯ರಂದು ಶ್ರೀ ಹೊಂಬೇಗೌಡರ ಮನೆಯಲ್ಲಿ ಮೂರು ಹಸುಗಳನ್ನು ಕದ್ದುದಕ್ಕಾಗಿ ಮೊನ್ನೆ ನಗರ ನ್ಯಾಯಾಧೀಶರು ಅವನಿಗೆ ೩ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ. ೩ ವರ್ಷ ಕಾಲ ಅವನು ತನ್ನ ವಾಸಸ್ಥಾನವನ್ನು ಪೋಲೀಸರಿಗೆ ತಿಳಿಸುತ್ತಿರಬೇಕೆಂದು ಆಜ್ಞಾಪಿಸಿರುವರು.

ಕರ್ನಾಟಕದಲ್ಲಿ ಮೈಸೂರಿನ ಐಕ್ಯ ಖಚಿತ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧಾರ

ಮೈಸೂರನ್ನೊಳಗೊಂಡ ಕರ್ನಾಟಕ ಸಂಸ್ಥಾನದ ರಚನೆಗೆ ಮೈಸೂರಿನವರ ವಿರೋಧವನ್ನು ದೃಷ್ಟಿಯಲ್ಲಿಟ್ಟುಕೊಂಡು, ಮೈಸೂರಿನ ಐಕ್ಯವನ್ನು ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆನ್ನೆ ದೆಹಲಿಯಲ್ಲಿ ೩ ಘಂಟೆ ಕಾಲ ಚರ್ಚೆ ನಡೆಸಿತು. ಸಂಸ್ಥಾನ ಪುನರ್ವಿಂಗಡಣಾ ಸಮಿತಿಯವರು ಮಾಡಿರುವ ಶಿಫಾರಸನ್ನು ಒಪ್ಪುವಂತೆ ಮೈಸೂರಿನ ಜನರನ್ನು ಒಲಿಸಿಕೊಳ್ಳುವ ವಿಧಾನಗಳನ್ನು ಅನುಸರಿಸಬೇಕೆಂದು ಕಾಂಗ್ರೆಸ್ ಹೈಕಮಾಂಡು ನಿರ್ಧರಿಸಿದುದಾಗಿ ತಿಳಿದಿದೆ.

ಅಮಲ್ದಾರ್ ಹೆಚ್. ಜಿ. ಹಾಲಪ್ಪನವರಿಗೆ ಎಚ್ಚರಿಕೆ

ಅಂಚೆ ನಿರೋಧ ಇಲಾಖೆಯ ಕ್ರಮ

ಬೆಂಗಳೂರು ೯

ಸರ್ಕಾರದ ಅಂಚೆ ನಿರೋಧ ಮತ್ತು ರಕ್ಷಣೆ ತನಿಖೆ ಇಲಾಖೆಯವರು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಕೆಳಗೆ ಕಂಡ ಕ್ರಮಗಳನ್ನು ಜರುಗಿಸಿರುವರು.

ನೆಜಟೆಡ್ ಅಧಿಕಾರಿಗಳಾದ ಅಮಲ್ದಾರ್ ಶ್ರೀ ಹೆಚ್. ಜಿ. ಹಾಲಪ್ಪನವರಿಗೆ ಎಚ್ಚರಿಕೆಯನ್ನೀಯಲಾಗಿದೆ. ಮಹಿಳಾ ಅಸಿಸ್ಟೆಂಟ್ ಸರ್ಜನ್ ಶ್ರೀಮತಿ ಆರ್. ಎ. ಶ್ರೀರಂಗಮ್ಮನವರ ಸಂಬಳವನ್ನು ೨೦ ರೂ. ನಿಂದ ಇಳಿಸಿ, ಎಚ್ಚರಿಕೆಯನ್ನಿತ್ತು, ಅವರ ವರ್ಗವನ್ನು ತಗ್ಗಿಸಲಾಗಿದೆ.

ಎ. ಸಿ. ಸಿ. ಯವರ ಸೂಚನೆ ವ್ಯಯತ್ತಿಕ ಕಾರ್ಯದರ್ಶಿ ಶ್ರೀ ಹಬ್ಬಿ. ಜಿ. ಮಾರ್ಕಂಡರ ಸಂಬಳವನ್ನು ೧೦ರಿಂದ ೨೦ ರೂ. ಗೆ ಇಳಿಸಲಾಗಿದೆ. ಮಾಧ್ಯಮಿಕ ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ಕೆ. ನಂಜುಂಡಯ್ಯನವರನ್ನು ವಜಾ ಮಾಡಲಾಗಿದೆ. ಅವರು ದುರುಪಯೋಗಪಡಿಸಿದ ೧೧೩೭-೧-೩ ರೂ. ಗಳನ್ನು ಅವರಿಗೆ ಸರ್ಕಾರದಿಂದ ಬರಬೇಕಾದ ಬಾಕಿಯಿಂದ ಹಿಡಿಯಲಾಗುವುದು.

ಕಾಲೇಜೊಂದರ ಮಾಜಿ ಪ್ರಿನ್ಸಿಪಾಲ್ ಮತ್ತು ಒಬ್ಬ ಅಸಿಸ್ಟೆಂಟ್ ಪ್ರೊಫೆಸರರ ನಡವಳಿಕೆ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸರ್ಕಾರಕ್ಕೆ ಕಳುಹಲಾಗಿದೆ. ಮೊತ್ತಬಳ್ಳಾಪುರ ವಿದ್ಯುಚ್ಛಕ್ತಿ ಇಲಾಖಾಧಿಕಾರಿಗಳು, ಹಾಸನ ತಾಲ್ಲೂಕು ಮಾಜಿ ಶಿರಸ್ತೇದಾರರು ಮತ್ತು ಅಲ್ಲಿನ ವೃತ್ತಿ ಶಿಕ್ಷಣಾಲಯದ ಸಿಬ್ಬಂದಿಯವರ ಮೇಲೆ ಬಂದಿರುವ ದೂರುಗಳ ಬಗ್ಗೆ ತನಿಖೆ ನಡೆಸಲಾಗಿದೆ.

ಕಿರಿಯ ವರ್ಗದವರಿಗೆ ಗೃಹಗಳ ನಿರ್ಮಾಣಕ್ಕಾಗಿ ಕೊಟ್ಟ ಹಣವನ್ನು ಕ್ರಮವಾದ ರೀತಿಯಲ್ಲಿ ಉಪಯೋಗಿಸದ ಬಗ್ಗೆ ಒಬ್ಬ ಅಮಲ್ದಾರರ ವರ್ತನೆಯನ್ನು ಖಂಡಿಸಲಾಗಿದೆ. ಇದೇ ಸಂಬಂಧದಲ್ಲಿ ಕಿರಿಯ ವರ್ಗದ ವಿಶೇಷಾಧಿಕಾರಿಗೆ ಎಚ್ಚರಿಕೆ ಕೊಟ್ಟು, ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರನ್ನು ೩ ವರ್ಷ ಕಾಲ ಗುಮಾಸ್ತನಾಗಿ ರಿವರ್ಟ್ ಮಾಡಲಾಗಿದೆ.

ರಾಜಪ್ರಮುಖರ ಹುದ್ದೆ ರದ್ದು ಮಾಡಲು ನಿರ್ಧಾರ

ರಾಜಪ್ರಮುಖರ ಹುದ್ದೆಗಳನ್ನು ರದ್ದುಗೊಳಿಸುವಂತೆ ಸಂಸ್ಥಾನ ಪುನರ್ವಿಂಗಡಣಾ ಸಮಿತಿಯವರು ಮಾಡಿರುವ ಶಿಫಾರಸನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಅನುಮೋದಿಸಿರುವರೆಂದು ತಿಳಿದುಬಂದಿದೆ.

ಬಳ್ಳಾರಿಗಾಗಿ ಸತ್ಯಾಗ್ರಹ ಸನ್ನದ್ಧ

ಬಳ್ಳಾರಿ ತಾಲ್ಲೂಕುಗಳನ್ನು ಆಂಧ್ರಕ್ಕೆ ವರ್ಗಾಯಿಸಬೇಕೆಂದು ಕೇಂದ್ರ ಸರ್ಕಾರದವರು ಭರವಸೆ ನೀಡಿದ್ದರೆ ಏಕೀಕೃತ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನವರು ಹೂಡಬೇಕೆಂದಿರುವ ಸತ್ಯಾಗ್ರಹವನ್ನು ಈ ತಿಂಗಳ ೧೩ ರಿಂದ ಆರಂಭಿಸಲಾಗುವುದೆಂದು ಲೋಕಸಭಾ ಸದಸ್ಯ ಎ. ಶಿವಮೂರ್ತಿಸ್ವಾಮಿಯವರು ತಿಳಿಸಿರುತ್ತಾರೆ. ಎರಡು ಲಕ್ಷ ಪ್ರಜಾ ಸಂಖ್ಯೆಯುಳ್ಳ ಗಡಿಯ ೩೦ ತಾಲ್ಲೂಕುಗಳಲ್ಲೂ ಸತ್ಯಾಗ್ರಹ ನಡೆಯುವುದೆಂದೂ ಮುಂದಿನ ಕ್ರಮ ಜರುಗಿಸುವ ಬಗ್ಗೆ ನಾಳೆ ದಿನ ಸಮ್ಮೇಳನವೊಂದನ್ನು ಹೊಸಪೇಟೆಯಲ್ಲಿ ನೆರೆಸಲಾಗುವುದೆಂದೂ ಗೊತ್ತಾಗಿದೆ. ಈಗಾಗಲೇ ೫೦ ಮಂದಿ ಸತ್ಯಾಗ್ರಹಿಗಳು ಅಲ್ಲಿಗೆ ಆಗಮಿಸಿರುವರು. ಅವರು ವಿರೂಪಾಕ್ಷ ಭುವನೇಶ್ವರಿ ಪಂಪಾಂಬ ಮತ್ತು ಸಿದ್ಧೇಶ್ವರರ ಗುಡಿಗಳಲ್ಲಿ ಪೂಜೆ ಮಾಡಿಸಿ, ಹಳ್ಳಿಗಳಲ್ಲಿ ಮೆರವಣಿಗೆ ನಡೆಸಿದರು.

ಗೋವಾ ರೈಲ್ವೆ ನೌಕರರ ಮುಷ್ಕರದ ಸೂಚನೆ

ಗೋವಾದಲ್ಲಿರುವ ರೈಲ್ವೆ ನೌಕರರಿಗೆ ಸರಿಯಾಗಿ ಸೌಲಭ್ಯಗಳನ್ನು ಒದಗಿಸದ ಕಾರಣದಿಂದ ಈ ತಿಂಗಳ ಅಂತ್ಯದಿಂದ ಅವರು ಮುಷ್ಕರ ಹೂಡುವುದಾಗಿ ನೋಟೀಸು ಕೊಟ್ಟಿರುವರೆಂದು ವರದಿಯಾಗಿದೆ. ಮುಷ್ಕರವು ನಡೆದರೆ ಪರಿಸ್ಥಿತಿಯನ್ನೆದುರಿಸಲು ಪೋರ್ಚುಗಲ್ಲಿನಿಂದ ಹಲವು ರೈಲ್ವೆ ನೌಕರರನ್ನು ಕರೆಸಲಾಗಿದೆಯೆಂದು ಗೊತ್ತಾಗಿದೆ.

೨೪ ಮಂದಿ ಜೂಜುಕೋರರಿಗೆ ೨,೪೦೦ ರೂ. ದಂಡ

ಪೋಲೀಸರಿಗೆ ೧,೨೦೦ ರೂ. ಬಹುಮಾನ

ನಂಜನಗೂಡು ೭

ಇತ್ತೀಚೆ ಕೆಲವು ದಿನಗಳ ಹಿಂದೆ ನಂಜನಗೂಡಿನ ಪೇಟೆಯಲ್ಲಿ ಜೂಜಾಡುತ್ತಿದ್ದರೆಂದು ೨೪ ಜನರನ್ನು ಮತ್ತು ೩೫೦ ರೂ. ಗಳನ್ನು ಪೋಲೀಸರು ವಶಪಡಿಸಿಕೊಂಡು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು. ನ್ಯಾಯಾಧೀಶರಾದ ಶ್ರೀ ಲಿಂಗೇಗೌಡರು ೨೪ ಜನ ಅಪರಾಧಿಗಳಿಗೆ ತಲಾ ೧೦೦ ರೂ. ಜುಲ್ಮಾನೆಯನ್ನೂ, ಕೋರ್ಟು ಏಳುವವರೆಗೆ ಶಿಕ್ಷೆಯನ್ನೂ ವಿಧಿಸಿ, ಮತ್ತು ವೆಂಕಟನಾಯಕ ಎಂಬುವರಿಗೆ ತಲಾ ೨೦೦ ರೂ. ಜುಲ್ಮಾನೆ ಮತ್ತು ೬ ತಿಂಗಳು ಕಠಿಣ ಶಿಕ್ಷೆಯನ್ನೂ ವಿಧಿಸಿದರು. ಪೋಲೀಸಿನವರಿಗೆ ೧,೨೦೦ ರೂ. ಬಹುಮಾನ ಕೊಡಲು ಆಜ್ಞೆಯಾಯಿತು.

ಅಜೀಜ್ ಸೇಟರಿಂದ ಜಾಮೀನು ಹಣ ವಸೂಲಿಗೆ ಆಜ್ಞೆ

ಮೈಸೂರು ೯

ಶ್ರೀ ಎಂ. ಎಸ್. ಮಾಧವರಾವ್ ಮುಂತಾದವರಿಗೆ ಜಾಮೀನುದಾರರು ಈ ಕಾಲ ಕೋರ್ಟಿಗೆ ಹಾಜರಾಗದೆ ಹೋದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಅಪರಾಧಿಗಳಾದ ಬೊಂಬಾಯಿನ ದೊಡ್ಡಸ್ವಾಮಿ ಮತ್ತು ಮುನೀರ್ ಅಹಮದ್ ಕಳೆದ ತಿಂಗಳು ೨೬ನೇ ತಾರೀಖು ಕೋರ್ಟಿನಲ್ಲಿ ಹಾಜರಾಗದಿದ್ದ ಪ್ರಯುಕ್ತ ಅವರ ಪರ ಜಾಮೀನಿನಲ್ಲಿ ೩೦೦ ರೂ. ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಇವನ್ನು ಅವರ ಜಾಮೀನುದಾರರಾದ ಶ್ರೀ ಅಜೀಜ್ ಸೇಟರಿಂದ ವಸೂಲು ಮಾಡಲೂ ಇಂದು ನಗರದ ಪ್ರಥಮ ನ್ಯಾಯಾಧೀಶರು ಆಜ್ಞೆ ಮಾಡಿದರು.

ನೂತನ ಮಧ್ಯ ಪ್ರದೇಶ ಸಂಸ್ಥಾನದ ನಿರ್ಮಾಣ

ಪಂಜಾಬಿನ ಭವಿಷ್ಯ ನಿರ್ಧರಿಸಲು ಕಾಶ್ಮೀರು ಮುಖಂಡರಿಗೆ ಅಧಿಕಾರ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಂಸ್ಥಾನಗಳ ಪುನರ್ವಿಂಗಡಣಾ ಸಮಿತಿ ಶಿಫಾರಸಿನಂತೆ ಮಧ್ಯ ಭಾರತ, ಮಹಾ ಕೋಸಲ, ವಿಂಧ್ಯ ಪ್ರದೇಶ ಮತ್ತು ಭೂಪಾಲ್ ಸಂಸ್ಥಾನಗಳನ್ನು ಐಕ್ಯಗೊಳಿಸಿ ಹೊಸ ಪ್ರತ್ಯೇಕ ಸಂಸ್ಥಾನವನ್ನು ರಚಿಸಬೇಕೆಂದು ನಿರ್ಧರಿಸಿರುತ್ತದೆ. ಪಂಜಾಬಿನ ಭವಿಷ್ಯವನ್ನು ಕುರಿತು ಅಕಾಲಿ ಮುಖಂಡರೊಡನೆ ನೆಹರೂ, ಪಂತ್, ಮೌಲಾನಾ ಆಜಾದ್ ಮತ್ತು ಪಂಡಿತ ಪಂತ್‌ರವರು ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲು ಅವರಿಗೆ ಅಧಿಕಾರವೀಯಲಾಗಿದೆ. ಬೊಂಬಾಯಿಯ ಭವಿಷ್ಯದ ಬಗ್ಗೆ ಇಂದು ತೀರ್ಮಾನವಾಗಲಿದೆ. ಸೌರಾಷ್ಟ್ರ ಕಾಂಗ್ರೆಸ್ ಸಮಿತಿಯವರು ತಮ್ಮ ನಿಲುವನ್ನು ಬದಲಾಯಿಸಿಕೊಂಡಿಲ್ಲ. ಇತರ ವಿವಾದಾಸ್ಪದ ವಿಷಯಗಳ ಬಗ್ಗೆ ನಿರ್ಣಯ ಮಾಡಲು ನಾಲ್ವರು ಮುಖಂಡರಿಗೆ ಬಿಡಲಾಗಿದೆ.

ಹಿಮಾಚಲ ಪ್ರದೇಶ ಪ್ರಾಂತವನ್ನುಳಿದು ಇತರ ಸಿ. ಸಂಸ್ಥಾನಗಳನ್ನು ರದ್ದು ಮಾಡುವಂತೆ ಸಂಸ್ಥಾನ ಪುನರ್ವಿಂಗಡಣಾ ಸಮಿತಿಯು ಮಾಡಿರುವ ಶಿಫಾರಸನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಪ್ಪಿದೆ.

ಕುಪ್ಪಣ್ಣನ ತೋಟದ ಕೊಳದಲ್ಲಿ ಶವ

ಸಿ. ಹಾ. ನ್ ಭಾಗದಲ್ಲಿರುವ ಕುಪ್ಪಣ್ಣನವರ ತೋಟದ ಕೊಳದಲ್ಲಿ ಈ ದಿನ ವಾರಸುದಾರರಿಲ್ಲದ ಗಂಡಸಿನ ಶವವೊಂದು ಪತ್ತೆಯಾಯಿತು. ಮೃತನು ಸುಮಾರು ೩೫ ವರ್ಷದವನೆಂದು ತಿಳಿದುಬಂದಿದೆ. ಕೆಂಪು ವರ್ಣದ ಕೆಮೀಜು ಮತ್ತು ಸೊಂಟಕ್ಕೆ ಬನೀನನ್ನು ಧರಿಸಿಕೊಂಡಿದ್ದನು. ಮೇಲ್ಕಂಡ ಕೊಳದಲ್ಲಿ ಇಂತಹ ಪ್ರಸಂಗಗಳು ಇದುವರೆಗೆ ಹಲವಾರು ನಡೆದು ಕೊಳವನ್ನು ಮುಚ್ಚಬೇಕೆಂದು ಅನೇಕ ಬಾರಿ ಮನವಿ ಮಾಡಿಕೊಂಡಿದ್ದರೂ ಪ್ರಯೋಜನವಾಗಿಲ್ಲ. ಇನ್ನಾದರೂ ಪೌರಸಭೆಯವರೂ ಮತ್ತು ಸರ್ಕಾರದವರೂ ಇದನ್ನು ಗಮನಿಸಿ, ಕೊಳವನ್ನು ಮುಚ್ಚುವುದು ಅಗತ್ಯವೆಂದು ವಾಚಕರೊಬ್ಬರು ತಿಳಿಸಿರುತ್ತಾರೆ.

ಬಳ್ಳಾರಿ ತಾಲ್ಲೂಕುಗಳ ಪ್ರಶ್ನೆ ಪುನಃ ಬರದೆಂದು ಸಾಂತ್ವಕರ ಭಾಷೆ

ಬಳ್ಳಾರಿ ಸಭೆಯಲ್ಲಿ ಹನುಮಂತಯ್ಯನವರ ಹೇಳಿಕೆ

ಬಳ್ಳಾರಿಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಭಾಷಣ ಮಾಡಿ, ಬಳ್ಳಾರಿಯ ಪ್ರಶ್ನೆಯನ್ನು ಪುನಃ ಎತ್ತುವುದಿಲ್ಲವೆಂದು ಪ್ರಧಾನಿ ನೆಹರೂ, ಪಂಡಿತ ಪಂತ್ ಮತ್ತು ಡಾII ಕಟ್ಜೂರವರು ವಾಗ್ದಾನ ಮಾಡಿರುವರೆಂದೂ, ನಾವು ಪ್ರಜಾಪ್ರಭುತ್ವದ ರಾಜ್ಯಭಾರದಲ್ಲಿರುವುದರಿಂದಲೂ, ಆ ತತ್ವದಲ್ಲಿ ನಂಬಿಕೆಯುಳ್ಳವರಾಗಿರುವುದರಿಂದಲೂ ನಾವು ಭಯಪಡಬೇಕಾಗಿಲ್ಲವೆಂದೂ ತಿಳಿಸಿದರು. ಈ ವಿಷಯವಾಗಿ ಸತ್ಯಾಗ್ರಹ ನಡೆಸಬಾರದೆಂದು ಪ್ರಾರ್ಥಿಸಿದರು. ಸಂಸ್ಥಾನ ಶಾಸನ ಸಭೆಗಳೂ ಮತ್ತು ಪಾರ್ಲಿಮೆಂಟೂ ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯನ್ನು ಪರಿಶೀಲಿಸುವವೆಂದೂ, ಅಲ್ಲಿಯವರೆಗೆ ಜನರು ಕಾದುನೋಡಬೇಕೆಂದೂ ಕೋರಿದರು.

ತುಂಗಭದ್ರಾ ನೀರಿನ ವಿಷಯವಾಗಿ ಮೈಸೂರು ಆಂಧ್ರಕ್ಕೆ ಅನ್ಯಾಯ ಮಾಡಿಲ್ಲ. ತುಂಗಭದ್ರಾ ಸಮಿತಿಯ ನಿರ್ಮಾಣದ ಬಗ್ಗೆ ಕಳೆದ ವರ್ಷ ನಡೆದ ಚರ್ಚೆಯು ಪೂರ್ಣವಾಗಿ ಸೌಹಾರ್ದದಿಂದ ಕೂಡಿದ್ದಿತು. ಸಂಸ್ಥಾನ ಪುನರ್ವಿಂಗಡಣಾ ಸಮಿತಿಯು ವಸ್ತುಸ್ಥಿತಿಯನ್ನು [illegible] ಪರಿಶೀಲಿಸಿಲ್ಲ. ಮೂರು ತಾಲ್ಲೂಕುಗಳ ಬಗ್ಗೆ ಅವರ ಅಭಿಪ್ರಾಯವು ತೀರ [illegible] ಎಂದು ಅವರು ನುಡಿದರು. ಸಮಿತಿ ಸದಸ್ಯರು [illegible] ವರೆಂದೂ, ಅವರು ಪ್ರಕೃತಿ [illegible] ವಾಗಿ ವರ್ತಿಸಿರುವರೆಂದೂ ಅಭಿಪ್ರಾಯಪಟ್ಟರು.

ಮೈಸೂರು-ಕರ್ನಾಟಕ ವಿವಾದವನ್ನು ಕುರಿತು, ತಮಗೆ ಮುಖ್ಯ ಮಂತ್ರಿತ್ವ ಹೋಗುವುದೆಂಬ ಭೀತಿಯಿಲ್ಲವೆಂದೂ, ತಾವು ಮುಖ್ಯ ಮಂತ್ರಿಯಾದಾಗ ಎಲ್ಲಾ ಜನರನ್ನೂ ಸಮಾನರನ್ನಾಗಿ ಕಾಣಬೇಕೆಂಬ ಪ್ರತಿಜ್ಞೆಯನ್ನು ತೆಗೆದುಕೊಂಡಿರುವುದಾಗಿಯೂ ನುಡಿದರು. ನೂತನ ಸಂಸ್ಥಾನವು ಸೌಹಾರ್ದ ಮತ್ತು [illegible] ದಲ್ಲಿ [illegible] ಎಂದು ಅವರು [illegible] ದರು.

ರಷ್ಯದ ಕ್ರಾಂತಿಯ ೩೮ನೇ ವಾರ್ಷಿಕೋತ್ಸವ

ರಷ್ಯವು ಮೊನ್ನೆ ಅಕ್ಟೋಬರ್ ಕ್ರಾಂತಿಯ ೩೮ನೇ ವಾರ್ಷಿಕೋತ್ಸವವನ್ನು ನೆರವೇರಿಸಿತು. [illegible] ರಲ್ಲಿ ಆದ ಕ್ರಾಂತಿ ವಿಷಯವಾಗಿ ಭಾಷಣ ಮಾಡುತ್ತಾ, ಪ್ರಥಮ ಉಪ ಪ್ರಧಾನಿ ಕಗಾನೊವಿಚ್‌ರವರು ಶಾಂತಿಗಾಗಿ ರಷ್ಯವು ಮಾಡಿರುವ ಕಾರ್ಯಕ್ರಮವನ್ನು ವಿವರಿಸಿ ಭಾರತ ಮತ್ತು ಬರ್ಮಾದೊಡನೆ ಒಪ್ಪಂದ ಮಾಡಿಕೊಂಡಿರುವುದಾಗಿ ಹೇಳಿದರು. ಯಾರೇ ಆಗಲಿ ರಷ್ಯದ ಒಲವನ್ನು ಪರೀಕ್ಷಿಸಲು ಯತ್ನಿಸಬಾರದೆಂದು ಅವರು [illegible] ಜರ್ಮನಿಯಲ್ಲಿ ಸಾಮ್ರಾಜ್ಯಶಾಹಿಯು ಪುನಃ ತಲೆ ಎತ್ತಲು ಸಹಾಯ ಮಾಡುವುದಕ್ಕೆ ರಷ್ಯವು ಸಿದ್ಧವಾಗಿಲ್ಲವೆಂದು ತಿಳಿಸಿದರು. ಭಾರತ, ಬರ್ಮಾ ಮತ್ತು ಆಫ್ಘಾನಿಸ್ತಾನಕ್ಕೆ ರಷ್ಯದ ಪ್ರಧಾನಿ, ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೆವ್‌ರವರು ಕೊಡುವ ಭೇಟಿಯಿಂದ ಆ ರಾಷ್ಟ್ರಗಳೊಡನೆ ರಷ್ಯದ ಸ್ನೇಹವು ಇನ್ನೂ [illegible] ವುದೆಂದು ತಿಳಿಸಿದರು.

ಶಾರದಾ ಕಲಾ ಮಂದಿರದವರಿಗೆ ವಿಶೇಷ ಬಹುಮಾನ

ದಸರಾ ವಸ್ತು ಪ್ರದರ್ಶನದ ನಾಟಕಗಳ ಸ್ಪರ್ಧೆಯಲ್ಲಿ ಶ್ರೀ ಶಾರದ ಕಲಾ ಮಂದಿರದವರಿಗೆ 'ಕಪ್ಪುಜೇನು' ಎಂಬ ನಾಟಕದ ಅಭಿನಯಕ್ಕಾಗಿ ವಿಶೇಷ ಬೆಳ್ಳಿ ಸ್ಪರ್ಧಾ ಪಾತ್ರೆಯನ್ನು ಬಹುಮಾನವಾಗಿ ಕೊಡಲಾಗಿದೆ. ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಶ್ರೀ ಎಸ್ ವಿ ಜಗನ್ನಾಥಾಚಾರ್‌ರವರು ಈ ನಾಟಕವನ್ನು ರಚಿಸಿ ದಿಗ್ದರ್ಶನ ಮಾಡಿದ್ದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಬುಲ್ಗಾನಿನರವರ ಮೇಲೆ ಬೊಂಬಾಯಿ ಮಕ್ಕಳ ಪುಷ್ಪವೃಷ್ಟಿ

ಪ್ರಧಾನಿ ನೆಹರೂರವರು ರಷ್ಯ ಪ್ರವಾಸ [illegible] ಗೊಂಡಿದ್ದಾಗ ಅವರ ಮೇಲೆ ಹೂ ಮಳೆಗರೆದಂತೆ, ಬೊಂಬಾಯಿ ನಗರಕ್ಕೆ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ನಾಯಕ ಕ್ರುಶ್ಚೆವ್‌ರವರು ಆಗಮಿಸಿದಾಗ ಅವರಿಗೆ ಅದೇ ರೀತಿ ಸ್ವಾಗತ ನೀಡಲಾಗುವುದೆಂದು ಗೊತ್ತಾಗಿದೆ. ೫,೦೦೦ ಬಾಲಕಿಯರು ದೇವತೆಗಳಂತೆ ದಿವ್ಯಾಲಂಕಾರ ಮಾಡಿಕೊಂಡು [illegible] ದಿಂದ ಇಳಿದ ಕೂಡಲೇ ಗುಲಾಬಿ, ಜಾಜಿ ಮಲ್ಲಿಗೆ, ಸೇವಂತಿಗೆ ಪುಷ್ಪಗಳನ್ನು ಚೆಲ್ಲುವರು. ವಿವಿಧ ವರ್ಣಗಳ ಲಂಗವನ್ನು ಹಾಕಿರುವ ಎರಡು ಸಣ್ಣ ಹುಡುಗಿಯರಿಂದ ನಾಯಕರಿಗೆ ಅಪೂರ್ವ ಕಲಾ ಕೌಶಲ್ಯದಿಂದ ಮಾಡಿರುವ ಹಾರವನ್ನು ಅರ್ಪಿಸುವ ಕಾರ್ಯಕ್ರಮವೂ ಇದೆ.

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಹಲಸಂದೆ	[illegible]	[illegible]
ತೊಗರಿ	[illegible]	[illegible]
ಒಣಮೆಣಸಿನಕಾಯಿ	[illegible]	[illegible]
ದುಂಡುಮೆಣಸು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧,೦೦೦ಕ್ಕೆ	[illegible]	[illegible]

[illegible]

ಮೈಸೂರು [illegible]
ಮಾರ್ಕೆಟ್ ಸಮಿತಿ [illegible]

ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಗೊಬ್ಬರದ ಹರಾಜು

ಅಬ್‌ಸ್ಟ್ರಾಕ್ಟ್ ನೋಟಿಫಿಕೇಷನ್

ನಂಬರು 108/55-56
ತಾ 22-10-1955

ಮಾರ್ಕೆಟ್ ಆವರಣದಲ್ಲಿ [illegible] ಗೊಬ್ಬರವನ್ನು 1955ನೇ ನವೆಂಬರ್ 1ರಿಂದ 1956ನೇ ಅಕ್ಟೋಬರ್ 31ರ ವರೆಗೆ [illegible] ಬಗ್ಗೆ ಹರಾಜನ್ನು ತಾರೀಖು 10-11-1955ರ ಬೆಳಿಗ್ಗೆ 10 ಘಂಟೆಗೆ [illegible] ಮಾರ್ಕೆಟ್ ಆಫೀಸಿನಲ್ಲಿ ನಡೆಸಲಾಗುವುದು.

(ಸಹಿ) [illegible]
[illegible] ಮತ್ತು [illegible]
ಮೈಸೂರು
ತಾ 22-10-1955

ಸುಪ್ರೀಂ ಕೋರ್ಟಿನಲ್ಲಿ ಡಾಲ್ಮಿಯಾ ಸಂಸ್ಥೆಗಳ ಅರ್ಜಿಗಳ ವಜಾ

ಡಾಲ್ಮಿಯಾ ಸಿಮೆಂಟ್ ಲಿಮಿಟೆಡ್ ಮತ್ತು ಇತರ ಎರಡು ಸಂಸ್ಥೆಗಳು ಪಂಜಾಬು ಹೈಕೋರ್ಟಿನ ತೀರ್ಪಿನ ವಿರುದ್ಧವಾಗಿ ಸುಪ್ರೀಂ ಕೋರ್ಟಿನಲ್ಲಿ ಹೂಡಿದ್ದ ಅರ್ಜಿಗಳನ್ನು ನೆನ್ನೆ ಮೇಲ್ಪಟ್ಟ ಕೋರ್ಟು ವಜಾ ಮಾಡಿತು. ಡಾಲ್ಮಿಯಾ ಜೈನ್ [illegible] ಕಂಪೆನಿಯ ಅಧಿಕಾರಿಗಳು ಸುಳ್ಳು ಲೆಕ್ಕಗಳನ್ನು ಬರೆದು, ಕಂಪೆನಿಯ ಆಸ್ತಿಗಳನ್ನು ತಪ್ಪು [illegible] ತರ ಸಂಸ್ಥೆಗಳಿಗೆ ವರ್ಗಾಯಿಸುತ್ತಿರುವರೆಂಬ [illegible] ದಿನ ಒಂದೆರಡು ವರ್ಷಗಳ ಹಿಂದೆ [illegible] ಕಾರಣಗಳನ್ನು ಹೂರಡಿಸಲಾಗಿತ್ತು. [illegible] ಕಾರ ದೆಹಲಿ, ಕಲ್ಕತ್ತಾ ಮುಂತಾದ ಕಡೆಗಳಲ್ಲಿ ಶೋಧನೆ ನಡೆದು, ಸಂಬಂಧಪಟ್ಟ ಪುಸ್ತಕಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಬಗ್ಗೆ ಮೊದಲು ಸುಪ್ರೀಂ ಕೋರ್ಟಿನಲ್ಲಿ ಅರ್ಜಿಗಳನ್ನು ಸಲ್ಲಿಸಿ ನಾಗರಿಕರ ಮೂಲಭೂತ ಹಕ್ಕಿನ ನಿಬಂಧನೆಯ ಉಲ್ಲಂಘನೆಯಾಗಿದೆಯೆಂದು ತಿಳಿಸಿದ್ದರು. [illegible] ನ್ನು ತಿರಸ್ಕರಿಸಲಾಗಿತ್ತು. ನಂತರ ಹೈಕೋರ್ಟಿನಲ್ಲಿ ಬೇರೆ ನಿಬಂಧನೆಯನ್ನು ಸೂಚಿಸಿ [illegible] ಅರ್ಜಿ ಹಾಕಲಾಗಿತ್ತು. ಅದನ್ನೂ ವಜಾ ಮಾಡಿ, ಇದರ ಮೇಲೆ ಪುನಃ ಸುಪ್ರೀಂ ಕೋರ್ಟಿಗೆ [illegible] ಲಾಗಿತ್ತು.

FOR SALE

House No 67/15 D Fort behind New Sayyaji Rao Road Mysore Immediate possession For particulars contact

M R SUBBANNA,
Palace Buildings,
Lakshmivilas Agrahar, Mysore

CITY TUTORIAL COLLEGE
MYSORE

Has started Regular School
For Failed S. S. L. C. Students
Timings 11 A M to 4.30 P M
(With 6 periods of work daily)
Another class for Primary School Teachers & School-going students
5.30 P M. to 9 P. M
★ **Hostel facilities available**
★ **Private tutions arranged**
For Sure Success —
READ C T C PUBLICATIONS

ಮೈಸೂರು ಸರ್ಕಾರದ ವಿಮಾ ಇಲಾಖೆ

(ಸಾರ್ವಜನಿಕ ಶಾಖೆ)

ಅಂಕಿಅಂಶಗಳಿಂದಲೇ ವ್ಯಕ್ತವಾಗುತ್ತದೆ !

★

1954-55 ರಲ್ಲಿ ಹೊಸ ವ್ಯವಹಾರವು 1·82 ಕೋಟಿ ರೂ ಗಳಿಗೂ ಮೀರಿದೆ

ನಿಧಿಯು 4·79 ಕೋಟಿ ರೂ. ಗಳಿಗೂ ಮೀರಿದೆ

ವಿಮೆ ಮಾಡಲ್ಪಟ್ಟ ಮೊಬಲಗು 13·87 ಕೋಟಿ ರೂ.

ವಿಲೆ ಮಾಡಲ್ಪಟ್ಟಿರುವ ಕ್ಲೈಮು ಮೊಬಲಗು 2·45 ಕೋಟಿ ರೂ. ಗಳಿಗೆ ಮೀರಿದೆ

ಅತಿ ಹೆಚ್ಚಿನ ಬೋನಸ್

(ಹೋಲ್ ಲೈಫ್‌ರೂ 20 - ಎಂಡೋಮೆಂಟ್ ರೂ 17.)

— ಪ್ರೀಮಿಯಂ ದರದಲ್ಲಿ ಇಳಿತಾಯ —

★

ಮೋಟಾರು ವಾಹನಗಳ ವಿಮೆಯನ್ನೂ

ಸುಲಭ ದರಗಳಲ್ಲಿ ಅಂಗೀಕರಿಸಲಾಗುವುದು

ಲಕ್ಷ್ಮಿ ★

13-11-55 ರಿಂದ : **ಅಮೋಘ ಪ್ರಾರಂಭ**

ದಿನವಹಿ 4 ಪ್ರದರ್ಶನಗಳು

● ಕಳ್ವನಿನ್ ಕಾದಲಿ ●

(ತಮಿಳು)

ಪಾತ್ರ - ಶಿವಾಜಿ ಗಣೇಶನ್, ಟಿ ಆರ್ ರಾಮಚಂದ್ರನ್, ಡಿ ಬಾಲಸುಬ್ರಹ್ಮಣ್ಯಂ, ಬಿ ಎಸ್ ಸರೋಜಾ, ಪಿ ಭಾನುಮತಿ, ಕೆ ಆರ್ ಚೆಲ್ಲಂ ಮುಂತಾದವರು

ಕಥೆ. ಕಲ್ಕಿ

ಈಗ ನಡೆಯುತ್ತಿದೆ ಅಪ್ಪಟ ಹಾಸ್ಯ ಚಿತ್ರ — **ದೊಂಗ ರಾಮುಡು**

Edited, Printed and Published by A R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳನ್ನು ಬರೆಯಿರಿ

ಸಾಧ್ವಿ

ಬಿಡಿಯ ಪ್ರತಿಗೆ 3 ಕಾಸು

ಗೋ|| ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಗಂಡಿ, ಶಿಫಾನ್
ಸೀರೆ ಮತ್ತು ಸೂಟಿನ ಸೀರೆಗಳು
ಹೊಸ ಮಾದರಿ ಡಿಸೈನುಗಳಲ್ಲಿ
ಬಂದಿವೆ ಇಂದೇ ಭೇಟಿ ಕೊಡಿ
M.T. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂಪುಟ : ೧೪] SADHVI : THURSDAY 10-11-1955 ಮೈಸೂರು ಗುರುವಾರ ೧೦-೧೧-೧೯೫೫ [ಸಂಚಿಕೆ : ೬೪

ಅಫ್ಘಾನಿಸ್ತಾನ-ಪಾಕಿಸ್ತಾನಗಳ ನಡುವೆ ವಿರಸ ಹೆಚ್ಚಿತು

ಕರ್ನಾಟಕ ಪ್ರಾಂತ ರಚನೆ ಬಗ್ಗೆ ೯ ದಿನಗಳಲ್ಲಿ ನಿರ್ಧಾರ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಸೇ[illegible]ಸುವ ಉನ್ನತ ಅಧಿಕಾರ ಪಡೆದ ನಾಲ್ವರ [illegible]ತಿಯು ಕರ್ನಾಟಕ ಸಂಸ್ಥಾನದ ರಚನೆ ವಿ[illegible]ಯವನ್ನು ಅಖೈರಾಗಿ ೯ ದಿನಗಳಲ್ಲಿ ನಿರ್ಧರಿಸ[illegible]ವುದೆಂದು ಗೊತ್ತಾಗಿದೆ. ಉನ್ನತ ಸಮಿತಿಯ[illegible] ಮೈಸೂರು ಪ್ರತ್ಯೇಕವಾಗಿ ಉಳಿಯ[illegible]ಬೇಕೆಂದು ಒತ್ತಾಯ ಮಾಡುತ್ತಿರುವ ಮೈಸೂ[illegible] ಪ್ರಮುಖರ ಅಭಿಪ್ರಾಯವನ್ನು ತಿಳಿದುಕೊ[illegible]ವರು ಗಡಿ ಭಾಗಗಳ ವಿಷಯವನ್ನೂ ಸಹ [illegible]ಂತರ ಸಮಿತಿಯು ನಿರ್ಧರಿಸಲಿದೆ ಅದರಲ್ಲಿ [illegible]-ಕಾರ್ವಾರದ ಭಾಗಗಳ ಪ್ರಶ್ನೆಯೂ [illegible]

[illegible]ಕದ ಸೋಮವಾರ ಪಂಡಿತ ಪಂತರನ್ನು ಮೈ[illegible] ಪ್ರತ್ಯೇಕತಾ ವಾದಿಗಳು ಭೇಟಿಮಾಡಿದ್ದರು [illegible] ಕರ್ನಾಟಕದ ಪರ ಮತ್ತು ವಿರೋಧದ ಗುಂ[illegible]ವರುಗಳು ನೆನ್ನೆ ಪ್ರಧಾನಿ ನೆಹರೂರವರನ್ನು [illegible]ಟಿಮಾಡಿದ್ದರೆಂದೂ, ಸ್ವಲ್ಪ ಹೊತ್ತು ಚರ್ಚೆ [illegible]ದನಂತರ ಏಕ ಕರ್ನಾಟಕದ ರಚನೆಗೆ [illegible] ಅವರು ಇದಿರಾಗಿದ್ದುದು ವ್ಯಕ್ತವಾದುದಾಗಿ [illegible] ವರದಿಯಾಗಿದೆ

[illegible]ಲಕಿ ಮೇಲೆ ಅತ್ಯಾಚಾರಕ್ಕಾಗಿ ವೃದ್ಧನಿಗೆ ೩ ವರ್ಷ ಸಜಾ

[illegible] ಜಿಲ್ಲೆಯ [illegible]ದ ಮುತ್ತ[illegible] ೬೦ ವರ್ಷ ವಯಸ್ಸಿನವನು ೧೨ ವರ್ಷದ [illegible]ಯ ಮೇಲೆ ಅತ್ಯಾಚಾರ ನಡೆಸಿದ [illegible]ಕ್ಕಾಗಿ ಅವನಿಗೆ ಸೆಷನ್ಸ್ ನ್ಯಾಯಾಧೀ[illegible] ೩ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ ಆ[illegible]ಯ ವಯಸ್ಸನ್ನು ಪರಿಗಣಿಸಿ ಮೇಲ್ಕಂಡ [illegible] ನ್ಯಾಯಾಧೀಶರು ಅಭಿಪ್ರಾ[illegible]ಟ್ಟಿರುವರು

ಸುಧಾ ಜೋಷಿಯವರಿಗೆ ೧೦ ವರ್ಷ ಸಜಾ

ಈ ನಗರದಲ್ಲಿ ಈ ದಿನ ಸಂಜೆ ಕೆಲವು ಪ್ರಸ್ತುತ ಸಂಭವಿಸಿತು. ಅಖಂಡ ಕರ್ನಾಟಕವಾದಿಗಳೂ, ಮೈಸೂರುವಾದಿಗಳೂ ಪ್ರತ್ಯೇಕ ಸಭೆಗಳ ಬಳಿ ಘರ್ಷಣೆ ನಡೆದಾಗ ಪೊಲೀಸರು ಲಘುವಾದ ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದರು. ಮೈಸೂರುವಾದಿಗಳ ಕಡೆ ಹಲವರಿಗೆ ಗಾಯಗಳಾದುವು. ಅವರಲ್ಲಿ ಇಬ್ಬರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಅರಮನೆ ರಸ್ತೆಯ ಬಳಿ ಪೊಲೀಸರ ಕಾವಲು ಏರ್ಪಾಡಾಗಿದೆ. ಅಲ್ಲಿ ಗುಂಪುಗೂಡಲು ಅವಕಾಶವಿಲ್ಲ.

ನೆಹರೂರವರ ಜಯಂತಿ

ಅಮೆರಿಕಾ, ರಷ್ಯಾ ಮುಂತಾದ ದೇಶಗಳ ನಾಯಕರ ಅಭಿನಂದನೆ

ಮೊನ್ನೆ ದೆಹಲಿಯಲ್ಲಿ ಪ್ರಧಾನಿ ನೆಹರೂರವರ ೬೬ನೇ ವರ್ಷದ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಮಕ್ಕಳ ದಿನಾಚರಣೆಯೂ ನಡೆಯಿತು. ನೆಹರೂರವರು ನಗರದ ಮಧ್ಯೆ ೫೦ ಸಾವಿರ ಮಕ್ಕಳ ನೃತ್ಯ, ಗೀತ ಮತ್ತು ಕ್ರೀಡೆಗಳನ್ನಾಡಿದರು. ಹತ್ತು ಮಕ್ಕಳು ಸ್ಕೌಟ್ ಮೋಟಾರು ನಗರ ಆಸ್ಪತ್ರೆಯ ಆಟದ ವಸ್ತುಗಳನ್ನು ಕೊಟ್ಟು ನೆಹರೂರವರ ಮುಂದೆ ಮಾರ್ಚ್‌ಪಾಸ್ಟ್ ಮಾಡಿದರು.

ನೆಹರೂರವರು ಒಂದು ಪಾರಿವಾಳವನ್ನು ಹಾರಿಸಿದರು. ಅನಂತರ ೬೬ ಮಕ್ಕಳು ಸಹ ಬಿಳಿಯ ಪಾರಿವಾಳಗಳನ್ನು ಹಾರಿಸಿ, ನೆಹರೂರವರ ಶಾಂತಿ ಸಂದೇಶವನ್ನು ಪ್ರಕಾಶಪಡಿಸಿದರು.

ಶಾಲೆಯೊಂದರಲ್ಲಿ ೬೬ ವಿದ್ಯಾರ್ಥಿಗಳು ನೆಹರೂರವರಂತೆ ವೇಷಭೂಷಣ ಧರಿಸಿ ಬಲೂನುಗಳನ್ನು ಹಾರಿಸುತ್ತಾ ನೆಹರೂರವರಿಗೆ ಜಯಘೋಷ ಮಾಡಿದರು.

ನೆಹರೂರವರಿಗೆ ದುರ್ಗಾದಾಸ್ ಕೂರಿ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರ್, ರಷ್ಯಾ ಪ್ರಧಾನಿ ಬಲ್ಗಾನಿನ್, ಉತ್ತರ ವಿಯಟ್ನಾಮಿನ ಡಾ|| ಹೋಚಿ ಮಿನ್, ರಷ್ಯದ ನಾಯಕ ಕ್ರುಶ್ಚೆವ್, ಯುಗೋಸ್ಲೇವಿಯದ ಮಾರ್ಷಲ್ ಟಿಟೋ ಮತ್ತು ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್ ಸಂದೇಶಗಳನ್ನು ಕಳುಹಿಸಿರುವರು.

ಕಳ್ಳತನಗಳು

ಒಂಟಿಕೊಪ್ಪಲಿನಲ್ಲಿ ವಾಸಿಸುವ ವಿ ರಂಗಾಚಾರ್ಯರ ಮನೆಗೆ ಕಳ್ಳರು ನೆನ್ನೆ ರಾತ್ರಿ ನುಗ್ಗಿ, ೪೭೦ ರೂ. ಬೆಲೆಯಾಗುವ ಗಡಿಯಾರ ಚಿನ್ನದ ಪದಾರ್ಥ ಮುಂತಾದುವನ್ನು ಅಪಹರಿಸಿರುವುದಾಗಿ ಗೊತ್ತಾಗಿದೆ.

ನೊರಟ ರಸ್ತೆಯಲ್ಲಿರುವ ಶ್ರೀ ಎ ಸೀತಾರಾಮಯ್ಯನವರ ಮನೆಯಲ್ಲಿ ನೆನ್ನೆ ಸಂಜೆ ಬೀಗ ಮುರಿದು ೩೦೦ ರೂ ಗಳ ಒಡವೆ ಮತ್ತು ಇತರ ಸಾಮಾನುಗಳನ್ನು ಕದಿಯಲಾಗಿದೆ.

ಗಂಧದ ಮರಗಳ ಸಾಗಾಣಿಕೆ ಪತ್ತೆ

ದಸ್ತಗಿರಿಯಾದವರಲ್ಲಿ ಒಬ್ಬನ ಮರಣ

ಮೈಸೂರು ೧೫

ಇದೇ ತಾಲ್ಲೂಕಿನ ಅರಸಿನಕೆರೆಯಲ್ಲಿ ಕರಿಯ, ಕಂಬಯ್ಯ ಮತ್ತು ಇತರರು ೨೦೦೦ ರೂ ಬೆಲೆಯ ಗಂಧದ ಮರಗಳನ್ನು ಅಪಹರಿಸಿ ಸಾಗಿಸುತ್ತಿದ್ದಾಗ ಪಟೇಲ್ ಶ್ರೀ ಪುಟ್ಟಸ್ವಾಮಿಯವರು ಅವರನ್ನು ಪತ್ತೆ ಮಾಡಿ ಪೊಲೀಸರ ವಶಕ್ಕೆ ಒಪ್ಪಿಸಿದರು. ಅವರನ್ನು ಠಾಣೆಗೆ ಕರೆತರುತ್ತಿದ್ದಾಗ ಕರಿಯ ಎಂಬುವನು ದಾರಿಯಲ್ಲೇ ಮೃತಪಟ್ಟನೆಂದು ತಿಳಿದುಬಂದಿದೆ.

ಮೈಸೂರು ಮಕ್ಕಳ ಕೂಟ

ನೆಹರೂರವರ ಜಯಂತಿ ಸಂಬಂಧವಾಗಿ ಮೊನ್ನೆ ನಡೆದ ಪ್ರದರ್ಶನದ ಕಟ್ಟಡದಲ್ಲಿ ಪೌರಸಭೆಯ ಆಶ್ರಯದಲ್ಲಿ ೩೦೦೦ ಮಕ್ಕಳಿಗೆ ಕೊಡುವ ತಿಂಡಿ ಹಂಚಲಾಯಿತು. ಪ್ರಜಾ ಮಂತ್ರಿ ಶ್ರೀ ಟಿ ಸುಬ್ರಮಣ್ಯರವರು ಬಹುಮಾನಗಳನ್ನು ಹಂಚಿದರು. ಪೌರಸಭೆ ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರು ಭಾಷಣ ಮಾಡಿದರು. ಜಗನ್ಮೋಹನ ಮತ್ತು ಚಿಕ್ಕಪೇಟೆಯ ವಿದ್ಯಾಮಂದಿರಗಳು ಮತ್ತು ಗುಡ್ ಶೆಪರ್ಡ್ ಕಾನ್ವೆಂಟಿನ ಮಕ್ಕಳಿಂದ ನೃತ್ಯ, ನಾಟಕ ಮತ್ತು ವಿವಿಧ ವೇಷಗಳು ನಡೆದುವು. ಎಸ್. ಮೂರ್ತಿ ಬೆಳ್ಳೂರು ದೇವಸ್ಥಾನದ ಸಮೀಪದ ನೃತ್ಯವು ನಡೆಯಿತು.

ಬೈಸಿಕಲ್ಲುಗಳ ಕಳುವು ಮತ್ತು ಮಾರಾಟಕ್ಕಾಗಿ ಸಜಾ

ಮರಿಸಿದ್ದಯ್ಯ ಮತ್ತು ರಂಗಸ್ವಾಮಿ ಎಂಬಿಬ್ಬರು ನಗರದ ನಾನಾ ಕಡೆಗಳಲ್ಲಿ ಬೈಸಿಕಲ್ಲುಗಳನ್ನು ಕದ್ದು ಅವುಗಳ ಭಾಗಗಳನ್ನು ಮಾರುತ್ತಿದ್ದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಗರದ ೧ನೇ ನ್ಯಾಯಾಧೀಶರು ಅವರಿಬ್ಬರಿಗೆ ತಲಾ ೬ ತಿಂಗಳು ಕಠಿಣ ಸಜಾ ವಿಧಿಸಿದ್ದಾರೆ.

ಉಪನ್ಯಾಸ ಮತ್ತು ಸಂಗೀತ

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂಜೆ ಪ್ರಯೋಗ ಸಂಘದವರು ವಿದ್ಯಾ ಗಣಪತಿಯ ೩೦ನೇ ಕ್ರಮ ಪ್ರಸ್ತಾರಕೋತ್ಸವದ ಅಂಗವಾಗಿ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ ಎಂಬ ವಿಷಯವಾಗಿ ಶ್ರೀ ಎಚ್ ಎಸ್ ವರದದೇಶಿಕಾಚಾರ್ಯರ ಉಪನ್ಯಾಸವನ್ನು ಏರ್ಪಡಿಸಿರುವರು. ವಿ|| ಚಾತುರ್ವೇದಿ ರಾಮಚಂದ್ರಾಚಾರ್ಯರು ಅಧ್ಯಕ್ಷತೆ ವಹಿಸುವರು. ರಾತ್ರಿ ೭|| ಗಂಟೆಗೆ ವಿ|| ಎಸ್ ಬಿ ಗೋಪಾಲಕೃಷ್ಣರವರ ಗಾಯನವು ವಿ|| ಕೆ ಪುಟ್ಟಸ್ವಾಮಯ್ಯರ ಪಿಟೀಲು ಮತ್ತು ವಿ|| ವಿ ಎಸ್ ರಾಜಗೋಪಾಲರವರ ಮೃದಂಗದೊಡನೆ ನಡೆಯುವುದು. ನಾಳೆ ಸಂಜೆ ೬|| ಗಂಟೆಗೆ ದೈವಭಕ್ತಿ ಎಂಬ ವಿಷಯವಾಗಿ ಆ|| ಮಹಾ ವಿದ್ವಾನ್ ಎಂ ಎಸ್ ವೆಂಕಟೇಶ ಶಾಸ್ತ್ರಿಗಳ ಉಪನ್ಯಾಸವೂ ೭|| ಸಿ ಸ್ವಾಮಿಮೂರ್ತಿ ವೆಂಕಟನಾರಾಯಣದಾಸರ ಗಾಯನವೂ ಆ|| ವಿ|| ಎ ಎಸ್ ಶಿವರಾಮಯ್ಯನವರ ಪಿಟೀಲು ಮತ್ತು ವಿ|| ಎಂ. ಅನಂತಸ್ವಾಮಿ ಐಯ್ಯರ ಮೃದಂಗದೊಡನೆ ನಡೆಯಲಿದೆ. ಸರ್ವರಿಗೂ ಸ್ವಾಗತವಿದೆ.

ಕರ್ನಾಟಕ ಏಕೀಕರಣಕ್ಕೆ ಹನುಮಂತಯ್ಯನವರ ಒತ್ತಾಯ

ಶಾಸನ ಸಭೆಯಲ್ಲಿ ಭಾಷಣ

ಸ್ವಂ ಸು ಫೋ] ಬೆಂಗಳೂರು ೧೫

ಈ ದಿನ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳು ಇಲ್ಲಿ ಆರಂಭವಾದುವು. ಕೆಳ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕರ್ನಾಟಕದ ಏಕೀಕರಣವಾಗಬೇಕೆಂದು ಬಹಳ ಸ್ವತಂತ್ರವಾಗಿ ಭಾಷಣ ಮಾಡಿದರು. ಈ ವಿಚಾರವನ್ನು ವಿಶಾಲ ದೃಷ್ಟಿಯಿಂದ ನೋಡಬೇಕೆಂದೂ, ಸಂಕುಚಿತ ಭಾವನೆಗೆ ಎಡೆಕೊಡಬಾರದೆಂದೂ ತಿಳಿಸಿದರು. ಹಿಂದೆ ಮೈಸೂರಿನ ರಾಜ್ಯಾಂಗ ಸಭೆಯು ಇತರರನ್ನು ಮೈಸೂರಿಗೆ ಸ್ವಾಗತಿಸುವ ನಿರ್ಣಯ ಮಾಡಿರುವುದನ್ನು ಅವರು ಸಭೆಯ ಗಮನಕ್ಕೆ ತಂದು, ಆ ಪ್ರಕಾರ ಎಲ್ಲರನ್ನೂ ಸ್ವಾಗತಿಸುವುದು ಧರ್ಮವೆಂದು ಹೇಳಿದರು. ಆ ಪ್ರಾಂತಗಳ ಒಂದೂವರೆಕೋಟಿ ಜನರು ಮೈಸೂರಿಗೆ ಸೇರಬಯಸಿ ಬಂದಿರುವಾಗ ಅವರಲ್ಲಿ ಹಲವರು ಬೇಡ, ಇತರರು ಬೇಕೆಂದು ಹೇಳುವುದು ಸಮಂಜಸವೂ, ನ್ಯಾಯವೂ ಸಮ್ಮತವೂ ಅಲ್ಲವೆಂದು ಅವರು ನುಡಿದರು. ಈ ಅಭಿಪ್ರಾಯಕ್ಕೆ ರಾಜಕೀಯ ಸಮರ್ಥನೆಯೂ ಸಹ ಇಲ್ಲವೆಂದು ಅವರು ಹೇಳಿದರು.

ಮೇಲ್ಮನೆಯಲ್ಲಿ ಈ ವಿಷಯವಾಗಿ ಇರುವ ಭಿನ್ನಾಭಿಪ್ರಾಯವನ್ನು ಪ್ರಸ್ತಾಪಿಸಿ, ಕಾವು ತಪ್ಪಿದ್ದರೂ, ತಪ್ಪನ್ನು ಸರಿಪಡಿಸಿಕೊಳ್ಳುವ ಪ್ರವೃತ್ತಿ ಇರಬೇಕೆಂದೂ, ವ್ಯಕ್ತಿಗಳು ಸ್ವಾರ್ಥಾಸಕ್ತರಾಗಬಾರದೆಂದೂ ತಿಳಿಸಿದರು.

ನಗರದಲ್ಲೂ ಘರ್ಷಣೆ

ಪುನಃ ರಾಷ್ಟ್ರ ಧ್ವಜ ಹರಿದ ಪ್ರಸಂಗ

ಮೈಸೂರು ೧೫

ಇಂದು ಮಧ್ಯಾಹ್ನ ನಗರದ ಶೇಷಾದ್ರಿಪುರಂ ಛತ್ರದ ಬಳಿ ಸಭೆ ಸೇರಲೆತ್ನಿಸಿದ ಕರ್ನಾಟಕ ವಾದಿಗಳಾದ ವಿದ್ಯಾರ್ಥಿಗಳ ಒಂದು ಗುಂಪಿಗೂ ಮತ್ತು ಮೈಸೂರು ವಾದಿಗಳ ಗುಂಪಿಗೂ ಘರ್ಷಣೆಯಾಗಿ ೪-೫ ಮಂದಿಗೆ ಪೆಟ್ಟುಗಳು ಬಿದ್ದುವು. ಮತ್ತು ರಾಷ್ಟ್ರಧ್ವಜವನ್ನು ಕರ್ನಾಟಕ ವಾದಿಗಳಿಂದ ಹಲವರು ಕಿತ್ತುಕೊಂಡು ಹರಿದುಹಾಕಿದರು.

ಎರಡು ಗುಂಪುಗಳವರೂ ನಗರದಲ್ಲಿ ಮೆರವಣಿಗೆ ಮಾಡಿಕೊಂಡು ಇಲ್ಲಿ ಸಂಧಿಸಿದ್ದರು. ಘರ್ಷಣೆಯನಂತರ ಮೈಸೂರು ವಾದಿಗಳ ಗುಂಪು ಮಹಾರಾಜ ವಿದ್ಯಾರ್ಥಿ ನಿಲಯಕ್ಕೆ ತೆರಳಿ ದಾಂಧಲೆ ಮಾಡಿ ಸ್ವಲ್ಪ ನಷ್ಟವನ್ನುಂಟುಮಾಡಿತು. ಅನಂತರ ಅವರು ಟೌನ್ ಹಾಲ್ ಕಡೆಗೆ ಮೆರವಣಿಗೆಯಲ್ಲಿ ತೆರಳಿ ಅಲ್ಲಿ ಸಭೆ ಸೇರಿ ಅನಂತರ ಚದುರಿದರೆಂದು ತಿಳಿದುಬಂದಿದೆ. ಪೊಲೀಸರು ಬಂದು ಹೆಚ್ಚಿನ ಘಟನೆಗಳಾಗದಂತೆ ತಡೆದರು.

ನೆಹರೂರವರಿಗೆ ಶುಭಾಶಯ

ಪ್ರಧಾನಿ ನೆಹರೂರವರ ೬೬ನೇ ವರ್ಷದ ಜಯಂತಿಯು ಮೊನ್ನೆ ನಗರದ ಹಲವಾರು ಕಡೆಗಳಲ್ಲಿ ನಡೆಯಿತು. ಅವರಿಗೆ ಶುಭಾಶಯವನ್ನು ಕೋರಿ ನಗರ ಕಾಂಗ್ರೆಸ್ ಸಮಿತಿಯವರು, ದಕ್ಷಿಣ ಪಾರ್ಟಿ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಸ್ ಗೋಪಾಲಾಚಾರ್ಯರೂ ತಂತಿಗಳನ್ನು ಕಳುಹಿಸಿದ್ದಾರೆ

ಪೂರ್ವ ಪಶ್ಚಿಮ ನಾಗರಿಕತೆಗಳ ವಿಂಗಡಣೆ ಸಾಧ್ಯವಿಲ್ಲ

ಶ್ರೀ ಕೋದಂಡರಾಯರ ಭಾಷಣ

ಮೈಸೂರು ೧೬

ರಾಜಧಾನಿಯ ಕೌನ್ಸಿಲ್ ಮಂದಿರ ಆವರಣದಲ್ಲಿ ಕಳೆದ ಭಾನುವಾರ ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಶ್ರೀ ಪಿ ಕೋದಂಡರಾಯರು ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ನಾಗರಿಕತೆ ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು ಶಾರದಾ ವಿಲಾಸ ಬಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಟಿ ಎಸ್ ರಾಮಲಿಂಗ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ ಶಾರದಮ್ಮನವರಿಂದ ಪ್ರಾರ್ಥನೆ ಯಾದನಂತರ ಡಾ॥ ಎಂ ವಿ ಕೃಷ್ಣರಾಯರು ಸ್ವಾಗತ ಭಾಷಣ ಮಾಡಿ ಶ್ರೀ ಕೋದಂಡರಾಯರ ಪರಿಚಯ ಮಾಡಿಕೊಟ್ಟರು

ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ನಾಗರಿಕತೆಗಳನ್ನು ಭೌಗೋಳಿಕವಾಗಿ ವಿಂಗಡಿಸಲು ಸಾಧ್ಯವಿಲ್ಲ ವರ್ಣವು ಮನುಷ್ಯನು ಹುಟ್ಟುವಾಗಲೇ ನಿರ್ಧಾರವಾಗುತ್ತದೆ ಆದರ ನಾಗರಿಕತೆಯನ್ನು ಅವನು ತನ್ನ ಸಾಧನೆಗಳು ಚಟುವಟಿಕೆಗಳ ಪ್ರಕಾರ ರೂಪಿಸಿಕೊಳ್ಳುತ್ತಾನೆ ನಾಗರಿಕತೆಯು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ ಎಂಬುದಾಗಿ ಶ್ರೀ ಕೋದಂಡರಾಯರು ತಮ್ಮ ಭಾಷಣದಲ್ಲಿ ತಿಳಿಸಿದರು

ಅಧ್ಯಕ್ಷರ ಭಾಷಣ ನಂತರ ಶ್ರೀ ಎಸ್ ರಾಮಮೂರ್ತಿಯವರಿಂದ ವಂದನಾರ್ಪಣೆ ಯಾದನಂತರ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

ಧನಲಕ್ಷ್ಮಿ ಸ್ಟೋರ್

ಪ್ರಸಾದ್ ಅಂಡ್ ಕೋ ಮಾಲೀಕರಾದ ಶ್ರೀ ಕೆ ಎಸ್ ರಾಮಚಂದ್ರರಾಯರು ನಗರದ ತ್ಯಾಗರಾಜ ರಸ್ತೆಯಲ್ಲಿರುವ ತಮ್ಮ ಹೊಸದಾಗಿ ಧನಲಕ್ಷ್ಮಿ ಸ್ಟೋರ್ಸನ್ನು ತೆರೆದು ಮಿತ್ರರನ್ನು ಕರೆದು ಸತ್ಕರಿಸಿದರು ಬಿ ಎಸ್ ಚೊಕ್ಕಣ್ಣ ಮತ್ತು ಪಾರ್ಟಿಯವರ ಸಂಗೀತದ ಏರ್ಪಾಡಾಗಿತ್ತು

ಬೆಳ್ಳಿ ಸಾಮಾನು ಕಳುವು

ರಾಜಾರಾಂ ಅಗ್ರಹಾರದಲ್ಲಿ ವಾಸಿಸುವ ರಿಜಿಸ್ಟರ್ಡ್ ಪೋಸ್ಟ್ ಮಾಸ್ಟರ್ ಶ್ರೀ ಸಿ ಪಿ ರಾಜು ಅಯ್ಯಂಗಾರರವರ ಮನೆ ಬೀಗವನ್ನು ಮುರಿದು ಒಂದು ಬೆಳ್ಳಿ ಚೊಂಬು ಮತ್ತು ಇತರ ಸಾಮಾನುಗಳನ್ನು ಕಳುವು ಮಾಡಲಾಗಿದೆ ಎಂದು ಗೊತ್ತಾಗಿದೆ

ಕೈ ಗಡಿಯಾರದ ಅಪಹಾರ

ವಾಣಿವಿಲಾಸ ರಸ್ತೆಯಲ್ಲಿರುವ ಶ್ರೀ ನಾರಾಯಣರಾವ್ ಎಂಬುವರ ಮನೆಯಲ್ಲಿ ಎರಡು ಬೆಲೆ ಬಾಳುವ ಕೈ ಗಡಿಯಾರವನ್ನು ಅಪಹರಿಸಲಾಗಿದೆಯೆಂದು ಪೋಲೀಸರಿಗೆ ದೂರು ಬಂದಿರುತ್ತದೆ

ದೀಪಾವಳಿ ಶುಭಾಶಯಗಳು

ಮದ್ರಾಸಿನಲ್ಲಿರುವ ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಷನ್ ಸರ್ವಿಸ್ಸಿನವರು ನಮಗೆ ಕಳುಹಿಸಿರುವ ಶುಭಾಶಯಗಳಿಗಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇವೆ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿರುವ ಶ್ರೀ ಜಯಲಕ್ಷ್ಮಿ ಬ್ಯಾಂಗಲ್ಸ್ ಸ್ಟೋರ್ಸ್‌ನವರು ಕಳುಹಿಸಿರುವ ಶುಭಾಶಯಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸುತ್ತೇವೆ

ಬ್ಯಾವಿಲಿ ಸ್ಟೋರ್ಸಿನ ಮಾಲೀಕರಾದ ಶ್ರೀ ಎಂ ಆರ್ ಬಸಪ್ಪನವರು ಕಳುಹಿಸಿರುವ ದೀಪಾವಳಿ ಶುಭಾಶಯಗಳಿಗಾಗಿ ಕೃತಜ್ಞತೆಯನ್ನು ಸೂಚಿಸುತ್ತೇವೆ

ನರಸಿಂಹರಾಜ ಮೊಹಲ್ಲೆಯ ರಿಕ್ರಿಯೇಷನ್ ಕ್ಲಬ್

ನರಸಿಂಹರಾಜ ಮೊಹಲ್ಲಾ ರಿಕ್ರಿಯೇಷನ್ ಕ್ಲಬ್ಬಿನ ಆರಂಭೋತ್ಸವವು ಕಳೆದ ಶುಕ್ರವಾರ ಶ್ರೀ ಕೆ ಎಸ್ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು ಸಂಘದ ಉದ್ದೇಶವನ್ನು ಅಧ್ಯಕ್ಷರು ವಿವರಿಸಿ ಎಲ್ಲರೂ ಅದರ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ತಿಳಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಗೃಹಕೃತ್ಯದ ನೋಟೀಸು

ಕೃಷ್ಣರಾಜ ಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿ ಸಾಸಲು ಗ್ರಾಮದಲ್ಲಿರುವ ಈ ಕೆಳಕಂಡ ಜಮೀನು ನನ್ನ ಸ್ವಂತದ್ದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ

ನನಗೆ ಸೇರಿದ ಜಮೀನನ್ನು ನನ್ನ ಮಗನು ಮತ್ತು ಅವನ ಕುಟುಂಬ ವಹಿಸಿಕೊಂಡಿರುತ್ತಾನೆ ಈತನು ಕೆಲವು ಜನರ ದುರ್ಬೋಧನೆಗೆ ಒಳಗಾಗಿ ಸದ್ರಿ ಜಮೀನಿನ ವ್ಯವಹಾರಗಳನ್ನು ಪರಭಾರೆ ಮಾಡುವುದಾಗಿ ತಿಳಿದುಬಂದಿರುತ್ತದೆ ಯಾರೂ ಸದರಿಯವರಿಂದ ನನ್ನ ಜಮೀನುಗಳನ್ನು ಕ್ರಯ ಭೋಗ್ಯ ವಗೈರೆ ಸ್ವಾಧೀನ ಮಾಡಿಸಿಕೊಂಡಲ್ಲಿ ಅದು ನನ್ನನ್ನು ಬದ್ಧಪಡಿಸ ತಕ್ಕದ್ದಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೆ

ಸದ್ರಿಯವರ ಸ್ವಾಧೀನದಲ್ಲಿರುವುದು

ಸರ್ವೆ ನಂ 156ಕ್ಕೆ 6 ಎಕರೆ 29 ಗುಂಟೆ ಮತ್ತು

275/2ಕ್ಕೆ 1 „ 26 „

273ಕ್ಕೆ 1 „ 16 „

ಈ ಎಡಗೈ ಹೆಬ್ಬೆಟ್ಟಿನ ಗುರುತಿನ ರುಜು ಹಲೀವೇಗೌಡ ಪಾಕೆಟ್ಟು

ಗೋವಾ ಹುತಾತ್ಮರ ಮಕ್ಕಳಿಗೆ ಆಸ್ಟ್ರೇಲಿಯಾ ಪರಿಹಾರ

ಕಳೆದ ಆಗಸ್ಟ್ ತಿಂಗಳು ಗೋವಾ ಸತ್ಯಾಗ್ರಹದಲ್ಲಿ ಹುತಾತ್ಮರಾದವರ ಮಕ್ಕಳಿಗೆ ಆಸ್ಟ್ರೇಲಿಯಾ ಮಕ್ಕಳ ನಿಧಿಯವರು ವರ್ಷಕ್ಕೆ ೫೦ ಪೌಂಡಿನಂತೆ ಐದು ವರ್ಷ ಪರಿಹಾರ ಕೊಡುವುದಾಗಿ ಬ್ರಿಟಿಷ್ ರಾಜಧಾನಿಯ ನಿಧಿಯ ಅಧ್ಯಕ್ಷರು ತಿಳಿಸಿದ್ದಾರೆ

ಮೈಸೂರಿನಲ್ಲಿ ಪ್ರತಿ ತಿಂಗಳು

17ನೇ ತಾರೀಕು

ವಿಶ್ವ ವಿಖ್ಯಾತವಾಗಿರುವ

ನವರತ್ನ-ಕಲ್ಪ

ಔಷಧವನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

ಭೇಟಿಯ ಕಾಲ —

ಬೆಳಗ್ಗೆ 7-30 ರಿಂದ 12 30 ಮತ್ತು

ಮಧ್ಯಾಹ್ನ 4 ರಿಂದ 7-30

ಎಲ್ಲಾ ಕಾಯಿಲೆ ಸಂಬಂಧ ಸ್ವವಿವರಗಳು ಉಚಿತವಾಗಿ ಕಳುಹಿಸುವರು

ನವರತ್ನ – ಕಲ್ಪ

ಉಪಯೋಗಗಳು

ನರ ದೌರ್ಬಲ್ಯ, ಕೆಮ್ಮು, ಮತ್ತು ಇತರ ಶಕ್ತಿ ಹೀನತೆ, ಸ್ವಪ್ನದೋಷ ಮತ್ತು ಪ್ರಮೇಹ ಇವೆಲ್ಲಕ್ಕೂ 7-9 ಅನುಭವ ಪಡಬೇಕು ಕಂಡುಹಿಡಿದ ಈ ಔಷಧ ವೀರ್ಯವೃದ್ಧಿ ಉತ್ತೇಜಕ ಸಮ ಭಾವದ ಸ್ವಾಭಾವಿಕ ಶಕ್ತಿಯನ್ನು ಕೊಡುತ್ತದೆ ದೇಹವನ್ನು ಬಲಿಷ್ಠ ಪಡಿಸಿ ಆಕ್ರಮಣ ಮುಕ್ತಗೊಳಿಸಿ ಯೌವನವನ್ನು ಕಾಪಾಡುವುದು ಈ ಗುಣಗಳ ಮೂಲಕ ಸಂತೋಷ ಸೌಖ್ಯ ಜೀವನವನ್ನು ಪಡೆಯಬಹುದು

ವಿತರಕರು — ನಾರಾಯಣಶೆಟ್ಟಿ, ಸುಂದರಿ, ಬೆಂಗಳೂರು, ಮದ್ರಾಸು, ಬೆಳಗಾಂ, ಕೊಯಮತ್ತೂರು, ಮಧುರೆ, ತಿರುಚನಾಪಳ್ಳಿ, ತಂಜಾವೂರು, ಸೇಲಂ, ಕಲ್ಲಿಕೋಟೆ, ಎರ್ನಾಕುಲಂ, ಕೊಟ್ಟಾಯಂ, ತ್ರಿವೇಂಡ್ರಂ, ತಿರುನಲ್ವೇಲಿ ಮತ್ತು ಹೈದರಾಬಾದು ಇವೆಲ್ಲಾ ಸ್ಥಳಗಳಲ್ಲಿ ಮತ್ತು ಇತರ ಎಲ್ಲಾ ಪಟ್ಟಣಗಳಲ್ಲಿ ಸಿಕ್ಕುವುದು.

NAVRATNA KALPA PHARMACY,

Jullundur City (India)

Grams NAVRATNA

Edited, Printed and Published by A R Nagrajan at Sadhvi Press, D Subbiah Road, Mysore

ಪಟಾಕಿ ಸಿಡಿದು ಆರು ಅಂಗಡಿಗಳಿಗೆ ಬೆಂಕಿ

ಬೊಂಬಾಯಿಯಲ್ಲಿ ಕಳೆದ ಶುಕ್ರವಾರ ಪಟಾಕಿಗಳು ಸಿಡಿದು ಆರು ಅಂಗಡಿಗಳಿಗೆ ಬೆಂಕಿ ಹತ್ತಿಕೊಂಡಿತು

ಯುವಜನ ಬಳಗ ಸಂಘದ ಅಧಿಕಾರ ವರ್ಗ

ಮೈಸೂರು ಯುವಜನ ಬಳಗದ ಕಾರ್ಯ ಸಮಿತಿ ಸಭೆಯು ಕಳೆದ ಭಾನುವಾರ ಶ್ರೀ ಎಂ ಕೆ ಅನಂತಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ಆರ್ ಗುರುರಾಜರವರು ಅಧ್ಯಕ್ಷರಾಗಿಯೂ, ಸಿ ಎಸ್ ಅನಂತಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ ಕೆಂಪೇಗೌಡರು ಕೋಶಾಧ್ಯಕ್ಷರಾಗಿಯೂ, ಶ್ರೀ ಎನ್ ಎಸ್ ನಾರಾಯಣರಾಯರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಡಿ ಬಿ ಬಸವೇಗೌಡರು ಮತ್ತು ಶ್ರೀ ಪಿ. ಸಿ ಮಾಯಿಗೌಡರು ಜಂಟಿ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು

SREE GANESH
TALKIES

Today Last day

REVENGE OF THE CREATURE

From 17-11-55 • For 2 days

THE GOLDEN BLADE

In Technicolor

(Out of Bagdad's mystic past comes its most exciting tale)

Starring – Rock Hudson and Piper Laurie

From 19—11—55

Abbott & Costello meet The Keystone Kops

MYSORE GOVERNMENT LIFE INSURANCE DEPARTMENT

(Public Branch)

Application having been received for the issue of a duplicate policy No 16466|C on the life of late Sri Abdul Rahiman, it is hereby notified that the duplicate will be issued unless valid objection thereto is received by the undersigned within one month from the date.

M SHAMANNA

Secretary

Bangalore

Dated 15-11 1955

SRI GAYATHRI TALKIES ★

NOW SHOWING From 11 11 55 Daily 3 Shows

Lana Turner, Edmund Purdom and Louis Calhern in

M G. M's Spectacular

Cinemascope & Color

★ **THE PRODIGAL** ★ ದುಂದುಗಾರ

ಟ್ರೇಡ್ ಮಾರ್ಕ್ ಎಚ್ಚರಿಕೆ ನೋಟೀಸು

TRADE Regd

Ragoline

MARK No 161642

FINE

RAGI MALT

An Ideal Food Beverage

Fine RAGI MALT contains energising extracts of WHEAT and Malted RAGI

FINE CHEMICAL WORKS, MYSORE

ಈ ಮೂಲಕ ಸಕಲರಿಗೂ ತಿಳಿಯಪಡಿಸುವುದೇನೆಂದರೆ —

ಈ ಪಕ್ಕದಲ್ಲಿ ನಮೂದು ಮಾಡಿರುವ ಲೇಬಲ್ಲು (ಗುಲಾಬಿ ಬಣ್ಣದಲ್ಲಿ) ನಮ್ಮ ಕಕ್ಷಿಗಾರರಾದ, ಫೈನ್ ಕೆಮಿಕಲ್ ವರ್ಕ್ಸ್ ಮಾಲೀಕರೂ ಆದ ಶ್ರೀ ಎ ನಾಗಭೂಷಣ 2299 ಸಿದ್ಧೇಶ್ವರಶೆಟ್ಟಿ ಬೀದಿ, ಮೈಸೂರು-ಇವರ ಹೆಸರಿನಲ್ಲಿ 161642ನೇ ನಂಬರಾಗಿ 10ನೇ ವರ್ಷದಲ್ಲಿ 1940ನೇ ಟ್ರೇಡ್ ಮಾರ್ಕ್ ಆಕ್ಟ್ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿರುತ್ತದೆ

ಇಂಡಿಯಾ ಯೂನಿಯನ್ನಿನಲ್ಲಿ ಯಾರೇ ಆಗಲಿ ಈ ಪಕ್ಕದಲ್ಲಿ ನಮೂದು ಮಾಡಿರುವಂತೆ ಗುಲಾಬಿ ಬಣ್ಣದ ನಕಲಿ ಲೇಬಲ್ಲುಗಳನ್ನು ಈ ಪಕ್ಕದಲ್ಲಿ ನಮೂದಾಗಿರುವ ಪದಾರ್ಥಗಳಿಗೆ ಸಂಬಂಧಪಟ್ಟಂತೆ ಉಪಯೋಗಿಸಿದ್ದಲ್ಲಿ ಅವರ ಮೇಲೆ ಕ್ರಮ ಜರುಗಿಸಬೇಕಾಗುವುದಲ್ಲದೆ, ನಷ್ಟವನ್ನೂ ಕೊಡಬೇಕಾಗುವುದು ಎಂದು ಈ ಮೂಲಕ ಎಚ್ಚರಿಕೆ ಕೊಡಲಾಗಿದೆ

J. V. ROY, Trade Marks Attorney

Trade Marks Company of India, 'Roydon", No A 110 Hardinge Road

BANGALORE-2

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಗ್ವಾ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
ಅರ್ಣಿ, ದಿಂಡಿಗಲ್
[illegible]
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 346

ಸಂಪುಟ : ೧೪] SADHVI : THURSDAY 17-11-1955 ಮೈಸೂರು ಗುರುವಾರ ೧೭-೧೧-೧೯೫೫ [ಸಂಚಿಕೆ : ೯೩

ಈ ದಿನವೂ ಬೆಂಗಳೂರಿನಲ್ಲಿ ೨೦೦ ಮಂದಿ ಪ್ರದರ್ಶನ

ಬಳ್ಳಾರಿ ಸತ್ಯಾಗ್ರಹದಲ್ಲಿ ೫೧ ಮಂದಿಯ ಬಂಧನ

ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರ [illegible] ವರ್ಗಾಯಿಸುವುದನ್ನು ಪ್ರತಿಭಟಿಸಲು ನಡೆಯುವ ಸತ್ಯಾಗ್ರಹವು ಆರಂಭವಾಯಿತು [illegible] ಕಲುವೆ ಸೀರಿನ ನಿಬಂಧನೆಗಳನ್ನು [illegible] ೫೧ ಜನ ಸತ್ಯಾಗ್ರಹಿಗಳ ಎರಡು [illegible] ಪೋಲೀಸರು ಕೊಂಚೇರಿ [illegible] ಮಾಡಿದರು ಸತ್ಯಾಗ್ರಹಿಗಳು [illegible] ಮತ್ತು ಸಿರಗುಪ್ಪ ತಾಲ್ಲೂಕಿನ ಪಕ್ಕಿಯವರು [illegible] ಹಿಡಿದು ಬಳ್ಳಾರಿಯು [illegible] ಟಕದ್ದೆಂದು ಕೂಗುತ್ತಾ ಹೊರಟರು [illegible] ಹೊಸಪೇಟೆ [illegible] ಸತ್ಯಾಗ್ರಹದ [illegible] ಸ್ಥಳೀಯ ವಕೀಲರಾದ ಎಂ ನಾರಾಯಣರಾವ್ ಮತ್ತು [illegible] ಸಮಿತಿಯ ಅಧ್ಯಕ್ಷ [illegible] ನವರು ವಹಿಸಿದ್ದರು

ಖೂನಿ ಆಪಾದನೆಯಲ್ಲಿ ಆರು ಮಂದಿ ಖುಲಾಸೆ

ಮೈಸೂರು ೧೬—

[illegible] ಮಾದಯ್ಯ ಎಂಬುವರ [illegible] ಕರಿಯ, ಜವರಯ್ಯ, [illegible] ಮತ್ತು [illegible] ಎಂಬುವರು [illegible] ೨೨ ನೇ ತಾರೀಕು ಖೂನಿ ಮಾಡಿದರೆಂದು [illegible] ಪೋಲೀಸರು ಹೂಡಿದ್ದ ಮೊಕದ್ದಮೆ [illegible] ಸಾಕಷ್ಟು ರುಜುವಾತು [illegible] ನಗರ ನ್ಯಾಯಾಧೀಶ ಶ್ರೀ ಎ ಆರ್ [illegible] ಯ್ಯನವರು ಅವರುಗಳನ್ನು ಖುಲಾಸೆ [illegible] ಆಪಾದಿತರ ಪರ ಶ್ರೀಗಳಾದ [illegible] ಶ್ರೀಕಂಠಯ್ಯ, ಟಿ. ತಿಮ್ಮೇಗೌಡ, [illegible] ಮತ್ತು ವಿ ಲಿಂಗಪ್ಪಯ್ಯ [illegible] ವಹಿಸಿದ್ದರು

[illegible] ಯ ಮೇಲೆ ಅತ್ಯಾಚಾರಕ್ಕಾಗಿ ೪ ವರ್ಷ ಸಜಾ

[illegible] ಸೆಷನ್ಸ್ ನ್ಯಾಯಾಧೀಶರಾದ [illegible] ನಟರಾಜರವರು [illegible] ಯ್ಯ ಎಂಬ ಯುವಕನಿಗೆ, ಅತ್ಯಾಚಾರದ [illegible] ಕ್ಕಾಗಿ ೪ ವರ್ಷ ಕಠಿಣ ಸಜಾ ವಿಧಿಸಿದರು

ಭೂದಾನ-ವಿದ್ಯಾದಾನ [illegible] ಳುವಳಿ ಬರಿ "ಢೋಂಗಿ"

[illegible] ನ ಸಭೆಯಲ್ಲಿ ನಾಗಯ್ಯರೆಡ್ಡಿಯವರ ಟೀಕೆ

[illegible] ಫೋನ್] ಬೆಂಗಳೂರು ೧೬

[illegible] ದಿನ ಹಿರಿಯ ಶಾಸನ ಸಭೆಯ ಪ್ರಶ್ನೋ [illegible] ಕಾಲದಲ್ಲಿ ಶ್ರೀ ಎನ್ ಸಿ ನಾಗಯ್ಯರೆಡ್ಡಿ [illegible] ವಿದ್ಯಾದಾನ ಭೂದಾನ ಚಳುವಳಿಯು [illegible] ಮತ್ತು ಬೂಟಾಟಿಕೆಯೆಂದು [illegible] ವಿದ್ಯಾ ಮಂತ್ರಿಗಳು ಉತ್ತರವಿತ್ತು [illegible] ಈ ಚಳುವಳಿಯನ್ನು [illegible] ನಡೆಸುತ್ತಿರುವುದಾಗಿ ನುಡಿದರು [illegible] ಮತ್ತು 'ಬೂಟಾಟಿಕೆ" ಎಂಬ [illegible] ಪಾರ್ಲಿಮೆಂಟರಿಯಲ್ಲವೆಂಬ ಆಕ್ಷೇಪ [illegible] ಅಧ್ಯಕ್ಷರು ತಳ್ಳಿಹಾಕಿದರು

ಘರ್ಷಣೆಗಳ ಬಗ್ಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ವಿಷಾದ

ಬಳ್ಳಾರಿ ಸತ್ಯಾಗ್ರಹ ನಿಲ್ಲಿಸಲು ಮನವಿ

ಮೈಸೂರು ೧೬—

ಪ್ರದೇಶ [illegible] ಅಧ್ಯಕ್ಷ ಶ್ರೀ ಎಸ್ [illegible] ಯ್ಯನವರು ಈ ದಿನ [illegible] ಮೈಸೂರು [illegible] ಘಟನೆ [illegible] ಸಂಸ್ಥಾನದ [illegible] ಪ್ರಜಾಪ್ರಭುತ್ವದಲ್ಲಿ [illegible] ಮೈಸೂರಿನ ಜನರು [illegible] ಬಳ್ಳಾರಿ [illegible] ಮೈಸೂರು ರಾಜ್ಯ [illegible] ತಿಳಿಸಿದ್ದಾರೆ

[illegible] ಬಳ್ಳಾರಿಯ ಜನರು ಸತ್ಯಾಗ್ರಹವನ್ನು ಕೂಡಲೇ ನಿಲ್ಲಿಸುವಂತೆ ಪ್ರಾರ್ಥಿಸಿದ್ದಾರೆ

ಕರ್ನಾಟಕವನ್ನು ಮೈಸೂರು ಸಂಸ್ಥಾನವೆಂದು ಕರೆಯಬೇಕು

ಕಿರಿಯ ಶಾಸನ ಸಭೆಯಲ್ಲಿ ಹನುಮಂತಯ್ಯನವರ ಸಲಹೆ

ಬೆಂಗಳೂರು ೧೬—

ನಿನ್ನೆ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು [illegible] ಸಂಸ್ಥಾನ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಪಾರ್ಲಿಮೆಂಟು ಅಂಗೀಕರಿಸಲಿರುವುದರಿಂದ, ಸಂಯುಕ್ತ ಕರ್ನಾಟಕದ ವಿರೋಧವಾಗಿ ಅತ್ಯಲ್ಪ ಬಹುಮತದಿಂದ ಸಭೆಯು ನಿರ್ಣಯ ಮಾಡಿದರೂ ಪ್ರಯೋಜನವಿಲ್ಲವೆಂದು ತಿಳಿಸಿ [illegible] ನಿರ್ಣಯವೊಂದನ್ನು [illegible] ಮೈಸೂರಿನ ಸಮೃದ್ಧ ಸ್ಥಿತಿಯನ್ನು [illegible] ನೂತನ ಸಂಸ್ಥಾನವನ್ನು ಮೈಸೂರು ಸಂಸ್ಥಾನವೆಂದು ಕರೆಯಬೇಕೆಂದು ಸಲಹೆ ಮಾಡಿದರು

ವಿರೋಧ ಪಕ್ಷದ ನಾಯಕ ಶ್ರೀ [illegible] ಮುಖ್ಯ ಮಂತ್ರಿಗಳು ಕರ್ನಾಟಕ ಪ್ರಾಂತ ರಚನೆಗೆ [illegible] ಸಂತೋಷವನ್ನು ವ್ಯಕ್ತಪಡಿ[illegible]ರು.

ಕರ್ನಾಟಕ ಪ್ರಾಂತವಾಗಬೇಕೆಂಬುದು ರಾಷ್ಟ್ರ ನಾಯಕರ ಅಭಿಮತ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರು ೧೬—

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ [illegible] ಯ್ಯನವರು [illegible] ನೆಹರೂ, ಧೇಬರ್ [illegible] ಕರ್ನಾಟಕ [illegible] ಸಂಸ್ಥಾನದ ರಚನೆ [illegible] ನಿರ್ಧಾರಕ್ಕೆ [illegible] ನಾಯಕರ [illegible] ಮೈಸೂರಿನ ಪ್ರದೇಶ [illegible] ಮತ್ತು ವೈಮನಸ್ಯಗಳನ್ನು ಬಿಟ್ಟು [illegible]

ಮೈಸೂರು ಸಂಸ್ಥಾನದ ಜನರ ಬಗ್ಗೆ [illegible] ಉತ್ತಮ ಭಾವನೆಯಿರುವುದಾಗಿಯೂ, ಮೈಸೂರಿನವರು [illegible] ಈ ವಿಷಯದಲ್ಲಿ ಸಂಶಯಕ್ಕೆ ಆಸ್ಪದವಿಲ್ಲವೆಂದೂ ತಿಳಿಸಿದ್ದಾರೆ [illegible] ಮನವಿ ಮಾಡಿಕೊಂಡಿದ್ದಾರೆ

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ವಿಷಯವಾಗಿ [illegible] ನಿಲುವನ್ನು [illegible] ಸಂಸ್ಥಾನದಲ್ಲಿ [illegible] ಗೊಂದಲಕ್ಕೆ ಕಾರಣ [illegible] ವ್ಯಕ್ತಪಡಿಸಿದರು

ರಾಜಪ್ರಮುಖರು ಕರ್ನಾಟಕದ ಗೌರ್ನರಾಗಲು ಅಭ್ಯಂತರವಿಲ್ಲ

ಎಸ್. ನಿಜಲಿಂಗಪ್ಪನವರ ಅಭಿಪ್ರಾಯ

ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು [illegible] ಕರ್ನಾಟಕ ಸಂಸ್ಥಾನ [illegible] ಇನ್ನುಮುಂದೆ [illegible] ಮೈಸೂರು [illegible] ರಾಜಪ್ರಮುಖರು [illegible] ಸಂಸ್ಥಾನದ ಗೌರ್ನರಾಗಿ [illegible] ತಮ್ಮ ಅಭ್ಯಂತರವೇನೂ ಇಲ್ಲವೆಂದೂ ತಿಳಿಸಿ, ರಾಜಪ್ರಮುಖರ [illegible] ಮೈಸೂರು ಸಂಸ್ಥಾನದಲ್ಲಿ ಗೊಂದಲವನ್ನು ಎಬ್ಬಿಸಿ, ಅವರನ್ನು ಕರ್ನಾಟಕ ಸಂಸ್ಥಾನ ರಚನೆಗೂ [illegible] ತರುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟರು

[illegible] ದಿನವೂ ೨೦೦ ಜನ ಮೈಸೂರು [illegible] ಗಳ ಪ್ರದರ್ಶನ

[illegible] ಅವರನ್ನೆಲ್ಲಾ ಚದುರಿಸಿದರು

ಸ್ವಂ ಸು ಫೋನ್] ಬೆಂಗಳೂರು ೧೬—

ಇಲ್ಲಿನ [illegible] ಸರ್ಕಲ್ಲಿನಲ್ಲಿ ಸುಮಾರ ೨೦೦ [illegible] ಮೈಸೂರಿನವ[illegible]" ಎಂದು ಈ ದಿನವೂ ಪ್ರದರ್ಶನ ನಡೆಸಿದರು. ಪೋಲೀಸರು ಅವರನ್ನೆಲ್ಲಾ ಚದುರಿಸಿದರು [illegible] ಪ್ರದರ್ಶನೆಯಲ್ಲಿ [illegible] ಜನರನ್ನು ಬಂಧಿಸಲಾಗಿದೆ

ಏಕೀಕರಣಕ್ಕೆ ಪುನಃ ಹನುಮಂತಯ್ಯನವರ ಸಮರ್ಥನೆ

ಹಿರಿಯ ಶಾಸನ ಸಭೆಯಲ್ಲಿ ಭಾಷಣ

ಸ್ವಂ ಸು ಫೋನ್] ಬೆಂಗಳೂರು ೧೬

ಈ ದಿನ ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಾತನಾಡಿ, ಕರ್ನಾಟಕ ಏಕೀಕರಣದ ಸೂತ್ರ ಹೊಸದಲ್ಲವೆಂದೂ, ಮೈಸೂರು ರಾಜ್ಯಾಂಗ ಸಭೆಯೇ ಇದಕ್ಕೆ [illegible] ಎಂದೂ ತಿಳಿಸಿದರು ತಮ್ಮ ವೈಯಕ್ತಿಕ ನಿಲುವನ್ನು ಹಲವರು ಟೀಕಿಸುತ್ತಿರುವುದನ್ನು ಪ್ರಸ್ತಾಪಿಸಿ, ಏಕೀಕರಣದ ವಿಷಯವಾಗಿ [illegible] ತಾವು ಒಂದೇ ನೀತಿಯನ್ನು ಪ್ರತಿಪಾದಿಸುತ್ತಾ ಬಂದಿರುವುದಾಗಿ ಹೇಳಿದರು ಸಂಸ್ಥಾನ ಪುನರ್ವಿಂಗಡಣಾ ಸಮಿತಿಯವರ ಶಿಫಾರಸನ್ನು ಕರ್ನಾಟಕ ಪ್ರಾಂತ ರಚನೆ [illegible] ಮಟ್ಟಿಗೆ ಸಭೆಯು ಒಪ್ಪಬೇಕೆಂದು ತಾವೂ ತಮ್ಮ ಸಹೋದ್ಯೋಗಿಗಳೂ [illegible] ಪೂರ್ಣ ನ್ಯಾಯವಿರುವುದೆಂದು ಅವರು ಸೂಚಿಸಿದರು

ಮೈಸೂರಿನಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನ

ಶಾಸನ ಸಭೆಯಲ್ಲಿ ನಿಲುವಳಿ ನಿರ್ಣಯದ ನಿರಾಕರಣೆ

ಸ್ವಂ ಸು ಫೋ] ಬೆಂಗಳೂರು ೧೬

ಈ ದಿನ ವಿಧಾನ ಸಭೆಯಲ್ಲಿ ಚಾಮರಾಜನಗರದ ಶ್ರೀ ಯು ಎಂ ಮಾದಪ್ಪನವರು ನಿಲುವಳಿ ನಿರ್ಣಯವೊಂದನ್ನು ತಂದು- ಮೈಸೂರು ಟೌನ್ ಹಾಲಿನಲ್ಲಿ ನೆನ್ನೆ ನಡೆದ ಬಹಿರಂಗ ಸಭೆಯಲ್ಲಿ ರಾಷ್ಟ್ರಧ್ವಜವನ್ನು "ಸುಟ್ಟು" ಹಾಕಲಾಯಿತೆಂಬ [illegible] ಸೂಚಿಸಿ ಈ ಬಗ್ಗೆ ಚರ್ಚೆಯಾಗಬೇಕೆಂದು [illegible] ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಉತ್ತರವಿತ್ತು, ಈ ಬಗ್ಗೆ ತನಿಖೆ ನಡೆಸಲಾಯಿತೆಂದೂ, ಬಾವುಟವು ರಾಷ್ಟ್ರಧ್ವಜವೇ [illegible] ಎಂದೂ ತಿಳಿಸಿದರು ಸಭಾಧ್ಯಕ್ಷರು ನಿಲುವಳಿ [illegible] ವನ್ನು ತಳ್ಳಿಹಾಕಿದರು

ಕೋ-ಆಪರೇಟಿವ್ ಸೊಸೈಟಿಯಲ್ಲಿ ಅವಿಶ್ವಾಸ ನಿರ್ಣಯದ ವ್ಯವಹಾರ

ಮುನ್ಸೀಫ್ ಕೋರ್ಟಿನಲ್ಲಿ ತೀರ್ಪು

ಮೈಸೂರು ೧೬

ಇಲ್ಲಿನ ಮುನ್ಸೀಫರಾದ ಶ್ರೀ ಎ ಎಸ್. ರಾಮಚಂದ್ರರಾಯರು ಮೈಸೂರು ಕೋ ಆಪರೇಟಿವ್ ಸೊಸೈಟಿ ವ್ಯವಹಾರದ ಸಂಬಂಧದಲ್ಲಿ ನೆನ್ನೆ [illegible] ಎಸ್ ಸಿ [illegible] ಕೃಷ್ಣ [illegible] ರಾವ್ ಮತ್ತು ಎ ಆರ್ ಲಕ್ಷ್ಮೀ [illegible] ಗಳ ಬಗ್ಗೆ ಸೊಸೈಟಿ [illegible] ಬಿಸಿ, [illegible] ತಮ್ಮ [illegible] ಕೊಡಬೇಕಾಗಿ [illegible] ದಿತ್ತಾರೆ

[illegible] ದೀಪಾವಳಿ [illegible] ಮತ್ತು [illegible] ಕೊಡುಗೆಗಳನ್ನು [illegible]

ಕರ್ನಾಟಕ ಏಕೀಕರಣಕ್ಕೆ ಬೆಂಬಲ ನೀಡಬೇಕು

ಎಂ. ಎಸ್. ಗುರುಪಾದಸ್ವಾಮಿಯವರ ಮನವಿ

ಮೈಸೂರು ೧೬

ಲೋಕಸಭಾ ಸದಸ್ಯ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಇಂದು ಬೆಳಿಗ್ಗೆ ಪತ್ರಿಕಾ ಗೋಷ್ಠಿಯೊಂದನ್ನು ಕರೆದು, ಏಕೀಕರಣದ ವಿರುದ್ಧ ನಡೆಯುತ್ತಿರುವ ಚಳುವಳಿಯನ್ನು ಖಂಡಿಸಿದರು. ಹೊಸದಾಗಿ ಏರ್ಪಡಲಿರುವ ಕರ್ನಾಟಕಕ್ಕೆ ಬರಬೇಕಾದ ಇನ್ನೂ ೩೦ ಲಕ್ಷ ಕನ್ನಡಿಗರ ಪ್ರದೇಶಗಳನ್ನು ಪಡೆಯಲು ಯತ್ನಿಸಬೇಕೆಂದು ಹೇಳಿದರು. ನೆನ್ನೆ ಸಂಜೆ ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ಧ್ವಜಕ್ಕೆ ಅವಮಾನವಾದುದರ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ದೆಹಲಿಯಲ್ಲಿ ಕರ್ನಾಟಕದ ಪರ ಮತ್ತು ವಿರೋಧದ ನಿಯೋಗದವರು ಗೃಹ ಮಂತ್ರಿ ಪಂತರನ್ನು ಭೇಟಿ ಮಾಡಿದಾಗ ಅವರು ಬಳ್ಳಾರಿ ನಗರವನ್ನು ಆಂಧ್ರಕ್ಕೆ ಕೊಡುವುದರ ಬಗ್ಗೆ ನಿಯೋಗದ ಅಭಿಪ್ರಾಯವನ್ನು ಕೇಳಿದರೆಂದೂ, ಇವರಿಂದ ಬಳ್ಳಾರಿ ನಗರವನ್ನು ಮಾತ್ರ ಆಂಧ್ರಕ್ಕೆ ಕೊಡಬೇಕೆಂದು ತಾವುಗಳು ತಿಳಿಸಿದರೆಂದೂ ಅವರು ಹೇಳಿದರು.

ಮೈಸೂರಿನ ಅಸ್ತಿತ್ವದ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಿಸಿ ಒಂದು ಕಡೆ ಸ್ಥಳೀಯ ಶಾಸನ ಸಭೆಯಲ್ಲಿ ಮೈಸೂರಿನವರು ಅಲ್ಪ ಸಂಖ್ಯಾತರಾಗುವರೆಂದು ಹಲವರು ಹೇಳುವರು. ಆದರೆ ಯಾವ ಭಾವನೆಯೂ ಬೇಕಿಲ್ಲವೆಂದು ... ಮೈಸೂರು ಮುಂದೆ ಹೆಚ್ಚು ಅಭಿವೃದ್ಧಿಯಾಗಲು ವಿಸ್ತಾರಗೊಳ್ಳುವುದು ಅತ್ಯವಶ್ಯಕವೆಂದು ಪರಿಣತರು ಹೇಳುತ್ತಾರೆಂದೂ, ಇದರಿಂದ ಮೈಸೂರಿಗೆ ನಷ್ಟವಿಲ್ಲವೆಂದೂ ನುಡಿದರು.

ಕರ್ನಾಟಕವಾಗಲೀ ಏಕೀಕರಣವಾಗಲೀ ರಾಜ ಪ್ರಮುಖರ ಹುದ್ದೆಯು ರದ್ದಾಗುವುದು ಖಂಡಿತವೆಂದೂ, ಹಾಗಿರುವಾಗ ರಾಜಪ್ರಮುಖರನ್ನು ಉಳಿಸಬೇಕೆನ್ನುವ ಚಳುವಳಿಯು ಅರ್ಥಶೂನ್ಯವೆಂದು ತಿಳಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ದೇಶೀ ಸಂಸ್ಥಾನಗಳ ಬಗ್ಗೆ ತೀರ್ಮಾನ ಮಾಡಿ ಕರ್ನಾಟಕದ ಬಗ್ಗೆ ತಪ್ಪು ಮಾಡಿರುವುದು ಇನ್ನು ಹೆಚ್ಚಿನ ಘರ್ಷಣೆಗೆ ಎಡೆಗೊಡುವುದೆಂದು ಆಕ್ಷೇಪಿಸಿದರು.

ಕರ್ನಾಟಕ ನಿರ್ಮಾಣವು ಅವರ ವಿರೋಧಿಗಳೂ ಕೂಡಿದ ಎಲ್ಲ ನಾಯಕರ ಸಹಕಾರದಿಂದ ಸಾಧ್ಯವೆಂದೂ ಅಪ್ಪರಿಂದ ಈ ಬಗ್ಗೆ ಎಲ್ಲರೂ ಸ್ವಮತದಿಂದ ಶ್ರಮಿಸಬೇಕೆಂದೂ ಮನವಿ ಮಾಡಿಕೊಂಡರು.

ಕೋತಿಯಿಂದ ನದಿಯಲ್ಲಿ ಮುಳುಗುತ್ತಿದ್ದ ಬಾಲಕನ ರಕ್ಷಣೆ

ಚಿತ್ರದುರ್ಗದ ಬಳಿ ತುಂಗಭದ್ರಾ ನದಿಯಲ್ಲಿ ಈಚೆಗೆ ದಡದ ಬಳಿ ಒಂದು ಮಗುವು ಬಿದ್ದು ತೇಲಿಕೊಂಡು ಹೋದಾಗ ಅದನ್ನು ಒಂದು ಕೋತಿಯು ಬದುಕಿಸಿದ ಸಮಾಚಾರವು ವರದಿಯಾಗಿದೆ. ಮಗುವು ಬೀಳುತ್ತಲೇ ತಾಯಿಗೆ ದಿಕ್ಕು ತೋಚದಂತಾಗಿ ಪ್ರಜ್ಞೆ ತಪ್ಪುವ ಸ್ಥಿತಿಯಲ್ಲಿದ್ದಳೆಂದೂ, ಅವಳ ಆರ್ತನಾದವನ್ನು ಕೇಳಿದ ಕಪಿಯೊಂದು ನದಿಗೆ ಧುಮುಕಿ ಮಗುವನ್ನು ಎಳೆದು ತಂದು ತಾಯಿಯ ಮಡಿಲಲ್ಲಿಟ್ಟು ಆಕೆಗೆ ತಿಳಿವು ಬರುವುದರೊಳಗ ಹೊರಟುಹೋಯಿತೆಂದು ಹೇಳಲಾಗಿದೆ.

ನೆಹರೂ ಜಯಂತಿ

ಮೈಸೂರು ೧೬

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸಿಂಗ್ ಸಂಸ್ಥೆಯ ಹಿಂದಿ ಸಂಘದಲ್ಲಿ ನೆನ್ನೆ ಜಯಂತಿಯನ್ನು ಮಹಾರಾಜಾ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ಎಂ ರಾಜೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಶ್ರೀ ಕೆ ಎಸ್ ರಾಮಗೋಪಾಲರವರಿಂದ ಪ್ರಾರ್ಥನೆ, ಶ್ರೀ ನಾರಾಯಣರಾಜುರಿಂದ ಸ್ವಾಗತ ಭಾಷಣವಾದ ನಂತರ, ಶಾರದಾ ವಿಲಾಸ ಲಾ ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಟಿ ಎಸ್ ರಂಗ ಗೋಪಾಲಯ್ಯಂಗಾರ್ಯರು ನೆಹರೂರವರ ಗುಣಗಾನ ಮಾಡಿ ಅವರ ವಿಶ್ವ ವಿಖ್ಯಾತಿಗೆ ಕಾರಣಗಳನ್ನು ತಿಳಿಸಿದರು. ಶ್ರೀ ಹೆಚ್ ಎಸ್. ವೆಂಕಟರಾಯರಿಂದ ಮಿಮಿಕ್ರಿ, ಶ್ರೀ ಬಿ ಎಸ್ ಕೇಶವರಾವ್ ಮತ್ತು ಸಂಗಡಿಗರಿಂದ ಸಂಗೀತ ಮತ್ತು ಎಂ ಎಲ್ ವಿ ವೇದಾಂತಾಚಾರ್ಯರಿಂದ ವಂದನಾರ್ಪಣೆ ನಡೆದುವು.

ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಸಂಘದಲ್ಲಿ ಸಮಾರಂಭವು ನೆನ್ನೆ ಶ್ರೀ ವಿ. ಚಿದಂಬರಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಮಾಜ ಸೇವಕ ಸಮ್ಮೇಳನದ ಶಾಖೆಯ ಸ್ಥಾಪನೆ

ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ಕಳೆದ ಮಂಗಳವಾರ ನಗರದ ಸಮಾಜ ಸೇವಕರ ಸಭೆಯೊಂದನ್ನು ಶ್ರೀಮತಿ ರಾಮೇಶ್ವರಮ್ಮ ಕುಪ್ಪುಸ್ವಾಮಿಯವರು ಕರೆದಿದ್ದರು. ಸರ್ವೆಂಟ್ಸ್ ಆಫ್ ಇಂಡಿಯಾ ಸಂಘದ ಶ್ರೀ ಪಿ ಕೋದಂಡರಾಯರು ಭಾಷಣ ಮಾಡಿದರು. ಅಖಿಲ ಭಾರತ ಸಮಾಜ ಸೇವಕ ಸಮ್ಮೇಳನದ ಶಾಖೆಯೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ವೈಸ್ ಛಾನ್ಸಲರ್ ಶ್ರೀ ವಿ ಎಲ್ ಡಿಸೋಜಾರವರು ಅಧ್ಯಕ್ಷರಾಗಿಯೂ, ಫಾದರ್ ಅಡಿಯೊರವರು ಉಪಾಧ್ಯಕ್ಷರಾಗಿಯೂ, ಶ್ರೀಮತಿ ರಾಮೇಶ್ವರಮ್ಮನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಶ್ರೀಮತಿ ಲೀಲಾವತಿ ಅಂಜನಪ್ಪ, ಶ್ರೀಗಳಾದ ಎಂ ರಾಮಸ್ವಾಮಿ, ಪ್ರೊ॥ ಎ. ಯಾಮುನಾಚಾರ್ಯ, ಸಿ ಎನ್ ನಾರಾಯಣರಾವ್, ಕೆ ಶೇಷಾದ್ರಿ, ಮಲ್ಲಿಕಾರ್ಜುನಸ್ವಾಮಿ ಮುಂತಾದವರು ಸದಸ್ಯರಾಗಿ ಆರಿಸಲ್ಪಟ್ಟರು. ಬೆಂಗಳೂರಿನಲ್ಲಿ ಬರುವ ತಿಂಗಳು ಸೇರುವ ಅಖಿಲ ಭಾರತ ಸಮಾಜ ಸೇವಕರ ಸಮ್ಮೇಳನಕ್ಕೆ ಶಾಖೆಯ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಲಾಯಿತು.

ಪಟಾಕಿ ಬೆಂಕಿಯಿಂದ ಬಾಲಕಿಗೆ ಗಾಯ

ಚಲುವಾಂಬಾ ಅಗ್ರಹಾರದಲ್ಲಿ ಮೊನ್ನೆ ರಾತ್ರಿ ಓಂಕಾರ ಗಾಡಿ ಚಿಕ್ಕಯ್ಯ ಎಂಬಾತನ ೬ ವರ್ಷದ ಮಗಳಿಗೆ ಪಟಾಕಿಯ ಬೆಂಕಿ ತಗುಲಿ ಬೆನ್ನಿನ ಮೇಲೆ ಸುಟ್ಟ ಗಾಯವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ.

ನಾಲ್ಕು ಸುಕರೂಪಕ್ಕೆ ೧೨೫ ಕೋಟಿ

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಮಾರ್ಗಸೂಚಕಗಳನ್ನು ಕಲ್ಪಿಸಲು, ಸಿದ್ಧಗೊಳಿಸಲಾಗಿದ್ದ ೧೭೫ ಕೋಟಿ ರೂ ವೆಚ್ಚವನ್ನು ಕೇಂದ್ರ ಯೋಜನಾ ಮಂಡಲಿಯವರು ೧೨೫ ಕೋಟಿ ರೂ ಗಳಿಗೆ ತಗ್ಗಿಸಿರುವರು. ಮುಂದಿನ ಐದು ವರ್ಷಗಳಲ್ಲಿ ಈಗಿರುವ ಟೆಲಿಫೋನ್ ಸಂಖ್ಯೆಗೆ ದ್ವಿಗುಣವಾಗಿ ೫೦ ಲಕ್ಷ ಟೆಲಿಫೋನುಗಳು ಇರುವುವೆಂದು ಗೊತ್ತಾಗಿದೆ. ಗ್ರಾಮಾಂತರದಲ್ಲಿ ೧,೨೦೦ ಕಡೆ ಹೊಸದಾಗಿ ಪಬ್ಲಿಕ್ ಕಾಲ್ ಟೆಲಿಫೋನುಗಳನ್ನಿಡಲು, ೭,೦೦೦ ಹೆಚ್ಚು ತಂತಿ ಕಛೇರಿಗಳನ್ನು ತೆರೆಯಲು, ೨೨,೦೦೦ ಅಂಚೆ ಕಛೇರಿಗಳನ್ನು ಸ್ಥಾಪಿಸಲೂ ಆಲೋಚಿಸಲಾಗಿದೆ. ನೂತನ ಯೋಜನೆಯಲ್ಲಿ ಇಲಾಖೆಯ ಪಕ್ಷ ೨,೨೨,೦೦೦ ಮಂದಿ ಹೊಸಬರಿಗೆ ಉದ್ಯೋಗ ಲಭಿಸುವುದೆಂದು ಭಾವಿಸಲಾಗಿದೆ.

ಆನೆಯ ಮೇಲೆ ಮಕ್ಕಳ "ಮುಖ್ಯಮಂತ್ರಿ"ಯ ಮೆರವಣಿಗೆ

ತಿರುವನಂತಪುರದಲ್ಲಿ ನೆಹರೂ ಜಯಂತಿ

ತಿರುವನಂತಪುರದಲ್ಲಿ ಕಳೆದ ಸೋಮವಾರ ನಡೆದ ದಿನಾಚರಣೆಯ ಅಂಗವಾಗಿ ೫,೦೦೦ ಬಾಲಕರ ಕೂಟವೊಂದು ಸೇರಿತ್ತು. ೮ ವರ್ಷದ ಸುಧೀರ್ ಎಂಬ ಬಾಲಕನು ಕೂಟದ ಅಧ್ಯಕ್ಷತೆಯನ್ನು ವಹಿಸಿದನು. ಆ ಪಟ್ಟದ ಆನೆಯೊಂದರ ಮೇಲೆ ಸವಾರಿ ಮಾಡಿಕೊಂಡು ಕೂಟವು ಸೇರಿದ ಸ್ಥಳಕ್ಕೆ ಬಂದನು. ಅನಂತರ ಮಕ್ಕಳ ಕೂಟದ "ಮುಖ್ಯ ಮಂತ್ರಿ"ಯಾಗಿ ಭಾಷಣ ಮಾಡಿ ಮಕ್ಕಳ ಸಮಸ್ಯೆಗಳನ್ನು ಪರಿಹರಿಸುವ ವಿಧಾನವನ್ನು ತಿಳಿಸಿದನು. ಇದೇ ಆರಂಭೋತ್ಸವನ್ನು ತಿರುವಾಂಕೂರು ಮುಖ್ಯ ಮಂತ್ರಿಗಳು ನೆರವೇರಿಸಿದರು. ಮಕ್ಕಳ ಆಟದ ಮೈದಾನಗಳು ಮತ್ತು ಪುಸ್ತಕ ಭಂಡಾರಗಳನ್ನು ಸ್ಥಾಪಿಸಬೇಕೆಂದು ಮುಖ್ಯ ಮಂತ್ರಿಯು ಭಾಷಣದಲ್ಲಿ ತಿಳಿಸಿದನು.

ಮೈಸೂರು ಪೇಟೆ ಧಾರಣೆ

	ರೂ	ಇಂದ	ರೂ	ವರೆಗೆ
ಕಡಲೆಕಾಯಿ	೯೦	೨ ೦	೯೪	೨ ೦
ಎಳ್ಳು	೬೨	೦ ೦		
ಹರಳುಬೀಜ	೨೪	೧೨ ೦		
ಹುರುಳಿ	೪೭	೪ ೦	೪೮	೮ ೦
ಹೆಸರು	೪೫	೦ ೦	೪೬	೪ ೦
ಧನಿಯ	೪೧	೮ ೦		
ಮೆಣಸಿನಕಾಯಿ	೩೩	೮ ೦	೪೭	೧೨ ೦
ತೊಗರಿ	೨೭	೨ ೦	೩೦	೨ ೦
ಬೆಲ್ಲ	೩೦	೦ ೦		
ಕಡಲೆ	೩೯	೦ ೦	೪೯	೨ ೦
ಹುರುಳಿ	೨೬	೧೨		
ಮೆಣಸಿನಪುಡಿ	೨	೧೦ ೦	೩	೨ ೦
ಅರಿಶಿನ	೩	೧೨ ೦		
ಸೋಂಪು	೫	೦ ೦	೧೪	೧೦ ೦
ಬೆಲ್ಲ	೨	೮ ೦	೩	೧೨ ೦
ತೆಂಗಿನಕಾಯಿ ೧,೦೦೦	೧೩೭	೦ ೦	೩೯೦	೦ ೦

ಸಂಸ್ಕೃತವನ್ನು ಮರೆತರೆ ಭಾರತಕ್ಕೆ ಭವಿಷ್ಯವಿಲ್ಲ

ವಿಶ್ವ ಪರಿಷತ್ತಿನಲ್ಲಿ

ಕೆ. ಎಂ. ಮುನ್ಷಿಯವರ ಭಾಷಣ

ತಿರುಪತಿಯಲ್ಲಿ ನಡೆದ ಸಂಸ್ಕೃತ ವಿಶ್ವ ಪರಿಷತ್ತಿನಲ್ಲಿ ಕೆ ಎಂ ಮುನ್ಷಿಯವರು ಭಾಷಣ ಮಾಡಿ, ಭಾರತಕ್ಕೆ ಐಕ್ಯತೆ ಮತ್ತು ಸಾಂಸ್ಕೃತಿಕ ಏಕತೆಯನ್ನು ತಂದುಕೊಟ್ಟ ಸಂಸ್ಕೃತವನ್ನು ಮರೆತು ಕೊಂಡರೆ ಭಾರತಕ್ಕೆ ಭವಿಷ್ಯವೇ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಸಂಸ್ಕೃತವನ್ನು ಮರೆತರೆ ಭಾರತಕ್ಕೆ ದೊರಕಿರುವ ಸ್ವಾತಂತ್ರ್ಯಕ್ಕೆ ಅರ್ಥವಿರುವುದಿಲ್ಲವೆಂದು ಹೇಳಿ, ದೇಶದಲ್ಲಿ ಸಂಸ್ಕೃತ ಮಧ್ಯಮವಿರುವ ಮೂರು ನಾಲ್ಕು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕೆಂದು ತಿಳಿಸಿ, ಪ್ರತಿ ವಿಶ್ವವಿದ್ಯಾಲಯದಲ್ಲೂ ಸಂಸ್ಕೃತ ಶಾಖೆಗಳನ್ನು ಏರ್ಪಡಿಸುವುದು, ಪಾಠಶಾಲೆಗಳಿಗೆ ಸಹಾಯ ದ್ರವ್ಯ ಕೊಡುವುದು, ಸಂಸ್ಕೃತ ಉತ್ತರ ಗ್ರಂಥಗಳ ಮುದ್ರಣಕ್ಕೆ ನಿಧಿ ಏರ್ಪಡಿಸುವುದು— ಇವೇ ಮುಂತಾದ ಕ್ರಮಗಳನ್ನು ಸೂಚಿಸಿರುವರು.

ಸಂಸ್ಕೃತ ವಿದ್ಯಾಭ್ಯಾಸದ ಕರಗಳ ವ್ಯವಸ್ಥೆ ಬಗ್ಗೆ ತನಿಖೆ ನಡೆಸಲು ಮುಖ್ಯ ಗಣ್ಯ, ವಿದ್ಯಾ ಮಂತ್ರಿಗಳು ಇರುವ ಒಂದು ಸಮಿತಿಯೊಂದನ್ನು ರಚಿಸಲಾಗಿದೆ.

○ ವಿಶ್ವವಿದ್ಯಾಲಯಗಳ ಗ್ರಾಂಟ್ ಕಮಿಷನವರು ಬೆಂಗಳೂರು ಸೆಂಟ್ರಲ್ ಕಾಲೇಜು ಮತ್ತು ಮೈಸೂರು ಮಹಾರಾಜಾ ಕಾಲೇಜು ವಿಜ್ಞಾನ ವಿಭಾಗದ ಬೆಳವಣಿಗೆಗಾಗಿ ೧,... ರೂ ಗ್ರಾಂಟನ್ನು ಮಂಜೂರು ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಭೂಗರ್ಭ ಶಾಸ್ತ್ರದಲ್ಲಿ ಹಿಂದಿ ವಿಭಾಗವನ್ನು ಏರ್ಪಡಿಸಲು ಕೇಂದ್ರ ಸರ್ಕಾರದವರು ೧೫,೦೦೦ ರೂ ಗ್ರಾಂಟು ಕೊಟ್ಟಿರುವರು.

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ-ಕಲ್ಪ

ವಿಖ್ಯಾತವನ್ನು ಕಂಡುಹಿಡಿದವರ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಚಂದ್ರಭವನದಲ್ಲಿ

ಭೇಟಿ ಮಾಡಬಹುದು ... ನಾ

— ಭೇಟಿಯ ಕಾಲ —

ಬೆಳಿಗ್ಗೆ 7-30 ರಿಂದ 12-30 ಮಧ್ಯಾಹ್ನ

ಮಧ್ಯಾಹ್ನ 4 ರಿಂದ 7 30

ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿ ... ಸಮಾನದಲ್ಲಿ ಸಂಚರಿಸುವರು

ನವರತ್ನ—ಕಲ್ಪ

ಉಪಯೋಗಿಸಿರಿ

ಇದು ಪತ್ರ, ಕೆಮ್ಮು, ಮುಟ್ಟು, ಜ್ವರ, ಗರ್ಭದೋಷ, ಸಂಧಿ, ಪಕ್ಷವಾಯು ಮುಂತಾದ ಅನೇಕ ಮುಖ್ಯವಾದ ಅಮೂಲ್ಯ ಪರಿಣಾಮಗಳಿಂದ ಇದರಿಂದ ನರಗಳ ದೌರ್ಬಲ್ಯ ಅತಿ ಮೂತ್ರದ ವ್ಯಾಧಿಗಳು, ಬಿಳಿ ಸೆರಗು, ಮೂಲವ್ಯಾಧಿ, ನಾರಿ ವ್ರಣ, ಬಹು ಮೂತ್ರ, ಅಸ್ತಮಾ ಇವು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳು ಸಂಪೂರ್ಣವಾಗಿ ಗುಣವಾಗುತ್ತವೆ.

ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂಟೂರು, ವಿಜಯವಾಡ, ಮದ್ರಾಸು, ಬೆಂಗಳೂರು, ... ತ್ತೂರು, ಮಧುರೆ, ... ಸೇಲಂ, ಕಲ್ಲಿಕೋಟೆ, ಎರ್ನಾಕುಲಂ, ... ತ್ರಿವೇಂದ್ರಂ, ತಿರುನಲ್ವೇಲಿ ಮುತ್ತು ... ಗಳ ವಿಳಾಸ ಮುತ್ತು ಇತರ ವಿವರ ... ಬರೆಯಿರಿ :—

NAVRATNA KALPA PHARMACY

Jallundur City (India)

Grams NAVRATNA

SRI GAYATHRI

TALKIES

Today & Tomorrow only

M G M's

PRODIGAL

ದುಂದುಗಾರ

— NEXT CHANGE —

THE BAD DAY AT THE BLACK ROCK

A Drama full of suspense and interest

In Cinemascope

THE CHAMPION METROPOLITAN COLLEGE,

Co-operators' Home, 103 Feet Road, MYSORE.

ADMISSIONS

For fresh classes in Typewriting and Shorthand (Leading to October 1956 Exams) are now being received.

(Sd) M S PUTTANNA,

(B Sc N D Com F I B (Lon)

Vice-Principal

ವಿಶೇಷ ಪ್ರಕಟಣೆ ★ 18-11 ಭಾನುವಾರ ಸ್ವರ್ಣ ಜಯಂತಿ ಕೊನೆಯ ದಿನ, ಹಾಗೂ 50ನೇ ದಿನ

ರಾಜಕಪೂರ್ ರವರ ★ ಶ್ರೀ 420 ★

ಒಲಂಪಿಯಾ ಚಿತ್ರಮಂದಿರದಲ್ಲಿ

19-11-56 ರಿಂದ ... ಅಜಿತ್, ಕೆ ಎನ್ ಸಿಂಗ್ ಮತ್ತು ... ನಟಿಸಿರುವ ಮೆರೀನ್ ಡ್ರೈವ್

PLEASE ELECT

B. S. Venkata Rao, B A, B L

(ASTRO-PALMIST)

as a DIRECTOR of G. C. S

Edited, Printed and Published by A R Nagarajan at S... Press, D Subbiah Road, M...

ರಿಜಿಸ್ಟರ್ಡ್ ನಂ 792

ಸ್ಥಳೀಯ ಪತ್ರಿಕೆ 3 ಕಾಸು

ಇತ್ತೀಚಿನ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ೧ ರೂ. ೧೨ ಆ.

ಅಂಚೆ ಮೂಲಕ ತಿಂಗಳಿಗೆ ೧ ರೂ. ೪ ಆ.

ಬಿಡಿ ಪತ್ರಿಕೆ ಮೂರು ಕಾಸು.

ಸಂಪುಟ : ೧೪] SADHVI . FRIDAY 18-11-1955 ಮೈಸೂರು ಶುಕ್ರವಾರ ೧೮-೧೧-೧೯೫೫ [ಸಂಚಿಕೆ : ೮೯

ಕಾಂಗ್ರೆಸ್ ಅಧ್ಯಕ್ಷ ಚನ್ನಯ್ಯನವರ ಮನೆ ಬಳಿ ಪ್ರದರ್ಶನ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಮನೆ ಮುಂದೆ ಪ್ರದರ್ಶನ

ಮೈಸೂರು ೧೭

ಇಂದು ಬೆಳಿಗ್ಗೆ ಸಹ ನಗರದಲ್ಲಿ ಮೈಸೂರು ಪ್ರತ್ಯೇಕವಾಗಿರಬೇಕೆಂಬ ಘೋಷಣ ಪತ್ರಗಳೊಡನೆ ಮೆರವಣಿಗೆ ಮಾಡಿಕೊಂಡು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಮನೆ ಮುಂದೆ "ಚನ್ನಯ್ಯನವರಿಗೆ ಧಿಕ್ಕಾರ", "ಮೈಸೂರನ್ನು ಉಳಿಸಬೇಕು" ಎಂಬ ಘೋಷಣೆ ಕೂಗಿಕೊಂಡು ಪ್ರದರ್ಶನ ನಡೆಸಿದರು. ಹಲವು ಗುಂಪುಗಳವರು ನಗರದಲ್ಲಿ ಪ್ರತ್ಯೇಕ ಪ್ರದರ್ಶನ ನಡೆಸಿದರು. ಚನ್ನಯ್ಯನವರ ಮನೆ ಮುಂದೆ ಸುಮಾರು ೨೦೦ ಜನರು ಶ್ರೀ ಚನ್ನಯ್ಯನವರ ಕಾರ್ಯಕ್ಷೇತ್ರದಲ್ಲಿ ಘೋಷಣೆಗಳನ್ನು ಕೂಗುತ್ತಿದ್ದರು.

ಇತರ ಚನ್ನಯ್ಯನವರ ಬಳಿಗೆ ಕೆಲವರು ಹೋಗಿ ಕರ್ನಾಟಕದ ಬಗ್ಗೆ ತೀರ್ಮಾನ ... ಮೈಸೂರನ್ನು ... ಕೇಳಿದರೆಂದೂ, ಅವರಿಗೆ ಅವರು ಉತ್ತರವಿತ್ತು, ಅವರುಗಳ ಈ ಅಭಿಪ್ರಾಯವನ್ನು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮುಂದೆ ಇಡುವುದಾಗಿ ತಿಳಿಸಿದರೆಂದೂ ತಿಳಿದಿದೆ.

ಸಭೆಯು ಮುಗಿದನಂತರ ಪ್ರದರ್ಶಕರು ಘೋಷಣೆಗಳನ್ನು ಕೂಗುತ್ತಾ, ವೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಮುನಿಸಿಪಲ್ ಆಫೀಸಿನ ಬಳಿ ಚದುರಿದರೆಂದು ಗೊತ್ತಾಗಿದೆ.

ಪ್ರಾಂತ ಕರಿಗೆ ಸಹಕಾರ ಬಗ್ಗೆ ಪ್ರೀಲ್ ವರ್ತಕರ ಮೇಲೆ ದಾವಾ

ಪ್ರೀಲಿನ ವ್ಯಾಪಾರದ ಸಂದರ್ಭಗಳಲ್ಲಿ ಅವರ ಮಾರಾಟ ತೆರಿಗೆಯನ್ನು ಸಲ್ಲಿಸುವುದು ಕ್ರಮಬದ್ಧವಲ್ಲವೆಂದೂ, ಆ ರೀತಿ ಅವರಿಗೆ ಕಾನೂನು ಪ್ರಕಾರ ಅಧಿಕಾರವಿಲ್ಲವೆಂದೂ, ರಾಜ್ಯಾಂಗದ ನಿಬಂಧನೆಗೆ ವಿರೋಧವೆಂದೂ ಸೂಚಿಸಿ, ಶ್ರೀಗಳಾದ ... ರಾಮಯ್ಯ ಮತ್ತು ... ರಾಯರು ನಗರದ ೧೩ ಜನ ಪೆಟ್ರೋಲ್ ವರ್ತಕರುಗಳ ಮೇಲೆ ೧ನೇ ಮುನ್ಸೀಫ್ ಕೋರ್ಟಿನಲ್ಲಿ ನೆನ್ನೆ ದಾವೆಯನ್ನು ಹೂಡಿರುತ್ತಾರೆ.

ಚನ್ನಯ್ಯನವರಿಗೆ ಶಸ್ತ್ರ ಚಿಕಿತ್ಸೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರಿಗೆ ಬೆನ್ನಿನ ಕುರುವಿಗಾಗಿ ಕಳೆದ ಮಂಗಳವಾರ ... ಆಸ್ಪತ್ರೆಯಲ್ಲಿ ಡಾ॥ ಆದಿಕೇಶವಲು ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದರು. ಶ್ರೀ ಚನ್ನಯ್ಯನವರು ಈಗ ವಿಶ್ರಾಂತಿ ಪಡೆಯುತ್ತಿರುವರು.

ರಷ್ಯಾ ಧುರೀಣರು

... ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ... ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿ ಕ್ರುಶ್ಚೇವ್‌ರವರು ನೆನ್ನೆ ವಿಮಾನದಲ್ಲಿ ಮಾಸ್ಕೋವಿನಿಂದ ಹೊರಟರು. ಅವರು ... ದಿನಗಳ ಕಾಲ ... ಇದ್ದು, ನಾನಾ ಕಡೆ ಸಂಚರಿಸುವರು.

ಕರ್ನಾಟಕಕ್ಕೆ ರಾಜಪ್ರಮುಖರೇ ಅಧಿಪತಿಯಾಗಲಿ

ವಿಧಾನ ಪರಿಷತ್ತಿನಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

ಬೆಂಗಳೂರು ೧೭

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ವಿಧಾನ ಪರಿಷತ್ತಿನಲ್ಲಿ ... ಕರ್ನಾಟಕ ... ಮೈಸೂರಿನ ... ರಾಜಪ್ರಮುಖರೇ ... ಕರ್ನಾಟಕ ... ಸೂಚಿಸಿದರು ... ಗಳನ್ನು ... ಸಮಿತಿಯವರು ... ವಿಧಾನ ... ಮುಖ್ಯ ಮಂತ್ರಿಗಳ ... ಅದಕ್ಕೆ ... ವಿಧಾನ ... ಮೈಸೂರು ... ಪ್ರೀತಿ ... ಮುಖ್ಯ ಮಂತ್ರಿತ್ವವನ್ನು ವಹಿಸಿದ ಬಳಿಕ ... ರಾಜಪ್ರಮುಖರ ಸ್ಥಾನವನ್ನು ... ಪ್ರಸಂಗವು ... ತಿಳಿಸಿದರು ... ಅವರು ... ಪ್ರಭುಗಳಾಗಿರುವರೆಂದೂ ಅವರು ತಿಳಿಸಿದರು.

ರಾಷ್ಟ್ರ ಧ್ವಜಕ್ಕೆ ಅಪಮಾನವಾದುದು ನಿಜವೆಂದು ಎಚ್. ಅನಂತಯ್ಯನವರು

ಕಿರಿಯ ... ಸಭೆಯಲ್ಲಿ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು, ಮೈಸೂರು ... ರಾಷ್ಟ್ರಧ್ವಜಕ್ಕೆ ಅಪಮಾನವಾಗಿದ್ದುದು ... ಕೊಟ್ಟ ಹೇಳಿಕೆಗೆ ಮೈಸೂರಿನ ಶ್ರೀ ಸಿ ಎನ್ ಅನಂತಯ್ಯನವರು ಉತ್ತರವಿತ್ತು, ಶ್ರೀ ನಾಗಪ್ಪ ಎಂಬುವರು ರಾಷ್ಟ್ರಧ್ವಜವನ್ನು ಹಿಡಿದಿದ್ದರೆಂದೂ, ಇತರ ಕೆಲವರು ... ಧ್ವಜದ ರಕ್ಷಣೆಗಾಗಿ ... ಪ್ರಯತ್ನವು ವಿಫಲವಾಗಿ, ಧ್ವಜವನ್ನು ಹಿಡಿದಿದ್ದವರನ್ನು ಕಳಕ್ಕೆ ಕೆಡವಿ ... ಧ್ವಜವನ್ನು ಕಿತ್ತುಕೊಂಡವರ ... ಪೊಲೀಸರ ವಶಕ್ಕೆ ಒಪ್ಪಿಸಲಾಯಿತೆಂದೂ, ... ಈ ವಿಷಯವನ್ನು ... ನಿಯಮಗಳ ರೀತಿಯಲ್ಲಿ ಕ್ರಮ ... ಶ್ರೀ ಅನಂತಯ್ಯನವರು ಹೇಳಿರುವರು ... ರಾಷ್ಟ್ರ ಧ್ವಜವನ್ನು ಹಿಡಿದುದಾಗಿ ... ಸರಿಯಲ್ಲವೆಂದು ಅವರು ತಿಳಿಸಿರುವರು.

ನಂಜನಗೂಡಿನಲ್ಲಿ ಗೋ ಸಂವರ್ಧನ ವಾರ

ನಂಜನಗೂಡಿನ ಪೌರಸಭೆಯವರು ಜಿಲ್ಲಾ ... ಶಾಲೆಯಲ್ಲಿ ಗೋ ಸಂವರ್ಧನ ಸಪ್ತಾಹದ ಅಂಗವಾಗಿ ನಾಳೆ ಸಂಜೆ ... ಗಂಟೆಗೆ ಸಮಾರಂಭವೊಂದನ್ನು ಏರ್ಪಡಿಸಿರುವರು. ಪೌರಸಭಾ ಅಧ್ಯಕ್ಷ ಶ್ರೀ ಎ ಕೆ ಮುದ್ದೇಗೌಡಯ್ಯನವರು ಅಧ್ಯಕ್ಷತೆ ವಹಿಸುವರು.

ಮೈಸೂರು ಪ್ರತ್ಯೇಕವಾಗಿಯೇ ಉಳಿಯಬೇಕು

ವಿಧಾನ ಸಭೆಯಲ್ಲಿ ವಿದ್ಯಾ ಸಚಿವ ಎ. ಜಿ. ರಾಮಚಂದ್ರರಾಯರ ಹೇಳಿಕೆ

ಬೆಂಗಳೂರು ೧೭

ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನೆನ್ನೆ ವಿಧಾನಸಭೆಯಲ್ಲಿ ಮಾತನಾಡಿ, ಏಕೀಕರಣ ಕರ್ನಾಟಕ ಪ್ರಾಂತಗಳ ರಚನೆಯು ಅನಪೇಕ್ಷಿತವೆಂದೂ, ಮೈಸೂರು ಪ್ರತ್ಯೇಕವಾಗಿಯೇ ಉಳಿಯಬೇಕೆಂದೂ ತಿಳಿಸಿದರು. ... ಈ ಪ್ರಶ್ನೆಯನ್ನು ... ಭಾಷಾವಾರು ಪ್ರಾಂತವು ಜನರನ್ನು ಒಡೆಯುವುದೆಂದೂ, ಅನೇಕ ... ಪ್ರಯುಕ್ತವಲ್ಲವೆಂದೂ, ... ಜನರನ್ನು ... ಅಭಿಪ್ರಾಯಪಟ್ಟರು. ಎರಡು ಸಂಸ್ಥಾನಗಳ ರಚನೆಯಿಂದ ... ಸಾಂಸ್ಕೃತಿಕ ... ಸಮಸ್ಯೆಗಳು ಪರಿಹಾರವಾಗುವುವೆಂದು ಅವರು ತಿಳಿಸಿದರು.

ರಾಜಪ್ರಮುಖರ ಸ್ಥಾನ ಭದ್ರತೆಗೆ ಕ್ರಿಯಾ ಸಮಿತಿ ರಚನೆ

ಮೈಸೂರು ೧೭

ಕರ್ನಾಟಕ ಪ್ರಾಂತ ರಚನೆ ಸಂಬಂಧದಲ್ಲಿ ಮೈಸೂರಿನ ವೈಶಿಷ್ಟ್ಯ ಮತ್ತು ಇಲ್ಲಿನ ರಾಜಪ್ರಮುಖರ ಸ್ಥಾನ ಭದ್ರತೆಗೆ ... ನೆನ್ನೆ ಶ್ರೀ ಎಂ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ... ಭವನದಲ್ಲಿ ಹಲವರು ... ಸಭೆ ಸೇರಿದ್ದಿತು. ಮೇಲ್ಕಂಡ ಉದ್ದೇಶದ ಸಾಧನೆಗಾಗಿ ೨೦ ಜನರ ಕ್ರಿಯಾ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಎಂ. ರಾಮಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀಗಳಾದ ನಂಜುಂಡಪ್ಪನವರು ಮತ್ತು ... ನಂಜಪ್ಪನವರು ಉಪಾಧ್ಯಕ್ಷರಾಗಿಯೂ, ಪೌರಸಭಾ ಸದಸ್ಯ ಶ್ರೀ ... ಯ್ಯನವರು ಖಜಾಂಚಿಯಾಗಿಯೂ, ಡಾ॥ ಎಸ್ ಎ ದೀಕ್ಷಿತ್ ಮತ್ತು ಡಾ॥ ... ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಕರ್ನಾಟಕ ಪ್ರಾಂತವನ್ನು ... ಮೈಸೂರು ಎಂದು ಕರೆಯುವಂತೆಯೂ, ಮೈಸೂರಿನ ರಾಜಪ್ರಮುಖರ ಸ್ಥಾನಮಾನಗಳು ಈಗಿನಂತೆಯೇ ಉಳಿಯುವುದೆಂದೂ, ಅವರು ಹೊಸ ಪ್ರಾಂತದ ರಾಜಪ್ರಮುಖರಾಗಬೇಕೆಂದೂ ... ನಿರ್ಣಯವನ್ನು ಅಂಗೀಕರಿಸಲಾಯಿತು. ಈ ಸಂಬಂಧವಾಗಿ ಪ್ರಾಂತೀಯ ಸಮ್ಮೇಳನವನ್ನು ಸೇರಿಸಬೇಕೆಂದೂ, ... ಬಹಿರಂಗ ಸಭೆಯೊಂದನ್ನು ನಡೆಸಬೇಕೆಂದೂ ಗೊತ್ತುಮಾಡಲಾಯಿತು.

○ ರಾಜಧಾನಿಯ ನವರಾವಿಳಾಸ ಅಗ್ರಹಾರದಲ್ಲಿರುವ ಶ್ರೀ ನೃತ್ಯಕಲಾ ಮಂದಿರದ ಮೊದಲನೆಯ ... ನರಸಿಂಹರಾಜ ... ಸಂಟ್ ಜೋಸೆಫ್ ರಸ್ತೆಯಲ್ಲಿರುವ ... ಯಲ್ಲಿ ಮಂದಿರದ ... ಶ್ರೀ ಕೆ ಎಸ ... ನೆರವೇರಿಸುವರು.

ಪರ್ಷಿಯಾ ಪ್ರಧಾನಿ ಮೇಲೆ ಗುಂಡಿನ ಹೊಡೆತ

ಪರ್ಷಿಯಾದ ಪ್ರಧಾನಿ ಹುಸೇನ್ ಅಲಾ ರವರು ನೆನ್ನೆ ... ಮಸೀದಿಯಲ್ಲಿ ... ಮುಖಂಡರೊಬ್ಬರ ... ಸಂಬಂಧದಲ್ಲಿ ಪ್ರಾರ್ಥನೆ ... ಗುಂಡಿನಿಂದ ಹೊಡೆಯಲಾಯಿತೆಂದೂ, ... ಎಂಬುವವನನ್ನು ಬಂಧಿಸಲಾಯಿತೆಂದೂ ಗೊತ್ತಾಗಿದೆ. ಪ್ರಧಾನಿಯವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಗಿದೆ. ಅವರು ಅಪಾಯದಿಂದ ಪಾರಾಗಿರುವುದಾಗಿ ಗೊತ್ತಾಗಿದೆ.

ಕೋರ್ಟಿನ ಲಾಕಪ್ಪಿನಿಂದ ಎಸ್. ಎಸ್. ಲಾಲನ ಪರಾರಿ

ಕೊಲೆ ಪ್ರಯತ್ನವೇ ಮೊದಲಾದ ... ಕಳೆದ ತಿಂಗಳು ಬೆಂಗಳೂರಿನಲ್ಲಿ ... ಎಸ್. ಎಸ್ ಲಾಲ್ ... ಎಂಬುವನು ನೆನ್ನೆ ... ಕೋರ್ಟಿನ ಲಾಕಪ್ಪಿನಿಂದ ತಪ್ಪಿಸಿಕೊಂಡು ಪರಾರಿಯಾಗಿರುವುದಾಗಿ ಗೊತ್ತಾಗಿದೆ. ಅವನು ... ಹೋಗುವುದಾಗಿ ತಿಳಿಸಿ ಹೋಗಿ ಅಲ್ಲಿ ... ಹೊರಗೆ ... ಹೋದನೆಂದು ವರದಿಯಾಗಿದೆ.

ಕಳ್ಳತನ

ಕಳೆದ ಶನಿವಾರ ರಾತ್ರಿ, ... ರಸ್ತೆಯಲ್ಲಿ ... ವಾಸಿಸುವ ಶ್ರೀ ಹೆಚ್. ಕೆ. ... ಯ್ಯನವರ ಮನೆಗೆ ಕಳ್ಳರು ನುಗ್ಗಿ ... ರೂಮಿನಲ್ಲೂ, ಅಡಿಗೆ ಮನೆಯ ... ಬೀಗ ಒಡೆದು, ... ನಗನಾಣ್ಯ, ಬಟ್ಟೆ ಮುಂತಾದ ... ಗಳು, ಒಡವೆಗಳು ... ಅಪಹರಿಸಿಕೊಂಡು ಹೋಗಿರುತ್ತಾರೆ. ಅಸ್ಥಳದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಂಸ್ಕೃತ ವಿದ್ವಾಂಸರಿಗೆ ಪ್ರಶಸ್ತಿ

ರಾಜಧಾನಿಯ ಯುವರಾಜಾ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ ಎಸ್ ರಂಗಾಚಾರ್ಯರು ಮತ್ತು ಸಂಸ್ಕೃತ ಸಾಹಿತ್ಯ ಸದನದ ವ್ಯವಸ್ಥಾಪಕರಾದ ಶ್ರೀ ಆರ್ ಶ್ರೀನಿವಾಸಾಚಾರ್ಯರುಗಳಿಂದ ರಚಿತವಾದ ಸಂಸ್ಕೃತ ಗ್ರಂಥಗಳನ್ನು ಮೆಚ್ಚಿ ... ಸಂಸ್ಕೃತ ವಿದ್ಯಾಪೀಠದವರು ಅವರುಗಳಿಗೆ ವಿದ್ಯಾರತ್ನ ಮತ್ತು ವಿದ್ಯಾಲಂಕಾರ ಪ್ರಶಸ್ತಿಗಳನ್ನು ಕೊಟ್ಟಿರುತ್ತಾರೆ.

○ ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಕಳೆದ ತಿಂಗಳು ... ನೇ ತಾರೀಕು ತುಮಕೂರಿಗೆ ಭೇಟಿ ಕೊಟ್ಟಾಗ ಅಲ್ಲಿ ಮೈಸೂರು ವಾದಿಗಳಿಗೂ ಕರ್ನಾಟಕ ವಾದಿಗಳಿಗೂ, ನಡೆದ ಘರ್ಷಣೆ ಸಂಬಂಧವಾಗಿ ರಂಗಣ್ಣ, ... ಕೃಷ್ಣ, ... ಮೋಹನ್‌ಗೌಡ, ಮಲ್ಲಿಕಾರ್ಜುನಗೌಡ, ... ಗೌಡ, ಕೃಷ್ಣೇಗೌಡ ಮತ್ತು ... ವರ ಮೇಲೆ ಸಾರ್ವಜನಿಕ ಸ್ಥಳದಲ್ಲಿ ... ಮತ್ತು ಶಾಂತಿ ಭಂಗಕ್ಕಾಗಿ ಮೊಕದ್ದಮೆ ಹೂಡಲಾಗಿದೆ.

ಪೌರಸಭೆಯಲ್ಲಿ ೨೨ರಂದು ಘಜ ಬಾಲಿ ಸಮಿತಿ ವರದಿ ಪರಿಶೀಲನೆ

ಮೈಸೂರು ೧೭

ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯ ಸಂಬಂಧವಾಗಿ ಮೈಸೂರು ಸಂಸ್ಥಾನ, ಅದರಲ್ಲೂ ಮೈಸೂರು ನಗರದ ಭವಿಷ್ಯವನ್ನು ಕುರಿತು ಪರಿಶೀಲನೆ ನಡಸಲು ಈ ತಿಂಗಳು ೨೨ನೇ ತಾರೀಖು ಬೆಳಿಗ್ಗೆ ೩॥ ಗಂಟೆಗೆ ಪೌರಸಭೆಯ ವಿಶೇಷ ಅಧಿವೇಶನವನ್ನು ಕರೆಯಲಾಗಿದೆ. ಸಭೆಯನ್ನು ಕರೆಯುವಂತೆ ಶ್ರೀ ವಿಶ್ವನಾಥ ಮತ್ತು ಪೌರಸಭಾ ಉಪಾಧ್ಯಕ್ಷ ಶ್ರೀ ಎಸ್ ... ಅಧ್ಯಕ್ಷರಿಗೆ ಕಳೆದ ೭ನೇ ತಾರೀಖು ಪತ್ರ ಬರೆದಿದ್ದರು

ಜಿಲ್ಲೆಯಲ್ಲಿ ಉತ್ತಮ ಬೆಳೆ

ಈ ಸಲ ಜಿಲ್ಲೆಯಲ್ಲಿ ಹುರುಳಿ, ತೊಗರಿ, ಮುಂತಾದ ದ್ವಿದಳ ಧಾನ್ಯಗಳು, ರಾಗಿ ಮತ್ತು ಭತ್ತದ ಫಸಲು ಸುಮಾರು ... ಅಣೆಯಷ್ಟಾಗಬಹುದೆಂದು ಅಂದಾಜುಮಾಡಲಾಗಿದೆಯೆಂದೂ ಆದರೆ ಮಳೆಯಿಂದ ಹೊಗೆಸೊಪ್ಪಿಗೆ ಸ್ವಲ್ಪ ನಷ್ಟವುಂಟಾಗಿದೆಯೆಂದೂ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಕರ್ನಾಟಕದ ನೀತಿಯ ಬಗ್ಗೆ ಮುಖ್ಯಮಂತ್ರಿಗಳಿಗೆ ಅಭಿನಂದನೆ

ಮುಖ್ಯಮಂತ್ರಿ ಹನುಮಂತಯ್ಯನವರು ಕರ್ನಾಟಕದ ಬಗ್ಗೆ ... ಅವರಿಗೆ ... ಶ್ರೀ ಎಂ ಗೋಪಾಲರಾವ್ ... ಮತ್ತು ಇತರ ... ಕರ್ತರು ತಂತಿ ಕಳುಹಿಸಿದ್ದಾರೆ

ಶ್ರೀಮುತ್ತ್ಯಾಗರಾಜ ಕೀರ್ತನ ಶ್ರವಣ

ರಾಜಧಾನಿಯ ... ಶ್ರೀ ... ಶ್ರೀಮುತ್ತ್ಯಾಗರಾಜರ ... ಕಳೆದ ಮಂಗಳವಾರದಿಂದ ... ದಿನಗಳವರೆಗೆ ಬೆಳಿಗ್ಗೆ ... ಮತ್ತು ಮಧ್ಯಾಹ್ನ ... ವರೆಗೆ ಶ್ರೀ ಆರ್ ಎಸ್. ... ಯವರಿಂದ ಶ್ರೀಮುತ್ತ್ಯಾಗರಾಜರ ಕೃತಿಗಳ ... ಆಸ್ತಿಕ ಮಹಾಶಯರಿಂದ ... ಕೇಳಲಾಗಿದೆ

ಗೋಡ್ಸೆ ದಿನಾಚರಣೆ ಪ್ರಯತ್ನಕ್ಕಾಗಿ ದಂಡವಾಟೆ ಬಂಧನ

ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿ ಫಾಸಿಯಿಂದ ಗೋಡ್ಸೆಯನ್ನು ಗಲ್ಲಿಗೇರಿಸಿದ ... ದಿನವನ್ನು ಆಚರಿಸಲು ಪ್ರಯತ್ನಿಸಿದ ಜಿ. ಎಸ್ ದಂಡವಾಟೆ ಮತ್ತು ಇತರ ಮೂವರನ್ನು ಗ್ವಾಲಿಯರ್ ಪೊಲೀಸರು ಬಂಧಿಸಿರುತ್ತಾರೆ. ಅವರನ್ನು ಜಾಮೀನು ಮೇಲೆ ಬಿಡುತ್ತೇವೆಂದು ಸೂಚಿಸಿದ್ದರೂ, ಜಾಮೀನನ್ನು ಕೊಡಲು ಅವರು ... ಕಾರಣ ಅವರನ್ನು ಪೊಲೀಸರು ಬಂಧನದಲ್ಲಿಟ್ಟುಕೊಂಡಿರುವರು. ಗಾಂಧಿಯವರ ಕೊಲೆ ... ದಂಡವಾಟೆಯೂ ಆಪಾದಿತನಾಗಿದ್ದನು

ರಕ್ಷಣಾ ಶಾಖೆಯ ಅಧಿಕಾರಿ ಮತ್ತು ಪತ್ನಿಯ ಕೊಲೆ

ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಭದ್ರತಾ ದಳದ ಡೈರೆಕ್ಟರ್ ಕರ್ನಲ್ ಎಂ.ಎಸ್ ಧಿಲ್ಲನ್ ಮತ್ತು ಅವರ ಪತ್ನಿಯನ್ನು ... ದಲ್ಲಿ ಕಳೆದ ಸೋಮವಾರ ಯಾರೋ ಗುಂಡು ಹೊಡೆದು ಕೊಂದುಹಾಕಿರುವರೆಂದು ವರದಿಯಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಕನ್ನಡ ಗೀತೆಗಳು. ... ಕನ್ನಡ ಗೀತೆಗಳು ... ಮಧ್ಯಾಹ್ನ ... ಕನ್ನಡ ಗೀತೆಗಳು ... ಭಾಷಣ ... ಕಾರ್ಯಕ್ರಮ ... ಶ್ರೀ ... ಅವರ ಸಂಗೀತ

ಅರ್ಜೆಂಟೈನಾದಲ್ಲಿ ಪುನಃ ಅವ್ಯವಸ್ಥೆ

ಅರ್ಜೆಂಟೈನಾದಲ್ಲಿ ಹಲವು ತಿಂಗಳ ಹಿಂದೆ ಅಧಿಕಾರಕ್ಕೆ ಬಂದ ಜನರಲ್ ಲೊನಾರ್ಡಿಯವರನ್ನು ಅಧ್ಯಕ್ಷ ಸ್ಥಾನದಿಂದ ಹೊರದೂಡಲಾಗಿದೆ ಅವರ ಬದಲು ಅಲ್ಲಿನ ಸೈನ್ಯಗಳ ಮುಖ್ಯಾಧಿಕಾರಿ ಜನರಲ್ ಅರಾಂಬುರವರು ಅಧಿಕಾರಕ್ಕೆ ಬಂದಿರುತ್ತಾರೆ ದೇಶತ್ಯಾಗ ಮಾಡಿದ ಮಾಜಿ ಅಧ್ಯಕ್ಷ ಪೆರಾನರ ಪರವಾಗಿರುವವರ ಬಗ್ಗೆ ಲೊನಾರ್ಡಿಯವರ ಸೌಹಾರ್ದ ವರ್ತನೆಯನ್ನು ಹೊಸ ಆಡಳಿತದವರು ಅಂಗೀಕರಿಸಲಿಲ್ಲ. ಈಗ ಆ ದೇಶದಲ್ಲಿ ಮಿಲಿಟರಿ ಕೂಟವೊಂದು ರಾಜ್ಯಭಾರವನ್ನಾರಂಭಿಸಿದೆ ರಾಜಧಾನಿ ಬ್ಯೂನೋಸ್ ಐರೀಸ್‌ಗೆ ಸ್ವಲ್ಪ ದೂರವಿರುವ ರೊಸೇರಿಯೊ ಎಂಬಲ್ಲಿ ಕಾರ್ಮಿಕರ ಮುಷ್ಕರವು ಆರಂಭವಾಗಿದೆ. ಪೆರಾನರು ಪುನರ್ವ್ಯವಸ್ಥೆಗೊಳಿಸಿದ್ದ ಸಿ ಜಿ ಟಿ. ಸಂಸ್ಥೆಯನ್ನು ಮುಟ್ಟಿದುದೇ ಮುಷ್ಕರಕ್ಕೆ ಕಾರಣ ಆ ದೇಶದಲ್ಲಿ ಸದ್ಯದಲ್ಲೇ ಸಾರ್ವತ್ರಿಕ ಮುಷ್ಕರ ನಡಸಲೂ ಸೂಚನೆಯನ್ನು ಹೊರಡಿಸಲಾಗುವುದೆಂದು ಹೇಳಲಾಗಿದೆ

ನೆಹರೂ ಜಯಂತಿ

ವೈಸ್‌ರಾಯ್ ರಸ್ತೆಯಲ್ಲಿರುವ ಶಾರದಾ ನಿಕೇತನ ವಿದ್ಯಾರ್ಥಿ ನಿಲಯದ ಶಾರದಾ ಯೂನಿಯನ್ನಿನ ಆಶ್ರಯದಲ್ಲಿ ಕಳೆದ ಸೋಮವಾರ ನೆಹರೂ ಜಯಂತಿಯನ್ನು ವೈಭವದಿಂದ ಆಚರಿಸಲಾಯಿತು. ನಿಲಯದ ಕಾರ್ಯದರ್ಶಿ ಶ್ರೀ ಕೆ ಎಂ ಸೋಮಸುಂದರಂರವರು ಧ್ವಜಾರೋಹಣ ಮಾಡಿದರು ಕುಮಾರಿ ಕೆ. ಸಿ. ವಸಂತ್‌ರವರಿಂದ ಪ್ರಾರ್ಥನೆಯೊಡನೆ ಸಭೆ ಆರಂಭವಾಯಿತು ಸಂಘದ ಉಪಾಧ್ಯಕ್ಷರಾದ ... ಎಸ್ ... ರವರು ಸ್ವಾಗತ ಭಾಷಣ ಮಾಡಿದನಂತರ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಉಪ ಪ್ರಾಧ್ಯಾಪಕರಾದ ಶ್ರೀ ಸಿ ಡಿ ಗೋವಿಂದರಾವ್‌ರವರು ನೆಹರೂರವರ ಜೀವನದಲ್ಲಿ ಹಲವು ಅಂಶಗಳನ್ನು ಕುರಿತು ಮಾತನಾಡಿದರು ಕೇಂದ್ರ ಆಹಾರ ಸಂಶೋಧನಾಲಯದ ಶ್ರೀ ... ರವರು ಅಧ್ಯಕ್ಷತೆ ವಹಿಸಿದ್ದರು. ವೇಣುಗೋಪಾಲ್‌ರವರಿಂದ ವಂದನಾರ್ಪಣೆ, ರಾಷ್ಟ್ರಗೀತೆ ಮತ್ತು ... ಸಭೆ ಮುಕ್ತಾಯವಾಯಿತು

ವಿವಾಹ ಮಹೋತ್ಸವಗಳು

ನಿವೃತ್ತ ಪೋಸ್ಟಲ್ ಡೆಪ್ಯುಟಿ ಡೈರೆಕ್ಟರಾದ ಯಳಂದೂರಿನ ಶ್ರೀ ವೈ. ಆರ್ ಎ. ರಾಯರು ತಮ್ಮ ಮಕ್ಕಳೂ, ವಿಂಧ್ಯ ಪ್ರದೇಶದ ಜೂನಿಯರ್ ಇಂಜನಿಯರರೂ ಆದ ಶ್ರೀ ವೈ ಎ. ... ರವರಿಗೆ ಮೈಸೂರು ಮರಾಮತ್ತು ಇಲಾಖೆಯ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ಎಂ. ವಿಜಯಪೈಪಣರಾಯರ ಮಗಳು ಸೌ॥ ಎಂ. ಪಿ ... ರವರನ್ನು ತಂದುಕೊಂಡು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು.

ನಾಗಪುರದಲ್ಲಿರುವ, ಮಧ್ಯ ಪ್ರದೇಶದ ವಿದ್ಯುಚ್ಛಕ್ತಿ ಸಮಿತಿ ಸದಸ್ಯರಾದ ಶ್ರೀ ಎಸ್ ರಾಘವಾಚಾರ್ಯರು ತಮ್ಮ ಕುಮಾರಿ ಸೌ॥ ಶಾಂತರವರನ್ನು ಡೆಪ್ಯುಟಿ ಪೊಲೀಸು ಸೂಪರಿಂಟೆಂಡೆಂಟ್ ಶ್ರೀ ಜಿ. ಸಂತಾನಕೃಷ್ಣರವರ ಪುತ್ರರೂ, ದೆಹಲಿಯಲ್ಲಿ ಇಂಜನಿಯರರೂ ಆದ ಶ್ರೀ ಎಸ್. ರಂಗರಾಜರವರಿಗೆ ಕೊಟ್ಟು ನೆನ್ನೆ ಮದ್ರಾಸಿನಲ್ಲಿ ವಿವಾಹವನ್ನು ನೆರವೇರಿಸಿದರು.

ಮೈಸೂರು ಪೇಟೆ ಧಾರಣೆ

	ರೂ. ಇಂದ	ರೂ. ವರೆಗೆ
ಕಡಲೆಕಾಯಿ	೯ ೧೪ ೦	೧೪ ೮ ೦
ಒಣ್ಮೆಣಸು	೨೫ ೨ ೦	
ಹರಳುಬೀಜ	೩೩ ೨ ೦	
ಹುರುಳಿ	೩೪ ೪ ೦	೩೮ ೦ ೦
ಹೆಸರು	೨೨ ೪ ೦	೪೭ ೦ ೦
ಉದ್ದು	೨೩ ೦ ೦	
ಹುಣಸೆ	೩೦ ೦ ೦	೪೭ ೧೨ ೦
ತೊಗರಿ	೨೬ ೮ ೦	೩೩ ೧೨ ೦
ರಾಗಿ	೧೫ ೦ ೦	೨೪ ೧೨ ೦
ಬೆಲ್ಲ	೨ ೫ ೦	೩ ೧ ೦
ಹಿಂಗಿತಾಯಿ	೫ ೧೪ ೦	
ತೆಂಗಿನಕಾಯಿ	೭ ೮ ೦	೧೪ ೧೨
ಬೆಲ್ಲ	೨ ೧೦ ೦	
ಕೊಬ್ಬರಿ	೧೬೫ ೦ ೦	೧೮೭ ೮ ೦

೩೫ ಸಾವಿರ ಅಡಿ ಎತ್ತರದಲ್ಲಿ ವಿಮಾನದಿಂದ ಹಾರಿದ ಚಾಲಕ

ಅಮೆರಿಕದ ಚಾಲಕನಾದ ಜಾರ್ಜ್ ಸ್ಮಿತ್ ಎಂಬಾತನು ೩೫ ಸಾವಿರ ಅಡಿ ಎತ್ತರದಲ್ಲಿ ಹಾರಿದರೂ ಬದುಕಿಕೊಂಡನೆಂದು ವರದಿಯಾಗಿದೆ. ಹಲವು ದಿನಗಳವರೆಗೆ ಅವನಿಗೆ ದೃಷ್ಟಿಯೇ ತಪ್ಪಿಹೋಗಿತ್ತೆಂದು ಹೇಳಲಾಗಿದೆ ಅತ್ಯಂತ ವೇಗದಲ್ಲಿ ಅವನು ವಿಮಾನವನ್ನು ಬಿಟ್ಟುಕೊಂಡುಹೋಗುತ್ತಿದ್ದನೆಂದೂ, ವಿಮಾನದ ಹತೋಟಿಯೇ ಅವನಕೈ ತಪ್ಪಿತ್ತೆಂದೂ ಹೇಳಲಾಗಿದೆ. ಪ್ಯಾರಾಚ್ಯೂಟ್ ಸಹಾಯದಿಂದ ಅವನು ಸಾಗರದಲ್ಲಿ ಬಿದ್ದನು. ಅವನನ್ನು ಬೆಸ್ತರು ದಡ ಸೇರಿಸಿದರು

ರಾಷ್ಟ್ರಧ್ವಜವನ್ನು ಹರಿದು ಹಾಕಲಿಲ್ಲ

ರಾಜಧಾನಿಯ ಕಾಲೇಜು ವಿದ್ಯಾರ್ಥಿ ಶ್ರೀ ಎಂ ನರವೇಗೌಡರು, ಮೊನ್ನೆ ಸೀತಾವಿಲಾಸ ಛತ್ರದ ಬಳಿ ನಡೆದ ಘಟನೆ ಬಗ್ಗೆ ಈ ರೀತಿ ತಿಳಿಸಿರುತ್ತಾರೆ :—

ಕರ್ನಾಟಕದ ಪರ ಮತ್ತು ವಿರೋಧಿಗಳ ಪ್ರದರ್ಶನಕಾರರು ಛತ್ರದ ಬಳಿ ಸಮಾವೇಶವಾಗಲೇ ಪೊಲೀಸರು ಮುಂಜಾಗರೂಕತೆಯಿಂದ ಅಲ್ಲಿಗೆ ಆಗಮಿಸಿ ಘರ್ಷಣೆಯಾಗದಂತೆ ಎಚ್ಚರಿಕೆ ವಹಿಸಿದ್ದರು ರಾಷ್ಟ್ರಧ್ವಜವನ್ನು ಹರಿದುಹಾಕಿ ಅವಮಾನ ಮಾಡಲಾಯಿತೆಂದು ಹೇಳುವುದು ಓದುಗರಿಗೆ ಆಶ್ಚರ್ಯವನ್ನುಂಟುಮಾಡಿದೆ. ಕರ್ನಾಟಕದ ವಾದಿಗಳಿಗೆ ರಾಷ್ಟ್ರಧ್ವಜದ ಮೇಲೆ ಎಷ್ಟು ಅಭಿಮಾನವಿರುವುದೋ ಅಷ್ಟೇ ಅಭಿಮಾನವು ವಿರೋಧಿಗಳಿಗೂ ಇದೆಯೆಂಬುದನ್ನು ಮರೆತರೆ ತಪ್ಪಾದೀತು ರಾಷ್ಟ್ರಧ್ವಜದ ಬಗ್ಗೆ ಅಕಾರ್ಯ ನಡೆದಿದ್ದರೆ ಪೊಲೀಸರು ಸುಮ್ಮನಿರುತ್ತಿದ್ದರೇ ? ಎಂಬುದನ್ನು ಸರ್ವರೂ ಗಮನಿಸಬೇಕು

SREE GANESH
TALKIES
GALA RELEASE On 19 11 55
Daily 3 Shows
ABBOT & COSTELLO MEET THE KEYSTONE KOPS.
The most hilarious Comedy hit of All Times

ಸಂಸ್ಕೃತ ಪ್ರಾಧ್ಯಾಪಕರ ... ಸತ್ಕಾರ

ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾಗಿ ನೇಮಿತರಾಗಿರುವ ಶ್ರೀ ಕಾ. ... ಶಾಸ್ತ್ರಿಗಳವರ ಗೌರವಾರ್ಥವಾಗಿ ... ಹಿತರು, ವಿದ್ಯಾರ್ಥಿಗಳು ಮತ್ತು ಅಧ್ಯಾ... ಇದೇ ೨೨ನೇ ತಾರೀಖು ಸಂಜೆ ೫॥ ಗಂಟೆ... ಲೇಜಿನಲ್ಲಿ ಸತ್ಕಾರ ಸಮಾರಂಭವೊಂದನ್ನು ... ರ್ಪಡಿಸುತ್ತಾರೆ. ಪ್ರಿನ್ಸಿಪಾಲರಾದ ಶ್ರೀ ... ಪುಟ್ಟಕೃಷ್ಣರವರು ಅಧ್ಯಕ್ಷತೆ ವಹಿಸುವರು. ... ಶಾಸ್ತ್ರಿಗಳವರ ಹಳೆಯ ವಿದ್ಯಾರ್ಥಿಗಳೂ ... ಸ್ನೇಹಿತರೂ ಇದನ್ನೇ ಆಹ್ವಾನವೆಂದು ... ಸಮಾರಂಭದಲ್ಲಿ ಭಾಗವಹಿಸಬೇಕೆಂದು ... ಲಾಗಿದೆ.

ಉಲುಬುಳಕಮ್ಮ ಬಡ ವಿದ್ಯಾರ್ಥಿ... ಸೂಚನೆ

ಬರುವ ಮಾರ್ಚಿಯಲ್ಲಿ ಪಬ್ಲಿಕ್ ಪರೀ... ಗೆ ಕಟ್ಟಲಿರುವ ಉಲುಬುಳಕಮ್ಮ ಬಡ ... ರ್ಥಿಗಳು ಹಣ ಸಹಾಯವನ್ನು ಅಪೇಕ್ಷಿ... ಸುವರದಲ್ಲಿ ತಮ್ಮ ಅರ್ಜಿಗಳನ್ನು ಇದೇ ... ತಾ॥ ಒಳಗಾಗಿ, ಸಂಘದ ಕಾರ್ಯದರ್ಶಿ ಶ್ರೀ ... ಮಾಭ್ಯುದಯ ಸಭಾ (ಉಲುಬು ... ಮೈಸೂರು ಈ ವಿಳಾಸಕ್ಕೆ ಕಳುಹಿಸಬೇಕೆಂ... ದು ತಿಳಿಸಲಾಗಿದೆ

SREE GAYATHRI
TALKIES
Last Day
PRODIGAL

-: NEXT CHANGE :-
From 19-11-55
Bad Day at the Black Rock
(Cinemascope)
Starring :—Spencer Tracy and Robert Ryan

Morning Shows on Sat. & Sun.
TEMBO
(Jungle Picture)

Edited, Printed and Published by A. K. Nagarajan at Sadhvi Press, D. Subbiah Road, Mysore

ಒಲಿಂಪಿಯಾ ಟಾಕೀಸ್
19-11-55 ರಿಂದ : ಪ್ರತಿದಿನ
ಅಮೋಘ ಪ್ರಾರಂಭ
ಜೆ. ಪಿ ... ಯವರ ಅತ್ಯುತ್ತಮ ಸಾಮಾಜಿಕ ಚಿತ್ರ
ಮರೀನ್ ಡ್ರೈವ್
ಪಾತ್ರ :— ... , ... ,
ಕೆ ಎನ್. ಸಿಂಗ್, ... ,
ಮೋಹನಾ ಮತ್ತು ವಿಜಯಲಕ್ಷ್ಮಿ.

THE KAPILA TEXTILE MILLS Ltd.,
NANJANGUD
NOTICE

This is to notify the public that 250 Ordinary Shares of Rs. 10 each, bearing distinctive numbers from 36931 to 37180 standing in the name of Sri V. P. Shetiya, Timber Merchant, Ankola, (N. Kanara), have been forfeited by a resolution of the Board of Directors at their sitting on 27-10-1955, for non-payment of first and second call arrears The relative Share Certificates Nos 3337 for 100 Ordinary Shares, No. 3348 for 100 Ordinary Shares and No 3478 for 50 Ordinary Shares are not negotiable and are hereby cancelled.

C. P. C. & Co.
Managing Agents

ರಿಜಿಸ್ಟರ್ಡ್ ನಂ. 792

ಕನ್ನಡ ಪತ್ರಿಕೆಗಳಲ್ಲಿ
ಪ್ರಜಾಪ್ರಭುತ್ವದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ ೨ ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ೨ಂ ಆಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ: ೧೧] SADHVI : SATURDAY 19-11-1955 ಮೈಸೂರು ಶನಿವಾರ ೧೯-೧೧-೧೯೫೫ [ಸಂಚಿಕೆ: ೭೫

ಕರ್ನಾಟಕದ ಬಗ್ಗೆ ಓಟು ಕೂಡದೆಂದು ಹೈಕಮಾಂಡ್ ಆಜ್ಞೆ

ಪ್ರಾಂತ ವಿಂಗಡಣೆ ಬಗ್ಗೆ ಓಟು ತೆಗೆದುಕೊಳ್ಳಕೂಡದು

ಶಾಸನ ಸಭಾ ಕಾಂಗ್ರೆಸ್ ಪಕ್ಷಕ್ಕೆ ಹೈ ಕಮಾಂಡಿನ ಆದೇಶ

(ಸ್ವಂ. ಫೋ.) ಬೆಂಗಳೂರು ೧೯

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ ಹೈ ಕಮಾಂಡಿನವರು ಆದೇಶವನ್ನು ಕಳುಹಿಸಿ, ಪ್ರಾಂತಗಳ ಪುನರ್ವಿಂಗಡಣಾ ಸಮಿತಿ ವರದಿ ಬಗ್ಗೆ ಪಕ್ಷದಲ್ಲಿ ಓಟು ತೆಗೆದುಕೊಳ್ಳಕೂಡದೆಂದು ಸೂಚಿಸಿರುವುದಾಗಿ ತಿಳಿದಿದೆ. ನೆನ್ನೆ ಪಕ್ಷದ ಸಭೆಯು ನಡೆದು ತಿಂಗಳು ೧೯ನೇ ತಾರೀಖು ಓಟು ತೆಗೆಯಬೇಕೆಂದು ನಿರ್ಧಾರವಾಗಿತ್ತು.

ಬೊಂಬಾಯಿಯಲ್ಲಿ ಲಾಠಿ ಪ್ರಹಾರ; ೪೫೦ ಜನರ ಬಂಧನ

ಶಾಸನ ಸಭೆ ಮುಂದೆ ಪ್ರದರ್ಶನ

ಬೊಂಬಾಯಿ ವಿಧಾನ ಪರಿಷತ್ತಿನ ಭವನದ ಬಳಿ ಹಾಕಲಾಗಿದ್ದ ಪೋಲೀಸರ ಬಲವಾದ ಕಟ್ಟನ್ನು ಭೇದಿಸಿ, ಒಳಕ್ಕೆ ನುಗ್ಗಲೆತ್ನಿಸಿದ ಜನ ಸಮೂಹಗಳನ್ನು ಚದುರಿಸಲು ನೆನ್ನೆ ಪೋಲೀಸರು ಲಾಠಿ ಪ್ರಹಾರ ಮಾಡಿ ಹಲವಾರು ಸಾರಿ ಆಶ್ರುವಾಯು ಪ್ರಯೋಗಿಸಿದರೆಂದು ವರದಿಯಾಗಿದೆ. ಪ್ರದರ್ಶನಕಾರರು ಸಂಯುಕ್ತ ಮಹಾರಾಷ್ಟ್ರದಲ್ಲಿ ಬೊಂಬಾಯಿ ನಗರವು ಸೇರಬೇಕೆಂದು ಕೂಗುತ್ತಿದ್ದರು. ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯನ್ನು ಚರ್ಚಿಸಲಾಗುತ್ತಿತ್ತು.

ಈ ಸಂಬಂಧವಾಗಿ ನೆನ್ನೆ ಬೊಂಬಾಯಿ ಕಮ್ಯೂನಿಸ್ಟ್ ಮುಖಂಡ ಎಸ್. ಎಸ್. ಮಿರಾಜ್ಕರ್ ಮತ್ತು ಕಾರ್ಮಿಕ ನಾಯಕ ದಾಜಿಬಾ ದೇಸಾಯಿ ಸೇರಿ ಸುಮಾರು ೪೫೦ ಮಂದಿಯನ್ನು ಬಂಧಿಸಲಾಯಿತೆಂದು ಹೇಳಲಾಗಿದೆ. ಪಿ.ಎಸ್.ಪಿ. ಮುಖಂಡರಾದ ಪಿ. ಕೆ. ಅತ್ರೆ ಮತ್ತು ಶ್ರೀ ... ಅಂಬಿಕ ಬೆಹರೆಯವರೂ ದಸ್ತಗಿರಿಯಾಗಿದ್ದಾರೆ.

ದಸ್ತಗಿರಿಯಾದ ಜನರನ್ನು ಸಾಗಿಸುತ್ತಿದ್ದ ಲಾರಿಗಳನ್ನು ಪ್ರದರ್ಶನಕಾರರು ತಡೆದು ಅನೇಕರ ಬಿಡುಗಡೆ ಮಾಡಿದರು. ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರು.

ಶಾಸನಸಭಾ ಭವನಕ್ಕೆ ಬೇರೊಂದು ಕಡೆಯಿಂದ ಮುತ್ತಿಗೆ ಹಾಕಿದ ೧೧೦ ಮಂದಿ ಮಹಿಳಾ ಪ್ರದರ್ಶಕರನ್ನೂ ದಸ್ತಗಿರಿ ಮಾಡಲಾಯಿತು.

ಬಳ್ಳಾರಿ ಸತ್ಯಾಗ್ರಹದಲ್ಲಿ ಹೆಚ್ಚು ಜನರ ಬಂಧನ

ಬಳ್ಳಾರಿ ಸತ್ಯಾಗ್ರಹದ ಸಂಬಂಧದಲ್ಲಿ ತುಂಗಭದ್ರಾ ಕಾಲುವೆ ನಿಬಂಧನೆಗಳನ್ನು ಮುರಿಯುವ ಹಿಂದಿನ ದಿನ ೨೮ ಜನ ಸತ್ಯಾಗ್ರಹಿಗಳನ್ನು ಕಂಪ್ಲಿಯ ಬಳಿ ದಸ್ತಗಿರಿ ಮಾಡಲಾಯಿತು. ಅವರು ಕಾಲುವೆ ನೀರನ್ನು ಅಕ್ರಮವಾಗಿ ಬಿಡಲೆತ್ನಿಸಿದರೆಂದು ಹೇಳಲಾಗಿದೆ. ಸತ್ಯಾಗ್ರಹದ ಸಂಬಂಧದಲ್ಲಿ ಮೊದಲೇ ೫೧ ಜನರು ಬಂಧಿತರಾಗಿದ್ದಾರೆ.

ರಷ್ಯದ ನಾಯಕರುಗಳಿಗೆ ದೆಹಲಿಯಲ್ಲಿ ಅದ್ಭುತ ಸ್ವಾಗತ

ನೆಹರೂರವರೊಡನೆ ಬುಲ್ಗಾನಿನ್ನರ ಸಮಾಲೋಚನೆ ಆರಂಭ

ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ನರು, ರಷ್ಯದ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿ ನಿಕಿಟಾ ಕ್ರುಶ್ಚೆವರೊಡನೆ ನೆನ್ನೆ ದೆಹಲಿಗೆ ಆಗಮಿಸಿದಾಗ ಅವರಿಗೆ ಅಭೂತಪೂರ್ವ ಸ್ವಾಗತವನ್ನು ನೀಡಲಾಯಿತು. ೧೨ ಲಕ್ಷಕ್ಕಿಂತಲೂ ಹೆಚ್ಚು ಜನರು ೧೨ ಮೈಲಿ ಉದ್ದಕ್ಕೂ ನಿಂತು ರಷ್ಯದ ನಾಯಕರಿಗೆ ಸುಸ್ವಾಗತವನ್ನು ಬಯಸಿದರು.

ಪಾಲಂ ವಿಮಾನ ನಿಲ್ದಾಣದಲ್ಲಿ ಆಗಮಿಸಿದ ರಷ್ಯದ ವಿಶೇಷ ವಿಮಾನದಲ್ಲಿ ಬಂದಿಳಿದಾಗ ಪ್ರಧಾನಿ ನೆಹರೂ ಮತ್ತು ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಸ್ವಾಗತ ಬಯಸಿದರು. ರಷ್ಯದ ವಿಮಾನದ ಬೆಂಗಾವಲಾಗಿ ೬೦ ಮೈಲಿ ದೂರದಿಂದ ಭಾರತದ ಜೆಟ್ ವಿಮಾನಗಳು ಬಂದುವು. ರಷ್ಯ ಮತ್ತು ಭಾರತದ ರಾಷ್ಟ್ರಗೀತೆಗಳನ್ನು ಭಾರತದ ಬ್ಯಾಂಡಿನವರು ನುಡಿಸಿದನಂತರ ಬುಲ್ಗಾನಿನ್ನರು ಕ್ರುಶ್ಚೆವರೊಡನೆ ಮೂರು ಸೈನ್ಯ ದಳಗಳ ಗೌರವ ರಕ್ಷೆಯನ್ನು ವೀಕ್ಷಿಸಿದರು.

ನೆಹರೂರವರು ಸೋವಿಯಟ್ ನಾಯಕರಿಗೆ ಕಾಶ್ಮೀರ ಮತ್ತು ಬೆಂಗಳೂರಿನಿಂದ ತರಿಸಲಾಗಿದ್ದ ಹೂವಿನ ಮಾಲೆ ಹಾಕಿದರು.

ಉಭಯ ಪ್ರಧಾನಿಗಳೂ ಭಾಷಣ ಮಾಡಿ, ಎರಡು ರಾಷ್ಟ್ರಗಳ ನಡುವೆ ಹೆಚ್ಚುತ್ತಿರುವ ಸಹಕಾರವನ್ನು ಪ್ರಸ್ತಾಪಿಸಿದರು. ನಂತರ ನೆಹರೂರವರೊಡನೆ ನಾಯಕರು ರಾಷ್ಟ್ರಪತಿ ಭವನಕ್ಕೆ ತೆರೆದ ಮೋಟಾರಿನಲ್ಲಿ ಮೆರವಣಿಗೆ ಹೊರಟರು.

ನಾಯಕರೊಡನೆ ರಷ್ಯದ ಸಾಂಸ್ಕೃತಿಕ ಮಂತ್ರಿ ಮಿಖೈಲಾವ್, ಉಪ ಪ್ರಧಾನಿ ಗ್ರೊಮಿಕೊ, ಸಾಂಸ್ಕೃತಿಕ ಉಪ ಮಂತ್ರಿ ಶ್ರೀಮತಿ ಸೆಪೋಂಬಾ ಬಾಯೇವಾ ಮುಂತಾದವರು ಆಗಮಿಸಿರುವರು.

ವಿಮಾನ ನಿಲ್ದಾಣದ ಹೊರಗಿನ ಹೆಬ್ಬಾಗಿಲು ಬಳಿ ಶಾಲಾ ಬಾಲಕಿಯರು ಪುಷ್ಪವೃಷ್ಟಿಗರೆದರು.

ನಾಯಕರನ್ನು ನೋಡಲು ಉತ್ಸುಕತೆಯಿಂದ ಸೇರಿದ್ದ ಲಕ್ಷೋಪಲಕ್ಷ ಜನರು ಎತ್ತಿನ ಗಾಡಿಗಳು, ಮೋಟಾರುಗಳು, ಲಾರಿಗಳು ಮತ್ತು ಮರಗಳ ಮೇಲೆ ಕುಳಿತಿದ್ದರು. ಹಲವರು ಆನೆಗಳನ್ನೂ, ಒಂಟೆಗಳನ್ನೂ ಏರಿ ಕುಳಿತಿದ್ದರು. ದಾರಿ ಉದ್ದಕ್ಕೂ ರಷ್ಯ ಮತ್ತು ಭಾರತ ಧ್ವಜಗಳನ್ನು ಹಾಕಲಾಗಿತ್ತು.

ರಷ್ಯದ ಪ್ರಧಾನಿಯೂ ಕ್ರುಶ್ಚೆವರೂ ನೆನ್ನೆ ಸಂಜೆ ಪ್ರಧಾನಿ ನೆಹರೂರವರ ನಿವಾಸಕ್ಕೆ ತೆರಳಿ ಅಲ್ಲಿ ಮಾತುಕತೆಗಳನ್ನಾರಂಭಿಸಿದರು.

ದೆಹಲಿಯಲ್ಲಿಳಿದಕೂಡಲೇ ಬುಲ್ಗಾನಿನ್ನರು ಭಾಷಣ ಮಾಡಿ, ಭಾರತವು ಒಂದೇ ರೀತಿಯಾಗಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿರುವುದೆಂದೂ, ಈ ಪ್ರಯತ್ನಗಳು ಸಫಲವಾಗುತ್ತಿರುವುದಾಗಿಯೂ ನುಡಿದರು. ಅವರಿಗೆ ಮುಂಚೆ ನೆಹರೂರವರು ಮಾತನಾಡಿ, ರಷ್ಯಕ್ಕೆ ತಾವು ಕೊಟ್ಟ ಭೇಟಿ ವಿಷಯವನ್ನು ಪ್ರಸ್ತಾಪಿಸಿ, ಎರಡು ರಾಷ್ಟ್ರಗಳ ಸ್ನೇಹ ಪರಿವರ್ತನೆಯಾಗುತ್ತಿರುವುದೆಂದು ತಿಳಿಸಿದರು.

ಬಸ್ಸಿನಲ್ಲಿ ಬೆಂಕಿಯುಂಟಾಗಿ ೧೯ ಜನ ಪ್ರಯಾಣಿಕರು ಭಸ್ಮ

ಉತ್ತರ ಪ್ರದೇಶದ ಸಹರಾನ್ಪುರದಿಂದ ಗಂಗೋಹ್ ಎಂಬಲ್ಲಿಗೆ ಹೋಗುತ್ತಿದ್ದ ಬಸ್ಸೊಂದು ನೆನ್ನೆ ಸಾಲು ಮರಕ್ಕೆ ಡಿಕ್ಕಿ ಹೊಡೆದುದರಿಂದ ಬೆಂಕಿಯುಂಟಾಗಿ, ೧೯ ಜನ ಪ್ರಯಾಣಿಕರು ಸುಟ್ಟು ಹೋದರೆಂದು ವರದಿಯಾಗಿದೆ. ಅವರು ಯಾರೆಂಬುದನ್ನು ಗುರುತಿಸಲೂ ಸಾಧ್ಯವಾಗಿಲ್ಲ. ಬಸ್ಸಿನಿಂದ ಹಾರಿ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟ ೧೧ ಮಂದಿಗೆ ತೀವ್ರ ಗಾಯಗಳಾಗಿವೆ.

ವಿಮಾನ ಮುರಿದು ೫೨ ಜನರ ಮರಣ

ಅಮೆರಿಕದ ಸೀಟಲ್ ವಿಮಾನ ನಿಲ್ದಾಣದಲ್ಲಿ ನೆನ್ನೆ ಪ್ರಯಾಣಿಕರ ವಿಮಾನವೊಂದು ಮುರಿದು ಬೆಂಕಿಯುಂಟಾಗಿ ೫೨ ಜನರು ಮೃತಪಟ್ಟರೆಂದು ವರದಿಯಾಗಿದೆ.

ವೇದವ್ಯಾಸರ ವಿಷಯವಾಗಿ ಭಾಷಣ

ಇಲ್ಲಿನ ಮಹಾರಾಜಾ ಪ್ರೌಢಶಾಲೆಯಲ್ಲಿ ಸಾ. ೬ ಸಂಜೆ ೬|| ಗಂಟೆಗೆ ಸಂಸ್ಕೃತಪ್ರಸಾರ ಸಭೆಯನ್ನು ಏರ್ಪಡಿಸಲಾಗಿದೆ. ಒಂಟಿಕೊಪ್ಪಲಿನವರ ಪ್ರೌಢಶಾಲೆಯ ಸಂಸ್ಕೃತ ಪಂಡಿತರಾದ ವಿ|| ಶಂಕರ ಶಾಸ್ತ್ರಿಯವರು ಮಹರ್ಷಿ ವೇದವ್ಯಾಸರ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವಿದೆ.

ಗೃಹಮಂತ್ರಿಗಳ ರಾಜೀನಾಮೆಯ ವರ್ಗಾವಣೆಗೆ ಒತ್ತಾಯ

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನೆನ್ನೆ ಶ್ರೀ ಎಚ್. ಸಿ. ನಾಗಯ್ಯಶೆಟ್ಟಿ, ವಿ. ವೆಂಕಟಪ್ಪ ಮತ್ತು ಶಿವನಂಜೇಗೌಡರು ಸಚಿವ ಶ್ರೀ ... ಪ್ರವೀರಪ್ಪನವರಿಂದ ಗೃಹ ಮಂತ್ರಿ ಖಾತೆಯನ್ನು ವರ್ಗಾಯಿಸಬೇಕೆಂದು ಒತ್ತಾಯ ಮಾಡಿದರೆಂದು ಹೇಳಲಾಗಿದೆ. ಮೈಸೂರು ವಾದಿಗಳಲ್ಲಿ ಭಯ ಹುಟ್ಟಿಸಲು ಪೋಲೀಸರು ಪ್ರದರ್ಶನಕಾರರನ್ನು ಬೇಕೆಂತಲೇ ಹೊಡೆಯುತ್ತಿರುವರೆಂದೂ, ಕರ್ನಾಟಕ ಪ್ರಾಂತವನ್ನು ಮೈಸೂರಿನವರ ಮೇಲೆ ಈ ರೀತಿ ಹೇರಿಸಲೆತ್ನಿಸಿದರೆ ಮುಂದಿನ ಭವಿಷ್ಯವೇನೆಂಬ ಬಗ್ಗೆ ಭಯವಾಗುತ್ತದೆಂದೂ ಶ್ರೀ ನಾಗಯ್ಯಶೆಟ್ಟಿಯವರು ಹೇಳಿದುದಾಗಿ ಗೊತ್ತಾಗಿದೆ.

ಪೈಗಂಬರರ ಜನ್ಮ ದಿನೋತ್ಸವ

ಮೈಸೂರಿನ ರೈಲ್ವೆ ನೌಕರರ ಮುಸ್ಲಿಂ ವೆಲ್‌ಫೇರ್ ಸಂಸ್ಥೆಯವರು ನಾಳೆ ಮಧ್ಯಾಹ್ನ ೪ ಗಂಟೆಗೆ ಟೌನ್‌ಹಾಲಿನಲ್ಲಿ ಮಹಮದ್ ಪೈಗಂಬರರ ಜನ್ಮದಿನೋತ್ಸವವನ್ನು ಏರ್ಪಡಿಸಿರುತ್ತಾರೆ. ಸಂಸ್ಥಾನದ ವಾರ್ತಾ ಮಂತ್ರಿ ಶ್ರೀ ಮಹಮದ್ ಹನೀಫ್ ಸಾಹೇಬರು ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಅಡ್ವೊಕೇಟರಾದ ಶ್ರೀ ಮಹಮದ್ ಹಸೇನ್, ಶಿಕಾರಿಪುರದ ಶ್ರೀ ಎಸ್. ಕೆ. ಕರೀಂ ಸಾಹೇಬ್ ಮತ್ತು ಇಲ್ಲಿನ ಮಹಾರಾಜಾ ಕಾಲೇಜಿನ ಅಧ್ಯಾಪಕರ ಶ್ರೀ ಮಹಮದ್ ಹನೀಫ್‌ರವರು ಕ್ರಮವಾಗಿ ಇಂಗ್ಲಿಷ್, ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ಭಾಷಣ ಮಾಡುವರು.

ಇದೇ ತಿಂಗಳು ೨೭ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ಬೆಂಗಳೂರಿನಲ್ಲಿ ಪ್ರದೇಶ ಕಾಂಗ್ರೆಸ ಸಮಿತಿ ಸಭೆಯು ನಡೆಯುವುದು.

ವಿಧಾನ ಸಭೆಯಲ್ಲಿ ಇಂದು ಬಿರುಸಿನ ಮಾತು

ಮುಖ್ಯ ಮಂತ್ರಿಯವರ ಮೇಲೆ ಪಕ್ಷದ್ರೋಹದ ಆಕ್ಷೇಪಣೆ

(ಸ್ವಂ. ಸು. ಫೋ.) ಬೆಂಗಳೂರು ೧೯

ಈ ದಿನ ವಿಧಾನ ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿಯನ್ನು ಪರಿಶೀಲಿಸುತ್ತಿದ್ದ ಸಮಯದಲ್ಲಿ ಶ್ರೀ ನಾಗಮಂಗಲ ಶಿವನಂಜೇಗೌಡರು ಮುಖ್ಯ ಮಂತ್ರಿ ಹನುಮಂತಯ್ಯನವರ ವರ್ತನೆ ಬಗ್ಗೆ ತೀವ್ರವಾಗಿ ಆಕ್ಷೇಪಣೆ ಮಾಡಿ ಬಿರುನುಡಿಗಳನ್ನಾಡಿದರು. ಶ್ರೀ ಎ. ಭೀಮಪ್ಪ ನಾಯಕರು ಅವರನ್ನು ಮ್ಯಾಡ್ ಮ್ಯಾನ್ (ಹುಚ್ಚು ಮನುಷ್ಯ) ಎಂದು ಕರೆಯಲು ಸಭೆಯಲ್ಲಿ ೧೦-೧೫ ಜನರು ಒಟ್ಟಿಗೆ ಎದ್ದು ಪ್ರತಿಭಟಿಸಿದರು. ಶ್ರೀ ಶಿವನಂಜೇಗೌಡರು ತಾವು ಆಡಿದ ಮಾತುಗಳು ಬಿರುಸಾಗಿದ್ದುವೆಂದು ಒಪ್ಪಿ, ತಾವು ಕ್ಷಮಾಪಣೆ ಕೇಳುವುದಾಗಿ ನುಡಿದರು. ಸಭಾಧ್ಯಕ್ಷರು ಮಧ್ಯೆ ಪ್ರವೇಶಿಸಿ ಸದಸ್ಯರು ಸಭೆಯ ಗೌರವವನ್ನು ಕಾಪಾಡಬೇಕೆಂದು ಪ್ರಾರ್ಥಿಸಿದರು.

ಶ್ರೀ ಗಳಾದ ಬಿ. ಶಿವಪ್ಪ, ಎಸ್. ಗೋಪಾಲಗೌಡ ಮತ್ತು ವೈ. ಎಂ. ಚಂದ್ರಶೇಖರಯ್ಯನವರು ವಿರೋಧಿಸುವ ಸ್ವಾಗತಿಸಿ ಭಾಷಣ ಮಾಡಿದರು. ಶ್ರೀ ಪಿ. ಎಚ್. ದೊರೆಸ್ವಾಮಿಗೌಡರು ಕರ್ನಾಟಕ ಪ್ರಾಂತ ರಚನೆಯನ್ನು ವಿರೋಧಿಸಿದರು.

ಮಹಾರಾಷ್ಟ್ರದಲ್ಲಿ ಬೊಂಬಾಯಿ ನಗರ ಸೇರಲು ಒತ್ತಾಯ

ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ, ಬೊಂಬಾಯಿ ನಗರವನ್ನು ಪ್ರತ್ಯೇಕ ಪ್ರಾಂತವಾಗಿ ಏರ್ಪಡಿಸುವ ಸಲಹೆಯನ್ನು ಪರಿಶೀಲಿಸಿ ಸಮಿತಿಯು ತೀವ್ರ ವಿಷಾದ ಸೂಚಿಸಿತ್ತಲ್ಲದೆ, ಮಹಾರಾಷ್ಟ್ರದಿಂದ ಬೊಂಬಾಯಿ ನಗರವನ್ನು ಪ್ರತ್ಯೇಕ ಮಾಡುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವೆಂದೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಈ ವಿಷಯವನ್ನು ಪುನಃ ಪರಿಶೀಲಿಸಬೇಕೆಂದೂ ಒತ್ತಾಯ ಮಾಡಿರುತ್ತದೆ.

ಸಹಕಾರ ಪದ್ಧತಿಯು ಭಾರತೀಯರಲ್ಲಿ ರಕ್ತಗತವಾಗಿದೆ

ಜನತಾ ಅರ್ಬನ್ ಬ್ಯಾಂಕಿನ ರಜತೋತ್ಸವದಲ್ಲಿ ಮಹಾರಾಜರ ಭಾಷಣ

(ಸ್ವಂ. ಸು. ಫೋ.) ಬೆಂಗಳೂರು ೧೯

ಜನತಾ ಅರ್ಬನ್ ಬ್ಯಾಂಕಿನ ರಜತೋತ್ಸವದಲ್ಲಿ ಈ ದಿನ ಶ್ರೀಮನ್ಮಹಾರಾಜರು ಭಾಷಣ ಮಾಡಿ, ಸಹಕಾರ ಪದ್ಧತಿಯು ಭಾರತೀಯರ ಜೀವನದಲ್ಲಿ ರಕ್ತಗತವಾಗಿ ಬಂದಿರುವುದೆಂದೂ, ಭಾರತದ ಸಂಸ್ಕೃತಿಯು ಅದನ್ನು ಪೋಷಿಸುವುದೆಂದೂ ತಿಳಿಸಿದರು. ಸ್ಪರ್ಧೆಗಿಂತಲೂ ಸಹಕಾರವು ಉತ್ತಮವೆಂದು ಅಭಿಪ್ರಾಯಪಟ್ಟರು. ಸ್ಪರ್ಧೆಯಿಂದ ಸ್ವಲ್ಪಮಟ್ಟಿನ ಪ್ರಯೋಜನವಾದರೂ ಒಟ್ಟಿನಲ್ಲಿ ಸಹಕಾರವೇ ಹೆಚ್ಚು ಪರಿಣಾಮಕಾರಿಯೆಂದು ತಿಳಿಸಿದರು. ಬ್ಯಾಂಕು ೨೫ ವರ್ಷಗಳ ಕಾಲ ನಡೆಸಿರುವ ಸೇವೆಯನ್ನು ಅವರು ಪ್ರಶಂಸಿಸಿದರು. ಜನರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು.

ಚತುರ್ರಾಷ್ಟ್ರ ಸಮ್ಮೇಳನದ ವಿಫಲತೆಯಿಂದ ದುಷ್ಪರಿಣಾಮ?

ಜಿನೀವಾ ನಗರದಲ್ಲಿ ಚತುರ್ರಾಷ್ಟ್ರ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಯಾವ ವಿಷಯವಾಗಿಯೂ ಪಶ್ಚಿಮ ರಾಷ್ಟ್ರಗಳಿಗೂ ರಷ್ಯಕ್ಕೂ ಒಡಂಬಡಿಕೆಯಾಗದೆ ಮಾತುಕತೆಗಳು ವಿಫಲಗೊಂಡ ಬಗ್ಗೆ ಇವರಿಂದ ಹಿಂದಿನಂತೆಯೇ ರಾಷ್ಟ್ರಗಳ ನಡುವೆ "ಶೀತ ಯುದ್ಧವು" ಪುನಃ ಆರಂಭವಾಗಬಹುದೆಂದು ಮೆರಿಕದ ಅಧಿಕಾರಿಗಳು ನಿರೀಕ್ಷಿಸಿರುತ್ತಾರೆ. ಬಹಳ ಉತ್ಸಾಹದಿಂದ ಸಂಬಂಧಗಳಲ್ಲೂ ಪರಸ್ಪರ ಸೌಹಾರ್ದಕ್ಕಾಗಿ ನಡೆಸಿದ ಪ್ರಯತ್ನವನ್ನು ರಷ್ಯವೆ ಮಣ್ಣುಗೂಡಿಸಿರುವುದಾಗಿ ಅಮೆರಿಕದ ಉನ್ನತಾಧಿಕಾರಿಗಳು ಭಾವಿಸುವರು

೩೫ ಲಕ್ಷ ರೂ. ಕಳ್ಳ ಸಾಗಾಣಿಕೆ ಮಾಲು ಪತ್ತೆ

ಚಿನ್ನ, ಆಹಾರ ಧಾನ್ಯ ಮುಂತಾದ ೩೫ ಲಕ್ಷ ರೂ ಬೆಲೆಯ ಸಾಮಾನುಗಳನ್ನು ಎರಡು ಅರಬ್ ಹಡಗುಗಳಲ್ಲಿ ಕಳ್ಳ ರೀತಿಯಲ್ಲಿ ಸಾಗಣೆ ಮಾಡುತ್ತಿದ್ದುದನ್ನು ಭಾರತದ ಸುಂಕದ ಅಧಿಕಾರಿಗಳು ವೆಂಗೂರಿಯಾ ತೀರದ ಬಳಿ ಪತ್ತೆ ಮಾಡಿರುತ್ತಾರೆ. ಅಪ್ಘಾನಿಸ್ಥಾನ ಮತ್ತು ಬೇರೆ ದೇಶಗಳಿಂದ ಬಂದುವೆಂದೂ, ಭಾರತದ ತೀರದ ಎತ್ತಿ ಕಳ್ಳನೊಳಗೆ ಗೋವಾ ಅಭಿಮುಖವಾಗಿ ಹೋಗುತ್ತಿದ್ದುವೆಂದೂ ಹೇಳಲಾಗಿದೆ. ೨೨ ಮಂದಿ ಅರಬ್ಬರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ

ಢಾಕಾದಲ್ಲಿ ಆಹಾರ ಪಡಿತರ

ಪೂರ್ವ ಬಂಗಾಳದ ರಾಜಧಾನಿ ಢಾಕಾ ಮತ್ತು ನಾರಾಯಣಗಂಜ್ ನಗರಗಳಲ್ಲಿ ಆಹಾರದ ಬೆಲೆಯು ವಿಪರೀತವಾಗಿ, ಅಲ್ಲಿ ಮೊನ್ನೆಯಿಂದ ಪಡಿತರವನ್ನು ಪುನಃ ಜಾರಿಗೆ ತರಲಾಯಿತೆಂದು ವರದಿಯಾಗಿದೆ. ಪತ್ರಿಕೆಗಳ ವರದಿ ಪ್ರಕಾರ ಅಲ್ಲಿ ಮಣಕ್ಕೆ ೪೦ ರೂ ಬೆಲೆಯಾಗಿದೆ

ದೆಹಲಿಗೆ ಬುಲ್ಗಾನಿನ್ ಭೇಟಿ ಬಗ್ಗೆ ರೇಡಿಯೊ ಪುನಃಪ್ರಸಾರ

ಈ ದಿನ, ನಾಳೆ ಮತ್ತು ನಾಡಿದ್ದು ರಾತ್ರಿ ೮॥ ಯಿಂದ ೯ರವರೆಗೆ ನಿತ್ಯವೂ, ದೆಹಲಿಗೆ ರಷ್ಯದ ಪ್ರಧಾನಿ ಮಾ॥ ಬುಲ್ಗಾನಿನ್ನರ ಭೇಟಿ ಕುರಿತು ವಿಶೇಷ ಕಾರ್ಯಕ್ರಮದ ಪುನಃಪ್ರಸಾರವನ್ನು ಬೆಂಗಳೂರು ರೇಡಿಯೋನಿಲಯವು ಏರ್ಪಡಿಸಿರುವರು. ಈ ರಾತ್ರಿ ೮॥ ಗಂಟೆಗೆ ಶ್ರೀಮನ್ನಾರಾಯಣರ ಪತ್ರಿಕಾ ವೈಶಿಷ್ಟ್ಯ ದಿನಾಚರಣೆ ಸಂಬಂಧದಲ್ಲಿ ಮಾಡಿದ ... ಪ್ರಸಾರ ಭಾಷಣವನ್ನು ೯ ಗಂಟೆಗೆ ಮಾಡುವರು.

Graduates' Co-op Society Election

Please Elect No. 22

S. N. SUBBAKRISHNAN

B A, B Com

AS A DIRECTOR

ಇಂಡೋನೇಷ್ಯಕ್ಕೆ ರಾಧಾಕೃಷ್ಣನ್‌ರವರ ಭೇಟಿ

ಭಾರತದ ಉಪಾಧ್ಯಕ್ಷ ಡಾ॥ ರಾಧಾಕೃಷ್ಣನ್‌ರವರು ಇಂಡೊನೇಷ್ಯದ ಉಪಾಧ್ಯಕ್ಷ ಡಾ॥ ಹಟ್ಟಾರವರ ಆಹ್ವಾನವನ್ನು ಮನ್ನಿಸಿ ಅವರ ರಾಷ್ಟ್ರಕ್ಕೆ ಭೇಟಿಯಾಯಲು ಸಮ್ಮತಿಸಿರುವರು. ಅವರ ಭೇಟಿಯ ದಿನವನ್ನು ಮುಂದೆ ಗೊತ್ತುಪಡಿಸಲಾಗುವುದು

ಗೃಹ ಕೈಗಾರಿಕೆ ವಿಧಾನದಲ್ಲಿ ಗಡಿಯಾರದ ತಯಾರಿಕೆ

ತಿರುವಾಂಕೂರಿನಲ್ಲಿ ಸಣ್ಣ ಕೈಗಾರಿಕೆಗಳ ಅಂಗವಾಗಿ ಗಡಿಯಾರಗಳನ್ನು ಗೃಹ ಕೈಗಾರಿಕೆಗಳ ವಿಧಾನದಲ್ಲಿ ತಯಾರಿಸುವುದರಲ್ಲಿ ನಡೆಸಿದ ಪ್ರಯತ್ನವು ಯಶಸ್ವಿಯಾಗಿರುವುದೆಂದು ವರದಿಯಾಗಿದೆ. ಸಂಸ್ಥಾನ ಸರ್ಕಾರದ ಒಬ್ಬ ಉದ್ಯೋಗಿಯು ಈ ಬಗ್ಗೆ ಪ್ರಯೋಗವನ್ನು ನಡೆಸಿರುತ್ತಾರೆ. ಹೊರಗಿನಿಂದ ಆಮದಾದ ಮೇನ್‌ಸ್ಪ್ರಿಂಗ್ ಮತ್ತು ಗಡಿಯಾರದ ಹೊಸ ಭಾಗಗಳು ಬಿಟ್ಟು ಮಿಕ್ಕೆಲ್ಲ ಸಾಮಾನುಗಳನ್ನೂ ಅವರು ಸ್ಥಳೀಯ ಕೈಗಾರಿಕಾ ಶಾಲೆಯಲ್ಲೇ ತಯಾರಿಸಿದ್ದರು

ಹಿಂದಿ ತರಗತಿಗಳು

ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಕಳೆದ ಬುಧವಾರದಿಂದ ಪ್ರವೀಣ ವಿದ್ಯಾಲಯವನ್ನು ನಡೆಸಲಾಗುತ್ತಿದೆ. ಬರುವ ಫೆಬ್ರವರಿ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗೆ ಪ್ರಾಚೀನ ಪದ್ಯ ಮತ್ತು ಕನ್ನಡ ವಿಭಾಗಗಳಿಗೆ ಶಿಕ್ಷಣವನ್ನು ಕೊಡಲಾಗುತ್ತಿದೆ. ಅಪೇಕ್ಷಿಸುವವರು ಕೂಡಲೇ ಸೇರಬೇಕಾಗಿ ಕೋರಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ನರ್ಸರಿ ಸ್ಕೂಲ್ ಅಧ್ಯಾಪಕಿಯರ ಶಿಕ್ಷಣ

ಶ್ರೀ ಜಗದಂಬಾ ಶಿಶು ವಿಹಾರ,

585 ದಿವಾನ್ಸ್ ರೋಡ್, ಮೈಸೂರು

ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯ ಡೈರೆಕ್ಟರವರ ಆಫೀಸ್ ಮೆಮೊ ನಂ ಓ 2 2833-171/55 16 ಮತ್ತು ಪಿ ಬಿ ನಂ 49 ಬೆಂಗಳೂರು ತಾರೀಖು 21-9 1955ರ ಆಜ್ಞಾನುಸಾರವಾಗಿ ಶ್ರೀ ಜಗದಂಬಾ ಶಿಶು ವಿಹಾರದ ಆಶ್ರಯದಲ್ಲಿ ಶಿಶು ವಿಹಾರಗಳ ಅಥವಾ ನರ್ಸರಿ ಸ್ಕೂಲುಗಳ ಉಪಾಧ್ಯಾಯಿನಿಯರ ಶಿಕ್ಷಣ ಕೇಂದ್ರವನ್ನು ತೆರೆಯಲಾಗಿದೆ. ಅಪೇಕ್ಷಿಸುವ ಮಹಿಳೆಯರು ತ್ವರೆಯಾಗಿ ಅರ್ಜಿ ಸಲ್ಲಿಸಬಹುದೆಂದು ತಿಳಿಸಲಾಗಿದೆ

ಡಿ. ಕೃಷ್ಣಮೂರ್ತಿ,

ಡೈರೆಕ್ಟರ್

ಕರ್ನಾಟಕ ಪ್ರಾಂತ ರಚನೆ ಪ್ರಶ್ನೆ

ಉಭಯ ಸಭೆಗಳಲ್ಲೂ ಚರ್ಚೆ

ಬೆಂಗಳೂರು ೧೯

ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಕರ್ನಾಟಕ ಪ್ರಾಂತ ರಚನೆಗೆ ಸಂಬಂಧಪಟ್ಟಂತೆ ಸಂಸ್ಥಾನ ಪುನರ್ವಿಂಗಡಣೆ ಸಮಿತಿ ವರದಿಯ ಶಿಫಾರಸನ್ನು ನೆನ್ನೆಯೂ ಚರ್ಚಿಸಲಾಯಿತು. ಕೆಳಗಿನ ಸಭೆಯಲ್ಲಿ ಕರ್ನಾಟಕದ ಪರವಾಗಿ ಶ್ರೀ ಮಾಧವಾಚಾರ್ಯರೂ, ಮೈಸೂರು ಪರವಾಗಿ ಶ್ರೀ ಪಿ ವೆಂಕಟಪ್ಪ ಮತ್ತು ನರಸಿಂಹರೆಡ್ಡಿಯವರೂ ಭಾಷಣ ಮಾಡಿದರು. ಶ್ರೀ ಪಿ ವೆಂಕಟಪ್ಪನವರು ಮಾತನಾಡಿ, ಎಸ್ ಆರ್ ಸಿ ಯವರು ವಾಸ್ತವಿಕ ವಿಷಯಗಳ ಕಡೆ ಪೂರ್ಣ ಗಮನವಿತ್ತಂತೆ ಕಾಣುವುದಿಲ್ಲವೆಂದು ತಿಳಿಸಿದರು. ಆ ಸಮಿತಿಯವರು ಮೈಸೂರಿಗೆ ಬಂದಿದ್ದಾಗ ಅವರ ಮನಸ್ಸಿಗೆ ಜಿಗುಪ್ಸೆಯುಂಟಾಗುವ ರೀತಿಯಲ್ಲಿ ನಡೆದುಕೊಳ್ಳಲಾಯಿತೆಂದು ಅವರು ಹೇಳಿದರು. ಈ ವರ್ತನೆಯಿಂದ ಬಳ್ಳಾರಿ ಮತ್ತು ಮೈಸೂರುಗಳ ಬಗ್ಗೆ ಅನ್ಯಾಯ ಮಾಡಿದಂತಾಗಿದೆಯೆಂದು ಅವರು ತಿಳಿಸಿದರು

ಶ್ರೀ ಡಿ ಆರ್ ಕರೀಗೌಡರು ಮಾತನಾಡಿ ಮೈಸೂರಿನ ರಕ್ಷಣೆ ಬಗ್ಗೆ ತಾವು ಪ್ರಾಣಾರ್ಪಣ ಮಾಡಲು ಸಿದ್ಧವಿರುವುದಾಗಿ ಘೋಷಿಸಿದಾಗ ಸಭೆಯಲ್ಲಿ ಕರತಾಡನಗಳಾದುವು. ಎಸ್ ಆರ್ ಸಿ ವರದಿಯನ್ನು ಸುಟ್ಟುಹಾಕಬೇಕೆಂದು ಭಾಷಣಕಾರರು ಅಭಿಪ್ರಾಯಪಟ್ಟರು

ಶ್ರೀ ಗಂಗಾಧರ ಆರ್ ಅನಂತರಂ ಸ್ವಗೃಹ ಮಂತ್ರಿ ಹೆಚ್ ಸಿದ್ದವೀರಪ್ಪ ಮತ್ತು ಶ್ರೀಮತಿ ಓ ಶ್ರೀ ಸಿದ್ದಮ್ಮನವರು ಕರ್ನಾಟಕ ಪ್ರಾಂತರಚನೆಯ ವಿಷಯವನ್ನು ಸ್ವಾಗತಿಸಿದರು

ಸಭೆಯು ನಾಳೆ ಮಧ್ಯಾಹ್ನ ೩ರ ನಂತರ ಮುಂದುವರಿಯುವುದು. ಪುನಃ ಸೋಮವಾರ ಕೂಡ ಮೂರು ದಿನಗಳು ಚರ್ಚೆ ನಡೆಯುವುದು

ರಷ್ಯದ ನಾಯಕರಿಗೆ ಬೆಂಗಳೂರಿನ ಗುಲಾಬಿ ಹೂ

ರಷ್ಯದ ನಾಯಕರು ಭಾರತದಲ್ಲಿರುವ ಕಾಲದಲ್ಲಿ ಬೆಂಗಳೂರಿನಿಂದ ಪ್ರತಿ ದಿನ ೧೦೦೦ ಗುಲಾಬಿ ಮತ್ತು ಇತರ ಹೂವುಗಳನ್ನು ವಿಮಾನದಲ್ಲಿ ರವಾನಿಸಲು ಏರ್ಪಾಡು ಮಾಡಲಾಗಿದೆ

C T C PUBLICATIONS

S S L C ಪರೀಕ್ಷೆಯ ಪ್ರಶ್ನಪತ್ರಿಕೆಗಳಿಂದ ಆರಿಸಿದ

ಬ್ರಿಟಿಷರ ಚರಿತ್ರೆಯ ಪ್ರಶ್ನೋತ್ತರಗಳು

ಇದೀಗ ಪ್ರಕಟವಾಗಿದೆ] [ಬೆಲೆ 0 14 0

ಪೋಸ್ಟ್ ಮೂಲಕ 1 0 0, ಎಂ ಒ ಕಳುಹಿಸುವುದು

★

Other Useful Guides

Guide to Eng Text

ಕನ್ನಡ ಗದ್ಯ, ಪದ್ಯ ಮತ್ತು ವ್ಯಾಕರಣದ ಪ್ರಶ್ನೋತ್ತರಗಳು

"ಅಧುನಿಕ ಮಾನವನ ಹೋರಾಟ"ದ ಪ್ರಶ್ನೋತ್ತರ

Ele Mathematics (Qns & Ans)

, ಕನ್ನಡದಲ್ಲಿ

A Guide to English Grammar

✱

Please Enquire Your Book-Seller or

The C T C, V V Market, Mysore

S S L C Classes in Full Swing

(*11 to 4 30 P M and 6 to 9 P M*)

Edited, Printed and Published by A R Nagarajan at Sadhvi Press, D Subbiah Road, Mysore

ಭಾರತದ ದ್ವಿತೀಯ ಯೋಜನಾ ಸಾಧನೆಗೆ ರಷ್ಯದ ಸಹಾಯ

ಭಾರತದ ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ರಷ್ಯವು ಯಂತ್ರಗಳು ಮತ್ತು ಭಾರಿ ಸಾಧನಗಳನ್ನು ಒದಗಿಸಿ ಸಹಾಯ ಮಾಡಲಿರುವುದಾಗಿ ಗೊತ್ತಾಗಿದೆ. ಭಾರತದಲ್ಲಿ ... ಸಾಯದ ಅಭಿವೃದ್ಧಿಗಾಗಿ ಯಂತ್ರಗಳನ್ನು ಒದಗಿಸುವ ರಷ್ಯವು ಎಷ್ಟು ಸಹಾಯ ... ಲ್ಲುದೆಂಬುದನ್ನು ಮುಂದೆ ತಿಳಿಯಬಹುದಾಗಿದೆ. ಭಾರತದ ಚಹ ಮತ್ತು ಸೆಣಬಿನ ಬದಲು ರಷ್ಯ ಭಾರಿ ಯಂತ್ರ ಸಾಮಗ್ರಿಗಳ ವಿನಿಮಯ ... ಸ್ತ ವಿರುವುದೆಂದು ಹೇಳಲಾಗಿದೆ

ಅಮೆರಿಕಕ್ಕೆ ಈಜಿಪ್ಟಿನ ಎಚ್ಚರಿಕೆ

ಇಸ್ರೇಲಿಗೆ ಅಮೆರಿಕವು ಶಸ್ತ್ರಾಸ್ತ್ರಗಳನ್ನು ಒದಗಿಸಿದರೆ ಈಜಿಪ್ಟು ಹೆಚ್ಚುಹೆಚ್ಚಾಗಿ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳಬೇಕಾಗುವುದೆಂದು ಈಜಿಪ್ಟು ಮತ್ತು ಸಿರಿಯಾಗಳು ಅಮೆರಿಕಕ್ಕೆ ಎಚ್ಚರಿಕೆಯಿತ್ತಿವೆ

ಸ್ವೀಕಾರ

ಬೆಂಗಳೂರಿನಲ್ಲಿ ಪ್ರಕಟವಾಗುತ್ತಿರುವ ಸಂ... ತಿ ಎಂಬ ಕನ್ನಡ ಮಾಸ ಪತ್ರಿಕೆಯ ನವೆಂಬರ್ ತಿಂಗಳ ಸಂಚಿಕೆಯ ಪ್ರತಿಯೊಂದನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ

ಮೈಸೂರು ಪೇಟೆ ಧಾರಣೆ

	ರೂ	ಆಂದ	ರೂ	...
ಕಡಲೆಕಾಯಿ	೯	೪ ೦	೧೪	[illegible]
ಎಳ್ಳು	೫೦	೪ ೨	೫೦	[illegible]
ಹರಳುಬೀಜ	೨೫	೦ ೦		
ಮೆಣಸು	೩೬	೨ ೦	೩೪	[illegible]
ಹೆಸರು	೨೬	೨ ೦	೩೭	[illegible]
ಉದ್ದು	೫೪	೬ ೦		
ಹಲಸಂದೆ	೩೪	೨ ೦	೪೬	[illegible]
ಧನಿಯ	೩೫	೬ ೦		
ತೊಗರಿ	೨೭	೪ ೦	೩೩	[illegible]
ಸೆಣಬು	೧೪	೪ ೦	೨೫	[illegible]
ಜೋಳ	೨	೧೪ ೦	೨	[illegible]
ನೆಲಗಡಲೆ	೫	೧೦ ೦	೧೪	[illegible]
ಬೆಲ್ಲ	೭	೧೨ ೦		
ತೆಂಗಿನಕಾಯಿ ೧,೦೦೦	೧೩೪	೦ ೦	೧೮೫	[illegible]

VIDYA TUTORIAL COLLEGE

(*Dalvoy High School Buildings*)

MYSORE

The Best Institute in Mysore for Efficient Coaching

Classes Commenced in Full swing

INTER Eng, Kan, Sans, Hindi, P C M

C B Z, H E L, H E G

P E M, Commerce, etc

B A, B Sc - Eng, Kan, Sans, Hindi

P C M, C B Z, H E G, H E L

LADIES ALSO ADMITTED

JOIN AT ONCE

Enquiries 9 to 10 A M

5.30 to 8.30 P M

SREE GANESH TALKIES

GALA RELEASE- On 19 11 55

Daily 3 Shows

ABBOT & COSTELLO MEET THE KEYSTONE KOPS

The most hilarious Comedy hit of All Times

UNIVERSITY OF MYSORE

NOTIFICATION

It is hereby notified for the information of candidates who appeared for the marginally noted examinations of September 1955 that the Marks cards will be sent to the Heads of Colleges concerned from which the candidates appeared for the examinations

I A
I Sc
B A
B Sc
B Sc (Agriculture)
B Sc (Textiles)
B A Honours Preliminary
B Sc Honours Preliminary
I Com
B Com
L M P
B L
B E

Candidates may obtain their marks card from the Heads of the Colleges concerned on or after Friday the 25th November 1955

By Order,

F J NORONHA,

Registrar

ಅಪ್ಪಟ ಹಾಲು! ಇಂದೇ ಕೊಳ್ಳಿ!

ಹಾಲು ಕೊಳ್ಳುವವರಿಗೆ ಸುಸಮಯ!

ನಮ್ಮಲ್ಲಿ ಗಟ್ಟಿಯಾದ ಹಾಲನ್ನು ಸುಲಭ ಬೆಲೆಗೆ ನಿಮ್ಮ ಮನೆ ಬಾಗಿಲಿಗೆ ಸರಬರಾಜು ಮಾಡುತ್ತೇವೆ

ಹೆಚ್ಚಿನ ವಿವರಗಳಿಗೆ ... ವಿಳಾಸದಲ್ಲಿ ವಿಚಾರಿಸಿ

ಕುರುವೆಕೆರೆ ಗಾರ್ಡನ್ಸ್

ಫೋನ್ ನಂ 393 ಚಾಮುಂಡಿಪುರಂ ಮೈಸೂರು

ಟೆಲಿಫೋನ್ ನಂ 792

ಸಂಸ್ಥಾನದ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಒಂದಿಪ ಪತ್ರಿಕೆ ೧ ಆಣೆ

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ. ೧೪] SADHVI · SUNDAY 20-11-1955 ಮೈಸೂರು ಭಾನುವಾರ ೨೦-೧೧-೧೯೫೫ [ಸಂಚಿಕೆ : ೯೬

ಕರ್ನಾಟಕ ಪ್ರಾಂತ ರಚನೆಗೆ ಹೈಕಮಾಂಡಿನ ನಿರ್ಧಾರ

ಎರಡು ಕರ್ನಾಟಕ ಪ್ರಾಂತ್ಯಗಳ ವಾದ ವ್ಯರ್ಥ

ಹೈದರಾಬಾದು ಮುಖ್ಯ ಮಂತ್ರಿಯವರ ಅಭಿಪ್ರಾಯ

ಮೈಸೂರು ೨೦

ನಿನ್ನೆ ನಗರಕ್ಕೆ ಆಗಮಿಸಿದ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ ರಾಮಕೃಷ್ಣರಾಯರು ಎರಡು ಕರ್ನಾಟಕ ಪ್ರಾಂತಗಳ ರಚನೆಗಾಗಿ ಚಳುವಳಿ ಮಾಡುವುದು ಸರಿಯಲ್ಲವೆಂದು ಅಭಿಪ್ರಾಯ ಸೂಚಿಸಿರುತ್ತಾರೆ ಇದರ ಪರಿಣಾಮ ... ಆಂಧ್ರ ... ಮುಂತಾದ ಬೇಡಿಕೆಗಳು ಉಗಲಿಡುವುದಾಗಿ ಅವರು ನುಡಿದರು

ಬಳ್ಳಾರಿಯ ಸಣ್ಣ ಪ್ರದೇಶವನ್ನು ಮೈಸೂರಿನಲ್ಲಿ ಸೇರಿಸಿಕೊಳ್ಳಲು ಹೋರಾಡುವುದು ಸರಿಯಲ್ಲವೆಂದೂ ಅದಕ್ಕೆ ಪ್ರತಿಯಾಗಿ ಆಂಧ್ರರು ಕೋಲಾರ ಜಿಲ್ಲೆಗಾಗಿ ಚಳುವಳಿ ನಡೆಸುವರೆಂದೂ ಅವರು ತಿಳಿಸಿದರು ತುಂಗಭದ್ರಾ ಪ್ರದೇಶದಲ್ಲಿ ಮೂರನೇ ಎರಡು ಭಾಗದಷ್ಟು ನೀರಾವರಿ ಪ್ರದೇಶವು ಕರ್ನಾಟಕದಲ್ಲಿದ್ದು, ಉಳಿದುದು ಆಂಧ್ರದಲ್ಲಿದ್ದರೂ ಸಹ ತುಂಗಭದ್ರಾ ಯೋಜನೆಯ ... ಪ್ರದೇಶವು ಆಂಧ್ರದಲ್ಲಿದ್ದರೆ ತೊಂದರೆಯೇನೂ ಆಗದೆಂದೂ, ಮೇಲಾಗಿ ಸ್ವತಂತ್ರ ... ಸಮಿತಿಯು ಅಲ್ಲಿನ ಆಡಳಿತವನ್ನು ನಿರ್ವಹಿಸುತ್ತಿರುವುದಾಗಿಯೂ ಮುಖ್ಯ ಮಂತ್ರಿಗಳು ನುಡಿದರು

ರಾಜಪ್ರಮುಖರ ರದ್ದಿಯಾತಿ ವಿಷಯವನ್ನು ಪ್ರಸ್ತಾಪಿಸಿ, ಇದು ಅಖಿಲ ಭಾರತದ ಪ್ರಶ್ನೆಯೆಂದೂ ಹೈದರಾಬಾದಿನ ನಿಜಾಮರು ಅಥವಾ ಮೈಸೂರು ರಾಜಪ್ರಮುಖರ ಬಗ್ಗೆ ಪ್ರತ್ಯೇಕ ನಿರ್ಧಾರ ಸಾಧ್ಯವಿಲ್ಲವೆಂದೂ ಅಭಿಪ್ರಾಯಪಟ್ಟರು

ಗ್ರಾಜುಯೇಟ್ಸ್ ಸೊಸೈಟಿ ಅಧಿಕಾರ ವರ್ಗ

ನಗರದ ಗ್ರಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿಯ ವಾರ್ಷಿಕ ಸಕಲ ಸದಸ್ಯರ ಸಭೆಯು ಈ ದಿನ ಬೆಳಿಗ್ಗೆ ನಡೆದು, ಶ್ರೀಗಳಾದ ... ಧನಂಜಯ್, ಎಸ್ ಪಿ ರಂಗನಾಥಾಚಾರ್, ಕೆ. ವಿ ದೊರೆಸ್ವಾಮಿ, ಎಂ. ಎಸ್ ರಾಮಪ್ರಸಾದ್, ಎಂ ಎ. ದೊರೆಸ್ವಾಮಿ ಅಯ್ಯಂಗಾರ್, ವಿ ಕೆ ದೊರೆಸ್ವಾಮಿ, ಕೆ ಕೃಷ್ಣಸ್ವಾಮಿ ಅಯ್ಯಂಗಾರ್, ಎಂ ಕೆ. ರಾಜಗೋಪಾಲ್, ಸಿ ನರಸಿಂಗರಾವ್, ಹೆಚ್ ಎಸ್ ...ರಾವ್, ಎಸ್ ಎನ್ ಸುಬ್ಬಕೃಷ್ಣರ ಮತ್ತು ... ಎನ್ ನಾಗರಾಜ್‌ರವರು ಡೈರೆಕ್ಟರುಗಳಾಗಿ ಚುನಾಯಿತರಾದರು ಶ್ರೀ ಎಂ. ಎ ದೊರೆಸ್ವಾಮಿ ಅಯ್ಯಂಗಾರ್ಯರು ಅಧ್ಯಕ್ಷರಾಗಿಯೂ, ಕೆ ವಿ ದೊರೆಸ್ವಾಮಿಯವರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು ... ದ ಎಸ್ ಧನರಾಜ್ ಮತ್ತು ಎಸ್ ರಂಗನಾಥಾಚಾರ್‌ರವರು ಖಜಾಂಚಿಗಳಾಗಿ ಚುನಾಯಿತರಾದರು

ಗಾಂಧಿಜಿ ಸಮಾಧಿಗೆ ಗೌರವ

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ನಾಯಕ ಕ್ರುಶ್ಚೆವರು ಇ... ದೆಹಲಿಯಲ್ಲಿ ರಾಜಘಾಟಿನಲ್ಲಿ ಗಾಂಧಿಜಿಯ ಸಮಾಧಿಗೆ ಪುಷ್ಪ ಮಾಲಿಕೆಯನ್ನರ್ಪಿಸಿದರು

ಸಂಯುಕ್ತ ಕರ್ನಾಟಕದ ರಚನೆ

ಮೈಸೂರು ರಾಜಪ್ರಮುಖರ ಒಪ್ಪಿಗೆ ?

ಬೆಂಗಳೂರು ೨೦

ನಿನ್ನೆ ಇಲ್ಲಿಯ ಶಾಸನ ಸಭೆಯಲ್ಲಿ ಶ್ರೀ ವೈ ಧರ್ಮಪ್ಪನವರು ಸಂಸ್ಥಾನ ಪುನಾರಚನಾ ಸಮಿತಿ ವರದಿ ಬಗ್ಗೆ ಮಾತನಾಡುತ್ತಾ ಸಂಯುಕ್ತ ಕರ್ನಾಟಕ ರಚನೆಯನ್ನು ಮೈಸೂರಿನ ರಾಜಪ್ರಮುಖರು ಅನುಮೋದಿಸಿರುವರೆಂದು ತಿಳಿಸಿದರು ದೆಹಲಿಯಿಂದ ತಮಗೆ ಬಂದ ಪತ್ರ ಮಾಹಿತಿ ಪ್ರಕಾರ, ಪ್ರಮುಖರು ತಮ್ಮ ಅಭಿಪ್ರಾಯವನ್ನು ಕಾಂಗ್ರೆಸ್ ಅಧ್ಯಕ್ಷ ಡೇಬರ್‌ರವರು ಕಳೆದ ತಿಂಗಳು ಮೈಸೂರಿಗೆ ಬಂದಿದ್ದಾಗ ತಿಳಿಸಿದರೆಂದು ಶ್ರೀ ಧರ್ಮಪ್ಪನವರು ಹೇಳಿ ಕರ್ನಾಟಕ ಪ್ರಾಂತದ ಬಗ್ಗೆ ಸಂಸ್ಥಾನದಲ್ಲಿ ಉಂಟಾಗಿರುವ ಬಿಸಿ ವಾತಾವರಣವನ್ನು ನಿವಾರಿಸಲು ಶ್ರೀಮನ್ಮಹಾರಾಜರು ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸಬೇಕೆಂದು ಕೋರಿದರು

೨೬ನೇ ತಾರೀಖು ಬೆಂಗಳೂರಿಗೆ ಬುಲ್ಗಾನಿನ್ನರ ಭೇಟಿ

ರಷ್ಯದ ನಾಯಕರುಗಳಾದ ಬುಲ್ಗಾನಿನ್, ಕ್ರುಶ್ಚೆವ್ ಮುಂತಾದವರು ಇದೆ ೨೬ನೇ ತಾರೀಖು ಬೆಂಗಳೂರಿಗೆ ಆಗಮಿಸಿ ಹಿಂದೂಸ್ತಾನ ಟೆಲಿಫೋನ್ ಕಾರ್ಖಾನೆ, ಟಾಟಾ ವಿಜ್ಞಾನ ಮಂದಿರ ಸಿ ವಿ ರಾಮನ್‌ರವರ ಇನ್ಸ್ಟಿಟ್ಯೂಟ್, ಯಂತ್ರ ಸಾಮಗ್ರಿ ಕಾರ್ಖಾನೆಗಳಿಗೆ ಭೇಟಿ ಕೊಡುವರು ಸಂಜೆ ೬ ಗಂಟೆಗೆ ಪಲ್ಲಿನ ಕಾರ್ಪೊರೇಷನ್ನಿನವರು ಅವರಿಗೆ ಮಾನಪತ್ರವನ್ನು ಅರ್ಪಿಸುವರು ಮಾರನೇ ಬೆಳಿಗ್ಗೆ ಕೊಯಮತ್ತೂರಿಗೆ ತೆರಳುವರು

ಮಂಡ್ಯದಲ್ಲಿ ಎಸ್. ಚನ್ನಯ್ಯನವರ ಬಗ್ಗೆ ವಿರೋಧ ಪ್ರದರ್ಶನ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ನಿನ್ನೆ ಮಂಡ್ಯಕ್ಕೆ ತೆರಳಿದ್ದಾಗ ಅಲ್ಲಿ ೪೦೦-೫೦೦ ಮಂದಿ ವಿದ್ಯಾರ್ಥಿಗಳೂ, ರೈತರೂ ವಿರೋಧ ಪ್ರದರ್ಶನ ನಡೆಸಿ ದಿಕ್ಕಾರಗಳನ್ನು ಕೂಗಿದರು ಅದೇ ಸಮಯದಲ್ಲಿ ಮೈಸೂರಿಗೆ ಬರುತ್ತಿದ್ದ ಪಿ ಜಿ ಪಿ ಯವರು ಪೋಲೀಸರಿಗೆ ಉದ್ರೇಕದ ಬಗ್ಗೆ ಸೂಚನೆಯಿತ್ತರು ಇಂಟರ್ ಕಾಲೇಜಿನ ವಿದ್ಯಾರ್ಥಿಗಳು ನಿನ್ನೆ ತರಗತಿಗಳನ್ನು ಬಹಿಷ್ಕರಿಸಿದರು ಪ್ರದರ್ಶನದ ವಿಷಯವನ್ನು ಪ್ರಸ್ತಾಪಿಸಿ, ಶ್ರೀ ಎಸ್ ಚನ್ನಯ್ಯನವರು ಪ್ರಜಾಪ್ರಭುತ್ವದಲ್ಲಿ ಇಂತಹವುಗಳಿಗೆ ಅವಕಾಶವಿರುವುದಾಗಿ ಹೇಳಿದರು

ಕಾಂಗ್ರೆಸ್ ಹೈಕಮಾಂಡಿಗೆ ೬೬ ಶಾಸನಸಭಾ ಸದಸ್ಯರ ಪ್ರತಿಭಟನೆ

ಕರ್ನಾಟಕ ಪ್ರಾಂತದ ರಚನೆಯಾಗಬೇಕೆಂದು ಕಾಂಗ್ರೆಸ್ಸಿನ ಉನ್ನತ ಮಟ್ಟದ ಉಪ ಸಮಿತಿಯು ಮಾಡಿರುವ ನಿರ್ಧಾರವನ್ನು ಪ್ರತಿಭಟಿಸಿ ನಿನ್ನೆ ಶಾಸನ ಸಭೆಯ ೬೬ ಜನ ಮೈಸೂರು ವಿಧಾನ ಸದಸ್ಯರು ತಂತಿ ಕಳುಹಿಸಿ ತಮ್ಮ ಭಾಷಣ ಸ್ವಾತಂತ್ರ್ಯಕ್ಕೆ ನಿರ್ಬಂಧ ಹಾಕಿರುವುದರ ಬಗ್ಗೆ ಹೈಕಮಾಂಡು ತನ್ನ ನಿರ್ಧಾರವನ್ನು ಬದಲಾಯಿಸುವಂತೆ ಕೋರಿರುತ್ತಾರೆ

ಕರ್ನಾಟಕದ ವಿರುದ್ಧ ಓಟು ಕೊಡಕೂಡದು

ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಢೇಬರರ ಸೂಚನೆ

ಬೆಂಗಳೂರು ೨೦

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ನಿನ್ನೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರಿಗೆ ತಂತಿಯನ್ನು ಕಳುಹಿಸಿ, ಹೈಕಮಾಂಡಿನ ಹೊಸ ನಿರ್ಧಾರವನ್ನು ನುಡಿದು, ಕರ್ನಾಟಕ ಪ್ರಾಂತರಚನೆಯ ವಿರುದ್ಧವಾಗಿ ಶಾಸನ ಸಭೆಯಲ್ಲಿರುವ ಯಾವ ಸದಸ್ಯನೂ ಓಟು ಕೊಡಕೂಡದೆಂದು ತಿಳಿಸಿರುವುದಾಗಿ ಗೊತ್ತಾಗಿದೆ ಶಾಸನ ಸಭೆಯಲ್ಲಿ ಕರ್ನಾಟಕ ರಚನೆಯನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಮಾತನಾಡುತ್ತಿರುವುದರ ಬಗ್ಗೆ ವಿಚಾರಿಸಿ ತಾವಿಂದ ಪ್ರದೇಶ ಕಾಂಗ್ರೆಸ್ ಸಮಿತಿ ಮತ್ತು ಶಾಸನ ಸಭೆಯು ತಮ್ಮ ಅಭಿಪ್ರಾಯಗಳನ್ನು ಸೂಚಿಸುವ ಮುಂಚೆಯೇ ಹೈಕಮಾಂಡಿನವರು ಅಭಿಪ್ರಾಯ ಸೂಚಿಸಲು ಎಡೆಯಾಯಿತೆಂದು ತಿಳಿಸುತ್ತಾರೆ

ಭಾರತದಲ್ಲಿ ವ್ಯವಸಾಯದ ಅಭಿವೃದ್ಧಿಗೆ ಅಣುಶಕ್ತಿ

ಭಾರತದಲ್ಲಿ ವ್ಯವಸಾಯಾಭಿವೃದ್ಧಿಗೆ ಅಣು ಶಕ್ತಿಯನ್ನು ಉಪಯೋಗಿಸುವ ಸಾಧ್ಯಾಸಾಧ್ಯತೆ ಬಗ್ಗೆ ವಿಶ್ವ ಸಂಸ್ಥೆಯ ಆಹಾರ ಸಮಿತಿಯವರು ಶೀಘ್ರದಲ್ಲೇ ತನಿಖೆ ನಡೆಸಲಿರುವರು ಅದಕ್ಕಾಗಿ ೨ ಲಕ್ಷ ಡಾಲರ್ ಹಣವನ್ನು ತೆಗೆದಿಡಲಾಗಿದೆ

ಗೋವಾ ಕೋರ್ಟಿನಲ್ಲಿ ಲೋಕ ಸಭಾ ಸದಸ್ಯರಿಗೆ ೧೦ ವರ್ಷ ಸಜಾ

ಪೋರ್ಚುಗೀಸ್ ರಾಷ್ಟ್ರದ ಸಾರ್ವಭೌಮತ್ವದ ವಿರೋಧವಾಗಿ ನಡೆದ ಅಪರಾಧಕ್ಕಾಗಿ ಲೋಕ ಸಭಾ ಸದಸ್ಯರಾದ ತ್ರಿದೀಬ ಚೌಧುರಿಯವರಿಗೆ ಗೋವಾ ಮಿಲಿಟರಿ ನ್ಯಾಯಮಂಡಲವು ೧೦ ವರ್ಷ ಕಠಿಣ ಸಜಾ, ೧೨॥ ಸಾವಿರ ರೂ ದಂಡವನ್ನು ವಿಧಿಸಿ, ಸಜಾ ಅವಧಿಯು ಮುಗಿದನಂತರ ಅವರನ್ನು ಗೋವಾದಿಂದ ಹೊರಕ್ಕೆ ಅಟ್ಟಬೇಕೆಂದು ಸೂಚಿಸಿರುತ್ತದೆ ಗೋವಾದೊಳಗೆ ಕಳೆದ ಜುಲೈ ೯ನೇ ತಾರೀಖು ಅವರು ಪ್ರವೇಶಿಸಿದಾಗ ಅವರನ್ನು ಬಂಧಿಸಲಾಗಿತ್ತು

ಕಾಂಗ್ರೆಸ್ ಹೈಕಮಾಂಡಿನ ಸೂಚನೆ ಬಗ್ಗೆ ಅಸಮಾಧಾನ

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ೨೬ಕ್ಕೆ

ಸ್ವಂ. ವ. ಫೋನ್] ಬೆಂಗಳೂರು ೨೦

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನಿನ್ನೆ ಮಧ್ಯಾಹ್ನ ಮತ್ತು ಇಂದು ಬೆಳಿಗ್ಗೆ ಸೇರಿತ್ತು ಅಧ್ಯಕ್ಷ ಢೇಬರ್‌ರವರು ಕೊಟ್ಟ ಸೂಚನೆಗಳ ಬಗ್ಗೆ ಸಭೆಯಲ್ಲಿ ಅಸಮಾಧಾನವುಂಟಾಗಿದೆಯೆಂದು ಗೊತ್ತಾಗಿದೆ ಸಮಿತಿಯು ಯಾವ ನಿರ್ಧಾರಕ್ಕೂ ಬರಲಿಲ್ಲ ೨೬ನೇ ತಾರೀಖಿಗೆ ಸಭೆಯನ್ನು ಮುಂದುವರಿಸಲಾಗಿದೆ ಮಾರನೆ ದಿನ ಎಂ ಪಿ.ಸಿ.ಸಿ ಸಭೆಯು ಸೇರುವುದು

ಸಂಯುಕ್ತ ಕರ್ನಾಟಕ ಪ್ರಾಂತ ರಚನೆಗೆ ನಿರ್ಧಾರ

ಕಾಂಗ್ರೆಸ್ ಹೈಕಮಾಂಡಿನ ಉನ್ನತ ಸಮಿತಿಯ ಪ್ರಕಟಣೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ರಚಿಸಿದ್ದ ಉನ್ನತ ಮಟ್ಟದ ನಾಲ್ವರ ಸಮಿತಿಯವರು ಮೈಸೂರು ಪ್ರಜೆಗಳ ಮತ್ತು ಒಟ್ಟಿನಲ್ಲಿ ಇಡೀ ನಾಡಿನ ಹಿತದೃಷ್ಟಿಯಿಂದ ಮೈಸೂರು ಸಂಸ್ಥಾನ ವನ್ನೊಳಗೊಂಡ ಕರ್ನಾಟಕ ಪ್ರಾಂತದ ರಚನೆಯನ್ನು ಅನುಮೋದಿಸಿರುತ್ತಾರೆ ಉನ್ನತ ಸಮಿತಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಢೇಬರ್, ಪ್ರಧಾನಿ ನೆಹರೂ, ಮೌಲಾನಾ ಆಜಾದ್ ಮತ್ತು ಪಂಡಿತ ಗೋವಿಂದ ವಲ್ಲಭ ಪಂತ್‌ರವರು ಇರುವರು ಮೈಸೂರು ಸಂಸ್ಥಾನವು ಹಾಗೆಯೇ ಉಳಿಯಬೇಕೆಂದು ಮೈಸೂರಿನ ಹಲವು ಕಾಂಗ್ರೆಸ್ ಮುಖಂಡರು ಅಪೇಕ್ಷಿಸಿದ್ದರಿಂದ ಈ ವಿಷಯವು ಮುಖ್ಯ ಉನ್ನತ ಸಮಿತಿ ಮುಂದೆ ಬಂದಿತ್ತು ಅವರು ಈ ರೀತಿ ನಿರ್ಣಯ ಮಾಡಿರುತ್ತಾರೆ —

"ಕಳೆದ ತಿಂಗಳು ೧೯ ಮತ್ತು ೨೦ನೇ ತಾರೀಖು ಸಂಸ್ಥಾನ ಪುನರ್ವಿಂಗಡಣೆ ಸಮಿತಿಯವರು ಕರ್ನಾಟಕ ಸಂಸ್ಥಾನವನ್ನು ಸ್ಥಾಪಿಸಬೇಕೆಂಬ ವಿಷಯವನ್ನು ಪರಿಶೀಲಿಸಿದರು ಈ ವಿಷಯದ ಸತ್ವ ಮತ್ತು ಸಾರ್ವಜನಿಕರ ಅಭಿಪ್ರಾಯವನ್ನೂ ಪೂರ್ಣವಾಗಿ ವಿಮರ್ಶಿಸಿ, ಕರ್ನಾಟಕ ಪ್ರಾಂತ ರಚನೆ ವಿಚಾರವನ್ನು ಗಡಿಗಳ ಹೊಂದಾಣಿಕೆ ಪಟ್ಟಿಯೊಡನೆ ಅಂಗೀಕರಿಸಬೇಕೆಂದು ಕಾರ್ಯಕಾರಿ ಸಮಿತಿಯು ನಿರ್ಧರಿಸಿತು ಕಾರ್ಯಕಾರಿ ಸಮಿತಿ ಸಭೆಯಾದನಂತರ ಕರ್ನಾಟಕ ಮತ್ತು ಮೈಸೂರುಗಳ ನಿಯೋಗಗಳು ಉಪಸಮಿತಿಯವರನ್ನು ಭೇಟಿ ಮಾಡಿದ್ದವು ಉಪ ಸಮಿತಿಯವರು ಅವರ ಅಭಿಪ್ರಾಯವನ್ನು ಪಡೆಯಲೂ ಅವಕಾಶವಾಗಿತ್ತು ಮೈಸೂರಿನ ಜನತೆ ಮತ್ತು ಇಡೀ ದೇಶದ ಹಿತದೃಷ್ಟಿಯಿಂದ ಶಿಫಾರಸನ್ನು ಒಪ್ಪುವುದು ಒಳ್ಳೆಯದೆಂದು ಉಪ ಸಮಿತಿಯು ವಿಶ್ವಾಸಪಟ್ಟಿತು. ಮೈಸೂರು, ಮುಂಬಾಯಿ, ಹೈದರಾಬಾದು ಮತ್ತು ಪಶ್ಚಿಮ ಭಾಗದ ಕನ್ನಡ ಪ್ರದೇಶಗಳು, ಕೊಡಗೂ ಸೇರಿ ಒಂದು ಪ್ರಾಂತವಾಗಬೇಕೆಂಬ ತೀರ್ಮಾನವನ್ನು ಗಡಿಗಳ ವ್ಯತ್ಯಾಸವನ್ನು ಸರಿಪಡಿಸುವ ಷರತ್ತಿನೊಡನೆ ಒಪ್ಪಿದೆ"

ಬೆಂಗಳೂರಿನಲ್ಲಿ ೧೬ನೇ ತಾ॥ ಲಾಠಿ ಪ್ರಯೋಗದ ಪ್ರತಿಧ್ವನಿ

ಹಿರಿಯ ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ ವ ಫೋನ್] ಬೆಂಗಳೂರು ೨೦

ಈ ದಿನ ವಿಧಾನ ಪರಿಷತ್ತಿನಲ್ಲಿ ಶ್ರೀ ಎಂ ಸಿ ಮಹದೇವಸ್ವಾಮಿಯವರ ಪ್ರಶ್ನೆಗೆ ಉತ್ತರವಾಗಿ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಕಳೆದ ೧೬ನೇ ತಾ॥ ಪೋಲೀಸರು ಪ್ರದರ್ಶನಕಾರರ ಮೇಲೆ ಮಾಡಿದ ಲಾಠಿ ಪ್ರಹಾರದ ಸಂಬಂಧದಲ್ಲಿ ನ್ಯಾಯವಾದ ರೀತಿಯಲ್ಲಿ ನಡೆದುಕೊಂಡುದಾಗಿ ಸಮರ್ಥಿಸಿದರು ಯಾವ ಗುಂಪಿನ ಮೇಲೂ ಲಾಠಿ ಪ್ರಯೋಗಿಸಲ್ಪಟ್ಟು ಹೊಡೆಯಲಿಲ್ಲವೆಂದೂ ಜನರು ಚದುರುವಂತೆ ಒತ್ತಾಯಮಾಡಿ ಅದು ವಿಫಲವಾದನಂತರ ಲಾಠಿ ಪ್ರಯೋಗವಾಯಿತೆಂದೂ ಇದರಲ್ಲಿ ಪಕ್ಷಪಾತವೇನೂ ಆಗಲಿಲ್ಲವೆಂದೂ ಹೇಳಿದರು.

ವಾರ ಭವಿಷ್ಯ

ತಾ॥ ೨೦ ೧೧ ೫೫ರಿಂದ ೨೭ ೧೧ ೫೫ ರ ವರೆಗೆ

ಮೇಷ —ಆರೋಗ್ಯ ಸಾಧಾರಣ ಖರ್ಚು ಹೆಚ್ಚು ಕುಟುಂಬದಲ್ಲಿ ಅಶಾಂತಿ ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ತೊಂದರೆ ಮನಸ್ಸಿಗೆ ಚಿಂತೆ

ವೃಷಭ —ಅನಾರೋಗ್ಯ ಸಂಸಾರದಲ್ಲಿ [illegible] ಲಾಭಕ್ಕಿಂತ ಖರ್ಚು ಹೆಚ್ಚು ಪ್ರಯಾಣದಲ್ಲಿ ಕಷ್ಟ, ವ್ಯಾಪಾರ, ನೌಕರಿಗಳಲ್ಲಿ ತೊಂದರೆ ಸಂತೋಷದ ಘಟನೆಯು ಪತ್ರ

ಮಿಥುನ —ಮನಸ್ಸಿಗೆ ವಿಪರೀತ ಚಿಂತೆ ಸಂಸಾರದಲ್ಲಿ ಕಲಹ, ಆರ್ಥಿಕ ಮುಗ್ಗಟ್ಟು, ಸ್ನೇಹಿತರಿಂದಲೇ ತೊಂದರೆ ವ್ಯಾಪಾರವ್ಯವಹಾರದಲ್ಲಿ ನಷ್ಟ ನೌಕರಿಯಲ್ಲಿ [illegible]

ಕರ್ಕ —ಶುಭ ಮತ್ತು ಸಂತೋಷದ ಘಟನೆ [illegible] ಖರ್ಚು ಹೆಚ್ಚು ಸ್ನೇಹಿತರಿಂದ ಸಹಕಾರ ಸಂಸಾರ ತಾಪತ್ರಯ [illegible] ನೌಕರಿಯಲ್ಲಿ ಯಶಸ್ಸು

ಸಿಂಹ - ಅಭಿಪ್ರಾಯ ಘಟನೆಗಳು [illegible] ಚಿಂತೆ ನೌಕರಿ [illegible] ವ್ಯವಹಾರದಲ್ಲಿ [illegible] ಸಂಸಾರದಲ್ಲಿ ಸುಖ ಆರ್ಥಿಕ ಸ್ಥಿತಿ ಉತ್ತಮ

ಕನ್ಯಾ —ವಿಪರೀತ [illegible] ಮುಗ್ಗಟ್ಟು ನೌಕರಿಯಲ್ಲಿ ಯಶಸ್ಸು ಗೃಹ ಸೌಖ್ಯ ವ್ಯಾಪಾರವ್ಯವಹಾರಗಳಲ್ಲಿ ಜಯ ಮನಸ್ಸಿಗೆ ಶಾಂತಿ

ತುಲಾ. ಆರೋಗ್ಯ ಸಾಧಾರಣ [illegible] ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಫಲ ಸಂಸಾರದಲ್ಲಿ [illegible] ಸ್ನೇಹಿತರಿಂದ ಸಹಾಯ

ವೃಶ್ಚಿಕ —ಅನಾರೋಗ್ಯ ಅಶುಭ ಫಲಗಳು ಮನಸ್ಸಿಗೆ ಚಿಂತೆ ಗೃಹದಲ್ಲಿ [illegible] ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಕಿರುಕುಳ ಆರ್ಥಿಕ ಮುಗ್ಗಟ್ಟು

ಧನು —ಆರೋಗ್ಯ ಉತ್ತಮ ಧನ ಲಾಭ ಅಧಿಕ ವೆಚ್ಚ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಪ್ರಗತಿ ಸಂಸಾರದಲ್ಲಿ ಸಂತೋಷ

ಮಕರ —ಆರೋಗ್ಯ ಉತ್ತಮ ಶುಭ ಫಲಗಳು ಸಂಸಾರದಲ್ಲಿ ಸೌಖ್ಯ ಸ್ನೇಹಿತರಿಂದ ಸಹಕಾರ ವ್ಯಾಪಾರ, ಉದ್ಯೋಗದಲ್ಲಿ ಮನ್ನಣೆ ಖರ್ಚು ಹೆಚ್ಚು

ಕುಂಭ – ಆರ್ಥಿಕ ಸ್ಥಿತಿ ಉತ್ತಮ ಶುಭ ಫಲಗಳು ಆರೋಗ್ಯ ಉತ್ತಮ ಸ್ನೇಹಿತರಿಂದ ಸಹಕಾರ ಉದ್ಯೋಗ,ವ್ಯವಹಾರಗಳಲ್ಲಿ ಜಯ

ಮೀನ —ಆರೋಗ್ಯ ಸಾಧಾರಣ ಶುಭ ಫಲಗಳು [illegible] ಉಪಕಾರ ಸ್ನೇಹಿತರಿಂದ ತೊಂದರೆ ಉದ್ಯೋಗ ವ್ಯವಹಾರಗಳಲ್ಲಿ ಸಾಮಾನ್ಯ ಸ್ಥಿತಿ ಅಪಘಾತ ಭಯ

ಕನ್ಯಾಪಹಾರವೇ?

[illegible] ಬೆಳ್ಳಿಕಟ್ಟೆಗೆ [illegible] ಅಬ್ದುಲ್ ಸತ್ತಾರ್ ಎಂಬ [illegible] ತನ್ನ ಅಂಗಡಿ ಸಮೀಪದ ಮನೆಯಲ್ಲಿದ್ದ [illegible] ಎಂಬುವರ ಮಗಳು, [illegible] ವರ್ಷದ [illegible] ಎಂಬುವಳನ್ನು ಅಪಹರಿಸಿಕೊಂಡು ಪರಾರಿಯಾಗಿರುವನೆಂದು ದೂರು ಕೊಡಲಾಗಿದೆ ಪೋಲೀಸರು ತನಿಖೆ ನಡೆಸುತ್ತಿರುವರು

ಕರ್ನಾಟಕದ ರಚನೆಯಿಂದ ಮೈಸೂರಿಗೆ ಪ್ರಯೋಜನ

ವಿಧಾನ ಸಭೆಯಲ್ಲಿ ಗೃಹ ಮಂತ್ರಿ ಸಿದ್ಧವೀರಪ್ಪನವರ ಹೇಳಿಕೆ

ಬೆಂಗಳೂರು ೨೦

ಮೊನ್ನೆ ವಿಧಾನ ಸಭೆಯಲ್ಲಿ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಮಾತನಾಡಿ, ಕರ್ನಾಟಕ ಏಕೀಕರಣದಿಂದ ಉಂಟಾಗುವ ಪ್ರಯೋಜನವು ನಷ್ಟದಲ್ಲಿ ಉಂಟಾಗುವ ತೊಂದರೆಗಳಿಗಿಂತಲೂ ಹೆಚ್ಚೆಂದೂ, ತೊಂದರೆಗಳು [illegible] ವರ್ಷಗಳಿಗಿಂತಲೂ ಹೆಚ್ಚು ಕಾಲ ಇರವೆಂದೂ ತಿಳಿಸಿದರು ಎರಡು ಕರ್ನಾಟಕದ ಬಗ್ಗೆ ಹೂಡಿರುವ ವಾದಗಳಿಗೆ ಆಧಾರವಿಲ್ಲವೆಂದು ಹೇಳಿದರು ರಾಜಪ್ರಮುಖರ ವಿಷಯವನ್ನು ಪ್ರಸ್ತಾಪಿಸಿ, [illegible] ರಾಜಪ್ರಮುಖರು ಪ್ರಜಾ ವರ್ಗದವರ ಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿರುವರೆಂದೂ ರಾಜಪ್ರಮುಖರುಗಳ ಹುದ್ದೆಗಳನ್ನು ಉಳಿಸಿಕೊಳ್ಳುವುದು ತಮ್ಮ ಕೈಯಲ್ಲಿಲ್ಲವೆಂದೂ ಅವರ ಸೇವೆಯು ಮುಂದೆಯೂ ಯಾವ ರೂಪದಲ್ಲೇ ಆಗಲಿ ಲಭ್ಯ[illegible]ವೆಂದೂ, ಅವರ ಹಿತ ರಕ್ಷಣೆಗೆ ರಕ್ಷೆ ಒದಗಿ[illegible]ರವೆಂಬುದು [illegible] ಸರ್ಕಾರದ ಅಭಿಪ್ರಾಯವೆಂದೂ ತಿಳಿಸಿದರು

ಇತಿಹಾಸ ಪುಸ್ತಕವೊಂದನ್ನು [illegible] ಸಂಸ್ಥಾನವು ಮೈಸೂರು ಮತ್ತು ಶ್ರೀರಂಗಪಟ್ಟಣಗಳು [illegible] ಸಣ್ಣ ನಾಡಾಗಿತ್ತೆಂದೂ [illegible] ಅವರು ಹೇಳಿದರು ಮೈಸೂರು ಸಂಸ್ಥಾನವು [illegible] ಇದೆಯೆಂದೂ, [illegible] ಚಾರಿತ್ರಿಕ ಘಟನೆಯೇ ಇದಕ್ಕೆ [illegible] ನುಡಿದರು

ರೇಡಿಯೋವಿನಲ್ಲಿ ಭಾರತ ವಾಚನ

ಬೆಂಗಳೂರಿನ ರೇಡಿಯೋವಿನಲ್ಲಿ ಇದೇ [illegible] ತಾರೀಕು ಸಂಜೆ [illegible] ಗಂಟೆಗೆ ಕೃಷ್ಣರಾಜನಗರ ತಾಲ್ಲೂಕು [illegible]ದಲ್ಲಿರುವ ಶ್ರೀ ಸಿ ಕೆ ಪುಟ್ಟಣ್ಣಯ್ಯನವರು ಚಂದ್ರಹಾಸನ ಬಾಲ್ಯ ಎಂಬ ವಿಚಾರವಾಗಿ ಜೈಮಿನಿ ಭಾರತದ ವಾಚನ ಮಾಡುವರು

C T C PUBLICATIONS

S S L C ಪರೀಕ್ಷೆಯ ಪ್ರಶ್ನಪತ್ರಿಕೆಗಳಿಂದ ಆರಿಸಿದ ಬ್ರಿಟಿಷರ ಚರಿತ್ರೆಯ ಪ್ರಶ್ನೋತ್ತರಗಳು

ಇದೀಗ ಪ್ರಕಟವಾಗಿದೆ] [ಬೆಲೆ 0 14 0

[illegible]

★

Other Useful Guides

Guide to Eng. Text

ಕನ್ನಡ ಗದ್ಯ, ಪದ್ಯ ಮತ್ತು ವ್ಯಾಕರಣದ ಪ್ರಶ್ನೋತ್ತರಗಳು

"ಅಧುನಿಕ [illegible]" ದ ಪ್ರಶ್ನೋತ್ತರ

Ele Mathematics (Qns & Ans)

,, ಕನ್ನಡದಲ್ಲಿ

A Guide to English Grammar

★

Please Enquire Your Book-Seller or

The C T C , V V Market, Mysore

S S L C Classes in Full Swing

(*11 to 4.30 P M and 6 to 9 P M*)

ನಗರದಲ್ಲಿ ಜಾನುವಾರು ಸೆನ್ಸಸ್

ಮೈಸೂರು ೨೦

ಇದೇ ಡಿಸೆಂಬರ್ ೧ ರಿಂದ ಬರುವ ಏಪ್ರಿಲ್ ೧೫ರ ವರೆಗೆ ಇಲ್ಲಿನ ಪೌರಸಭೆಯವರು ದನ ಮತ್ತು ಇತರ ಪ್ರಾಣಿಗಳ ಪಂಚ ವಾರ್ಷಿಕ ಖಾನೇಷುಮಾರಿ ಲೆಕ್ಕವನ್ನು ತೆಗೆದುಕೊಳ್ಳಲಿರುವರು ಈ ಖಾನೇಷುಮಾರಿಯು ಅಖಿಲ ಭಾರತ ಕಾರ್ಯಕ್ರಮದ ಅಂಗವಾಗಿ ನಡೆಯುವುದು ಇದಕ್ಕಾಗಿ ಸೂಕ್ತ ಸಿಬ್ಬಂದಿಯನ್ನು ನೇಮಿಸಲಾಗಿದೆ ಅವರುಗಳು ಈ ಕೆಲಸಕ್ಕಾಗಿ ನಾನಾ ಪ್ರದೇಶಗಳಲ್ಲಿ ಬಂದಾಗ, ಸಾರ್ವಜನಿಕರು ತಮ್ಮ ಜಾನುವಾರುಗಳ ಬಗ್ಗೆ ಅಂಕಿ ಅಂಶಗಳನ್ನು ಕೊಡಬೇಕೆಂದು ಕಮಿಷನರು ಪ್ರಾರ್ಥಿಸಿರುತ್ತಾರೆ

ಪರಕಾಲ ಮಠಕ್ಕೆ ಹೈದರಾಬಾದು ಮುಖ್ಯ ಮಂತ್ರಿಗಳ ಭೇಟಿ

ಹೈದರಾಬಾದು ಮುಖ್ಯ ಮಂತ್ರಿ ಶ್ರೀ ಬಿ ರಾಮಕೃಷ್ಣರಾಯರು ನೆನ್ನೆ ಪತ್ನೀ ಸಮೇತರಾಗಿ ಇಲ್ಲಿನ ಶ್ರೀ ಪರಕಾಲ ಸ್ವಾಮಿಗಳವರ ಮಠಕ್ಕೆ ಭೇಟಿಯಿತ್ತು, ಗುರುಗಳ ದರ್ಶನ ಪಡೆದು ಸ್ವಲ್ಪ ಹೊತ್ತು [illegible] ಸಂಭಾಷಣೆ ನಡೆಸಿದರು ಶ್ರೀ ಶ್ರೀಗಳವರು ಅವರನ್ನು ಆಶೀರ್ವದಿಸಿ ರೇಷ್ಮೆ ಪತ್ತು [illegible] ಜೋಡಿಯನ್ನಿತ್ತು ಫಲ ಮಂತ್ರಾಕ್ಷತೆಯನ್ನು ಅನುಗ್ರಹಿಸಿದರು ಶ್ರೀ ರಾಮಕೃಷ್ಣರಾಯರು ಶೃಂಗೇರಿಗೂ ಭೇಟಿ ಕೊಡಲಿರುವರು

ಕಳುವಿಗಾಗಿ ಬಂಧನ

[illegible] ಎಂಬಾಕೆಯು ನೆನ್ನೆ ತನ್ನ ಮಗುವಿನೊಡನೆ ವೈಸರಾಯ್ ರಸ್ತೆಯಲ್ಲಿ ಹೋಗುತ್ತಿದ್ದಾಗ ಪ್ಯಾರೆ ಮತ್ತು [illegible] ಎಂಬಿಬ್ಬರು ಮಗುವಿನ ಕತ್ತಿನಲ್ಲಿದ್ದ, ಸುಮಾರು ೭೦ ರೂ ಬೆಲೆ ಬಾಳುವ ಆಭರಣವನ್ನು ಕಿತ್ತುಕೊಂಡು ಓಡುತ್ತಿದ್ದರೆಂದೂ, ಟ್ರಾಫಿಕ್ ಪೋಲೀಸರೂ ಮತ್ತು ಇತರರೂ ಅವರಿಬ್ಬರನ್ನೂ ಬಂಧಿಸಿದರೆಂದೂ ವರದಿಯಾಗಿದೆ

ನರ್ಸರಿ ಸ್ಕೂಲ್ ಅಧ್ಯಾಪಕಿಯರ ಶಿಕ್ಷಣ

ಶ್ರೀ ಜಗದಂಬಾ ಶಿಶು ವಿಹಾರ,

385 ದಿವಾನ್ಸ್ ರೋಡ್, ಮೈಸೂರು

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರವರ ಆಫೀಸ್ ಮೆಮೊ ನಂ ಸಿ 2 2803-471 ೫5 56 ಮತ್ತು ಪಿ ಡಿ ನಂ 49 ಬೆಂಗಳೂರು ತಾರೀಕು 21 9-1955ರ ಆಜ್ಞಾನುಸಾರವಾಗಿ ಶ್ರೀ ಜಗದಂಬಾ ಶಿಶು ವಿಹಾರದ ಆಶ್ರಯದಲ್ಲಿ ಶಿಶು ವಿಹಾರಗಳ ಅಥವಾ ನರ್ಸರಿ ಸ್ಕೂಲುಗಳ ಅಧ್ಯಾಪಿಕೆಯರ ಶಿಕ್ಷಣ ಕೇಂದ್ರವನ್ನು ಈಗ ತಾನೇ ತೆರೆಯಲಾಗಿದೆ ಅಪೇಕ್ಷಿಸುವ ಮಹಿಳೆಯರು ತ್ವರೆಯಾಗಿ ಬಂದು ಸೇರಬಹುದೆಂದು ತಿಳಿಸಲಾಗಿದೆ

ಡಿ. ಕೃಷ್ಣಮೂರ್ತಿ, ಡೈರೆಕ್ಟರ್

ಪಾಕಿಸ್ತಾನ ಮತ್ತು ಅಫ್ಘಾನಿ[stanagaLige] ಇರಾನಿನ ಮಧ್ಯ[stike]

ಕಳೆದ ತಿಂಗಳು ಪಾಕಿಸ್ತಾ[na] ಮತ್ತು ಅಫ್ಘಾನಿಸ್ತಾನಗಳ ನಡುವೆ ಇರುವ [illegible] ಗಳ ಇತ್ಯರ್ಥಕ್ಕಾಗಿ ಮಧ್ಯಸ್ಥಿಕೆ ವಹಿಸಲು ತಾನು ಸಿದ್ಧವಾಗಿರುವುದೆಂದು ಕರಾಚಿಗೆ [illegible] ಇರುವ ಇರಾನಿನ ಹೊಸ ರಾಯಭಾರಿ [illegible] ಜ॥ ನಾದಿರ್ ಬಾಟಮಾಂಗಲೇಜ್ ರವರು [illegible] ರುತ್ತಾರೆ

ಚಂಪಾರಣ್ಯದಲ್ಲಿ ಸುಣ್ಣ[ka]ಲ್ಲು ಮತ್ತು ಸೀಮೆಯೆಣ್ಣೆ ಗ[ni]

ಬಿಹಾರಿನ ಚಂಪಾರಣ್ಯ ಜಿಲ್ಲೆಯಲ್ಲಿ [illegible] ಕಲ್ಲು ಮತ್ತು ಸೀಮೆಯೆಣ್ಣೆ ನಿಧಿಗಳು [illegible]ಯಾಗಿವೆಯೆಂದು ತಿಳಿದುಬಂದಿದೆ. [illegible] ನದಿಯ ಬಳಿ ಸೋಮೇಶ್ವರ ಗುಡ್ಡದ [illegible] ಸೀಮೆಯೆಣ್ಣೆಯಿರುವುದೆಂದು ಹೇಳ[illegible]

ಬೆಂಗಳೂರು ರೇಡಿಯೋ ನಾಳೆ ಕಾರ್ಯ[kramagaLu]

[illegible]

VIDYA TUTORI[AL]

COLLEGE

(*Dalvoy High School Building*)

MYSORE

The Best Institute in Mysore

Efficient Coaching

Classes Commenced in Full [swing]

INTER - Eng , Kan , Sans , Hindi, P C M

C B Z , H E L , [illegible]

P E M , Commerce, [illegible]

B A , B Sc : Eng, Kan, Sans, [illegible]

P C M , C B Z , B T G , [illegible]

LADIES ALSO ADMITTE[D]

JOIN AT ONCE

Enquiries 9 to 10 A M.

5.30 to 8.30 P M

Edited, Printed and Publ[ished] by A R Nagarajan at S[adhvi] Press, D Subbiah Road, My[sore]

ಪ್ರಭುದೇವಾ ಥಿಯೇಟ[ರ್]

(ಪದ್ಮಾ ಟಾಕೀಸ್)

20-11-55 ರಿಂದ ಅನೋಘ 2ನೇ ವಾರ ದಿನವೂ 3 ಪ್ರದರ್ಶ[ನ]

ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ ★ ಮಹೇಶ್ವರಿ

ಪಾತ್ರ – ಜೆಮಿನಿ ಗಣೇಶನ್, ಸಾವಿತ್ರಿ, ತಂಗವೇಲು

ಲಕ್ಷ್ಮಿ ★

20-11-55ರಿಂದ .. ಜಯಭೇರಿ 2ನೇ ವಾರ : ದಿನವೂ ಮೂರು ಪ್ರದರ್ಶನಗಳು

ಕನ್ನಡಿಗರ ಜನಸ್ತೋಮಕ್ಕೆ ಸುಪರಿಚಿತವಾದ ಕಥೆಯ ಅಮೋಘ ಚಿತ್ರ

ಶಿವಾಜಿ ಗಣೇಶನ್, ಭಾನುಮತಿ, ನಾಗಯ್ಯ,

[illegible] ರಾಮಚಂದ್ರ, ಮೊದಲಾದ, [illegible] ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

★ ಕಳ್ವನಿನ್ ಕಾದಲಿ ★

[A NANDI RELEASE]

ಚಾಮುಂಡೇಶ್ವರಿ ಟಾಕೀಸ್ ★ 25—11—55 ರಿಂದ ಅನೋಘ ಪ್ರಾರಂಭ ದಿನವೂ 3 ಪ್ರದರ್ಶನಗಳು

ಜಯರಾಜ್ ಫಿಲಂಸ್ ರವರ ಸುಪ್ರಸಿದ್ಧ ಕನ್ನಡ ಪೌರಾಣಿಕ ಚಿತ್ರ ★ ಭಕ್ತ ಮಲ್ಲಿಕಾರ್ಜುನ

ಪಾತ್ರ.– ಪಂಡರೀಬಾಯಿ, ಅಮರನಾಥ್, ರಾಘವೇಂದ್ರರಾವ್, ಬಾಲಕೃಷ್ಣ ಮುಂತಾದವರು

ನಿರ್ದೇಶಕ :- ಪಿ. ವಿ. ರಾಜು ★ [A VIJAYA TALKIE RELEASE]

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಗೋಲ್ಡ್ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
ಅರ್ಣಿ, ಬೆಂಗಳೂರ್
ರೇಷ್ಮೆ ಮತ್ತು ನೂಲಿನ ಸೀರೆಗಳು
ವಿಧವಿಧವಾದ ನಮೂನೆಗಳಲ್ಲಿ
ಬಂದಿವೆ ಒಂದೇ ಭೇಟಿ ಕೊಡಿ
M.V. ಭೋಜಯ್ಯ
ಎ ವಿ, & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : MONDAY 21-11-1955 ಮೈಸೂರು ಸೋಮವಾರ ೨೧-೧೧-೧೯೫೫ [ಸಂಚಿಕೆ : ೪೬

ನಗರಕ್ಕೆ ನೇಪಾಳದ ರಾಜದಂಪತಿಗಳ ಆಗಮನ -

...ಕೀಕರಣ ವಿರೋಧಿಗಳಿಂದ ಕಪ್ಪು ಬಾವುಟ ಪ್ರದರ್ಶನ

ಬಹಿರಂಗ ಸಭೆಗೆ ಅಡ್ಡಿ

...ಗಳ ದಹನ ಮತ್ತು ಪತ್ರಿಕಾಲಯಗಳಿಗೆ ಕಲ್ಲಿನೇಟು

ಮೈಸೂರು ೨೧

...ಸೂರು ವಾದಿಗಳಾದ ವಿದ್ಯಾರ್ಥಿಗಳ ತಂ... ನಿನ್ನೆ ಸಂಜೆ ಎರಡು ಕಪ್ಪು ಬಾವುಟ... ಹಿಡಿದು ನಾನಾ ಬೀದಿಗಳಲ್ಲಿ ಮೆರವಣಿ... ತು ಕಾಂಗ್ರೆಸ್ ಹೈಕಮಾಂಡಿನವರು ...ಟಕ ಪ್ರಾಂತ ರಚನೆ ಬಗ್ಗೆ ಕೈಗೊಂಡ... ...ರವನ್ನು ಪ್ರತಿಭಟಿಸಲೂ, ಕರ್ನಾಟಕ ...ಕರಣವನ್ನು ವಿರೋಧಿಸಲೂ ಪ್ರದರ್ಶನ ನ...ಯಿತು

...ವರುಗಳು ಟೌನ್‌ಹಾಲ್ ಮೈದಾನಕ್ಕೆ ತೆರ...ಡು ಕಡೆ ಸಭೆಗಳನ್ನು ನಡೆಸಿದರು ಸಭೆ ...ಧಿಕ್ಕಾರದ ಘೋಷಣೆಗಳೂ, ಭಾಷಣಗ... ...ವು ಶ್ರೀಗಳಾದ ಕಾಳೇಗೌಡ, ವೆಂ... ಗುಂಡಯ್ಯ, ಶ್ರೀಕಂಠಯ್ಯ ಮತ್ತು ಸಿ...ಹ ಸ್ವಾಮಿಗಳವರು ಭಾಷಣ ಮಾಡಿದರು ...ಟಕದ ಏಕೀಕರಣವಾಗಕೂಡದೆಂದೂ, ...ರು ಈಗಿರುವಂತೆಯೇ ಇರಬೇಕೆಂದೂ, ...ಪ್ರಮುಖರ ಸ್ಥಾನಮಾನಗಳು ರಕ್ಷಿಸಲ್ಪಡ...ದೂ ಒತ್ತಾಯಪಡಿಸಿದರು ಶ್ರೀಗಳಾದ ...ನುಮಂತಯ್ಯ ಮತ್ತು ಎಸ್ ಚೆನ್ನಯ್ಯನ ...ಟವನ್ನು ಬಂಡಿಸಿದರು

...ಜಪ್ರಮುಖರ ಸ್ಥಾನಮಾನಗಳ ಭದ್ರತೆಗಾ...ರದಲ್ಲಿ ಏರ್ಪಡಿಸಲಾಗಿರುವ ಸಮಿತಿಯವ... ಮೊನ್ನೆಯೇ ಟೌನ್‌ಹಾಲ್ ಮೈದಾನದಲ್ಲಿ ...ದ ಬಹಿರಂಗ ಸಭೆಯನ್ನು ನಡೆಸಲು ಅಸ...ಗಿ, ಸಭೆಯನ್ನು ಕರೆದಿದ್ದ ಶ್ರೀಗಳು ಎಂ ...ಸ್ವಾಮಿ, ನಂದಿಬಸಪ್ಪ, ಇ ಪಿ ನಂಜಪ್ಪ, ...ಯ್ಯ, ಬಿ ಜಿ ದಾಸ್ ಮುಂತಾದವರು ಸ...ನ್ನು ಬಿಟ್ಟು ಹೊರಟುಹೋದರು ಪ್ರದ...ರು ಹಲವು ವರ್ತಮಾನ ಪತ್ರಿಕೆಗಳ ...ಟ್ಟುಹಾಕಿದರು

...ವರುಗಳು ಅಲ್ಲಿಂದ ಹೊರಟು ದೇವರಾಜ ...ಎ ಮಾರಾಟಗಾರರಿಂದ ಪತ್ರಿಕೆಗ... ...ತ್ತುಕೊಂಡು ಸುಟ್ಟುಹಾಕಿದರು ಡೆಕ್ಕನ್ ... ಮತ್ತು ಪ್ರಜಾವಾಣಿ ಪತ್ರಿಕಾ ವಿತ... ...ಮೇಲೆ ಕಲ್ಲೆಸೆಯಲಾಯಿತೆಂದು ...ಗಿದೆ

...ದ ಅವರುಗಳು ಮೈಸೂರು ಪ್ರಭಾ ಮ... ಪತ್ರಿಕಾ ಕಛೇರಿಗಳಿಗೂ ಹೋಗಿ ...ನ್ನು ಹೊಡೆದರೆಂದು ಗೊತ್ತಾಗಿದೆ. ಪ್ರ...ತ್ರಿಕೆ ಬೋರ್ಡನ್ನು ಕಿತ್ತುಹಾಕಲಾಯಿ... ವರದಿಯಾಗಿದೆ

...ಗಂಟೆ ಸಮಯದಲ್ಲಿ ಪ್ರದರ್ಶನಕಾ... ...ಧ್ವಿ ಕಛೇರಿಯ ಮುಂದೆ ಹಾಯ್ದು ಪತ್ರಿಕೆಗೆ ಧಿಕ್ಕಾರವನ್ನು ಕೂಗಿದರು

...ನದ ಮುದ್ರಣ ಸಂಸ್ಥೆಗಳವರ ಸಭೆ ...ನ್ನೆ ಬೆಂಗಳೂರಿನಲ್ಲಿ ಆದುದು, ಧೈರ್ಯವು ...ವಣೆ ನಡೆಯಿತು ರಾಜಧಾನಿಯ ಪ...ತ್ರಿಕೆ ಸಂಪಾದಕರಾದ ಶ್ರೀ ಎಚ್ ಕೆ ...ಸ್ವಾಮಿಯವರೂ ಒಬ್ಬರು ಧೈರ್ಯವಾಗಿ ...ಟ್ಟಿರುವರು.

ಸಂಸ್ಥಾನದ ವೈದ್ಯಾಧಿಕಾರಿಗಳಾಗಿ ವೆಂಕಟಸುಬ್ಬರಾಯರ ನೇಮಕ

[ಸ್ವಂ ಸು ಪಂತಿ] ಬೆಂಗಳೂರು ೨೧

ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಶ್ರೀ ವೆಂಕಟಸುಬ್ಬರಾಯರನ್ನು ಬರುವ ತಿಂಗಳು ... ಪ್ರವೃತ್ತರಾಗುವ ... ದಾಸಪ್ಪನವರ ಸ್ಥಾನದಲ್ಲಿ ಸಂಸ್ಥಾನದ ವೈದ್ಯಕೀಯ ಇಲಾಖೆ ಡೈರೆಕ್ಟರಾಗಿ ನೇಮಕ ಮಾಡಲಾಗಿದೆ

ಕರ್ನಾಟಕದ ಬಗ್ಗೆ ಕಾಂಗ್ರೆಸ್ ಮುಖಂಡರ ಚರ್ಚೆ

ಕರ್ನಾಟಕ ಪ್ರಾಂತದ ಬಗ್ಗೆ ಹೈಕಮಾಂಡಿನ ನಿರ್ಧಾರದ ಅನುಗುಣವಾಗಿ ವಿಧಾನ ಸಭೆಯಲ್ಲಿ ನಿರ್ಣಯವನ್ನು ಯಾವರೀತಿ ಮಂಡಿಸಬೇಕೆಂಬ ವಿಷಯವಾಗಿ ಇಲ್ಲಿನ ಕಾಂಗ್ರೆಸ್ಸಿನ ಉನ್ನತ ವಲಯಗಳಲ್ಲಿ ಪರಿಶೀಲಿಸಲಾಗುತ್ತಿದೆ ಕರ್ನಾಟಕದ ಪರವಾಗಿರುವವರು ಒಳ ಕೋಟೆಯವರು ಇತರ ಕಾಂಗ್ರೆಸ್ಸಿನವರು ತಟಸ್ಥರಾಗಿರುವರು

○ ಸಂಸ್ಥಾನದಲ್ಲಿ ಕೈ ಮಗ್ಗದವರ ಹಿತ ರಕ್ಷಣೆಗಾಗಿ ೫೬ ಸಾವಿರ ರೂ ... ಮೈಸೂರು ಸರ್ಕಾರದವರು ... ರೂ ಮತ್ತು ಮಿಲ್ ... ನಿಧಿಯಿಂದ ಕೇಂದ್ರ ಸರ್ಕಾರದವರು ... ರೂ ಗಳನ್ನು ಒದಗಿಸಿರುವುದಾಗಿ ಗೊತ್ತಾಗಿದೆ

ಬೊಂಬಾಯಿ ಬಹಿರಂಗ ಸಭೆಯಲ್ಲಿ ಗಲಭೆ

ಮುಖ್ಯ ಮಂತ್ರಿ ಮುರಾರ್ಜಿಯವರಿಗೆ ಕಲ್ಲಿನೇಟು

ಬೊಂಬಾಯಿಯ ಚೌಪಾತಿ ತೀರದಲ್ಲಿ ನಿನ್ನೆ ೨ ಲಕ್ಷ ಜನರ ಭಾರಿ ಸಭೆಯೊಂದನ್ನು ಉದ್ದೇಶಿಸಿ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯಿರು ಭಾಷಣ ಮಾಡುತ್ತಿದ್ದಾಗ ಅವರ ತಲೆಗೆ ಕಲ್ಲಿನೇಟು ಬಿತ್ತೆಂದು ವರದಿಯಾಗಿದೆ ಅವರಿಗೆ ಹೆಚ್ಚು ಗಾಯವಾಗಲಿಲ್ಲ ಅವರು ಭಾಷಣವನ್ನು ಮುಂದುವರಿಸಿ ಬೊಂಬಾಯಿ ಸಂಸ್ಥಾನದ ಭವಿಷ್ಯ... ಒಕ್ಕೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರ ನಿರ್ಣಯವನ್ನು ವಿವರಿಸಿದರು

ಸಂಯುಕ್ತ ಮಹಾರಾಷ್ಟ್ರದ ಪರ ಘೋಷಣೆಗಳನ್ನು ಕೂಗುತ್ತಿದ್ದವರು ಪದೇಪದೇ ಸಭೆಯ ಕಾರ್ಯಕಲಾಪಕ್ಕೆ ಅಡ್ಡಿ ತಂದು ಕಲ್ಲುಗಳನ್ನು ... ರಿದರು ವೇದಿಕೆಯ ಮೇಲೆ ಪಾದರಕ್ಷೆಗಳನ್ನು ಎಸೆಯಲಾಯಿತು. ಹಲವರಿಗೆ ಕಲ್ಲಿನೇಟಿನ ಗಾಯಗಳಾದುವು ಹಲವು ಪತ್ರಿಕಾ ಪ್ರತಿನಿಧಿಗಳಿಗೂ ಕಲ್ಲಿನೇಟು ಬಿದ್ದಿತು

ವಿಶಾಲಾಂಧ್ರದ ಸ್ಥಾಪನೆಗೆ ಹೈಕಮಾಂಡಿನ ಸಮ್ಮತಿ

ಆಂಧ್ರದಲ್ಲಿ ತೆಲಂಗಾಣವು ಐಕ್ಯಗೊಂಡು ಸಂಸ್ಥಾನಗಳ ಪುನರ್ವಿಂಗಡಣೆ ಕಾಲದಲ್ಲೇ ವಿಶಾಲಾಂಧ್ರವಾಗುವುದು ಒಳ್ಳೆಯದೆಂದು ಕಾಂಗ್ರೆಸ್ ಹೈಕಮಾಂಡು ತೆಲಂಗಾಣ ಕಾಂಗ್ರೆಸ್ ನಾಯಕರಿಗೆ ಅನೌಪಚಾರಿಕವಾಗಿ ತಿಳಿಸಿರುವುದೆಂದು ವರದಿಯಾಗಿದೆ

ಕರ್ನಾಟಕದ ಬಗ್ಗೆ ರಾಜಪ್ರಮುಖರ ಅಭಿಪ್ರಾಯ

ಹಿರಿಯ ಸಭೆಯ ವರದಿಯಿಂದ ತೆಗೆದುಹಾಕಲು ಅಪ್ಪಣೆ

ಬೆಂಗಳೂರು ೨೧

ಮೊನ್ನೆ ಹಿರಿಯ ಸದನದ ಸಭೆಯಲ್ಲಿ ಶ್ರೀ ವೈ ಧರ್ಮಪ್ಪನವರು ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿ ಬಗ್ಗೆ ಭಾಷಣ ಮಾಡುತ್ತಾ ರಾಜಪ್ರಮುಖರು ಕರ್ನಾಟಕದ ರಚನೆ ವಿಷಯವಾಗಿ ಹೇಳಿರುವರೆಂದು ತಿಳಿಸಲಾದ ಅಭಿಪ್ರಾಯವನ್ನು ಪ್ರಸ್ತಾಪ ಮಾಡಿದುದು ಅಕ್ರಮವೆಂದು ಅಧ್ಯಕ್ಷ ಶ್ರೀ ಕೆ ಟಿ ... ರವರು ತಿಳಿಸಿ, ಶ್ರೀ ಧರ್ಮಪ್ಪನವರ ಭಾಷಣದ ಆ ಭಾಗವನ್ನು ಸಭಾ ನಡವಳಿಕೆಯಿಂದ ತೆಗೆದುಹಾಕಬೇಕೆಂದು ಸೂಚಿಸಿದರು ವೃತ್ತಿಯಲ್ಲಿ ಹೊರೆಯ ... ಬಳಸಿಕೊಳ್ಳಬಹುದೆಂದು ಇಲ್ಲಿನ ಪಾರ್ಲಿಮೆಂಟಿನಲ್ಲಿ ಪ್ರಥಮವನ್ನು ... ಅಕ್ರಮವೆಂದು ಗೊತ್ತುಮಾಡಲಾಗಿದ್ದುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು ಸರ್ಕಾರದಿಂದ ಬೇರೆ ಯಾವ ಅಭಿಪ್ರಾಯವನ್ನು ರಾಜರು ಹೊಂದಿರು ವುದಿಲ್ಲವೆಂದು ಇಲ್ಲಿನ ಪಾರ್ಲಿಮೆಂಟಿನಲ್ಲಿ ರೂಲಿಂಗ್ ಕೊಡಲಾಗಿರುವುದೆಂದೂ ಅಧ್ಯಕ್ಷರು ಹೇಳಿದರು

ವೃತ್ತಿ ಶಿಕ್ಷಣಾಲಯದ ರೇಡಿಯೋ ಶಾಖೆಯ ಕಟ್ಟಡದ ಆರಂಭ

ಶ್ರೀಮನ್ಮಹಾರಾಜರ ಭಾಷಣ

ಬೆಂಗಳೂರು ೨೧

ಮೈಸೂರಿನ ರಾಜ ಪ್ರಮುಖರು ನಿನ್ನೆ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಸಿವಿಲ್, ಮೆಕಾನಿಕಲ್, ರೇಡಿಯೋ ಮತ್ತು ವಿದ್ಯುಚ್ಛಕ್ತಿ ಇಂಜನಿಯರಿಂಗಿಗೆ ಸಂಬಂಧಪಟ್ಟ ಮತ್ತೊಂದು ವಿಭಾಗದ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿದರು ಅವರು ಭಾಷಣ ಮಾಡಿ ದೇಶದಲ್ಲಿ ಪಾರಿಭಾಷಿಕ ಶಿಕ್ಷಣಕ್ಕೆ ಹೆಚ್ಚು ಹೆಚ್ಚು ಅವಕಾಶವಿರುವುದೆಂದೂ, ಅನೇಕ ವಿದ್ಯಾರ್ಥಿಗಳು ಅದರಲ್ಲಿ ಸೇರಲಿರುವರೆಂದೂ ತಿಳಿಸಿದರು ಈ ಸಂಸ್ಥೆಯು ಇಡೀ ಭಾರತದಲ್ಲೇ ಅತ್ಯಂತ ದೊಡ್ಡ ಶಾಲೆಗಳಲ್ಲಿ ಒಂದಾಗುವ ಅವಕಾಶವಿರುವುದಾಗಿಯೂ ಅವರು ಹೇಳಿದರು

ದಂಡಿನ ... ನಗರದಲ್ಲಿ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರು ನಿನ್ನೆ ನೆರವೇರಿಸಿದರು ಮೊನ್ನೆ ರೇಡಿಯೋದಲ್ಲಿ ಪ್ರಸಾರ ಭಾಷಣ ಮಾಡಿ, ಪ್ರತಿಯೊಬ್ಬ ಪ್ರಜೆಯೂ ಪ್ರಾದೇಶಿಕ ಸೈನ್ಯದ ವಿಷಯದಲ್ಲಿ ಆಸಕ್ತಿ ವಹಿಸಬೇಕೆಂದು ನುಡಿದರು

ತಿರುವಾಂಕೂರಿನಲ್ಲಿ ೧೦ ಸಾವಿರ ಉಪಾಧ್ಯಾಯರ ಮುಷ್ಕರ

ಬರುವ ತಿಂಗಳು ೧೫ ರಿಂದ ತಿರುವಾಂಕೂರು ಕೊಚ್ಚಿಯ ಸುಮಾರು ೧೦,೦೦೦ ಖಾಸಗೀ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳು ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಅನಿರ್ದಿಷ್ಟ ಕಾಲದ ಮುಷ್ಕರ ಹೂಡಲಿರುವರೆಂದು ವರದಿಯಾಗಿದೆ. ಸರ್ಕಾರಿ ಉಪಾಧ್ಯಾಯರುಗಳ...

ನಗರಕ್ಕೆ ನೇಪಾಳದ ಮಹಾರಾಜರ ಆಗಮನ

ಶ್ರೀಮನ್ಮಹಾರಾಜರವರಿಂದ ಸ್ವಾಗತ

ಮೈಸೂರು ೨೧

ನೇಪಾಳದ ಮಹಾರಾಜಾಧಿರಾಜ ಶ್ರೀಶ್ರೀಶ್ರೀ ಶ್ರೀ ಮಹೇಂದ್ರ ವೀರ ವಿಕ್ರಮ ಷಾ ದೇವರವರು ಮಹಾರಾಣಿ ರತ್ನ ರಾಜ್ಯಲಕ್ಷ್ಮೀ ದೇವಿ ಷಾರವರೊಡನೆ ಈ ದಿನ ... ಗಂಟೆಗೆ ರೈಲಿನಿಂದ ನಗರಕ್ಕೆ ಆಗಮಿಸಿದರು ಅವರನ್ನು ಮೈಸೂರಿನ ರಾಜಪ್ರಮುಖರು ಲಲಿತಮಹಲ್ ಅರಮನೆಯಲ್ಲಿ ಸ್ವಾಗತಿಸಿದರು ಶ್ರೀಮನ್ಮಹಾರಾಜರು ನೇಪಾಳದ ರಾಜರಿಗೆ ಹೂಮಾಲೆಯನ್ನು ಅರ್ಪಿಸಿ, ರಾಣಿಯವರಿಗೆ ಹಾರವನ್ನು ಒಪ್ಪಿಸಿದರು

ಆ ಸಂದರ್ಭದಲ್ಲಿ ಹಾಜರಿದ್ದ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯ, ವಿಧಾನ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣಶೆಟ್ಟಿ, ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ರಂಗರಾವ್, ಪೌರಸಭಾಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿ, ಕಮಿಷನರ್ ಶ್ರೀ ಎನ್ ಲಕ್ಷ್ಮಣರಾವ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣ, ರಾಜಪ್ರಮುಖರ ಆಪ್ತ ಕಾರ್ಯದರ್ಶಿ ಶ್ರೀ ... , ಹುಜೂರು ಕಾರ್ಯದರ್ಶಿ ಶ್ರೀ ಜಿ ಪಿ ಮಲ್ಲಾರಾಧ್ಯ, ಮಹಾರಾಜರ ಸೆಕ್ರೆಟರಿ ... ಶ್ರೀ ಎಲ್ ಮಹದೇವಯ್ಯ, ... ಶ್ರೀ ... ದೇವರಾಜ ಅರಸ್ ಮುಂತಾದವರನ್ನು ಶ್ರೀಮನ್ಮಹಾರಾಜರು ನೇಪಾಳದ ರಾಜರಿಗೆ ಪರಿಚಯ ಮಾಡಿಕೊಟ್ಟರು

ನೇಪಾಳದ ರಾಜರೊಡನೆ ಅವರ ಸಲಹೆಗಾರರಾದ ಸರ್ದಾರ್ ... , ಪ್ರಿನ್ಸಿಪಲ್ ಪರ್ಸನಲ್ ಆಫೀಸರ್ ... , ಎ ಡಿ ಸಿ ಗಳಾದ ... ಮತ್ತು ಎಸ್ ಬಿ ... ಮತ್ತು ಮಹಾರಾಣಿಯವರ ಆಪ್ತ ಸೇವಕಿಯರುಗಳು ಆಗಮಿಸಿರುವರು ಎಲ್ಲರೂ ಲಲಿತ ಮಹಲಿನಲ್ಲಿ ಬಿಡಾರ ಮಾಡಿರುವರು

ಇಂದು ಮಧ್ಯಾಹ್ನ ನೇಪಾಳದ ರಾಜರು ಮೈಸೂರು ... ಸಂಜೆ ಕೃಷ್ಣರಾಜಸಾಗರಕ್ಕೂ ಭೇಟಿಮಾಡುವರು ನಾಳೆ ಗಂಧದೆಣ್ಣೆ ಕಾರ್ಖಾನೆ, ರೇಷ್ಮೆ ಕಾರ್ಖಾನೆ ಮತ್ತು ವೃತ್ತಿ ಶಿಕ್ಷಣಾಲಯಗಳನ್ನು ಸಂದರ್ಶಿಸುವರು

ನಾಳೆ ಸಂಜೆ ... ಗಂಟೆಗೆ ಪ್ರಮುಖರು ಅವರ ಗೌರವಾರ್ಥವಾಗಿ ... ಸ್ವಾಗತ ಸಮಾರಂಭವೊಂದನ್ನೂ, ರಾತ್ರಿ ... ಗಂಟೆಗೆ ಶ್ರೀಮನ್ಮಹಾರಾಜರು ಔತಣ ಕೂಟವನ್ನೂ ಏರ್ಪಡಿಸಿರುವರು ... ಬೆಂಗಳೂರಿಗೆ ಪ್ರಯಾಣ ಬೆಳೆಸುವರು

ಸಂಬಳ ... ಸೇವಾ ನಿಯಮಗಳಂತೆ ... ಎಂದು ... ವರದಿಯಾಗಿದೆ.

ರಾಷ್ಟ್ರ ನಾಯಕರ ನಿರ್ಧಾರ ಸ್ವಾಗತಿಸಬೇಕು

ಸಂಸ್ಥಾನಿಕ ಪ್ರಜೆಗಳಿಗೆ ನಿಜಲಿಂಗಪ್ಪನವರ ಮನವಿ

[illegible]

ಬೊಂಬಾಯಿ ಸಂಸ್ಥಾನದ ವಿಂಗಡಣೆಗೆ ಶಾಸನ ಸಭೆಯಲ್ಲಿ ಸೂಚನೆ

[illegible]

ಭೀಮಾನದಿಯ ಬಳಿ ಸರಬರಾಜು

[illegible]

ದೇವೀರಮ್ಮಣ್ಣಿ ಅಗ್ರಹಾರದಲ್ಲಿ ಕಳವಿನ ಬಂಧನ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿ ಕಳೆದ ... ರಾತ್ರಿ ಮೂವರು ... ಪ್ರಯತ್ನ ... [illegible]

ನಾಟಕ ಸಂಘದ ಆರಂಭ

[illegible]

ಪಾಕಿಸ್ತಾನದೊಳಗೆ ಅಮೆರಿಕ ವಿನಾಶಕಾರರ ಪ್ರವೇಶ ?

ಆಫ್ಘಾನಿಸ್ತಾನದ ... ಪಾಕಿಸ್ತಾನದಲ್ಲಿ ... [illegible]

ಬೆಂಗಳೂರಿಗೆ ಇರ್ಬಸಾದರ ಭೇಟಿ

[illegible]

ಬಾಗ್ದಾದ್ ರಾಷ್ಟ್ರಗಳೊಡನೆ ಅಮೆರಿಕಾ ಒಪ್ಪಂದ

[illegible]

ಕೊಡಗಿನಲ್ಲಿ ಪಾನ ನಿರೋಧ

[illegible]

ಪಾಕಿಸ್ತಾನದಲ್ಲಿ ಅಮೆರಿಕಾ ವಿಮಾನ ನೆಲೆಗಳು

[illegible]

ಬೆಂಗಳೂರಿಗೆ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಭೇಟಿ

ಬೆಂಗಳೂರಿನಲ್ಲಿ ಬರುವ ... ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ... [illegible]

ಮೈಸೂರು ಉಳಿಯಬೇಕೆಂದು ಕುರುಬಗೌಡರ ಸಂಘದ ನಿರ್ಣಯ

[illegible]

ರಾಷ್ಟ್ರಾಧ್ಯಕ್ಷರೊಡನೆ ರಷ್ಯಾ ನಾಯಕರ ಭೇಟಿ

[illegible]

ಷೇಕ್ ಅಬ್ದುಲ್ಲಾ ಸಹಪಾಠಿಯ ಪುನರ್ ಬಂಧನ

[illegible]

ಬಳ್ಳಾರಿಯಲ್ಲಿ ಮತ್ತೆ ... ಜನ ಸತ್ಯಾಗ್ರಹಿಗಳ ಬಂಧನ

[illegible]

ಮಹಾರಾಷ್ಟ್ರ ಪ್ರಾಂತದಲ್ಲಿ ಸೇರಲು ವಿದರ್ಭದ ವಿರೋಧ

[illegible]

ಹೊಸ ಜವಳಿ ಅಂಗಡಿ

ಡಿಂಡಿಗಲ್ ಕೊಳ್ಳೇಗಾಲ ಮಂಗಳೂರು ಕೊಯಮತ್ತೂರು ... ಮತ್ತು ... ದೊರೆಯುತ್ತವೆ

ವಿಜಯ ಹಾಲ್,

ನ್ಯೂ ಸ್ಟ್ಯಾಚ್ಯು ಸರ್ಕಲ್

ಮೈಸೂರು

ವಿದ್ಯಾರ್ಥಿಗಳ ಜೀವನ ಪರಿಶೀಲನೆ

[illegible]

ಕಾರ್ತೀಕ ಮಾಸದ ಪ್ರಯುಕ್ತ ಕಥಾ ...

[illegible]

ಸೈಟುಗಳ ಹರಾಜು ಇಸ್ತಿಹಾರು

[illegible]

ನರ್ಸರಿ ಸ್ಕೂಲ್ ಅಧ್ಯಾಪಕಿಯರ ...

ಶ್ರೀ ಜಗದಂಬಾ ಶಿಶು ವಿಹಾರ

585 ... ಮೈಸೂರು

... 2803 471 5 6 ... 21 9 195... [illegible]

Edited, Printed and Published by A R Nagarajan at Sadhvi Press, D Subbiah Road, Mysore

ಹಾಲು ಕೊಳ್ಳುವವರಿಗೆ ಸುಸಮಯ !

ನಮ್ಮಲ್ಲಿ ಗಟ್ಟಿಯಾದ ಹಾಲನ್ನು ಸುಲಭ ಬೆಲೆಗೆ ನಿಮ್ಮ ಮನೆ ಬಾಗಿಲಿಗೆ ಸರಬರಾಜು ಮಾಡುತ್ತೇವೆ

ತುರುವೇಕೆರೆ ಗಾರ್ಡನ್

ಫೋನ್ ನಂ 392 ಚಾಮುಂಡಿಪುರಂ ಮೈಸೂರು

— ANIMAL TOYS —

TOY PALACE, MYSORE

ಡಿಲಿಕ್ಲೇರ್ ನಂ 792

ಸಂಸ್ಥಾನದ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ ೮೪] SADHVI TUESDAY 22-11-1955 ಮೈಸೂರು ಮಂಗಳವಾರ ೨೨-೧೧-೧೯೫೫ [ಸಂಚಿಕೆ : ೯೪

ಬೊಂಬಾಯಿಯಲ್ಲಿ ಗುಂಡಿನೇಟಿನಿಂದ ೧೦ ಮರಣ

ಬೊಂಬಾಯಿಯಲ್ಲಿ ಪ್ರದರ್ಶನಕಾರರ ಮೇಲೆ ಅನೇಕ ಬಾರಿ ಗುಂಡು

೧೦ ಜನರ ಮರಣ, ೨೩೩ ಮಂದಿಗೆ ಗಾಯ

ಎಸ್ಪ್ಲನೇಡ್ ಮೇಲೆ ೧ ದಿನದ ಮುಷ್ಕರದ ಅವಾಂತರ

ಬೊಂಬಾಯಿ ನಗರದಲ್ಲಿ ನೆನ್ನೆ ಹಿಂಸಾ ಪ್ರವೃತ್ತಿಯ ಜನರ ಗುಂಪುಗಳಿಗೂ ಪೋಲೀಸರಿಗೂ [illegible] ಸಲ ಘರ್ಷಣೆಯಾಗಿ ಪೋಲೀಸರು ಹಲವು ಬಾರಿ ಗುಂಡುಗಳನ್ನು ಹಾರಿಸಿದರು ೧೦ ಜನ ಮೃತಪಟ್ಟು [illegible] ಜನರು ಗಾಯಗೊಂಡರೆಂದು ವರದಿಯಾಗಿದೆ. ಬೊಂಬಾಯಿ ನಗರವನ್ನು ಮಹಾರಾಷ್ಟ್ರದಿಂದ ಪ್ರತ್ಯೇಕಿಸುವ ಏರ್ಪಾಟನ್ನು ಪ್ರತಿಭಟಿಸಲು ನೆನ್ನೆ ವಾಮ ಪಕ್ಷಗಳು ಮತ್ತು ಹಿಂದಾಳಕ ಕಾರ್ಮಿಕ ಸಂಘಗಳು ೧ ದಿನ ಮುಷ್ಕರ ನಡೆಸುವಂತೆ ಕೊಟ್ಟ ಕರೆಯ ಮೇರೆಗೆ [illegible] ಹಲವಾರು ದುರ್ಘಟನೆಗಳು ನಡೆದುವು [illegible]

ಪೋಲೀಸರು ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗ ಮಾಡಿ ಜನರ ಗುಂಪುಗಳನ್ನು ಚದರಿಸುತ್ತಿದ್ದರು. ಕಡೆಯಪಕ್ಷ [illegible] ಬಸ್ಸುಗಳನ್ನು ಸರ್ಕಾರದ [illegible] ಸುಟ್ಟುಹಾಕಲಾಯಿತೆಂದು ಹೇಳಲಾಗಿದೆ.

[illegible] ಜನರಿಗೆ [illegible] ಕಲ್ಲೇಟು [illegible] ಪ್ರಹಾರದಿಂದ ಪೆಟ್ಟು ತಿಂದವರು [illegible] ಗಾಯಗೊಂಡವರಲ್ಲಿ ೧೧ ಜನ ಪೋಲೀಸು ಅಧಿಕಾರಿಗಳು [illegible] ಸ್ಟೇಬಲ್ಲುಗಳು ಮತ್ತು [illegible] ಗಾರ್ಡುಗಳಿರುವರು. [illegible] ಪೋಲೀಸು [illegible] ತೀವ್ರ ಪೆಟ್ಟು ಬಿದ್ದು ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು.

[illegible] ೨೦೦೦ ಜನರು [illegible] ಸಭೆಗೆ ನುಗ್ಗಲು ಪ್ರಯತ್ನ ನಡೆಸಿದಾಗ [illegible] ಜನರು ಮಡಿಯಬೇಕಾಯಿತು.

ಮುಷ್ಕರದ ಸೂಚನೆಯೊಡನೆಯೇ ಬೊಂಬಾಯಿ ಅನೇಕ ಗಿರಣಿಗಳು ಮುಚ್ಚಿದುವು [illegible] ಬಂದಾದುವು ಜನರು [illegible] ಕೂಡಿ ಬಸ್ಸು ಮತ್ತು ಟ್ರಾಂಗಳ ಮೇಲೆ [illegible] ಆ ಪ್ರಕಿ ಪೋಲೀಸರಿದ್ದ [illegible] ಮೇಲೆ ಅವರು ವಿಶೇಷ ಗಮನವಿತ್ತ [illegible] ಮಧ್ಯಾಹ್ನದ ಹೊತ್ತಿಗೆ ಟ್ರಾಂ ಮತ್ತು ಬಸ್ಸುಗಳು ಪೂರ್ಣವಾಗಿ ನಿಂತುವು.

ಮಧ್ಯಾಹ್ನದ ಮೇಲೆ ಘರ್ಷಣೆಯ ಕಾವೇರಿ [illegible] ಅತ್ಯಂತ ಹೆಚ್ಚು ಜನಸಂಚಾರದ ಪ್ರದೇಶದಲ್ಲಿ ವಿಪರೀತ ಗಲಭೆಗಳಾದುವು. ಇಂತಹ ಗಲಭೆಗಳು ಇತ್ತೀಚಿಗೆ ಆಗಿರಲಿಲ್ಲ. [illegible] ಕಿತ್ತು, ಹರಿದ [illegible] ಅಪ್ಪನಾಯುವು ಬಾಧಿಸವಂತೆ [illegible] ಮೇಲೆ ಇಟ್ಟುಕೊಳ್ಳಲಾಗುತ್ತಿತ್ತು. ಮುಖಂಡರು ಪೋಲೀಸರ ಲೌಡ್ ಸ್ಪೀಕರುಗಳ ಮೂಲಕ ಮಾತನಾಡಿ ಜನರು ಚದುರಬೇಕೆಂದು [illegible] ಬಾಂದ್ರಾದಲ್ಲಿ ರೈಲುಗಳಿಗೂ [illegible] ಯಿತು

ಬಂಡೀಪುರಕ್ಕೆ ನೇಪಾಳದ ರಾಜರ ಭೇಟಿ

ನಗರದಲ್ಲಿ [illegible] ಸಂದರ್ಶನ

ಮೈಸೂರು [illegible]

[illegible] ದೊರೆಗಳು [illegible] ಕಾರ್ಯಕ್ರಮ [illegible] ಮುಖ್ಯಮಂತ್ರಿ ಶ್ರೀ ಹನುಮಂತಯ್ಯ [illegible] ಮ್ಯಾನೇಜರ್ ಶ್ರೀ [illegible] ಬಂದರು [illegible]

[illegible] ತರರನ್ನು [illegible] ಶ್ರೀ [illegible] ಜನರಲ್ ಮ್ಯಾನೇಜರ್ ಶ್ರೀ [illegible] ತುಂಗಪ್ಪನವರು [illegible] ಅತಿಥಿಗಳು ಸುಮಾರು [illegible]

ಬೃಂದಾವನದಲ್ಲಿ

ನೇಪಾಳದ ಮಹಾರಾಜರು [illegible] ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಮತ್ತು ಇತರ ಸುಮಾರು [illegible] ಮಂದಿ ನೆನ್ನೆ ಸಂಜೆ [illegible] ಕೃಷ್ಣರಾಜಸಾಗರ ಮತ್ತು ಬೃಂದಾವನಗಳಿಗೆ ಭೇಟಿಯಿತ್ತರು. ಬೃಂದಾವನದ ಬಣ್ಣ ಬಣ್ಣದ ದೀಪ ನೀರಿನ ಫೌಂಟನ್ ಮುಂತಾದುವನ್ನು ನೋಡಿದರು [illegible] ಅಲ್ಲಿನ [illegible] ನೋಡುತ್ತಿದ್ದರು. ರಾತ್ರಿ [illegible] ಗಂಟೆ ನಂತರ ಮೈಸೂರಿಗೆ ಹಿಂದಿರುಗಿದರು.

ವಿಶಾಲಾಂಧ್ರದ ಮಾತುಕತೆಗೆ ತೆಲಂಗಾಣ ನಾಯಕರ ಎಚ್ಚರಿಕೆ

ನಾಳೆ ದಿನ ಕರ್ನೂಲಿನಲ್ಲಿ ವಿಶಾಲಾಂಧ್ರದ ಬಗ್ಗೆ ಆಂಧ್ರ ಮತ್ತು ಹೈದರಾಬಾದು ಕಾಂಗ್ರೆಸ್ ಮುಖಂಡರ ನಡುವೆ ಆರಂಭವಾಗುವ ಮಾತುಕತೆಗಳಲ್ಲಿ ತೆಲಂಗಾಣಾ ಕಾಂಗ್ರೆಸ್ ಮುಖಂಡರಾದ ಜೆ. ಬಿ. ನರಸಿಂಗರಾವ ಡಾ. ಚೆನ್ನಾರೆಡ್ಡಿ ಮತ್ತು ಕೆ. ವಿ. ರಂಗಾರೆಡ್ಡಿಯವರು ಭಾಗವಹಿಸಲು ನಿರಾಕರಿಸಿರುತ್ತಾರೆ. ಹೈದರಾಬಾದು ಮುಖ್ಯಮಂತ್ರಿ ಬಿ. ರಾಮಕೃಷ್ಣರಾಯರು ಮಾತುಕತೆಗಳಲ್ಲಿ ಭಾಗವಹಿಸುವರೆಂದು ಹೇಳಲಾಗಿದೆ.

ಇಂಜನಿಯರುಗಳ ವರ್ಗಾವರ್ಗಿ

ಬೆಂಗಳೂರು [illegible]

ಮೈಸೂರು ಡಿವಿಜನ್ನಿನ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ [illegible] ಕೃಷ್ಣಯ್ಯಂಗಾರ್ಯರನ್ನು [illegible] ಡಿವಿಜನ್ನಿಗೆ ವರ್ಗಾಯಿಸಲಾಗಿದೆ. [illegible] ಸ್ಪೆಷಲ್ ಇಂಜನಿಯರ್ ಶ್ರೀ [illegible] ಬದಲಿ [illegible] ಎಕ್ಸಿಕ್ಯುಟಿವ್ ಇಂಜನಿಯರ್ [illegible] ಗಿರುತ್ತಾರೆ

ಆಫ್ರಿಕಾ ಜೈಲಿನಿಂದ ೪೮೦ ಖೈದಿಗಳ ಪರಾರಿ

[illegible] ಆಫ್ರಿಕೆಯ [illegible] ಜೈಲಿನಲ್ಲಿ [illegible] ಖೈದಿಗಳು [illegible] ಪರಾರಿಯಾದರೆಂದು ವರದಿಯಾಗಿದೆ [illegible] ಖೈದಿಗಳು [illegible] ಮೇಲೆ [illegible] ಪೋಲೀಸರು [illegible] ಗುಂಡಿನ [illegible] ಜೈಲನ್ನು [illegible] ಗೊತ್ತಾಗಿದೆ

ಶಂಕರರಾವ್ ದೇವರ ಐದು ದಿನಗಳ ಉಪವಾಸ

[illegible] ಸಭೆಯು [illegible] ಮಹಾರಾಷ್ಟ್ರ [illegible] ಸಂಯುಕ್ತ ಮಹಾರಾಷ್ಟ್ರ ಪಕ್ಷದ ನಾಯಕರಾದ ಶಂಕರರಾವ್ ದೇವರವರು [illegible] ಮೈದಾನದಲ್ಲಿ [illegible] ದಿನ [illegible] ಪ್ರಾಯಶ್ಚಿತ್ತ [illegible] ಉಪವಾಸವನ್ನು ಆರಂಭಿಸಿರುವರು. ಅಲ್ಲಿ ನಡೆದ [illegible] ಘಟನೆಗಳಿಗಾಗಿ ಅವರು ಮುಖ್ಯಮಂತ್ರಿ ಮುರಾರ್ಜಿ ದೇಸಾಯಿ ಮತ್ತು ಬೊಂಬಾಯಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲ್‌ರವರ ಕ್ಷಮಾಪಣೆ ಕೇಳಿರುವರು

ಬುಲ್ಗಾನಿನ್ ಭೇಟಿಗಾಗಿ ಬೆಂಗಳೂರಿನಲ್ಲಿ ೨೬ ರಂದು ರಜಾ

ಬೆಂಗಳೂರಿಗೆ ಇದೇ ೨೬ನೇ ತಾರೀಕು ಭೇಟಿ ಕೊಡಲಿರುವ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೆವ್‌ರವರ ಗೌರವಾರ್ಥವಾಗಿ ಆ ದಿನ ಅಲ್ಲಿನ ಎಲ್ಲಾ [illegible] ಸಂಸ್ಥೆಗಳಿಗೂ ರಜಾ ಕೊಡಲಾಗಿದೆ

೧೧೦ ಮಂದಿ ಮಹಾರಾಷ್ಟ್ರ ಶಾಸನ ಸಭಾ ಸದಸ್ಯರ ರಾಜೀನಾಮೆ

ಬೊಂಬಾಯಿ ವಿಧಾನ ಸಭೆಯ ೧೦೦ ಮಂದಿ ಮತ್ತು ವಿಧಾನ ಪರಿಷತ್ತಿನ ೧೦ ಮಂದಿ ಮಹಾರಾಷ್ಟ್ರ ಕಾಂಗ್ರೆಸ್ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯಿತ್ತು, ಆ ಬಗ್ಗೆ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಟಿ. ಆರ್. ದೇವಗಿರಿಕರ್‌ರವರಿಗೆ ಪತ್ರಗಳನ್ನು ಒಪ್ಪಿಸಿರುತ್ತಾರೆ. [illegible] ಬೊಂಬಾಯಿ ನಗರದ [illegible] ಮಂದಿ ಸದಸ್ಯರೂ ಇರುವರು. ಅಲ್ಲಿನ [illegible] ಮಂತ್ರಿ ಡಾ|| ಟಿ. ಆರ್. [illegible] ಕೊಟ್ಟಿರುವವರಲ್ಲಿ ಒಬ್ಬರು. ಇತರ ಮಹಾರಾಷ್ಟ್ರ ಸದಸ್ಯರೂ ಒಂದೆರಡು ದಿನಗಳಲ್ಲಿ ರಾಜೀನಾಮೆ ಕೊಡಬಹುದು. ಬೊಂಬಾಯಿ ನಗರವನ್ನು ಮಹಾರಾಷ್ಟ್ರ ಸಂಸ್ಥಾನಕ್ಕೆ ಸೇರಿಸಬೇಕೆಂದು ಒತ್ತಾಯಪಡಿಸಲು ಅವರುಗಳು ಈ ಕ್ರಮ ಕೈಗೊಂಡಿರುವರು

ನೇಪಾಳದ ಅರಸರಿಗೆ ಪೌರಸನ್ಮಾನ ಸಮಾರಂಭದ ಪ್ರಚಾರ

[illegible] ಅರಸರಿಗೆ ಈ ಸಂಜೆ ನಗರ ಪೌರಸಭೆಯವರು ಕೊಡುವ ಪೌರಸನ್ಮಾನದ ಕಾರ್ಯಕ್ರಮವನ್ನು [illegible] ಪ್ರಸಾರ ಮಾಡುವರು [illegible] ಪೌರಸಭೆಯವರು ನಾಳೆ ಏರ್ಪಡಿಸಿರುವ ಸನ್ಮಾನದ ವರದಿಯನ್ನು [illegible] ಪ್ರಸಾರ ಮಾಡಲಾಗುವುದು

ಗೋ ಪ್ರದರ್ಶನ ಮತ್ತು ಎತ್ತುಗಳ ವಿಕ್ರಯೋಗಿ ಸಮಾರಂಭ

[illegible] ಪ್ರದರ್ಶನ ಮತ್ತು [illegible] ಸಮಾರಂಭವನ್ನು ಏರ್ಪಡಿಸಿರುವರು [illegible] ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು. [illegible] ಗಂಟೆಯಿಂದ ಮಧ್ಯಾಹ್ನ [illegible] ರವರೆಗೆ ಪ್ರವೇಶ [illegible] ಗದೆ

ಚಾಮರಾಜನಗರದ ಪೌರಸಭಾ ಸದಸ್ಯರಿಗೆ ಹೈಕೋರ್ಟಿನ ನೋಟೀಸು

ಬೆಂಗಳೂರು [illegible]

ಚಾಮರಾಜನಗರದ ಪೌರಸಭೆಯವರು [illegible] ಇಟ್ಟುಕೊಂಡಿರುವ [illegible] ಸಂದರ್ಭದಲ್ಲಿ [illegible] ನಂಬರನ್ನು [illegible] ಅಲ್ಲಿನ [illegible] ಶ್ರೀ ಆರ್. ಮುನ್ಸ್ವಾಮಿ ಕೃಷ್ಣಯ್ಯನವರು ಹೈಕೋರ್ಟಿನಲ್ಲಿ ಸಲ್ಲಿಸಿದ್ದ [illegible] ಶ್ರೀ ನಿಟ್ಟೂರ್ ಶ್ರೀನಿವಾಸರಾಯರ ಸಮ್ಮುಖದಲ್ಲಿ ಬಂದು ಪೌರಸಭಾ ಸದಸ್ಯರಿಗೆ ಈ ಸಂಬಂಧವಾಗಿ ನೋಟೀಸು ಕೊಡಬೇಕೆಂದು ನ್ಯಾಯಾಧೀಶರು ಸೂಚಿಸಿರುತ್ತಾರೆ

ದ್ವಿತೀಯ ಯೋಜನೆಯಲ್ಲಿ ೩೦೦ ಕೋಟಿ ರೂ. ಉಳಿತಾಯ

ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ವೆಚ್ಚ ಮಾಡಬೇಕೆಂದು ಉದ್ದೇಶಿಸಿರುವ ೫,೪೦೦ ಕೋಟಿ ರೂ ಆದ್ಯಗಳನ್ನು ೩೦೦ ಕೋಟಿ ರೂ. ಗಳಿಗೆ ಇಳಿಸುವುದು ಅಗತ್ಯವೆಂದು ಕೇಂದ್ರ ಯೋಜನಾ ಮಂತ್ರಿ ಗುಲ್ಜಾರಿಲಾಲ್ ನಂದ ರವರು ತಿಳಿಸುತ್ತಾರೆ. ಈ ಅವಧಿಯಲ್ಲಿ ಬರಬಹುದಾದ ದೇಶದ ಸಂಪತ್ತಿನ ವೃದ್ಧಿಯಿಂದ ಕಾರ್ಯಕ್ರಮಗಳನ್ನು ಕಡಿಮೆ ಮಾಡಬೇಕಾಗಿರುವುದೆಂದೂ, ಇತರ ಕಾರಣಗಳಿಗಲ್ಲವೆಂದೂ ಅವರು ಹೇಳಿರುವರು

ಇಸ್ರೇಲ್-ಈಜಿಪ್ಟ್ ರಾಜ್ಯದ ನಡುವೆ ಟಿಟೊ ಮಧ್ಯಸ್ತಿಕೆ

ಇಸ್ರೇಲ್ ಮತ್ತು ಈಜಿಪ್ಟಿಗೆ ನಡುವೆ ವಿವಾದದಲ್ಲಿ ಮಧ್ಯಸ್ತಿಕೆ ವಹಿಸಲು ಯುಗೊಸ್ಲೇವಿಯಾ ಅಧ್ಯಕ್ಷ ಮಾರ್ಷಲ್ ಟಿಟೋರವರನ್ನು ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್ ರು ಪ್ರಾರ್ಥಿಸಲಾಗಿ ಟಿಟೋರವರು ಒಪ್ಪಿರುವರೆಂದು ವರದಿಯಾಗಿದೆ. ಎರಡು ರಾಷ್ಟ್ರಗಳೊಡನೆಯೂ ಟಿಟೋರವರು ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡಿರುವರು.

ಬೆಂಗಳೂರಿಗೆ ಕರ್ನಾಟಕ ವಿರೋಧಿಗಳ ತಂಡ

ಮೈಸೂರನ್ನು ದ್ವೈಭಾಷಿಕ ಬೊಂಬಾಯಿ ಪ್ರದೇಶದಿಂದ ಪ್ರತ್ಯೇಕಿಸಲಾಗುತ್ತಿರುವ ಚಳುವಳಿಯ ಸಂಬಂಧವಾಗಿ ಈ ತಿಂಗಳ ೨೬ನೇ ತಾರೀಕು ಬೆಂಗಳೂರಿಗೆ ಇಲ್ಲಿಂದ ತಂಡವೊಂದು ಹೋಗಲಿದೆಯೆಂದೂ, ಕರ್ನಾಟಕ ಪ್ರಾಂತ ರಚನೆ ಬಗ್ಗೆ ಸಂಘದ ನಿರ್ಧಾರಗಳನ್ನು ಪ್ರತಿಭಟಿಸುವುದೇ ಅವರ ಉದ್ದೇಶವೆಂದೂ ಗೊತ್ತಾಗಿದೆ. ತಂಡದವರು ಬೆಂಗಳೂರಿಗೆ ರೈಲಿನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವ ಕಾರ್ಯಕ್ರಮವನ್ನಿಟ್ಟುಕೊಂಡಿರುತ್ತಾರೆ

ಕಾಸರಗೋಡು ಮತ್ತು ನೀಲಗಿರಿ ಕರ್ನಾಟಕಕ್ಕೆ ಸೇರಬೇಕು

ಗಡಿ ಪ್ರಾಂತ್ಯದ ತಾಲ್ಲೂಕು ಕಾಸರಗೋಡು ಪ್ರದೇಶ ಮತ್ತು ನೀಲಗಿರಿ ಜಿಲ್ಲೆಯನ್ನು ಕರ್ನಾಟಕ ಪ್ರಾಂತದಲ್ಲಿ ಸೇರಿಸಬೇಕೆಂದು ಕೇಂದ್ರ ಸರ್ಕಾರದವರಲ್ಲಿ ಅರಿಕೆ ಮಾಡಲು ಮೈಸೂರಿನಿಂದ ಇಲ್ಲಿನ ... ರಾಜ್ಯ ನಿರ್ಮಾಣ ಕ್ರಿಯಾ ಸಮಿತಿಯ ಪರವಾಗಿ ದೆಹಲಿಗೆ ನಿಯೋಗವೊಂದು ಈ ತಿಂಗಳು ೨೬ನೇ ತಾರೀಕು ಹೋಗಲಿದೆ. ನಿಯೋಗದಲ್ಲಿ ... ಮುಖಂಡರು ಇರುವರೆಂದು ಸಮಿತಿಯ ಕಾರ್ಯದರ್ಶಿಗಳು ತಿಳಿಸಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಸರ್ಕಾರಿ ಸ್ಕೂಲ್ ಅಧ್ಯಾಪಕಿಯರ ಶಿಕ್ಷಣ

ಶ್ರೀ ಜಗದಂಬಾ ಶಿಶು ವಿಹಾರ,

585 ದಿವಾನ್ಸ್ ರೋಡ್, ಮೈಸೂರು.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರ್‌ರವರ ಆಫೀಸ್ ನೋಟೀಸ್ ನಂ ... 2803-471/55 56 ಮತ್ತು ಸ. ಉ. ನಂ. 49 ಬೆಂಗಳೂರು ತಾರೀಕು 21-9-1955ರ ಆಜ್ಞಾನುಸಾರ ಶ್ರೀ ಜಗದಂಬಾ ಶಿಶು ವಿಹಾರದ ಆಶ್ರಯದಲ್ಲಿ ... ಸರ್ಕಾರಿ ಸ್ಕೂಲುಗಳ ಉಪಾಧ್ಯಾಯಿನಿಯರ ಶಿಕ್ಷಣ ಶಿಬಿರವನ್ನು ... ನಡೆಸಲಾಗುವುದೆಂದು ತಿಳಿಸಲಾಗಿದೆ

ಡಿ. ಕೃಷ್ಣಮಾಚಾರಿ,
ಡೈರೆಕ್ಟರ್

ಫಿಲಿಪ್ಪೈನ್ ದಂಪತಿ ಕೊಲೆ ಬಗ್ಗೆ ಸಂಬಂಧಿಕನ ಬಂಧನ

ಭಾರತ ವಿಶ್ವಶಾಂತಿ ಕಾರ್ಯದರ್ಶಿ ೩ ಕರ್ನಲ್ ಫಿಲಿಪ್ಸ್ ಮತ್ತು ಅವರ ಪತ್ನಿಯವರ ಕೊಲೆ ಸಂಬಂಧದಲ್ಲಿ ಫಿಲಿಪ್ಸರ ಸೋದರಳಿಯನೊಬ್ಬನನ್ನು ಬಂಧಿಸಿರುವುದಾಗಿ ಗೊತ್ತಾಗಿದೆ

ನಕ್ಷಗಿರಿಬಾದಿನ ನಿವಾಸಿ ಮನೋಹರ ಸಾಟಿಂಗ್ ಎಂದು ಹೇಳಲಾಗಿದೆ. ಅವನ ಸಹಚರ ರಾಮಪ್ರಕಾಶ ಎಂಬುವನು ದಂಪತಿಗಳ ಕೊಲೆ ವಿಷಯದಿಂದ ಪರಾರಿಯಾಗಿರುವುದಾಗಿಯೂ ಹೇಳಲಾಗಿದೆ. ಫಿಲಿಪ್ಸರ ಮನೆಯಲ್ಲಿ ಇವನು ಕೆಲಸ ಮಾಡುತ್ತಿದ್ದನೆಂದು ತಿಳಿದುಬಂದಿದೆ. ಫಿಲಿಪ್ಸ್‌ರವರ ಬಂದೂಕವು ಮನೋಹರ ಸಾಟಿಂಗನ ಬಳಿ ಇತ್ತೆಂದೂ, ಅದರಿಂದಲೇ ಅವನು ಹೊಡೆದನೆಂದೂ ಹೇಳಲಾಗಿದೆ. ಪೋಲೀಸರು ಬಂದೂಕವನ್ನು ವಶಪಡಿಸಿಕೊಂಡಿರುತ್ತಾರೆ. ಫಿಲಿಪ್ಸ್ ದಂಪತಿಗಳ ಜೊತೆಗೆ ಅವರ ನಾಯಿಯೂ ಕೊಲ್ಲಲ್ಪಟ್ಟಿದೆ

ಭೂ ಸಮಾಧಿಯಲ್ಲಿ ೧೦ ದಿವಸ ಇದ್ದ ಸಾಧು

ದೆಹಲಿ ಬಳಿ ಯಮುನೆಯ ದಡದಲ್ಲಿ ೧೦ ದಿನಗಳವರೆಗೆ ಭೂಮಿಯಲ್ಲಿ ಹುದುಗಿದ್ದ ೩೦ ವರ್ಷದ ಸಾಧುವೊಬ್ಬನನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಮೇಲಕ್ಕೆ ತರಲಾಯಿತು. ಅವನು ೧೦ ನೇ ತಾರೀಕು ೯ ಅಡಿ ಆಳದ ಗುಹೆಯೊಳಗೆ ಪ್ರವೇಶಿಸಿ, ೧೦ ದಿವಸ ನಂತರ ಮೇಲಕ್ಕೆತ್ತುವಂತೆ ಪೋಲೀಸರಿಗೆ ತಿಳಿಸಿದ್ದನು. ಹೊರಕ್ಕೆ ಬಂದ ೧ ಗಂಟೆಯ ಮೇಲೆ ಅವನಿಗೆ ಪ್ರಜ್ಞೆಯುಂಟಾಯಿತು

ವಯಸ್ಕರ ಶಿಕ್ಷಣ ವಿದ್ಯಾರ್ಥಿಗಳ ಸಭೆ

ಚಾಮರಾಜನಗರದ ಹರಿಜನ ಕಾಲೋನಿಯ ಶ್ರೀ ರಾಮಮಂದಿರದಲ್ಲಿ ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ ವ್ಯವಸ್ಥಾಪಕರಾದ ಶ್ರೀ ಕೆ ಎಸ್ ಮುನಿಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ಸಭೆ ಸೇರಿದ್ದಿತು. ಶ್ರೀ ಎಸ್ ಎಲ್. ಮಹದೇವಯ್ಯನವರಿಂದ ದೇವತಾ ಪ್ರಾರ್ಥನೆಯಾದನಂತರ ಶ್ರೀ ಬಿ ಸಿದ್ದಯ್ಯನವರಿಂದ ಸ್ವಾಗತ ಭಾಷಣವಾಯಿತು. ಗಮಕಿ ಶ್ರೀ ಆರ್ ಕೆ. ರಾಜಗೋಪಾಲ್‌ರವರಿಂದ ಕಾವ್ಯ ವಾಚನವೂ, ಶ್ರೀ ಎಸ್ ಎಲ್ ಮಹದೇವಯ್ಯನವರಿಂದ ಜನಪದ ಗೀತೆಯೂ, ಶ್ರೀ ಸೂರ್ಯನಾರಾಯಣರಿಂದ ಹರಿಜನೋದ್ಧಾರ ಭಾವನೆಯೂ ಶ್ರೀ ವೆಂಕಟರಾಮಯ್ಯಂಗಾರ್‌ರವರಿಂದ ಉಪನ್ಯಾಸವೂ ನಡೆಯಿತು

ಶ್ರೀ ಎಸ್. ಸಿದ್ದಯ್ಯನವರಿಂದ ವಂದನಾರ್ಪಣೆಯಾಯಿತು. ರಾಷ್ಟ್ರಗೀತೆಯಾದನಂತರ ಸಭೆಯು ಮುಕ್ತಾಯವಾಯಿತು.

SREE GAYATHRI
TALKIES
From 22 11 55
M G.M's
WHISTLING IN DIXIE
With – Red Skelton

ಸೈಟುಗಳು ಬೆಲೆಗೆ

ಯಾದವಗಿರಿ

85×70	—	ರೂ. 2,000
120×45	—	ರೂ. 2,000

ಲಕ್ಷ್ಮೀಪುರಂ

72×75	—	ರೂ. 6,000
72×55	—	ರೂ. 4,500
72×75'	—	ರೂ. 5,000

ಚಾಮುಂಡಿಪುರಂ

60×45	—	ರೂ. 1,250
60'×45'	—	ರೂ. 1,400

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲಾ ಬಳಿ, ಮೈಸೂರು

Edited, Printed and Published by A K Nagarajan at Sadhvi Press, D Subbiah Road, Mysore

ಗಲ್ಲಿಗೇರುವವನ ಬದಲು ಪ್ರಾಣ ಕೊಡಲು ಹೊರಟ ಬೌದ್ಧ ಭಿಕ್ಷು

ಸಿಂಹಳದಲ್ಲಿ ಒಬ್ಬ ಹೆಂಗಸಿನ ಕೊಲೆಗಾಗಿ ಮರಣ ದಂಡನೆಗೆ ಗುರಿಯಾದ ೨೬ ವರ್ಷದ ಎರಿಕ್ ವಾಲ್ಟರ್ ಬಟಿಸ್ಟ ಎಂಬುವನನ್ನು ಬೌದ್ಧಮತಕ್ಕೆ ಪರಿವರ್ತಿಸುವ ಉದ್ದೇಶದಿಂದ ಕೊಲಂಬೋವಿನ ಒಬ್ಬ ಯುವಕ ಬೌದ್ಧ ಸನ್ಯಾಸಿಯು ಅಪರಾಧಿಯ ಬದಲು ತನ್ನ ಪ್ರಾಣವನ್ನು ತೆಗೆಯಬಹುದೆಂದು ತಿಳಿಸಿರುತ್ತಾನೆ. ಅತನು ಅಲ್ಲಿನ ಕ್ರಿಮಿನಲ್ ಅಪೀಲು ಕೋರ್ಟಿಗೆ ಮೇಲ್ಕಂಡ ಪ್ರಾರ್ಥನೆ ಸಲ್ಲಿಸಲಾಗಿ, ಕೋರ್ಟಿನವರು ಅಪರಾಧಿತನನ್ನು ಪುನಃ ವಿಚಾರಣೆ ಮಾಡುವಂತೆ ಆಜ್ಞಾಪಿಸಿರುವರು.

ನಗರದಲ್ಲಿ ಸ್ಥಾನೀಯ ಅಭ್ಯಾಸದ ಬಗ್ಗೆ ಸರ್ವೆ

ಕಲ್ಕತ್ತೆಯ ಟೀ ಬೋರ್ಡಿನ ಅಂಕಿಅಂಶಗಳ ಶಾಖೆಯ ಸಿಬ್ಬಂದಿಯವರು ನಗರದಲ್ಲಿ ಸೆಪ್ಟೆಂಬರ್ ೨ ರಿಂದ ಕಳೆದ ೧೫ ರ ವರೆಗೆ, ಜನರಲ್ಲಿ ಟೀಯ ಅಭ್ಯಾಸದ ಬಗ್ಗೆ ಮಾದರಿ ಸರ್ವೆ ನಡೆಸಿರುತ್ತಾರೆ. ಅದರ ಬಗ್ಗೆ ಶೀಘ್ರದಲ್ಲೇ ಪ್ರಕಟಣೆಯಾಗಲಿದೆ. ಯಾವಯಾವ ಗುಂಪಿನವರು ಎಂತಹ ಪ್ರವೃತ್ತಿಯುಳ್ಳವರೆಂಬುವನ್ನೂ, ಅವರ ವರಮಾನ, ಅಕ್ಷರತೆ, ವರ್ತಮಾನ ಪತ್ರಿಕೆ ಓದುವ ಅಭ್ಯಾಸ ಟೀ ಅಥವಾ ಕಾಫಿ ಸೇವನೆಯ ಅಭ್ಯಾಸ ಈ ವಿಷಯಗಳ ... ಮುಂತಾದ ವಿಷಯಗಳನ್ನು ಸರ್ವೆಯು ಹೊರಗೆಡಹಲಿದೆ

೨೬ನೇ ತಾರೀಕು ಸಂಸ್ಥಾನದಲ್ಲೆಲ್ಲಾ ರಜಾ ಕೊಡಬೇಕೆಂದು ಮನವಿ

ಇದೇ ತಿಂಗಳು ೨೬ನೇ ತಾರೀಕು ಬೆಂಗಳೂರಿಗೆ ರಷ್ಯದ ನಾಯಕರಾದ ಬುಲ್ಗಾನಿನ್ ಮತ್ತು ಕ್ರುಶ್ಚೇವ್ ರವರು ಆಗಮಿಸುವಾಗ ಅವರುಗಳ ದರ್ಶನ ಪಡೆಯಲು ಮತ್ತು ಅವರಿಗೆ ಕೊಡಲಾಗುವ ಸ್ವಾಗತದಲ್ಲಿ ಜನಸಾಮಾನ್ಯರು ಭಾಗವಹಿಸಲು ಬೆಂಗಳೂರಿನಲ್ಲಿ ಕೊಟ್ಟಂತೆಯೇ ಸಂಸ್ಥಾನದ ಎಲ್ಲಾ ಕಡೆಯೂ ರಜಾ ಕೊಡಬೇಕೆಂದು ನಗರದ ವಕೀಲರುಗಳ ಸಂಘದ ಅಧ್ಯಕ್ಷ ಶ್ರೀ ಹೆಚ್ ಸುಬ್ಬರಾಯರು ಕೋರಿರುತ್ತಾರೆ

ಮೈಸೂರು ಪೇಟೆ ಧಾರಣೆ

	ರೂ.	ಆಣೆ		ರೂ.	ವರೆಗೆ	
ಕಡಲೆಕಾಯಿ	೧೦	೮	೦	೧೪	೨	೦
ಹರಳುಬೀಜ	೨೪	೦	೦	೨೮	೨	೦
ಹುರುಳಿ	೩೨	೪	೦	೩೮	೦	೦
ಹೆಸರು	೩೧	೦	೦	೪೧	೬	೦
ಹಲಸಂದೆ	೩೦	೨	೦	೪೭	೮	೦
ತೊಗರಿ	೪೬	೪	೦	೩೦	೮	೦
ಕಡಲೆಬೀಜ	೨೪	೮	೦	೨೮	೬	೦
ಸೀಗೆಕಾಯಿ	೫	೪	೦			
ಮೆಣಸಿನಕಾಯಿ	೨	೧೨	೦	೨	೧೫	೦
ಬೆಲ್ಲ	೩	೪	೦	೧೫	೧೪	೦
ಬೆಲ್ಲ	೨	೮	೦	೨	೧೦	೦
ತೆಂಗಿನಕಾಯಿ ೧,೦೦೦ ಕ್ಕೆ	೧೩೦	೦	೦	೨೦೦	೦	೦

SREE GANESH
TALKIES
To-day & To-morrow Only
ABBOT & COSTELLO MEET THE KEYSTONE KOPS
From 24 11-55 For 2 Days
PRE-HISTORIC WOMEN
(In Cine Color)
From 26 11-55 Daily 3 Shows
DOCTOR IN THE HOUSE
(Technicolor)

ಬೊಂಬಾಯಿ ಶಾಸನ ಸಭಾ ವಿರೋಧ ಸದಸ್ಯರ ರಾಜೀನಾಮೆ

ಬೊಂಬಾಯಿ ಶಾಸನ ಸಭೆಯ ವಿರೋಧಪಕ್ಷದ ಸದಸ್ಯರು ಸಂಯುಕ್ತ ಮಹಾರಾಷ್ಟ್ರಕ್ಕೆ ಬೊಂಬಾಯಿ ನಗರವನ್ನು ಸೇರಿಸದೆ ಇರುವ ... ಮೇಲೆ ರಾಜೀನಾಮೆ ಕೊಡಲು ಸಿದ್ಧವಾಗಿರುವುದಾಗಿ ನೌಷಿರ್ ಬರೂಚಾರವರು ತಿಳಿಸಿರುತ್ತಾರೆ. ಬೊಂಬಾಯನ್ನು ಪ್ರತ್ಯೇಕ ಸಂಸ್ಥಾನವಾಗಿ ಪರಿವರ್ತಿಸುವುದಕ್ಕೆ ಎಲ್ಲ ವಿಧವಾದ ... ಶಾಸನಾತ್ಮಕ ರೀತಿಯಲ್ಲೂ ಪ್ರತಿಭಟಿಸಲಾಗುವುದೆಂದು ಅವರು ಹೇಳಿರುವರು

ವಿವಾಹ ಮಹೋತ್ಸವಗಳು

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ ಬಿ. ಎಲ್ ರಾಮಸ್ವಾಮಿಶೆಟ್ಟರು ತಮ್ಮ ಸಹೋದರ ಶ್ರೀ ಬಿ ಎಲ್ ಗೋಪಾಲಕೃಷ್ಣಶೆಟ್ಟರವರ ಪುತ್ರಿ ಸೌ॥ ಸರೋಜಮ್ಮನನ್ನು ಬೆಂಗಳೂರಿನ ವರ್ತಕರಾದ ಶ್ರೀ ಜಿ. ಕೃಷ್ಣಯ್ಯಶೆಟ್ಟರ ... ಪುತ್ರ ಶ್ರೀ ಜಿ ಸೀತಾರಾಂರವರಿಗೆ ಕೊಟ್ಟು ... ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಹುಣಸೂರಿನ ಸಾಗುವಾನಿ ವ್ಯಾಪಾರಿಗಳಾದ ಶ್ರೀ ಎಸ್ ಎಲ್ ವಿ ಲಕ್ಷ್ಮಣಗುಪ್ತರವರು ತಮ್ಮ ಕುಮಾರಿ ಸೌ॥ ತಾರಾದೇವಿಯನ್ನು ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್ ಶ್ರೀ ಕೆ ವಿ ಕೇಶವಮೂರ್ತಿ ಶೆಟ್ಟಿಯವರಿಗೆ ಕೊಟ್ಟು, ನೆನ್ನೆ ಹುಣಸೂರಿನಲ್ಲಿ ವಿವಾಹವನ್ನು ಜರುಗಿಸಿದರು

ಧಳಕಿನ ಸರ ಕಳೆದುಹೋಗಿರುವುದು

ಕಳೆದ ೧೧ನೇ ತಾರೀಕು ಶನಿವಾರ ಬೆಳಿಗ್ಗೆ ೧೧-೩೦ ಘಂಟೆ ಸಮಯದಲ್ಲಿ ಎಂ ಹೆಚ್ ಶ್ರೀನಿವಾಸಯ್ಯನವರ ಮಗಳು ಭಾಗಮ್ಮ ಎಂಬ ಹುಡುಗಿಯ ಕತ್ತಿನಲ್ಲಿ ಹಾಕಿದ್ದ ಬಂಗಾರದ ಧಳಕಿನ ಸರವು ಕಳೆದುಹೋಗಿರುತ್ತೆ. 6 ತೊಲ ... ಎರಡು ಎಳೆ ಧಳಕಿನ ಸರ ... ಮಧ್ಯದಲ್ಲಿ ತಾಲಿ ಕೊಂಡಿ ಇದೆ. ಯಾರಿಗಾದರೂ ಇದು ಸಿಕ್ಕಿದ್ದಲ್ಲಿ, ತಂದುಕೊಟ್ಟರೆ ಸೂಕ್ತ ಬಹುಮಾನವೀಯಲಾಗುತ್ತೆ

ಎಂ. ಹೆಚ್ ಶ್ರೀನಿವಾಸಯ್ಯ,
ಡೋರ್ ನಂ 863, ನಾರಾಯಣಶಾಸ್ತ್ರಿ ರಸ್ತೆ ಕೆ ಆರ್. ಮೊಹಲ್ಲಾ, ಮೈಸೂರು

ಬುದ್ಧಿವಂತರಾಗಲೀ, ಬಂದೂಕವಾಗಲೀ ಗುರಿ ತಪ್ಪಬಹುದು !
ಸೂರ್ಯನು ಪಶ್ಚಿಮದಲ್ಲಿ ಉದಯಿಸಬಹುದು
ಆದರೆ
೩೦ ವರ್ಷ ಸಾಧನೆಯ ಅವಧಿಯ
ನೂತನ ಮತ್ತು ಅದ್ಭುತ ಚಿಕಿತ್ಸೆಯು
ನಿಮ್ಮ ನಿರಾಶೆಗಳೆಲ್ಲವನ್ನೂ ಹರ್ಷವಾಗಿ ಪರಿವರ್ತಿಸಲು ತಪ್ಪುವುದಿಲ್ಲ
ಅದ್ಭುತವಾದ ಹೊಸ ಶಾಮಗ್ರಿ, ಅದ್ಭುತ ಶಕ್ತಿ ... ಆನಂದದ ಆರೋಗ್ಯ ಹೊಂದಲು ಈ ಪ್ರಸಿದ್ಧ ... ತಜ್ಞರ ಪ್ರವೀಣರನ್ನು ಭೇಟಿ ಮಾಡಿ
ಡಾ॥ ಎ. ವಿ. ರಾವ್
ಅವರ ಯಶಸ್ವಿಯಾದ ಚಿಕಿತ್ಸೆ ಅನುಭವವು ನಿಮ್ಮ ಕಾಲ, ಆರೋಗ್ಯ ಮತ್ತು ಹಣವನ್ನು ಕಾಯ ಮಾಡಿಕೊಳ್ಳುತ್ತದೆ ... ನಿಮ್ಮ ಬಾಳ್ವೆಯು, ವೈದ್ಯರು ಮತ್ತು ಹಕೀಮರಿಗೆ ಹಣ ವ್ಯಯ ಮಾಡುವುದರಿಂದ ತಪ್ಪಿಸುತ್ತದೆ
ಭೇಟಿಯ ಕಾಲ : ಬೆಳಿಗ್ಗೆ 8 ರಿಂದ ಮಧ್ಯಾಹ್ನ ಸಂಜೆ 4 ರಿಂದ 8
ರಾಣಾ ಮೆಡಿಕಲ್ ಹಾಲ್,
ಎಲ್ ನಂ 1-745. ಅಶೋಕಾ ರಸ್ತೆ ಚಿಕ್ಕ ಗಡಿಯಾರ ಸರ್ಕಲ್, ಮೈಸೂರು
(ಮೈಸೂರು ಬ್ಯಾಂಕ್ ಬಳಿ ... ಹೋಗುವ ರಸ್ತೆ)

ಚಾಮುಂಡೇಶ್ವರಿ ಟಾಕೀಸ್
23 11 55 ರಿಂದ ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು
ಜಯರಾಜ್ ಫಿಲಂಸ್‌ರವರ ಮಹೋನ್ನತ ಕನ್ನಡ ಪೌರಾಣಿಕ ಚಿತ್ರ
ಭಕ್ತ ಮಲ್ಲಿಕಾರ್ಜುನ
ಪಾತ್ರ:- ಪಂಢರಿಬಾಯಿ, ಅಮರನಾಥ್, ರಾಘವೇಂದ್ರರಾವ್ ಬಾಲಕೃಷ್ಣ
ಎಲ್ಲ ವಿಧವಾದ ಕಾಂಪಿಟೇಷನ್ ಮತ್ತು ಫ್ರೀ ಪಾಸುಗಳನ್ನು 4 ವಾರ ಮುನ್ನ ಮಾಡಲಾಗಿದೆ

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಒಂದು ಪ್ರತಿಗೆ 3 ಕಾಸು

ಚಂದಾ ದರ — ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ; ಅಂಚೆ ಮೂಲಕ ತಿಂಗಳಿಗೆ ಒಂದು ರೂ.; ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಪು: ೧೯] SADHVI : WEDNESDAY 23-11-1955 ಮೈಸೂರು ಬುಧವಾರ ೨೩-೧೧-೧೯೫೫ [ಸಂಚಿಕೆ : ೯೯

ಮಹಾರಾಷ್ಟ್ರ ಶಾಸನಸಭಾಸದರ ರಾಜೀನಾಮೆ ವಾಪಸು

...ಷ್ಟ್ರದ ಪ್ರಗತಿಗೆ ಪ್ರಜೆಗಳು ಮತ್ತು ಪ್ರಭುತ್ವದ ಸಹಕಾರ ಅಗತ್ಯ

ಪೌರಸಭಾ ಸ್ವಾಗತ ಸಮಾರಂಭದಲ್ಲಿ ನೇಪಾಳದ ಮಹಾರಾಜರ ಭಾಷಣ

ಮೈಸೂರು ೨೩

...ನ ಪೌರಸಭೆಯವರು ನೆನ್ನೆ ಸಂಜೆ ಟೌನ್ ...ಲ್ಲಿ, ನೇಪಾಳದ ಮಹಾರಾಜರಾದ ಮ... ...ವಿಕ್ರಮ ಷಾ ದೇವರವರ ಗೌರವಾರ್ಥ ...ರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ, ...ನ ಮಹಾರಾಜರು ಭಾಷಣ ಮಾಡಿ, ...ಪ್ರಗತಿಗೆ ರಾಜ್ಯಭಾರ ನಡೆಸುವವರ ಪ್ರ... ...ಯೋಭಾವ ಮತ್ತು ಪ್ರಜೆಗಳ ಸುಮುಖ ...ಸಹಕಾರಗಳು ಅಗತ್ಯವೆಂದು ನುಡಿದರು ...ನಲ್ಲಿ ಇದು ವಿಶೇಷವಾಗಿ ಕಂಡುಬಂದು ...ಸಂಸ್ಥಾನದ ಬೆಳವಣಿಗೆಗೆ ಹೆಚ್ಚು ಸಾ... ...ರುವುದಾಗಿಯೂ ಅವರು ಹೇಳಿದರು ...ತ ಮತ್ತು ನೇಪಾಳಗಳ ನಡುವೆ ಬಹು ...ದಲೂ ಸಾಂಸ್ಕೃತಿಕ ಸಂಬಂಧ ಮತ್ತು ...ವುವುದೆಂದೂ, ಇತ್ತೀಚೆಗೆ ಈ ಬಾಂಧ... ...ವ್ಯ ನಿಕಟವಾಗಿರುವುದಾಗಿಯೂ ಅವ...ನರು. ದಕ್ಷಿಣ ಭಾರತಕ್ಕೂ, ನೇಪಾಳ... ...ಕ್ಕೂ ಹೆಚ್ಚಿನ ಸಂಪರ್ಕವಿರುವುದೆಂದೂ, ...ನೇಕ ಜನರು ನೇಪಾಳಕ್ಕೆ ಯಾತ್ರೆ... ...ಬರುತ್ತಿರುವರೆಂದೂ, ತಮ್ಮ ರಾಜಧಾ...ನಿಯ ಪಶುಪತಿನಾಥ ದೇವಾಲಯ... ...ಭಾರತದವರೇ ಅರ್ಚಕರಾಗಿ ನೇಮಿ...ಸುವರೆಂದೂ, ಈ ಕಾರಣಗಳಿಂದ ಎರ...ಡು ...ಗಳಿಗೂ ಸಾಂಸ್ಕೃತಿಕ ಸಂಬಂಧವು ...ನಿಕಟವಾಗಿರುವುದಾಗಿಯೂ ಅವರು ನು...

...ರು ಪಟ್ಟಣದ ಪ್ರಗತಿಯನ್ನು ಪ್ರಸ್ತಾ...ಪಿಸಿ ...ಗೆ ಚಿಕ್ಕಂದಿನಿಂದಲೂ ಸುಂದರವಾದ ...ಕ್ಕೆ ಭೇಟಿ ಕೊಡಬೇಕೆಂಬ ಆಶಯವಿದ್ದು ...ಪ್ರ ನಡಿಸಿದರು ಕೃಷ್ಣರಾಜಸಾಗರದಲ್ಲಿ ...ಜೋದ್ದೇಶಯೋಜನೆಯನ್ನು ಶ್ಲಾಘಿಸಿ, ...ಲ್ಲಿ ಇಂತಹ ಅನೇಕ ಯೋಜನೆಗಳು ಈ...ಗ ...ಲ್ಪಟ್ಟಿದ್ದರೂ, ಕೃಷ್ಣರಾಜಸಾಗರವು ...ಲ್ಲಿ ಮೊದಲು ನಿರ್ಮಾಣವಾಗಿ, ಸ್ಥ... ...ಜನಿಯರುಗಳೇ ಅದನ್ನು ಪೂರೈಸಿರು... ...ಅದಕ್ಕೆ ವಿಶೇಷ ಮಹತ್ವವಿರುವುದೆಂ...ದರು

...ನ ದೊರೆಯವರು ತಮ್ಮ ಪತ್ನಿ ರಾಣಿ ...ಲಕ್ಷ್ಮೀದೇವಿ ಷಾ ಮತ್ತು ಮೈಸೂರು ...ರೊಡನೆ ಟೌನ್ ಹಾಲಿಗೆ ಆಗಮಿಸಿ...ದನ್ನು ಪುರಸಭಾಧ್ಯಕ್ಷರು, ಉಪಾಧ್ಯ... ...ಶಾಸನದರು ಮತ್ತು ಸದಸ್ಯರು ಸ್ವಾಗ... ...ಪೌರಸಭಾಧ್ಯಕ್ಷರು ಎಲ್ಲ ಸದಸ್ಯರ ಪ...ರಿಚಯ ಮಾಡಿಕೊಟ್ಟರು.

...ಅನೇಕ ಗಣ್ಯ ಮಹನೀಯರೂ, ಮು... ...ಸಭೆಯಲ್ಲಿ ಭಾಗವಹಿಸಿದ್ದರು ಮು... ...ಶ್ರೀ ಹನುಮಂತಯ್ಯನವರೂ, ಪ್ರದೇ...ಶ ...ಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವ... ...ವಹಿಸಿದ್ದರು.

...ಗಿರಿಜಮ್ಮನವರಿಂದ ದೇವತಾ ಪ್ರಾ... ...ನಂತರ, ಮಹಾರಾಣಿ ಕಾಲೇಜಿನ

ನೇಪಾಳದ ಬಗ್ಗೆ ಶ್ರೀಮನ್ಮಹಾರಾಜರ ಪ್ರಶಂಸೆ

ಮೈಸೂರು ೨೩

ರಾಜಪ್ರಮುಖರು ನೆನ್ನೆ ಲಲಿತಮಹಲ್ಲಿನಲ್ಲಿ ನೇಪಾಳದ ಮಹಾರಾಜರ ಗೌರವಾರ್ಥವಾಗಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಭಾಷಣ ಮಾಡಿ, ಆ ದೇಶವು ಹಿಂದಿನಿಂದಲೂ ಸ್ವತಂತ್ರ ರಾಜ್ಯವಾಗಿರುವುದೆಂದೂ, ಅಲ್ಲಿನವರು ಸ್ವಾತಂತ್ರ್ಯ ಪ್ರಿಯರೆಂದೂ, ಅವರು ಬೇರೆ ಜನಾಂಗದವರಾದರೂ ಭಾರತಕ್ಕೆ ಸಹೋದರರಾಗಿರುವರೆಂದೂ ನುಡಿಯುವಾಗ ಪರಿಚಯವಾಗಿದೆ ಎರಡು ರಾಷ್ಟ್ರಗಳ ಸಂಬಂಧವು ಚರಿತ್ರೆಯಷ್ಟೇ ಪುರಾತನವಾದುದೆಂದೂ, ಇತರ ರಾಷ್ಟ್ರಗಳಿಗಿಂತಲೂ ಭಾರತವು ನೇಪಾಳದೊಡನೆ ಹೆಚ್ಚು ಸಾಮೀಪ್ಯ ಪಡೆದಿರುವುದೆಂದೂ ತಿಳಿಸಿದರು ನೇಪಾಳದ ಅರಸು ಮನೆತನದವರು ಕಳೆದ ಏಳು ವರ್ಷಗಳಿಂದ ಕೈಗೊಂಡಿರುವ ಕ್ರಮವು ವಿವೇಕಪೂರ್ಣವೂ, ಧೈರ್ಯಯುತವೂ ಮತ್ತು ತ್ಯಾಗಮಯವೂ ಆಗಿರುವುದಾಗಿ ಹೇಳಿದರು

ಭಾರತವು ೮ ವರ್ಷಗಳ ಹಿಂದೆ ಸ್ವತಂತ್ರವಾದ ಮೇಲೆ ಅದಕ್ಕೆ ಪುನರ್ಜನ್ಮ ಲಭಿಸಿದಂತಾಗಿರುವುದೆಂದು ಮಹಾರಾಜರು ಹೇಳಿ, ಈ ದೇಶವು ಪ್ರಧಾನಿ ನೆಹರೂರವರ ನಾಯಕತ್ವದಲ್ಲಿ, ತನ್ನ ಹಿಂದಿನ ಸ್ವಪ್ನಾವಸ್ಥೆಯನ್ನು ಮರೆತು ಜಾಗೃತಾವಸ್ಥೆಯಲ್ಲಿ ಮುಂದೆ ಸಾಗುತ್ತಿರುವುದೆಂದು ತಿಳಿಸಿದರು

ನೇಪಾಳದ ಮಹಾರಾಜರು ಉತ್ತರವಿತ್ತು ಭಾರತಕ್ಕೂ ನೇಪಾಳಕ್ಕೂ ಒಂದೇ ಕುಟುಂಬದ ರೀತಿಯ ಸಂಬಂಧವಿದೆಯೆಂದೂ, ಇದು ದಿನೇದಿನೇ ಗಾಢವಾಗುತ್ತಿದೆಯೆಂದೂ ನುಡಿದುದಾಗಿ ತಿಳಿದುಬಂದಿದೆ

ಸಂಗೀತ ಗೋಷ್ಠಿಯವರಿಂದ ಗಾಯನ ಕಛೇರಿಯು ಸುಶ್ರಾವ್ಯವಾಗಿ ನಡೆಯಿತು

ಪೌರ ಸಭಾಧ್ಯಕ್ಷ ಶ್ರೀ ಪುಟ್ಟಸ್ವಾಮಿಯವರು ಬಿನ್ನವತ್ತಳೆಯನ್ನು ಓದಿ, ನೇಪಾಳ ಮತ್ತು ಭಾರತಗಳು ರಾಜಕೀಯವಾಗಿ ಪ್ರತ್ಯೇಕ ನಾಡುಗಳಾಗಿದ್ದರೂ ಎರಡಕ್ಕೂ ಅನೇಕ ಶತಮಾನಗಳಿಂದಲೂ ಸಾಮಾಜಿಕ ಮತ್ತು ಆರ್ಥಿಕ ಸಂಪರ್ಕವಿರುವುದೆಂದು ಹೇಳಿದರು ನೇಪಾಳದ ಅರಸರು ಆ ದೇಶವನ್ನು ಪ್ರಜಾ ಸತ್ತಾತ್ಮಕ ರಾಜ್ಯವಾಗಿ ಪರಿವರ್ತಿಸಲು ಕೈಗೊಂಡಿರುವ ಅಗಾಧ ಕಾರ್ಯವನ್ನು ಇಡೀ ಭಾರತವೇ ಉತ್ಸಾಹದಿಂದ ನೋಡುತ್ತಿರುವುದಾಗಿ ತಿಳಿಸಿ, ನೇಪಾಳದ ರಾಜರ ರಾಜನೀತಿಯನ್ನು ಪ್ರಶಂಸಿಸಿದರು

ಬಿನ್ನವತ್ತಳೆಯನ್ನು ಬೆಳ್ಳಿಯ ಕರಂಡದಲ್ಲಿಟ್ಟು, ಅವರು ಅರ್ಪಿಸಿ, ನೇಪಾಳದ ರಾಜದಂಪತಿಗಳಿಗೂ, ಶ್ರೀಮನ್ಮಹಾರಾಜರಿಗೂ ಹಾರ ತುರಾಯಿಗಳನ್ನು ಒಪ್ಪಿಸಿದರು ನೇಪಾಳದ ರಾಜರು ತಮ್ಮ ಮಾತೃ ಭಾಷೆಯಲ್ಲಿ ಭಾಷಣ ಮಾಡಿದರು ಅದನ್ನು ಅವರ ಅಧಿಕಾರಿಯೊಬ್ಬರು ಇಂಗ್ಲೀಷಿಗೆ ತರ್ಜುಮೆ ಮಾಡಿದರು

ನೇಪಾಳ ಮತ್ತು ಭಾರತದ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು. ರಾಜದಂಪತಿಗಳ ದರ್ಶನ ಪಡೆಯಲು ಭವನದ ಹೊರಗೆ ನೂರಾರು ಜನ ಪುರಜನರುಗಳು ಸೇರಿದ್ದರು

ಬೆಂಗಳೂರಿಗೆ ನೇಪಾಳದ ರಾಜದಂಪತಿಗಳ ಪ್ರಯಾಣ

ಕಿಕ್ಕಿರಿದ ಬಂದಿಪುರದಲ್ಲಿ ಕಾಡುಕೋಣದ ಬೇಟೆ

ಮೈಸೂರು ೨೩

ನೇಪಾಳದ ರಾಜದಂಪತಿಗಳು ಈ ಬೆಳಿಗ್ಗೆ ೯ ಗಂಟೆಗೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೊಡನೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು ಅವರನ್ನು ರಾಜಪ್ರಮುಖರು ಸಮ್ಮರ್ ಪ್ಯಾಲೇಸಿನಲ್ಲಿ ಬೀಳ್ಕೊಟ್ಟರು ಶ್ರೀಮನ್ಮಹಾರಾಜರೊಡಗೂಡಿ ನೇಪಾಳದ ರಾಜರು ಮತ್ತು ಪರಿವಾರದವರು ಬೆಳಿಗ್ಗೆ ಮೃಗಾಲಯಕ್ಕೆ ಸಂದರ್ಶನವಿತ್ತರು ನೆನ್ನೆ ನೇಪಾಳದ ಅರಸರು ಬಂಡೀಪುರದಲ್ಲಿ ಒಂದು ಕಾಡುಕೋಣವನ್ನು ಶಿಕಾರಿ ಮಾಡಿದರು ಅವರು ಸಂಸ್ಥಾನದ ಅರಣ್ಯ ಇಲಾಖಾಧಿಕಾರಿ ಶ್ರೀ ಮುತ್ತಣ್ಣನವರೊಡನೆ ಆನೆಯೊಂದನ್ನು ಏರಿ ಶಿಕಾರಿಯಲ್ಲಿ ಭಾಗವಹಿಸಿದ್ದರು ಕಾಡುಕೋಣವನ್ನು ಅವರು ಕೊಂದುದು ಇದೇ ಮೊದಲೆಂದು ಹೇಳಲಾಗಿದೆ

ರಷ್ಯದಲ್ಲಿ ಬೆರಿಯಾರ ಐವರು ಅನುಯಾಯಿಗಳಿಗೆ ಗಲ್ಲು

ರಷ್ಯದ ಜಾರ್ಜಿಯಾ ರಿಪಬ್ಲಿಕ್ಕಿನಲ್ಲಿ ಐವರು ಅಧಿಕಾರಿಗಳನ್ನು ರಾಷ್ಟ್ರದ್ರೋಹಕ್ಕಾಗಿ ಗಲ್ಲಿಗೇರಿಸಲಾಯಿತೆಂದು ಟಿಫ್ಲಿಸ್ ರೇಡಿಯೋವು ತಿಳಿಸುತ್ತದೆ ಅವರುಗಳು ಆ ಪ್ರಾಂತದ ಉನ್ನತ ಅಧಿಕಾರಿಗಳೆಂದೂ, ಹಿಂದೆ ಗಲ್ಲಿಗೇರಿಸಲ್ಪಟ್ಟ ರಷ್ಯದ ನಾಯಕರಲ್ಲೊಬ್ಬರಾದ ಲ್ಯಾವ್ರೆಂಟಿ ಬೆರಿಯಾರವರ ಅನುಯಾಯಿಗಳೆಂದೂ ಹೇಳಲಾಗಿದೆ

ಬೊಂಬಾಯಿ ಘಟನೆಗಳಲ್ಲಿ ಸತ್ತವರ ಸಂಖ್ಯೆ ೧೨

ಬೊಂಬಾಯಿ ನಗರದಲ್ಲಿ ನೆನ್ನೆ ಆದ ಘಟನೆಗಳ ಸಂಬಂಧದಲ್ಲಿ ಮೃತಪಟ್ಟವರ ಸಂಖ್ಯೆಯು ೧೨ಕ್ಕೆ ಏರಿದೆ ಆ ಪೈಕಿ ಜನ್ಮಭೂಮಿ ಪತ್ರಿಕೆಯ ಮುದ್ರಕ ಸಂಪಾದಕ ಚಿಮನ್‌ಲಾಲ್ ಧೀರಜ್‌ಲಾಲ್ ಎಂಬುವರೂ ಒಬ್ಬರು. ಪೋಲೀಸು ಅಧಿಕಾರಿಯೊಬ್ಬರ ೧೫ ವರ್ಷದ ಮಗನೂ ಗುಂಡಿನೇಟಿನಿಂದ ಆಸ್ಪತ್ರೆಯಲ್ಲಿ ಮೃತಪಟ್ಟನು.

ರಷ್ಯಾ ನಾಯಕರಿಗೆ ಪೌರ ಸ್ವಾಗತಕ್ಕಾಗಿ ಭಾರಿ ಏರ್ಪಾಡು

ಸ್ವಂ.ಮು ಫೋ॥] ಬೆಂಗಳೂರು ೨೩

ಇದೇ ೨೬ನೇ ತಾರೀಕು ಇಲ್ಲಿಗೆ ಆಗಮಿಸುವ ರಷ್ಯದ ನಾಯಕರಾದ ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರ ಗೌರವಾರ್ಥವಾಗಿ ಪೌರಸಭೆಯವರು ಭಾರಿ ಸಮಾರಂಭವನ್ನು ಏರ್ಪಡಿಸುತ್ತಾರೆ ೭ ಸಾವಿರ ಜನ ಆಹ್ವಾನಿತರು ಕೂಡಬಹುದಾದ ಮಂಟಪವನ್ನು ನಿರ್ಮಿಸಲಾಗುವುದು ಅದನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗುವುದು ಒಂದು ಕಡೆ ಮಾಗಡಿ ಕೆಂಪೇಗೌಡನ ಕೋಟೆಯನ್ನು ವಿದ್ಯುಚ್ಛಕ್ತಿ ದೀಪಗಳಿಂದ ಕಟ್ಟಲಾಗುತ್ತದೆ

ಕ್ರುಶ್ಚೇವರಿಗೆ ರಾಧಾಕೃಷ್ಣ ವಿಗ್ರಹವಿರುವ ಮತ್ತು ಬುಲ್ಗಾನಿನ್ನರಿಗೆ ದಂತದ ಗಣಪತಿ ವಿಗ್ರಹವಿರುವ ಕರಂಡಗಳನ್ನು ಅರ್ಪಿಸಲಾಗುವುದು.

ಬೆಂಗಳೂರಿನಲ್ಲಿ ನೇಪಾಳದ ರಾಜದಂಪತಿಗಳು

ಸ್ವಂ ಮು ಫೋ॥] ಬೆಂಗಳೂರು ೨೩

ಈ ಮಧ್ಯಾಹ್ನ ೧೨॥ ಗಂಟೆಗೆ ನೇಪಾಳದ ರಾಜದಂಪತಿಗಳು ಇಲ್ಲಿಗೆ ಆಗಮಿಸಿದರು. ಅವರೊಡನೆ ಬಂದ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರೂ, ಮೇಯರ್ ಶ್ರೀ ದೇವದಯಾಳು ನಾಯ್ಡು ಮತ್ತು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಂ. ಎ ಗೋಪಾಲಸ್ವಾಮಿ ಅಯ್ಯಂಗಾರ್ಯರೂ ಅವರಿಗೆ ಪುಷ್ಪ ಹಾರಗಳನ್ನು ಅರ್ಪಿಸಿದರು. ಮಂತ್ರಿಗಳೂ, ಕಾಂಗ್ರೆಸ್ ನಾಯಕರೂ ಸ್ವಾಗತಿಸಿದರು ರಾಜರು ಟೆಲಿಫೋನ್ ಕಾರ್ಖಾನೆಯನ್ನು ಸಂದರ್ಶಿಸಿದರು ಮಧ್ಯಾಹ್ನ ಹಿಂದೂಸ್ತಾನ್ ಯಂತ್ರ ಸಾಮಗ್ರಿ ಕಾರ್ಖಾನೆ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಕಾರ್ಖಾನೆಗಳನ್ನು ನೋಡುವರು ಸಂಜೆ ಪೌರಸಭಾ ಬಿನ್ನವತ್ತಳೆಯನ್ನು ಸ್ವೀಕರಿಸುವರು ನಾಳೆ ವಿವಿಧ ಸಂಸ್ಥೆಗಳಿಗೆ ಭೇಟಿ ಕೊಟ್ಟು, ನಾಳಿದ್ದು ಮದ್ರಾಸಿಗೆ ತೆರಳುವರು

ಬೊಂಬಾಯಿ ಶಾಸನಸಭಾಸದರ ರಾಜೀನಾಮೆ ವಾಪಸು

ಬೊಂಬಾಯಿಯ ಉಭಯ ಶಾಸನ ಸಭೆಗಳೂ ನೆನ್ನೆ ಆ ಸಂಸ್ಥಾನದ ಭವಿಷ್ಯದ ಬಗ್ಗೆ ಪ್ರಾಂತ ಪುನರ್ವಿಂಗಡಣಾ ಸಮಿತಿ ಶಿಫಾರಸಿನ ಪರಿಶೀಲನೆಯನ್ನು ಮುಂದಕ್ಕೆ ಹಾಕಿದುದು ಬೊಂಬಾಯಿಯನ್ನು ೩ ಸಂಸ್ಥಾನಗಳಾಗಿ ವಿಂಗಡಿಸುವ ಬಗ್ಗೆ ಮುಖ್ಯ ಮಂತ್ರಿಯವರು ಸೂಚನೆಯನ್ನು ಮಂಡಿಸಿದ್ದರು

ಬೊಂಬಾಯಿ ನಗರದ ಭವಿಷ್ಯದ ಬಗ್ಗೆ ಪ್ರತಿಭಟಿಸಿ, ೧೧೦ ಮಂದಿ ಮಹಾರಾಷ್ಟ್ರ ಸದಸ್ಯರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಸಲ್ಲಿಸಿದ್ದ ರಾಜೀನಾಮೆಗಳನ್ನು ವಾಪಸು ಪಡೆದಿರುತ್ತಾರೆ.

ಮೂಗೂರು ಕೊಲೆ ಮೊಕದ್ದಮೆ

೬ ಮಂದಿಗೆ ಜೀವಾವಧಿ ಶಿಕ್ಷೆ ಮತ್ತು ಇಬ್ಬರ ಖುಲಾಸೆ

ಮೈಸೂರು ೨೩

ಮೂಗೂರಿನ ಅಧಿಕಾರ್ಗಟಿಕ ಮಠಸ್ಥ ರಂಗಬುಡಾಫ್ ಜಾಗಿರದಾರ ಮಗ ಮಾದನನ್ನು ಅವರ ಮನೆಯ ವ್ಯವಹಾರದ ಸಂಬಂಧದಲ್ಲಿ ಉಂಟಾದ ಮನಸ್ತಾಪದಮೇಲೆ ಕೊಲೆ ಮಾಡಿದುದಕ್ಕಾಗಿ ಅದೇ ಊರಿನ ಮಾದ ಬುಡಾಫ್ ವೆಂಕ, ಸೀರ, ಬಸವ, ಚಿಕ್ಕಮಾದ, ಪುಟ್ಟರಂಗ, ಬಸವ, ಮಾದ ಮತ್ತು ಪುಟ್ಟ ಎಂಬುವರ ಮೇಲೆ ಟಿ. ನರಸೀಪುರದ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಶ್ರೀ ಎಂ ಮುನಿಸ್ವಾಮಯ್ಯನವರು ತೀರ್ಪಿತ್ತು ಪುಟ್ಟರಂಗ ಮತ್ತು ಪುಟ್ಟ ಎಂಬುವರನ್ನು "ಬೆನಿಫಿಟ್ ಆಫ್ ಡೌಟ್" ಕಾರಣದ ಮೇಲೆ ಖುಲಾಸೆ ಮಾಡಿ, ಉಳಿದ ೬ ಮಂದಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿರುವರು

ಮೃತನ ಮತ್ತು ಆತನ ತಂದೆಯ ಮನೆಯನ್ನು ಆ ಊರಿನ ಅಧಿಕಾರ್ಗಟಿಕ ಮಠಸ್ಥರು ತಮ್ಮ ಕುಲಕ್ಕೆ ಬಿಟ್ಟುಕೊಡಲು ಕೇಳಿದಾಗ, ಅವರು ಒಪ್ಪದಿದ್ದ ಕಾರಣ ಈ ಕೃತ್ಯ ನಡೆಯಿತೆಂದು ಹೇಳಲಾಗಿದೆ.

ಪ್ರಾಂತ ಪುನರ್ವಿಂಗಡಣಾ ಸಮಿತಿ ವರದಿ ಪರಿಶೀಲನೆ

ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಚರ್ಚೆ

ಮೈಸೂರು ೨೨

ಪ್ರಾಂತ ಪುನರ್ವಿಂಗಡಣಾ ಸಮಿತಿ ವರದಿಯನ್ನು ಪರಿಶೀಲಿಸಲು ನೆನ್ನೆ ಪೌರಸಭೆಯ ವಿಶೇಷ ಅಧಿವೇಶನವು ಸೇರಿತ್ತು ಸಭೆಯ ಮುಂದೆ ಪ್ರದರ್ಶನಗಳು ನಡೆಯಬಹುದೆಂಬ ಅನುಮಾನದ ಮೇಲೆ ಹೊರಗಡೆ ಪೋಲೀಸರ ಕಾವಲು ಬಲವಾಗಿ ಏರ್ಪಾಡಾಗಿತ್ತು ಸಾರ್ವಜನಿಕರಿಗೆ ಸಭೆಯಲ್ಲಿ ಪ್ರವೇಶಾವಕಾಶವಿಲ್ಲವೆಂದು ಅಧ್ಯಕ್ಷರು ಪ್ರಕಟಪಡಿಸಿದ್ದರು

ಅಧ್ಯಕ್ಷ ಶ್ರೀ ಪುಟ್ಟಸ್ವಾಮಿಯವರು ಪೀಠಿಕಾ ಭಾಷಣ ಮಾಡಿ, ಪುನರ್ವಿಂಗಡಣಾ ಸಮಿತಿ ವರದಿ ಮತ್ತು ಅದರ ಹಿನ್ನೆಲೆಯನ್ನು ವಿವರಿಸಿದರು

... ಮಿರ್ ನೂರ್ ಹುಸೇನರವರು ಭಾಷಣ ಮಾಡಿ, ಸಂಯುಕ್ತ ಕರ್ನಾಟಕ ಪ್ರಾಂತ ರಚನೆಗೆ ಕಾಲವು ಸನ್ನಿಹಿತವಾಗಿರುವುದೆಂದು ಹೇಳಿ ಪ್ರಾಪ್ತ ವಯಸ್ಕಳಾದ ಕನ್ಯೆಗೆ ನಡೆಯುವ ವಿವಾಹ ಮಹೋತ್ಸವದಲ್ಲಿ ಬಂಧುಗಳೆಲ್ಲರೂ ಸಂತೋಷದಿಂದ ಸಹಕರಿಸುವಂತೆ ಎಲ್ಲರೂ ಇದರಲ್ಲಿ ಭಾಗವಹಿಸಬೇಕೆಂದು ನುಡಿದರು

ನೂತನ ಕರ್ನಾಟಕ ರಾಜ್ಯಕ್ಕೆ ಮೈಸೂರಿನ ಶ್ರೀಮನ್ಮಹಾರಾಜರೇ ಅಧಿಪತಿಗಳಾಗಿರಬೇಕೆಂಬ ಆಶಯವನ್ನು ಅವರು ವ್ಯಕ್ತಪಡಿಸಿದರು ಮೈಸೂರು ನಗರದ ಅಭ್ಯುದಯವು ಅರಮನೆಯೊಡನೆ ಸಮ್ಮಿಳಿತವಾಗಿರುವುದರಿಂದ ನೂತನ ರಾಜ್ಯದ ಅಧಿಪತಿಗಳು ಈ ನಗರದಲ್ಲಿಯೇ ನೆಲೆಸಿರುವಂತೆಯೂ ಏರ್ಪಾಡಾಗಬೇಕೆಂದು ಅವರು ಸೂಚಿಸಿದರು ಬಳ್ಳಾರಿ ಮುಂತಾದ ಪ್ರದೇಶಗಳನ್ನು ಕನ್ನಡ ಪ್ರಾಂತದಲ್ಲಿಯೇ ಉಳಿಸಬೇಕೆಂದು ಅವರು ಒತ್ತಾಯ ಮಾಡಿದರು

ಅನಂತರ ಮಾತನಾಡಿದ ಶ್ರೀ ಎಂ ವಿ ತಿಮ್ಮಯ್ಯನವರು ಸಂಯುಕ್ತ ಕರ್ನಾಟಕ ರಾಜ್ಯ ಸ್ಥಾಪನೆಯಿಂದ ಎಲ್ಲರಿಗೂ ಒಳ್ಳೆಯದಾಗುವುದೆಂದು ನುಡಿದರು

ಮೈಸೂರನ್ನು ಇತರ ಕನ್ನಡ ಪ್ರದೇಶಗಳೊಡನೆ ಸೇರಿಸುವುದಕ್ಕೆ ಶ್ರೀ ವೆಂಕಟತಿಮ್ಮಯ್ಯನವರು ವಿರೋಧ ಸೂಚಿಸಿ, ಅದರಿಂದ ಮೈಸೂರಿಗೆ ನಷ್ಟವಾಗುವುದೆಂದು ನುಡಿದರು

ಪ್ರಾಂತ ಪುನರ್ವಿಂಗಡಣಾ ಸಮಿತಿ ವರದಿಗೆ ಶ್ರೀ ಶ್ರೀ ... ನವರು ಸ್ವಾಗತ ನೀಡಿದರು ಭಾಷಾವಾರು ಪ್ರಾಂತ ನಿರ್ಮಾಣವು ಅಗತ್ಯವೆಂದು ಅವರು ಹೇಳಿದರು ರಾಜಪ್ರಮುಖರ ಸ್ಥಾನವನ್ನು ... ಬೇಕೆಂದೂ ಅವರು ಅಭಿಪ್ರಾಯಪಟ್ಟರು

ಡಾ! ಎ ಜಿ ದಾಸರು ವಿಶಾಲ ಮೈಸೂರಿನ ರಾಜ್ಯ ಸ್ಥಾಪನೆಗೆ ಒತ್ತಾಯಪಡಿಸಿ, ಮಹಾರಾಜರ ಸ್ಥಾನಮಾನಗಳನ್ನು ಸಂರಕ್ಷಿಸಲು ಸಕಲ ತ್ಯಾಗಗಳನ್ನು ಮಾಡಲು ಸಿದ್ಧರಾಗಿರಬೇಕೆಂದು ಹೇಳಿದರು ಶ್ರೀ ಸಿ ಎಸ್ ನಾರಾಯಣರಾಯರು ಇದೇ ಅಭಿಪ್ರಾಯವನ್ನು ಪುರಸ್ಕರಿಸಿದರು

ಶ್ರೀ ಎಂ ಸಿ ಮಹದೇವಸ್ವಾಮಿಯವರು ಅಖಂಡ ಕರ್ನಾಟಕಕ್ಕೆ ಅನೇಕ ಕಡೆ ಸ್ವಾಗತವಿದೆಯೆಂದು ನುಡಿದು, ಅದರಿಂದ ನಾಡಿನ ಅಭಿವೃದ್ಧಿಯಾಗುವುದೆಂದು ಹೇಳಿದರು ರಾಜಪ್ರಮುಖರ ಸ್ಥಾನಮಾನಗಳನ್ನು ಸಂರಕ್ಷಿಸಬೇಕೆಂದೂ ಅಭಿಪ್ರಾಯಪಟ್ಟರು

ಶ್ರೀ ಎಂ ಕೆ ಲಿಂಗಯ್ಯನವರು ಕರ್ನಾಟಕದ ರಚನೆಗೆ ಬೆಂಬಲ ನೀಡಿದರು ಕರ್ನಾಟಕವಾಗಲೀ, ವಿಶಾಲ ಮೈಸೂರಾಗಲೀ ಮೈಸೂರು ಮಹಾರಾಜರ ಸ್ಥಾನಮಾನಗಳು ಎಂದಿನಂತೆ ಇರಬೇಕೆಂದು ಶ್ರೀ ಚೌಡಯ್ಯನವರು ಹೇಳಿದರು

ಕರ್ನಾಟಕ ರಾಜ್ಯ ಸ್ಥಾಪನೆಗೆ ಶ್ರೀ ಮುದ್ದಯ್ಯನವರು ವಿರೋಧವನ್ನು ಸೂಚಿಸಿದರು ಭಾಷಾವಾರು ಪ್ರಾಂತ ರಚನೆಯಿಂದ ಕ್ರಮೇಣ ದ್ವೇಷ ಭಾವನೆಯು ಬೆಳೆಯುವುದೆಂದು ಅವರು ಅಭಿಪ್ರಾಯಪಟ್ಟರು

ಚರ್ಚೆಯು ಮುಗಿಯದೇ ಇದ್ದುದರಿಂದ ಸಭೆಯನ್ನು ಮುಂದೂಡಲಾಯಿತು

ವಿದೇಶಾಂಗ ವ್ಯವಹಾರದಲ್ಲಿ ರಷ್ಯಾ-ಭಾರತಗಳ ಪಾತ್ರ

ಪಾರ್ಲಿಮೆಂಟಿನಲ್ಲಿ ಬುಲ್ಗಾನಿನ್ನರ ಭಾಷಣ

ಲೋಕ ಸಭೆ ಮತ್ತು ರಾಜ್ಯ ಪರಿಷತ್ತಿನ ಸದಸ್ಯರನ್ನು ಉದ್ದೇಶಿಸಿ ನೆನ್ನೆ ರಷ್ಯದ ಪ್ರಧಾನಿ ಬುಲ್ಗಾನಿನ್ನರು ಭಾಷಣ ಮಾಡಿದರು. ಆರ್ಥಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಪಾರಿಭಾಷಿಕ ಸಂಶೋಧನೆಗಳ ವಿಷಯವಾಗಿ ರಷ್ಯಾ ಮತ್ತು ಭಾರತಗಳ ಸಹಕಾರವು ಹೆಚ್ಚುವ ಸಾಧ್ಯತೆಯನ್ನು ಅವರು ಪ್ರಸ್ತಾಪಿಸಿದರು. ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ರಷ್ಯದ ಅನುಭವವನ್ನು ಭಾರತಕ್ಕೆ ತಿಳಿಸಲು ತಾವು ಸಿದ್ಧರಾಗಿರುವುದಾಗಿ ಅವರು ಹೇಳಿದರು

ವಿದೇಶಾಂಗ ವ್ಯವಹಾರಗಳಲ್ಲಿ ಭಾರತ ಮತ್ತು ರಷ್ಯಗಳ ನೀತಿಯು ಪರಸ್ಪರ ಹೋಲುವುದೆಂದೂ, ಉಭಯರೂ ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ತಡೆದು, ಶಾಂತಿಯನ್ನು ಸ್ಥಾಪಿಸುವುದು ಮತ್ತು ಯುದ್ಧವಾಗುವುದನ್ನು ತಪ್ಪಿಸಿ, ಅದರ ಘೋರ ಯಾತನೆಯಿಂದ ಮಾನವ ಕೋಟಿಯನ್ನು ರಕ್ಷಿಸುವುದು—ಈ ಒಂದೇ ಗುರಿಯನ್ನು ಹೊಂದಿರುವುದಾಗಿಯೂ ಅವರು ಹೇಳಿದರು.

ಭದ್ರಾವತಿ ಕಬ್ಬಿಣದ ಕಾರ್ಖಾನೆ ಉತ್ಪನ್ನ ಹೆಚ್ಚಿಸುವ ಆಲೋಚನೆ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಉತ್ಪತ್ತಿಯನ್ನು ವರ್ಷಕ್ಕೆ ೩೦ ಸಾವಿರ ಟನ್ನಿನಿಂದ ೧ ಲಕ್ಷಕ್ಕೆ ಹೆಚ್ಚಿಸುವ ವಿಷಯವು ಪರಿಶೀಲನೆಯಲ್ಲಿರುವುದೆಂದು ಕೇಂದ್ರ ಕೈಗಾರಿಕಾ ಮಂತ್ರಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ

ಕೊಕ್ಕೊ ಪಂದ್ಯ

ಮೈಸೂರು ಸಿಟಿ ಸಿಲ್ವರ್ ಜ್ಯುಬಿಲಿ ಟೂರ್ನಮೆಂಟ್ ಆಶ್ರಯದಲ್ಲಿ ನೆನ್ನೆ ಶಾರದಾ ವಿಲಾಸ ಹೈಸ್ಕೂಲು ಆವರಣದಲ್ಲಿ ನಡೆದ ಕೊಕ್ಕೊ ಫೈನಲ್ ಪಂದ್ಯದಲ್ಲಿ ಮಹಾರಾಜ ಹೈಸ್ಕೂಲಿನವರು ಡಿ ಬನುಮಯ್ಯನವರ ಪ್ರೌಢಶಾಲೆಯವರನ್ನು ಮೂವತ್ತು ಪಾಯಿಂಟುಗಳಿಂದ ಸೋಲಿಸಿ ಷೀಲ್ಡನ್ನು ಪಡೆದಿರುತ್ತಾರೆ

ಮೋಟಾರು ವಾಹನಗಳ ರಿಜಿಸ್ಟ್ರೇಷನ್ ಅವಧಿ ಹೆಚ್ಚಿತು

ಮೋಟಾರು ವಾಹನಗಳ ರಿಜಿಸ್ಟ್ರೇಷನ್ ಬಗ್ಗೆ ಅವಧಿಯನ್ನು ಈ ತಿಂಗಳು ಆಖೈರುವರೆಗೂ ಹೆಚ್ಚಿಸಲಾಗಿದೆ ಹೊಸ ರಿಜಿಸ್ಟ್ರೇಷನ್ನನ್ನು ಡಿಸೆಂಬರ್ ೧ ರೊಳಗೆ ಮಾಡಿಸಿಕೊಳ್ಳದಿದ್ದರೆ ಕ್ರಮ ಜರುಗಿಸಲಾಗುವುದೆಂದೂ ಪ್ರಕಟಿಸಲಾಗಿದೆ

ಪೌರಸಭಾ ಚುನಾವಣಾ ತಕರಾರು ಕೋರ್ಟಿನಲ್ಲಿ ವಾಪಸು

ಕಳೆದ ಪೌರಸಭಾ ಚುನಾವಣೆಯಲ್ಲಿ ಜಯಶಾಲಿಗಳಾದ ಶ್ರೀ ಎ ಎಂ ಮಹಮದ್ ... ರವರ ಚುನಾವಣೆಯು ಅಕ್ರಮವೆಂದು ಅವರ ಪ್ರತಿಸ್ಪರ್ಧಿ ಶ್ರೀ ಎಂ ಆರ್ ಸುದರ್ಶನ್‌ರವರು ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ತಕರಾರು ಮೊಕದ್ದಮೆಯನ್ನು, ಇಬ್ಬರೂ ಪರಸ್ಪರ ರಾಜಿ ಮಾಡಿಕೊಂಡುದರಿಂದ ನೆನ್ನೆ ವಾಪಸು ತೆಗೆದುಕೊಳ್ಳಲಾಯಿತೆಂದು ತಿಳಿದುಬಂದಿದೆ

ವಿವಾಹ ಮಹೋತ್ಸವ

ರಾಜಧಾನಿಯ ಮಹಾರಾಜಾ ಕಾಲೇಜಿನ ಶ್ರೀ ಎಂ ಎಸ್ ಪಾರ್ಥಸಾರಥಿಯವರು ತಮ್ಮ ಕಿರಿಯ ಸಹೋದರ ಶ್ರೀ ಎಂ ಎಸ್ ಶ್ರೀನಿವಾಸ್‌ರವರಿಗೆ ಶ್ರೀ ಟಿ ಸಿ ನಾಗಸಾರ್ಥರವರ ಪುತ್ರಿ ಸೌ। ರುಕ್ಮಿಣಿಯನ್ನು ತಂದುಕೊಂಡು ನೆನ್ನೆ ತಂಜಾವೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ನಂಜನಗೂಡಿನಲ್ಲಿ ಮಕ್ಕಳ ದಿನಾಚರಣೆ

ನಂಜನಗೂಡಿನ ರಾಮಾ ಲೀಗ್ ಸಂಸ್ಥೆಯ ಆಶ್ರಯದಲ್ಲಿ ಕಳೆದ ೧೪ನೇ ತಾರೀಖು ಮಕ್ಕಳ ದಿನಾಚರಣೆಯು ನೆರವೇರಿತು ಶ್ರೀ ಬಿ ಆರ್ ಸುಬ್ರಹ್ಮಣ್ಯರವರು ವಿದ್ಯಾರ್ಥಿಗಳ ಅಧ್ಯಕ್ಷರಾಗಿದ್ದರು ರಾಮಾ ಲೀಗಿನ ಪ್ರತಿನಿಧಿ ಮತ್ತು ಅವರ ಪಾರ್ಟಿಯವರಿಂದಲೂ ಮತ್ತು ಶ್ರೀ ಬಿ ಎಲ್ ರಾಮಸ್ವಾಮಿ ಮತ್ತು ಅವರ ಪಾರ್ಟಿಯವರಿಂದಲೂ ವಿವಿಧ ವೇಷಗಳನ್ನು ಪ್ರದರ್ಶಿಸಲಾಗಿತ್ತು ಅಧ್ಯಕ್ಷರ ಭಾಷಣ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಸಂಸ್ಥಾನ ಪುನರ್ವಿಂಗಡಣೆ ಮುಸೂದೆಗೆ ಮೇನಲ್ಲಿ ಅಂಗೀಕಾರ

ಬರುವ ವರ್ಷ ಅಕ್ಟೋಬರ್ ೧ನೇ ತಾರೀಖು ಹೊತ್ತಿಗೆ ಸಂಸ್ಥಾನಗಳ ಪುನರ್ವಿಂಗಡಣೆಯಾಗಬೇಕೆಂದು ಸರ್ಕಾರದವರು ತಾತ್ಕಾಲಿಕವಾಗಿ ತೀರ್ಮಾನಿಸಿರುವರು ಮೇ ಅಂತ್ಯದ ಹೊತ್ತಿಗೆ ಪಾರ್ಲಿಮೆಂಟು ಈ ಬಗ್ಗೆ ಮಸೂದೆಯನ್ನು ಅಂಗೀಕರಿಸುವುದೆಂದು ಕೇಂದ್ರ ಗೃಹ ಮಂತ್ರಿ ಗೋವಿಂದವಲ್ಲಭ ಪಂತರವರು ತಿಳಿಸಿರುತ್ತಾರೆ

ವಿವಿಧ ಅಪರಾಧಗಳಿಗಾಗಿ ದಂಡ

ರಾಮು ಮತ್ತು ಬಾಲ ಎಂಬುವರು ಲಕ್ಷ್ಮಿಪುರ ಬಡಾವಣೆಯಲ್ಲಿ ಜಗಳವಾಡುತ್ತಿದ್ದರೆಂದು ಹೂಡಲಾದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ಇಂದು ಅಪರಾಧಿಗಳಿಬ್ಬರಿಗೂ ತಲಾ ೫ ರೂ ದಂಡ ವಿಧಿಸಿದರು ಸಟ್ಟಾ ಜೂಜಾಡಿದರೆಂಬ ಕಾರಣಕ್ಕಾಗಿ ಜಯರಾಂ, ಮಹಮದ್ ರಫಿ ಮತ್ತು ರಾಜು ಎಂಬುವರಿಗೆ ತಲಾ ೫ ರೂ ದಂಡ ಬಿದ್ದಿತು ಸೀನಪ್ಪ ಎಂಬಾತನು ರಂಗಮ್ಮ ಎಂಬುವಳನ್ನು ಹೈದರಾಬಾದ್ಗಾಗಿ ಆತನಿಗೆ ೫ ರೂ ಜುಲ್ಮಾನೆಯಾಯಿತು

ಮೈಸೂರು ಪೇಟೆ ಧಾರಣೆ

	ರೂ	ಇಂದ		ರೂ	ವರೆಗೆ	
ಕಡಲೆಕಾಯಿ	೧೨	೧೨	೦	೧೪	೬	೦
ಎಳ್ಳು	೪೪	೨	೦	೫೨	೧೨	೦
ಹರಳುಬೀಜ	೨೩	೬	೦	೨೫	೮	೦
ಹುರುಳಿ	೩೫	೧೨	೦	೩೦	೧೨	೦
ಹೆಸರು	೩೪	೬	೦	೩೬	೧೦	೦
ಹಲಸಂದೆ	೨೯	೦	೦	೪೪	೧೦	೦
ಉದ್ದು	೫೨	೧೪	೦			
ತೊಗರಿ	೨೫	೦	೦	೩೧	೧೦	೦
ಕಡಲೆಬೀಜ	೨೧	೧೦	೦	೨೭	೪	೦
ಸೀಗೆಕಾಯಿ	೫	೮	೦	೫	೧೨	೦
ಮೆಣಸಿನಹಣ್ಣು	೨	೧೦	೦	೩	೦	೦
ಮೆಣಸಿನಕಾಯಿ	೬	೦	೦	೧೩	೧೨	೦
ತೆಂಗಿನಕಾಯಿ ೧,೦೦೦	೧೩೦	೦	೦	೨೦೮	೦	೦

ಮಹಿಳೆಯರ ಟ್ರೈನಿಂಗ್ ಶಿಕ್ಷಣ ...

ರಾಜಧಾನಿಯ ಒಂಟಿಕೊಪ್ಪಲಿನ ... ರಿಯಲ್ಲಿ ಮಹಿಳೆಯರಿಗಾಗಿ ನಡೆಸಲಾಗುತ್ತಿರುವ ಟ್ರೈನಿಂಗ್ ಶಿಕ್ಷಣ ಶಾಲೆಯಲ್ಲಿ ಸಾರ್ವಜನಿಕ ಬಟ್ಟೆಗಳನ್ನು ಹೊಲಿಯುವುದಕ್ಕೆ ಆರ್ಡರುಗಳನ್ನು ತೆಗೆದುಕೊಳ್ಳಲಾಗುವುದೆಂದೂ, ಮಹಿಳೆಯರು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದೂ ಶ್ರೀಮತಿ ಕಾಮೇಶ್ವರಮ್ಮ ... ಸ್ವಾಮಿಯವರು ಕೋರಿರುತ್ತಾರೆ

ಕರ್ನಾಟಕ ಪಾಟೀಗಳ ಹೊಸ ಸಂಸ್ಥೆ

ನಗರದಲ್ಲಿರುವ ಹಲವು ಕರ್ನಾಟಕ ಪಾ... ಸಭೆಯೊಂದು ಕಳೆದ ಗುರುವಾರ ನಡೆದು, ಅಖಂಡ ಕರ್ನಾಟಕ ಕ್ರಿಯಾ ಸಮಿತಿ " ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು ಅದರಲ್ಲಿ ... ಮಂದಿ ಸದಸ್ಯರಿರುವುದಾಗಿ ತಿಳಿಸಲಾಗಿದೆ ... ದರ್ಶ' ವಾರ ಪತ್ರಿಕೆಯ ಶ್ರೀ ಗಂಗಾಧರ್‌ ... ಅಧ್ಯಕ್ಷರಾಗಿಯೂ, ಶ್ರೀ ವೇದಾಂತ ಹೆಮ್ಮಿಗೆ ... ತ್ತು ಶ್ರೀ ಅನಂತಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುವರು.

ಹೊಸ ಜವಳಿ ಅಂಗಡಿ
ಕಲ ಮಂಟಪ'

ದಿಂಡಿಗಲ್, ಕೊಳ್ಳೇಗಾಲ ಮುಂಗಟದ
ಕೊಯಮತ್ತೂರು, ವರೆಯೂರು
ಸೀರೆಗಳು
ಮತ್ತು
ಎಲ್ಲ ರಕಮ್ ಮಿಲ್ ಬಟ್ಟೆಗಳು ನಮ್ಮ
ದೊರೆಯುತ್ತವೆ

ವಿಜಯ ಹಾಲ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು

Edited, Printed and Publish... by A R Nagarajan at Sadh... Press, D Subbiah Road, Myso...

ಅಪ್ಪಟ ಹಾಲು ' "ಇಂದೇ ಕೊಳ್ಳಿ"

ಹಾಲು ಕೊಳ್ಳುವವರಿಗೆ ಸುಸಮಯ!

ನಮ್ಮಲ್ಲಿ ಗಟ್ಟಿಯಾದ ಹಾಲನ್ನು ಸುಲಭ ಬೆಲೆಗೆ ನಿಮ್ಮ ಮನೆ ಬಾಗಿಲಿಗೆ
ಸರಬರಾಜು ಮಾಡುತ್ತೇವೆ
ಹೆಚ್ಚಿನ ವಿವರಗಳಿಗೆ ಇಂದೇ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ತುರುವೆಕೆರೆ ಗಾರ್ಡನ್ಸ್

ಫೋನ್ ನಂ 392 ಚಾಮುಂಡಿಪುರಂ ಮೈಸೂರು

ಮೈಸೂರು ಸರ್ಕಾರದ
ವಿಮಾ ಇಲಾಖೆ

(ಸಾರ್ವಜನಿಕ ಶಾಖೆ)

ಅಂಕೆಅಂಶಗಳೇ ವ್ಯಕ್ತಪಡಿಸುತ್ತವೆ !

★

1954-55 ರಲ್ಲಿ ಹೊಸ ವ್ಯವಹಾರವು 1·82 ಕೋಟಿ ರೂ ಗಳಿಗೂ ಮೀರಿದೆ

ನಿಧಿಯು 4·79 ಕೋಟಿ ರೂ ಗಳಿಗೂ ಮೀರಿದೆ

ವಿಮೆ ಮಾಡಲ್ಪಟ್ಟ ಮೊಬಲಗು 13·87 ಕೋಟಿ ರೂ.

ವಿಲೆ ಮಾಡಲ್ಪಟ್ಟಿರುವ ಕ್ಲೈಮು ಮೊಬಲಗು
2·45 ಕೋಟಿ ರೂ. ಗಳಿಗೆ ಮೀರಿದೆ

ಅತಿ ಹೆಚ್ಚಿನ ಬೋನಸ್

(ಹೋಲ್ ಲೈಫ್ ರೂ. 20. - ಎಂಡೋಮೆಂಟ್ ರೂ. 17.)

—— ಪ್ರೀಮಿಯಂ ದರದಲ್ಲಿ ಇಳಿತಾಯ ——

★

ಮೋಟಾರು ವಾಹನಗಳ ವಿಮೆಯನ್ನೂ

ಸುಲಭ ದರದಲ್ಲಿ ಅಂಗೀಕರಿಸಲಾಗುವುದು

ರಿಜಿಸ್ಟ್ರೇಷನ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಕಾಶಿತವಾಗಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ ೩ ಕಾಸು
ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

[illegible] : ೧೪] SADHVI · THURSDAY 24-11-1955 ಮೈಸೂರು ಗುರುವಾರ ೨೪-೧೧-೧೯೫೫ [ಸಂಚಿಕೆ : ೧೦೦

[illegible]ಂಧ್ಯಪ್ರದೇಶ ಶಾಸನ ಸಭೆಯಲ್ಲಿ ಪ್ರದರ್ಶಕರ ದಾಂಧಲೆ

[illegible]ಧ್ಯಪ್ರದೇಶ ಶಾಸನ ಸಭೆಯಲ್ಲಿ [illegible]ನರ ಗುಂಪಿನ ದಾಂಧಲೆ

ಮಂತ್ರಿಗಳಿಗೆ ಪ್ರಹಾರ

[illegible]ಧ್ಯಪ್ರದೇಶ ಶಾಸನ ಸಭೆಯು ನೆನ್ನೆ [illegible] [illegible]ರದಲ್ಲಿ ಸೇರಿ ಪ್ರಾಂತ ಪುನರ್ವಿಂಗಡಣಾ [illegible] ವರದಿಯನ್ನು ಪರಿಶೀಲಿಸುತ್ತಿದ್ದಾಗ [illegible]ಜನರು ಒಳಗೂ ಹೊರಗೂ ಪೊಲೀಸರ [illegible]ಬಂದಸ್ತನ್ನು ಭೇದಿಸಿ ಭವನಕ್ಕೆ ನುಗ್ಗಿ [illegible] ಮಂತ್ರಿ ಮಹೇಂದ್ರ ಕುಮಾರ್ [illegible]ರ ಮೇಲೆ ಕೈ ಮಾಡಿ, ಮುಖ್ಯ ಮಂತ್ರಿ [illegible] ಶುಕ್ಲರವರ ಮೇಲೆ ಕಾಗದ ಪತ್ರಗ[illegible]ತವನ್ನೆಸೆದು, ಕಿಟಕಿಗಳನ್ನು ಮುರಿದರು [illegible]ಪ್ರದೇಶದ ಐಕ್ಯವನ್ನು ವಿರೋಧಿಸಿ ಘೋ[illegible]ಷಣೆ ಕೂಗುತ್ತಾ, ಮಂತ್ರಿಮಂಡಲವು ರಾ[illegible] ಕೊಡಬೇಕೆಂದು ಪ್ರದರ್ಶನಕಾರರು [illegible]ಮಾಡಿದರು. ಸಭಾಧ್ಯಕ್ಷರ [illegible] [illegible] ಕಲ್ಲುಗಳನ್ನು ಎಸೆಯಲಾಯಿತು [illegible] [illegible]ಭೆಯನ್ನು ಮುಂದುವರಿಸಿದರು.

[illegible] ಮಂತ್ರಿಗಳು ಪ್ರವರ್ಶಕಕಾರರನ್ನು [illegible]ವುದರಲ್ಲಿ ತೊಡಗಿದ್ದರೂ ಜನರು ಕೇಳಲಿ[illegible]ಲ್ಲ. ಅವರನ್ನು ಬಹು ಕಷ್ಟದಿಂದ ಪೊಲೀಸರು [illegible] ಕಳಿಸಿದರು. ಹಣಕಾಸಿನ ಮಂತ್ರಿ [illegible]ಬಲವಾಗಿ ಹೊಡೆದರೆಂದೂ, ಅವರನ್ನು [illegible] ಉಪಾಧ್ಯಕ್ಷರು ಮತ್ತು ನಾ[illegible]ಮಂತ್ರಿಗಳನ್ನು ತಳ್ಳಲಾಯಿತೆಂದೂ ಹೇ[illegible] ಮಂತ್ರಿಗಳು ಹೊರಟುಹೋದವೇಳೆ [illegible]ಕರು ಚದುರಿದರು. [illegible] [illegible] ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು [illegible]ಗಳು ಕಾಲೇಜುಗಳೂ ಮುಚ್ಚಲ್ಪಟ್ಟಿವೆ.

[illegible]ರ್ರಚನೆಯ ಸಂಬಂಧವಲ್ಲಿ ಸಭೆಯ ವಿರೋ[illegible] [illegible] ನಾಯಕ ಸಿ ಪಿ ತಿವಾರಿ [illegible]ಪರಿಷತ್ತಿನ ಶಾಸನಸಭಾ ಸದಸ್ಯ[illegible] [illegible] ಮುಂತಾದ ೧೦ ಮಂದಿಯನ್ನು [illegible]ಲಾಯಿತು. ಶಾಸನ ಸಭೆಯು ನಾಳೆ [illegible]ರಲಿದೆ.

[illegible]ಕಿಸ್ತಾನದ ಗಡಿ ಊರಿನ [illegible] ಆಫ್ಘನ್ ಏಜೆಂಟರ ಗುಂಡು

[illegible] ನಗರಕ್ಕೆ ೩೦ ಮೈಲಿ ಉತ್ತರಕ್ಕಿರುವ [illegible] ರೈಲು ನಿಲ್ದಾಣದ ಮೇಲೆ ಕಳೆದ [illegible] ಗುಂಡು ಹಾರಿಸಲಾಯಿತೆಂದೂ [illegible] [illegible]ಕ್ಕಿಸ್ತಾನದ ಗಡಿ ಬಳಿಯಿರುವುದೆಂ[illegible]ಯಾಗಿದೆ. ಆಫ್ಘನರ ಏಜೆಂಟರುಗಳ[illegible]ೆಂದು ಭಾವಿಸಲಾಗಿದೆ. ಸುರಿಸ್ತಾನ [illegible]ಯೊಂದನ್ನು ಸುಟ್ಟುಹಾಕಲಾಯಿತೆಂ[illegible] ಸಬ್ ಡಿವಿಜನ್ನಿನಲ್ಲಿ ತಂತಿ ಕತ್ತ[illegible]ತೆಂದೂ, ಪೋಸ್ಟ್ ಕಚೇರಿಯಲ್ಲಿರುವ [illegible]ವೆಯನ್ನು ಸುಡಲು ಯತ್ನಿಸಲಾಗಿ[illegible]ಳಲಾಗಿದೆ. ಪಾಕಿಸ್ತಾನದ ಅಧಿಕಾ[illegible]ರಿಕೆ ಕ್ರಮಗಳನ್ನು ಕೈಗೊಂಡಿರುವ[illegible] ಪಾಕಿಸ್ತಾನದ ಮುಖ್ಯ ಮಂತ್ರಿ [illegible] ಸಾಹೇಬರು ಶತ್ರು ರಾಷ್ಟ್ರದವರೊಡ[illegible]ಡಿನವರು ಸೇರಬಾರದೆಂದು ತಿಳಿಸಿದ್ದಾರೆ.

ಸಂಸ್ಕೃತೋತ್ಸವ ಮತ್ತು ಪ್ರಾಧ್ಯಾಪಕರಿಗೆ ಸನ್ಮಾನ ಸಮಾರಂಭ

ಮೈಸೂರು ೨೪

ಮಹಾರಾಜಾ ಕಾಲೇಜಿನ ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಯವರನ್ನು ಸಂಸ್ಕೃತದ ಪ್ರಾಧ್ಯಾಪಕ[illegible]ರಾಗಿ ನೇಮಿಸಿರುವ ಸಂದರ್ಭದಲ್ಲಿ ಅವರನ್ನು ಅಭಿನಂದಿಸುವುದಕ್ಕಾಗಿ [illegible] ಮತ್ತು ಅವರ ಮಿತ್ರರು ನೆನ್ನೆ [illegible] ಸಮಾರಂಭವನ್ನು ಏರ್ಪಡಿಸಿದ್ದರು. [illegible] [illegible] [illegible] ಸನ್ಮಾನವನ್ನು ಮಾಡಿದರು.

ಮೊದಲು [illegible] [illegible] ನಂತರ [illegible] ಧಿಗಳನ್ನು ಮಂಗಳ ವಾದ್ಯದೊಡನೆ [illegible] ಯಿತು. ಸಂಸ್ಕೃತ ಪ್ರಾಧ್ಯಾಪಕರ [illegible] ಸುಂದರವಾಗಿ [illegible] [illegible] ನವರ ಭಾವಚಿತ್ರಕ್ಕೆ ಪುಷ್ಪಮಾಲಿಕೆಯನ್ನು ಅ[illegible]ರ್ಪಿಸಲಾಯಿತು.

ಶ್ರೀಮತಿ [illegible]ಯವರಿಂದ ಪ್ರಾರ್ಥನೆ [illegible] [illegible] [illegible] [illegible]ಯ್ಯನವರು ಸ್ವಾಗತಭಾಷಣ ಮಾಡಿದರು. ಶ್ರೀಮತಿ [illegible] [illegible] ಶ್ರೀ ಎಂ. [illegible] ಸುಬ್ರಹ್ಮಣ್ಯನವರು ಸಂಸ್ಕೃತದಲ್ಲಿ [illegible]ರ್ಥನವನ್ನು ನಡೆಸಿದರು.

ಶ್ರೀ ಪಿ. ಚ. [illegible] ಸಂಸ್ಕೃತದಲ್ಲಿಯೂ, ಡಾ|| ಎಂ. ವಿ. ಕೃಷ್ಣರಾವ್ ಕನ್ನಡದಲ್ಲಿಯೂ, [illegible] ಇಂಗ್ಲಿಷಿನಲ್ಲಿಯೂ ಭಾಷಣ ಮಾಡಿ ಶ್ರೀ ಶಿವರಾಮಶಾಸ್ತ್ರಿಗಳ ಪಾಂಡಿತ್ಯವನ್ನೂ ಮತ್ತು ಗುಣ [illegible] ಕೊಂಡಾಡಿ ಅವರಿಗೆ ದೊರೆತಿರುವ ಹೊಸ ಹುದ್ದೆಗಾಗಿ ಅಭಿನಂದನೆಯನ್ನು ಸಲ್ಲಿಸಿದರು. ಸಂಸ್ಕೃತ ಭಾಷೆಯ [illegible] ಅವರಿಂದ ವಿಶೇಷ ಸೇವೆಯು ದೊರಕಲೆಂದು ಹಾರೈಸಿದರು.

ಶ್ರೀ ಶಿವರಾಮಶಾಸ್ತ್ರಿಗಳು ಸತ್ಕಾರಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ ಸಂಸ್ಕೃತ ಭಾಷೆಗೆ [illegible] ಯುತ್ತಿರುವ ಹೆಚ್ಚುಹೆಚ್ಚಿನ [illegible]ಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸಂಸ್ಕೃತವು ಎಲ್ಲ ದೇಶಭಾಷೆಗಳಿಗೂ ತಾಯಿಯೆಂದೂ, ಅದರ ಬೆಳವಣಿಗೆಯಿಂದ ಇತರ ಭಾಷೆಗಳಿಗೆ [illegible] ಕುಂದುಂಟಾಗುವುದಿಲ್ಲವೆಂದೂ ನುಡಿದರು. ಸಂಸ್ಕೃತವು ಮೃತ ಭಾಷೆಯೆಂದು ಹೇಳುವುದು ತಪ್ಪೆಂದೂ, ಅದು ಅಮರವಾದ [illegible]ಯೆಂದೂ ಹೇಳಿ, ಶ್ರೀ ಶಿವರಾಮಶಾಸ್ತ್ರಿಗಳಿಗೆ ದೊರೆತಿರುವ ಪ್ರಶಸ್ತಿಯು ಕೇವಲ ವೈಯಕ್ತಿಕವಾಗಿರದೆ, ಸಂಸ್ಕೃತ ಭಾಷಾ ಪ್ರಚಾರಕ್ಕೆ ದೊರೆತಿರುವ ಉತ್ತೇಜನವೆಂದು ನುಡಿದರು.

ವಿ|| ದೊರೆಸ್ವಾಮಿಅಯ್ಯಂಗಾರ್ಯರಿಂದ ವೀಣಾವಾದನವೂ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಂದ ಸಂಸ್ಕೃತ ನಾಟಕ ಮತ್ತು ದೃಶ್ಯ ಪ್ರದರ್ಶನಗಳೂ ಆದನಂತರ ಶ್ರೀ ಎಸ್. ಎಂ. ಚಂದ್ರಶೇಖರಯ್ಯನವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಭೆ [illegible] ಮುಕ್ತಾಯವಾಯಿತು.

ನಾಳೆ ಹರತಾಳವನ್ನಾಚರಿಸಲು ಕರೆ

ಮೈಸೂರು ೨೪

ಮೈಸೂರು ವೈಸರಾಯಿ [illegible]ಯಲ್ಲಿ [illegible] ಶ್ರೀಮನ್ನಾರಾಯಣರ ಸ್ವಾಮಿಗಳು [illegible] [illegible] [illegible] ಬಗ್ಗೆ ನಮ್ಮ [illegible] [illegible] [illegible] [illegible] ಮಾಡಲು [illegible] ನಾಳೆ ದಿನ ಸಂಪೂರ್ಣವಾಗಿ ಶಾಂತಿಯುತವಾದ ಹರತಾಳವನ್ನಾಚರಿಸಬೇಕೆಂದು [illegible] [illegible] [illegible] ವಿದ್ಯಾರ್ಥಿ ಸ್ನೇಹಿತರೂ [illegible] [illegible] [illegible] ಶ್ರೀ ನಾರಾಯಣ[illegible] ಕೋರಿರುತ್ತಾರೆ.

ಎಮ್ಮೆ ಹರಿದು ಬಾಲಕನ ಮರಣಕ್ಕಾಗಿ ಡ್ರೈವರನಿಗೆ ಸಜಾ

[illegible] [illegible] [illegible] [illegible] [illegible] [illegible] [illegible] [illegible] ಶ್ರೀ [illegible] [illegible] [illegible] ಮೃತನಾದ [illegible] [illegible] [illegible] ಎಮ್ಮೆಯನ್ನು [illegible] [illegible] ಡ್ರೈವರ್ [illegible] [illegible] ಮತ್ತು ೧,೨೦೦ ರೂ ದಂಡ ತಪ್ಪಿದರೆ [illegible] [illegible] [illegible] [illegible] ವಿಧಿಸಲಾಗಿದೆ. [illegible] [illegible] ೧೦೦ ರೂ [illegible] ಮೃತ ಬಾಲಕನ [illegible] [illegible] ನ್ಯಾಯಾಧೀಶರು ಸೂಚಿಸಿರುವರು.

ವೈದ್ಯಕೀಯ ಪದವೀಧರರಿಗೆ ಬಡ್ತಿ

[illegible] ಕೃಷ್ಣಮೂರ್ತಿ [illegible] ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಶ್ರೀ ಎ. ನಾರಾಯಣ[illegible] [illegible] ಮೂರನೇ ಗ್ರೇಡಿನಿಂದ ಎರಡನೇ ಗ್ರೇಡಿಗೆ ಏರಿಸಿ ಮಾಡಿದೆ.

ಕೈ ಮಗ್ಗದ ಬಟ್ಟೆಗಳಿಗೆ ರಿಬೇಟ್

ಕೈ ಮಗ್ಗದ ಸಹಕಾರ ಸಂಘಗಳವರಿಂದ [illegible] [illegible] [illegible] ಸಹಕಾರ ಸಂಘಗಳ [illegible] ಕೈ ಮಗ್ಗದ ಬಟ್ಟೆಗೆ [illegible] [illegible] ರಿಬೇಟನ್ನು ಕೊಡಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ರಿಬೇಟು ಪಡೆಯುವ ಸಂಘಗಳು ಕೈ ಮಗ್ಗದವರ ಸಂಘಗಳಿಂದಲೇ ಬಟ್ಟೆಗಳನ್ನು ಕೊಳ್ಳಬೇಕೆಂದು ಸಂಸ್ಥಾನ ಸರ್ಕಾರಗಳು ವಿಧಾಯಕ ಮಾಡುವುವು.

ರಷ್ಯದ ನಾಯಕರಿಂದ ಗಾಂಧಿ ಟೋಪಿ ಧಾರಣೆ

[illegible] [illegible] ನೆನ್ನೆ ಆಗಮಿಸಿದ ರಷ್ಯದ ನಾಯಕ ಬುಲ್ಗಾನಿನ್ ಮತ್ತು ಕ್ರುಶ್ಚೇವರು [illegible] ಸ್ಟೇಡಿಯಮ್ಮಿಗೆ ಹೋದಾಗಲೂ, [illegible] ಸ್ವಾಗತ ಸಮಾರಂಭದಲ್ಲೂ ಬಿಳಿಯ ಗಾಂಧಿ ಟೋಪಿಗಳನ್ನು ಧರಿಸಿದ್ದರು. ಅವರನ್ನು ಸ್ವಾಗತಿಸಿದ [illegible] ಲಕ್ಷ ಜನರು [illegible] ಜೈ [illegible] [illegible] ಎಂದು ಘೋಷಿಸುತ್ತಿದ್ದರು.

ನಗರದಲ್ಲಿ ಕಳ್ಳತನಗಳು

ಮೈಸೂರು ೨೪

ನೆನ್ನೆ ರಾಜಧಾನಿಯ ಶಂಕರಪುರದ ಶ್ರೀ [illegible] ಎಲ್. ಕೇಶವಮೂರ್ತಿಯವರ ಮನೆ ಬೀಗ ಮುರಿದು ಸುಮಾರು ೩೦೦ ರೂ. ಬೆಲೆಯ ಬಟ್ಟೆ ಮತ್ತು ನಗದನ್ನೂ, ವಿದ್ಯಾರಣ್ಯಪುರದ ಶ್ರೀ ಸಿ. ಎಂ. ಬಸಪ್ಪನವರ ಮನೆ ಬೀಗವನ್ನು ತೆಗೆದು ಹೊತ್ತಿನಲ್ಲೇ ಮುರಿದು ಸುಮಾರು ೯೦೦ ರೂ ಬೆಲೆಯ ಚಿನ್ನ, ಬೆಳ್ಳಿ ಪದಾರ್ಥಗಳನ್ನೂ ಅಪಹರಿಸಲಾಗಿದೆಯೆಂದು ದೂರು ಕೊಡಲಾಗಿದೆ. ಕುಂಬಾರಕೇರಿಯ ಸುಬ್ಬಮ್ಮ ಎಂಬುವರ ಮನೆಯಲ್ಲಿ ೨೦೦ ರೂ ಬೆಲೆಯ ಚಿನ್ನದ ಸರವು ಅಪಹಾರವಾಗಿದೆಯೆಂದು ವರದಿಯಾಗಿದೆ.

ನೆನ್ನೆ ಸಂಜೆ ಸೈಯದ್ ಹಫೀಜ್ ಎಂಬುವನು [illegible] ಸುಬ್ಬಮ್ಮ ಎಂಬುವರ ಮನೆಯೊಂದಕ್ಕೆ ನು[illegible] [illegible] ಪ್ರಯತ್ನದಲ್ಲಿದ್ದಾಗ ಜನರು ಅವನನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದರು. ಅವನ ಕೈ[illegible] [illegible] ಎಂದು ಹಾರೆ ಮತ್ತು ಚಾಕು ಇದ್ದವು.

ಬೊಂಬಾಯಿಯಲ್ಲಿ ರಷ್ಯದ ನಾಯಕರಿಗೆ ಮುತ್ತಿನ ಸುರಿಮಳೆ

ರಷ್ಯದ ನಾಯಕರು ನೆನ್ನೆ ಬೊಂಬಾಯಿಗೆ ಭೇಟಿ ಕೊಟ್ಟ ಸಮಯದಲ್ಲಿ ಅವರು ವಿಮಾನದಿಂದ ಇಳಿದಾಗ ಬೊಂಬಾಯಿಯ [illegible] [illegible] ಇದ್ದವರು ಹೆಚ್ಚು ಮಕ್ಕಳು ಅವರ ಮೇಲೆ ಮುತ್ತುಗಳನ್ನು ಚೆಲ್ಲಿದರು. ಇತರ ಬಾಲಕರು [illegible] ಹೂಗಳ ಸುರಿಮಳೆಗೈಯ್ಯುತ್ತಿದ್ದರು. ಅವರಿಬ್ಬ[illegible] [illegible] [illegible] [illegible] [illegible] ತಟ್ಟಲಾಯಿತು.

ರಷ್ಯಕ್ಕೆ ದಲೈ ಲಾಮಾ ಭೇಟಿ

ಟಿಬೆಟ್ಟಿನ ಧರ್ಮಗುರುಗಳಾದ ದಲೈ ಲಾಮಾರವರು ಬರುವ ವರ್ಷ ರಷ್ಯಕ್ಕೆ ಭೇಟಿ ಕೊಡುವರು. ಲಾಮಾರವರು ಮುಂದಿನ ವರ್ಷ ಬುದ್ಧದೇವನ [illegible]ನೇ ಜನ್ಮೋತ್ಸವ ದಿನದಲ್ಲಿ ಭಾಗವಹಿಸಲು ಭಾರತಕ್ಕೂ ಬರುವರೆಂದು ಹೇಳಲಾಗಿದೆ.

ಬೊಂಬಾಯಿ ಗಲಭೆಯಲ್ಲಿ ೧೫ ಮಂದಿಯ ಮರಣ

[illegible] [illegible] ಯಲ್ಲಿ ಕಳೆದ ಸೋಮವಾರ ಆದ ಗಲಭೆಗಳ ಸಂಬಂಧದಲ್ಲಿ ಗಾಯಗೊಂಡವರ ಪೈಕಿ ಮೂವರು ಆಸ್ಪತ್ರೆಯಲ್ಲಿ ನೆನ್ನೆ ಮೃತಪಟ್ಟರು. ಸತ್ತವರ ಸಂಖ್ಯೆಯು ೧೫ಕ್ಕೆ ಏರಿತು. [illegible] ಮುನಿಸಿಪಲ್ ಬಂಧನಕ್ಕೊಳಗಾಗಿದ್ದ ೪೧೦ ಮಂದಿಯನ್ನು ಜಾಮೀನು ಮೇಲೆ ಬಿಡುವಂತೆ ಆಜ್ಞೆಯಾಗಿದೆ.

ಮಧ್ಯ ಭಾರತ ಶಾಸನ ಸಭೆಯಲ್ಲಿ ಸಭಾ ತ್ಯಾಗ

ಮಧ್ಯ ಭಾರತ ಶಾಸನ ಸಭೆಯಲ್ಲಿ ನೆನ್ನೆ ವಿರೋಧ ಪಕ್ಷದ ಹಿಂದೂ ಮಹಾ ಸಭೆಯ ೧೦ ಜನ ಸದಸ್ಯರು ಸಭಾ ತ್ಯಾಗ ಮಾಡಿದರು. ಕಾಂಗ್ರೆಸ್ ಸರ್ಕಾರದಲ್ಲಿ ತಮಗೆ ವಿಶ್ವಾಸವಿಲ್ಲವೆಂದೂ, ಮಂತ್ರಿಗಳು ರಾಜೀನಾಮೆ ಕೊಡಬೇಕೆಂದೂ ಅವರು ಒತ್ತಾಯ ಮಾಡಿದರು. ಹೊಸ ಮಧ್ಯಪ್ರದೇಶ ಪ್ರಾಂತದ ರಚನೆ ಬಗ್ಗೆ ಮಂತ್ರಿಗಳು ಪಕ್ಷಪಾತ ಮನೋಭಾವ ತೋರುವುದನ್ನು ವಿರೋಧ ಪಕ್ಷದ ನಾಯಕರು ಟೀಕಿಸಿದರು.

ಕಾಂಗ್ರೆಸ್ ನಾಯಕರ ನಿರ್ಧಾರವನ್ನು ಸ್ವಾಗತಿಸಬೇಕು

ಎರಡು ಕರ್ನಾಟಕ ವಾದಿಗಳಿಗೆ ಕನ್ನಡ ಸಾಹಿತ್ಯ ಸಮ್ಮೇಳನದವರ ಮನವಿ

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ರಾಯಚೂರು ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಸಮಿತಿಗಳ ಸಂಯುಕ್ತ ಸಭೆಯು ರಾಯಚೂರಿನಲ್ಲಿ ಸೇರಿ, ಎರಡು ಕರ್ನಾಟಕ ವಾದಿಗಳು ತಮ್ಮ ಹಟವನ್ನು ಬಿಟ್ಟು, ಕರ್ನಾಟಕ ಏಕೀಕರಣಕ್ಕೆ ಬೆಂಬಲ ಕೊಡುವಂತೆ ವಿನಂತಿಯ ಮಾಡಿತು. ಕನ್ನಡಿಗರೆಲ್ಲರೂ ಪೂರ್ಣ ಒಮ್ಮತ ಮತ್ತು ಸೌಹಾರ್ದ ವಾತಾವರಣವನ್ನು ಕಲ್ಪಿಸಿ ನೂತನ ಪ್ರಾಂತದ ಸುಗಮವಾದ ಉದಯಕ್ಕೆ ಪ್ರತ್ಯಕ್ಷವಾಗಿ ಸಹಕರಿಸುವಂತೆ ಕೋರಲಾಯಿತು. ಮೈಸೂರು ಸೇರಿದ ಕರ್ನಾಟಕವು ಆಗಬೇಕೆಂದು ಕಾಂಗ್ರೆಸ್ಸಿನ ಉನ್ನತ ಮಟ್ಟದ ನಾಲ್ವರು ನಾಯಕರ ಮಾಡಿರುವ ನಿರ್ಧಾರವನ್ನು ಜಂಟಿ ಸಭೆಯು ಸ್ವಾಗತಿಸಿತು.

ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ವರ್ಗಾಯಿಸಬಾರದೆಂದೂ ಕಾಸರಗೋಡು, ಮಡಕಶಿರಾ ಮತ್ತು ಬಿದರೆ ಜಿಲ್ಲೆಯ ಕನ್ನಡ ಭಾಗಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಕೇಳಲಾಗಿದೆ. ಜಂಟಿ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎ. ಎನ್. ಮೂರ್ತಿರಾಯರು ವಹಿಸಿದ್ದರು.

ಮೊರಾಕೊದಲ್ಲಿ ಪುನಃ ದೌರ್ಜನ್ಯ

ಮೊರಾಕೊವಿನ ಪದಚ್ಯುತ ಸುಲ್ತಾನ್ ಸಿದಿ ಮಹಮದ್ ಯೂಸುಫ್‌ರು ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಅಲ್ಲಿ ಪುನಃ ಹಿಂಸಾಕೃತ್ಯಗಳಿಗೆ ಆರಂಭವಾಗಿದೆ. ಒಬ್ಬ ಯುವಕನನ್ನು ಜನರ ಗುಂಪು ತುಕ್ಕಡತುಕ್ಕಡ ಮಾಡಿ ಕೊಂದುಹಾಕಿತು. ರಬಟ್, ಮರ್ರಾಕೇಷ್, ಫೆಜ್ ಮತ್ತು ಇತರ ಕಡೆಗಳಲ್ಲಿ ೧೫ ಜನರು ಮಡಿದು, ೬೦ ಮಂದಿಗೆ ಗಾಯವಾಗಿದೆ. ಈ ಘರ್ಷಣೆಗಳಿಗೆ ಯಾವ ರೀತಿಯಲ್ಲೂ [illegible] ಹೊಸ ಸುಲ್ತಾನರ ಕಡೆಯವರೊಡನೆ ಘರ್ಷಣೆಯಾಗಿರುವುದಲ್ಲದೆ, ರಾಷ್ಟ್ರೀಯರು ತಮ್ಮತಮ್ಮಲ್ಲೇ ಹೋರಾಡುತ್ತಿರುವರೆಂದು ಹೇಳಲಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವರೆಗೆ ೭.೩೦ [illegible] ಹಿಂದಿ ಪಾಠ. ಮಧ್ಯಾಹ್ನ ೧೨ ಪಿ. ವೆಂಕಟರವ [illegible] ಗೀತ ೧೨-೪೦ [illegible] ೧ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ೧.೪೦ ಮತ್ತು ೧.೫೦ ನಾಗಸ್ವರ [illegible] ಪ್ರತಿಧ್ವನಿಗಳಿಗಾಗಿ ಸಂಜೆ ೫-೪೦ [illegible] ಶಾಸ್ತ್ರಿ-ಸಂಗೀತ [illegible] ರಾಮಯ್ಯ-ಕನ್ನಡ ಭಾಷಣ [illegible] ಬೃಂದ ಮತ್ತು [illegible] ಸಂಗೀತ [illegible] ಕನ್ನಡ ಗೀತೆಗಳು ೯.೪೦ [illegible] ಕಾರ್ಯಕ್ರಮ [illegible]

SREE GAYATHRI
TALKIES
TO DAY ONLY
M G M's
MARY WALEWSKA
Starring Greta Garbo and Charles Boyer

From 25-11-55 For 2 Days
Paramount's
M A M B O
Starring Silvana Mangano and Michael Rennie

Morning Shows On 26th & 27th
BLACK SWAN

ಪಶ್ಚಿಮ ರಾಷ್ಟ್ರಗಳ ಬಗ್ಗೆ ಕೃಶ್ಚೀವರ ಟೀಕೆ

ಭಾರತಕ್ಕೆ ತಮ್ಮ ಭೇಟಿ ವಿಷಯವನ್ನು ಕುರಿತು ವಿದೇಶೀ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಷಯವನ್ನು ಪ್ರಸ್ತಾಪಿಸಿ, ತಾವಾಗಲೀ, ಬುಲ್ಗಾನಿನ್ನರಾಗಲೀ ಭಾರತದ ಜನತೆಯ [illegible] ಮಾಡಲು ಯಾವ ಕುತಂತ್ರವನ್ನೂ ಹೂಡಿಲ್ಲವೆಂದೂ, ತಮಗೆ ಗೂಢವಾದ ಉದ್ದೇಶವಾವುದೂ ಇಲ್ಲವೆಂದೂ ಕೃಶ್ಚೀವರು ತಿಳಿಸಿರುತ್ತಾರೆ. ಭಾರತದ ತಜ್ಞರಿಗೆ ಪ್ರಾರಂಭಿಕ ಶಿಕ್ಷಣ ಕೊಡಲೂ, ಈ ದೇಶದ ಕೈಗಾರಿಕಾ ಕಾರ್ಯಕ್ರಮವನ್ನು ಮುಂದುವರಿಸಲು ಅವಶ್ಯಕವಾದ ತಿಳುವಳಿಕೆಯನ್ನೀಯಲೂ ರಷ್ಯವು ಸಿದ್ಧವಾಗಿರುವುದೆಂದು ತಿಳಿಸಿರುತ್ತಾರೆ. ಭಾರತದ ಸ್ನೇಹ ಬೆಳಸುವುದರಲ್ಲಿ ರಷ್ಯದೊಡನೆ ಪಶ್ಚಿಮ ರಾಷ್ಟ್ರಗಳು ಬೇಕಾದರೂ ಸ್ಪರ್ಧೆ ಮಾಡಬಹುದೆಂದೂ ಅವರು ತಿಳಿಸಿ, ಇದು ಬಾಂಬಿನ ತಯಾರಿಗಿಂತಲೂ ಅದು ಉತ್ತಮವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಗ್ಲೈಡರ್ ವಿಮಾನ ಕೇಂದ್ರ

ಬೆಂಗಳೂರು ಮತ್ತು ಅಲಹಾಬಾದುಗಳಲ್ಲಿ ಗ್ಲೈಡರ್ ವಿಮಾನಗಳ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ. ಇಂತಹ ಕೇಂದ್ರಗಳು ಈಗ ದೆಹಲಿ ಮತ್ತು ಪೂನಾ ನಗರಗಳಲ್ಲಿವೆ.

ವಿವಾಹ ಮಹೋತ್ಸವ

ಹುಣಸೂರಿನ [illegible] ವ್ಯಾಪಾರಿಗಳಾದ ಶ್ರೀ ಲಕ್ಷ್ಮೀನಾರಾಯಣಗುಪ್ತರವರು ತಮ್ಮ ಮಗಳು ಸೌ|| ತಾರಾದೇವಿಯನ್ನು ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್ ಶ್ರೀ ಕೆ. ವಿ. ಕೇಶವಮೂರ್ತಿಯವರ ಪುತ್ರ ಚಿ|| ರಾ|| ಕೆ. ರಂಗನಾಥರವರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ಹುಣಸೂರಿನಲ್ಲಿ ಕಳೆದ ೨೧ನೇ ತಾರೀಖು ನೆರವೇರಿಸಿದರು.

ಕರ್ನಾಟಕ ವಾದಿಗಳ ಮೇಲೆ ದುರ್ವರ್ತನೆಯ ಖಂಡನೆ

ಪ್ರಜಾ ಸಮಾಜವಾದಿ ಪಕ್ಷದ ಸಭೆಯೊಂದು ಮೇಲುಕೋಟೆಯಲ್ಲಿ ಕಳೆದ ಸೋಮವಾರ ಶ್ರೀ ವೇದಾಂತ ಹೆಮ್ಮಿಗೆಯವರ ಅಧ್ಯಕ್ಷತೆಯಲ್ಲಿ ನಡೆದು, ಕರ್ನಾಟಕದ ಪರ ವಾದ ಮಾಡುವವರ ಮೇಲೆ ವಿರೋಧಿಗಳು ನಡೆಸುತ್ತಿರುವ ಅನುಚಿತ ದುರ್ವರ್ತನೆಯನ್ನು ಖಂಡಿಸಿ ನಿರ್ಣಯ ಮಾಡಲಾಯಿತು. ಕನ್ನೇಗೌಡನ ಕೊಪ್ಪಲಿನ ಶ್ರೀ ನಾರಾಯಣಸ್ವಾಮಿ, ಮೇಲುಕೋಟೆ ಪೌರ ಸಭಾಧ್ಯಕ್ಷ ಶ್ರೀ ಸಂಪತ್ಕುಮಾರಾಚಾರ್‌ರವರು ಭಾಷಣ ಮಾಡಿದರು.

Sri Kanyakaparameswari Temple,
Asoka Road, Mysore

TENDER NOTICE

Sealed quotations for the construction of a choultry attached to Sri Kanyakaparameswari Temple, Asoka Road, Mysore, at an estimated cost of Rs 66,500, will be received by the Building Secretary S K P Temple, Mysore up to 30-11-55 Each quotation should be accompanied with an E M D of Rs 1,000 Further details Re Estimate & plan can be seen in the office of the above temple on all the working days between 9 & 11 A M and 5 & 7 P M.

K YENGAYYA SETTY,
Building Secretary

ಮೈಸೂರು ಸಂಸ್ಥಾನದ ೪ ಜಿಲ್ಲೆಗಳು ಬೇಕೆಂದು ಆಂಧ್ರ ಸರ್ಕಾರ

ಆಂಧ್ರ ಶಾಸನ ಸಭೆಯಲ್ಲಿ ನಾಳೆ ಅಲ್ಲಿನ ಸರ್ಕಾರದವರು ಸಂಸ್ಥಾನ ಪುನರ್ವಿಂಗಡಣೆ ಶಿಫಾರಸಿನ ಚರ್ಚೆಗಾಗಿ ಮಂಡಿಸುವ ಸೂಚನೆಯಲ್ಲಿ, ಮೈಸೂರಿನಲ್ಲಿ ಬಹು ಸಂಖ್ಯಾತ ತೆಲುಗು ಭಾಷೆಯಾಡುವ ಜನರು ವಾಸಿಸುತ್ತಿರುವ ಕೋಲಾರ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರುಗಳನ್ನು ಆಂಧ್ರಕ್ಕೆ ವರ್ಗಾಯಿಸುವಂತೆ ಒತ್ತಾಯಪಡಿಸಲಾಗುವುದೆಂದು ಗೊತ್ತಾಗಿದೆ.

ವಿಚಿತ್ರ ಮಗುವಿನ ಜನನ

ಕುಣಿಗಲಿನ ಖಾದರ್‌ಸಾಬ್ ಎಂಬುವರ ಮನೆಯಲ್ಲಿ ಕಳೆದ ಶನಿವಾರ ವಿಚಿತ್ರ ಹೆಣ್ಣು ಶಿಶುವಿನ ಜನನವಾಯಿತು. ಹುಟ್ಟಿಯಲ್ಲೇ ಮೃತಪಟ್ಟ ಮಗುವಿನ ಹಣೆಯ ಮೇಲೆ ಲಿಂಗದ ಆಕಾರದ ೧ ಅಂಗುಲ ಉದ್ದದ ಮಾಂಸ ಬೆಳೆದಿತ್ತು. ಕಣ್ಣುಗಳಾಗಲೀ ಮೂಗಾಗಲೀ ಇರಲಿಲ್ಲ. ಮೂಗಿನ ಭಾಗದಲ್ಲಿ ಗೋಳಾಕಾರದ ಮಾಂಸವು ಇತ್ತು. ಅದರಲ್ಲಿ ಕಣ್ಣುಗುಡ್ಡೆಗಳಂತೆ ಕಾಣುವ ಅಂಗಗಳಿದ್ದುವು.

ಬೀಗದಕೈ ಗೊಂಚಲು ಸಿಕ್ಕಿದೆ

ಸಯ್ಯಾಜಿರಾವ್ ರಸ್ತೆಯಲ್ಲಿ ನೆನ್ನೆ ಸಂಜೆ ಬೀಗದಕೈ ಗೊಂಚಲೊಂದು ಸಿಕ್ಕಿದೆ. ವಾರೀಸುದಾರರು [illegible] ಸಾಧ್ವಿ ಕಛೇರಿಯಿಂದ ಪಡೆಯಬಹುದು.

ಪೋಷಕರ ದಿನಾಚರಣೆ

[illegible] ಇದೇ ೨೭ನೇ ತಾ|| ಸಂಜೆ ೬ ಗಂಟೆಗೆ ಪೋಷಕರ ದಿನಾಚರಣೆಯನ್ನು ಏರ್ಪಡಿಸಲಾಗುವುದು. ಮೈಸೂರು ರಾಜಪ್ರಮುಖರು ಅಧ್ಯಕ್ಷತೆ ವಹಿಸುವರು.

ಹಿಂದಿ ಪರೀಕ್ಷೆ ಆವೇದನ ಪತ್ರಗಳು

ಮುಂದಿನ ಫೆಬ್ರವರಿ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಿಶಾರದ ಪೂರ್ವಾರ್ಧ, ಉತ್ತರಾರ್ಧ ಮತ್ತು ಪ್ರವೇಶಿಕ ಪರೀಕ್ಷೆಗಳ ಆವೇದನ ಪತ್ರಗಳನ್ನು ಸ್ವೀಕರಿಸಲು ವಿಳಂಬ ಶುಲ್ಕವಿಲ್ಲದೆ ೩-೧೨-೫೫ ಕಡೆಯ ದಿನವಾಗಿರುತ್ತೆ. ವಿಳಂಬ ಶುಲ್ಕದೊಡನೆ ೧೦-೧೨-೫೫ರ ವರೆಗೂ ಹಣ ಕಳುಹಿಸಲು ಅವಕಾಶವಿದೆ. ಪ್ರಾರಂಭಿಕ ಪ್ರಥಮಾ ಮಧ್ಯಮಾ [illegible] ಪರೀಕ್ಷೆಗಳ ಆವೇದನ ಪತ್ರಗಳೂ ದೊರೆಯುತ್ತವೆ. ಈ ಪರೀಕ್ಷೆಗಳಿಗೆ ಕೂಡಬಯಸುವವರು [illegible] ಸೇವಾ ಸಂಘದ ಕಾರ್ಯಾಲಯದಿಂದ ಆವೇದನ ಪತ್ರಗಳನ್ನು ಪಡೆಯಬಹುದು.

Mysore Govt Insurance Department
(Public Branch)

Application having been received for the issue of a duplicate of policy No 71665-E on the life of Sri H Srinivasachar, it is hereby notified that the duplicate will be issued unless valid objection therefor, is received by the undersigned within one month from this date.

Bangalore, 24th Nov '55

C. Narasimhamurthy,
Secretary

Edited, Printed and Published by A R Nagarajan at Sadhvi Press, D.Subbiah Road, Mysore

ಗೋ ಸಂವರ್ಧನ ಸಪ್ತಾಹ

ಉತ್ತಮ ರಾಸುಗಳಿಗೆ ಬಹುಮಾನ

ಮೈಸೂರು, [illegible]

ನಗರದ ಪಶುವೈದ್ಯ ಶಾಲೆಯ ಆವರಣದಲ್ಲಿ ಗೋ ಸಂವರ್ಧನ ಸಪ್ತಾಹದ ಅಂಗವಾಗಿ ಗೋ ಪ್ರದರ್ಶನ ಮತ್ತು ಬಹುಮಾನ ವಿತರಣೆಯ ಸಮಾರಂಭವು ನಡೆಯಿತು. ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸಿ ಉತ್ತಮವಾದ ರಾಸುಗಳಿಗೆ ಬಹುಮಾನಗಳನ್ನು ಹಂಚಿದರು.

ಕುಮಾರಿ ತಾರಾ ಮತ್ತು ಸೋದರಿಯರ ಪ್ರಾರ್ಥನೆ, ವಿ|| ವಿಷಕಂಠರಾಯರಿಂದ [illegible] ಮತ್ತು ಡಾ|| ನರಸಿಂಹಮೂರ್ತಿಯವರಿಂದ [illegible] ಗತಗಳಾದನಂತರ, ಅಸಿಸ್ಟೆಂಟ್ ಡೈರೆಕ್ಟರ್ [illegible] ಶೇಷಗಿರಿರಾಯರೂ, ನಿವೃತ್ತ ಅ|| ಡೈರೆಕ್ಟರ್ [illegible] ನಂಜುಂಡಯ್ಯನವರೂ ಭಾಷಣ ಮಾಡಿ [illegible] ಹದ ಪ್ರಾಮುಖ್ಯತೆಯನ್ನು ವಿವರಿಸಿ, [illegible] ದದ ಉನ್ನತಿಗೆ ಅತ್ಯಗತ್ಯವಾದ, ಜಾನುವಾರುಗಳ ಅಭಿವೃದ್ಧಿಗೆ ಸಾಧಕವಾದ ಸಲಹೆಗಳನ್ನು [illegible]

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಗೋ[illegible]ಯು ಭಾರತೀಯರ ಜೀವನದಲ್ಲಿ ಹೊಂದಿರುವ ಹಿರಿಯ ಸ್ಥಾನವನ್ನು ವಿವರಿಸಿ, ಅವು[illegible]ಗಳನ್ನು ಉತ್ತಮಪಡಿಸುವುದಕ್ಕೂ, [illegible] ಒಳ್ಳೆಯ ಹಾಲು ಎಲ್ಲರಿಗೂ ದೊರೆಯುವಂತೆ ಮಾಡುವುದಕ್ಕೂ ಅಗತ್ಯವಾದ ಏರ್ಪಾಡುಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದರು. [illegible]ದಲ್ಲಿ ಪೌರಸಭೆಯು ಅಗತ್ಯವಾದ ಎಲ್ಲ [illegible]ವನ್ನೂ ನೀಡುವುದಾಗಿ ಹೇಳಿದರು.

ಶ್ರೀ ಕೃಷ್ಣೇ ಅರಸಿನವರಿಂದ ವಂದನಾರ್ಪಣೆಯಾಗಿ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ರಷ್ಯದ ನಾಯಕರ ಮನರಂಜನೆಗೆ ನಗರದ ಪಂಚ ವೀಣಾ ಗೋಷ್ಠಿ

ನಾಳಿದ್ದು ಬೆಂಗಳೂರಿಗೆ ಆಗಮಿಸುವ [illegible] ನಾಯಕರ ಗೌರವಾರ್ಥವಾಗಿ ಮೈಸೂರು [illegible]ಗು ಮತ್ತು ದಕ್ಷಿಣ ಕನ್ನಡ ಪ್ರದೇಶಗಳ [illegible]ದ ನೃತ್ಯವನ್ನೂ, ಮೈಸೂರಿನ ವಿ|| ದೊರೆಸ್ವಾಮಿಯ್ಯಂಗಾರ್ಯರ ನೇತೃತ್ವದಲ್ಲಿ ಐದು ಮಂದಿ ವೀಣಾ ವಾದನ ಪ್ರವೀಣರಿಂದ ಪಂಚ ವೀಣಾ ಗೋಷ್ಠಿಯನ್ನೂ ಏರ್ಪಡಿಸಲಾಗಿದೆ.

ಖಡ್ಗವಾಗಲೀ, ಬಂದೂಕವಾಗಲೀ ಗುರಿ ತಪ್ಪಬಹುದು!
ಸೂರ್ಯನು ಪಶ್ಚಿಮದಲ್ಲಿ ಉದಯಿಸಲೂಬಹುದು
ಆ ದ ರೆ
ಹಿಂದು ವಾತದ ಅವಧಿಯ
ನೂತನ ಮತ್ತು ಅದ್ಭುತ ಚಿಕಿತ್ಸೆ
ನಿಮ್ಮ ನಿರಾಶೆಗಳೆಲ್ಲವನ್ನೂ ಹರ್ಷವನ್ನಾಗಿ ಪರಿವರ್ತಿಸಲು ಶಕ್ಯವಿದೆ
ಅದರಿಂದ ಹೊಸ ಸಾಮರ್ಥ್ಯ, ಅದ್ಭುತ ಶಕ್ತಿ [illegible] ಅನುಪಮ ಆರೋಗ್ಯ ಹೊಂದಲು [illegible] ತ್ಯಂಗಿಕ ಪ್ರವೀಣರನ್ನು ಭೇಟಿ ಮಾಡಿ
ಡಾ|| ಎ. ವಿ. ರಾ ಣಾ
ಅವರ ಯಶಸ್ವಿಯಾದ ಚಿಕಿತ್ಸೆ ಅನುಭವಿಸಿ ನಿಮ್ಮ ಕಾಲ, ಆರೋಗ್ಯ ಮತ್ತು ಹಣವನ್ನು [illegible] ಮಾಡಿಕೊಳ್ಳುತ್ತವೆ ಮತ್ತು [illegible] ಡಾಕ್ಟರು, ವೈದ್ಯರು ಮತ್ತು [illegible] ಗಳಿಗೆ ಹಣ ವ್ಯಯ ಮಾಡುವುದು [illegible]
ಲಕ್ಷಿಸುತ್ತದೆ
ಭೇಟಿಯ ಕಾಲ ಬೆಳಿಗ್ಗೆ 8 ರಿಂದ ಮಧ್ಯಾಹ್ನ [illegible] ಸಂಜೆ 4 ರಿಂದ 8
ರಾಣಾ ಮೆಡಿಕಲ್ ಹಾಲ್
ಎನ್ ನಂ. 1745. ಅಶೋಕ ರಸ್ತೆ, ನಿಮ್ರ ಸರ್ಕಲ್, ಮೈಸೂರು
(ಮೈಸೂರು ಬ್ಯಾಂಕ್ [illegible] 3ನೇ ಕಟ್ಟಡ)

ಚಾಮುಂಡೇಶ್ವರಿ ಟಾಕೀಸ್ • 25—11—55 ರಿಂದ : ಅಶೋಕ್ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಜಯರಾಜ್ ಫಿಲಂಸ್‌ರವರ ಮಹೋನ್ನತ ಕನ್ನಡ ಪೌರಾಣಿಕ ಚಿತ್ರ
• **ಭಕ್ತ ಮಲ್ಲಿಕಾರ್ಜುನ** •
ಪಾತ್ರ.— ಪಂಡರಿಬಾಯಿ, ಅಮರನಾಥ್, ರಾಘವೇಂದ್ರರಾವ್, ಬಾಲಕೃಷ್ಣ ಮುಂತಾದವರು
ನಿರ್ದೇಶನ .– ಸಿ. ವಿ. ರಾಜು
[A VIJAYA TALKIE RELEASE

ರಿಜಿಸ್ಟರ್ ನಂ. 792

ಸ್ಥಾನಿಕ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಈ ದಿನದ ಪತ್ರಿಕೆ ೩ ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ...

ಅಂಚೆ ಮೂಲಕ ತಿಂಗಳಿಗೆ ...

ಬಿಡಿ ಪತ್ರಿಕೆ ...

... : ೧೪] SADHVI : FRIDAY 25-11-1955 ಮೈಸೂರು ಶುಕ್ರವಾರ ೨೫-೧೧-೧೯೫೫ [ಸಂಚಿಕೆ : ೨೬೧]

ನಗರದಲ್ಲಿ ಮೈಸೂರುವಾದಿಗಳ ಭಾರಿ ಮೆರವಣಿಗೆ -

...ಗಾಂಧಿ ಮತ್ತು ಲೆನಿನ್ನರು ...ಮಹಾ ಪುರುಷರು

...ಪ್ರಧಾನಿ ಬುಲ್ಗಾನಿನ್ನರ ಪ್ರಶಂಸೆ ...ಬಾಯಿಯ ಮುಖ್ಯ ಮಂತ್ರಿ ಮೊರಾರ್ಜಿ ...ರು ತಮ್ಮ ಮತ್ತು ಕ್ರುಶ್ಚೇವರ ಗೌರ...ಗಿ ನೆನ್ನೆ ಕೊಟ್ಟ ಸತ್ಕಾರ ಕೂಟದಲ್ಲಿ ಪ್ರಧಾನಿ ಬುಲ್ಗಾನಿನರು ಭಾಷಣ ...ಮಹಾತ್ಮಾ ಗಾಂಧಿ ಮತ್ತು ಲೆನಿನ್ನರು ...ರಂದೆಂದೂ ಉಭಯರೂ ವಸಾಹತು ...ದಬ್ಬಾಳಿಕೆಯಿಂದ ಭಾರತ ಮತ್ತು ...ಜನಗಳನ್ನು ವಿಮೋಚನೆಗೊಳಿಸಿದರೆಂದೂ ...ಮಹಾತ್ಮಾಗಾಂಧಿಯವರ ಬಗ್ಗೆ ...ಪ್ರಧಾನಿಯು ಪ್ರಶಂಸೆ ಮಾಡಿರುವುದು ...ಟ್ಟನೆಂದರೆ ಮಹಾತ್ಮಾಗಾಂಧಿಯವರ ...ಷ್ಯರೂ ಮತ್ತು ಉತ್ತರಾಧಿಕಾರಿಯೂ ...ನೆಹರೂರವರನ್ನು ಪ್ರಧಾನಿಯಾಗಿ ಪಡೆ...ರು ಈ ಹಿರಿಯ ರಾಷ್ಟ್ರದ ಪ್ರಜೆಗಳ ಪು...ಣ್ಯವೆಂದು ಅವರು ತಿಳಿಸಿದರು

...ಸಂಬಂಧದ ಮಕ್ಕಳಿಗೆ ...ಸ್ತಿ ಹಂಚಲು ವಿರೋಧ

...ಮಸೂದೆಯಲ್ಲಿ, ...ಸಂಬಂಧದಿಂದ ಜನಿಸಿದ ಮಕ್ಕಳಿಗೆ ಆಸ್ತಿ ...ವಿಕೆಯ ನಿಬಂಧನೆಯನ್ನು ತೆಗೆಯಬೇ...ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ...ಯೊಂದು ಶಿಫಾರಸು ಮಾಡಿರುತ್ತದೆ

...ನಲ್ಲಿ ೬೦ ಸಾವಿರ ಮಕ್ಕಳಿಂದ ಬುಲ್ಗಾನಿನ್ನರಿಗೆ ಸ್ವಾಗತ

...ಪ್ರಧಾನಿ ಮತ್ತು ನಾಯಕ ಕ್ರುಶ್ಚೇವ ...ರಿಗೆ ನಾಳೆ ಬೆಂಗಳೂರಿನ ವಿಮಾನ ನಿ...ಲ್ದಾಣದಿಂದ ...ವರೆಗೆ ೩,೦೦೦ ಮಕ್ಕಳು ಸ್ವಾ...ಗತಿಸುವರು ಮಹಾತ್ಮಾಗಾಂಧಿ ರಸ್ತೆಯಲ್ಲಿ ...ಮತ್ತು ಮಲ್ಲೇಶ್ವರದಲ್ಲಿ ೬೦,೦೦೦ ಮ...ಕ್ಕಳು ಇವರನ್ನು ಸ್ವಾಗತಿಸುವರು ನೂರಾರು ...ಧ್ವಜಗಳನ್ನು ಹಾಕಲಾಗಿದೆ ನಾಳೆ ಬೆಂಗ...ಳೂರಿನ ... ಶಾಲೆಗಳಿಗೆ ರಜ ...ಕೊಡಲಾಗಿದೆ. ದಿನಗೂಲಿಯವರಿಗೂ ...ಸರ್ಕಾರಿ ನೌಕರರಿಗೂ ಅರ್ಧ ದಿನದ ರಜ ...ಕೊಡತಕ್ಕದ್ದೆಂದು ಸರ್ಕಾರದವರು ...ದ್ದಾರೆ, ಇತರ ಕೈಗಾರಿಕಾ ಸಂಸ್ಥೆಗಳೂ ಅ...ದೇ ರೀತಿ ಮಾಡುವಂತೆ ಕೋರಿರುತ್ತಾರೆ

...ರು ರೇಡಿಯೊ ನಾಳೆ ಕಾರ್ಯಕ್ರಮ

...ಸ್ವರೋಜ ... ನಾರಾಯಣರಾವ್ - ಪ್ರಕಾ...ಶ ... ದೀಪಕ ನಾಟು ೭-೩೦ ಹೆಚ್ ಬಿ ...ಮಯ್ಯ ಪಟೇಲು, ... ಸರೋಜ ನಾ...ರಾಯಣರಾವ್, ಕನ್ನಡ ಗೀತೆ ೧೦೦೦ದ ೧೫-೦೫, ...೧೪೦ ಮತ್ತು ... ೫-೫೦ ...ಸ್ಟೇಲಿಯಾ ಮತ್ತು ಸೌತ್ ಜೋನ್ ಕ್ರಿಕೆ...ಟ್ ... ವಿವರ ಸಹಿ ದಾದಾಪಾ, ಎಂ. ಎಸ್ ...ರಥಿ ಮತ್ತು ವಿಜಯಸಾರಥಿ ೧೨ ೩೦ ...ಗಳಿಂ ವರೆಗೆ. ೧ ಬಾಲಜಗತ್ ೧ ೩೦ ...ನೆಟ್ ಸಂಜೆ ೫-೨೦ ಹೆಚ್. ಬಿ ...ಪಟೇಲು ೬-೧೫ ಕನ್ನಡ ಗೀತೆ ...ನಾಗನಗೌಡರ ಭಾಷಣ ... ಕಥಾ ಕಾಲಕ್ಷೇಪ ೯ ೧೫ ಕಾರ್ಯಕಾರಿ ...ಯ ಕಾರ್ಯಕ್ರಮ ... ದೇಶೀಂ ಪ್ರಶ್ನೆ ... ಸಮರಿ ಪುನಪ್ರಸಾರ

ಆಫ್ಘಾನಿಸ್ತಾನದ ಮೇಲೆ ಪಾಕಿಸ್ತಾನದ ಗುಡ್ಡ ಜನರ ಆಕ್ರಮಣ?

ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳ ಮೇಲೆ ದಂಡಯಾತ್ರೆ ನಡೆಸಲು ಅವಕಾಶ ಬೇಡಿ ಪಾಕಿಸ್ತಾನದ ಗುಡ್ಡಗಾಡಿನ ಅನೇಕ ತಂಡಗಳು ಪಶ್ತೂನ ಪಾಕಿಸ್ತಾನದ ಗೌವರ್ನರ್ ಜನರಲ್ ರನ್ನು ಕೇಳಿಕೊಂಡಿರುವುದಾಗಿ ವರದಿಯಾಗಿದೆ. ಆಫ್ಘಾನಿಸ್ತಾನಕ್ಕೆ ಸೇರಬೇಕೆಂದಿರುವ ಪ್ರಾಂತ್ಯವನ್ನು ವಾಪಸು ತೆಗೆದುಕೊಂಡು ... ಪಕ್ತೋನಿಯಲ್ಲಿ ... ಗುಡ್ಡಗಾಡಿನವರು ಕೇಳುತ್ತಿದ್ದಾರೆಂದೂ ... ಕುಲದವರಿಗೆ ... ಆಫ್ಘಾನಿಸ್ತಾನದ ಮೇಲೆ ದಂಡಯಾತ್ರೆಗೆ ಅವರು ಅನುಮತಿ ಬೇಡಿರುವರೆಂದೂ ಗೊತ್ತಾಗಿದೆ. ಹಾಗೆಯೇ ... ಸ್ಪಷ್ಟ ಬೇಡಲಾಗಿದೆ

ಆಕ್ಟ್ರಾಯ್ ಸುಂಕಕ್ಕೆ ಕೇಂದ್ರ ಸರ್ಕಾರದ ವಿರೋಧ

ಆಕ್ಟ್ರಾಯ್ ಸುಂಕವನ್ನು ರದ್ದುಗೊಳಿಸಬೇಕೆಂದು ಅಗತ್ಯವೆಂದು ಭಾರತ ಸರ್ಕಾರದವರು ಅಭಿಪ್ರಾಯಪಟ್ಟು, ಈಗ ... ಯಲ್ಲಿರುವ ಸಂಸ್ಥಾನಗಳಲ್ಲಿ ... ಸರ್ಕಾರಗಳವರು ಸುಂಕವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಲಿರುವುದಾಗಿ ಮದ್ರಾಸಿನ ಹಣಕಾಸಿನ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ತಿಳಿಸಿರುತ್ತಾರೆ.

ಬಿ. ಸಿ. ಜಿ. ಬದಲು ಬೇರೊಂದು ಔಷಧಿ

ಸಾಮೂಹಿಕ ಬಿ. ಸಿ. ಜಿ. ವ್ಯಾಕ್ಸಿನೇಷನ್ನಿಗೆ ರಾಜಾಜಿಯವರು ಮತ್ತೆ ತಮ್ಮ ವಿರೋಧವನ್ನು ಸೂಚಿಸಿ, ಅದರ ಬದಲು ಎ. ಎಸ್. ಹೆಚ್. ಎಂಬ ಬೇರೊಂದು ಔಷಧವನ್ನು ಕಂಡುಹಿಡಿಯಲಾಗಿರುವುದೆಂದು ತಿಳಿಸಿರುತ್ತಾರೆ ಅದು ಕ್ಷಯ ರೋಗವನ್ನು ವಾಸಿಮಾಡಬಲ್ಲದಷ್ಟೇ ಅಲ್ಲದೆ, ರೋಗದ ನಿವಾರಣೆಗೂ ಸಹಕಾರಿಯಾಗಿರುವುದೆಂದೂ, ಅಗ್ಗದ ದರದಲ್ಲಿ ದೊರೆಯುವುದೆಂದೂ ರಾಜಾಜಿಯವರು ಹೇಳಿರುವರು

ವಾಣಿಜ್ಯ ವಿದ್ಯಾಭ್ಯಾಸ ಸಮಿತಿಯ ಪುನರ್ರಚನೆ

ಸರ್ಕಾರದವರು ವಾಣಿಜ್ಯ ವಿದ್ಯಾಭ್ಯಾಸ ಮತ್ತು ಪರೀಕ್ಷಾ ಸಮಿತಿಯನ್ನು ಕಳೆದ ಜುಲೈ ೧ರಿಂದ ಮೂರು ವರ್ಷದ ಅವಧಿಗೆ ಪುನರ್ರಚಿಸಿರುತ್ತಾರೆ ಅದರಲ್ಲಿ ಮೈಸೂರಿನ ಚಾಂಪಿಯನ್ ಟ್ಯುಟೋರಿಯಲ್ ಕಾಲೇಜಿನ ಶ್ರೀ ಎಂ. ಎಸ್. ಕೃಷ್ಣನವರು ಒಬ್ಬ ಸದಸ್ಯರಾಗಿರುವರು.

ನಗರದಲ್ಲಿ ಕೊಡಗಿನ ಯುವತಿಯ ಪತ್ತೆ

ಮಡಕೇರಿಯ ಶ್ರೀ ಚಿನ್ನಪ್ಪ ಎಂಬುವರು ಕೊಟ್ಟಿದ್ದ ದೂರಿನ ಪ್ರಕಾರ, ಕೊಡಗಿನ ಪೊಲೀಸರು ಶ್ರೀ ಚಿನ್ನಪ್ಪನವರ ೨೨ ವರ್ಷದ ಮಗಳು ಶ್ರೀಮತಿ ಕಾವೇರಮ್ಮನವರ ಪತ್ತೆ ತರಮೂದಿನಲ್ಲಿದ್ದು, ನೆನ್ನೆ ಇಲ್ಲಿನ ಉಡುಪಿ ಆನಂದಭವನ ಹೋಟೇಲಿನಲ್ಲಿ, ಸ್ಥಳೀಯ ಪೊಲೀಸರ ಸಹಾಯ ಪಡೆದು ೧,೦೦೦ ರೂ. ಬೆಲೆ ಬಾಳುವ ನಗಗಳೊಡನೆ ಪತ್ತೆ ಹಚ್ಚಿರುವರೆಂದು ವರದಿಯಾಗಿದೆ

ನಗರದಲ್ಲಿ ಮೈಸೂರು ವಾದಿಗಳ ಭಾರಿ ಮೆರವಣಿಗೆ

೧೪ ಜೊತೆ ಎತ್ತಿನ ರಥದಲ್ಲಿ ಚಾಮುಂಡೇಶ್ವರಿ, ಮಹಾರಾಜರು ಮತ್ತು ನಾಯಕರ ಚಿತ್ರಗಳ ಉತ್ಸವ

ಹಲವು ಕಡೆ ಅಂಗಡಿಗಳು ಬಂದ್

ಮೈಸೂರು ೨೫

ಈ ದಿನ ನಗರದಲ್ಲಿ ಮೈಸೂರುವಾದಿಗಳ ಭಾರಿ ಮೆರವಣಿಗೆಯೊಂದು ನಡೆಯಿತು. ಸುಮಾರು ... ಗಂಟೆ ಹೊತ್ತಿಗೆ ಸಹಸ್ರಾರು ಜನರು ಕನ್ನಡ ... ಗೌಡನ ಕೊಪ್ಪಲು ಬಳಿ ಗುಂಪು ಕೂಡಿ, ನಗರದ ನಾನಾ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ತೆರಳಿದರು

ಮೆರವಣಿಗೆಯಲ್ಲಿ ತಳಿರು ತೋರಣಗಳಿಂದಲೂ, ಪುಷ್ಪ ಹಾರಗಳಿಂದಲೂ ಅಲಂಕೃತವಾದ ರಥವೊಂದಿತ್ತು. ಅದರ ಮೇಲ್ಭಾಗದಲ್ಲಿ ಚಾಮುಂಡೇಶ್ವರಿ ಅಮ್ಮನವರ ಚಿತ್ರವನ್ನು ಇಟ್ಟು, ಎರಡು ಪಕ್ಕಗಳಲ್ಲಿ ಮಹಾತ್ಮಾಗಾಂಧಿ ಮತ್ತು ಪಂಡಿತ ನೆಹರೂರವರ ಭಾವಚಿತ್ರಗಳನ್ನೂ, ಕೆಳಭಾಗದಲ್ಲಿ ಮೈಸೂರಿನ ರಾಜಪ್ರಮುಖರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಕಂಠೀರವ ನರಸಿಂಹರಾಜ ಒಡೆಯರವರ ಭಾವಚಿತ್ರಗಳನ್ನೂ ಇಡಲಾಗಿತ್ತು

ಮಂತ್ರಿಗಳೇ ರಾಜೀನಾಮೆ ಕೊಡಿ, ... ಸಭಾ ಸದಸ್ಯರೇ ... ಮಹಾರಾಜರ ... "... " ಎಂದು ಬರೆಯಲ್ಪಟ್ಟ ಭಿತ್ತಿ ಪತ್ರಗಳನ್ನು ಹಿಡಿದು, ಅಖಂಡ ಕರ್ನಾಟಕಕ್ಕೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಲಾಗುತ್ತಿತ್ತು. ರಥಕ್ಕೆ ೧೪ ಜೊತೆ ಎತ್ತುಗಳನ್ನು ಕಟ್ಟಲಾಗಿತ್ತು

ಮೆರವಣಿಗೆಯಲ್ಲಿ ಸುಮಾರು ೫,೦೦೦ ಜನರು ಇದ್ದರು. ಜೊತೆಯಲ್ಲಿ ಪೊಲೀಸು ಅಧಿಕಾರಿಗಳೂ ಮತ್ತು ನೂರಾರು ಜನ ಕಾನ್ಸ್‌ಟೇಬಲ್ಲುಗಳೂ ವ್ಯಾನುಗಳಲ್ಲಿ ಹೋಗುತ್ತಿದ್ದರು. ಮಹಾರಾಜಾ ಕಾಲೇಜಿನ ಮೆರವಣಿಗೆಯ ಕೆಲವರು ಪ್ರವೇಶಿಸಿದಾಗ ಬಾಗಿಲುಗಳು ಮುಚ್ಚಲ್ಪಟ್ಟಿದ್ದವು ಸ್ವಲ್ಪ ಹೊತ್ತಿನನಂತರ ತರಗತಿಗಳು ಮುಂದುವರಿದುವು

ಸಂತೆಪೇಟೆ, ಮಾರ್ಕೆಟ್ಟು ಮತ್ತು ಸಯ್ಯಾಜಿ ರಾವ್ ರಸ್ತೆ, ದೊಡ್ಡಪೇಟೆ, ಮಂಡಿಪೇಟೆಗಳಲ್ಲಿ ಮೆರವಣಿಗೆ ಬರುವ ಹೊತ್ತಿಗೆ ಅಂಗಡಿಗಳು ಮುಚ್ಚಲ್ಪಟ್ಟು, ಕೆಲವು ಸ್ವಲ್ಪ ಹೊತ್ತಿನ ಮೇಲೆ ತೆರೆಯಲ್ಪಟ್ಟವು

ಮೆರವಣಿಗೆಯು ಚಾಮರಾಜ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ರಮಾವಿಲಾಸ ಅಗ್ರಹಾರ, ಸಂತೆಪೇಟೆ, ಸಯ್ಯಾಜಿರಾವ್ ರಸ್ತೆ, ಮಂಡಿ ಪೇಟೆ ದೊಡ್ಡಪೇಟೆಗಳಲ್ಲಿ ಹೋಗಿ, ಪ್ಯಾಲೆಸ್ ... ಕದ ಮೂಲಕ ಒಸಮಯ್ಯನವರ ಶಾಲೆ ಬಳಿ ಬಂದಿತು ಶಾಲೆಯನ್ನು ಮುಚ್ಚಿಸುವ ಪ್ರಯತ್ನದಲ್ಲಿ ಮಧ್ಯಾಹ್ನ ೧.೧೦ ಗಂಟೆಯಲ್ಲಿ ಮೆರವಣಿಗೆಯವರು ಅಲ್ಲಿಯೇ ನಿಂತುಬಿಟ್ಟರು. ರಥವು ಪಾಠಶಾಲೆ ಚೌಕದಲ್ಲಿ ನಿಂತಿತ್ತು

ಮೆರವಣಿಗೆಯು ಅಲ್ಲಿಂದ ಮುಂದೆ ಹಳೇ ಅಗ್ರಹಾರ ಮತ್ತು ಕಾಂತರಾಜೆ ಅರಸ್ ರಸ್ತೆಗಳಲ್ಲಿ ಹಾದುಹೋಗಿ ರೈಲ್ವೆ ಅಂಡರ್ ಬ್ರಿಡ್ಜ್ ಮೂಲಕ ಕನ್ನೇಗೌಡನಕೊಪ್ಪಲನ್ನು ಸೇರಿ ಅಲ್ಲಿ ೪ ಘಂಟೆಯಲ್ಲಿ ಮುಕ್ತಾಯವಾಯಿತು

ಚಿತ್ರದುರ್ಗದ ಲಾಕಪ್ಪಿನಲ್ಲಿ ಕೈದಿಯ ಸಾವು

ಚಿತ್ರದುರ್ಗದ ಲಾಕಪ್ಪಿನಲ್ಲಿ ಕಳೆದ ಬುಧವಾರ ಮಕದಂ ಸಾಹೇಬ್ ಎಂಬ ವಿಚಾರಣಾ ಕೈದಿಯು ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ ಅವರ ಸಾವಿನ ಬಗ್ಗೆ ಅನೇಕರು ಸಂಶಯಪಟ್ಟಿರುತ್ತಾರೆ. ಸ್ಥಳೀಯ ನ್ಯಾಯಾಧೀಶರುಗಳು ವಿಧಾನ ಸಭಾ ಸದಸ್ಯರಾದ ಶ್ರೀ ತಿಮ್ಮಪ್ಪನಾಯಕ್ ಮತ್ತು ಜಿ. ಶಿವಪ್ಪನವರೊಡನೆ ಲಾಕಪ್ಪಿಗೆ ಭೇಟಿ ಕೊಟ್ಟಿದ್ದರೆಂದೂ, ಉದ್ರಿಕ್ತ ಜನರಿಂದ ಪೊಲೀಸು ಠಾಣೆಯ ಮೇಲೆ ಧಾಳಿಯಾಗಬಹುದೆಂದು ಅಲ್ಲಿ ರಿಸರ್ವ್ ಪೊಲೀಸರ ಕಾವಲು ಹಾಕಲಾಗಿದೆಯೆಂದೂ ಗೊತ್ತಾಗಿದೆ

ರೇಶಿಮೆ ಕಿಸಾನರಿಗೆ ಬೆಳೆ ಭೂ ಪರಿಹಾರವಿಲ್ಲ

ಜವಿನಾಮದಾರರಿಂದ ವಶಪಡಿಸಿಕೊಳ್ಳುವ ಭೂಮಿಯ ಬೆಲೆಯಲ್ಲಿ ರೇಶಿಮೆ ... ಪರಿಹಾರ ದ್ರವ್ಯವನ್ನು ಕೊಡಬೇಕಾಗಿಲ್ಲವೆಂದು ಬೇಂಜರ್ ... ಮಂಡಲಿಯ ಭೂ ಸುಧಾರಣೆ ಸಮಿತಿಯ ಬಹು ಮಂದಿ ಸದಸ್ಯರು ಅಭಿಪ್ರಾಯಪಟ್ಟಿರುವರೆಂದು ವರದಿಯಾಗಿದೆ

ರಷ್ಯದಲ್ಲಿ ಅತ್ಯಗಾಧವಾದ ಜಲಜನಕ ಬಾಂಬಿನ ಸಿಡಿತ

ರಷ್ಯವು ಅತ್ಯಂತ ಅಗಾಧವಾದ ಅಣು ಸಿಡಿತವನ್ನು ನಡೆಸಿರುವುದೆಂದೂ, ಅದು ಹಲವು ದಶ ಲಕ್ಷ ಟನ್ ಟಿ. ಎನ್. ಟಿ. ಬಾಂಬುಗಳ ಒಟ್ಟು ಶಕ್ತಿಯುಳ್ಳದ್ದಾಗಿತ್ತೆಂದೂ ಅಮೆರಿಕದ ಅಣುಶಕ್ತಿ ಸಮಿತಿಯವರು ತಿಳಿಸಿರುತ್ತಾರೆ. ಅದು ಜಲಜನಕ ಬಾಂಬಿನ ಸಿಡಿತವೆಂದು ಭಾವಿಸಲಾಗಿದೆ. ರಷ್ಯದವರು ಅಣುಶಕ್ತಿಯ ಸಂಶೋಧನೆಯನ್ನು ಬೆಳೆಸುವುದರಲ್ಲಿ ವಿಶೇಷ ಶ್ರದ್ಧೆ ವಹಿಸಿರುವರೆಂದು ಅಮೆರಿಕದ ಅಣು ಶಕ್ತಿ ಸಮಿತಿಯು ಸೂಚಿಸಿದೆ.

ವಿಜಯಲಕ್ಷ್ಮಿ ಪಂಡಿತರಿಗೆ ಡಾಕ್ಟರೇಟ್ ಪ್ರಶಸ್ತಿ

ಲಂಡನ್ನಿನಲ್ಲಿ ಭಾರತದ ರಾಯಭಾರಿಯಾಗಿರುವ ವಿಜಯಲಕ್ಷ್ಮಿ ಪಂಡಿತರಿಗೆ ಲಂಡನ್ ವಿಶ್ವವಿದ್ಯಾಲಯದ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ರಾಣಿಯವರ ಮಾತೆಯೂ, ಚಾನ್ಸಲರರೂ ಆದ ಎಲಿಜಬೆತ್ ರವರು ನೆನ್ನೆ ಸಮಾರಂಭವೊಂದರಲ್ಲಿ ಕೊಟ್ಟು, ಆಕೆಯನ್ನು ವಿಶ್ವವಿಖ್ಯಾತ ಮತ್ತು ಅಸಾಮಾನ್ಯಳಾದ ಓರ್ವ ಸ್ತ್ರೀ ಯೆಂದು ತಿಳಿಸಿದರು

ಸಿಪಾಯಿ ದಂಗೆಯಲ್ಲಿ ಭಾಗವಹಿಸಿದ್ದವನ ನಿಧನ

೧೮೫೭ರಲ್ಲಿ ಬ್ರಿಟಿಷರ ವಿರುದ್ಧವಾಗಿ ನಡೆದ ಕ್ರಾಂತಿಯಲ್ಲಿ ಮುಖ್ಯ ಪಾತ್ರ ವಹಿಸಿದ್ದ ಅಹಮದಾಬಾದಿನ ಸರ್ವರ್ ಲಾಲ್ ಚಹಾವಾಲಾರವರು ನೆನ್ನೆ ಮೃತಪಟ್ಟರೆಂದು ಗೊತ್ತಾಗಿದೆ ಅವರಿಗೆ ೧೧೦ ವರ್ಷ ವಯಸ್ಸಾಗಿತ್ತೆಂದು ಹೇಳಲಾಗಿದೆ.

ಪ್ರಾಂತ ಪುನರ್ವಿಂಗಡಣಾ ಸಮಿತಿ ವರದಿಯ ವಾಪಸಿಗೆ ಸಲಹೆ

ಪಂಜಾಬಿನಲ್ಲಿ ನಡೆಯುತ್ತಿರುವ ಘಟನೆಗಳಿಂದ ಸಂಸ್ಥಾನಗಳ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ವಾಪಸು ತೆಗೆದುಕೊಂಡು ರಾಜ್ಯಗಳು ಎಲ್ಲವೂ ಈಗಿರುವಂತೆಯೇ ಬಿಟ್ಟುಬಿಡುವುದು ಒಳ್ಳೆಯದೆಂದು ಕೇಂದ್ರ ರಕ್ಷಣಾ ವ್ಯವಸ್ಥೆ ಮಂತ್ರಿ ಮಹಾವೀರತ್ಯಾಗಿಯವರು ಪಾರ್ಲಿಮೆಂಟ್ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನೆಹರೂರವರಿಗೆ ಸಲಹೆ ಮಾಡಿರುವುದು ಗೊತ್ತಾಗಿದೆ. ಚೌರಿಚೌರದಲ್ಲಿ ಹಿಂದೆ ದುರ್ಘಟನೆ ನಡೆದಾಗ ಮಹಾತ್ಮಾಗಾಂಧಿಯವರು ಅಸಹಕಾರ ಚಳುವಳಿಯನ್ನು ನಿಲ್ಲಿಸಿದಂತೆಯೇ ನೆಹರೂರವರು ವರ್ತಿಸಬೇಕೆಂದು ಅವರು ಸಲಹೆ ಮಾಡಿರುವರು

ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರ ಕಾರ್ಯಕ್ರಮದ ರೇಡಿಯೊ ಪ್ರಸಾರ

ಬೆಂಗಳೂರಿಗೆ ನಾಳೆ ಆಗಮಿಸಲಿರುವ ರಷ್ಯದ ನಾಯಕರಾದ ಬುಲ್ಗಾನಿನ್ ಹಾಗೂ ಕ್ರುಶ್ಚೇವ್‌ರವರ ಪೌರ ಸ್ವಾಗತ ಸಮಾರಂಭವೂ ಸೇರಿ ಸಾರ್ವಜನಿಕ ಕಾರ್ಯಕ್ರಮಗಳೆಲ್ಲದರ ವರದಿಯನ್ನು ನಾಳೆ ರಾತ್ರಿ ೯ ಗಂಟೆಗೆ ಇಂಗ್ಲೀಷಿನಲ್ಲೂ, ನಾಳಿದ್ದು ರಾತ್ರಿ ಅದೇ ಹೊತ್ತಿಗೆ ಕನ್ನಡದಲ್ಲೂ ಬೆಂಗಳೂರು ರೇಡಿಯೋನಿಂದ ಪ್ರಸಾರ ಮಾಡಲಾಗುವುದು

ನಗರದಲ್ಲಿ ವಿಶ್ವಸಂಸ್ಥೆಯ ಆಹಾರ ಸಮಿತಿ ಅಧಿಕಾರಿಗಳು

ಮಕ್ಕಳು ಮತ್ತು ರೋಗಿಗಳಿಗೆ ಬೇಕಾದ ಹಾಲು ಮತ್ತು ಇತರ ಪದಾರ್ಥಗಳ ಉತ್ಪತ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದ ಅಧಿಕಾರಿಗಳೊಡನೆ ಚರ್ಚಿಸಲು ನಗರಕ್ಕೆ ವಿಶ್ವ ಸಂಸ್ಥೆಯ ಆಹಾರ ಸಮಿತಿಯ ಮುಖ್ಯ ಪೌಷ್ಟಿಕಾಧಿಕಾರಿಗಳಾದ ಡಾ|| [illegible] ಅವರು ಆಗಮಿಸುವರು. ಅವರು ಇಲ್ಲಿ ಎರಡು ತಿಂಗಳ ವರೆಗೆ ಇರುವರು. ಅನೇಕ ವರ್ಷಗಳಿಂದಲೂ ಭಾರತವು [illegible] ಪದಾರ್ಥಗಳನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಿರುವುದೆಂದೂ, ಈ ಸ್ಥಿತಿ [illegible] ಉತ್ಪತ್ತಿ ಮಾಡಲು ಅವಕಾಶವಿದೆಯೆಂದೂ, ಇದಕ್ಕೆ ಬೇಕಾದ [illegible] ಸಿಗದಿರುವುದೇ ಮುಖ್ಯ ಕೊರತೆಯಾಗಿದೆಯೆಂದೂ ಹೇಳಲಾಗಿದೆ. [illegible] ಪ್ರವಾಸ ಕೈಗೊಳ್ಳುವರು

ಇಬ್ಬರು ಹೆಂಡಿರ ಜಗಳದ ಬಗ್ಗೆ ಗಂಡನ ದೂರು

ನಗರದ ಗುಜರಿ ಅಂಗಡಿಯೊಂದರ ಮಾಲೀಕರಾದ ಸೈಯದ್ ರಹಮಾನ್‌ರವರು ಪೋಲೀಸರಿಗೆ ದೂರು ಕೊಟ್ಟು, ತನ್ನ ಎರಡನೇ ಪತ್ನಿ ಹಮೀದಾಬಿ ಎಂಬಾಕೆಯು ಮತ್ತು ಇತರ ಇಬ್ಬರು ಮೊದಲನೇ ಪತ್ನಿ ಮೆಹಬೂಬ್ ಬಿ ಯನ್ನು ಕಳೆದ ೨೧ನೇ ತಾರೀಖು ಹೊಡೆದು ಕತ್ತಿಯಿಂದ ತುಂಬಾ ಗಾಯಪಡಿಸಿರುವರೆಂದು ತಿಳಿಸಿರುತ್ತಾರೆ. ಆಕೆಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ

ಟೆಕ್ನಿಕಲ್ ಇನ್ಸ್ಟಿಟ್ಯೂಟಿಗೆ ನೇಪಾಳದ ರಾಜದಂಪತಿಗಳ ಭೇಟಿ

ಕಳೆದ ಮಂಗಳವಾರ ಸಂಜೆ ನೇಪಾಳದ ಮಹಾರಾಜರು ಮತ್ತು ಮಹಾರಾಣಿಯವರು ಶ್ರೀಮನ್ಮಹಾರಾಜರು ಮತ್ತು ಮುಖ್ಯಮಂತ್ರಿಗಳೊಡನೆ ನಗರದ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿಗೆ ಭೇಟಿಯಿತ್ತು, ಅಲ್ಲಿನ ಕಲಾಕೃತಿಗಳನ್ನು ನೋಡಿ ಬಹಳವಾಗಿ ಮೆಚ್ಚಿದರು. ಮತ್ತು [illegible] ಕೊಂಡುಕೊಂಡರು

ಪಂಜಾಬು ರೈಲು ನಿಲ್ದಾಣಗಳಲ್ಲಿ ತಾಂಬೂಲದ ಮಾರಾಟಕ್ಕೆ ನಿಷೇಧ

ಪಂಜಾಬು ಮತ್ತು ಪೆಪ್ಸು ಸಂಸ್ಥಾನದ ಎಲ್ಲಾ ರೈಲು ನಿಲ್ದಾಣಗಳಲ್ಲಿ ತಾಂಬೂಲದ ಮಾರಾಟವನ್ನು ನಿಷೇಧಿಸಲಾಗಿರುವುದೆಂದೂ, ನಿಲ್ದಾಣಗಳನ್ನು ಚೊಕ್ಕಟವಾಗಿಡುವುದೇ ಇದರ ಉದ್ದೇಶವೆಂದೂ ರೈಲ್ವೆ ಉಪ ಮಂತ್ರಿ ಅಲಗೇಶನ್‌ರವರು ತಿಳಿಸಿರುವರು. ನಿಲ್ದಾಣಗಳಲ್ಲಿ ಮಾರಾಟವನ್ನು ನಿಷೇಧಿಸಬಹುದೇ ಹೊರತು ಜನರು ತಾಂಬೂಲ ತಿನ್ನುವುದನ್ನು ತಡೆಗಟ್ಟುವುದಕ್ಕಾಗುವುದಿಲ್ಲವೆಂದು ಅವರು ಹೇಳಿರುವರು

ರಷ್ಯದ ನಾಯಕರಿಗೆ ನಗರದ ವೃತ್ತಿ ಶಿಕ್ಷಣಾಲಯದ ಕಲಾಕೃತಿಗಳು

ನಾಳೆ ಬೆಂಗಳೂರಿಗೆ ಆಗಮಿಸಲಿರುವ ರಷ್ಯ ನಾಯಕರುಗಳಿಗೆ ಕಾರ್ಪೊರೇಷನ್ನಿನವರು ಸಮರ್ಪಿಸಬೇಕೆಂದಿರುವ ದಂತದ ಗಣೇಶ ಮತ್ತು ರಾಧಾಕೃಷ್ಣ ವಿಗ್ರಹಗಳು ನಗರದ ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯದಲ್ಲಿ ತಯಾರಾಗಿರುತ್ತವೆ. ಕೆತ್ತನೆ ಕೆಲಸದಿಂದ ಕೂಡಿದ ಮರದ ಪೀಠಗಳನ್ನೊಳಗೊಂಡ ಈ ಕೃತಿಗಳು [illegible] ಅಡಿ ಎತ್ತರವಿದ್ದು, ಎಂದರೂ ಬಾಳುವುವೆಂದು ಹೇಳಲಾಗಿದೆ

ಡಿಸೆಂಬರ್ ೧೨ರಿಂದ ಮಲ್ಲಾರಾಧ್ಯರ ನಿವೃತ್ತಿ

ಶ್ರೀಮನ್ಮಹಾರಾಜರ ಮುಜರಾಯಿ ಕಾರ್ಯದರ್ಶಿಗಳಾದ ಶ್ರೀ ಜಿ ಎ ಮಲ್ಲಾರಾಧ್ಯರವರು ಬರುವ ತಿಂಗಳು ೧೨ನೇ ತಾರೀಕು ನಿವೃತ್ತರಾಗುವರೆಂದು ಗೊತ್ತಾಗಿದೆ

ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆ

ಅರಮನೆ ಅವಸರದ ಹೋಬಳಿ ಇಲಾಖೆಯ ನೌಕರರ ಸಂಘದ ಆಶ್ರಯದಲ್ಲಿ ಕಳೆದ ಸೋಮವಾರ ತ್ರಿನಯನೇಶ್ವರ ಸ್ವಾಮಿ ದೇವಾಲಯದಲ್ಲಿ ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯು ನೆರವೇರಿಸಲ್ಪಟ್ಟಿತು. ದರ್ಬಾರ್ ಬಕ್ಷಿಯವರಾದ ಶ್ರೀ ಹೆಚ್ ಎಲ್ ದೇವರಾಜೇ ಅರಸಿನವರು ಆಗಮಿಸಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್ ಎಸ್ ಅನಂತನಾರಾಯಣಶಾಸ್ತ್ರಿಯವರು ಮಾತನಾಡಿ ಈ ಸೇವೆಯಲ್ಲಿ ನೌಕರರು ಹೆಚ್ಚು ಆಸಕ್ತಿ ವಹಿಸಬೇಕೆಂದು ಸೂಚಿಸಿದರು. [illegible] ಮಸೀದಿಯಲ್ಲೂ ವಿಶೇಷ ಪ್ರಾರ್ಥನೆಯಾಗಿ, ಅಲ್ಲಿ ದರ್ಬಾರ್ ಬಕ್ಷಿಯವರು ಹಿಂದೂ ಮುಸ್ಲಿಂ ಐಕ್ಯತೆ ವಿಷಯವಾಗಿ ಭಾಷಣ ಮಾಡಿದರು. ಮಸೀದಿಯ ಅಧ್ಯಕ್ಷರಾದ ಶ್ರೀ ಸಿದ್ದಿಕ್ ಷರೀಫರು ವಂದನಾರ್ಪಣೆ ಮಾಡಿದರು. ಸಂಜೆ ತ್ರಿನಯನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ರುದ್ರಾಕ್ಷಿ ಮಂಟಪೋತ್ಸವವು ಜರುಗಿತು

ಬೊಂಬಾಯಿಯಲ್ಲಿ ರಷ್ಯದ ನಾಯಕರಿಗೆ ಭಾರಿ ಸ್ವಾಗತ

ಬೊಂಬಾಯಿ ನಗರಕ್ಕೆ ಮೊನ್ನೆ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವ್‌ರವರು ಆಗಮಿಸಿದಾಗ ಅವರಿಗೆ ಪುರನಿವಾಸಿಗಳು ಭಾರಿ ಸ್ವಾಗತವನ್ನು ನೀಡಿದರು. ೧೦ ಲಕ್ಷ ಜನರು ೧೫ ಮೈಲಿ ಉದ್ದಕ್ಕೂ ನಿಂತು ಅವರನ್ನು ಸ್ವಾಗತಿಸಿದರು. ನಿಲ್ದಾಣಕ್ಕೆ ಅವರು ರಷ್ಯದ ವಿಮಾನದಲ್ಲಿ ಬಂದಾಗ ಅವರನ್ನು ಗೌರ್ನರ್ ಮೆಹತಾಬ್, ಮುಖ್ಯಮಂತ್ರಿ ಮುರಾರ್ಜಿ ದೇಸಾಯ್ ಮತ್ತು ಮೇಯರ್ ಎನ್ ಸಿ ಪುಪಾಲರವರು ಸ್ವಾಗತಿಸಿದರು. ಅವರನ್ನು ಸ್ವಾಗತಿಸಲು ಶಂಖ ಮತ್ತು ಕಹಳೆಗಳನ್ನು ಊದಲಾಯಿತು. [illegible]ಗಳನ್ನು ಹಾರಿಸಿದರು. ೧೨ ಅಡಿ ಎತ್ತರದ ಪುಷ್ಪಾಲಂಕೃತವಾದ ವೇದಿಕೆಯನ್ನು ಹತ್ತಿದಾಗ, ಅವರಿಗೆ ಇಬ್ಬರು ಬಾಲಕಿಯರು ಕುಂಕುಮ ಹಚ್ಚಿ ಫಲವನ್ನಿತ್ತು ಆರತಿ ಬೆಳಗಿದರು. ಆಗಲೂ ಶಂಖ ಮತ್ತು ಕಹಳೆಗಳ ಶಬ್ದಗಳಾದುವು. ದಾರಿಯಲ್ಲಿ ಜನರು ಅವರ ಮೇಲೆ ಗುಲಾಬಿ ಮತ್ತು ಜಾಜಿ ಹೂಗಳನ್ನು ಚೆಲ್ಲಿದರು

ಗೋ ಪ್ರದರ್ಶನದಲ್ಲಿ ಬಹುಮಾನ ಪಡೆದವರು

ಮೊನ್ನೆ ಇಲ್ಲಿನ ಪಶುವೈದ್ಯ ಶಾಲೆಯವರು ಏರ್ಪಡಿಸಿದ್ದ ಗೋ ಪ್ರದರ್ಶನದಲ್ಲಿ ಕೆಳಗೆ ಕಂಡವರಿಗೆ ಬಹುಮಾನ ಕೊಡಲಾಗಿದೆ —

ಹಸು ಮತ್ತು ಕರು ಹಳ್ಳಿಕಾರ್ ಜಾತಿ—ದೇವರ [illegible] ಮೊದಲನೆ ಶ್ರೀ ಕೆಂಪಯ್ಯ ಮಿಶ್ರ ತಳಿ ಕೆಂಪು ಎಂಬ್ರು ಕಿತ್ತಳೆ ಹಣ್ಣು ಕೆಂಪಣ್ಣ ಮತ್ತು ಕಪ್ಪು ಬಿಳಿ—ಶ್ರೀ ಗಿಡ್ಡಯ್ಯ ಮತ್ತು ಪುಟ್ಟರಾಮಯ್ಯ ಗೀರ್ ಹಸು—ಶ್ರೀ ಬಿ ಬಸವರಾಜ್ ಮುರ್ರಾ ಜಾತಿ ಎಮ್ಮೆ—ಶ್ರೀ ಕಾವೇರಪ್ಪ ಹೋರಿಗಳು ಹಳ್ಳಿಕಾರ್ ಕರುಗಳು ಶ್ರೀ ಬಸಪ್ಪ ಮಿಶ್ರ ಜಾತಿ—ಶ್ರೀ ಚನ್ನಯ್ಯ, ಕೋಣ—ಶ್ರೀ ಕಾವೇರಪ್ಪ ಎತ್ತುಗಳು—ಶ್ರೀ ಕಾವೇರಪ್ಪ ಕರು. ಹಳ್ಳಿಕಾರ್—ಶ್ರೀ ಲಿಂಗಯ್ಯ ಮಿಶ್ರ ಜಾತಿ ಶ್ರೀ ಅಣ್ಣಯ್ಯ ಕಡಸು—ಶ್ರೀ ಟಿ ಎಚ್ ಸೀತಾರಾಂ, ಎಚ್ ಎಸ್ ನಾರಾಯಣ ಶಾಸ್ತ್ರಿ ಮತ್ತು ಶ್ರೀಮತಿ ಉಮಾಬಾಯಿ ಕೃತಕ ವೀರ್ಯ ಪ್ರಯೋಗದಿಂದ ಜನಿಸಿದ ಕರು—ಶ್ರೀ ವೈದ್ಯನಾಥಅಯ್ಯರ್ ಮತ್ತು ಕೆ ರಮೇಶ್ ಅವರ ಕರು— ಶ್ರೀ ಎಂ ವಿ ಮಹದೇವಯ್ಯ ವಿದೇಶದಿಂದ ತರಿಸಿದ ವೀರ್ಯದಿಂದ ಜನಿಸಿದ ಕರು ವಿಶೇಷ ಬಹುಮಾನ—ಶ್ರೀ ಎಸ್ ಟಿ ರಾಮಸ್ವಾಮಿ

ಬಳ್ಳಾರಿ ಸತ್ಯಾಗ್ರಹದಲ್ಲಿ [illegible] ಮಂದಿಯ ಬಂ[ಧನ]

ಬಳ್ಳಾರಿ ಬಳಿ ತುಂಗಭದ್ರಾ [illegible] ನೆಗಳ ಉಲ್ಲಂಘನೆ ಪ್ರಯತ್ನ ಮಾಡಿ[illegible] ಜನ ಸತ್ಯಾಗ್ರಹಿಗಳ ಏಳನೇ ತಂ[ಡ] [illegible] ಬಂಧಿಸಲಾಯಿತು. ಇದುವರೆಗೆ [illegible] ದ ಸಂಬಂಧದಲ್ಲಿ ೩೩೦ ಜನರ [illegible]

ಪ್ರಾದೇಶಿಕ ಕಮ್ಯೂನಿಟಿ [illegible] ಸಭೆಗೆ ಮೈಸೂರು ಪ್ರ[ತಿನಿಧಿ]

ಹೈದರಾಬಾದಿನಲ್ಲಿ ಈ ತಿಂಗಳು [illegible] ೨೮ನೇ ತಾರೀಖು ಸೇರುವ ಪ್ರಾದೇ[ಶಿಕ] [illegible] ಸಾಯ ಮಾರ್ಕೆಟ್ ಸಭೆಯಲ್ಲಿ ಮೈಸೂ[ರು] [illegible] ವಾಗಿ ಶ್ರೀ ಹೆಚ್ ಕೆ ಕುಮಾರಸ್ವಾ[ಮಿ] [illegible] ಪ್ರತಿನಿಧಿಯಾಗಿ ನೇಮಕವಾಗಿರುವರು

ಮೈಸೂರು ಪೇಟೆ ಧಾ[ರಣೆ]

	ರೂ	ಆಣೆ	
ಕಡಲೆಕಾಯಿ	೧೦	೦	೦
ಹರಳುಬೀಜ	೨೮	೨	೦
ಹುರುಳಿ	೪೨	೬	೦
ಹೆಸರು	೪೪	೧೦	೦
ಉಪ್ಪು	[illegible]	೨	೦
ಹಲಸಂದೆ	೪೦	೦	೦
ತೊಗರಿ	೨೬	೧೦	೦
[illegible]	೨೯	೦	೦
ಸೀಗೆಕಾಯಿ	೫	೧೪	೦
ಹುಣಸೇಹಣ್ಣು	೨	[illegible]	೦
ಮೆಣಸಿನಕಾಯಿ	೫	೬	೦
ತೆಂಗಿನಕಾಯಿ ೧,೦೦೦	೧೩೩	೮	೦

FOR SALE

Good quality Guavas, Sapotas Annas two only pound Contact the C[entral] Food Technological Re[search] Institute, Mysore on all [work]ing days (except Satur[days]) between 3 P M & 6 P[M]

SREE GANE[SH]
TALKIES
Gala Release on 26 11 [55]
Daily 3 Shows
DOCTOR IN THE H[OUSE]
(In Technicolor)
The much awaited Comedy [...]
A perfect prescription for [...]
With – Dirk Bogarde, Kay [...]
& Kenneth More etc
★
A MUST SEE picture by [...] student communities, par[ticularly] by those of the Medical Pro[fession]

SREE GAYAT[RI]
TALKIES
From 25—11—55
Paramount's the most pow[erful] Picture in Technicolor
THE BRIDGES A[T] TOKO-RI

Morning Shows On 26th [...]
BLACK SWA[N]
With Tyron Power

Edited, Printed and Pub[lished] by A. K. Nagarajan at [...] Press, D Subbiah Road, M[ysore]

ಹಾಸನದ 43 ನೇ ದನಗಳ ಪ್ರದರ್ಶನ ಮತ್ತು 6 ನೇ ವಸ್ತು ಪ್ರದರ್ಶನ

ದನಗಳ ಪ್ರದರ್ಶನ ತಾ|| 1-1-1956 ರಿಂದ 7-1-1956 ರ ವರೆಗೆ

ದನಗಳಿಗೆ ಹುಲ್ಲು ಮತ್ತು ನೀರಿನ ಸೌಕರ್ಯ ಚೆನ್ನಾಗಿದೆ

6 ನೇ ವಸ್ತು ಪ್ರದರ್ಶನ ತಾ|| 26-12-1955 ರಿಂದ 11-1-1956 ರ ವರೆಗೆ

★

ಕಳೆದ ಸಲದಂತೆ ಈ ಸಾರಿಯೂ

ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯನ್ನು ಏರ್ಪಡಿಸಿದೆ

ಪ್ರದರ್ಶನಕಾರರಿಗೆ ಮತ್ತು ವ್ಯಾಪಾರಸ್ಥರಿಗೆ ಸುಸಮಯ!

ಹೆಚ್ಚಿನ ವಿವರಗಳನ್ನು ಅಧೋಲಿಖಿತರಿಂದ ತಿಳಿದುಕೊಳ್ಳಬಹುದು

ಹೆಚ್ ಎಂ. ಲಕ್ಕಶೆಟ್ಟಿ, — ಸಿ ಎಸ್ ಕೃಷ್ಣಪ್ಪ,
ಕೆ. ಎಸ್ ವೆಂಕಟೇಶ ಅಯ್ಯರ್, ಛೇರ್‌ಮನ್, ದನಗಳ ಮತ್ತು
ಸೆಕ್ರೆಟರಿಗಳು ವಸ್ತು ಪ್ರದರ್ಶನ ಸಮಿತಿ

ಬಿ. ಚಕ್ರಪಾಣಿ ಅಯ್ಯಂಗಾರ್ .— ಸೆಕ್ರೆಟರಿ, ವಸ್ತು ಪ್ರದರ್ಶನ ಸಮಿತಿ

ಶ್ರೀ ಚಾಮುಂಡೇಶ್ವರಿ ಟಾಕೀಸ್ ✱ 25—11—55 ರಿಂದ : ಅಮೋಘ ಪ್ರಾರಂ[ಭ]

ದಿನವೂ ಮೂರು ಪ್ರದರ್ಶನಗಳು

ಜಯಂರಾಜ್ ಫಿಲಂಸ್‌ರವರ ಮಹೋನ್ನತ ಕನ್ನಡ ಪೌರಾಣಿಕ ಚಿತ್ರ ✱ ಭಕ್ತ ಮಲ್ಲಿಕಾರ್ಜುನ

ಪಾತ್ರ — ಪಂಡರಿಬಾಯಿ, ಅಮರನಾಥ್, ರಾಘವೇಂದ್ರರಾವ್, ಬಾಲಕೃಷ್ಣ ಮುಂತಾದವರು

ನಿರ್ದೇಶನ :- ಸಿ. ವಿ. ರಾಜು — — [A VIJAYA TALKIE RELEAS[E]

ಟೆಲಿಫೋನ್ ನಂ 792

...ಜ್ಯಸದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
...ಧ್ವಿ ದಿನ ಪತ್ರಿಕೆಗೆ
...ಮ್ಮ ಜಾಹಿರಾತುಗಳನ್ನು
...ಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

...: ೧೪] SADHVI SATURDAY 26-11-1955 ಮೈಸೂರು ಶನಿವಾರ ೨೬-೧೧-೧೯೫೫ [ಸಂಚಿಕೆ : ೧೦೨

...ಂಗಳೂರಿನಲ್ಲಿ ರಷ್ಯದ ನಾಯಕರಿಗೆ ಪ್ರಚಂಡ ಸ್ವಾಗತ

...ಾ ಬಗ್ಗೆ ಪಾರ್ಲಿಮೆಂಟ್ ...ಮುಂದೆ ಪ್ರದರ್ಶನ

...ಾ ಸ್ವಾತಂತ್ರ್ಯದ ಆಕ್ರಮಣದ ದಿನಾಚ... ಪೋರ್ಚುಗೀಸರು ಆಚರಿಸುತ್ತಿರು... ...ಲ್ಲಿ ಅವನ್ನು ಪ್ರತಿಭಟಿಸಲೂ ಮತ್ತು ...ನ್ನು ಪೋರ್ಚುಗೀಸರು ಗಣರಾಜ್ಯ... ...ಯೊಳಗಾಗಿ ಬಿಟ್ಟು ತೆರಳಲು ಆ... ...ಕ್ಷೆಯನ್ನು ಭಾರತ ಸರ್ಕಾರವು ಕೊ... ...ು ಒತ್ತಾಯಪಡಿಸಲೂ ನೆನ್ನೆ ಪ್ರ... ...ದಿ ಪಕ್ಷದವರು ಪಾರ್ಲಿಮೆಂಟ್ ಭ... ...ಿ ಪ್ರದರ್ಶನ ನಡೆಸಿದರು

...ವರಿಂದ ಭತ್ತದ ಕಟಾವು

ನಗರದ ಬಳಿ ಪಾಡ್ಯಾಂಡದಲ್ಲಿ ಭತ್ತದ... ...ಾ ಕೇಂದ್ರಕ್ಕೆ ನೆನ್ನೆ ರಷ್ಯದ ನಾಯಕ... ...ೇಟಿಯಿತ್ತಾಗ ಶ್ರೀ ಕ್ರುಶ್ಚೇವ್‌ರವರು ...ಯೊಂದರಲ್ಲಿ ಪೈರನ್ನು ಕೊಯ್ಯುತ್ತಿದ್ದ... ...ಗೆ ಸೇರಿ ತಾವೂ ಸಹ ಸ್ವಲ್ಪ ಕಾಲ ...ಟಾವು ಮಾಡಿದರು

...ಿಗೆ ಚಿಕ್ಕಲಿಂಗಣ್ಣ ಸ್ವಾಮಿ ...ಯವರ ಜಯಂತ್ಯುತ್ಸವ

...ನಿಯ ಮಂಡಿ ಮೊಹಲ್ಲಾ ... ...ಸ್ಟೆನರ್ಕೇರಿಯಲ್ಲಿರುವ ಶ್ರೀ ಚಿಕ್ಕ... ...ಾಮಿಗಳ ಮಠದಲ್ಲಿ ಶ್ರೀಶ್ರೀಗಳವರ... ...ಪ್ರಯುಕ್ತ ನಾಳೆಯಿಂದ ೩ ದಿನಗಳು ...ಂಜೆ ೫||ರಿಂದ ೭|| ಘಂಟೆವರೆಗೆ ಉ... ...ನ್ನು ಏರ್ಪಡಿಸಲಾಗಿದೆ ನಾಳೆ ಸಂ... ...ವಿ ಸ್ವಾಮಿಗಳವರ ಮಠದ ಶ್ರೀ ಅ... ...ಥ ರತಿ ಸ್ವಾಮಿಯವರು "ಈ ಸ್ವಾ... ...ಪತ್ಯನೋ' ಅಥವಾ ಭಿನ್ನನೋ" ...ಯವಾಗಿಯೂ, ನಾಳಿದ್ದು ಶ್ರೀ ಸಹ... ...ೇಜಿಯವರು ಸ್ಥಿತ ಪ್ರಜ್ಞನ ಲಕ್ಷ... ಎಂಬ ವಿಚಾರವಾಗಿಯೂ, ...ಎಂ ಎಲ್ ... ನವರು "ಪ... ...ರ್ಣ್ಯ" ಎಂಬ ವಿಚಾರವಾಗಿಯೂ ...ಮಾಡುವರು

...ಾಂಬಾ ಆಸ್ಪತ್ರೆ ರೆಸಿಡೆಂಟ್ ...ಡಿಕಲ್ ಆಫೀಸರ ವರ್ಗ

...ಚಲುವಾಂಬಾ ಆಸ್ಪತ್ರೆಯ ರೆಸಿಡೆಂ... ...ಲ್ ಆಫೀಸರಾದ ಶ್ರೀಮತಿ ರತ್ನಾಬಾ... ...ಯವರನ್ನು ಬೆಂಗಳೂರು ವಾಣೀವಿ... ...ಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ...ಯೂ, ಶ್ರೀ ... ಜಯಲಕ್ಷ್ಮ... ...ರವರನ್ನು ಇಲ್ಲಿನ ಚಲುವಾಂಬಾ ...ಸಿಡೆಂಟ್ ಮೆಡಿಕಲ್ ಆಫೀಸರಾಗಿ ...ಯಿಸಲಾಗಿದೆ

ಉಪನ್ಯಾಸ

...ರದಲ್ಲಿರುವ ಅಖಿಲ ಭಾರತ ಮಾ... ...ನಿಲಯದ ಮಿತ್ರವೃಂದದ ಆಶ್ರ... ...ಳೆ ಸಂಜೆ ೫ ಗಂಟೆಗೆ, ಮಹಾರಾಜಾ ...ಧ್ಯಾಪಕರಾದ ಶ್ರೀ ಎಸ್ ವಿ ಪರ... ...ರಿಂದ "ಮೇಘ ದೂತದಲ್ಲಿ ಕಾ... ...ಾ ವಿಲಾಸ" ಎಂಬ ವಿಷಯವಾಗಿ ...ನ್ನೇರ್ಪಡಿಸಲಾಗಿದೆ ಸರ್ವರಿಗೂ ...ಿದೆ

ಗಣರಾಜ್ಯದ ದಿನ ಪುನಃ ಗೋವಾ ಸತ್ಯಾಗ್ರಹ

ಒದಿವ ... ರಾಜ್ಯ ದಿನ ... ಭಾರತದ ... ಸತ್ಯಾಗ್ರಹಿಗಳು ... ಮತ್ತು ... ತ್ರಿಂತಲ ... ವ್ಯಾಪಕ ಪ್ರಮಾಣದ ಸತ್ಯಾಗ್ರಹ... ...ನ್ನು ನಡೆಸಲು ... ಶ್ರೀ ಪಿ ... ಸಮಿತಿಯ ... ಪಡು ನೆನ್ನೆ ... ಯಲ್ಲಿ ... ಪ್ರವೇಶ ... ಸರ್ಕಾರವು ... [illegible]

ಚೀನೀಯರಿಂದ ಇಬ್ಬರು ಬ್ರಿಟಿಷರ ಬಂಧನ

... ಸ್ವಾಸಿಕ್ಯು ... ಮತ್ತು ... ಎಂಬ ಇಬ್ಬರು ... ಹಿಂಗಳನ್ನು ... ಬಿಡಿ... ...ಟ್ ... ವರ್ಷಗಳಿಂದ ... ತ್ತಾಗಿದ ... ಹಾಂಕಾಂಗ್ ... ಬ್ರಿಟಿಷ್ ... ಮಾಡಿರುವರೆಂದು ... [illegible]

ಪ್ರೋತ್ಸಾಹಕರ ದಿನಾಚರಣೆ

ನಂಜನಗೂಡಿನ ... ಇದೇ ... ನೊನ್ನೆ ... ಸ್ಪರ್ಧೆ ಮತ್ತು ಏರ್ಪಡಿಸ... ...ಲಾಗಿತ್ತು ... ಸ್ಪರ್ಧೆಗಳು ನಡೆದವು ಇವುಗಳಲ್ಲಿ ಶ್ರೀ ಎ ಆರ್ ಸು... ಬ್ರಹ್ಮಣ್ಯ ಮತ್ತು ... ವಿದ್ಯಾರ್ಥಿಗಳು ... ಪಡೆದರು ನೆನ್ನೆ ... ಮತ್ತು ... ನಡೆದವು ... ಶ್ರೀ ಟಿ ಎ ... ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಇದೇ ಕಾರ್ಯಕ್ರಮಗಳನ್ನು ನಡೆಸುವಂತೆ ತೀರ್ಮಾನಿಸಲಾಯಿತು ... ಕರ ದಿನ ಚರಣೆಯನ್ನು ನಾಳೆ ಏರ್ಪಡಿಸಲಾಗಿದೆ ಮೈಸೂರು ವಿಶ್ವವಿದ್ಯಾಲಯದ ... ...ಲೇಜಿನ ಪ್ರಾಧ್ಯಾಪಕರಾದ ಶ್ರೀ ಕೆ ವಿ ... ರಿಸ್ವಾಮಿಯವರು ಅಧ್ಯಕ್ಷತೆ ವಹಿಸುವರು

ಸೌತ್ ಜೋನ್ ಮತ್ತು ನ್ಯೂಜಿಲೆಂಡ್ ಕ್ರಿಕೆಟ್ ಪಂದ್ಯ

ಸ್ವಂ ಸು ಫೋ] ಬೆಂಗಳೂರು ೨೬

ಪ್ರವಾಸಿ ನ್ಯೂಜಿಲೆಂಡ್ ಟೀಮು ಮತ್ತು ಸೌತ್ ಜೋನ್ ಕ್ರಿಕೆಟ್ ಟೀಮುಗಳ ... ಪಂದ್ಯವು ಇಂದು ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ಆರಂಭ... ...ವಾಯಿತು ಶ್ರೀ ... ರಾಜರು ... ಮಧ್ಯಾಹ್ನ ಕಾಲ ... ಬೌಲರ್‌ಗಳು ... ವಿಕೆಟ್‌ಗಳನ್ನು ... [illegible] ...ರನ್ನುಗಳನ್ನು ಮಾಡಿದ್ದರು

ಕ್ರಿಕೆಟ್ ಕ್ರೀಡೆಯ ಪ್ರಸಾರ

ನ್ಯೂಜಿಲೆಂಡ್ ಮತ್ತು ಸೌತ್ ಜೋನ್ ಕ್ರಿಕೆಟ್ ಟೀಮುಗಳಿಗೆ ಬೆಂಗಳೂರಿನಲ್ಲಿ ನಡೆಯುವ ಪಂದ್ಯವನ್ನು ಇಂದು, ನಾಳೆ ಮತ್ತು ನಾಳಿದ್ದು ... ರಿಂದ ... ರಿಂದ ... ಮತ್ತು ... ರಿಂದ ... ರವರೆಗೆ ಬೆಂಗಳೂರು ರೇಡಿಯೊ ಸ್ಟೇಷನ್ನಿನಿಂದ ಪ್ರಸಾರ ಮಾಡಲಾಗುವುದು

ಅಕ್ರಮ ಸಂಬಂಧದ ಮಕ್ಕಳಿಗೆ ಆಸ್ತಿಯಲ್ಲಿ ಭಾಗವಿಲ್ಲ

ರಾಜ್ಯಸಭೆಯಲ್ಲಿ ನಿರ್ಣಯ

ಅಕ್ರಮ ಸಂಬಂಧದಿಂದ ಜನಿಸಿದ ಮಕ್ಕಳಿಗೆ ಆಸ್ತಿಯಲ್ಲಿ ... ನೆನ್ನೆ ರಾಜ್ಯಸಭೆಯಲ್ಲಿ ... ಮಾಡಲಾಯಿತು ... ಸಮಿತಿ ... ವಿವರ ... ಮಕ್ಕಳಿಗೆ ... ಸಲಹೆಯನ್ನು ... ರಾಜ್ಯಸಭೆಯು ... [illegible]

ಗೋವಾಕ್ಕೆ ೧,೨೦೦ ಮಂದಿ ಹೆಚ್ಚು ಸೈನಿಕರು

ಗೋವಾ ... ಕ್ರಾಂತಿ... ...ಪೋರ್ಚುಗೀಸ್ ... ಮತ್ತು ... "... ವಿಯು" ... ...ಮತ್ತು ... ಜನರು ... ನಗರಗಳಲ್ಲಿ ... ಮಾಡಿರುವುದು ... [illegible]

ಬಳ್ಳಾರಿಯಲ್ಲಿ ಪುನಃ ೨೧ ಮಂದಿ ಬಂಧನ

ಬಳ್ಳಾರಿ ... ಸತ್ಯಾಗ್ರಹದ ... ವಿನಾಯಿತಿ ... ಮುಂದಿನ ... ಜನರನ್ನು ... ಮಾಡಲಾಗಿದೆ [illegible]

ಶ್ರೀರಂಗಪಟ್ಟಣದಲ್ಲಿ ಉತ್ಸವಗಳು

ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ದೇವಸ್ಥಾನದಲ್ಲಿ ... ಶ್ರೀ ... ಅಯ್ಯನವರ ಸಂತರ್ಪಣೆ ... ಉತ್ಸವವು ನಡೆಯುತ್ತದೆ ಶ್ರೀ ... ಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ... ದೀಪೋತ್ಸವವು, ... ಕೈಲಾಸದ ... ಉತ್ಸವವೂ ಜರುಗುವುವು

ನಂಜನಗೂಡಿನಲ್ಲಿ ಚಿಕ್ಕ ರಥೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ಇದೇ ತಿಂಗಳು ... ಕಾರ್ತಿಕ ಚಿಕ್ಕ ರಥೋತ್ಸವವು ನಡೆಯುವುದು ... ತಿಂಗಳು ... ವಿವಿಧ ಉತ್ಸವಗಳು ಜರುಗುವುವು ನಾಳೆ ಶ್ರೀಕಂಠಮುಡಿ ... ಮತ್ತು ಪುಷ್ಪ ಮಂಟಪೋತ್ಸವವು ಇವೆ

ರಾಜಧಾನಿಯ ಶ್ರೀ ... ಕೆ ಎ ... ರಾವ್ ಮತ್ತು ಎ ಎಸ್ ನಾರಾಯಣಸ್ವಾಮಿಯವರು '...' ಎಂಬ ನೂತನ ವಾರ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರಾಗಿ ನೆನ್ನೆ ... ಮುಂದೆ ಡಿಕ್ಲೇರ್ ಮಾಡಿಕೊಂಡರು

ಬೆಂಗಳೂರಿಗೆ ರಷ್ಯದ ನಾಯಕರುಗಳ ಆಗಮನ

ವಿಮಾನ ನಿಲ್ದಾಣದಲ್ಲಿ ಮಹಾರಾಜರು ಮತ್ತು ಮುಖ್ಯಮಂತ್ರಿಗಳಿಂದ ಸ್ವಾಗತ

ಸ್ವಂ ಸು ಫೋ] ಬೆಂಗಳೂರು ೨೬

ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ನಿಕಿಟಾ ಕ್ರುಶ್ಚೇವ್‌ರವರು ಈ ಬೆಳಿಗ್ಗೆ ... ಘಂಟೆಗೆ ಪ್ರತ್ಯೇಕ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರು ಮತ್ತು ಮುಖ್ಯಮಂತ್ರಿಗಳು ಅವರನ್ನು ಸ್ವಾಗತಿಸಿ ... ತುರಾಯಿಗಳನ್ನರ್ಪಿಸಿದರು ರಷ್ಯದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಕೆ ಪಿ ಎಸ್ ಮೆನನ್‌ರವರೂ ಭಾರತದಲ್ಲಿ ರಷ್ಯದ ರಾಯಭಾರಿಯಾಗಿರುವ ಮೆನ್ಶಿಕೋವ್‌ರವರೂ ... ಆಗಮನವನ್ನು ಬಯಸಿದರು

... ಶಿಕ್ಷಕರೂ, ... ರಷ್ಯದ ಭಾಷೆಯಲ್ಲಿ ಸ್ವಾಗತ ಗೀತೆಯನ್ನು ಹಾಡಿ ನಾಯಕರಿಗೆ ... ಅವರ ಹಣೆಗೆ ಕುಂಕುಮವನ್ನಿಟ್ಟರು

ಶ್ರೀ ಹನುಮಂತಯ್ಯನವರು ನಾಯಕರಿಗೆ ತಮ್ಮ ... ಯನ್ನೂ, ಕುಮಾರಿಯರನ್ನೂ ಪರಿಚಯ ಮಾಡಿಕೊಟ್ಟರು ಸ್ವಾಗತ ಸ್ಥಳವನ್ನು ... ಅಲಂಕರಿಸಿ, ರಾಷ್ಟ್ರನಾಯಕರ ಚಿತ್ರಗಳನ್ನು ...ಲಾಗಿತ್ತು

ಮಂತ್ರಿಗಳನ್ನೂ, ಪ್ರಮುಖ ವ್ಯಕ್ತಿಗಳನ್ನೂ ಅತಿಥಿಗಳಿಗೆ ಪರಿಚಯ ಮಾಡಿಕೊಡಲಾಯಿತು ... ಗ್ರೆಸ್ ಅಧ್ಯಕ್ಷ ಶ್ರೀ ... ಣ್ಣಯ್ಯನವರನ್ನು ಪರಿಚಯ ಮಾಡಿಕೊಡುವಾಗ ಅವರು ನಮ್ಮ ಕ್ರುಶ್ಚೇವ್‌ರವರು' ಎಂದು ಶ್ರೀ ಹನುಮಂತಯ್ಯನವರು ... ಮಾರ್ಷಲ್ ಬುಲ್ಗಾನಿನ್‌ರು ... ನಕ್ಕರು

ನಂತರ ... ವಿಮಾನದಲ್ಲಿ ಎಲ್ಲರೂ ... ಮಹಾರಾಜರೂ, ... ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರೂ ... ನಿಂತಿದ್ದು ನಮಸ್ತೆ ಎಂದು ... ಜನಸ್ತೋಮಕ್ಕೆ ವಂದಿಸುತ್ತಿದ್ದರು

ರಷ್ಯದ ನಾಯಕರುಗಳು ವಿಮಾನದಿಂದಿಳಿದ ಕೂಡಲೇ ... ಮಕ್ಕಳು ಸ್ವಾಗತ ನೀಡಿದರು ನಂತರ ... ಘಂಟೆಗೆ ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರು ... ಮಹಾತ್ಮಾಗಾಂಧಿ ರಸ್ತೆ ಮತ್ತು ... ರೋಡ್‌ಗಳ ಮಾರ್ಗವಾಗಿ ... ಆಗಮಿಸಿದರು

ದಾರಿಯುದ್ದಕ್ಕೂ ಸುಮಾರು ೭೦ ಸಾವಿರ ಮಕ್ಕಳು ಅವರಿಗೆ ಸುಸ್ವಾಗತವನ್ನು ಬಯಸಿದರು ... ಲಕ್ಷ ಜನರು ರಸ್ತೆಯ ಎರಡು ಕಡೆಗಳಲ್ಲೂ ನಿಂತು ಜಯಘೋಷ ಮಾಡಿ, ಪುಷ್ಪವೃಷ್ಟಿಗರೆದರು

ಈ ಮಧ್ಯಾಹ್ನ ಅವರುಗಳು ಟೆಲಿಫೋನ್ ಕಾರ್ಖಾನೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಮೆಷೀನ್ ಟೂಲ್ಸ್ ಕಾರ್ಖಾನೆಗಳಿಗೆ ಭೇಟಿ ಕೊಟ್ಟರು.

ಸೂಯೇಜ್ ಫಾರಂ ಆಡಳಿತದ ತನಿಖೆಗಾಗಿ ಸಮಿತಿ ನೇಮಕ

ಪೌರಸಭೆಯಲ್ಲಿ ನಿರ್ಣಯದ ನಿರಾಕರಣೆ

ಮೈಸೂರು ೨—

ನೆನ್ನೆ ಸಂಜೆ ಪುರಸಭಾಧಿವೇಶನವು ಶ್ರೀ ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. ನಗರದಲ್ಲಿ ಜನಾರೋಗ್ಯವು ಸರಿಯಾಗಿಲ್ಲವೆಂದು ಶ್ರೀ ಮಿರ್ಜಾ [illegible] ಹುಸೇನರು ಆಕ್ಷೇಪಿಸಿ, ಈ ಬಗ್ಗೆ ಹೆಲ್ತ್ ಆಫೀಸರರುಗಳು ಕರ್ತವ್ಯಲೋಪ ಮಾಡಿದ್ದಾರೆಂದು ಆಪಾದಿಸಿದರು. ಅಂಗಡಿಗಳಲ್ಲಿ ಅನಾರೋಗ್ಯಕರವಾದ ಹಣ್ಣು ಹಂಪಲುಗಳ ಮಾರಾಟವನ್ನು ನಿರ್ಬಂಧಿಸಬೇಕೆಂದು ಕೋರಿದರು. ಈ ಬಗ್ಗೆ ಕೈಗೊಂಡ ಕ್ರಮಗಳನ್ನು ಅಧ್ಯಕ್ಷರು ವಿವರಿಸಿದರು.

ಪುರಸಭೆಯ ಲೆಕ್ಕಪತ್ರಗಳನ್ನು ಅನೇಕ ವರ್ಷಗಳಲ್ಲಿ ತನಿಖೆ ಮಾಡದೆ ಎಷ್ಟೋ ಬಾಕಿ ಬರಬೇಕಾದುದು ಕೈಬಿಟ್ಟುಹೋಗಿರುವುದೆಂದೂ, ಆದ್ದರಿಂದ ತಕ್ಷಣ ಕ್ರಮ ಕೈಗೊಳ್ಳಬೇಕೆಂದೂ ಸೂಚಿಸಿದ ಶ್ರೀ ವೆಂಕಟಲಿಂಗಯ್ಯನವರ ಸಲಹೆಯನ್ನು ಅಧ್ಯಕ್ಷರು ಒಪ್ಪಿದರು.

ಸರ್ಕಾರದಿಂದ ಪುರಸಭೆಗೆ ಬರಬೇಕಾದ ಕಂದಾಯದ ಬಾಕಿ ವಸೂಲಿಗಾಗಿ ಕೈಗೊಂಡಿರುವ ಕ್ರಮದ ಬಗ್ಗೆ ಶ್ರೀ ಸಿ. ಎಲ್. ನಾರಾಯಣರಾಯರು ಕೇಳಿದ ಪ್ರಶ್ನೆಗೆ ಕಮಿಷನರು ಉತ್ತರವಿತ್ತು, ಕೈಲ್ಲೆ ಇಲಾಖೆಯವರೊಡನೆ ಇನ್ನೂ ವ್ಯವಹಾರ ನಡೆಯುತ್ತಿದೆಯೆಂದು ಹೇಳಿದರು. ಮಹಾರಾಜರ ಹವಾಯಿತಿಗಳ ಮತ್ತು ಅಂಗರಕ್ಷಕ ದಳದ ವಸತಿ ಗೃಹಗಳ ಕಂದಾಯವನ್ನು ಈ ವರ್ಷದಿಂದ ಕೊಡುವುದಾಗಿ ಒಪ್ಪಿ ಹಿಂದಿನ ಬಾಕಿಯನ್ನು ವಜಾ ಮಾಡಬೇಕೆಂದು ಸರ್ಕಾರದವರು ತಿಳಿಸಿರುವ ಅಂಶವನ್ನು ಅವರು ಹೊರಗೆಡಹಿದರು.

ತನ್ನ ವಾರ್ಡುಗಳಲ್ಲಿ ಕಾಮಗಾರಿ ಕೆಲಸ ಆಗಬೇಕಾಗಿದೆಯೆಂದು ಅನೇಕ ಸದಸ್ಯರು ಆಕ್ಷೇಪಿಸಿದರು. ಈ ವಿಷಯದಲ್ಲಿ ಪಕ್ಷಪಾತ ನಡೆಯುತ್ತಿದೆಯೆಂದು ಹಲವರು ಆರೋಪಿಸಿದರು. ಎಲ್ಲಾ ವಾರ್ಡುಗಳ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುವಷ್ಟು ಹಣವು ಇಲ್ಲದ ಕಾರಣ ಈ ರೀತಿ ಆಗಿದೆಯೆಂದು ಅಧ್ಯಕ್ಷರು ಸಮಾಧಾನವಿತ್ತರು.

ಪ್ರಶ್ನೋತ್ತರಗಳಾದನಂತರ ಸಭೆಯು ನಿರ್ಣಯಗಳನ್ನು ಚರ್ಚಿಸಿತು. ನರಸಿಂಹರಾಜ ಮೊಹಲ್ಲಗೆ ಒಂದು ಪೊಲೀಸ್ ಠಾಣೆಯನ್ನು ಕೊಡಬೇಕೆಂಬ ಶ್ರೀ ಕುಟೀನೋನವರ ಮತ್ತು ನಿಶಾತ್‌ಬಾಗ್‌ನಲ್ಲಿರುವ ಕುಷ್ಠರೋಗಿ ಕೊಠಡಿಯನ್ನು ಎಕ್ಸ್‌ಟೆನ್‌ಷನ್ ಮಿತಿಯಿಂದ ಮುಕ್ತವಾಗಿಡಬೇಕೆಂಬ ಶ್ರೀ ಎಂ. ಎಲ್. ತಿಮ್ಮಯ್ಯನವರ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ಸೂಯೇಜ್ ಫಾರಂ ಆಡಳಿತದ ವಿಚಾರದಲ್ಲಿ ಅನೇಕ ದೂರುಗಳು ಕೇಳಿಬರುತ್ತಿರುವುದರಿಂದ ಆ ಬಗ್ಗೆ ವಿಚಾರಣೆ ನಡೆಸಲು ವಿಶೇಷಾಧಿಕಾರದ ಒಂದು ಸಮಿತಿಯನ್ನು ರಚಿಸಬೇಕೆಂದು ಕೋರಿ ಶ್ರೀ ತಿಮ್ಮಯ್ಯನವರು ಮಂಡಿಸಿದ ನಿರ್ಣಯದ ಮೇಲೆ ಬಹಳ ಚರ್ಚೆಯಾಯಿತು.

ಶ್ರೀ ತಿಮ್ಮಯ್ಯನವರು ಮಾತನಾಡಿ ಹಲವು ವರ್ಷಗಳಿಂದ ಬರುವ ವರಮಾನಕ್ಕಿಂತ ಹೆಚ್ಚು ಖರ್ಚು ಫಾರಮ್ಮಿನಲ್ಲಿ ಆಗುತ್ತಿದೆಯೆಂದೂ, ಫಾರಮ್ಮಿನ ಎಷ್ಟೋ ವಸ್ತುಗಳು ಕಳ್ಳತನದಿಂದ ಸಾಗುತ್ತಿವೆಯೆಂದೂ, ಇಲ್ಲದೆ ಇತ್ತೀಚೆಗೆ ಮ್ಯಾನೇಜರ ಮೇಲೆ [illegible] ಬಂದಿರುವ ದೂರಿನ ಸಂಬಂಧದ ಆರೋಪಗಳು ಒಂದು ಸಾರ್ವಜನಿಕ ವಿಚಾರಣೆಯಾಗಬೇಕೆಂದೂ ಹೇಳಿದರು. ಇಲ್ಲವೆ ಸರ್ಕಾರದವರು ಸಹ ಅಲ್ಲಿನ ಸ್ಥಿತಿಗತಿಗಳ ಬಗ್ಗೆ ಅತೃಪ್ತಿಯನ್ನು ಸೂಚಿಸಿರುವುದನ್ನು ಪ್ರಸ್ತಾಪಿಸಿದರು.

ಆಗ ಅಧ್ಯಕ್ಷರು ಎದ್ದು ಸರ್ಕಾರದವರ ಪತ್ರವು ಬಹಳ ಹಿಂದಿನದಾಗಿದ್ದು ಅದರ ವಿಚಾರಣೆ ನಡೆದು ಮುಗಿದಿರುವುದೆಂದು ಹೇಳಿ, ಫಾರಮ್ಮನ್ನು ಮುಚ್ಚಲು ನಮ್ಮನ್ನು ಕೇಳುತ್ತಿರುವುದಾಗಿ ಹೇಳಿ, [illegible] ಹೀನಸ್ಥಿತಿಯಲ್ಲಿರುವ ತಮ್ಮ ಎಷ್ಟೋ ಫಾರಂಗಳನ್ನು ಮುಚ್ಚಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಮುಂದುವರಿದು, ಈ ರೀತಿ ಆಪಾದನೆಗಳನ್ನು ಮಾಡುವಾಗ ಅವರ ವಿಚಾರಣೆಗೆ ಸಮಿತಿಯ 'ಸ್ಪಷ್ಟ' ವಿಷಯವಾಗಿರಬೇಕೆಂದೂ, ಹಾಗು ಸಲಹಾ ಸಾಕ್ಷ್ಯಗಳನ್ನು ಒದಗಿಸಲು ಸಿದ್ಧನಾಗಿರುವುದಾಗಿ [illegible]

ಗೋವಾ ರಾಷ್ಟ್ರೀಯರಿಂದ ಪೋರ್ಚುಗೀಸ್ ಸೈನಿಕರಿಗೆ ಗುಂಡಿನೇಟು

ಗೋವಾದ ಬಿಕೋಲಿಂ ಎಂಬಲ್ಲಿ ಕಳೆದ ಸೋಮವಾರ ರಾಷ್ಟ್ರೀಯರು ಇಬ್ಬರು ಪೋರ್ಚುಗೀಸ್ ಪೊಲೀಸರನ್ನು ಗುಂಡಿನಿಂದ ಹೊಡೆದು ಕೊಂದರೆಂದು ವರದಿಯಾಗಿದೆ. ಸೈನಿಕರು ರಾತ್ರಿ ಗಸ್ತು ತಿರುಗುತ್ತಿದ್ದು, ವಾಪಸು ಬರುತ್ತಿದ್ದಾಗ ಗುಂಡನ್ನು ಹಾರಿಸಲಾಯಿತೆಂದೂ ಅವರ ಜೀಪು ಕಾರನ್ನು ಬೆಂಕಿ ಹತ್ತಿಸಿ ಸುಡಲಾಯಿತೆಂದೂ ತಿಳಿದುಬಂದಿದೆ. ಹಿಂಸಾತ್ಮಕ ಕಾರ್ಯಗಳಲ್ಲಿ ತೊಡಗಿರುವ ರಾಷ್ಟ್ರೀಯರಿಗೆ ಸಹಾಯ ಮಾಡುತ್ತಿರುವರೆಂಬ ಸಂಶಯದ ಮೇಲೆ ಪಕ್ಕಾರಿ ಎಂಬಲ್ಲಿನ ಪ್ರಮುಖ ಜಮೀನುದಾರರೊಬ್ಬರ ದಸ್ತಗಿರಿಯಾಗಿದೆ.

ವಿದ್ಯುಚ್ಛಕ್ತಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ವರ್ಗ

ನಗರದ ವಿದ್ಯುಚ್ಛಕ್ತಿ ಇಲಾಖೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಎಸ್. ಕೃಷ್ಣಸ್ವಾಮಿಯವರನ್ನು ಶಿವಮೊಗ್ಗದ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ.

ವಿವಾಹ ಮಹೋತ್ಸವಗಳು

ರಾಜಧಾನಿಯ ಶ್ರೀ ವಿ. ವೆಂಕಟರಾವ್ ವಕೀಲರ ಶ್ರೀ ಎ. ವಿ. ಮುನಿಸ್ವಾಮಿ ಶೆಟ್ಟರ ಪುತ್ರಿ ಸೌ॥ ಲಲಿತಾಂಬರವರನ್ನು ಚಾಮರಾಜನಗರದ ಶ್ರೀ ಎನ್. ರಂಗನಾಥಶೆಟ್ಟಿಯವರ ಕುಮಾರರು ಶ್ರೀ ಆರ್. ನಂಜುಂಡಯ್ಯನವರಿಗೆ ಕೊಟ್ಟು ಮೊನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಲಾಯಿತು.

ಚಾಮರಾಜನಗರದ ಕಾಯಿಕತ್ತೆಗಾರರಾದ ಶ್ರೀ ಟಿ. ನಂಜುಂಡಯ್ಯನವರು ತಮ್ಮ ಕುಮಾರರಾದ ಶ್ರೀ ಎನ್. ಅನಂತನಾರಾಯಣರವರಿಗೆ ಬೆಂಗಳೂರು ತ್ಯಾಗರಾಜಪೇಟೆಯ ಶ್ರೀ ಬಿ. ಕೃಷ್ಣಪ್ಪನವರ ಕುಮಾರಿ ಸೌ॥ ಸಾವಿತ್ರಿಯನ್ನು ತಂದುಕೊಂಡು ಕಳೆದ ಬುಧವಾರ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಗಿರುವುದಾಗಿಯೂ ಹೇಳಿದರು. ಶ್ರೀ ಶ್ರೀಕಂಠಯ್ಯರು ನಿರ್ಣಯವನ್ನು ಅನುಮೋದಿಸಿದರು.

ಶ್ರೀಗಳಾದ ಸಿ. ಎಲ್. ನಾರಾಯಣರಾವ್, ಬಿ. ಜೆ. ಸೇಠ್ ಮತ್ತು ಗೋವಿಂದಯ್ಯನವರು ಮಾತನಾಡಿ ನಿರ್ಣಯವನ್ನು ಸಮರ್ಥಿಸಿದರು. ಅಧ್ಯಕ್ಷರು ಹಲವು ಅಂಕಿಅಂಶಗಳನ್ನು ಸಭೆಯ ಮುಂದಿಟ್ಟು ನಿರ್ಣಯದ ಸೂಚಕರ ಆಪಾದನೆಗಳನ್ನು ಖಂಡಿಸಿದರು.

ಶ್ರೀ ಎಸ್. ಲಿಂಗಣ್ಣನವರು ಮಾತನಾಡಿ, ಆ ಮನವರಿಕೆ ಒಬ್ಬ ವ್ಯಕ್ತಿಯ ಮೇಲೆ ಹಕ್ಕಿಸದೆ ಆಪಾದನೆ ಮಾಡಲಾಗಿದೆಯೆಂದೂ, ಆಡಳಿತದ ಪ್ರಗತಿ ಅಥವಾ ಲೋಪಗಳಿಗೆ ಕೇವಲ ಒಬ್ಬ ವ್ಯಕ್ತಿಯೇ ಕಾರಣನಲ್ಲವೆಂದೂ, ಇಲ್ಲದೆ ಈಗಿನ ಮ್ಯಾನೇಜರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದೂ ಹೇಳಿ, ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಒತ್ತಾಯ ಮಾಡಿದರು.

ಅಧ್ಯಕ್ಷರ ಹಲವು ಅಂಶಗಳಿಗೆ ಉತ್ತರವೀಯಲು ಶ್ರೀ ತಿಮ್ಮಯ್ಯನವರು ಎದ್ದಾಗ ಅಧ್ಯಕ್ಷರು ಅವರಿಗೆ ಮಾತನಾಡಲು ಕೊನೆಯ ಅವಕಾಶವೆಂದು ಹೇಳಲು ಅದನ್ನು ಪ್ರತಿಭಟಿಸಿ ಶ್ರೀ ತಿಮ್ಮಯ್ಯನವರು ಸ್ವಲ್ಪ ಕಾಲ ಸಭಾತ್ಯಾಗ ಮಾಡಿದರು. ಅನಂತರ ನಿರ್ಣಯವು ೧೯-೭ ಮತಗಳಿಂದ ತಿರಸ್ಕೃತವಾಯಿತು. ಇಬ್ಬರು ಸದಸ್ಯರು ತಟಸ್ಥರಾಗಿದ್ದರು.

ನಗರದ ಪತ್ರಿಕೋದ್ಯೋಗಿಗಳಿಗೆ ಮನೆ ಕಟ್ಟಿಕೊಳ್ಳಲು ಸುಲಭ ದರದಲ್ಲಿ ನಗರದ ಮಧ್ಯೆ ನಿವೇಶನಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ಶ್ರೀ ಪಿ. ಕೆ. ಪುಟ್ಟಯ್ಯನವರ ನಿರ್ಣಯಕ್ಕೆ "ಮತ್ತೆಯಿಲ್ಲದ ಪತ್ರಿಕೋದ್ಯೋಗಿಗಳಿಗೆ" ಎಂಬ ತಿದ್ದುಪಡಿಯು ಸೂಚಿಸಲ್ಪಟ್ಟು ನಿರ್ಣಯವು ಅಂಗೀಕೃತವಾಯಿತು.

ವಿದ್ಯಾರಣ್ಯಪುರಕ್ಕೆ ಪೊಲೀಸ್ ಠಾಣೆಯು ಬೇಕೆಂದು ಕೋರಿ ಪುರಸಭೆಯು ಕಳುಹಿಸಿದ್ದ ಮನವಿಗೆ ಸಾಧ್ಯವಿಲ್ಲವೆಂದು ಸೂಚಿಸಿ ಐ. ಜಿ. ಪಿ. ಯವರ ಕಚೇರಿಯಿಂದ ಬಂದ ಉತ್ತರದ ರೀತಿಯ ಬಗ್ಗೆ ಸದಸ್ಯರು ಅಸಮಾಧಾನ ಸೂಚಿಸಿ, ತೀವ್ರವಾಗಿ ಪ್ರತಿಭಟಿಸಿ ಮತ್ತೊಮ್ಮೆ ಪತ್ರವನ್ನು ಬರೆಯಬೇಕೆಂದು ಕೋರಿದರು.

ಪೂರ್ವ ಬಂಗಾಳ ಮಂತ್ರಿಮಂಡಲದ ವಜಾ ಸಂಭವ

ಪೂರ್ವ ಬಂಗಾಳದಲ್ಲಿ ಪೋಲೀಸರ ದಂಗೆಯೊಂದು ನಡೆಯುತ್ತಿದೆಯೆಂದೂ, ಅವರು ಮುಷ್ಕರ ಹೂಡಿರುವರೆಂದೂ ವರದಿಯಾಗಿದೆ. ಢಾಕಾ ಮತ್ತು ನಾರಾಯಣಗಂಜಿನ ಪೋಲೀಸರು ಕೆಲಸಕ್ಕೆ ಹಿಂದಿರುಗಿಲ್ಲ. ಅಲ್ಲಿನ ಸರ್ಕಾರ್ ಮಂತ್ರಿಮಂಡಲವನ್ನು ಈ ದಂಗೆಯ ಕಾರಣಕ್ಕಾಗಿ ವಜಾ ಮಾಡುವ ಸಂಭವವಿರುವುದೆಂದು ಹೇಳಲಾಗುತ್ತಿದೆ.

ರೀವಾದಲ್ಲಿ ೩೪ ಜನರ ಬಂಧನ

ಕಳೆದ ಬುಧವಾರ ರೀವಾದಲ್ಲಿ ನಡೆದ ಘಟನೆಗಳ ಅಂಗವಾಗಿ ೩೪ ಜನರನ್ನು ಬಂಧಿಸಲಾಗಿದೆ.

ಜಪಾನಿನಲ್ಲಿ ರೇಡಿಯೊ ಕೇಳದ ಮನೆ

ಜಪಾನಿನಲ್ಲಿ ರೇಡಿಯೊ ಚಲಿತ ಕಣಗಳಿಂದ ಕೂಡಿದ ಮಳೆ ಮತ್ತು ಇಬ್ಬನಿ ಬೀಳುತ್ತಿರುವುದೆಂದು ಗೊತ್ತಾಗಿದೆ. ಸ್ಪಪೀರಿಯದಲ್ಲಿ ಬಹು ಭಾರಿ ಅಣು ಪರೀಕ್ಷಣ ನಡೆಸಲಾಯಿತೆಂದು ಸುದ್ದಿ ಬಂದನಂತರ ಈ ಘಟನೆಯೂ ಆಗಿದೆ.

ಹೆಚ್ಚು ಗಂಡು ಮಕ್ಕಳ ಜನನ

೧೯೫೪ರ ೩೧ ರವರೆಗೆ ೪ ವರ್ಷದಲ್ಲಿ ದೇಶದ [illegible] ಗಂಡು ಮಕ್ಕಳು ಹೆಚ್ಚಾಗಿ ಜನ್ಮವೆತ್ತಿರುವರೆಂದು ಗೊತ್ತಾಗಿದೆ. ೧೯೫೦ ಮತ್ತು ೫೩ ರಲ್ಲಿ ಗಂಡು ಮಕ್ಕಳು ಜನನವು ಹೆಣ್ಣು ಮಕ್ಕಳ ಜನನಕ್ಕಿಂತಲೂ ಹೆಚ್ಚು. [illegible] ಮತ್ತು [illegible] ವರ್ಷದಲ್ಲಿ ಹೆಚ್ಚಾಗಿ ೧೦ ಲಕ್ಷ ೩೦೦ ಗಂಡು ಮತ್ತು ೩೩,೬೭,೦೦೦ ಹೆಣ್ಣುಗಳೂ, ೧೯೫೩ ರಲ್ಲಿ ೩೬,೭೨,೦೦೦ ಗಂಡು ಮತ್ತು ೩೩,೩೭,೦೦೦ ಹೆಣ್ಣು ಮಕ್ಕಳು ಜನಿಸಿವೆ.

ಗೀತಾ ಪರೀಕ್ಷೆ

ಮೈಸೂರು ಮಹಾರಾಜ ಕಾಲೇಜಿನ ೩೦ನೇ ನಂಬರ್ ರೂಮಿನಲ್ಲಿ ಇದೇ ತಿಂಗಳು ೨೭ನೇ ತಾರೀಕು ಭಾನುವಾರ ಬಿ. ಹೆಚ್. ಯು. ಗಂಟೆಗೆ ಸರಿಯಾಗಿ ಹಿಂದೂ ವಿಶ್ವವಿದ್ಯಾಲಯದ ಗೀತಾ ಪರೀಕ್ಷೆಗಳು ಪ್ರಾರಂಭವಾಗುವುವು. ಪರೀಕ್ಷಾರ್ಥಿಗಳು ಪ್ರವೇಶ ಪತ್ರಗಳನ್ನು ಕಾಲೇಜು ಕಾರ್ಯಾಲಯದಲ್ಲಿ ಪಡೆಯಬಹುದು ಎಂದು ತಿಳಿಸಲಾಗಿದೆ.

ನಗರದ ಪ್ರಾಚ್ಯ ಸಂಶೋಧನಾಲಯದ ಕಂಡುಕೊಳತಿಗಳು

ನಗರದಲ್ಲಿರುವ ಪ್ರಾಚ್ಯ ಸಂಶೋಧನಾಲಯದಲ್ಲಿ ಕಂಡುಬಂದಿರುವ ಹಲವು ಕುಂದುಕೊರತೆಗಳ ಬಗ್ಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಅರಿಕೆ ಮಾಡಲಾಗಿದೆ. ಅದಲ್ಲದೆ ಭಾಷೆಯಲ್ಲಿ ವಿದ್ವತ್ತುಳ್ಳ ದಕ್ಷರನ್ನು ಪುಸ್ತಕ ಪ್ರಕಟಣೆಗೆ ನೇಮಿಸಬೇಕು, ಸಂಸ್ಕೃತದ ಅಕ್ಷರವು ತಿಳಿಯದೇ ಕೇವಲ ಪುಸ್ತಕಗಳ ನಂಬರುಗಳ ಜ್ಞಾನವನ್ನು ಪಡೆದವರೇ ಸಾಲದು, ಪುಸ್ತಕಗಳನ್ನು ಪಡೆಯಲು ಈಗಿರುವ ನಿಯಮಗಳ ಕ್ರಮ ತಪ್ಪಬೇಕು, ಇದಲ್ಲದೆ ಗ್ರಂಥಗಳನ್ನು ನೋಡಲು, ವಿಶೇಷ ವಿಷಯಗಳನ್ನು ಗ್ರಹಿಸಲು ಆಸಕ್ತರಿಗೆ ಸೌಕರ್ಯವನ್ನು ಕಲ್ಪಿಸಬೇಕು, ಪ್ರತಿ ವರ್ಷವೂ ಜರುಗುವ ಸಂಶೋಧನೆ ಮತ್ತು ಪುಸ್ತಕ ಪ್ರಕಟಣೆಗಳ ಬಗ್ಗೆ ವಿಚಾರ ಪೂರ್ವಕ ವಿವರಣೆಗಳುಳ್ಳ ಮಾಸಿಕ, ತ್ರೈಮಾಸಿಕ ಪತ್ರಿಕೆಯನ್ನು ಹೊರಡಿಸಬೇಕು ಇವೇ ಮುಂತಾದ ಸಲಹೆಗಳನ್ನು ನಾಗರಿಕರೊಬ್ಬರು ಸೂಚಿಸಿರುವರು.

ಹೊಸ ಜವಳಿ ಅಂಗಡಿ

ಬೆಲೆ ಸುಲಭ!

ದಿಂಡಿಗಲ್, ಕೊಳ್ಳೇಗಾಲ, ಮಂಗಳೂರು, ಕೊಯಮತ್ತೂರು, ಧರ್ಮಾವರಂ ಸೀರೆಗಳು

ಮತ್ತು

ಎಲ್ಲಾ ರಕಮ್ ಮಿಲ್ ಬಟ್ಟೆಗಳು ನಮ್ಮಲ್ಲಿ ದೊರೆಯುತ್ತವೆ.

ವಿಜಯ ಹಾಲ್,

ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು

ಎಂಜಿನ್ನಿಲ್ಲದೆ ವ್ಯಾಗನ್ನುಗಳು ಓಡಿದ ಪ್ರಸಂಗ

ಕಳೆದ ಸೆಪ್ಟೆಂಬರ್ ೧೩ರಂದು ಈಶಾನ್ಯ ರೈಲ್ವೆಯಲ್ಲಿ ೩೫ ಥರ್ಡ್ ವ್ಯಾಗನ್ನುಗಳು ಎಂಜಿನ್ನಿಲ್ಲದೆ ೩೦ ಮೈಲಿ ದೂರ ಇಳಿಜಾರಿನಲ್ಲಿ ಪ್ರಯಾಣ ಮಾಡಿದ ಪ್ರಸಂಗವನ್ನು ರೈಲ್ವೆ ಉಪ ಸಚಿವರು ತಿಳಿಸಿರುತ್ತಾರೆ. ಒಂದು ಕಡೆ ಇದ್ದ [illegible] ಗೆ ಇಂಜನ್ನಿಗೆ ಅವು ತಗುಲಿ ನಿಂತುವೆಂದು ಅವರು ಹೇಳಿದರು. [illegible]

ಹಾಕ್ಕಿ ಸ್ಪರ್ಧೆ [illegible]

ರಾಮಕೃಷ್ಣ ವಿದ್ಯಾ ಮಂದಿರದ ಆಶ್ರಯದಲ್ಲಿ ಮೊನ್ನೆ ನಡೆದ ಇಂಟರ್ ಹೈಸ್ಕೂಲ್ [illegible] ಜೂಬಿಲಿ ಫೀಲ್ಡ್ ಕ್ರೀಡೆಯಲ್ಲಿ ಹಾರ್ಡ್ವಿಕ್ ಹೈಸ್ಕೂಲಿನವರು ೩-೨ ಪಾಯಿಂಟುಗಳಿಂದ [illegible] ಗಳಿಸಿ, ಛಾಂಪಿಯನ್ ಷಿಪ್ ಪಡೆದರು. [illegible]

ಧನ್ವಂತರಿ ಜಯಂತಿ ಮಹೋತ್ಸವ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಪದವೀಧರರ ಸಂಘದ ಆಶ್ರಯದಲ್ಲಿ ಡಿಸೆಂಬರ್ ೧೧ನೇ ತಾರೀಖು ಭಾನುವಾರ [illegible] ಜಿಲ್ಲಾ ಬೋರ್ಡ್ ಕಚೇರಿಯ ಹಲ್ಲಿ [illegible] ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಶ್ರೀ ಬಿ. ಸೀತಾರಾಮರಾವರ ಅಧ್ಯಕ್ಷತೆಯಲ್ಲಿ [illegible] ಆಯುರ್ವೇದ ವೈದ್ಯರ ಹೊದಲನೆ [illegible] ಕೆತ್ತು ಸಂಭಾಷಣ ಪರಿಷತ್ತಿನ ಆರಂಭೋತ್ಸವವು ಮತ್ತು ಶ್ರೀ ಧನ್ವಂತರಿ ಜಯಂತಿ [illegible] ನೇಲ್ ಅಲಿ ಖಾನ್ ನವರ ದಿನಚರ್ [illegible] ನೆರವೇರುವುವು.

ಸಂಘದ ಆಶ್ರಯದಲ್ಲಿ ಡಿಸೆಂಬರ್ [illegible] ತಾರೀಕು ಮೈಸೂರು ಆಯುರ್ವೇದ [illegible] ಸಭಾಂಗಣದಲ್ಲಿ ಇಲ್ಲಿನ ಜಿಲ್ಲಾಧಿಕಾರಿ [illegible] ಎಂ. ಎಸ್. ಶಂಕರರಾಯರ ಅಧ್ಯಕ್ಷತೆ [illegible] ದೇ ಉತ್ಸವವು ನಡೆಯುವುವು. ವೈದ್ಯ [illegible] ಈ ಉತ್ಸವದಲ್ಲಿ ಭಾಗವಹಿಸಬೇಕಾಗಿ [illegible] ಲಾಗಿದೆ.

ಬೆಂಗಳೂರು ರೇಡಿಯೊ ನಾಳೆ [illegible]

[illegible]

ಮೈಸೂರು ಪೇಟೆ ಧಾ[ರಣೆ]

	ರೂ	ಆಣೆ	[illegible]
ಕಡಲೆಕಾಯಿ	[illegible]	[illegible]	[illegible]
ಹರಳುಬೀಜ	[illegible]	[illegible]	[illegible]
ಹುರುಳಿ	[illegible]	[illegible]	[illegible]
ಹೆಸರು	[illegible]	[illegible]	[illegible]
ಕಡಲೆಕಾಳು	[illegible]	[illegible]	[illegible]
ಉದ್ದು	[illegible]	[illegible]	[illegible]
ತೊಗರಿ	[illegible]	[illegible]	[illegible]
ಕೊಬ್ಬರಿಬೀಜ	[illegible]	[illegible]	[illegible]
ಹುಣಸೇಹಣ್ಣು	[illegible]	[illegible]	[illegible]
ಸೀಗೆಕಾಯಿ	[illegible]	[illegible]	[illegible]
ಮೆಣಸಿನಕಾಯಿ	[illegible]	[illegible]	[illegible]
ಹತ್ತಿ (೨೪ ಪೌಂಡು)	[illegible]	[illegible]	[illegible]
ತೆಂಗಿನಕಾಯಿ ೧,೦೦೦	[illegible]	[illegible]	[illegible]

SREE GANE[SH]

TALKIES

Gala Release on 26-11-[55]

Daily 3 Shows

DOCTOR IN THE [HOUSE]

(In-Technicolor)

The much-awaited Comedy

A perfect presentation for [illegible]

With:- Dirk Bogarde, Kay [Kendall]

& Kenneth More etc.

A MUST SEE picture by [illegible] student communities, [illegible] by those of the Medical [illegible]

Edited, Printed and P[ublished] by A. R. Nagarajan at [illegible] Press, D. Subbiah Road [illegible]

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲ ಪತ್ರಿಕೆಗಳಿಗಿಂತ

ಪ್ರಚಾರದಲ್ಲಿರುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು

ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಒಂದಿನ ಪತ್ರಿಕೆ ೩ ಕಾಸು

ಚಂದಾ ದರ

ಏಜೆಂಟರುಗಳ ಮೂಲಕ

ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ

ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೩೭] SADHVI : SUNDAY 27-11-1955 ಮೈಸೂರು ಭಾನುವಾರ ೨೭-೧೧-೧೯೫೫ [ಸಂಚಿಕೆ : ೧೦೪

ರಷ್ಯದಲ್ಲಿ ಅತ್ಯಂತ ಪ್ರಬಲವಾದ ಅಣುಶಸ್ತ್ರದ ಆಸ್ಫೋಟನೆ

ಕೊಯಮುತ್ತೂರಿಗೆ ರಷ್ಯದ ನಾಯಕರ ಪ್ರಯಾಣ

(ಪ್ರ. ವ. ಫ್ರೋ.) ಬೆಂಗಳೂರು ೨೬

ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕ್ರುಶ್ಚೇವ್‌ರವರು ಇಲ್ಲಿಗೆ ತಮ್ಮ ಭೇಟಿಯ ಕಾರ್ಯಕ್ರಮಗಳನ್ನು ಮುಗಿಸಿಕೊಂಡು, ಈ ದಿನ ಬೆಳಗ್ಗೆ ... ಘಂಟೆಗೆ ವಿಮಾನದಲ್ಲಿ ಕೊಯಮುತ್ತೂರಿಗೆ ತೆರಳಿದರು. ವಿಮಾನ ನಿಲ್ದಾಣದಲ್ಲಿ ರಾಜಪ್ರಮುಖರೂ, ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೂ ಮತ್ತು ಇತರ ಸಚಿವರೂ ಅವರನ್ನು ಬೀಳ್ಕೊಟ್ಟರು.

ರಷ್ಯ ನಾಯಕರು ವಿಮಾನವನ್ನು ಹತ್ತುವ ಮುಂಚೆ ಶ್ರೀ ರಾಜಪ್ರಮುಖರು ಅವರುಗಳ ಕೊರಳಿಗೆ ಹಾರಗಳನ್ನು ಹಾಕಿದರು. ಬುಲ್ಗಾನಿನ್‌ರವರು ಮಾತನಾಡಿ, ಭಾರತದ ಇತರ ಎಲ್ಲ ಕಡೆಗಳಿಗಿಂತ ಅತ್ಯಂತ ಹೃದಯಪೂರ್ವಕವಾದ ಸ್ವಾಗತವು ತಮಗೆ ಇಲ್ಲಿ ದೊರಕಿದ್ದಾಗಿಯೂ, ಅದಕ್ಕಾಗಿ ಇಲ್ಲಿನ ಜನರಿಗೆ ತಾವು ಹೃತ್ಪೂರ್ವಕವಾಗಿ ವಂದಿಸುತ್ತೇವೆಂದೂ ತಿಳಿಸಿ, ಮೈಸೂರಿನ ಜನತೆಗೆ ಶುಭಾಶಯಗಳನ್ನು ಕೋರಿದರು.

ರಷ್ಯದ ನಾಯಕರಿಂದ ಜರತಾರಿ ರುಮಾಲು ಧಾರಣೆ

... ಯಲ್ಲಿ ಗಾಂಧಿ ಟೋಪಿಗಳನ್ನು ಧರಿಸಿದ್ದ ರಷ್ಯದ ನಾಯಕರು ನೆನ್ನೆ ಮೈಸೂರಿನಲ್ಲಿ ... ಮೈಸೂರಿನ ಜರತಾರಿ ರುಮಾಲುಗಳನ್ನು ಧರಿಸಿಕೊಂಡು ಫೋಟೋ ತೆಗೆಸಿಕೊಂಡರು.

ರಷ್ಯದಲ್ಲಿ "ಬುಕ್ಕಿನ ತೆರೆ" ಇರುವುದೆಂದು ... ಪ್ರಚಾರವಾಗಿ ತಿರಸ್ಕರಿಸುತ್ತಿರುವ ಕ್ರುಶ್ಚೇವ್‌ರವರು ನೆನ್ನೆ ಬೆಂಗಳೂರಿನಲ್ಲಿ ನಡೆದ ... ಸಮಾರಂಭದಲ್ಲಿ "ಬೆಂಗಳೂರಿನಲ್ಲಿ ಪುಷ್ಪಹಾರದ ತೆರೆ" ಇರುವುದನ್ನು ಕಂಡು ನಕ್ಕರು ...

ದಕ್ಷಿಣ ಜೋನ್ ಮತ್ತು ನ್ಯೂಜಿಲೆಂಡ್ ಕ್ರಿಕೆಟ್ ಪಂದ್ಯ

(ಪ್ರ. ವ. ಫ್ರೋ.) ಬೆಂಗಳೂರು ೨೬

ನೆನ್ನೆ ಇಲ್ಲಿ ಆರಂಭವಾದ ಸೌತ್ ಜೋನ್ ಮತ್ತು ನ್ಯೂಜಿಲೆಂಡ್ ಕ್ರಿಕೆಟ್ ಪಂದ್ಯದಲ್ಲಿ ಸೌತ್ ಜೋನಿನವರು ... ರನ್ನುಗಳನ್ನು ಮಾಡಿ ... ತರುವಾಯ ನ್ಯೂಜಿಲೆಂಡಿನವರು ಆಟವನ್ನು ಆರಂಭಿಸಿ ನೆನ್ನೆ ಆಟದ ಕೊನೆಯ ವೇಳೆಗೆ ಒಂದು ವಿಕೆಟ್ಟನ್ನು ಕಳೆದುಕೊಂಡು ... ರನ್ನುಗಳನ್ನು ಮಾಡಿದ್ದರು. ಈ ದಿನ ಊಟದ ವೇಳೆಗೆ ... ವಿಕೆಟ್ಟುಗಳನ್ನು ಕಳೆದುಕೊಂಡು ... ರನ್ನುಗಳನ್ನು ಮಾಡಿದ್ದರು.

ಕಾಶ್ಮೀರಕ್ಕೆ ರಷ್ಯಾ ನಾಯಕರ ಭೇಟಿ

ರಷ್ಯದ ನಾಯಕರಾದ ಮಾರ್ಷಲ್ ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರು ಭಾರತದ ಪ್ರವಾಸದ ಕೊನೆಯಲ್ಲಿ ಕಾಶ್ಮೀರಕ್ಕೂ ಎರಡು ದಿನಗಳ ಮಟ್ಟಿಗೆ ಭೇಟಿ ಕೊಡುವರೆಂದು ತಿಳಿದು ಬಂದಿದೆ.

ರಷ್ಯದಲ್ಲಿ ಅತ್ಯಂತ ಪ್ರಬಲ ಅಣು ಶಸ್ತ್ರದ ಆಸ್ಫೋಟನೆ

ಸ್ಪಷ್ಟವಾದ ಪ್ರಶ್ನೆಗಳಿಗೆ ಕ್ರುಶ್ಚೇವರ ಸವಾಲು

ಬೆಂಗಳೂರು ಪೌರ ಸನ್ಮಾನ ಸಮಾರಂಭದಲ್ಲಿ ಭಾಷಣ

ಬೆಂಗಳೂರು ೨೬

ಇತ್ತೀಚೆಗೆ ನಡೆದಿರುವ ಪರೀಕ್ಷೆಯಲ್ಲಿ ರಷ್ಯ ವಿಜ್ಞಾನಿಗಳು ಇದುವರೆಗೆ ಅತ್ಯಂತ ಪ್ರಬಲವಾದ ಅಣುಶಸ್ತ್ರದ ಆಸ್ಫೋಟನೆಯನ್ನು ರಷ್ಯವು ನಡೆಸಿದೆ ಎಂಬ ಸಂಗತಿಯನ್ನು ರಷ್ಯದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ನಿಕಿಟಾ ಕ್ರುಶ್ಚೇವ್‌ರವರು ನೆನ್ನೆ ಇಲ್ಲಿ ಹೊರಗೆಡಹಿದರು. ಇದುವರೆಗೆ ಪ್ರಯೋಗಿಸಿದ ಅಣುಶಕ್ತಿಯನ್ನು ಮೀರಿಸುವಷ್ಟು ಅತ್ಯಂತ ಪ್ರಬಲವಾದ ಆಸ್ಫೋಟನೆಯನ್ನು ನಡೆಸಿರುವುದಾಗಿ ತಿಳಿಸಿದರು. ಮತ್ತೊಂದು ಮಹಾ ಯುದ್ಧವನ್ನು ತಡೆಗಟ್ಟುವುದರ ಮಹತ್ವದ ಬಗ್ಗೆ ತಕ್ಕ ಪರಿಣಾಮಗಳನ್ನು ಉಂಟುಮಾಡುವುದೇ ಈ ಶಸ್ತ್ರ ತಯಾರಿಕೆಯ ಉದ್ದೇಶವೆಂದೂ ಅವರು ಹೇಳಿದರು. ನಮ್ಮ ಈ ಅಣು ಶಸ್ತ್ರಗಳ ತಯಾರಿಕೆ ಮತ್ತು ಬಳಕೆಯ ನಿಷೇಧಕ್ಕೆ ಒಪ್ಪಂದವಾದರೆ, ರಷ್ಯವು ಸದಾ ಈ ಶಸ್ತ್ರಗಳನ್ನು ತಯಾರಿಸುವುದನ್ನು ನಿಲ್ಲಿಸುವುದೆಂದೂ ತಿಳಿಸಿದರು.

ನಗರದ ಕಾರ್ಪೊರೇಷನ್ನಿನವರು ಏರ್ಪಡಿಸಿದ್ದ ಪೌರ ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಾ ಅವರು ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಿದರು :–

ರಷ್ಯದ ಒಂದು ನಾಯಿಯು ಹೆಚ್ಚು ಎತ್ತರದ ಮೇಲೆ ಹೋಗುತ್ತಿದ್ದಾಗ, ಕೆಳಗೆ ನಾಯಿಯು ಬೊಗಳುತ್ತದೆ ... ಇದು ನಮ್ಮ ಲೆಕ್ಕಕ್ಕೆ ಬರುವುದಿಲ್ಲ ... ನಮ್ಮ ಮಾರ್ಗವನ್ನು ಹಿಡಿದು ಹೋಗುತ್ತೇವೆ ... ಇದು ಪ್ರಪಂಚಕ್ಕೇ ಹೊಸ ವಿಧಾನ ...

ನಿಮ್ಮ ಮಾರಿಯು ಬೇರೆಯಾಗಿರಬಹುದು. ನಿಮ್ಮ ಮಾರ್ಗವನ್ನು ನೀವು ಗೊತ್ತುಮಾಡಿಕೊಳ್ಳಬಹುದು. ಆದರೆ ನಮ್ಮ ಉದ್ದೇಶವೊಂದೇ ... ನಿಮ್ಮ ಪ್ರಯತ್ನದಲ್ಲಿ ನಾವೂ ನಿಮಗೆ ಸಹಕರಿಸುತ್ತೇವೆ.

ಸಾಮ್ರಾಜ್ಯಶಾಹಿಯನ್ನು ಕಿತ್ತೆಸೆದು, ಭಾರತೀಯರು ಸ್ವತಂತ್ರರಾದ ವಿಷಯವು ನಮಗೆ ಅತ್ಯಂತ ಆನಂದವನ್ನುಂಟುಮಾಡಿದೆ. ನಿಮ್ಮ ದೇಶಕ್ಕೆ ಒಂದು ಐದು ವರ್ಷದ ಯೋಜನೆಯ ಇತರ ದೇಶಗಳವರಂತೆ ... ನಿಮ್ಮ ಕೈಗಾರಿಕೆ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅದನ್ನು ಬೇಗ ಪ್ರಗತಿ ಸಾಧಿಸಬೇಕೆಂಬುದೇ ನಮ್ಮ ಆಶೆ ... ಕಲೆ, ಮುಂತಾದವುಗಳಲ್ಲಿ ಮೆಚ್ಚಿನ ಮಟ್ಟವನ್ನು ಸಾಧಿಸಲು ನಿಮಗೆ ನಾವು ಸಕಲ ನೆರವನ್ನು ನೀಡುತ್ತೇವೆ.

ನಿಮಗೂ ನಮಗೂ ಹಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿರುವುದು ನಿಜ. ಇದನ್ನು ನಾವುಗಳು ಮರೆಮಾಚುವುದಿಲ್ಲ. ಆದರೆ ಅವರಿಂದ ನಮ್ಮ ಸ್ನೇಹಕ್ಕೆ ಧಕ್ಕೆಯಿಲ್ಲ. ಏಕೆಂದರೆ ನಮಗೆ ನಿಮ್ಮಲ್ಲಿ ನಂಬಿಕೆ ಇದೆ. ಯಾವ ಕಾರ್ಯಕ್ರಮವನ್ನು ನೀವು ಕೈಗೊಂಡಿದ್ದೀರಿ ... ನಾವೂ ಸಹ ನಿಮ್ಮ ಜೊತೆಗೆ ... ಯಾವ ಷರತ್ತುಗಳನ್ನೂ ಹಾಕುವುದಿಲ್ಲ. ನಾವು ಮಿತ್ರರು ಮತ್ತು ಸೋದರರಂತೆ ಇದ್ದೇವೆ. ನಮ್ಮಲ್ಲಿ ಸಹಜೀವನವನ್ನು ನಡೆಸುತ್ತಿದ್ದೇವೆ.

ಇದನ್ನೇ ಒತ್ತರಿಸುವ ನಾವು ಹೇಳುತ್ತೇವೆ ... ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ... ಅಣು ಶಸ್ತ್ರಗಳನ್ನು ತಯಾರಿಸಬೇಕಾಯಿತು ...

ಪ್ರತಿಯೊಂದು ದೇಶವೂ ತನ್ನ ಆಡಳಿತ ವ್ಯವಸ್ಥೆಯನ್ನು ... ಆರಿಸಿಕೊಳ್ಳುವ ಹಕ್ಕನ್ನು ಹೊಂದಿದೆ ... ಈ ಹಕ್ಕನ್ನು ಇತರ ರಾಷ್ಟ್ರಗಳು ... ಗೌರವಿಸಬೇಕು ... ನಿಶ್ಶಸ್ತ್ರೀಕರಣದ ಬಗ್ಗೆ ನಾವು ಸ್ಪಷ್ಟವಾದ ಸಲಹೆಗಳನ್ನು ನೀಡಿದ್ದೇವೆ. ನಮ್ಮ ಸೈನ್ಯದಲ್ಲಿ ... ಕಡಿಮೆ ಮಾಡಿದ್ದೇವೆ ...

ಅಣು ಶಸ್ತ್ರಗಳ ಪ್ರಯೋಗವನ್ನು ನಿಷೇಧಿಸಲು ... ಅಣು ಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ... ಅದನ್ನು ಪ್ರಯೋಗಿಸಬೇಕು ... ಪಾಶ್ಚಾತ್ಯ ರಾಷ್ಟ್ರಗಳು ... ಶಾಂತಿಯನ್ನು ಕಾಪಾಡಲು ನಾವು ಸದಾ ಸಿದ್ಧರಾಗಿದ್ದೇವೆ ...

ವಿಶ್ವಶಾಂತಿ ಸಾಧನೆಗಾಗಿ ನಾವು ಸದಾ ಹೋರಾಡುತ್ತೇವೆ. ಯುದ್ಧ ಮತ್ತು ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ತಪ್ಪಿಸುವುದರಲ್ಲಿ ಆಸಕ್ತರಾಗಿರುವ ಎಲ್ಲರ ಪ್ರಯತ್ನವನ್ನು ... ನಮ್ಮ ಪ್ರಯತ್ನಗಳನ್ನು ನಡೆಸುವೆವು.

ಸೋವಿಯಟ್ ರಷ್ಯವು ತಾನಾಗಿಯೇ ಬಿನಾ ... ಅಣ್ವಸ್ತ್ರಗಳನ್ನು ಪ್ರಯೋಗಿಸುವುದಿಲ್ಲ. ಈ ಅಸ್ತ್ರಗಳು ನಗರ ಮತ್ತು ಗ್ರಾಮಗಳ ಮೇಲೆ ಬೀಳುವ ಪ್ರಸಂಗ ಒದಗದಿದ್ದರೆ ನಾವು ಸಂತೋಷಿಸುತ್ತೇವೆ. ಅವುಗಳ ಒಂದು ಆಘಾತ ... ಅವರ ಯುದ್ಧಾಕಾಂಕ್ಷಿಗಳ ಮನಸ್ಸಿನ ಮೇಲೆ ಅದು ತಕ್ಕ ಪ್ರಭಾವವನ್ನು ಬೀರಲಿ. ಇನ್ನಾದರೂ ಅವರು ಇನ್ನೊಂದು ಯುದ್ಧವನ್ನು ಆರಂಭಿಸುವ ಬದಲು ... ಉತ್ತರವನ್ನು ಪಡೆಯುತ್ತಾರೆ.

ನಿಮ್ಮ ದೇಶಕ್ಕೆ ಭೇಟಿ ಕೊಡುವ ಅವಕಾಶ ದೊರೆತುದಕ್ಕಾಗಿ ನಿಮ್ಮ ಪ್ರಧಾನಿಯವರಿಗೆ ನಾವು ಕೃತಜ್ಞರಾಗಿದ್ದೇವೆ. ಭಾರತ ಮತ್ತು ರಷ್ಯಗಳ ಸ್ನೇಹ ಮತ್ತು ... ಚಿರಕಾಲ ಬಾಳಲಿ.

ಲಾಲ್‌ಬಾಗಿನಲ್ಲಿ ರಷ್ಯದ ನಾಯಕರಿಗೆ ಭಾರಿ ಸತ್ಕಾರ

ಆನೆಯಿಂದ ಪುಷ್ಪಹಾರ ಸಮರ್ಪಣೆ

ಬೆಂಗಳೂರು ೨೬

ರಷ್ಯದ ನಾಯಕರಾದ ಮಾರ್ಷಲ್ ಬುಲ್ಗಾನಿನ್ ಮತ್ತು ನಿಕಿಟಾ ಕ್ರುಶ್ಚೇವ್‌ರವರ ಗೌರವಾರ್ಥವಾಗಿ ನೆನ್ನೆ ಲಾಲ್‌ಬಾಗ್ ಗಾಜಿನ ಭವನದಲ್ಲಿ ಅತ್ಯಂತ ... ಏರ್ಪಡಿಸಲಾಗಿತ್ತು. ಶ್ರೀ ರಾಜಪ್ರಮುಖರು, ಮಂತ್ರಿಗಳು, ಅಧಿಕಾರಿಗಳು ಮತ್ತು ಆಹ್ವಾನಿತರು ಸೇರಿದ್ದರು.

ಶ್ರೀಯವರ ಅತಿಥಿಗಳೊಡನೆ ಮುಖ್ಯ ಅತಿಥಿಗಳು ... ಆನೆಯೊಂದು ಅವರ ಕೊರಳಿಗೆ ಪುಷ್ಪಹಾರಗಳನ್ನು ಹಾಕಿತು. ಮುಖ್ಯ ಮಂತ್ರಿ ಸಮರ್ಪಿಸಿದ ... ಮೈಸೂರು ಶಿಲ್ಪ ವಸ್ತುಗಳನ್ನು ... ಕಾಣಿಕೆಗಳನ್ನು ಸಲ್ಲಿಸಲಾಯಿತು.

ಮುಖ್ಯ ಮಂತ್ರಿಗಳು ಅವರನ್ನು ಸ್ವಾಗತಿಸಿ, ಅವರ ಆಗಮನದಿಂದ ರಷ್ಯ ಮತ್ತು ಭಾರತದ ಮೈತ್ರಿಯು ವೃದ್ಧಿಯಾಗುವುದೆಂದು ಹೇಳಿದರು.

ಮಾರ್ಷಲ್ ಬುಲ್ಗಾನಿನ್‌ರವರು ಕೃತಜ್ಞತೆ ಸಲ್ಲಿಸಿ ... ಮಾತನಾಡಿದರು.

ಭೋಜನಾನಂತರ ನೃತ್ಯ, ಸಂಗೀತ, ಮುಂತಾದ ... ಕಾರ್ಯಕ್ರಮಗಳು ನಡೆದವು ...

ರಷ್ಯಾ ನಾಯಕರಿಗೆ ಮೈಸೂರು ಸಂಘಗಳ ಸನ್ಮಾನ

ಬೆಂಗಳೂರು ೨೬

ರಷ್ಯದ ನಾಯಕರುಗಳಾದ ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರು ನೆನ್ನೆ ಮಧ್ಯಾಹ್ನ ಕಾರ್ಖಾನೆಗಳಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ... ಬೆಂಗಳೂರು ಶಾಂತಿ ಸಮಿತಿಯವರು ಸಂಭ್ರಮದಿಂದ ನಿರ್ಮಿಸಿದ್ದ ಚಪ್ಪರದಲ್ಲಿ ಸನ್ಮಾನಗಳನ್ನು ಅರ್ಪಿಸಿದರು. ಮೈಸೂರಿನ ಇಂಡಿಯಾ ಚೀನಾ ಸ್ನೇಹ ಸಂಘ, ಶಾಂತಿ ಸಮಿತಿ ಮತ್ತು ಇಂಡೋ-ಸೋವಿಯಟ್ ಸಾಂಸ್ಕೃತಿಕ ಸಂಘಗಳ ಪರವಾಗಿ ಶ್ರೀಗಳಾದ ಕಗ ... ರಾಮಚಂದ್ರರಾವ್ ಮತ್ತು ಎ. ಎಸ್. ನಾರಾಯಣರಾಯರು ಹಾರಗಳನ್ನು ಹಾಕಿದರು. ಶ್ರೀಗಳಾದ ಡಿ. ವಿ. ಕೆ. ಮೂರ್ತಿ ಮತ್ತು ಜಿ. ಎಚ್. ರಾಮರಾಯರು ಗಾಂಧಿ ಪ್ರತಿಮೆ ಮತ್ತು ಸಂಘದ ಪರವಾಗಿ ... ಸನ್ಮಾನ ಪತ್ರವನ್ನು ಅರ್ಪಿಸಿದರು.

ಶ್ರೀ ಹೊನ್ನಯ್ಯನವರು ಶಾಂತಿಯ ಸಂಕೇತವಾದ ಒಂದು ಬಿಳಿಯ ಪಾರಿವಾಳದ ಚಿತ್ರವನ್ನು ಅರ್ಪಿಸಿದರು.

ಭಾರತಕ್ಕೆ ಸೌದಿ ಅರೇಬಿಯಾ ರಾಜರ ಆಗಮನ

ಸೌದಿ ಅರೇಬಿಯದ ದೊರೆ ಇಬ್ನ್ ಸೌದ್‌ರವರು ಭಾರತದಲ್ಲಿ ೧೭ ದಿನಗಳ ಕಾಲ ಪ್ರವಾಸ ಕೈಗೊಳ್ಳುವ ಉದ್ದೇಶದಿಂದ ನೆನ್ನೆ ಬೊಂಬಾಯಿಗೆ ಆಗಮಿಸಿದರು. ಅವರು ಪ್ರವಾಸದಲ್ಲಿ ಮೈಸೂರು ನಗರಕ್ಕೂ ಭೇಟಿ ಕೊಡಲಿರುವರು. ಇಲ್ಲಿ ಅವರಿಗೆ ಪೌರ ಸನ್ಮಾನವನ್ನು ಏರ್ಪಡಿಸಲು ವ್ಯವಸ್ಥೆಗಳಾಗುತ್ತಿರುವುದೆಂದು ಗೊತ್ತಾಗಿದೆ.

ವಾ ರ ಭ ವಿ ಷ್ಯ

ತಾ|| ೨೭-೧೧-೫೫ ರಿಂದ ೩-೧೨-೫೫ ರ ವರೆಗೆ

ಮೇಷ.—ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ನೌಕರಿಯಲ್ಲಿ ನಿರುತ್ಸಾಹ. ಪ್ರವಾಸ ಸಂಭವ

ವೃಷಭ.—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ

ಮಿಥುನ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಬಿಕ್ಕಟ್ಟಿನ ಪರಿಹಾರ. ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ ನೌಕರಿಯಲ್ಲಿ ತೊಡಕು ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಕರ್ಕ :—ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಅಲ್ಪ ಪ್ರಗತಿ ಪ್ರವಾಸ ಸುಖಕರವಾಗಿರುವುದು

ಸಿಂಹ.—ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದು ವ್ಯಾಪಾರವ್ಯವಹಾರ ಅಲ್ಪ ಸುಧಾರಣೆ ನೌಕರಿಯಲ್ಲಿ ನಿರುತ್ಸಾಹ. ಹೊಸ ಉದ್ಯಮಗಳನ್ನು ಕೈಗೊಳ್ಳಬೇಡಿ

ಕನ್ಯಾ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಹೊಸ ಕಾರ್ಯಗಳು ಜರುಗುವುವು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ

ತುಲಾ —ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ.ವಿಷ್ವಸ್ತರ ಪರಿಚಯ

ವೃಶ್ಚಿಕ.—ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸಂಭವ.

ಧನು.—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಾಧಾರಣ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ.

ಮಕರ:- ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ. ನೌಕರಿಯಲ್ಲಿ ತೊಡಕು ಪ್ರಯಾಣದಲ್ಲಿ ತೊಂದರೆ

ಕುಂಭ:—ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ನಿರುತ್ಸಾಹ ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ಕಡಿಮೆ.'

ಮೀನ:—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಪ್ರಯಾಣ ಸುಖಕರವಾಗಿರುವುದು

ಈಜಿಪ್ಟ್ ಪಡೆಗಳಿಂದ ಇಸ್ರೇಲ್ ವಿಮಾನದ ಮೇಲೆ ಗುಂಡು

ಈಜಿಪ್ಟ್-ಇಸ್ರೇಲ್ ಗಡಿಯ ಗಾಜಾ ಪ್ರದೇಶದಲ್ಲಿ ಮೊನ್ನೆ ಒಂದು ಇಸ್ರೇಲಿ ವಿಮಾನವು ಗಡಿಯನ್ನುಲ್ಲಂಘಿಸಿತೆಂಬ ಕಾರಣದಮೇಲೆ ಅದನ್ನು ಈಜಿಪ್ಟಿನ ಸೈನ್ಯಗಳು ಹೊಡೆದುರುಳಿಸಿದುವೆಂದು ತಿಳಿದುಬಂದಿದೆ

ಶೃಂಗೇರಿ ಮಠ ಮುದ್ರಾಧಿಕಾರ

ನಗರದ ಜ್ಯೋತಿಷ್ಯ ವಿದ್ವಾಂಸರಾದ ಶ್ರೀ ದೇವಪ್ಪಶಾಸ್ತ್ರಿಗಳು ಮೈಸೂರು ಮತ್ತು ಸುತ್ತಮುತ್ತಲ ಗ್ರಾಮಗಳ ಹಳೇನಾಡು ಕರ್ನಾಟಕ ಬ್ರಾಹ್ಮಣರಿಂದ ಕಾಣಿಕೆಗಳನ್ನು ಸ್ವೀಕರಿಸಿ ಶ್ರೀ ಮಠಕ್ಕೆ ಸಲ್ಲಿಸಲು ಶೃಂಗೇರಿ ಮಠದ ಶ್ರೀ ಶ್ರೀಗಳವರು ಮತ್ತು ಧರ್ಮಾಧಿಕಾರಿಗಳೂ ಅವರಿಗೆ ಮಠದ ಮುದ್ರೆಯನ್ನು ಇತ್ತಿರುವರು.

ಮೊನ್ನೆ ನಗರದಲ್ಲಿ ಲಾರಿ ಪ್ರಹಾರ ನ ಡೆ ಯ ಲಿ ಲ್ಲ

ಮೊನ್ನೆ ದಿನ ರಾಜಧಾನಿಯಲ್ಲಿ ವ್ಯಸನಾದ ನಾಯಕರು ನಡೆಸಿದ ಮೆರವಣಿಗೆ ಸಂದರ್ಭದಲ್ಲಿ ಲಾಠಿ ಪ್ರಹಾರವಾಗಲಿ ಗೋಲೀಬಾರಾಗಲೀ ನಡೆಯಲಿಲ್ಲ ವೆಂದು ಪೊಲೀಸು ಅಧಿಕಾರಿಗಳು ತಿಳಿಸಿರುತ್ತಾರೆ

ರಷ್ಯಾ ನಾಯಕರಿಗೆ ಪೂನಾ ನಾಗರಿಕರ ಭಾರಿ ಸನ್ಮಾನ

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕ್ರುಶ್ಚೇವ್‌ರವರನ್ನು ಪೂನಾ ನಗರ ಸಭೆಯವರು ೫ ಲಕ್ಷ ಜನರ ಸಭೆಯೊಂದರಲ್ಲಿ ಸನ್ಮಾನಿಸಿದರು ಆ ಸಂದರ್ಭದಲ್ಲಿ ಅವರಿಗೆ ಕಂಚಿನ ಶಿವಾಜಿ ಮಹಾರಾಜರ ಪ್ರತಿಮೆಯೊಂದನ್ನು ಅರ್ಪಿಸಲಾಯಿತು.

ಪ್ರಧಾನಿ ಬುಲ್ಗಾನಿನ್ನರು ಪುರಸಭೆಯ ಮಾನಪತ್ರಕ್ಕೆ ಉತ್ತರವಿತ್ತು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾರಾಷ್ಟ್ರೀಯರ ಪಾತ್ರವನ್ನೂ ಮತ್ತು ಪೂನಾ ನಗರದ ಮಹತ್ವವನ್ನೂ ಪ್ರಶಂಸಿಸಿದರು.

ಅವರುಗಳಿಗೆ ಆರತಿಯನ್ನೆತ್ತಿ, ಕುಂಕುಮ ಹಚ್ಚಿ, ಜರತಾರಿ ವಸ್ತ್ರಗಳು ಮತ್ತು ಐತಿಹಾಸಿಕ ಭರ್ಜಿಗಳನ್ನು ಅರ್ಪಿಸಲಾಯಿತು. ಅಲ್ಲದೆ ಮನರಂಜನಾರ್ಥವಾಗಿ ಕುಸ್ತಿ ಪ್ರದರ್ಶನಗಳು ನಡೆದುವು ನಾಯಕರಿಬ್ಬರೂ ಗಾಂಧಿ ಟೋಪಿಗಳನ್ನು ಧರಿಸಿದ್ದರು

ಇದಕ್ಕೆ ಮುಂಚೆ ಅವರುಗಳು ಪಡಗಾರ್ಸ್ನ ವಾಯು ಕೇಂದ್ರ, ಖಡಕವಾಸ್ಲಾದಲ್ಲಿನ ರಕ್ಷಣಾ ತರಬೇತಿ ಕೇಂದ್ರ, ನೀರು ಮತ್ತು ವಿದ್ಯುತ್ ಸ್ಟೇಷನುಗಳಿಗೆ ಭೇಟಿಯಿತ್ತರು.

ವಿಶ್ವ ಸಂಸ್ಥೆಗೆ ಫ್ರಾನ್ಸಿನ ಪು ನ ರಾ ಗ ಮ ನ

ವಿಶ್ವ ಸಂಸ್ಥೆಯು ಅಲ್ಜೀರಿಯ ಪ್ರಶ್ನೆಯನ್ನು ಈ ಅಧಿವೇಶನದಲ್ಲಿ ಚರ್ಚಿಸದಿರಲು ಒಪ್ಪಿರುವುದರಿಂದ ಫ್ರಾನ್ಸು ಮತ್ತೆ ಅಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸುವುದಾಗಿ ಫ್ರಾನ್ಸ್ ವಿದೇಶಾಂಗ ಮಂತ್ರಿಣಿಯವರು ತಿಳಿಸಿರುವರೆಂದು ಗೊತ್ತಾಗಿದೆ. ಅಲ್ಜೀರಿಯ ವಿಷಯದ ಬಗ್ಗೆ ನೆನ್ನೆ ಭಾರತವು ರಾಜಕೀಯ ಸಮಿತಿಯಲ್ಲಿ ಸೂಚಿಸಿದ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಹೈದರಾಬಾದಿನಲ್ಲಿ ಹುಲ್ಲಿನ ಬ್ಯಾಂಕ್ ಸ್ಥಾಪಿಸಲು ಯೋಜನೆ

ಕ್ಷಾಮ ಪೀಡಿತ ಸಮಯದಲ್ಲಿ ಹುಲ್ಲನ್ನು ಸರಬರಾಜು ಮಾಡಲು ಅನುಕೂಲವಾಗುವಂತೆ ಮೇವನ್ನು ಶೇಖರಿಸಿಡಲು ಒಂದು ಬ್ಯಾಂಕನ್ನು ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಕಾಲದಲ್ಲಿ ಪ್ರಯೋಗಾರ್ಥವಾಗಿ ಹೈದರಾಬಾದಿನಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದವರು ಆಲೋಚಿಸುತ್ತಾರೆಂದು ತಿಳಿದುಬಂದಿದೆ

ಸಂಸ್ಕೃತಿ ಪ್ರಸಾರ ಸಭೆ

ಸಂಸ್ಕೃತಿ ಪ್ರಚಾರದ ಅಂಗವಾಗಿ ಮಹಾರಾಜಾ ಪ್ರೌಢಶಾಲೆಯಲ್ಲಿ ನೆನ್ನೆ ಬೆಳಿಗ್ಗೆ ಡಿ. ಬನುಮಯ್ಯ ಶಾಲೆಯ ಉಪಾಧ್ಯಾಯರಾದ ಶ್ರೀ ಜಿ. ರಂಗನಾಥರವರು ಪುರಂದರ ದಾಸರು ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು ಶಾಲೆಯ ಉಪಾಧ್ಯಾಯರಾದ ಶ್ರೀ ಎಂ ಜಿ. ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು.

ಮಾರ್ಕೆಟಿಂಗ್ ಅಧಿಕಾರಿಗಳ ಕೇಂದ್ರಗಳು

ಈಗ ಬೆಂಗಳೂರಿನಲ್ಲಿ ಇರುವ ಸಂಸ್ಥಾನದ ಉಭಯ ಮಾರ್ಕೆಟಿಂಗ್ ಅಧಿಕಾರಿಗಳ ಕೇಂದ್ರಗಳನ್ನು ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ಇರಿಸಿ, ಮೈಸೂರು, ಮಂಡ್ಯ, ಹಾಸನ, ಕೋಲಾರ ಮತ್ತು ತುಮಕೂರು ಜಿಲ್ಲೆಗಳನ್ನು ಮೈಸೂರು ವಿಭಾಗಕ್ಕೂ ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಬಳ್ಳಾರಿ ಜಿಲ್ಲೆಗಳನ್ನು ಶಿವಮೊಗ್ಗ ವಿಭಾಗಕ್ಕೂ ಸೇರಿಸಲಾಗಿದೆ. ಬೆಂಗಳೂರು ನಗರ ಮತ್ತು ಜಿಲ್ಲೆಗಳು ಚೀಫ್ ಮಾರ್ಕೆಟಿಂಗ್ ಅಧಿಕಾರಿಗಳ ನೇರ ಹತೋಟಿಯಲ್ಲಿರುವುವು

ನೆಹರೂ ಜಯಂತಿ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಭೆಯ ಕಾರ್ಯಾಲಯದಲ್ಲಿ ನೆಹರೂರವರ ಜಯಂತಿಯನ್ನು ಆಚರಿಸಲಾಗುವುದು. ಯುವರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಲ್ ರಾಮಯ್ಯನವರು ಭಾಷಣ ಮಾಡುವರು ಲಾ ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು

ರಷ್ಯಾ ನಾಯಕರ ಸ್ವಾಗತ ಗೀತೆ

ಸೋವಿಯಟ್ ಯೂನಿಯನ್ ಮಹಾಪ್ರಧಾನಿ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕ್ರುಶ್ಚೇವ್‌ರವರು ನಿನ್ನೆ ಬೆಂಗಳೂರಿಗೆ ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ ಬಾಲಕ ಬಾಲಕಿಯರು ಹಾಡಿದ ಸ್ವಾಗತ ಗೀತೆ

ಸೊಗವೆರೆಯುವ ಚೆಲು ಬೀಡಿಗೆ
ಸ್ವಾಗತಿಪೆವು ರಣಧೀರರೇ || ಪ ||
ಇದೊ ಆರತಿಯನು ಬೆಳಗುತ
ಮುದದಿಂದಲಿ ನವಿ ನಲಿಯುತ ||ಅ ಪ||
ಸಾಮ್ರಾಜ್ಯ ಶಾಹಿಯನಳಿಸಿ
ಸಮತಾ ವಾದವ ಬೆಳಸಿ
ಜನತೆಯುದ್ಧರಿಸಿ, ಶಾಂತಿಯ ನಲಿಸಿ
ಮೈತ್ರಿಯ ಬಯಸಿ, ಬಂದ ಮಿತ್ರರೇ ||೧||
ಅಣುಶಕ್ತಿಯ ಕರಗತಮಾಡಿ
ರಣಭೀತಿಯ ದೂರದೂಡಿ
ಮಂಗಳ ಕಾರ್ಯಕೆ ಅದ ನೀಡಿ
ಲೋಕ ಕಲ್ಯಾಣವ ಬಯಸುವ
ಮಹಾತ್ಮರೇ ||೨||
ಚಿರಕಾಲದ ಕೆಳೆಗಳಸುತ
ಮರೆಯಾಗದ ಸುಖ ಶಾಂತಿಯ
ದೊರೆಕೊಳಿಸಲು ಬಲು ಶ್ರಮಿಸಿದ
ರಷಿಯನ್ನಿನ ವೀರ ನಾಯಕರೇ ||೩||

ನೈಪ್ರಸ್ಸಿನಲ್ಲಿ ಸೈನಿಕರಿಬ್ಬರ ಭೀಕರ ಕೊಲೆ

ಸೈಪ್ರಸ್ ದ್ವೀಪದ ನಿಕೋಸಿಯಾ ಪಟ್ಟಣದಲ್ಲಿ ಮೊನ್ನೆ ಸ್ವಾತಂತ್ರ್ಯ ಹೋರಾಟಗಾರರು ಬಾಂಬ್ ಎಸತ ಮೂಲಕ ತಾವೇ ಹಣಗಳಿಸಿ ಅದರ ಮೂಲಕ ಬಂದಿದ್ದ ಬ್ರಿಟಿಷ್ ಸೈನಿಕರು ಸುಡಿದ ಸುಮಾರು ಆರು ತಿಂಗಳಿನಲ್ಲಿ ಆ ದ್ವೀಪಕ್ಕೆ ಹೊಸದಾಗಿ ಬಂದ ಬ್ರಿಟಿಷ್ ಅಧಿಕಾರಿಯೊಬ್ಬನನ್ನು ಹಂಗೆ ಕಾರರು ಬಂಧಿಸಿ ಅವನ ದೇಹವನ್ನು ಸಮೀಪದ ಬಂದ ನಿರ್ದಯವಾಗಿ ಚುಚ್ಚಿ ಕೊಂದರೆಂದು ವರದಿಯಾಗಿದೆ

ಪೂರ್ವ ಬಂಗಾಳದಲ್ಲಿ ೩೦ ಮಂದಿ ನಾಯಕರ ಬಂಧನ

ಪೂರ್ವ ಬಂಗಾಳದ ರಾಜಧಾನಿ ಢಾಕಾ ಮತ್ತು ಇತರ ಸ್ಥಳಗಳಲ್ಲಿ ಆರಂಭವಾಗಿರುವ ಪೋಲೀಸರ ಮುಷ್ಕರದ ಸಂಬಂಧವಾಗಿ ಇದುವರೆಗೆ ನಾನಾ ರಾಜಕೀಯ ಪಕ್ಷಗಳ ಸುಮಾರು ೩೦ ಮಂದಿ ನಾಯಕರನ್ನು ಸರ್ಕಾರದವರು ಬಂಧಿಸಿರುವರೆಂದು ವರದಿಯಾಗಿದೆ. ಅವರ ಪೈಕಿ ಹಲವು ಶಾಸನಸಭಾ ಸದಸ್ಯರೂ ಇರುವರೆಂದು ಹೇಳಲಾಗಿದೆ

ಸಿಂಹಳದಲ್ಲಿ ತಮಿಳರ ಪ್ರತ್ಯೇಕ ರಾಜ್ಯಕ್ಕಾಗಿ ಒತ್ತಾಯ

ಸಿಂಹಳದ ಫೆಡರಲ್ ಪಕ್ಷದಲ್ಲಿನ ತಮಿಳು ಸದಸ್ಯರು ಮೊನ್ನೆ ತಮಿಳರಿಗಾಗಿಯೇ ಪ್ರತ್ಯೇಕ ಪ್ರಾಂತವನ್ನು ರಚಿಸಬೇಕೆಂದು ಕೋರಿ ನಿರ್ಣಯವೊಂದನ್ನು ಮಂಡಿಸಿರುತ್ತಾರೆ. ಇದಕ್ಕಾಗಿ ಅಲ್ಲಿನ ರಾಜ್ಯಾಂಗವನ್ನೂ ಸಹ ತಿದ್ದುಪಡಿ ಮಾಡಬೇಕು ಸೂಚಿಸಿರುತ್ತಾರೆ

ಟ್ರೈನಿಂಗ್ ಕಾಲೇಜು ಒಕ್ಕಲಿಗರ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವ

ಸರ್ಕಾರಿ ಟ್ರೈನಿಂಗ್ ಕಾಲೇಜು ಒಕ್ಕಲಿಗರ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು ಕಳೆದ ಗುರುವಾರ ಕಾಲೇಜಿನ ಸೂಪರಿಂಟೆಂಡೆಂಟ್ ಡಾ|| ಡಿ ಶಿವರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಜಿ. ನಂಜುಂಡೇಗೌಡರಿಂದ ಪ್ರಾರ್ಥನೆಯೂ, ಶ್ರೀ ಎಸ್. ವಿ ಮರಿಯಪ್ಪನವರಿಂದ ಸ್ವಾಗತವೂ, ಶ್ರೀ ಹೆಚ್. ಎಲ್ ನಂಜಯ್ಯನವರಿಂದ ವರದಿಯೂ ಅದನಂತರ ಉಪಾಧ್ಯಾಯರುಗಳಾದ ಶ್ರೀಗಳು ಜಿ ಎಲ್. ಕಾಂತರಾಜ್ ಮತ್ತು ಎಂ ಎಸ್ ರಾಮಸ್ವಾಮಯ್ಯಂಗಾರ್‌ರವರೂ ಮತ್ತು ಅಧ್ಯಕ್ಷರೂ ಭಾಷಣ ಮಾಡಿ, ವಿದ್ಯಾರ್ಥಿಗಳಿಗೆ ಹಿತವಚನಗಳನ್ನಿತ್ತರು. ಶ್ರೀ ಆರ್. ಜಿ. ಈರೇಗೌಡರಿಂದ ವಂದನಾರ್ಪಣೆಯಾದನಂತರ,ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

Edited, Printed and Published by A. R. Nagarajan at Sadhvi Press. D Subbiah Road, Mysore

ಭಾಷಣ ಮಾಡುವುದರಲ್ಲಿ ರಾಜಕಾರಣಿಗಳು ಕುಡುಕರ

ನಿಕಿಟಾ ಕ್ರುಶ್ಚೇವರ ಹೋಲಿಕೆ

ಬೊಂಬಾಯಿನಲ್ಲಿ ಹಮಿತ್ತ ಒಂದು ಕೂಟದಲ್ಲಿ ರಷ್ಯದ ನಿಕಿಟಾ ಕ್ರುಶ್ಚೇವ್‌ರವ ಹಳ ದೀರ್ಘವಾಗಿ ಮಾತನಾಡಿದುದಕ್ಕಾಗಿ ತಾಪಪಟ್ಟು, ಕುಡುಕರು ಪ್ರತಿ ಸಾ ಇನ್ನು ಮುಂದೆ ಕುಡಿಯುವುದಿಲ್ಲವೆಂದು ಪ್ರ ಮಾಡುತ್ತಾ, ಪುನಃಪುನಃ ಹೆಚ್ಚುಹೆಚ್ಚಾಗಿ ವ್ಯಪಾನ ಮಾಡುವುದರಲ್ಲಿ ತೊಡಗುವಂತೆ ಕಾರಣಿಗಳು ಸಹ ಹೆಚ್ಚಾಗಿ ಭಾಷಣ ಮಾ ದಿಲ್ಲವೆಂದು ಹೇಳುತ್ತಾ, ಗೊತ್ತುಗುಂ ಮಾತನಾಡುವರೆಂದು ವಿನೋದದಿಂದ ರು ಆದರೆ ಅಲ್ಲಿದ್ದವರೆಲ್ಲರೂ ಅವರ ಭಾ ನ್ನು ಅತ್ಯಂತ ಸಂತೋಷದಿಂದ ಆಲಿಸಿ ಮುಖ್ಯಮಂತ್ರಿ ಮೊರಾರ್ಜಿ ದೇಸಾಯರು ಧಾನ ಹೇಳಿದರು.

ಬೊಂಬಾಯಿನ ಪಾನ ನಿರೋ ರಷ್ಯ ನಾಯಕರ ಪುರಸ್ಕಾ

ರಷ್ಯದ ನಾಯಕರಾದ ಶ್ರೀ ಕ್ರುಶ್ಚೇವರು ಬಾಯಿನ ತಾತಾ ಬಟ್ಟೆ ಗಿರಣಿಗೆ ಭೇಟಿಯ ಗ ಒಂದು ಲೋಟ ಟೊಮ್ಯಾಟೊ ಹಣ್ಣಿನ ವನ್ನು ಸೇವಿಸಿ ಅಲ್ಲಿನ ಮುಖ್ಯ ಮಂತ್ರಿ ಮೊ ರ್ಜಿ ದೇಸಾಯಿರವನ್ನು ನೋಡಿ ಪಾನ ನಿ ತ್ತಿ ಜಾರಿಯಲ್ಲಿರುವ ಬೊಂಬಾಯಿನಲ್ಲಿ ಮಾದಕ ದ್ರವ್ಯವನ್ನು ಸೇವಿಸಿಲ್ಲವೆಂದು ಡು. ಪಾನ ನಿರೋಧ ಶಾಸನವನ್ನು ಮುರಿ ರಲು ವಿಮಾನದಿಂದ ಇಳಿಯುವ ಮೊದಲೇ ಗ್ನಾಕ್" ಎಂಬ ಮದ್ಯವನ್ನು ಕುಡಿದು,ಅ ಕೆಳಗೆ ಇಳಿದುದಾಗಿ ಅವರು ವಿನೋದದಿಂ ಸಿದರು. ಬೊಂಬಾಯಿನ ಉಷ್ಣ ವಾತಾವ ಲ್ಲಿ ಮಾದಕ ಪಾನೀಯಗಳ ಅಗತ್ಯವು ಕಾ ರುವುದಿಲ್ಲವೆಂದು ಸಹ ಅವರು ನುಡಿದರು

ಕ್ರುಶ್ಚೇವ್‌ರವರಿಗೆ ಉದ್ದಿನ ರು ಚಿ

ಹೋಟೇಲಿನಲ್ಲಿ ಸಾಲ ಕೊಡುವಂತೆ

ಕಳೆದ ಗುರುವಾರ ಕ್ರುಶ್ಚೇವ್ ಮತ್ತು ಲ್ಗಾನಿನ್ನರು ಬೊಂಬಾಯಿನ ತಾತಾ ಗಿ ಭೇಟಿ ಕೊಟ್ಟಾಗ ಅಲ್ಲಿನ ಕ್ಯಾಂಟೀನಿನಲ್ಲಿ ಲ್ಗಾನಿನ್ನರು ಒಂದು ಪೂರಿಯನ್ನೂ, ಕ್ರುಶ್ಚೇ ರವರು ಒಂದು ಉದ್ದಿನ ವಡೆಯನ್ನೂ ತಿಂ ವಡೆಯ ರುಚಿ ನೋಡಿದ ಕ್ರುಶ್ಚೇವ್‌ರವರು ದ ಬೆಲೆಯನ್ನು ಕೇಳುತ್ತಾ "ಇದನ್ನು ಸಾಲವಾಗಿ ಕೊಡುವಿರಷ್ಟೆ?" ಎಂದು ಕೇ ಅಲ್ಲಿಯೇ ಇದ್ದ ಶ್ರೀ ಹೋಮಿ ಮೋದಿಯ ತಾವು ಮಾಸ್ಕೋಗೆ ಬಂದಾಗ ತಿಂಡಿಗಳನ್ನು ಲ ಕೊಡುವುದಾದರೆ ಇಲ್ಲಿಯೂ ಸಾಲ ಕೊ ವುದೆಂದು ಹೇಳಿದರು "ಅದಕ್ಕೇನು ನೀವ ತಿನಬೇಡಿ. ನೀವು ನಮಗೆ ಇಲ್ಲಿ ಸಾಲ ಕೆ ಮಾಸ್ಕೋದಲ್ಲಿ ನಾವು ಕೊಡುತ್ತೇವೆ" ಕ್ರುಶ್ಚೇವ್‌ರವರು ನುಡಿದರು.

ಮೈಸೂರು ಸಿಟಿ ಮುನಿಸಿಪಲ್ ಕಮಿಷನ ವರ ಆಫೀಸಿನಿಂದ

ತಾರೀಖು 18–11–55

ನೋಟಿಫಿಕೇಷ

R 8 PR 161/55–56

ಮೈಸೂರು ಸಿಟಿ ದೇವರಾಜ ಮಾರ್ಕೆ ಮತ್ತು ಕುರಿಗಳ ಕಸಾಯಿ ಮನೆಯಲ್ಲಿ ವಸೂಲುಮಾಡುವ ಮತ್ತು ಇತರೆ ಬಾ ರೂಢಿಸಿಕೊಳ್ಳುವ ಹಕ್ಕನ್ನು 56–57ನೇ ಗೆ 1955ನೇ ಡಿಸೆಂಬರ್ 3ರ ರಾ ಆಫೀಸಿನಿಂದ ಸಾದರಾದ ಹರಾಜು ಇ ನಾವೆಯಲ್ಲಿ ನಮೂದಿಸಿರುವ ದಿನಗಳ ನಡಿಸಲಾಗುತ್ತೆ. ವಿವರಗಳನ್ನು ವಿವ ಸರವರಲ್ಲಿ,ಆಫೀಸು ವೇಳೆಯಲ್ಲಿ ತಿಳಿಯ

(ಸಹಿ) ಎಲ್. ಲಕ್ಷ್ಮಣ ಮುನಿಸಿಪಲ್ ಕಮಿಷನರ

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಪ್ರತಿ ಪತ್ರಿಕೆ 3 ಕಾಸು

ಗ್ರಾಂ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ಜರಿಯ ಸೀರೆಗಳು ವಿಧವಿಧವಾದ ಡಿಸೈನುಗಳಲ್ಲಿ ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : MONDAY 28-11-1955 ಮೈಸೂರು ಸೋಮವಾರ ೨೮-೧೧-೧೯೫೫ [ಸಂಚಿಕೆ : ೧೬೪

ಕರ್ಣಾಟಕ ಪ್ರಾಂತ ರಚನೆಗೆ ಪ್ರದೇಶ ಕಾಂಗ್ರೆಸ್ಸಿನ ಒಪ್ಪಿಗೆ

ಕರ್ಣಾಟಕ ಪ್ರಾಂತ ರಚನೆಗೆ ಒಪ್ಪಿಗೆ

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ

ಬೆಂಗಳೂರು ೨೭

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ದೀರ್ಘ ಕಾಲ ಚರ್ಚೆ ... ಕರ್ನಾಟಕ ಪ್ರಾಂತ ನಿರ್ಮಾಣದ ಸಲ ... ಒಪ್ಪಿಗೆಯಿತ್ತು, ನೂತನ ಪ್ರಾಂತದಲ್ಲಿ ಈ ... ವ ಮೈಸೂರು ಸಂಸ್ಥಾನದ ಎಲ್ಲ ಪ್ರದೇಶಗ ... ಬಳ್ಳಾರಿ ಮತ್ತು ನೀಲಗಿರಿ ಜಿಲ್ಲೆಗಳೂ, ಆ ... ಕಾಸರಗೋಡು, ಹೊಸೂರು, ಮಡಕಸಿರ, ... ಡಿ ಫಿರ್ಕಾ, ಅಕ್ಕಲ್‌ಕೋಟೆ ಮತ್ತು ... ರಿ ಜಿಲ್ಲೆಯ ನಾಲ್ಕು ತಾಲ್ಲೂಕುಗಳೂ ಸೇರಿಸ ... ಬೇಕೆಂದು ಅಭಿಪ್ರಾಯಪಟ್ಟಿತು.

ಈ ಹೊಸ ಪರಿಸ್ಥಿತಿಯಿಂದ ಉದ್ಭವಿಸುವ ... ದ ಸಮಸ್ಯೆಗಳ ಬಗ್ಗೆ ಸಲಹೆ ಕೊಡಲು ಅಧ್ಯ ... ಒಂದು ಉಪ ಸಮಿತಿಯನ್ನು ನೇಮಿಸಲು ... ಎಂದು ಸಹ ತೀರ್ಮಾನಿಸಲಾಯಿತು

ಈ ನಿರ್ಣಯವನ್ನು ಈ ದಿನ ಸೇರಲಿರುವ ... ಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ರಹ ... ಅಧಿವೇಶನದಲ್ಲಿ ಮಂಡಿಸಲಾಗುವುದು

ಮಾಸ್ಕೋ ಮಸಾಲ ವಡೆ; ಲೆನಿನ್‌ಗ್ರಾಡ್ ಲಡ್ಡು

... ದ ನಾಯಕರ ಭೇಟಿಯಲ್ಲಿ ಕೊಯಮುತ್ತೂರು ಹೋಟೇಲಿನ ಚಮತ್ಕಾರ

... ನ್ನೆ ಕೊಯಮುತ್ತೂರಿಗೆ ರಷ್ಯದ ನಾಯಕ ... ಭೇಟಿಯಿತ್ತಾಗ ಅವರನ್ನು ನೋಡಲು ಬಂದ ... ನನ್ನು ಆಕರ್ಷಿಸಲು ಒಂದು ಹೋಟೇಲಿನಲ್ಲಿ ... ನ ವಿಧಾನವನ್ನು ಅಚರಿಸಲಾಗಿತ್ತು. ಕೇವ ... ಅಣಿಗೆ ಒಂದು ಊಟವನ್ನು ಹಾಕುವುದಲ್ಲ ... ಸದರೊಡನೆ "ಸ್ಟಾಲಿನ್‌ಗ್ರಾಡ್ ಚಟ್ನಿ" "ಮಾ ... ಮಸಾಲ ವಡೆ" ಮತ್ತು "ಲೆನಿನ್‌ಗ್ರಾಡ್ ... ಗಳನ್ನು ಕೊಡುವುದಾಗಿ ಪ್ರಕಟಿಸಲಾ ... ಇದರಿಂದ ಮೋಹಿತರಾಗಿ ಗಿರಾಕಿಗಳು ಕಿ ... ಮು ತುಂಬುತ್ತಿದ್ದರು. ಅವರುಗಳಿಗೆ ಬ ... ಡುವುದೇ ಪ್ರಯಾಸವಾಗಿತ್ತು.

ರಷ್ಯದ ನಾಯಕರಿಗೆ ಎಳನೀರಿನ ರುಚಿ

... ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರು ನೆನ್ನೆ ... ಮಂತಲಕ್ಕೆ ಹೋಗುವ ದಾರಿಯಲ್ಲಿ ಕಿಂ ... ತೋಟವೊಂದರಲ್ಲಿ ಎಳನೀರುಗಳನ್ನು ಕುಡಿ ... ದು ಬಹಳ ರುಚಿಯಾಗಿದೆಯೆಂದು ನುಡಿದ ... ತೋಟದ ಸಹಾಯವಿಲ್ಲದೆ ಅವರು ಎಳನೀ ... ಕುಡಿದು, ಒಳಗಿನ ಕಾಯನ್ನು ಚಮಚದಿಂ ... ದು ತಿಂದರು.

ಸಂಸ್ಕೃತಿ ಪ್ರಚಾರ ಸಭೆ

... ನಗರದ ವಳವಾಡಿ ಪ್ರೌಢಶಾಲೆಯ ಆವರ ... ಸಂಸ್ಕೃತಿ ಪ್ರಚಾರದ ಅಂಗವಾಗಿ ನಾಳೆ ... ೫॥ ಗಂಟೆಗೆ ಮಹಾಜನ ವಿದ್ಯಾಶಾಲೆಯ ... ಸುಬ್ಬರಾಯರಿಂದ "ಕನ್ನಡಿಗರ ರ ... ಎಂಬ ವಿಷಯವಾಗಿ ಭಾಷಣವು ನಡೆಯು ...

ರಾಜಪ್ರಮುಖರ ಸ್ಥಾನಮಾನಗಳ ರಕ್ಷಣೆ

ನಗರದ ಜಾಡಮಾಲಿಗಳ ಪ್ರದರ್ಶನ

ಮೈಸೂರು ೨೭

ಶ್ರೀಮನ್ಮಹಾರಾಜರ ಸ್ಥಾನಮಾನಗಳು ಹಾಗೆ ... ಮುಂದುವರಿಯಬೇಕೆಂಬ ... ಬೆಂಬಲವನ್ನು ಸೂಚಿಸಲು ನಗರದ ... ಜಾಡಮಾಲಿಗಳು ನೆನ್ನೆ ... ರಸ್ತೆಯಿಂದ ಹೊರಟು ... ಮೆರವಣಿಗೆ ... ಗಿದರು

ಟೆಲಿಫೋನ್ ತಂತಿ ಕಳುವು

ಚಾಮುಂಡಿಪುರದ ... ಟೆಲಿಫೋನ್ ... ಬರಿಗೆ ಸಂಬಂಧಪಟ್ಟಂತೆ ... ಬೆಲೆಯ ತಾಮ್ರದ ತಂತಿಯನ್ನು ... ಲಾಗಿದೆ. ... ಎಂಬುವರ ... ಸುಮಾರು ... ಗಳನ್ನು ವಶಪಡಿಸಲಾಗಿದೆ

ಬೊಂಬಾಯಿನ ಬಹಿರಂಗ ಸಭೆಯಲ್ಲಿ ಮತ್ತೆ ಗೊಂದಲ

ಪೋಲೀಸರಿಂದ ಅಶ್ರುವಾಯು ಮತ್ತು ಲಾಠಿ ಪ್ರಯೋಗ

ಬೊಂಬಾಯಿ ನಗರದ ... ಕಾಂಗ್ರೆಸ್ ... ಕಮ್ಯಾಂಡಿನ ... ನೆ ನಗರ ಕಾಂಗ್ರೆಸ್ ಸಮಿತಿಯವರು ಕರೆದಿದ್ದ ಒಂದು ಲಕ್ಷ ಜನರ ಸಭೆಯಲ್ಲಿ ನೆನ್ನೆ ಶ್ರೀ ಎಸ್. ಕೆ. ಪಾಟೀಲರು ಭಾಷಣ ಮಾಡಲು ಎದ್ದಾಗ ... ಮಹಾರಾಷ್ಟ್ರ ವಾದಿಗಳು ಎಬ್ಬಿಸಿದ ಗಲಭೆಯಲ್ಲಿ ಒಬ್ಬ ಸಣ್ಣ ಬಾಲಕಿಯೂ ಸೇರಿ ಸುಮಾರು ... ಮಂದಿಗೆ ಗಾಯಗಳಾದುವು. ಗಲಭೆಕಾರರು ವೇದಿಕೆಯ ಮೇಲಕ್ಕೆ ಕಲ್ಲು, ಸೋಡ ... ಮತ್ತು ಹತ್ತಿಸಿದ ಬಾಣಬಿರುಸುಗಳನ್ನು ಎಸೆದರು. ಗುಂಪನ್ನು ಚದುರಿಸಲು ಪೋಲೀಸರು ಅಶ್ರುವಾಯುವನ್ನು ಉಪಯೋಗಿಸಿದರಲ್ಲದೆ, ಲಘು ಲಾಠಿ ಪ್ರಹಾರವನ್ನೂ ಮಾಡಿದರು. ಸಭೆಯಲ್ಲಿ ಗಲಾಟೆಗಳನ್ನು ತಡೆಯಲು ಸುಮಾರು ... ಗಿಂತಲೂ ಹೆಚ್ಚು ಪೋಲೀಸರು ಹಾಜರಿದ್ದರು.

ಗುಂಪಿನವರು ಹಿಂದಿರುಗುತ್ತಿದ್ದಾಗ ಅನೇಕ ಎಸ್ಸುಗಳ ಮೇಲೂ, ... ಮೇಲೂ ಕಲ್ಲುಗಳನ್ನು ಬೀರಿದರು. ಗಾಂಧಿ ಟೋಪಿ ಧರಿಸಿದ್ದವರನ್ನು ಕಂಡ ಕೆಲವು ಕಡೆಗಳಲ್ಲಿ ಗಲಾಟೆ ಎಬ್ಬಿಸಿದರು. ವಾಹನಗಳಿಗೆ ಕಿಚ್ಚು ... ಇಡುತ್ತಿದ್ದಾಗ ಮೂರು ಕಡೆ ಪೋಲೀಸರು ಲಾಠಿ ಪ್ರಹಾರ ಮಾಡಿದರು.

ದಕ್ಷಿಣ ಜೋನಿನವರ ಎರಡನೇ ಆಟದಲ್ಲಿ ೨೬೪ ರನ್ನು

ಸೋಲಿಕಾಫ್ ೧೫೭ ರನ್ನು ಹೊಡೆದರು

ಸ್ವಂ.ವ. ಫೋನ್] ಬೆಂಗಳೂರು ೨೭

ನ್ಯೂಜಿಲೆಂಡ್ ಟೀಮಿನ ಮೇಲೆ ಈ ದಿನ ಸೌತ್ ಜೋನಿನವರು ಎರಡನೇ ಇನ್ನಿಂಗ್ಸಿನಲ್ಲಿ ಆಡಿದ ಕ್ರಿಕೆಟ್ ಪಂದ್ಯದಲ್ಲಿ ... ವಿಕೆಟ್ಟುಗಳಿಗೆ ೨೬೪ ರನ್ನುಗಳನ್ನು ಮಾಡಿದರು. ... ಸೋಲಿಕಾಫ್‌ರವರೇ ೧೫೭ ರನ್ನು ಮಾಡಿದ್ದಾರೆ

ಕೊಯಮುತ್ತೂರಿನಲ್ಲಿ ರಷ್ಯದ ನಾಯಕರಿಗೆ ಭಾರಿ ಸ್ವಾಗತ

ಆರು ಆನೆಗಳಿಂದ ಪುಷ್ಪಹಾರ ಸಮರ್ಪಣೆ

ನೆನ್ನೆ ಮಧ್ಯಾಹ್ನ ಕೊಯಮುತ್ತೂರಿನಲ್ಲಿ ರಷ್ಯದ ನಾಯಕರು ವಿಮಾನದ ಮೂಲಕ ಬಂದಿಳಿದಾಗ ಅವರಿಗೆ ವೈಭವಯುತವಾದ ಸ್ವಾಗತವನ್ನು ನೀಡಲಾಯಿತು. ಅವರು ... ಆರು ಆನೆಗಳು ... ಒಂದು ಅವರುಗಳಿಗೆ ಪುಷ್ಪಹಾರಗಳನ್ನರ್ಪಿಸಿದುವು. ಆನೆಗಳ ಮೇಲೆ ... ಮತ್ತು ... ಛತ್ರಿಗಳನ್ನು, ಮತ್ತು ... ಚಾಮರಗಳನ್ನೂ ... ವಾಗಿ ಹಿಡಿದಿದ್ದರು

ಅನಂತರ ನಡೆದ ಪೌರ ಸತ್ಕಾರ ಸಮಾರಂಭದಲ್ಲಿ ಪುರಸಭಾಧ್ಯಕ್ಷರು ಬೆಳ್ಳಿ ಕರಂಡಗಳಲ್ಲಿ ಸನ್ಮಾನಪತ್ರವನ್ನು ಅರ್ಪಿಸಿದರು. ಅವಡಿ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ಪ್ರಧಾನಿ ನೆಹರೂರವರು ... ಒಂದು ... ಚಿತ್ರವೊಂದನ್ನು ... ರಷ್ಯದ ನಾಯಕರು ... ಈ ಚಿತ್ರವನ್ನು ರಷ್ಯದ ... ಸಂಗ್ರಹಾಲಯದಲ್ಲಿ ಇಡುವುದಾಗಿಯೂ ಹೇಳಿದರು.

ಪ್ರದೇಶ ಕಾಂಗ್ರೆಸ್ಸಿನಲ್ಲಿ ಕರ್ನಾಟಕದ ಬಗ್ಗೆ ಚರ್ಚೆ

ಹೈ ಕಮಾಂಡಿನ ಸಂಚಾಲಕಿಯನ್ನು ಅಂಗೀಕರಿಸುವಂತೆ ಅಧ್ಯಕ್ಷರ ಮನವಿ

ಸ್ವಂ ವ ಫೋನ್] ಬೆಂಗಳೂರು ೨೭

ಈ ದಿನ ಬೆಳಿಗ್ಗೆ ೧೧ ಗಂಟೆಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವು ಸೇರಿ ಪ್ರಾಂತ ಪುನರ್ವಿಂಗಡಣೆ ವಿಷಯವನ್ನು ಪರಿಶೀಲಿಸಿತು. ... ರಹಸ್ಯವಾಗಿ ನಡೆದುವು

ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ... ಭಾಷಣ ಮಾಡಿ ಅಖಿಲ ಭಾರತ ಕಾಂಗ್ರೆಸ್ ಹೈಕಮಾಂಡಿನವರು ಕರ್ನಾಟಕದ ಬಗ್ಗೆ ನಿರ್ಣಯ ಮಾಡಿದ ಸಂದರ್ಭವನ್ನು ವಿವರಿಸಿದರೆಂದು ಗೊತ್ತಾಗಿದೆ

ಅಂದ್ರ ಪ್ರಾಂತವಾದನಂತರ ಕರ್ನಾಟಕವೂ ... ಆಗುವುದೆಂಬ ನಂಬಿಕೆಯು ಬಹಳ ಹಿಂದಿನಿಂದ ತಮಗೆ ... ಕೆಲವು ಕಾರಣಗಳಿಂದ ಅದನ್ನು ಹೊರಗೆಡಹಲು ಅವಕಾಶವಾಗಲಿಲ್ಲವೆಂದು ಅವರು ತಿಳಿಸಿದರು. ಕರ್ನಾಟಕ ಪ್ರಾಂತ ರಚನೆಯ ವಿರುದ್ಧವಾಗಿ ಹಲವು ಪ್ರಮುಖರು ಹೇಳಿಕೆಗಳನ್ನಿತ್ತುದರಿಂದ ಹೈ ಕಮಾಂಡಿನವರು ಆದೇಶ ಕೊಡಬೇಕಾಗಿ ಬಂದಿತೆಂದೂ ಸಹ ಅವರು ತಿಳಿಸಿದರು. ಸದಸ್ಯರೆಲ್ಲರೂ ನಿರ್ಣಯವನ್ನು ಏಕ ಕಂಠದಿಂದ ಅಂಗೀಕರಿಸುವಂತೆ ಅವರು ಕೋರಿದರು

ಶ್ರೀ ಎಂ. ವಿ. ರಾಮರಾಯರು ಕರ್ನಾಟಕ ಪ್ರಾಂತ ರಚನೆ ಬಗ್ಗೆ ಪ್ರದೇಶ ಕಾರ್ಯಕಾರಿ ಮಂಡಲಿಯ ನಿರ್ಣಯವನ್ನು ಮಂಡಿಸಿದರು. ಶ್ರೀ ಎ ... ಭೀಮಪ್ಪನಾಯಕರು ಅನುಮೋದಿಸಿದರು

ರಷ್ಯದ ನಾಯಕರಿಂದ ಮಹಾರಾಜರಿಗೆ ಬಹುಮಾನ

ಬೆಂಗಳೂರು ೨೭

ರಷ್ಯದ ನಾಯಕರು ಸಂಸ್ಥಾನಕ್ಕೆ ಭೇಟಿ ಕೊಟ್ಟುದರ ಕುರುಹಾಗಿ ನೆನ್ನೆ ಅವರು ಇಲ್ಲಿಂದ ಕೊಯಮುತ್ತೂರಿಗೆ ತೆರಳುವ ಮುನ್ನ ಶ್ರೀಮನ್ಮಹಾರಾಜರಿಗೆ ಒಂದು ಕ್ಯಾಮರಾವನ್ನೂ, ಮುಖ್ಯ ಮಂತ್ರಿ ಹನುಮಂತಯ್ಯನವರಿಗೆ ಒಂದು ಕ್ಯಾಮರಾ ಮತ್ತು ಒಂದು ಸಿಗರೇಟು ಪೆಟ್ಟಿಗೆಯನ್ನೂ ಮತ್ತು ಮೇಯರ್ ದೀಕ್ಷಿತರವರಿಗೆ ... ಒಂದು ಚಿನ್ನದ ಕೈ ಗಡಿಯಾರ ಮತ್ತು ಒಂದು ... ಸೆಟ್ಟನ್ನೂ ಬಹುಮಾನವಾಗಿ ಕೊಟ್ಟರೆಂದು ವರದಿಯಾಗಿದೆ.

ಸಣ್ಣ ಕೈಗಾರಿಕೆಗಳವರಿಗೆ ಕಂತು ಹಣದ ಮೇಲೆ ಯಂತ್ರ ಸಾಮಗ್ರಿಗಳು

ಭಾರತ ಸರ್ಕಾರದವರು ಸಣ್ಣ ಕೈಗಾರಿಕೆಗಳವರಿಗೆ ಬೇಕಾಗುವ ಯಂತ್ರೋಪಕರಣಗಳನ್ನು ಸುಲಭ ಕಂತಿನ ಸಾಲದಮೇಲೆ ಒದಗಿಸುವ ಕ್ರಮವನ್ನು ಜಾರಿಗೆ ತಂದಿರುವರು. ಮೊದಲಿನಲ್ಲಿ ಪ್ರತಿ ಕೈಗಾರಿಕೆಗೂ ಬೇಕಾಗುವ ಒಂದೆರಡು ಯಂತ್ರಗಳನ್ನು ಮಾತ್ರ ಒದಗಿಸಲಾಗುವುದೆಂದೂ, ಇದನ್ನು ಪಡೆಯಲಪೇಕ್ಷಿಸುವವರು ಬೆಂಗಳೂರಿನಲ್ಲಿರುವ ಗ್ರಾಮಾಂತರ ಕೈಗಾರಿಕಾ ಡೈರೆಕ್ಟರಿಂದ ವಿವರಗಳನ್ನು ತಿಳಿಯಬಹುದೆಂದೂ ಪ್ರಕಟಿಸಲಾಗಿದೆ

ಬುಲ್ಗಾನಿನ್ನರ ವಿಮಾನದಲ್ಲಿ ೩ ವರ್ಷದ ಮಗು

ರಷ್ಯದ ನಾಯಕರನ್ನು ಬೀಳ್ಕೊಡಲು ನೆನ್ನೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಪತ್ರಿಕೋದ್ಯೋಗಿಯೊಬ್ಬರ ಸಂಗಡ ಹೋಗಿದ್ದ ೩ ವರ್ಷದ ಮಗುವು ವಿಮಾನವು ಹೇಗಿದೆಯೆಂದು ನೋಡಲು ಅದರ ಒಳ ಹೋದಾಗ ಅಲ್ಲಿದ್ದ ಸೋವಿಯಟ್ ಸಿಬ್ಬಂದಿ ಅಧಿಕಾರಿಗಳು ಅದನ್ನು ತಡೆಯದೆ ವಿಮಾನದೊಳಕ್ಕೆ ಕರೆದುಕೊಂಡುಹೋಗಿ ಚಾಕೊಲೇಟ್ ಕೊಟ್ಟು ಹೊರಕ್ಕೆ ಕಳುಹಿದರೆಂದು ವರದಿಯಾಗಿದೆ. ಸೋವಿಯಟ್ ಬಹಳ ಚೆನ್ನಾಗಿ ... ಅದರಲ್ಲಿ ಹೋಗಬೇಕೆಂದು ತನಗೂ ... ಬಾಲಕನು ಹೇಳಿದನು

ನೆಹರೂ ಮತ್ತು ಕ್ರುಶ್ಚೇವ್‌ರಿಂದ ಮಂಚದ ಶಕ್ತಿಯ ಪರೀಕ್ಷೆ

ಕಳೆದ ವಾರ ರಷ್ಯದ ನಾಯಕರು ಪಂಡಿತ ನೆಹರೂರವರೊಡನೆ ದೆಹಲಿಯ ... ಪ್ಯಾಲೆಸ್ ... ವಸ್ತುಪ್ರದರ್ಶನಕ್ಕೆ ಭೇಟಿಯಿತ್ತಾಗ, ಸ್ವಾಬ್ ಯುವಕರು ... ದಿಂದ ಮಾಡಿದ್ದ ಒಂದು ಮಂಚದ ಶಕ್ತಿಯ ಬಗ್ಗೆ ಕ್ರುಶ್ಚೇವ್ ಮತ್ತು ನೆಹರೂರವರಿಗೆ ನಡೆದ ಒಂದು ಪಣದಲ್ಲಿ ಕ್ರುಶ್ಚೇವರೇ ಗೆದ್ದರು. ಮಂಚವು ಒಬ್ಬ ಮನುಷ್ಯನ ಭಾರವನ್ನು ತಡೆಯಲಾರದೆಂದು ಕ್ರುಶ್ಚೇವ್‌ರವರು ಹೇಳಿದಾಗ ನೆಹರೂರವರು ಒಪ್ಪದೆ ತಮ್ಮ ವಾದವನ್ನು ಸಮರ್ಥಿಸಲು ಮಂಚದ ಮೇಲೆ ಮಲಗಿ ತೋರಿಸಿದರು. ಮಂಚವು ಭದ್ರವಾಗಿಯೇ ಇತ್ತು. ಆದರೆ ಕ್ರುಶ್ಚೇವರು ... ಬಿಡುವಷ್ಟರಲ್ಲಿಯೇ ಅದು ಕುಸಿದುಬಿದ್ದಿತು

ಹಿಂದೂ ಉತ್ತರಾಧಿಕಾರ ಮಸೂದೆಗೆ ವಿರೋಧ

ಮೈಸೂರು ೨೬

ಲೋಕ ಸಭೆಯ ಪ್ರಸಕ್ತ ಅಧಿವೇಶನದಲ್ಲಿ ಮಂಡಿತವಾಗಲಿರುವ "ಹಿಂದೂ ಉತ್ತರಾಧಿಕಾರ ಮಸೂದೆ" ಯ ಬಗ್ಗೆ ನಗರದ ಬ್ರಾಹ್ಮಣೀಯ ಜನ ಸಂಘವು ವಿಚಾರ ಮಾಡಿ ಕೆಳಗೆ ಕಂಡ ನಿರ್ಣಯವನ್ನು ಅಂಗೀಕರಿಸಿದೆ.-

ಈ ಮಸೂದೆಯು ಹಿಂದೂ ಕುಟುಂಬ ಪದ್ಧತಿಯನ್ನು ಭಗ್ನಗೊಳಿಸುವಂತಹುದಾಗಿದೆ ಇದರಲ್ಲಿನ ಕೆಲವು ಅಂಶಗಳಂತೂ (ಅಕ್ರಮ ಸಂತಾನಕ್ಕೆ ಆಸ್ತಿಯ ಹಕ್ಕು, ವಿವಾಹಿತ, ಅವಿವಾಹಿತ ಸ್ತ್ರೀಯರಿಗೆ ಸಮಾನ ಹಕ್ಕು ಇವು ಬಹು ಪತಿತ್ವಕ್ಕೆ ಎಡೆಗೊಡುತ್ತವೆ) ನಮ್ಮ ಶ್ರೇಷ್ಠ ಸಮಾಜ ಪದ್ಧತಿಯನ್ನು ಭ್ರಷ್ಟಗೊಳಿಸಲು ದಾರಿಯಾಗುತ್ತವೆ

ಈಗಲೇ ಶಕ್ತಿಹೀನವಾದ ಹಿಂದೂ ಸಮಾಜವನ್ನು ಮತ್ತಷ್ಟು ಅಧಃಪತನಕ್ಕೊಯ್ಯಬಹುದಾಗುವ ಈ ಮಸೂದೆಯನ್ನು ಆದಷ್ಟು ಬೇಗನೆ ಜಾರಿಗೆ ತರಲು ಹಾತೊರೆಯುತ್ತಿರುವ ಪಂಡಿತ ನೆಹರೂರವರ ಆತುರ ಬುದ್ಧಿಗಾಗಿ ಜನ ಸಂಘ ವಿಷಾದವನ್ನು ವ್ಯಕ್ತಪಡಿಸಿ ಜನಸಾಮಾನ್ಯರು ಮಸೂದೆಯ ತೀವ್ರ ವಿಚಾರ ಮಾಡಿ (ಪಕ್ಷ ... ಗಳನ್ನು ತೊರೆದು) ನಮ್ಮ ಸಮಾಜದ ಕಲ್ಯಾಣಕ್ಕಾಗಿ ಮಡಿಯಲು ಸಿದ್ಧ ಜನರಲ್ಲಿ ಮನವಿ ಮಾಡಿಕೊಂಡಿದೆ

ಶಾಸ್ತ್ರೋಕ್ತವೆಂದು ಹೇಳುವ ವಿ ಕತ ಸರ್ಕಾರವು ಹಿಂದೂ ಧರ್ಮಕ್ಕೆ ವಿರುದ್ಧವಾಗಿರುವ ಈ ಮತ ಸಂಬಂಧ ವ್ಯವಹಾರದಲ್ಲಿ ಕೈ ಹಾಕಲು ರಾಷ್ಟ್ರಾಂಗದ ಮೂಲಭೂತ ತತ್ವಕ್ಕೆ ವಿರುದ್ಧವೆಂದು ನಿರ್ಣಯಿಸುತ್ತದೆ

ವೀರವಾಣಿ ಪತ್ರಿಕೆಯ ಆರಂಭೋತ್ಸವ

ನಗರದ ಶ್ರೀ ಎಂ ಎಸ್ ನಾರಾಯಣಸ್ವಾಮಿ ಮತ್ತು ಕೆ ಎಂ ಸೀತಾರಾಂ ರವರುಗಳು ನಡೆಸಲಿರುವ ವೀರವಾಣಿ ವಾರಪತ್ರಿಕೆಯ ಆರಂಭೋತ್ಸವವು ಶ್ರೀ ಲಿಂಗದ ರಂಗಯ್ಯನವರಿಂದ ನಾಳೆ ಬೆಳಿಗ್ಗೆ ಹೋಟೆಲಿನ ಕಟ್ಟಡದ ಬಿಸ್ಮಿಲ್ಲಾ ಪ್ರೆಸ್ ಕಾರ್ಯಾಲಯದಲ್ಲಿ ನೆರವೇರಲಿದೆ "ವರ್ತಮಾನ ಪತ್ರಿಕೆಯ ಸಂಪಾದಕ ಶ್ರೀ ಎ. ಎಂ ತಿಮ್ಮಯ್ಯನವರು ಅಧ್ಯಕ್ಷತೆ ವಹಿಸುವರು

ಬ್ಯಾಡ್‌ಮಿಂಟನ್ ಪಂದ್ಯ

ರಾಜಧಾನಿಯ ಇಟ್ಟಿಗೆಗೂಡಿನಲ್ಲಿರುವ ಭಾರತ್ ಬ್ಯಾಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ಜೂನಿಯರ ಬ್ಯಾಡ್‌ಮಿಂಟನ್ ಪಂದ್ಯಗಳು ಬರುವ ತಿಂಗಳು ೧೭ನೇ ತಾರೀಖಿನಿಂದ ಆರಂಭವಾಗುವವು ಭಾಗವಹಿಸಲಿಚ್ಛಿಸುವವರು ಡಿಸೆಂಬರ್ ೧೦ನೇ ತಾರೀಖಿನೊಳಗಾಗಿ ಪ್ರವೇಶಧನದೊಡನೆ ತಮ್ಮ ಹೆಸರುಗಳನ್ನು ತಿಳಿಸಬಹುದೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಅಖಿಲ ಭಾರತ ಸಾಮಾಜಿಕ ಶಿಕ್ಷಣ ದಿನಾಚರಣೆ

ನಗರದ ಪಬ್ಲಿಕ್ ಲೈಬ್ರೆರಿಯಲ್ಲಿ ಬರುವ ಗುರುವಾರ ಸಂಜೆ ೬ ಗಂಟೆಗೆ ಅಖಿಲ ಭಾರತ ಸಾಮಾಜಿಕ ಶಿಕ್ಷಣ ದಿನಾಚರಣೆಯ ಆರಂಭೋತ್ಸವವನ್ನೂ ಮತ್ತು ಈ ಸಂಬಂಧದಲ್ಲಿ ಏರ್ಪಡಿಸಲಾಗುವ ಪುಸ್ತಕ ಪ್ರದರ್ಶನದ ಉದ್ಘಾಟನೆಯನ್ನೂ ಡಾ॥ ಎ ಎಲ್ ನರಸಿಂಹಯ್ಯನವರು ನೆರವೇರಿಸುವರು

ವಿವಾಹ ವಿಚ್ಛೇದನಕ್ಕಾಗಿ ಬರೋಡ ರಾಜರ ದಾವಾ

ತಮ್ಮ ಎರಡನೆಯ ಹೆಂಡತಿಯಾದ ಸೀತಾದೇವಿಯಿಂದ ವಿಚ್ಛೇದನ ಪಡೆಯಲು ಬರೋಡೆಯ ಮಾಜಿ ರಾಜರಾದ ಪ್ರತಾಪಸಿಂಗರಾವ್ ಗಾಯಕವಾಡ್‌ರವರು ಬೊಂಬಾಯಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಅವರಿಬ್ಬರಿಗೂ ೧೯೪೩ರಲ್ಲಿ ವಿವಾಹವಾಗಿ ಒಬ್ಬ ಮಗನಿದ್ದಾನೆ ಸೀತಾದೇವಿಯು ಈಗ ಫ್ರಾನ್ಸಿನಲ್ಲಿದ್ದಾರೆ

ಅರಸು ವಿದ್ಯಾರ್ಥಿಗಳಿಗೆ ಸತ್ಕಾರ

ಮೈಸೂರು ೨೬

ಶ್ರೀ ಚಾಮರಾಜೇಂದ್ರ ಅರಸು ವಿದ್ಯಾರ್ಥಿ ನಿಲಯದವರು ಈ ಸಾರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅರಸು ವಿದ್ಯಾರ್ಥಿಗಳ ಗೌರವಾರ್ಥವಾಗಿ ಸಮಾರಂಭವೊಂದನ್ನು ಮೊನ್ನೆ ಶ್ರೀ ಎಂ ಎಲ್ ರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಶ್ರೀ ಜಿ ವಿ ಚನ್ನರಾಜೆ ಅರಸಿನವರಿಂದ ಪ್ರಾರ್ಥನೆಯಾದನಂತರ ಸಂಘದ ಅಧ್ಯಕ್ಷ ಶ್ರೀ ಹೆಚ್ ನಂಜರಾಜ ಅರಸುರವರು ಸ್ವಾಗತ ಭಾಷಣ ಮಾಡಿದಮೇಲೆ ಕಾರ್ಯದರ್ಶಿ ಶ್ರೀ ಎಂ ನಂಜರಾಜ ಅರಸುರವರು ವರದಿಯನ್ನು ಒಪ್ಪಿಸಿದರು.

ನಿಲಯದ ಸೂಪರಿಂಟೆಂಡೆಂಟರಾದ ಶ್ರೀ ಡಿ. ರಾಮಯ್ಯನವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು ನಂತರ ವಿಶ್ವವಿದ್ಯಾಲಯದ ಇಂಗ್ಲೀಷ್ ಪ್ರಾಧ್ಯಾಪಕರಾದ ಶ್ರೀ ಕೆ ಎ ನೀಲಕಂಠಶಾಸ್ತ್ರಿಗಳು ಮಾತನಾಡಿ ಅರಸು ವಿದ್ಯಾರ್ಥಿಗಳನ್ನು ಅಭಿನಂದಿಸಿದರು ಶ್ರೀ ಬಿ. ರಾಜೆ ಅರಸುರವರು ಮಾತನಾಡಿ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು

ಅಧ್ಯಕ್ಷರ ಭಾಷಣಾನಂತರ ಸಂಘದ ಉಪಾಧ್ಯಕ್ಷ ಶ್ರೀ ಕೆ ಎಲ್ ಕೆಂಪರಾಜ ಅರಸುರವರು ವಂದನಾರ್ಪಣೆ ಮಾಡಿದರು ... ಎಂಬ ನಾಟಕ, ವಿವಿಧ ವಿನೋದಾವಳಿಗಳಾದ ನಂತರ ರಾಷ್ಟ್ರಗೀತೆ ಮತ್ತು ಶ್ರೀ ... ರಿಗೆ ಜಯಘೋಷದೊಡನೆ ಸಭೆ ಮುಕ್ತಾಯವಾಯಿತು

ಈ ಸಾರಿ ೫೨ ಮಂದಿ ಅರಸು ವಿದ್ಯಾರ್ಥಿಗಳು ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು ಅವರ ಪೈಕಿ ಮೂವರು ಮಹಿಳೆಯರು

ಸೌದಿ ಅರೇಬಿಯ ದೊರೆಗೆ ಮೆಕ್ಕಾ ಅಭಿಮುಖವಾಗಿ ಆಸನ ವ್ಯವಸ್ಥೆ

ಭಾರತದಲ್ಲಿ ೧೭ ದಿನಗಳ ಪ್ರವಾಸವನ್ನು ಕೈಗೊಂಡಿರುವ ಸೌದಿ ಅರೇಬಿಯದ ದೊರೆ ಇಬನ್ ಸೌದರು ಸದಾ ಮೆಕ್ಕಾ ನಗರಕ್ಕೆ ಅಭಿಮುಖವಾಗಿರಲು ಅನುವಾಗುವಂತೆ ಅವರು ಪ್ರಯಾಣ ಮಾಡಲಿರುವ ರೈಲು ಮತ್ತು ವಿಮಾನಗಳಲ್ಲಿ ವಿದ್ಯುತ್ ಶಕ್ತಿಯಿಂದ ಸದಾ ಪಶ್ಚಿಮ ದಿಕ್ಕಿಗೆ ತಿರುಗಿಕೊಂಡಿರುವ ವಿಶೇಷ ಆಸನಗಳನ್ನು ನಿರ್ಮಿಸಲಾಗಿದೆ ಅಲ್ಲದೆ ಅವರು ಗಾಡಿಗಳನ್ನು ಪ್ರವೇಶಿಸಲು ಮತ್ತು ಇಳಿಯಲು ಅನುಕೂಲವಾಗುವಂತೆ ಬಾಗಿಲುಗಳನ್ನೂ ಮತ್ತು ಹಾಸಿಗೆಗಳನ್ನೂ ವಿಸ್ತರಗೊಳಿಸಲಾಗಿದೆಯೆಂದು ತಿಳಿದುಬಂದಿದೆ

ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್‌ರವರ ಆಫೀಸಿನಿಂದ

ತಾರೀಖು 18 11-55

ನೋಟಿಫಿಕೇಷನ್

R S P R 161/55-56

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನಲ್ಲಿ ಮತ್ತು ಕುರಿಗಳ ಕಸಾಯಿ ಮನೆಯಲ್ಲಿ ಡೈಲಿ ಫೀ ವಸೂಲುಮಾಡುವ ಮತ್ತು ಇತರೆ ಬಾಬುಗಳನ್ನು ಗುತ್ತಿಗೆಕೊಡುವ ಹಕ್ಕನ್ನು 56 57ನೇ ಸಾಲಿಗೆ 1955ನೇ ಡಿಸೆಂಬರ್ ೨೮ ಲಾಗಾಯ್ತು ಈ ಆಫೀಸಿನಿಂದ ಸಾರ್ವಜನಿಕ ಹರಾಜು ಇಸ್ತಿಹಾರ್ ನಾಮೆಯಲ್ಲಿ ನಮೂದಿಸಿರುವ ದಿನಗಳಲ್ಲಿ ವಿಲೆ ಪಡಿಸಲಾಗುತ್ತೆ ವಿವರಗಳನ್ನು ರೆವಿನ್ಯೂ ಆಫೀಸಿನವರಲ್ಲಿ ಆಫೀಸು ವೇಳೆಯಲ್ಲಿ ತಿಳಿಯಬಹುದು

(ಸಹಿ) ಎಸ್. ಲಕ್ಷ್ಮಣರಾವ್,
ಮುನಿಸಿಪಲ್ ಕಮೀಷನರ್

Edited, Printed and Published by A. R Nagarajan at Sadhvi Press, D Subbiah Road, Mysore

ಕಾಶ್ಮೀರದ ಬಗ್ಗೆ ಯುದ್ಧಕ್ಕಾಗಿ ಪಾಕಿಸ್ತಾನಿಗಳ ಕರೆ

ಕಾಶ್ಮೀರ ಸಮಸ್ಯೆ ಬಗ್ಗೆ ರಾಷ್ಟ್ರೀಯ ನೀತಿಯೊಂದನ್ನು ರೂಪಿಸಲು ಮೊನ್ನೆ ಕರಾಚಿಯಲ್ಲಿ ಸೇರಿದ್ದ ಪಾಕಿಸ್ತಾನದ ನಾನಾ ಪಕ್ಷಗಳ ಸಮ್ಮೇಳನದಲ್ಲಿ, ಭಾರತದ ಮೇಲೆ ಯುದ್ಧ ಹೂಡಬೇಕೆಂಬ ಹಲವು ಸದಸ್ಯರ ಸಲಹೆಯನ್ನು ಪ್ರಧಾನಿ ಮಹಮದಾಲಿಯವರು ತಿರಸ್ಕರಿಸಿದರು. ಕಾಶ್ಮೀರದ ಸಮಸ್ಯೆಯ ಇತ್ಯರ್ಥಕ್ಕೆ ಭಾರತವೇ ಅಡ್ಡಿಯಾಗಿರುವುದೆಂದು ಅವರು ಆಪಾದಿಸಿ, ಎಲ್ಲ ಬಗೆಯ ಶಾಂತಿಯುತ ಪ್ರಯತ್ನಗಳನ್ನೂ ಪಾಕಿಸ್ತಾನವು ಮಾಡುವುದೆಂದೂ, ಆದರೆ ಕೊನೆಯಲ್ಲಿ ಜನತೆಯು ನಿರಾಶೆ ಮತ್ತು ಕ್ರೋಧಗಳನ್ನು ಹೊಂದಿದರೆ ಏನಾಗುವುದೆಂದು ಹೇಳಲು ಸಾಧ್ಯವಿಲ್ಲವೆಂದೂ ನುಡಿದರು. ಅಲ್ಲದೆ ಕಾಶ್ಮೀರವನ್ನು ಭಾರತ ತ್ವ ಸ್ವಂತ ಬೆಳವನ್ನಾಗಿ ಮಾಡಿದೆಯೆಂದು ಆಪಾದಿಸಿದರು

ಇದಕ್ಕೆ ಮೊದಲು ಕರಾಚಿಯ ಬೀದಿಗಳಲ್ಲಿ ಪ್ರದರ್ಶನಗಳು ನಡೆದು, ಬಹಿರಂಗ ಸಭೆಯೊಂದರಲ್ಲಿ ಭಾರತದ ಮೇಲೆ ಪಾಕಿಸ್ತಾನವು ಯುದ್ಧ ಹೂಡಬೇಕೆಂದು ನಿರ್ಣಯವಾಯಿತು ಕರಾಚಿ ನಗರವು ಪೂರ್ಣ ಹರತಾಳವನ್ನಾಚರಿಸಿತು

ಅ॥ ಕ॥ ಹಿಂದಿ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿ ರಾಜೇಶ್ವರಯ್ಯನವರ ಆಯ್ಕೆ

ಧಾರವಾಡದಲ್ಲಿರುವ ಅಖಿಲ ಕರ್ನಾಟಕ ಹಿಂದಿ ಪ್ರಚಾರಕ ಅಧ್ಯಾಪಕ ಸಂಘದ ಅಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾಲಯದ ಶ್ರೀ ಮ. ರಾಜೇಶ್ವರಯ್ಯನವರು ಚುನಾಯಿತರಾಗಿರುತ್ತಾರೆ ಶ್ರೀಗಳಾದ ಎಂ ಡಿ ಕೃಷ್ಣಮೂರ್ತಿ, ಶಾಂತಿನಾಥ ಸಿಂಹಾಸನಾಥ್ ಮತ್ತು ಕಲಮೇಶ್ವರ ಜೋಷಿಯವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುತ್ತಾರೆ ಮೈಸೂರಿನ ಶ್ರೀ ಟಿ ಎಸ್ ಸುದರ್ಶನಾಚಾರ್ಯರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾಗಿರುವರು ಬೊಂಬಾಯಿ ಪ್ರಾಂತದ ಸಚಿವರಾದ ಶ್ರೀ ಎಂ ಪಿ ಪಾಟೀಲ್‌ರವರು ಸಂಘದ ಪೋಷಕರಾಗಿರುವರು

ಕಣ್ವ ಋಷಿಗಳ ಆಶ್ರಮದ ಬಳಿ ಸ್ಮಾರಕ

ಹಿಮಾಲಯದ ತಪ್ಪಲಿನಲ್ಲಿ ಕಣ್ವ ಋಷಿಗಳು ಇದ್ದ ಸ್ಥಳದಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು ಉತ್ತರ ಪ್ರದೇಶ ಸರ್ಕಾರದವರು ನಿರ್ಧರಿಸಿರುತ್ತಾರೆ ಕಾಳಿದಾಸನ ಸುಪ್ರಸಿದ್ಧ ನಾಟಕದ ಕಥಾ ನಾಯಕಿ ಶಕುಂತಲೆಯ ವಿಹಾರ ಸ್ಥಾನವು ಅದೇ ಆಗಿದ್ದಿತೆಂದು ಹೇಳಲಾಗಿದೆ.

ಹೊಸ ಜವಳಿ ಅಂಗಡಿ

ಬೆಲೆ ಸುಲಭ!

ದಿಂಡಿಗಲ್, ಕೊಳ್ಳೇಗಾಲ, ಮಂಗಳೂರು, ಕೊಯಮುತ್ತೂರು, ವರಿಯೂರು ಸೀರೆಗಳು ಮತ್ತು ಎಲ್ಲ ರಕಂ ಮಿಲ್ ಬಟ್ಟೆಗಳು ನಮ್ಮಲ್ಲಿ ದೊರೆಯುತ್ತವೆ

ವಿಜಯ ಹಾಲ್,

ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು

ವಿಶ್ವ ಶಾಂತಿ ಸಾಧನೆಗೆ ಭಾ... ಸೌದಿ ಅರೇಬಿಯದ ಸಹ...

ರಾಷ್ಟ್ರಪತಿಗಳ ಸತ್ಕಾರ ಕೂಟ... ಸೌದಿ ಅರೇಬಿಯ ದೊರೆಗಳ ಭಾ...

ನೆನ್ನೆ ದಿನ ದೆಹಲಿಗೆ ಆಗಮಿಸಿದ ಸೌದಿ ಅರೇಬಿಯದ ದೊರೆ ಇಬನ್ ಸೌದರಿಗೆ ಬಹಳ ... ದ ಸ್ವಾಗತವನ್ನು ನೀಡಲಾಯಿತು. ವಿಮಾನ... ದ ಅವರು ಇಳಿದೊಡನೆ ೨೧ ಕುಶಾಲತೋಪು... ಗಳನ್ನು ಹಾರಿಸಲಾಯಿತು ಅಲ್ಲಿಂದ ರಾಷ್ಟ್ರಪತಿ ಭವನದವರೆಗೆ ೧೦ ಮೈಲಿ ಉದ್ದಕ್ಕೂ ಸಹಸ್ರಾರು ಜನರು ಅವರಿಗೆ ಜಯಘೋಷ ಮಾಡಿ...

ಸಂಜೆ ರಾಷ್ಟ್ರಾಧ್ಯಕ್ಷರು ಅವರ ಗೌರವಾರ್ಥವಾಗಿ ಔತಣ ಕೂಟವನ್ನು ನಡೆಸಿ, ಭಾರತ ... ಅರೇಬಿಯ ದೇಶಕ್ಕೂ ಸಹಸ್ರಾರು ವರ್ಷ... ಇರುವ ನಿಕಟ ಸಂಪರ್ಕವನ್ನು ನಿರೂಪಿಸಿದರು ಇಬನ್ ಸೌದರು ಉತ್ತರಕೊಡುತ್ತ ತಮ್ಮ... ಟಸ್ಥ ನೀತಿಗಳಿಂದ ಭಾರತ ಮತ್ತು ಅರೇ... ದೇಶಗಳು ವಿಶ್ವಶಾಂತಿ ಸಾಧನೆಯಲ್ಲಿ ... ಪೂರ್ಣವಾದ ಪ್ರಭಾವವನ್ನು ಬೀರಬಲ್ಲವೆಂದು ನುಡಿದರು

ರಷ್ಯದಲ್ಲಿ ಅಪರಿಮಿತ ಜನ... ಸ್ವಾಗತ

ಬಂಡವಾಳಶಾಹಿ ದೇಶಗಳಿಂದ ರಷ್ಯ... ದೇಶದ ವಿರೋಧಿಗಳೂ ಸಹ ಪ್ರವಾಸ ಹೊ... ವಲು ಯಾವ ಅಡ್ಡಿಯೂ ಇಲ್ಲವೆಂದು ರಷ್ಯ... ಮುಖ ನಿಕಿಟಾ ಕ್ರುಶ್ಚೇವ್‌ರವರು ಹೇಳಿರು... ಕಮ್ಯುನಿಷ್ಟರಾದ ಜನರು ತಮ್ಮ ದೇಶಕ್ಕೆ... ದರೂ ಕೂಡ ಅವರ ಕಷ್ಟಲವು ತಮಗೆ ... ತೆ ನೋಡಿಕೊಳ್ಳುವುದಾಗಿ ಅವರು ಹೇಳಿ...

ಅಖಿಲ ಕರ್ನಾಟಕ ಅಂತರ ವಿದ್ಯಾ... ನಿಲಯ ಕನ್ನಡ ಚರ್ಚಾ ಸ್ಪರ್ಧೆ

ರಾಜಧಾನಿಯ ಸಾರ್ವಜನಿಕ ವಿದ್ಯಾ... ಲಯದ ಆಶ್ರಯದಲ್ಲಿ ಮಾಮೂಲಿನಂತೆ ... ತಿಂಗಳ ಪೂರ್ವಾರ್ಧದಲ್ಲಿ ಅಖಿಲ ಕರ್ನಾ... ಅಂತರ ವಿದ್ಯಾರ್ಥಿನಿಲಯ ಕನ್ನಡ ಚರ್ಚಾ ಸ್ಪ... ರ್ಧೆಯನ್ನು ಏರ್ಪಡಿಸಲಾಗಿದೆ. ಪ್ರತಿಯೊಂದು ವಿದ್ಯಾರ್ಥಿನಿಲಯದಿಂದಲೂ ವಿಷಯದ ಪರ... ಕ್ಕು ವಿರೋಧವಾಗಿ ಒಬ್ಬೊಬ್ಬರಂತೆ ಇಬ್ಬರು ... ರ್ಥಿಗಳ ಹೆಸರುಗಳನ್ನು ಬರುವ ೫ನೇ ತಾ... ರೊಳಗಾಗಿ ಕಳುಹಿಸುವಂತೆ ಕೋರಲಾಗಿ...

FOR SALE

Cycles in good condi... (both ladies & gents) for ... at reasonable rates and S... to let. Enquire

L. N. CYCLE MART
K M Puram, Mysore

SREE GAYATRI
TALKIES
From To-day 2 Days
NO EXTENSION
Paramount's
MAMBO
Starring –Silvana Mangano
Michael Renny
- NEXT CHANGE -
IMMEDIATE DISASTER

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

27-11-55 ರಿಂದ · ಅನೋಘ ೨ನೇ ವಾರ ದಿನವೂ 3 ಪ್ರದರ್ಶನ

ಮಾದರೀ ಥಿಯೇಟರ್ಸ್‌ರವರ ತಮಿಳು ಚಿತ್ರ

ಮಹೇಶ್ವರಿ

ಪಾತ್ರ – ಆರ್. ಗಣೇಶ್, ಸಾವಿತ್ರಿ, ತಂಗವೇಲು

ನರ್ಸರಿ ಸ್ಕೂಲಿನ ಎಲ್ಲಾ ಸಾಮಾನಿಗೆ

— **TOY PALACE, MYSORE** —

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ ೩ ಕಾಸು

ಚಂದಾ ದರ

ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಟ: ೧೦] SADHVI : TUESDAY 29-11-1955 ಮೈಸೂರು ಮಂಗಳವಾರ ೨೯-೧೧-೧೯೫೫ [ಸಂಚಿಕೆ: ೧೦೬

ಗೋವಾದಲ್ಲಿ ಪೋರ್ಚುಗೀಸ್ ಆಳ್ವಿಕೆಗೆ ರಷ್ಯಾ ವಿರೋಧ

ಸಂಯುಕ್ತ ಕರ್ನಾಟಕ ಪ್ರಾಂತದ ರಚನೆಗೆ ಸ್ವಾಗತ

ಪ್ರದೇಶ ಕಾಂಗ್ರೆಸ್ ಸಭೆಯಲ್ಲಿ ಅವಿರೋಧವಾದ ತೀರ್ಮಾನ

ಬೆಂಗಳೂರು ೨೮

ನೆನ್ನೆ ಇಲ್ಲಿ ಸೇರಿದ್ದ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಸಂಯುಕ್ತ ಕರ್ನಾಟಕದ ರಚನೆಯನ್ನು ಸ್ವಾಗತಿಸುವ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಲಾಯಿತು. ೫೬ ಸದಸ್ಯರು ನಿರ್ಣಯದ ಪರವಾಗಿ ಓಟು ಕೊಟ್ಟರೆಂದು ಗೊತ್ತಾಗಿದೆ. ಕರ್ನಾಟಕದಲ್ಲಿ ಮೈಸೂರಿನ ವಿಲೀನವನ್ನು ವಿರೋಧಿಸುತ್ತಿದ್ದ ಶ್ರೀ ಎ. ಜಿ. ರಾಮಚಂದ್ರರಾವ್ ಕೆ. ಮಂಜಪ್ಪ ಮತ್ತು ೬೧ ಜನರು ತಮ್ಮ ಆತ್ಮ ಸಾಕ್ಷಿಯ ಕಾರಣದಿಂದ ನಿರ್ಣಯದ ಪರವಾಗಿ ಓಟು ಮಾಡದೆ ತಟಸ್ಥ ವಹಿಸಿದ್ದರೆಂದು ಹೇಳಲಾಗಿದೆ.

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ... ಪಜಾತಿ, ಹೈ ಪವರ್ ಸಮಿತಿಯವರು ಕರ್ನಾಟಕ ಸಂಸ್ಥಾನದ ಬಗ್ಗೆ ಮಾಡಿರುವ ನಿರ್ಣಯ "ಮೈಸೂರಿನ ಕನ್ನಡ ಮಾತನಾಡುವ ಜನರನ್ನೊಳಗೊಂಡ" ಎಂಬ ಪದಗಳ ಸೇರಿಕೆಯನ್ನು ಕಾಪು ಟ್ರಂಕ್ ಟೆಲಿಫೋನ್ ... ಪ್ರಧಾನಿ ನೆಹರೂರವರಿಂದ ಕೇಳಿದೆವು, ಕರ್ನಾಟಕದಲ್ಲಿ ಇಡೀ ಮೈಸೂರು ಸೇರಿಸಬೇಕೆಂಬುದು ಹೈ ಪವರ್ ಸಮಿತಿಯ ... ವೆಂದೂ, ಕೋಲಾರವು ಸಂಸ್ಥಾನದಲ್ಲೇ ಉಳಿಯುವುದೆಂದೂ ತಿಳಿಸಿದರು

... ವೆಂಕಟಪ್ಪ ಮತ್ತು ಶ್ರೀ ಟಿ ಎ. ...ಗಿರಿ ಗೌಡರು ತಿದ್ದುಪಡಿಗಳನ್ನಿತ್ತು, ... ಹೈಕಮಾಂಡಿನ ಆದೇಶದ ಪರಿಣಾಮವಾಗಿ ಪ್ರದೇಶ ಕಾಂಗ್ರೆಸ್ ಸಮಿತಿಯ ಆಧಿವೇಶನ ಅನವಶ್ಯವಿಲ್ಲವೆಂದು ಸೂಚಿಸಿದರು ... ತಿದ್ದುಪಡಿಗಳನ್ನು ತಳ್ಳಿಹಾಕಿದರು.

...ಯಲ್ಲಿ ಒಟ್ಟು ೭೩ ಮಂದಿ ಪರ ಮತ್ತು ...ವಾಗಿ ಭಾಷಣ ಮಾಡಿದರೆಂದೂ, ... ಗಳು ತಮ್ಮ ಭವಿಷ್ಯವು ... ಹೈಕಮಾಂಡಿನ ಆದೇಶವನ್ನು ... ಇಲ್ಲವೆಂದು ಹೇಳಿದುದಾಗಿಯೂ ಗೊತ್ತಾಗಿದೆ.

...ಗಿರಿ ಜಿಲ್ಲೆಯನ್ನು ಹೊಸ ಪ್ರಾಂತಕ್ಕೆ ಸೇರಿಸಬೇಕೆಂಬ ಭಾಗವನ್ನು ಬಿಟ್ಟುಬಿಡಲು ಮೂಲ ನಿರ್ಣಯಕ್ಕೆ ತಿದ್ದುಪಡಿಯನ್ನು ಸೂಚಿಸಲಾಯಿತು ... ವನ್ನು ಸಭೆಯು ಅಂಗೀಕರಿಸಿತು. ಒಟ್ಟು ... ಸದಸ್ಯರ ಪೈಕಿ ೧೧೧ ಮಂದಿ ಸಭೆಯಲ್ಲಿ ...ಸಿದ್ದರು.

...ನ ಕರ್ನಾಟಕವನ್ನು ವಿಶಾಲ ಮೈಸೂರು ಎಂದು ಕರೆಯಬೇಕೆಂಬ ಸಲಹೆಯುಳ್ಳ ತಿದ್ದುಪಡಿ ... ಶ್ರೀ ವಿ ವೆಂಕಟಪ್ಪನವರು ತಂದಿದ್ದರು. ಮೈಸೂರು ಎಂಬ ಹೆಸರು ಇರಬೇಕೆಂ... ದಸ್ಯರಲ್ಲಿ ಸರ್ವಾನುಮತ ಅಭಿಪ್ರಾಯವಿದ್ದುದರಿಂದ, ಈ ಬಗ್ಗೆ ಕೇಂದ್ರ ಸರ್ಕಾರದವರ ... ಸಲು ಹೋರಾಡುವುದಾಗಿ ಅಧ್ಯಕ್ಷರು ... ಯಿತ್ತುದಾಗಿಯೂ ಗೊತ್ತಾಗಿದೆ

ವಿಧಾನ ಪರಿಷತ್ತಿನ ಸದಸ್ಯ ಯು. ಪಿ. ಶಂಕರರಾಯರ ನಿಧನ

ಬೆಂಗಳೂರು ೨೮

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರಾಗಿದ್ದ ಶಿವಮೊಗ್ಗ, ಮಾಜಿ ಪೌರಸಭಾಧ್ಯಕ್ಷ ಶ್ರೀ ಯು ಪಿ ಶಂಕರರಾಯರು ನೆನ್ನೆ ಹೃದಯ ಕ್ರಿಯೆ ನಿಂತು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೪ ವರ್ಷ ವಯಸ್ಸಾಗಿತ್ತು. ಕೆಲವು ತಿಂಗಳಿಂದ ಅವರಿಗೆ ರಕ್ತದ ಒತ್ತಡವಿತ್ತು. ಮಂತ್ರಿಗಳೂ, ೨ ನೇ ನಾಯಕ ಸದಸ್ಯರೂ ಅವರಿದ್ದ ಸ್ಥಳಕ್ಕೆ ಹೋಗಿ ಅಂತ್ಯ ಗೌರವವನ್ನು ಸಲ್ಲಿಸಿದರು. ಅವರ ಶರೀರವನ್ನು ಶಿವಮೊಗ್ಗೆಗೆ ಕೊಂಡೊಯ್ಯಲಾಯಿತು. ನೆನ್ನೆ ಪ್ರದೇಶ ಕಾಂಗ್ರೆಸ್ ಸಮಿತಿಯು ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು.

ವಿಮಾ ಕಂಪೆನಿಗೆ ಡಾಲ್ಮಿಯಾರಿಂದ ೧ ಕೋಟಿ ೮೦ ಲಕ್ಷ ರೂ. ವಾಪಸು

ಭಾರತ್ ಇನ್ಷೂರೆನ್ಸ್ ಕಂಪೆನಿಗೆ ೧.೮೦ ಕೋಟಿ ರೂ ವಾಪಸು ಕೊಡಲು ಸೇಠ್ ರಾಮಕೃಷ್ಣ ಡಾಲ್ಮಿಯಾರವರು ತೀರ್ಮಾನಿಸಿ ಮುಂದೆ ಬಂದಿರುವುದಾಗಿ ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ ದೇಶಮುಖ್‌ರವರು ತಿಳಿಸಿರುತ್ತಾರೆ. ಈ ಹಿಂದೆ ಎಸ್ ಪಿ ಜೈನ್‌ರವರು ಹಣವನ್ನು ಕಟ್ಟುವುದಾಗಿ ಮುಂದೆ ಬಂದಿದ್ದರು. ಸಂಬಂಧಪಟ್ಟವರಿಂದ ಒಪ್ಪಿಗೆ ಇಲ್ಲದ ಕಾರಣ ಅದನ್ನು ತಿರಸ್ಕರಿಸಲಾಗಿತ್ತು. ಡಾಲ್ಮಿಯಾರಿಂದ ಇನ್ನೂ ಬರಬೇಕಾದ ಬಾಕಿ ಹಣಕ್ಕಾಗಿ ಅವರ ಮೇಲೆ ಕ್ರಮ ಜರುಗಿಸಲಾಗುವುದೆಂದೂ ಸಹ ದೇಶಮುಖ್‌ರವರು ನುಡಿದರು

ರಾಜಾಜಿ, ಶ್ರೀಪ್ರಕಾಶರಿಗೆ ಕ್ರುಶ್ಚೇವರ ಆಹ್ವಾನ

ರಷ್ಯದ ಕಮ್ಯೂನಿಸ್ಟ್ ನಾಯಕ ನಿಕಿಟಾ ಕ್ರುಶ್ಚೇವ್‌ರವರು ಮದ್ರಾಸಿನಲ್ಲಿ ನೆನ್ನೆ ರಾಜಾಜಿ, ಗೌರ್ನರ್ ಶ್ರೀಪ್ರಕಾಶ ಮತ್ತು ಮುಖ್ಯ ಮಂತ್ರಿ ಕಾಮರಾಜ ನಾಡಾರ್‌ರವರನ್ನು ಮಾಸ್ಕೋವಿಗೆ ಭೇಟಿ ಕೊಡುವಂತೆ ಆಹ್ವಾನಿಸಿದರು. ಬರುವ ... ತಿಂಗಳು ಮಾಸ್ಕೋ ಭೇಟಿಗೆ ವಾಯುಗುಣವು ಹಿತಕರವಾಗಿರುವುದೆಂದು ಅವರು ಹೇಳಿದರು

ಅಮೃತಸರದಲ್ಲಿ ಘರ್ಷಣೆ

ಅಮೃತಸರದಲ್ಲಿ ನೆನ್ನೆ ಪ್ರಾಂತ ಪುನರ್ವಿಂಗಡಣೆ ವಿಷಯವಾಗಿ ಅಕಾಲಿ ಸಿಕ್ಖರಿಗೂ, ಮಹಾಪಂಜಾಬ್ ವಾದಿಗಳಿಗೂ ೧೦ ನಿಮಿಷ ಘರ್ಷಣೆಯಾಯಿತು. ಸಿಕ್ಖರು ಚೂರಿಗಳನ್ನು ಉಪಯೋಗಿಸಿದರೆಂದು ಹೇಳಲಾಗಿದೆ. ಜನರನ್ನು ಚೆದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗ ಮಾಡಿದರು. ೧೨ ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಒಬ್ಬ ಪೊಲೀಸನಿಗೂ ಇನ್ನಿಬ್ಬರಿಗೂ ತೀವ್ರ ಗಾಯವಾಗಿದೆ

ಗೋ ವಧೆಗಾಗಿ ಇಬ್ಬರಿಗೆ ೧ ತಿಂಗಳ ಸಜಾ

ಗೋ ವಧೆ ಮಾಡಿದರೆಂದು ಕಸಾಬಗೇರಿಯ ಶಾಹು ಮತ್ತು ಮುಹಮದ್ ಎಂಬುವರಿಗೆ ನೆನ್ನೆ ನಗರ ನ್ಯಾಯಾಧೀಶರು ತಲಾ ೧ ತಿಂಗಳು ಕಠಿಣ ಸಜಾ ಮತ್ತು ೧೦೦ ರೂ. ದಂಡ, ತಪ್ಪಿದರೆ ಮತ್ತೆ ೧ ತಿಂಗಳ ಸಜಾವನ್ನು ವಿಧಿಸಿರುತ್ತಾರೆ.

ಕರ್ನಾಟಕದ ಬಗ್ಗೆ ಇನ್ನುಮುಂದೆ ವಿವಾದಗಳು ಇರಬಾರದು

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯವರ ಆಶಯ

ಬೆಂಗಳೂರು ೨೮

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯವರಿಗೆ ಕೇಂದ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ... ನಾರಾಯಣ್‌ರವರು ಪತ್ರವೊಂದನ್ನು ಬರೆದು, ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಕಾಂಗ್ರೆಸ್ಸಿನ ನಾಲ್ವರು ನಾಯಕರ ಉಪ ಸಮಿತಿಯವರು ಮಾಡಿರುವ ನಿರ್ಣಯದ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ವಿವಾದಗಳೆಲ್ಲವೂ ಮುಕ್ತಾಯವಾಗುವುವೆಂಬ ಆಶಯವನ್ನು ವ್ಯಕ್ತಪಡಿಸಿರುವರೆಂದು ವರದಿಯಾಗಿದೆ. ಪತ್ರದೊಡನೆ ಪಕ್ಷನಾಯಕರ ನಿರ್ಧಾರದ ನಿರ್ಣಯವನ್ನು ಕಳುಹಲಾಗಿದೆ. ಅದನ್ನು ಯಾವ ರೀತಿಯಲ್ಲಿ ಜಾರಿಗೆ ತರಬೇಕೆಂಬುದರ ಬಗ್ಗೆ ಎಲ್ಲ ಕಾಂಗ್ರೆಸ್ ಸದಸ್ಯರೂ ತಮ್ಮ ಸರ್ವ ಶಕ್ತಿಯನ್ನು ವಿನಿಯೋಗಿಸುವಂತೆ ಕೇಳಲಾಗಿದೆ

ಕೃತ್ತಿಕಾ ದೀಪೋತ್ಸವ

ವಿಷ್ಣು ದೇವಾಲಯಗಳಲ್ಲಿ ಕೃತ್ತಿಕಾ ದೀಪೋತ್ಸವವನ್ನು ಚಂದ್ರಗ್ರಹಣ ಪ್ರಯುಕ್ತ ಗ್ರಹಣ ಸ್ಪರ್ಶ ಕಾಲಕ್ಕೆ ೭ ಘಳಿಗೆ ಮುಂಚಿತವಾಗಿ ಆಚರಿಸಬೇಕೆಂದು ... ನಡೆಸುವಂತೆ ಈ ವಿಷಯ ... ಕೃತ್ತಿಕಾ ದೀಪೋತ್ಸವದ ಆಚರಣೆಯು ಶಾಸ್ತ್ರ ಸಮ್ಮತವಾಗಿರುತ್ತದೆ ಎಂದು ರಾಜಧಾನಿಯ ಶ್ರೀ ಪರಕಾಲ ಮಠದ ಶ್ರೀ ಕಾರ್ಯಕರ್ತರು ತಿಳಿಸಿರುವರು

ಮೈಸೂರಿಗೆ ಸಾದಿ ಅರೇಬಿಯಾ ದೊರೆಯ ಭೇಟಿ

ಸಾದಿ ಅರೇಬಿಯದ ದೊರೆ ... ಬರುವ ತಿಂಗಳು ೬ನೇ ತಾರೀಕು ಮೈಸೂರಿಗೆ ಆಗಮಿಸುವರು. ಅವರ ಗೌರವಾರ್ಥವಾಗಿ ಶ್ರೀ ಮನ್ಮಹಾರಾಜರು ಲಲಿತಮಹಲಿನಲ್ಲಿ ಭೋಜನ ಕೂಟವನ್ನು ಏರ್ಪಡಿಸುವರು. ಇಲ್ಲಿ ಹಲವು ಪ್ರೇಕ್ಷಣೀಯ ಸ್ಥಳಗಳಿಗೂ ದೊರೆಯು ಭೇಟಿಯೀಯುವರು

ಶಾಸನ ಸಭೆಯಲ್ಲಿ ಕರ್ನಾಟಕ ಪ್ರಾಂತ ರಚನೆಯ ಪರಿಶೀಲನೆ

ಉತ್ತರ ಕರ್ನಾಟಕವು ಮೈಸೂರಿನೊಡನೆ ಸೇರದಿರಲು ವೀರಣ್ಣಗೌಡರ ಮನವಿ

ಸ್ವಂ ಕು ತಂತಿ] ಬೆಂಗಳೂರು ೨೮

ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿ ಮೇಲೆ ಕಿರಿಯ ಶಾಸನ ಸಭೆಯಲ್ಲಿ ಚರ್ಚೆಯು ಇಂದು ಮುಂದುವರಿಯಿತು. ಮೈಸೂರಿಗೆ ಬೇಡದಿರುವಾಗ, ಉತ್ತರ ಕರ್ನಾಟಕವು ಅದರೊಡನೆ ಸೇರಬಾರದೆಂಬ ಮನವಿಯನ್ನು ಶ್ರೀ ವೀರಣ್ಣಗೌಡರು ಮಾಡಿದರು. ಹಿಂದಿನ ಕಾಲದಲ್ಲೂ ಸಹ ಕರ್ನಾಟಕವು ಒಂದೇ ರಾಜ್ಯವಾಗಿರಲಿಲ್ಲವೆಂದು ಅವರು ಸವಾಲ್ ಹಾಕಿದರು

ಹಿರಿಯ ಶಾಸನ ಸಭೆಯಲ್ಲಿ ದಿವಂಗತ ಶಂಕರರಾಯರ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು

ಲಾಲ್‌ಬಾಗಿನ ಪ್ರಕರಣದ ಬಗ್ಗೆ ಶ್ರೀ ಎಂ ಪಿ ಎಲ್. ಶಾಸ್ತ್ರಿಯವರು ತಂದ ನಿಲುವಳಿ ನಿರ್ಣಯವನ್ನು ತಳ್ಳಿಹಾಕಲಾಯಿತು.

ಗೋವಾ ಪರಕೀಯರ ಕೈಯಲ್ಲಿರುವುದು ನಾಚಿಕೆಗೇಡು

ಮದ್ರಾಸಿನಲ್ಲಿ ರಷ್ಯದ ಪ್ರಧಾನಿ ಬುಲ್ಗಾನಿನ್ನರ ಹೇಳಿಕೆ

ರಷ್ಯದ ಪ್ರಧಾನಿ ಬುಲ್ಗಾನಿನ್ನರು ಮದ್ರಾಸಿನಲ್ಲಿ ನೆನ್ನೆ ಸ್ವಾಗತ ಸಭೆಯಲ್ಲಿ ಭಾಷಣ ಮಾಡಿ, ಭಾರತದ ಒಂದು ಭಾಗವು ಪೋರ್ಚುಗೀಸ್ ವಸಾಹತಾಗಿ ಮುಂದುವರಿಯುತ್ತಿರುವುದು ಅಕ್ರಮವೆಂದೂ ಅದು ಇಡೀ ನಾಗರಿಕ ಪ್ರಪಂಚಕ್ಕೇ ನಾಚಿಕೆಗೇಡೆಂದೂ ತಿಳಿಸಿದರು. ಗೋವಾ ಪ್ರಜೆಗಳು ವಸಾಹತುಶಾಹಿ ವಿರುದ್ಧವಾಗಿ ನಡೆಸುವ ಹೋರಾಟಕ್ಕೆ ರಷ್ಯವು ಬೆಂಬಲ ನೀಡುವುದೆಂದು ಅವರು ಹೇಳಿದರು. ವಸಾಹತುಶಾಹಿಯ ಪ್ರಭಾವವನ್ನು ವಿಶ್ವದ ರಾಷ್ಟ್ರಗಳು ಕಿತ್ತೊಗೆದು ಸ್ವತಂತ್ರ ಆಡಳಿತವನ್ನು ನಡೆಸುತ್ತಿವೆ. ವಸಾಹತುಶಾಹಿಯ ಕಾಲವು ಮುಗಿದುಹೋಯಿತು. ಮುಂದೆಂದೂ ಅದು ತಲೆಯೆತ್ತುವಂತಿಲ್ಲ, ಅದು ಎಲ್ಲೆಲ್ಲೂ ಕುಸಿದು ಬೀಳುತ್ತಿದೆ. ಪ್ರಸ್ತುತ ಸಾಮ್ರಾಜ್ಯಶಾಹಿ ಪದ್ಧತಿಗೆ ಹಿಂದಿರುಗಲು ಸಾಧ್ಯವಿಲ್ಲವೆಂಬುದನ್ನು ವಿದೇಶ್ಯ ರಾಷ್ಟ್ರಗಳು ಅರಿಯದಿರುವುದು ವಿಷಾದಕರ. ಅನ್ನೇಯ ಏಷ್ಯಾ ಮತ್ತು ಮಧ್ಯ ಪ್ರಾಚ್ಯದಲ್ಲಿ ಹಲವು ಪಾಶ್ಚಾತ್ಯ ರಾಷ್ಟ್ರಗಳು ಮಾಡಿಕೊಂಡಿರುವ ಮಿಲಿಟರಿ ಒಪ್ಪಂದಗಳಿಂದ ಪ್ರಗತಿ ಸಾಧನೆಗಿಂತಲೂ ಯುದ್ಧ ಪ್ರಚೋದನೆಗೆ ಹೆಚ್ಚು ಅವಕಾಶವಾಗುತ್ತದೆ ಎಂಬುದಾಗಿಯೂ ಅವರು ನುಡಿದರು

ಮಧ್ಯ ಪ್ರದೇಶದ ಮಂತ್ರಿಯ ಚುನಾವಣೆ ರದ್ದು

ಮಧ್ಯ ಪ್ರದೇಶದ ಹಣಕಾಸಿನ ಮಂತ್ರಿ ಬ್ರಿಜಲಾಲ್ ಬಿಯಾನಿಯವರು ಅಲ್ಲಿನ ಶಾಸನ ಸಭೆಗೆ ಚುನಾವಣೆ ಹೊಂದಿರುವುದನ್ನು ಚುನಾವಣಾ ನ್ಯಾಯ ಮಂಡಲಿಯವರು ರದ್ದುಗೊಳಿಸಿರುತ್ತಾರೆ. ಇಬ್ಬರು ಮತದಾರರು ತಕರಾರು ಅರ್ಜಿ ಸಲ್ಲಿಸಿ, ಚುನಾವಣೆಯಲ್ಲಿ ಲಂಚ ಮುಂತಾದ್ದು ಮತ್ತು ಪ್ರಭಾವವನ್ನು ಬೀರಲಾಗಿತ್ತೆಂದು ತಿಳಿಸಿದರು. ಸರ್ಕಾರದೊಡನೆ ಹಣಕಾಸಿನ ವ್ಯವಹಾರವಿಟ್ಟುಕೊಂಡಿರುವ ಸಂಸ್ಥೆಗೆ ಮಂತ್ರಿಗಳು ವ್ಯವಸ್ಥಾಪಕರಾಗಿ ಇದ್ದುದರಿಂದ ಅವರು ಸದಸ್ಯರಾಗಲು ಅರ್ಹರಲ್ಲವೆಂದೂ ಅರ್ಜಿದಾರರು ಸೂಚಿಸಿದ್ದರು.

ಲಾಲ್‌ಬಾಗಿನಲ್ಲಿ ಮಹಿಳೆಯರ ಬಗ್ಗೆ ಅಸಭ್ಯ ವರ್ತನೆ

ಬೆಂಗಳೂರಿಗೆ ರಷ್ಯದ ನಾಯಕರ ಭೇಟಿ ಸಂಬಂಧವಾಗಿ ಲಾಲ್‌ಬಾಗಿನಲ್ಲಿ ಮಾಡಿರುವ ದೀಪಾಲಂಕಾರವನ್ನು ನೋಡಲು ಮೊನ್ನೆ ಹೋದವರಲ್ಲಿ ಎಲ್ಲೆಯ ಪೋಷಾಕಿನ ಅನೇಕ ಯುವಕರು ಮಹಿಳೆಯರ ಮೇಲೆ ಬೀಳುವುದೇ ಮುಂತಾದ ಅಸಭ್ಯ ನಡವಳಿಕೆಗಳನ್ನು ನಡೆಸಿರುತ್ತಾರೆ. ಇಬ್ಬರು ಮಹಿಳೆಯರನ್ನು ಒಂದು ಕಡೆ ಅಪಮಾನಪಡಿಸಲಾಯಿತು. ಸಿಂಧಿ ಹೆಂಗಸೊಬ್ಬಳು ನೆಂಟನೊಡನೆ ಹೋಗುತ್ತಿದ್ದಾಗ ಆಕೆಯನ್ನು ಹಲವರು ಎಳೆದುಕೊಂಡು ದೂರ ಹೋಗಿ ಹಾಗೂ ಹೀಗೂ ಮಾಡಿದರೆಂದೂ, ಆಕೆಗೆ ಪ್ರಜ್ಞೆಯು ತಪ್ಪಿತೆಂದೂ ಗೊತ್ತಾಗಿದೆ. ಪೊಲೀಸರು ಇಬ್ಬರ ಮೇಲೆ ಮೊಕದ್ದಮೆಯನ್ನು ಹಾಕಲು ಏರ್ಪಡಿಸಿಕೊಂಡಿರುತ್ತಾರೆ.

ಗ್ರಹಣ ಸ್ನಾನಕ್ಕಾಗಿ ಶ್ರೀರಂಗಪಟ್ಟಣಕ್ಕೆ ವಿಶೇಷ ರೈಲು

ಈ ದಿನ ರಾತ್ರಿ ಸಂಭವಿಸುವ ಚಂದ್ರ ಗ್ರಹಣದ ಪ್ರಯುಕ್ತ ಸಾರ್ವಜನಿಕರಿಗೆ ಕಾವೇರಿ ಸ್ನಾನಕ್ಕಾಗಿ ಶ್ರೀರಂಗಪಟ್ಟಣಕ್ಕೆ ಹೋಗಿಬರಲು [illegible] ರೈಲೊಂದನ್ನು ಬಿಡಲಾಗುವುದು [illegible] ಶ್ರೀರಂಗಪಟ್ಟಣಕ್ಕೆ ಹೊರಡುವುದು [illegible] ಘಂಟೆಗೆ ಅಲ್ಲಿಂದ [illegible] ಬರುವುದು [illegible] ಪ್ಲಾಟ್‌ಫಾರಂ ಸಹಾ ರೈಲು ನಿಲ್ಲುತ್ತದೆ

ಹಿಂದೀ ಆವೇದನ ಪತ್ರಗಳು

ಮೈಸೂರು ಹಿಂದೀ ಪ್ರಚಾರ ಸಭೆಯಲ್ಲಿ [illegible] ಫೆಬ್ರವರಿ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದಿ ಪ್ರವೀಣ್, ವಿಶಾರದ್ ಮತ್ತು ಪ್ರವೇಶಿಕಾ, ಪರೀಕ್ಷೆಗಳಿಗೆ [illegible] [illegible] ಪತ್ರಗಳನ್ನು ಸ್ವೀಕರಿಸಲಾಗುವುದು [illegible]

ಹಿಂದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು

[illegible] ಹಿಂದಿ ಪ್ರಬಂಧ ಸ್ಪರ್ಧೆಯಲ್ಲಿ [illegible] ಬಹುಮಾನವಾಗಿ ದೊರಕಿತು

ಪೌರಸಭಾ ರೆವಿನ್ಯೂ ಅಧಿಕಾರಿಗಳ ವರ್ಗ

ನಗರದ ಪೌರಸಭೆಯ ರೆವಿನ್ಯೂ ಅಧಿಕಾರಿ ಯಾದ ಶ್ರೀ ಬಿ ತಿಮ್ಮಯ್ಯನವರನ್ನು ಭದ್ರಾವತಿ ಪೌರಸಭೆಯ ಮುಖ್ಯಾಧಿಕಾರಿಗಳಾಗಿ ವರ್ಗ ಮಾಡಲಾಗಿದೆಯೆಂದು ಗೊತ್ತಾಗಿದೆ

UNIVERSITY OF MYSORE

Office of the University of Mysore
MYSORE
Dated the 22nd November 1955

NOTIFICATION

Under Statute 79 in page 32 of Calendar Volume I (for 1955-56) extracted below, Registered Graduates (those who have been enrolled as Registered Graduates) of this University are requested to send their applications for revision or correction in the following form ‡ so as to reach this office **on or before the 15th December, 1955**

"Statute 79 The register of Graduates shall be revised and corrected on the first day of January each year Application for revision or correction shall reach the Registrar not later than the 15th day of December preceding"

‡ 1 **Name with Degree or Degrees**
2 **Enrolment Number**
3 **Address**

By Order
F J NORONHA,
Registrar.

ನೈತಿಕ ಬೆಳವಣಿಗೆಯಿಂದ ಮಾನವನ ಶ್ರೇಯಸ್ಸು

ಫಿಲೋಮಿನಾ ಕಾಲೇಜು ಪೋಷಕರ ದಿನಾಚರಣೆಯಲ್ಲಿ ಮಹಾರಾಜರ ಭಾಷಣ

ಮೈಸೂರು [illegible]

ಸಂಟ್ ಫಿಲೋಮಿನಾ ಕಾಲೇಜಿನ ಪೋಷಕರ ದಿನಾಚರಣೆಯಲ್ಲಿ ಶ್ರೀ ಮೈಸೂರು ರಾಜಪ್ರಮುಖರು ಅಧ್ಯಕ್ಷ ಭಾಷಣ ಮಾಡಿ, ವಿದ್ಯಾರ್ಥಿಗಳು ಸಮಾಜಸೇವೆಯಲ್ಲಿ ತರಪೇತು ಹೊಂದಲು ಒದಗಿಸಿರುವ ಅವಕಾಶಕ್ಕಾಗಿ ಕಾಲೇಜು ಅಧಿಕಾರಿಗಳನ್ನು ಪ್ರಶಂಸಿಸಿ, ಇಂತಹ [illegible] ಈಗಿನ ಪ್ರಜಾ ಸತ್ತಾತ್ಮಕ ವ್ಯವಸ್ಥೆಯಲ್ಲಿರುವುದೆಂದು ಸೂಚಿಸಿದರು ಜನ ಸಾಮಾನ್ಯರಲ್ಲಿ ಪರಸ್ಪರ ಪ್ರೇಮ ಮತ್ತು ಉದಾರ ಮನೋಭಾವವು ಬೆಳೆಯಬೇಕೆಂದು ಅವರು ಹೇಳಿ ಜಗತ್ತಿಗೆ ಈಗ ನೈತಿಕ ಏಕ್ಯಟ್ಟು [illegible] ಮನುಷ್ಯನ ಬುದ್ಧಿಶಕ್ತಿಯ ಮತ್ತು ನೈತಿಕ ಮನೋಭಾವನೆಯ ಸಮತೋಲನವಿಲ್ಲದೆ ಇರುವುದೇ [illegible] ಕಾರಣವೆಂದು ಹೇಳಿದರು

ಕಾಲೇಜಿನವರು ನೈತಿಕ ವಿಷಯಗಳಿಗೆ ಪ್ರಾಮುಖ್ಯತೆ ಇತ್ತಿರುವುದಕ್ಕಾಗಿ ಪ್ರಶಂಸಿಸಿ, [illegible]

ನೆರೆದ ಮೈಸೂರಿನ [illegible] ರಾಜಪ್ರಮುಖರನ್ನು [illegible] ಸ್ವಾಗತಿಸಿದರು

[illegible] ನಾಟಕ [illegible] ಕನ್ನಡದ ಹಾಸ್ಯ ನಾಟಕಗಳು ಆದುವು

ಮದ್ರಾಸಿಗೆ ರಾಜಪ್ರಮುಖರ ಭೇಟಿ

ಮೈಸೂರಿನ ರಾಜಪ್ರಮುಖರು ನಾಳೆ ಮದ್ರಾಸಿಗೆ ಭೇಟಿ ಕೊಟ್ಟು ಅಲ್ಲಿ [illegible] ಭೋಜನ ಕೂಟದ ಅಧ್ಯಕ್ಷತೆ ವಹಿಸುವರು

ರಸ್ತೆಯಲ್ಲಿ ಸಿಡಿಸಿದ ಜಲಜನಕ ಬಾಂಬು ಕಣ ಜರ್ಮನಿಯಲ್ಲಿ ಬಿತ್ತು

ರಷ್ಯದಲ್ಲಿ ಇತ್ತೀಚೆಗೆ ಸಿಡಿಸಲಾದ ಜಲಜನಕ ಬಾಂಬಿನ ಅಣು ಚೂರುಗಳು ಪಶ್ಚಿಮ ಜರ್ಮನಿಯಲ್ಲಿ ಬಿದ್ದುದು ಗೊತ್ತಾಗಿದೆ ಪಶ್ಚಿಮ ಜರ್ಮನಿಯ [illegible] ಪತ್ತೆ ಮಾಡಲಾಯಿತೆಂದು ಹೇಳಲಾಗಿದೆ

FOR SALE

Cycles in good condition (both ladies & gents) for sale at reasonable rates and Shop to let Enquire

L N CYCLE MART,
K M Puram, Mysore

SREE GANESH
TALKIES
To-day and To-morrow Only
DOCTOR IN THE HOUSE
From 1-12-55 For 2 Days
THE KIDNAPPERS
(A unique experience that radiates warmth and humanity in a manner that will captivate and conquer all who see)
Starring Jon Whitley and Vincent Winter

Edited, Printed and Published by A K Nagarajan at Sadhvi Press, D Subbiah Road Mysore

ಫುಟ್‌ಬಾಲ್ ಪಂದ್ಯದ ಗೊಂದಲ ಬದಲ್ಲಿ ಪೊಲೀಸರ ಬಂಧನ

ರಂಗೂನಿನಲ್ಲಿ ಮೊನ್ನೆ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ೫೦,೦೦೦ ಗಲಭೆಕಾರರು ೧೫೦ ಮಂದಿ ಪೊಲೀಸರನ್ನು ಬಂಧಿಸಿದ ವಿಷಯವು ವರದಿಯಾಗಿದೆ [illegible] ಸಾವಿರ ಜನ ಪ್ರೇಕ್ಷಕರು ಬರ್ಮಾ ಅಧ್ಯಕ್ಷರಿಂದ ಬಹುಮಾನ ವಿತರಣೆಯಾಗುವ ಸಮಾರಂಭದಲ್ಲಿ ಭಾಗವಹಿಸಿದ್ದಾಗ ಜನ ಸಂದಣಿಯನ್ನು ಅತ್ಯಾಕ್ರೋಶ ಪೊಲೀಸರು ಹಿಂದಕ್ಕೆ ತಳ್ಳಿದುದೇ ಗೊಂದಲಕ್ಕೆ ಕಾರಣವಾಗಿ ಈ ಸಂಬಂಧದಲ್ಲಿ ಹಲವರನ್ನು ವಶಗಿರಿ ಮಾಡಲಾಯಿತು ಜನರು ಬಂಧಿತರ ಬಿಡುಗಡೆಯಾಗಬೇಕೆಂದು ಕೇಳುತ್ತಾ ನುಗ್ಗಿದರು ಬರ್ಮಾ ಅಧ್ಯಕ್ಷರು ಅಲ್ಲಿಂದ ಎದ್ದು ಹೋದಮೇಲೆ ಜನರು ಸ್ಟೇಡಿಯಮ್ಮಿನ ಬಾಗಿಲಿಗೆ ಬೆಂಕಿ ಹತ್ತಿಸಿ, ಎಲ್ಲಾ ರಸ್ತೆಗಳನ್ನೂ ಅಡ್ಡಗಟ್ಟಿದರು ಒಂದು ಮೋಟಾರು ಸೈಕಲ್ಲನ್ನು ಸುಡಲಾಯಿತು. ದಸ್ತಗಿರಿಯಾದವರೆಲ್ಲರನ್ನೂ ಬಿಡಲಾಗಿರುವುದೆಂದು ಬರ್ಮದ ಸುಪ್ರೀಂ ಮಿಲಿಟರಿ ಕಮ್ಯಾಂಡರು ಒಂದು ಆಶ್ವಾಸನೆಯಿತ್ತ ನಂತರ ಜನರು ಚದುರಿದರು

ತಿಪ್ಪನಕೆರೆಯಲ್ಲಿ ಉಪನ್ಯಾಸ

ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲಾ ಉಪಾಧ್ಯಾಯರಾದ ಶ್ರೀ ವಿ ಎಸ್ ವೆಂಕಟರಾಮಯ್ಯನವರು [illegible] [illegible] ಉಪನ್ಯಾಸ ಮಾಡುವರು [illegible] ಮುಂದಿ [illegible] ಉಪನ್ಯಾಸವನ್ನು [illegible]

ಮೈಸೂರು ಪೇಟೆ ಧಾರಣೆ

	ಮಹಾ ಇಂದ			ಮಹಾ ವರೆಗೆ		
ಕಡಲೇಕಾಯಿ	೧೨	೭೨	೦	[illegible]	[illegible]	[illegible]
ಎಳ್ಳು	[illegible]	೨	೦	[illegible]	೦	೦
ಹರಳುಬೀಜ	[illegible]	೦	೦	[illegible]	೦	೦
ಹುರುಳಿ	[illegible]	೦	೦	[illegible]	೦	೦
ಹೆಸರು	[illegible]	೬	೦	[illegible]	೧೨	೦
ಉಪ್ಪು	[illegible]	[illegible]	೦			
ಹಲಸಂದೆ	[illegible]	೦	೦	[illegible]	೭೦	೦
ಜೋಳ	[illegible]	೬	೦	[illegible]	೦	೦
ನೆಲದವರೆ	೨೦	೨	೦	[illegible]	೨	೦
ಹುಣಸೆಹಣ್ಣು	[illegible]	೭	೦	[illegible]	೦	[illegible]
ಸೀಗೆಕಾಯಿ	[illegible]	[illegible]	೦	[illegible]	[illegible]	೦
ಮೆಣಸಿನಕಾಯಿ	[illegible]	[illegible]	೦	೧೬	೧೨	೦
ಬೆಲ್ಲ	[illegible]	[illegible]	೦	[illegible]	೧೨	೦
ಹತ್ತಿ (೨೬ ಪೌಂಡು)	[illegible]	[illegible]	೦			
ತೆಂಗಿನಕಾಯಿ ೧,೦೦೦	೧೪೫	[illegible]	೦	[illegible]	೦	೦

ಕಳೆದು ಹೋಗಿದೆ

[illegible] ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನದ ಪಕ್ಕದಿಂದ [illegible] ಬರುವಾಗ [illegible] [illegible] ಒಪ್ಪಿಸಿದರೆ [illegible] ಕೊಡಲಾಗುವುದು

ಸಂಸ್ಥಾನ ಪುನರ್ವಿಂಗಡಣೆ [illegible] ಆಗದಿರಲೆಂದು ರಾಜಾಜಿ

ಸಂಸ್ಥಾನ ಪುನರ್ವಿಂಗಡಣೆ ಪ್ರಶ್ನೆಯು [illegible] ರಾಜಾಜಿಯವರು ತಮ್ಮ ಅಭಿಪ್ರಾಯ [illegible] ಸೂಚಿಸಿ, ಸಂಸ್ಥಾನಗಳ ಪುನರ್ವಿಂಗಡಣೆ [illegible] ಜನಗಳನ್ನು [illegible] ವರ್ಷಗಳವರೆಗಾದರೂ [illegible] ಭಾರತದಲ್ಲಿ ಕೇಂದ್ರ ಸರ್ಕಾರವೇ ನೇರವಾಗಿ ಆಡಳಿತ [illegible] ದೂ, [illegible] ಬಗ್ಗೆ ರಾಷ್ಟ್ರದ [illegible] ಯನ್ನು ಅವಸ್ಯಯ ಮಾಡಬಾರದೆಂದು [illegible] ರುತ್ತಾರೆ [illegible] ಮಾಡುತ್ತಿರುವ [illegible] ತಪ್ಪು ಮಾಡುತ್ತದೆಂದು [illegible] ಸಾಧ್ಯವಿಲ್ಲವೆಂದೂ, ಅವರ ಬದಲು [illegible] ಕ್ಷೇ ನಿಲ್ಲಿಸಬೇಕೆಂದೂ ರಾಜಾಜಿಯವರು [illegible] ರುತ್ತಾರೆ. ದಕ್ಷಿಣ ಸಂಸ್ಥಾನವೊಂದು [illegible] ದು ಅವರು ಪ್ರತಿಪಾದಿಸಿರುತ್ತಾರೆ. [illegible] ಮತ್ತು ಮದ್ರಾಸುಗಳು ಒಂದುಗೂಡಬೇಕು [illegible] ಕ್ರಮೇಣ ಕರ್ನಾಟಕ ಮತ್ತು ಆಂಧ್ರಗಳು [illegible] ಕ್ಕೆ ಸೇರುವ ಬಗ್ಗೆ ಪರ್ಯಾಲೋಚಿಸಬಹುದು [illegible] ಅವರು ತಿಳಿಸಿರುವರು

ಅಮೇರಿಕದಲ್ಲೂ ಜಲಜನಕ ಬಾಂಬಿನ ಪರೀಕ್ಷೆ

ಬರುವ ವರ್ಷ ಅಮೇರಿಕವೂ ಶಾಂತ [illegible] ದಲ್ಲಿ ಎರಡು ಅಗಾಧವಾದ ಜಲಜನಕ ಬಾಂಬು [illegible] ಗಳ ಪ್ರಯೋಗ ನಡೆಸಲಿದೆಯೆಂದು ಅಮೇರಿಕ [illegible] ಕಾಂಗ್ರೆಸ್ಸಿನ ಅಣು ಶಕ್ತಿ ಸಮಿತಿ ಅಧ್ಯಕ್ಷ [illegible] ರ್ ಕ್ಲಿಂಟನ್ ಅವರು ತಿಳಿಸಿರುತ್ತಾರೆ ರಷ್ಯ [illegible] ಯನ್ನು ಗಾಢವಾಗಿ ನಿಶಿತ ನಡೆಸಿದ [illegible] ಮೇರಿಕವೂ ಹಾಗೆ ಮಾಡಬೇಕೆಂದು ಅವರು [illegible] ಚಿಸಿರುವರು

ಪಾಕಿಸ್ತಾನ-ಅಫ್ಘಾನಿಸ್ತಾನಗಳ ದುಂಡುಮೇಜು ಪರಿಷತ್ತು

ಅಫ್ಘಾನಿಸ್ತಾನದ ಕೋಂದರಿಗಳನ್ನು [illegible] ಮಾಡುವ ಬಗ್ಗೆ ಪಾಕಿಸ್ತಾನ ಮತ್ತು ಅಫ್ಘಾನಿ ಸ್ತಾನಗಳ ನಡುವೆ ದುಂಡುಮೇಜಿನ ಪರಿಷತ್ತು ಆಗಬೇಕೆಂದು ಪಾಕಿಸ್ತಾನದ ಗೌರ್ನರ್ ಜನರಲ್ ಮೇಜರ್ ಜನರಲ್ ಇಸ್ಕಂದರ್ ಮಿರ್ಜಾ [illegible] ಸಲಹೆ ಮಾಡಿರುತ್ತಾರೆ ಪಾಕಿಸ್ತಾನವು [illegible] ಹಿಂದಿನ ಜಾಗವನ್ನು ಬಿಟ್ಟುಕೊಡುವುದಿಲ್ಲ [illegible] ಮು ಅವರು ಸ್ಪಷ್ಟಪಡಿಸಿರುತ್ತಾರೆ.

○ ವಿಶ್ವ ಸಂಸ್ಥೆಯ ಆರೋಗ್ಯ ಸಮಿತಿಯು [illegible] ಲಕ್ಷ ರೂಪಾಯಿ ಕೊಡಲಿರುವುದಾಗಿ [illegible] [illegible] ವೈದ್ಯ ಸಾಧನಗಳ ಸಹಾಯವನ್ನು [illegible] ಕವು ತೆಗೆದುಕೊಳ್ಳಲು ಒಪ್ಪಿರುತ್ತದೆ

ಚಾಮುಂಡೇಶ್ವರಿ
[illegible]
25 11 55 ರಿಂದ: [illegible]
ಪ್ರತಿದಿನ ಮೂರು ಪ್ರದರ್ಶನಗಳು
[illegible] ಫಿಲಂಸ್‌ರವರ ಸುಪ್ರಸಿದ್ಧ
ಕನ್ನಡ ಪೌರಾಣಿಕ ಚಿತ್ರ
ಭಕ್ತ ಮಲ್ಲಿಕಾರ್ಜುನ
ಪಾತ್ರ ಸಂಪತ್ತಿನಲ್ಲಿ: [illegible] ರಾಜಕುಮಾರ್, [illegible]

ಹಾಸನದ 43 ನೇ ದನಗಳ ಪ್ರದರ್ಶನ ಮತ್ತು 6 ನೇ ವಸ್ತು ಪ್ರದರ್ಶನ

ದನಗಳ ಪ್ರದರ್ಶನ ತಾ॥ 1-1-1956ರಿಂದ — 7-1-1956ರ ವರೆಗೆ
ವಸ್ತು ಪ್ರದರ್ಶನ ತಾ॥ 26-12-1955ರಿಂದ — 11-1-1956ರ ವರೆಗೆ

ಜಾತ್ರೆಯಲ್ಲಿ ದನಗಳ ಮೇಲೆ ಸುಂಕ ವಸೂಲ್ಮಾಡುವ ಹಕ್ಕಿನ ಹರಾಜು — ತಾ॥ 6-12-1955ನೇ ಮಂಗಳವಾರ ಮಧ್ಯಾಹ್ನ ಎರಡು ಘಂಟೆಗೆ

ಜಾತ್ರೆ ಮೈದಾನದಲ್ಲಿ ಬೀಡುವ ಗೊಬ್ಬರ ಸಾಗಿಸುವ ಹಕ್ಕಿನ ಹರಾಜು — ತಾ॥ 13-12-1955ನೇ ಮಂಗಳವಾರ ಮಧ್ಯಾಹ್ನ ಎರಡು ಘಂಟೆಗೆ

ಮೇಲ್ಕಂಡ ತಾಲೂಕುಗಳಲ್ಲಿ ಹರಾಜುಗಳನ್ನು ವ್ಯವಸಾಯ ಇಲಾಖೆಯ ಹತ್ತಿರ [illegible] ಆಕ್ಷ್ಯಾಯ ಕಟ್ಟೆ ಬಳಿ ಬಹಿರಂಗವಾಗಿ ನಡೆಸಲಾಗುತ್ತದೆ

ಜಾತ್ರೆ ಮೈದಾನದ ಸ್ಥಳಗಳಲ್ಲಿ ಹಂಗಾಮಿಯಾಗಿ ಅಂಗಡಿಯನ್ನು ಇಡುವ [illegible] ಹರಾಜು ತಾರೀಖು 18-12-1955ನೇ ಭಾನುವಾರ ಬೆಳಗ್ಗೆ 9 ಘಂಟೆಯಿಂದ [illegible]

ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿಗಳಿಂದ ತಿಳಿಯಬಹುದು—

ಹೆಚ್. ಎಂ. [illegible] ಕಾರ್ಯದರ್ಶಿಗಳು
ದನಗಳ ಪ್ರದರ್ಶನ ಸಮಿತಿ, ಹಾಸನ

ರಿಜಿಸ್ಟರ್ ನಂ 792

ಬೆಂಗಳೂರಿನ ಪತ್ರಿಕೆಗಳಲ್ಲಿ
ಪ್ರಕಾಶವಾಗುತ್ತಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೪] SADHVI : WEDNESDAY 30-11-1955 ಮೈಸೂರು ಬುಧವಾರ ೩೦-೧೧-೧೯೫೫ [ಸಂಚಿಕೆ : ೦೦೩

ಅಣು ಶಸ್ತ್ರಾಸ್ತ್ರ ಪರೀಕ್ಷೆ ನಿಲ್ಲಿಸಲು ಅಮೇರಿಕದ ಪರಿಶೀಲನೆ

ವಿಷಪ್ರಾಶನ ಮಾಡಿಸಿದುದಕ್ಕಾಗಿ ೬ ತಿಂಗಳ ಸಜಾ

ಮೈಸೂರು ೩೦

ಕೆಲವು ತಿಂಗಳ ಹಿಂದೆ ಮಂಡಿಮೊಹಲ್ಲಾ ಸಾತ ರೋಡಿನಲ್ಲಿ ರಾತ್ರಿ ಕಾಲದಲ್ಲಿ ಪುರಕಥಾ ಕಾಲಕ್ಷೇಪ ದೊಡ್ಡಮಂಚಯ್ಯ ಎಂಬಾತನಿಗೆ ದೇವರ ಪ್ರಸಾದವೆಂದು ಹೇಳಿ ದತ್ತೂರ ವಿಷ ಬೆರೆಸಿದ ಪಂಚಾಮೃತವನ್ನು ಕೊಟ್ಟು, ಆತನಿಗೆ ಜ್ಞಾನ ತಪ್ಪಿಸಿ ಅವನಿಂದ ಬಟ್ಟೆ, ದುಡ್ಡು ಮುಂತಾದುವುಗಳನ್ನು ಅಪಹರಿಸಿದನೆಂದು ಆಪಾದಿಸಿ ಮಂಡಿ ಪೋಲೀಸರು ಗುಂಡ್ಲುಪೇಟೆ ತಾಲ್ಲೂಕು ಹೊಸೂರು ಗ್ರಾಮದ ಬಸವ ಎಂಬಾತನ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ವಿ ಚನ್ನಯ್ಯನವರು ಇಂದು ತೀರ್ಪಿತ್ತು, ವಿಷ ಪ್ರಾಶನ ಮಾಡಿಸಿದುದಕ್ಕಾಗಿ ಆಪಾದಿತನಿಗೆ ೬ ತಿಂಗಳು ಸಜವನ್ನು ವಿಧಿಸಿದರು ಬಟ್ಟೆ ಬರೆಗಳ ಕಳುವಿಗೆ ಸಾಕಷ್ಟು ಆಧಾರವಿಲ್ಲವೆಂದು ಆ ಆಪಾದನೆಯನ್ನು ನಿರಾಕರಿಸಿದರು

ಸೀರೆ ಹತ್ತಿಕೊಂಡು ಮರಣ

ಅರಮನೆ ಎಂಟಿಟಿ ಭಕ್ಷಿ ಶ್ರೀ ಎಂ ಗೋಪಾಲಕೃಷ್ಣ ಅರಸ್‌ರವರ ತಾಯಿ ಶ್ರೀಮತಿ ಎಂ ಲಕ್ಷಮ್ಮಣ್ಣಿಯವರು ನೆನ್ನೆ ಬೆಳಿಗ್ಗೆ ದೇವರ ಪೂಜೆ ಮಾಡುತ್ತಿದ್ದಾಗ ಆಕಸ್ಮಾತ್ ಸೀರೆಗೆ ಬೆಂಕಿ ಹತ್ತಿಕೊಂಡು ಗಾಯವಾದ ಕಾರಣ ಆಸ್ಪತ್ರೆಗೆ ಸೇರಿಸಲ್ಪಟ್ಟು ರಾತ್ರಿ ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ.

ಅಣುಶಸ್ತ್ರ ಪರೀಕ್ಷೆ ನಿಲ್ಲಿಸುವ ವಿಷಯದ ಪರಿಶೀಲನೆ

ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್ ಹೇಳಿಕೆ

ಅಮೆರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲ್ಲೆಸ್ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ಅಣು ಶಸ್ತ್ರಾಸ್ತ್ರಗಳ ಪರೀಕ್ಷಾ ಪ್ರಯೋಗವನ್ನು ನಿಲ್ಲಿಸುವ ವಿಷಯವು ಹಲವಾರು ತಿಂಗಳಿಂದ ಪರಿಶೀಲನೆಯಲ್ಲಿರುವುದಾಗಿ ಹೇಳಿದ್ದಾರೆ ಅವರೇ ಹಾಗೆ ನಿಲ್ಲಿಸುವುದರಿಂದ ಅಮೆರಿಕದ ಹಿತಸಾಧನೆಯಾಗುವುದೇ ಮತ್ತು ಅದರ ಮೇಲೆ ಅಮೆರಿಕವು ಭರವಸೆ ಹೊಂದಬಹುದೇ ಎಂಬುವರ ಬಗ್ಗೆ ಸರಿಯಾದ ಸೂತ್ರವಾವುದೂ ದೊರೆತಿಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರೆ

ಇತರ ರಾಷ್ಟ್ರಗಳೂ ಸಮ್ಮತಿಸಿದರೆ ಅಣು ಶಸ್ತ್ರಾಸ್ತ್ರ ಪರೀಕ್ಷೆ ರದ್ದು

ಮಾಸ್ಕೊ ರೇಡಿಯೊ ಪ್ರಚಾರ

ಇತರ ರಾಷ್ಟ್ರಗಳೂ ಅಣು ಶಸ್ತ್ರಾಸ್ತ್ರಗಳ ಪ್ರಯೋಗ ಪರೀಕ್ಷೆಗಳನ್ನು ನಿಲ್ಲಿಸುವುದಾದರೆ ರಷ್ಯವೂ ಹಾಗೆ ಮಾಡಲು ಸಿದ್ಧವಾಗಿರುವುದೆಂದು ಮಾಸ್ಕೊ ರೇಡಿಯೊವು ಪ್ರಕಟಿಸಿರುತ್ತದೆ ಬ್ರಿಟನ್ ಮತ್ತು ಅಮೆರಿಕಗಳು ಅಣು ಶಸ್ತ್ರಾಸ್ತ್ರ ತಯಾರಿಕೆ ಮತ್ತು ಪರೀಕ್ಷೆಗಳನ್ನು ನಿಲ್ಲಿಸದೆ ಇರುವುದರಿಂದ ರಷ್ಯವೂ ನಿಲ್ಲಿಸಲು ಸಾಧ್ಯವಿಲ್ಲವೆಂದು ಅದು ಸೂಚಿಸಿದೆ

ಪಾದರಕ್ಷಾ ಪ್ರಯೋಗದ ಬೆದರಿಕೆಗಾಗಿ ಲೇವಾದೇವಿಗಾರನಿಗೆ ಸಜ

ಮೈಸೂರು ೩೦

ನಗರದ ಪೇಂಟೆ ನವಾಬರ ವೀಧಿಯ ನಿವಾಸಿ ಶೇಖ್ ಮಹಮದ್ ಅಲಿಯಾಸ್ ಲೇವಾದೇವಿಗಾರನು ಶಿಸ್ತಿನ ಪಾಲನಾಧಿಕಾರಿಯಾದ ಮೈಸೂರು ಸಬ್ ಕೋರ್ಟ್ ಟೈಪಿಸ್ಟ್ ಚೆನ್ನಸ್ವಾಮಯ್ಯ ಎಂಬುವರನ್ನು ಸಾಲದ ವಸೂಲಿ ಬಗ್ಗೆ ತಾ|| ೨೩-೪-೧೯೫೫ ರಂದು ಕೋರ್ಟಿನ ಆವರಣದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುವಾಗ ಪಾದರಕ್ಷೆಯಿಂದ ಹೊಡೆಯುತ್ತೇನೆಂದು ಹೇಳಿರುವನಲ್ಲದೆ, ಸರ್ಕಾರಿ ನೌಕರರನ್ನು ಅವಮಾನಪಡಿಸಿದ ಮತ್ತು ಸಾರ್ವಜನಿಕ ನೆಮ್ಮದಿಗೆ ಭಂಗ ತಂದ ಕಾರಣಗಳಿಗಾಗಿ ಈ ದಿನ ಪ್ರಥಮ ನ್ಯಾಯಾಧೀಶರು ಆತನಿಗೆ ೩ ಆಪಾದನೆಗಳಿಗೂ ತಲಾ ಒಂದೊಂದು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿ, ಎಲ್ಲವನ್ನೂ ಒಟ್ಟಿಗೆ ಅನುಭವಿಸುವಂತೆ ಆಜ್ಞೆ ಮಾಡಿದರು ಅಲ್ಲದೆ ಪ್ರತಿ ಅಪರಾಧಕ್ಕೂ ತಲಾ ೧೦೦ ರೂ ಜುಲ್ಮಾನೆಯನ್ನು ತಪ್ಪಿದರೆ, ಮತ್ತೊಂದು ತಿಂಗಳ ಸಜವನ್ನೂ ವಿಧಿಸಿದರು

ಪೋಲೀಸ್ ವ್ಯಾನಿನಲ್ಲಿ ರಷ್ಯದ ನಾಯಕರ ಪ್ರಯಾಣ

ಕಲ್ಕತ್ತೆಯಲ್ಲಿ ಅಗಾಧ ಜನಸಂದಣಿಯಿಂದ ಕಾರ್ಯಕ್ರಮಗಳ ರದ್ದು

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೇವರು ನೆನ್ನೆ ಮದ್ರಾಸಿನಿಂದ ಕಲ್ಕತ್ತೆಗೆ ಪ್ರಯಾಣ ಮಾಡಿದರು ಅಲ್ಲಿ ೩೦ ಲಕ್ಷ ಜನರು ಅವರಿಗೆ ಸ್ವಾಗತ ನೀಡಿದರು ಊರಲ್ಲೆಲ್ಲಾ ವಿಶೇಷ ಉತ್ಸಾಹವು ಕಾಣುತ್ತಿತ್ತು

ನಿರೀಕ್ಷೆಗೂ ಮೀರಿದ ಉತ್ಸಾಹದಿಂದ ಸ್ವಾಗತ ಸಮಾರಂಭದಲ್ಲಿ ಅವ್ಯವಸ್ಥೆಯುಂಟಾಯಿತು ವಿಮಾನ ನಿಲ್ದಾಣದಿಂದ ಗೌರ್ನರ್ ರ ರಾಜಭವನಕ್ಕೆ ಮೆರವಣಿಗೆಯಲ್ಲಿ ಹೋಗಬೇಕೆಂದಿದ್ದ ಕಾರ್ಯಕ್ರಮವನ್ನು ಅರ್ಧ ಮಾರ್ಗದಲ್ಲಿ ರದ್ದುಗೊಳಿಸಿ, ಬುಲ್ಗಾನಿನ್ ಮತ್ತು ಕ್ರುಶ್ಚೇವರನ್ನು ಪೋಲೀಸ್ ವೈರ್‌ಲೆಸ್ ವ್ಯಾನಿನಲ್ಲಿ ಕರೆದೊಯ್ಯಬೇಕಾಯಿತು ೫ ಸಾವಿರ ಪೋಲೀಸರು ಇದ್ದರೂ, ಹಲವು ಜನರು ಅವರ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ಅತಿಥಿಗಳ ಮೋಟಾರಿನ ಫುಟ್‌ಬೋರ್ಡನ್ನು ಹತ್ತಿದರು. ಒಂದೊಂದು ಅಂಗುಲವನ್ನು ಮುಂದೆ ಸರಿಯುವುದೂ ಕಾರಿಗೆ ದುಸ್ತರವಾಯಿತು ಮೆರವಣಿಗೆಯಿಂದ ತುಂಬಾ ಆಯಾಸಪಟ್ಟ ಅತಿಥಿಗಳ ಕಾರ್ಯಕ್ರಮಗಳೆಲ್ಲವನ್ನೂ ಬಂಗಾಳಾ ಮುಖ್ಯಮಂತ್ರಿ ಬಿ ಸಿ ರಾಯರು ರದ್ದುಗೊಳಿಸಿದರು ನೃತ್ಯ ಮತ್ತು ಸಂಗೀತದ ಕಾರ್ಯಕ್ರಮವೂ ರದ್ದಾಯಿತು. ಮೆರವಣಿಗೆಯಲ್ಲಿ ಒಂದು ಕಡೆ ಕಾರನ್ನು ಏಳೆಂಟು ಜನರು ಮುಂದೆ ತಳ್ಳಿದರೆ ಇನ್ನೂ ಅವರ ಕೈ ಕುಲುಕಲು ಮುತ್ತಿದರು

ರಷ್ಯದ ಉಪ ವಿದೇಶಾಂಗ ಮುಖ್ಯ ಮಂತ್ರಿ ರಷೀದಾವ್ ಮತ್ತು ವ್ಯವಸಾಯ ಉಪ ಮಂತ್ರಿ ರಷೂಲಾನ್‌ರವರ ಮುಖದಲ್ಲಾ ಬೆವರು ಸೇರು ಹರಿಯಿತು ಈ ಸ್ವಾಗತವು ಮರೆಯಲಾಗದಂತಹುದೆಂದು ಅವರು ಹೇಳಿದರು

ಫ್ರಾನ್ಸ್ ಸರ್ಕಾರದ ಪತನ

ಫ್ರಾನ್ಸಿನ ರಾಷ್ಟ್ರೀಯ ಸಭೆಯಲ್ಲಿ ನೆನ್ನೆ ಪ್ರಧಾನಿ ಎಡ್ಗಾರ್ ಫೌರ್‌ರವರು ಕೇಳಿದ ವಿಶ್ವಾಸ ಮತಕ್ಕೆ ಮೊದಲನೇ ಅವರಿಯ ಮತದಾನದಲ್ಲಿ ಬೆಂಬಲ ಸಿಗದೆ ಮಂತ್ರಿಮಂಡಲವು ಉರುಳಿತೆಂದು ವರದಿಯಾಗಿದೆ ಶೀಘ್ರದಲ್ಲೇ ಚುನಾವಣೆಗಳನ್ನು ನಡೆಸುವ ಸಂಬಂಧವಾಗಿ ಸರ್ಕಾರದವರು ವಿಶ್ವಾಸ ಮತವನ್ನು ಕೇಳಿದ್ದರು. ೯ ತಿಂಗಳಿಂದಲೂ ಫೌರ್‌ರವರ ಮಂತ್ರಿಮಂಡಲವು ಅಧಿಕಾರದಲ್ಲಿತ್ತು ಅವರ ಸರ್ಕಾರಕ್ಕೆ ಬೆಂಬಲ ನೀಡುತ್ತಿದ್ದ ಕಮ್ಯೂನಿಸ್ಟರು ಈ ಸಾರಿ ಬೆಂಬಲ ಕೊಡಲಿಲ್ಲ

ಉಕ್ಕಿನ ಮಿತ ಉಪಯೋಗಕ್ಕೆ ಕ್ರುಶ್ಚೇವರ ಸಲಹೆ

ಭಾರತದಲ್ಲಿ ಉಕ್ಕಿಗೆ ಕೊರತೆಯಾಗಿರುವುದರಿಂದ ಅದನ್ನು ಮಿತವಾಗಿ ಉಪಯೋಗಿಸಬೇಕೆಂದು ಮದ್ರಾಸಿನಲ್ಲಿ ರಷ್ಯದ ನಾಯಕ ಕ್ರುಶ್ಚೇವರು ತಿಳಿಸಿರುತ್ತಾರೆ ಅವರು ಅಲ್ಲಿನ ರೈಲುಗಾಡಿ ಕಾರ್ಖಾನೆಗೆ ಭೇಟಿಯಿತ್ತಾಗ ಮೇಲ್ಕಂಡಂತೆ ಹೇಳಿದರು

ರೈಲು ಅಪಘಾತ ತಪ್ಪಿಸಲು ನೌಕರನ ಪ್ರಾಣಾರ್ಪಣೆ

ರತ್ಲಾಂ ಬಳಿ ಸ್ಥಿರವಾಗದ ನಿಲ್ದಾಣದಲ್ಲಿ ಭಾರಿ ರೈಲು ಅಪಘಾತವನ್ನು ತಪ್ಪಿಸಲು ಪ್ರಯತ್ನಿಸಿದ ಇನ್ಸ್‌ಪೆಕ್ಟರ್ ಕಂಬಾಲಾಲ್ ಎಂಬಾತನು ತನ್ನ ಪ್ರಾಣವನ್ನು ತೆರಬೇಕಾಯಿತೆಂದು ವರದಿಯಾಗಿದೆ ಕಳೆದ ೨೨ನೇ ತಾರೀಕು ರೈಲು ಮಾರ್ಗದಲ್ಲಿ ಜಖಂ ಆದ ಪ್ಲೇಟುಗಳನ್ನು ಕ್ರೇನು ಗಳ ಸಹಾಯದಿಂದ ಎತ್ತಿ ತೆಗೆಯುವ ಕೆಲಸ ನಡೆಯುತ್ತಿದ್ದಾಗ, ಬೊಂಬಾಯಿ ಕಡೆ ಹೋಗುವ ಎಕ್ಸ್‌ಪ್ರೆಸ್ ರೈಲು ಬಂದಿತೆಂದೂ, ಕಂಬಾಲಾಲನು ಕಂಬಿಗಳ ನಡುವೆ ನಿಂತು ಕೈ ಸನ್ನೆ ಮಾಡಿ, ರೈಲನ್ನು ನಿಲ್ಲಿಸಲು ಗಟ್ಟಿಯಾಗಿ ಕೂಗಿಕೊಂಡರೂ ಪ್ರಯೋಜನವಾಗದೆ ಕಡೆಗೆ ರೈಲು ಅವನ ಮೇಲೆ ಹರಿದು, ಅವನು ಮೃತನಾದನೆಂದೂ ವರದಿಯಾಗಿದೆ ಅವನ ಧೈರ್ಯ ಸ್ಥೈರ್ಯಗಳನ್ನು ಪ್ರಶಂಸಿಸಿ, ಪಶ್ಚಿಮ ರೈಲ್ವೆ ನೌಕರರ ಸಂಘದವರು ಅವನ ಮರಣಕ್ಕಾಗಿ ಶ್ರದ್ಧಾಂಜಲಿಯನ್ನರ್ಪಿಸಿದರು

ಜಿಲ್ಲಾ ಮ್ಯಾಜಿಸ್ಟ್ರೇಟರ ಅಧಿಕಾರ ವರ್ಗಾವಣೆ ಮಾತ್ರ ಉಳಿದಿದೆ

ವಿಧಾನ ಸಭೆಯಲ್ಲಿ ನ್ಯಾಯಾಂಗ ಮಂತ್ರಿಗಳ ಹೇಳಿಕೆ

ಸ್ವಂ ಸು ಪೋ] ಬೆಂಗಳೂರು ೩೦

ಈ ದಿನ ವಿಧಾನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ನ್ಯಾಯಾಂಗ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಮಾತನಾಡಿ, ಕಾರ್ಯಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸಲು ಎಲ್ಲಾ ಕ್ರಮಗಳನ್ನೂ ಕೈಗೊಂಡಿರುವುದಾಗಿಯೂ, ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಂದ ಜುಡಿಷಲ್ ಅಧಿಕಾರಿಗಳಿಗೆ ವಹಿಸುವುದು ಮಾತ್ರ ಉಳಿದಿರುವುದೆಂದೂ, ಈ ವಿಷಯವನ್ನೂ ಈಗ ಪರ್ಯಾಲೋಚಿಸುತ್ತಿರುವುದಾಗಿಯೂ ಹೇಳಿದರು

ನೂತನ ಕನ್ನಡ ಪ್ರಾಂತಕ್ಕೆ ಮೈಸೂರೆಂದು ಹೆಸರಿಡಬೇಕು

ಶಾಸನ ಸಭೆಗಳಲ್ಲಿ ಹನುಮಂತಯ್ಯನವರ ತಿದ್ದುಪಡಿ

ಸ್ವಂ ಸು ಪೋ] ಬೆಂಗಳೂರು ೩೦

ಸಂಸ್ಥಾನ ಪುನರ್ವಿಂಗಡಣೆ ಸಮಿತಿ ವರದಿಯನ್ನು ಪರಿಶೀಲಿಸುವಂತೆ ವಿಧಾನ ಸಭೆ ಮತ್ತು ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಕಳೆದ ೧೬ನೇ ತಾರೀಕು ಸೂಚಿಸಿದ್ದ ನಿರ್ಣಯಕ್ಕೆ ತಿದ್ದುಪಡಿಯೊಂದನ್ನು ಈ ದಿನ ತಂದು ಕನ್ನಡ ಮಾತನಾಡುವವರಿರುವ ಎಲ್ಲ ಪ್ರದೇಶವನ್ನೂ ಮೈಸೂರು ಸಂಸ್ಥಾನವೆಂದು ಕರೆಯಬೇಕೆಂದು ಸೂಚಿಸಿದರು

ಬಳ್ಳಾರಿ ಜಿಲ್ಲೆಯ ಯಾವ ಭಾಗವನ್ನೂ ಬಿಡದೆ ಈಗಿನ ಮೈಸೂರು ಸಂಸ್ಥಾನ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಮತ್ತು ಚಂದ್ರಗಡ ತಾಲ್ಲೂಕು ಬಿಟ್ಟು ಉಳಿದ ಬೆಳಗಾಂ ಜಿಲ್ಲೆ, ಹೈದರಾಬಾದು ಸಂಸ್ಥಾನದ ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳು ಮತ್ತು ಬೀದರ್ ಜಿಲ್ಲೆಯ ೪ ತಾಲ್ಲೂಕುಗಳು, ಚಂದ್ರಗಿರಿ ನದಿಯ ದಕ್ಷಿಣ ಭಾಗದಲ್ಲಿರುವ ಕಾಸರಗೋಡು ಪ್ರದೇಶ ವಿನಾ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಳ್ಳೇಗಾಲ ತಾಲ್ಲೂಕು ಮತ್ತು ಕೊಡಗು ಸಂಸ್ಥಾನ ಮತ್ತು ಇತರ ಅಕ್ಕಪಕ್ಕದ ಪ್ರದೇಶಗಳು-ಅಲ್ಲಿನ ಜನರು ಒಪ್ಪಿದಲ್ಲಿ-ಈ ಪ್ರದೇಶಗಳುಳ್ಳ ನೂತನ ಪ್ರಾಂತವನ್ನು, ಮಿಶ್ರ ಭಾಷೆಗಳನ್ನಾಡುವ ಜನರಿರುವುದರಿಂದ, ಮೈಸೂರು ಸಂಸ್ಥಾನವೆಂದು ಕರೆಯಬೇಕೆಂಬುದಾಗಿ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ

ಅವರು ಭಾಷಣ ಮಾಡಿ, ಸರ್ವರೂ ಅದನ್ನು ಒಪ್ಪಬೇಕೆಂದೂ, ಸಭೆಯಲ್ಲಿರುವ ಭಿನ್ನಾಭಿಪ್ರಾಯಗಳನ್ನು ಅಂತು ಎಲ್ಲ ಭಾವನೆಗಳನ್ನೂ ಸಮನ್ವಯ ಮಾಡಿ ತಿದ್ದುಪಡಿಯನ್ನು ತರಲಾಗಿರುವುದೆಂದೂ ಹೇಳಿದರು ಸಭೆಯು ಅದನ್ನು ಅಂಗೀಕರಿಸಿದರೆ ಯಶಸ್ಸು ದೊರೆಯುವುದೆಂದೂ, ನಾಯಕರೂ ಮತ್ತು ಜನಸಾಮಾನ್ಯರೂ ಒಪ್ಪುವರೆಂದೂ ಶ್ರೀ ಹನುಮಂತಯ್ಯನವರು ತಿಳಿಸಿದರು

ಶ್ರೀ ಬಿ ವಿ ನಾರಾಯಣ ರೆಡ್ಡಿಯವರು ತಿದ್ದುಪಡಿ ತಂದು, ತೆಲುಗು ಭಾಷೆಯಾಡುವವರಿರುವ ಪ್ರದೇಶವನ್ನು ಆಂಧ್ರಕ್ಕೆ ಸೇರಿಸುವಂತೆ ಸೂಚಿಸಿದರು ಇತರ ಹಲವಾರು ತಿದ್ದುಪಡಿಗಳೂ ಬಂದಿವೆ

ಹಿರಿಯ ಶಾಸನ ಸಭೆಯಲ್ಲಿ ಪುನರ್ವಿಂಗಡಣಾ ಸಮಿತಿ ವರದಿ ಬಗ್ಗೆ ಚರ್ಚೆ ಮುಂದುವರಿಯುತ್ತಿದೆ

ರಷ್ಯಾ ಪ್ರಧಾನಿ ಬಗ್ಗೆ ಟೀಕೆಗೆ ಬ್ರಿಟಿಷ್ ನೌಕರನ ರಿವರ್ಟ್

ರಷ್ಯದ ಪ್ರಧಾನಿ ಬುಲ್ಗಾನಿನ್ನರು ಭಾರತದ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವನ್ನು ಬ್ರಿಟನ್ನಿನ ವಿದೇಶಾಂಗ ಇಲಾಖಾ ಅಧಿಕಾರಿಯೊಬ್ಬನು ಟೀಕಿಸಿ, ಭಾಷಣವು ಕಪಟವೆಂದು ತಿಳಿಸಿದುದಕ್ಕಾಗಿ ಅವನನ್ನು ಬ್ರಿಟಿಷ್ ಸರ್ಕಾರದವರು ರಿವರ್ಟ್ ಮಾಡಿರುತ್ತಾರೆ ಅವನಿಗೆ ೨೫ ವರ್ಷ ಸರ್ವಿಸ್ ಆಗಿತ್ತು

ವಿಧಾನ ಸೌಧದ ಕಟ್ಟಡಕ್ಕೆ ೧ ಕೋಟಿ ೩೦ ಲಕ್ಷ ರೂ. ವೆಚ್ಚ

ಹಿರಿಯ ಶಾಸನ ಸಭೆಯಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

ಬೆಂಗಳೂರು ೨೦

ನಿನ್ನೆ ಹಿರಿಯ ಶಾಸನ ಸಭೆಯಲ್ಲಿ ಶ್ರೀ ಟಿ ಎಸ್ ವಾಸುದೇವಾಚಾರ್ಯರವರ ಪ್ರಶ್ನೆಗೆ ಉತ್ತರವಾಗಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ವಿಧಾನ ಸೌಧದ ಕಟ್ಟಡ ನಿರ್ಮಾಣಕ್ಕೆ ಕಳೆದ ನವಂಬರ್ ಆಖೈರು ವರೆಗೆ ೬೯,೯೫,೦೧೬ ರೂ ವೆಚ್ಚವಾಗಿದ್ದು, ಇನ್ನೂ ೬೦ ಲಕ್ಷ ರೂ ವೆಚ್ಚವಾಗುವ ಅಂದಾಜಾಗಿರುವುದೆಂದೂ ತಿಳಿಸಿದರು

ಕರ್ನಾಟಕದ ಬಗ್ಗೆ ಹೈ ಕಮಾಂಡ್ ತೀರ್ಪಿಗೆ ಕಾಂಗ್ರೆಸ್ ಪಕ್ಷದ ಅನುಮೋದನೆ

ಕರ್ನಾಟಕ ಪ್ರಾಂತರಚನೆಯಾಗಬೇಕೆಂದು ಕಾಂಗ್ರೆಸ್ ಪ್ರಕಮಾಂಡು ಮಾಡಿರುವ ನಿರ್ಧಾರವನ್ನು ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷವು ಅನುಮೋದಿಸುತ್ತದೆ. ಅದಕ್ಕೆ ಅನುಗುಣವಾಗಿ ಶಾಸನ ಸಭೆಯಲ್ಲಿ ನಿರ್ಣಯವೊಂದನ್ನು ಮಂಡಿಸಲೂ ಪಕ್ಷವು ನಿರ್ಧರಿಸಿದೆ

ದೆಹಲಿ ವಿಶ್ವವಿದ್ಯಾಲಯ ಸಂಘಕ್ಕೆ ಹೆಚ್ ಡಿ. ತುಳಸೀದಾಸ್ ಕಾರ್ಯದರ್ಶಿ

ಶ್ರೀ ಹೆಚ್ ಸಿ ದಾಸಪ್ಪನವರ ಕುಮಾರ ಶ್ರೀ ಹೆಚ್ ಡಿ ತುಳಸೀದಾಸ್‌ರವರು ದೆಹಲಿ ವಿಶ್ವವಿದ್ಯಾಲಯ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿರುವರು. ಅವರು ದೆಹಲಿ [illegible] ನ್ಯಾಯಶಾಸ್ತ್ರ ತರಗತಿಯಲ್ಲಿ ಓದುತ್ತಿರುವರು. ಈ ಸಂಘದಲ್ಲಿ ೧೩,೦೦೦ ಸದಸ್ಯರಿರುವರು.

ಲಾಲ್‌ಬಾಗಿನಲ್ಲಿ ಇನ್ನೊಂದು ಬಾರಿ ದೀಪಾಲಂಕಾರ

ಲಾಲ್‌ಬಾಗಿನಲ್ಲಿ ಇನ್ನೊಂದು ಬಾರಿ ದೀಪಾಲಂಕಾರವನ್ನು ಮಾಡಲಾಗುವುದೆಂದು ಸರ್ಕಾರಿ ಪ್ರಕಟನೆಯೊಂದು ತಿಳಿಸುತ್ತದೆ

ಮುಖ್ಯ ಮಂತ್ರಿಯವರ ಪ್ರವಾಸ

ಬರುವ ತಿಂಗಳು ೨, ೬ ಮತ್ತು [illegible] ತಾರೀಕುಗಳಲ್ಲಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತುಮಕೂರು, ಮಂಡ್ಯ ಮತ್ತು ಮೈಸೂರುಗಳಲ್ಲಿ ಪ್ರವಾಸ ಮಾಡುವರು. [illegible] ತಾರೀಕು ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತಿರುವರು

ಶಾಲೆಗಳಲ್ಲಿ ಗಾಂಧಿಜಿಯವರ ತತ್ವದ ಶಿಕ್ಷಣ

ಶಾಲೆಗಳಲ್ಲಿ ಗಾಂಧಿಜಿಯವರ ತತ್ವ ಬೋಧೆಯ ಶಿಕ್ಷಣ ಕೊಡುವ ವಿಷಯವನ್ನು ಭಾರತ ಸರ್ಕಾರದವರು ಸ್ಥಾಪಿಸಿರುವ ಒಂದು ಸಮಿತಿಯು ಪರಿಶೀಲಿಸುತ್ತಿರುವುದೆಂದು ಗೊತ್ತಾಗಿದೆ. ವಿದ್ಯಾಭ್ಯಾಸ, ಸತ್ಯಾಗ್ರಹ, ಅರ್ಥ ಶಾಸ್ತ್ರ ಮತ್ತು ರಾಜನೀತಿಗಳ ಬಗ್ಗೆ ಗಾಂಧಿಜಿಯವರ ಅಭಿಪ್ರಾಯಗಳನ್ನು ಶಾಲೆಗಳ ಹಲವು ಘಟ್ಟಗಳಲ್ಲಿ ಹೇಳಿಕೊಡಬಹುದೆಂದು ಸಮಿತಿಯು ಸೂಚಿಸಿದೆ

ದೆಹಲಿಯು ವಿಶ್ವದ ಶಾಂತಿ ಮತ್ತು ಸ್ನೇಹದ ಕೇಂದ್ರ

ದೆಹಲಿಯ ಕೆಂಪು ಕೋಟೆಯಲ್ಲಿ ನೆನ್ನೆ ಸಾವಿಯೆಟ್ ನಾಯಕರಿಗೆ ಪೌರ ಸ್ವಾಗತವಿತ್ತ ಸಮಾರಂಭದಲ್ಲಿ ನೆಹರೂರವರು ಭಾಷಣ ಮಾಡಿ ದೆಹಲಿ ನಗರವು ವಿಶ್ವದ ಸ್ನೇಹ ಮತ್ತು ಶಾಂತಿ ಕೇಂದ್ರವಾಗಿ ಪರಿಣಮಿಸಿದೆಯೆಂದು ತಿಳಿಸಿದರು. ಆ ನಗರದಲ್ಲಿ ವಿಶ್ವದ ಅತ್ಯುನ್ನತ ನಾಯಕರು ಬಂದು ಇದ್ದರೆಂದೂ, ಅವರು ಶಾಂತಿ ಮತ್ತು ಸ್ನೇಹದ ಸಂದೇಶವನ್ನು ಬೀರಿದರೆಂದೂ ನೆಹರೂರವರು ತಿಳಿಸಿ, ಆ ನಗರವು ವಿಶ್ವ ಶಾಂತಿಗಾಗಿ ಪರಿಣಾಮಕಾರಿಯಾದ ಸೇವೆ ಸಲ್ಲಿಸಲು ಶಕ್ತವಾಗುವುದೆಂದು ಆಶಿಸಿದರು

ಅಮೃತಸರದ ಘರ್ಷಣೆ ಪರಿಣಾಮವಾಗಿ ಒಬ್ಬನ ಮರಣ

ನೆನ್ನೆ ಅಮೃತಸರದಲ್ಲಿ ಅಕಾಲಿ ಸಿಕ್ಕರಿಗೂ ಮಹಾ ಪಂಜಾಬು ವಾದಿಗಳಿಗೂ ಆದ ಘರ್ಷಣೆ ಮತ್ತು ಪೋಲೀಸರ ಅಶ್ರುವಾಯು ಪ್ರಯೋಗದ ಸಂಬಂಧದಲ್ಲಿ ಗಾಯಗೊಂಡ ಸಿಕ್ಕನೊಬ್ಬನು ನಿನ್ನೆ ಆಸ್ಪತ್ರೆಯಲ್ಲಿ ಮೃತಪಟ್ಟನೆಂದು ವರದಿಯಾಗಿದೆ

ಚಂದ್ರಮಂಡಲದಲ್ಲಿ ೪,೫೦೦ ಮುಂದಿಗೆ ಜಮೀನು

ಚಂದ್ರಮಂಡಲದಲ್ಲಿ ಐದು ರೂಪಾಯಿಗೆ ಒಂದು ಎಕರೆಯಂತೆ ನ್ಯೂಯಾರ್ಕಿನ ರಾಬರ್ಟ್ ಕೋಲ್ಸ್ ಎಂಬಾತನು ೪,೫೦೦ ಮುಂದಿಗೆ ಜಮೀನುಗಳನ್ನು ಕೊಟ್ಟಿರುವುದಾಗಿ ಗೊತ್ತಾಗಿದೆ. ಅಲ್ಲಿ ವಿಮಾನ ಇಳಿಯಲು ಮತ್ತು ಕ್ರೀಡಾ ಸ್ಥಳಗಳ ಹಕ್ಕುಗಳನ್ನು ಎವರಿಗೆ ಕೊಡುವುದಾಗಿ ಆತನು ಹೇಳುವನೆಂದು ಗೊತ್ತಾಗಿದೆ. ನ್ಯೂಯಾರ್ಕ್ ಪೋಲೀಸರು ಆತನ ನಡವಳಿಕೆಯಿಂದ ಜನರು ವಂಚಿಸಲ್ಪಡುತ್ತಿರುವರೇ ಎಂಬುದನ್ನು ತನಿಖೆ ನಡೆಸುತ್ತಿರುವರು

೫೭ರಲ್ಲಿ ದಶಮಾಂಶ ನಾಣ್ಯ ಚಲಾವಣೆ

ಇನ್ನೆರಡು ವರ್ಷಗಳಲ್ಲಿ ದಶಮಾಂಶ ನಾಣ್ಯಗಳನ್ನು ಈ ದೇಶದಲ್ಲಿ ಚಲಾವಣೆಗೆ ತರಲಾಗುವುದು. ಈಗಿರುವ ನಾಣ್ಯಗಳು ಮುಂದೆ ಮೂರು ವರ್ಷಗಳ ವರೆಗೂ ಚಲಾವಣೆಯಲ್ಲಿರುವುವು. ಈ ಅವಧಿಯಲ್ಲಿ ಹಳೆಯ ನಾಣ್ಯಗಳನ್ನು ಹೊಸದಕ್ಕೆ ಪರಿವರ್ತಿಸಲು ಅವಕಾಶ ಕಲ್ಪಿಸಲಾಗುವುದು

ಸಾರಿಭಾಷಿಕ ಶಿಕ್ಷಣ ಸಂಸ್ಥೆಯ ಸ್ಥಾಪನೆಗೆ ರಷ್ಯಾ ಸಹಾಯ

ಬೊಂಬಾಯಿಯಲ್ಲಿ ಹೆಚ್ಚಿನ ದರ್ಜೆಯ ಸಾರಿಭಾಷಿಕ ಶಿಕ್ಷಣದ ಸಂಸ್ಥೆಯ ಸ್ಥಾಪನೆಗೆ ಸಹಾಯ ನೀಡುವುದಕ್ಕೆ ರಷ್ಯವು ತತ್ವತಃ ಒಪ್ಪಿರುವುದೆಂದು ಗೊತ್ತಾಗಿದೆ

ಅಂಗಡಿ ಸಿಬ್ಬಂದಿ ಶಾಸನದ ಉಲ್ಲಂಘನೆಗಾಗಿ ದಂಡ

ಅಂಗಡಿ ಸಿಬ್ಬಂದಿ ಶಾಸನದ ಉಲ್ಲಂಘನೆಗಾಗಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಬೊಂಬಾಯಿ ಮಿಠಾಯಿ ಅಂಗಡಿಯ ಶ್ರೀ ಚೋಕೆಲಾಲ್ ರವರಿಗೆ [illegible] ರೂ ಮತ್ತು ಅಕ್ಬರ್ ರಸ್ತೆಯಲ್ಲಿರುವ ದಿನಸಿ ಅಂಗಡಿಯ ಶ್ರೀ ಯೂಸುಫ್‌ರವರಿಗೆ ೫ ರೂ ದಂಡವನ್ನು ವಿಧಿಸಲಾಗಿದೆ. ಅಶೋಕಾ ರಸ್ತೆಯ ಬೀಡಿ ಅಂಗಡಿಯ ಶ್ರೀ ಕೆ ಪಿ ವರ್ಗಿಸ್, ಅಕ್ಬರ್ ರಸ್ತೆಯಲ್ಲಿರುವ ದಿನಸಿ ಅಂಗಡಿಗಳ ಶ್ರೀ ಅಬ್ದುಲ ಕರೀಂ ಮತ್ತು ಶ್ರೀ ಮಹಮದ್, ಸುಬ್ಬರಾವ್ ಪಾರ್ಕ್ ರಸ್ತೆಯಲ್ಲಿರುವ ದಿನಸಿ ಅಂಗಡಿಯ ಶ್ರೀ ಕುಂಜಿ ಅಹಮದ್ ಮತ್ತು ಕುಂಬಾರಗೇರಿ ರಸ್ತೆಯ ದಿನಸಿ ಅಂಗಡಿ ಶ್ರೀ ವೆಂಕಟಯ್ಯನವರಿಗೆ ತಲಾ ೩ ರೂ ದಂಡವನ್ನು ನ್ಯಾಯಾಧೀಶರು ವಿಧಿಸಿರುತ್ತಾರೆ

UNIVERSITY OF MYSORE

Office of the University of Mysore
MYSORE
Dated the 22nd November 1955

NOTIFICATION

Under Statute 79 (page 32 of Calendar Volume 1 for 1953 54) extracted below, Registered Graduates (those who have been enrolled as Registered Graduates) of this University are requested to send their applications for revision or correction *in the following form* ‡ so as to reach this office **on or before the 15th December, 1955**

"Statute 79 The register of Graduates shall be revised and corrected on the first day of January each year Application for revision or correction shall reach the Registrar not later than the 15th *day of December preceding*"

‡ 1 **Name with Degree or Degrees**
2 **Enrolment Number**
3 **Address**

By Order
I J NORONHA,
Registrar

Edited, Printed and Published by A R Nagarajan at Sadhvi Press, D Subbiah Road, Mysore

ಭಾರತದಲ್ಲೇ ಉಳಿಯಲು ಕ್ರುಶ್ಚೇವರಿಗೆ ಬುಲ್ಗಾನಿನ್ ಸಲಹೆ

ಭಾರತದ ನಾನಾ ನಗರಗಳಲ್ಲಿ ತಮಗೆ ದೊರೆಯುತ್ತಿರುವ ಅಭೂತಪೂರ್ವ ಮತ್ತು ಪ್ರಚಂಡ ಸ್ವಾಗತವನ್ನು ನೋಡಿ ಮುಗ್ಧರಾದ ರಷ್ಯದ ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವರನ್ನು ಕುರಿತು ರಷ್ಯದ ಪ್ರಧಾನಿ ಬುಲ್ಗಾನಿನ್ನರು ಭಾರತದಲ್ಲೇ ಏಕೆ ಅವರು ನೆಲೆಸಬಾರದೆಂದು ಕೇಳಿದಾಗ, ಈ ವಿಚಾರವನ್ನು ತಾವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದಾಗಿ ಕ್ರುಶ್ಚೇವರು ನುಡಿದರು

ಚೀಣಕ್ಕೆ ಪಾಕಿಸ್ತಾನದ ಪ್ರಧಾನಿಯ ಭೇಟಿ

ಪಾಕಿಸ್ತಾನದ ಪ್ರಧಾನಿ ಚೌಧುರಿ ಮಹಮದ್ ಅಲಿಯವರು ಬರುವ ಏಪ್ರಿಲ್ ತಿಂಗಳಲ್ಲಿ ಚೀಣಕ್ಕೆ ಭೇಟಿ ಕೊಡಲಿರುವರು. ಬಾಂಡುಂಗಿನಲ್ಲಿ ಏಷ್ಯಾ ಆಫ್ರಿಕಾ ಸಮ್ಮೇಳನದ ವೇಳೆ ಚೀಣದ ಪ್ರಧಾನಿಯೂ, ಸಮ್ಮೇಳನದಲ್ಲಿ ಪಾಕಿಸ್ತಾನದ ಪರವಾಗಿ, ಆಗ ಭಾಗವಹಿಸಿದ್ದ ಮಹಮದ್ ಅಲಿಯವರನ್ನು ಚೀಣಕ್ಕೆ ಬರುವಂತೆ ಕೋರಿದ್ದರು. ಈ ಆಹ್ವಾನವನ್ನು ಹೊಸ ಪ್ರಧಾನಿಯವರಿಗೆ ಕೊಡಲಾಗಿದೆ

ಮದ್ರಾಸಿನಲ್ಲಿ ರಷ್ಯದ ನಾಯಕರಿಗೆ ಮಂತ್ರಪೂರ್ವಕ ಸ್ವಾಗತ

ಮದ್ರಾಸಿಗೆ ನೆನ್ನೆ ರಷ್ಯದ ನಾಯಕರಾದ ಬುಲ್ಗಾನಿನ್ ಮತ್ತು ಕ್ರುಶ್ಚೇವರು ಆಗಮಿಸಿದಾಗ ಅವರಿಗೆ ಗೌರ್ನರರ ರಾಜಭವನದ ಬಳಿ ಚನ್ನಕೇಶವಸ್ವಾಮಿ ದೇವಾಲಯದ ಇಬ್ಬರು ಅರ್ಚಕರು ಮಂತ್ರಸ್ತೋತ್ರ ಪೂರ್ಣ ಕುಂಭಗಳೊಡನೆ ಸ್ವಾಗತ ನೀಡಿದರು. ನಾದಸ್ವರವೂ ನಿನಾದಗೈದಿತ್ತು. ಎರಡು ಅಲಂಕೃತ ಆನೆಗಳು ಸ್ವಾಗತ ಬಯಸುವ ರೀತಿಯಲ್ಲಿ ಘೀಂಕಾರ ಮಾಡಿ, ಸೊಂಡಿಲುಗಳಿಂದ ಹಾರಗಳನ್ನು ಹಾಕಿದುವು

ಹೈದರಾಬಾದಿನಲ್ಲಿ ಗುಂಡಿನೇಟು

ಹೈದರಾಬಾದಿನ ನಿಜಾಮಾಬಾದ್ ಜಿಲ್ಲೆಯ ಬೋಧನ್ ನಗರದಲ್ಲಿ ನೆನ್ನೆ ಮುಷ್ಕರ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಪೋಲೀಸರು ಗುಂಡುಹಾರಿಸಿದ ಪರಿಣಾಮವಾಗಿ ಇಬ್ಬರು ಕೆಲಸಗಾರರು ಮೃತಪಟ್ಟರೆಂದು ವರದಿಯಾಗಿದೆ. ೨೦ ದಿನಗಳಿಂದಲೂ ಮುಷ್ಕರವು ನಡೆಯುತ್ತಿತ್ತು. ಕಾರ್ಮಿಕರು ಪೋಲೀಸರೊಡನೆ ಘರ್ಷಣೆ ನಡೆಸಿದಾಗ ಗುಂಡನ್ನು ಹಾರಿಸಲಾಯಿತು

FOR SALE

Cycles in good condition (both ladies & gents) for sale at reasonable rates and Shop to let Enquire.

L N CYCLE MART,
K. M. Puram, Mysore

ಹೊಸ ಜವಳಿ ಅಂಗಡಿ

ಬೆಲೆ ಸುಲಭ!

ದಿಂಡಿಗಲ್, ಕೊಳ್ಳೇಗಾಲ ಮಂಗಳೂರು, ಕೊಯಮತ್ತೂರು, ವರಿಯೂರು
ಸೀರೆಗಳು
ಮತ್ತು
ಎಲ್ಲ ರಥಮ ಮಿಲ್ ಬಟ್ಟೆಗಳು ನಮ್ಮಲ್ಲಿ ದೊರೆಯುತ್ತವೆ

ವಿಜಯ ಹಾಲ್,

ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು

ವಿದ್ಯಾರ್ಥಿ ವೇತನ ರದ್ದ[illegible]

ಈ ವರ್ಷ ಮಹಾರಾಜಾ ಕಾಲೇಜಿನ [illegible] ರ್ಥಿ ವೇತನ ಸಮಿತಿಯು ತೀರ್ಮಾನವ [illegible] ಬಡ ವಿದ್ಯಾರ್ಥಿಗಳಲ್ಲಿ ನಿರಾಶೆಯನ್ನು [illegible] ದಿದೆ. ವಿದ್ಯಾರ್ಥಿ ವೇತನದ ಸಮಿತಿಯ [illegible] ದೆ ಕಲಿಯುತ್ತಿದ್ದ ಎಂ. ಎ , ಎಂ ಎಸ [illegible] ದ್ಯಾರ್ಥಿಗಳ ವೇತನವನ್ನು ಕಿತ್ತು ಹಾಕಿ [illegible] ರಾದ ಮತ್ತು ಹಿಂದಿನ ವರ್ಷ ವೇತನ [illegible] ದ್ದ ವಿದ್ಯಾರ್ಥಿಗಳಿಗೆ ಕೊಟ್ಟಿರುತ್ತಾರೆ [illegible] ಎಂ ಎಸ್‌ಸಿ., ವ್ಯಾಸಂಗವು ಅಪೂರ್ಣ [illegible] ವೆಂಬ ನೆಪ ಹೇಳಿ ಹೀಗೆ ಮಾಡಿರುವುದು [illegible] ಅನ್ಯಾಯ. ಇದರಿಂದ ಬಡವರು ಉನ್ನ[illegible] ದಲೆಯಬಾರದೆಂಬುದು ಸಮಿತಿಯವರ [illegible] ಪ್ರಾಯವೆಂದು ಕಾಣಬರುತ್ತದೆ. ಈ ಅ[illegible] ವನ್ನು ಖಂಡಿಸಬೇಕಾಗಿದೆ. ವಿಶ್ವವಿದ್ಯಾ[illegible] ಮೇಲಧಿಕಾರಿಗಳು ಇದನ್ನು ತಕ್ಷಣವೇ [illegible] ಹರಿಸಬೇಕಾಗಿ ಬೇಡುತ್ತೇವೆ.

ಇತಿ ನೊಂದ ವಿದ್ಯಾರ್ಥಿ[illegible]

೦ತ್ಯಕಂತ್ರ ಗೋಮಾಂತಕ ದಳದ [illegible] ರ್ ಪ್ರಭಾಕರರ ಸಹಾಯಕರ ಎಂಬ [illegible] ವರ್ಷದ ಬಾಲಕನನ್ನು ಪೋರ್ಚುಗೀಸ [illegible] ಲೀಸರು ಬಂಧಿಸಿ ಬಹಳವಾಗಿ ಹೊಡೆದ[illegible] ಅವನು ಮೃತಪಟ್ಟನೆಂದು ವರದಿಯಾಗಿ[illegible]

ಒಲಂಪಿಯಾ ಟಾಕೀ[illegible]

1 12 55ರಿಂದ ಅಶೋಕ್ [illegible]
ನವಕೇತನರವರ

ಹೌಸ್ ನಂ. 44

ಪಾತ್ರ – ದೇವ್ ಆನಂದ್, ಕಲ್ಪನಾ [illegible]
ಕೆ. ಎನ್ ಸಿಂಗ್

– ಬೆಳಗಿನ ಪ್ರದರ್ಶನ –
1-12-55 ರಿಂದ 4 ದಿನಗಳು ಮಾತ್ರ
[illegible]
ರೈಲ್ವೆ ಪ್ಲಾಟ್ ಫಾರಂ

ಪ್ರಕಟಣೆ

ನಗರಾಭಿವೃದ್ಧಿ ಸಮಿ[illegible]

ಮೈಸೂರು

ಇದರಿಂದ ಸಮಸ್ತ ಜನರಿಗೂ ತಿಳಿಯ[illegible] ವುದೇನೆಂದರೆ, ಮೈಸೂರು ಸಿಟಿ ರೈಲ್ವೆ ಸ್ಟೇ[illegible] ಬಳಿ ಸರ್ಕಲ್‌ನಲ್ಲಿರುವ ಹಿಂದೆ ಬನಾರ[illegible] ಬಂಕ್ ಕಟ್ಟಡವನ್ನು ಬಾಡಿಗೆಗೆ ಕೊಡಲಾ[illegible] ದೆ. ಈ ಕಟ್ಟಡವು ಆಫೀಸ್ ಮತ್ತು ಪ್ರದರ್ಶ[illegible] ಷ್ಟು,ಸಿಟಿ ರೈಲ್ವೆ ಸ್ಟೇಷನ್ನಿಗೆ ಹಲವು ಗಜಗಳ[illegible] ರದಲ್ಲಿರುವುದರಿಂದ ತುಂಬಾ ಅನುಕೂಲ[illegible] ಇಷ್ಟಪಡುವವರು ತಾವು ತಿಂಗಳು ಒಂದಕ್ಕೆ [illegible] ಇಷ್ಟಪಡುವ ಬಾಡಿಗೆ ನಮೂದಿಸಿ ತಾ[illegible] 15 12-1955ರ ಒಳಗಾಗಿ ಸೀಲಾದ ಕವ[illegible] ಅರ್ಜಿ ಹಾಕಿಕೊಳ್ಳತಕ್ಕದ್ದು. ಹೆಚ್ಚಿನ [illegible] ಗಳನ್ನು ಮೇಲ್ಕಂಡ ಆಫೀಸಿನಲ್ಲಿ ತಿಳಿ[illegible] ಬಹುದು

(ಸಹಿ) ಎಸ್. [illegible]
ಅಧ್ಯಕ್ಷರು

THE CHAMPION METROPOLITAN COLLEGE,
Co-operators' Home, 100 Feet Road, MYSORE

ADMISSIONS

for fresh classes in Typewriting and Shorthand (Leading to October 1956 Exams) are now being received

(Sd) [illegible]
(B Sc. N. D.Com, F.I.B. (Lon.)
Vice-Principal

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಟ ೧೪] SADHVI . THURSDAY 1-12-1955 ಮೈಸೂರು ಗುರುವಾರ ೧-೧೨-೧೯೫೫ [ಸಂಚಿಕೆ : ೧೦೭

ಕೋಲಾರ-ಬಳ್ಳಾರಿಗಳು ಕರ್ನಾಟಕದಲ್ಲೇ ಇರುವುವು -

ಕರ್ನಾಟಕದಲ್ಲಿ ಇಂದಿನ ಮೈಸೂರು ಭಾಗಗಳೆಲ್ಲ ಇರುವುವು

ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಹನುಮಂತಯ್ಯನವರ ವಿವರಣೆ

ಬೆಂಗಳೂರು ೧

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಭಾಷಣ ಮಾಡಿ, ಕಾಂಗ್ರೆಸ್ಸಿನ ಪ್ರೈ ಪವರ್ ಸಮಿತಿಯವರು ಕರ್ನಾಟಕಕ್ಕೆ ಅಂಗೀಕರಿಸಿದ ನಿರ್ಣಯದ ವಿಷಯಕ್ಕಾಗಿ ಅವರಿಂದ ಸ್ಪಷ್ಟೀಕರಣೆಯನ್ನು ಪಡೆದುದಾಗಿಯೂ, ನೂತನ ಪ್ರಾಂತದಲ್ಲಿ ಮೈಸೂರು ಸಂಸ್ಥಾನ ಮತ್ತು ಬೊಂಬಾಯಿ, ಹೈದರಾಬಾದು, ಮದ್ರಾಸಿನ ಎಲ್ಲ ಪ್ರದೇಶಗಳು ಮತ್ತು ಕೊಡಗುಗಳಿರುವುವೆಂದೂ ನುಡಿದು ಈ ಬಗ್ಗೆ ಸಮಿತಿಯ ಸದಸ್ಯರೊಬ್ಬರಿಂದ ಪತ್ರವನ್ನು ಅವರು ಓದಿದರು

ಅನೇಕ ಸದಸ್ಯರು ಮಧ್ಯೆ ಮಾತನಾಡಿ ಬಳ್ಳಾರಿ ಮತ್ತು ಕೋಲಾರ ತಾಲ್ಲೂಕುಗಳ ಬಗ್ಗೆ ಸ್ಪಷ್ಟೀಕರಣೆಯಾಗಬೇಕೆಂದು ಕೋರಲು, ಸಭಾಧ್ಯಕ್ಷರು ಮಧ್ಯೆ ಪ್ರವೇಶಿಸಿ ಮುಖ್ಯಮಂತ್ರಿಯವರು ಹೈ ಪವರ್ ಸಮಿತಿಯ ಸದಸ್ಯರೊಬ್ಬರಿಂದ ಬಂದ ಪತ್ರವನ್ನು ಓದಿದ ಮೇಲೆ ಅವರಲ್ಲಿರುವ ಅಂಶಗಳಿಗಿಂತ ಹೆಚ್ಚು ಚರ್ಚೆ ಮಾಡಬಾರದೆಂದು ತಿಳಿಸಿದರು

ಮುಖ್ಯ ಮಂತ್ರಿಯವರು ರಾಜಪ್ರಮುಖರ ವಿಚಾರವನ್ನು ಪ್ರಸ್ತಾಪಿಸಿ, ರಾಜ್ಯಾಂಗದಲ್ಲಿ ನಿರೂಪಿಸಲಾಗಿರುವ ನಿರ್ದೇಶಕ ತತ್ವಗಳ ಪ್ರಕಾರ ರಾಜಪ್ರಮುಖರ ಸ್ಥಾನಗಳಿಗೆ ಅವಕಾಶವಿಲ್ಲವೆಂದು ತಿಳಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಗಡಿ ಸತ್ಯಾಗ್ರಹದಲ್ಲಿ ಐಂಬತ್ತೈದು ಮಂದಿಯ ಬಂಧನ

[illegible] ಅಖಂಡ ಕರ್ನಾಟಕ ರಾಜ್ಯ [illegible] ಪರಿಷತ್ತಿನವರು ನಡೆಸುತ್ತಿರುವ ಸತ್ಯಾಗ್ರಹದಲ್ಲಿ ಇದುವರೆಗೆ ೫೧೨ ಜನರನ್ನು ಬಂಧಿಸಲಾಗಿದೆ ನೆನ್ನೆ ೫೫ ಜನ ಸತ್ಯಾಗ್ರಹಿಗಳು [illegible] ತಾಲ್ಲೂಕಿನ ಮಂಚೇರಿ ಹಳ್ಳಿಯ [illegible] ಎಂಬಾತನ ನೇತೃತ್ವದಲ್ಲಿ [illegible] ನಿಬಂಧನೆಯನ್ನು ಮುರಿದು ಬಂಧಿತರಾದರು

ಬೆಂಗಳೂರು ರೇಡಿಯೊವಿನಲ್ಲಿ ಪ್ರಾದೇಶಿಕ ವಾರ್ತೆಗಳನ್ನು ಕನ್ನಡದಲ್ಲಿ ಪ್ರಸಾರ ಮಾಡುವ ವಿಷಯ ಪರ್ಯಾಲೋಚನೆಯಲ್ಲಿರುವುದಾಗಿ ಕೇಂದ್ರ ವಾರ್ತಾ ಮಂತ್ರಿ ಬಿ ವಿ ಕೇಸ್ಕರ್‌ರವರು ತಿಳಿಸಿದರು

ಕರ್ನಾಟಕ ಪ್ರಾಂತ ರಚನೆಗೆ ಬೆಂಬಲ ಮತ್ತು ವಿರೋಧ

ಉಭಯ ಶಾಸನ ಸಭೆಗಳಲ್ಲಿ ಮುಖ್ಯ ಮಂತ್ರಿಗಳ ಬಗ್ಗೆ ಉಗ್ರ ಟೀಕೆ

(ಸ್ವಂ ಸು ಪ್ರೋ) ಬೆಂಗಳೂರು ೧

ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಚರ್ಚಿಸಲು ಇಂದು ಎರಡು ಶಾಸನ ಸಭೆಗಳೂ ಬೇರೆ ಬೇರೆಯಾಗಿ ಸಮಾವೇಶವಾದವು [illegible] ಅಧಿವೇಶನಗಳು ಕೂಡುತ್ತವೆ

ಕೆಳಗಿನ ಸಭೆಯಲ್ಲಿ ಶ್ರೀಗಳಾದ ಟಿ ಮರಿಯಪ್ಪ, ಎ ಪಿ ನಾಗರಾಜಮೂರ್ತಿ ನಿಜಲಿಂಗಪ್ಪ ಮತ್ತು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಕರ್ನಾಟಕ ಪ್ರಾಂತ ರಚನೆಯನ್ನು ಸಮರ್ಥಿಸಿ ಭಾಷಣ ಮಾಡಿದರು

ಶ್ರೀ ಹುಚ್ಚಮಾಸ್ತಿಗೌಡರು ಮುಖ್ಯ ಮಂತ್ರಿಗಳನ್ನು ಕಟುವಾಗಿ ಟೀಕಿಸಿ ಅವರು ಕರ್ನಾಟಕದ ಬಗ್ಗೆ ತಮ್ಮ ನೀತಿ ಪ್ರತಿಪಾದನೆಯನ್ನು ಮಾಡಿ ಸಂಸ್ಥಾನಕ್ಕೆ ದ್ರೋಹ ಬಗೆದಿದ್ದಾರೆಂದು ಹೇಳಿದರು ಶ್ರೀ ಶಿವಪ್ಪನವರು ನೂತನ ಕರ್ನಾಟಕ ಪ್ರಾಂತರಚನೆಯನ್ನು ವಿರೋಧಿಸಿದರು

ಮೇಲಿನ ಶಾಸನ ಸಭೆಯಲ್ಲಿ ಶ್ರೀಗಳಾದ ಎ. ಜಿ ಜೋಯಿಸ್, ಎಂ ರಂಗಯ್ಯ ಮುಂತಾದವರು ಕರ್ನಾಟಕಕ್ಕೆ ಬೆಂಬಲ ಸೂಚಿಸಿದರು ಶ್ರೀಗಳ ಎ ಕೆ ಸಂಜೀವರೆಡ್ಡಿ ಮತ್ತು ಶಿವಪ್ಪನವರುಗಳು ವಿರೋಧಿಸಿದರು

ಶ್ರೀ ಶಿವಪ್ಪನವರು ಮುಖ್ಯ ಮಂತ್ರಿಗಳನ್ನು ಟೀಕಿಸುತ್ತಾ, ಅವರು ಸೂಚಿಸಿರುವಂತೆ ಕರ್ನಾಟಕಕ್ಕೆ ವಿಶಾಲ ಮೈಸೂರು ಎಂಬ ಹೆಸರನ್ನಿಡುವುದರಿಂದ ಏನು ಪ್ರಯೋಜನ? ಈ ಹೆಸರನ್ನಿಡಲು ಇತರ ಪ್ರದೇಶಗಳವರು ಒಪ್ಪುತ್ತಾರೆ? ಮುಖ್ಯ ಮಂತ್ರಿಗಳು ಕೇವಲ [illegible] ಆಟದಂತೆ ಆಡುತ್ತಿದ್ದಾರೆ ಎಂದು ಹೇಳಿದರು

ಶ್ರೀ ಶಿವಪ್ಪನವರು ನುಡಿದ ಹಲವು ಪದಗಳು ಅಕ್ರಮವೆಂದು ಸಭಾಧ್ಯಕ್ಷರು ತಿಳಿಸಿದರು

ಇದುವರೆಗೂ ಮಾತನಾಡಿರುವ ಒಟ್ಟು [illegible] ಸದಸ್ಯರುಗಳಲ್ಲಿ ೩೫ ಮಂದಿ ಕರ್ನಾಟಕದ ಪರವಾಗಿಯೂ ೧೭ ಮಂದಿ ವಿರೋಧವಾಗಿಯೂ ಇದ್ದಾರೆ

ಶ್ರೀಗಳಾದ ಮುಲ್ಕಾ ಗೋವಿಂದರೆಡ್ಡಿ ಮತ್ತು ಬಿ ಎ ನಾರಾಯಣರೆಡ್ಡಿಯವರು ಕೋಲಾರ ಮುಂತಾದ ತೆಲುಗು ಪ್ರದೇಶಗಳನ್ನು ಆಂಧ್ರಕ್ಕೆ ವರ್ಗಾಯಿಸುವುದಾದರೆ ಕರ್ನಾಟಕ ಪ್ರಾಂತ ರಚನೆಗೆ ಒಪ್ಪುವುದಾಗಿ ತಿಳಿಸಿದ್ದಾರೆ

ಕಾರು ಹರಿದರೂ ಎಳೆಯ ಮಗು ಪಾರು

ದಕ್ಷಿಣ ಅಫ್ರಿಕದ ರಾಜಧಾನಿ ಕೇಪ್‌ಟೌನ್ ನಗರದಲ್ಲಿ ಮೊನ್ನೆ ೩ ಸಾವಿರ ಪೌಂಡು ತೂಕದ ಮೋಟಾರು ೧೫ ತಿಂಗಳಿನ ಒಂದು ಮಗುವಿನ ಮೇಲೆ ಹರಿದರೂ ಮಗುವು ಬದುಕಿಕೊಂಡಿತೆಂದು ವರದಿಯಾಗಿದೆ ಮಗುವು ಆಡುತ್ತಿದ್ದುದನ್ನು ಕಾಣದೆ ತಂದೆಯು ಕಾರನ್ನು ಹಿಂದಕ್ಕೆ ಬಿಡುತ್ತಿದ್ದಾಗ ಕಾರಿನ ಹಿಂಭಾಗ ಮತ್ತು ಮುಂಭಾಗದ ಚಕ್ರಗಳು ಬಾಲಕನ ತಲೆ ಮತ್ತು ಸೊಂಟದ ಮೇಲೆ ಹಾದುವೆಂದೂ ಮಗುವಿಗೆ ಸ್ವಲ್ಪ ಗಾಯ ಮಾತ್ರವಾಯಿತೆಂದೂ ಹೇಳಲಾಗಿದೆ

ಮೋಸದಿಂದ ಬಸ್ಸನ್ನು ಮಾರಿದವನ ಬಂಧನ

ಮೈಸೂರು ೧

ನಾಗಮಂಗಲ ತಾಲ್ಲೂಕಿನ ಶ್ರೀ ತಿರುಮಲೆಗೌಡ ಎಂಬುವರು ರಿಪೇರಿಗಾಗಿ ತಮ್ಮ ಒಂದು ಬಸ್ಸನ್ನು ನಗರದ ನಜರಬಾದಿನ ವರ್ಕ್‌ಷಾಪೊಂದರಲ್ಲಿ ಬಿಟ್ಟಿದ್ದಾಗ ಅದರ ಮಾಲಿಕನಾದ ಶಿವಾನಂದ ಎಂಬುವರು ಅದನ್ನು ಅವರಿಗೆ ತಿಳಿಸದೆ ಮಾರಿದರೆಂದು ದೂರು ಕೊಡಲಾಗಿ, ವರ್ಕ್‌ಷಾಪ್ ಮಾಲಿಕರನ್ನು ಮೋಸದ ಆಪಾದನೆ ಮೇಲೆ ಬಂಧಿಸಲಾಗಿದೆಯೆಂದು ತಿಳಿದುಬಂದಿದೆ

ಫೆಬ್ರವರಿ ತಿಂಗಳು ಟೌನ್ ಮುನಿಸಿಪಾಲಿಟಿಗಳ ಚುನಾವಣೆ

ಬರುವ ಫೆಬ್ರವರಿ ೨೫ನೇ ತಾರೀಕು ಸಂಸ್ಥಾನದ ಟೌನ್ ಮುನಿಸಿಪಲ್ ಕೌನ್ಸಿಲುಗಳ ಚುನಾವಣೆಗಳು ನಡೆಯುವುವೆಂದು ಗೊತ್ತಾಗಿದೆ ಈಗಿನ ಕೌನ್ಸಿಲುಗಳ ಅವಧಿಯು ಏಪ್ರಿಲ್ ತಿಂಗಳಲ್ಲಿ ಮುಗಿಯುವುದು

ಅನುಮಾನದ ಮೇಲೆ ಸೀರೆ ಮಾರಾಟಗಾರರ ಬಂಧನ

ನೆನ್ನೆ ನಗರದ ದ ದೇವಿ ದ ರಸ್ತೆಯಲ್ಲಿ ಸೀರೆಗಳನ್ನು ಮಾರುತ್ತಿದ್ದ ತುಮಕೂರಿನ [illegible] ಮತ್ತು [illegible] ಎಂಬುವರನ್ನು ಅನುಮಾನದ ಮೇಲೆ ಪೊಲೀಸರು ಬಂಧಿಸಿದ್ದಾರೆ

ಭಾರತದಲ್ಲಿ ಶೀಘ್ರದಲ್ಲೇ ಮರಣ ಶಿಕ್ಷೆ ರದ್ದು

ಲೋಕಸಭೆಯಲ್ಲಿ ನೆನ್ನೆ ಮರಣ ಶಿಕ್ಷೆಯ ರದ್ದಿನ ಮಸೂದೆಯ [illegible] ಕಾರವಾಯಿತು ರಾಷ್ಟ್ರಾಧ್ಯಕ್ಷರ ಸಮ್ಮತಿಯು ದೊರೆತಕೂಡಲೇ ಮರಣ ಶಿಕ್ಷೆಯನ್ನು ರದ್ದುಗೊಳಿಸಲಾಗುವುದೆಂದು ಕೇಂದ್ರ ಗೃಹ ಖಾತೆ ಮಂತ್ರಿ ಬಿ ಎನ್ ದಾತಾರ್‌ರವರು ತಿಳಿಸಿದರು ಈ ವಿಷಯವು ಸಂಸ್ಥಾನ ಸರ್ಕಾರಗಳ ವ್ಯಾಪ್ತಿಗೆ ಒಳಪಟ್ಟಿದೆ ಸಂಸ್ಥಾನಗಳು ಈ ಬಗ್ಗೆ ಶಾಸನಗಳನ್ನು ತರಬೇಕಾಗುವುದು

ಕಲ್ಕತ್ತದಲ್ಲಿ ನೆಹರೂ ಮತ್ತು ರಷ್ಯಾ ನಾಯಕರ ಸಮಾಗಮ

ಪ್ರಧಾನಿ ನೆಹರೂರವರು ನೆನ್ನೆ ಮಧ್ಯಾಹ್ನ ಕಲ್ಕತ್ತಕ್ಕೆ ಆಗಮಿಸಿದರು ಅವರು ಕೂಡಲೇ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವರೊಡನೆ ಸಂಭಾಷಣೆ ನಡೆಸಿದರು ದೆಹಲಿಯಲ್ಲಿ ನಡೆದ ಮಾತುಕತೆಗಳನ್ನು ಈ ಸಭೆಯಲ್ಲಿ ಮುಂದುವರಿಸಲಾಯಿತೆಂದು ಹೇಳಲಾಗಿದೆ ಭಾರತದ ವಿದೇಶಾಂಗ ಇಲಾಖಾ ಕಾರ್ಯದರ್ಶಿ ಎಸ್ ದತ್ ಮತ್ತು ರಷ್ಯದ ಉಪ ವಿದೇಶಾಂಗ ಮಂತ್ರಿ ಆಂದ್ರಿ ಗ್ರೋಮಿಕೊರವರು ಸಂಭಾಷಣೆಯಲ್ಲಿ ಭಾಗವಹಿಸಿದ್ದರೆಂದು ಹೇಳಲಾಗಿದೆ ಉಭಯ ರಾಷ್ಟ್ರಗಳ ಜಂಟಿ ಘೋಷಣೆ ಕರಡನ್ನು ಈಗಾಗಲೇ ತಯಾರಿಸಲಾಗಿದೆ ಈ ವಿಷಯವನ್ನು ಉಭಯ ಪ್ರಧಾನಿಗಳು ಚರ್ಚಿಸುವರೆಂದು ಗೊತ್ತಾಗಿದೆ

ರಷ್ಯದ ಪ್ರಧಾನಿ ಬುಲ್ಗಾನಿನ್‌ರವರು ಮೊನ್ನೆ ಕಲ್ಕತ್ತಾವಿಗೆ ಆಗಮಿಸಿದಾಗ ಅವರಿಗೆ ನೆಗಡಿಯಾಯಿತು ರಾತ್ರಿ ಪೂರ್ಣ ವಿಶ್ರಾಂತಿಯು ದೊರೆತು ಈಗ ಆರೋಗ್ಯವಾಗಿರುವರು

ಭಾರತ ಯಾವ ರಾಷ್ಟ್ರಕೂಟಕ್ಕೂ ಸೇರುವುದಿಲ್ಲ

ಪಶ್ಚಿಮ ರಾಷ್ಟ್ರಗಳಿಗೆ ನೆಹರೂರವರ ಭರವಸೆ

ಕಲ್ಕತ್ತ ಪೌರಸಭೆಯವರು ರಷ್ಯದ ನಾಯಕರಿಗೆ ನೆನ್ನೆ ಇತ್ತ ಸನ್ಮಾನ ಸಮಾರಂಭದಲ್ಲಿ ಪ್ರಧಾನಿ ನೆಹರೂರವರು ಭಾಷಣ ಮಾಡಿ, ಬುಲ್ಗಾನಿನ್ ಮತ್ತು ಕ್ರುಶ್ಚೇವರಿಗೆ ಭಾರತದಲ್ಲಿ ದೊರೆಯುತ್ತಿರುವ ಸ್ವಾಗತದ ಬಗ್ಗೆ ಇತರ ರಾಷ್ಟ್ರಗಳಲ್ಲಿರುವ ನಮ್ಮ ಮಿತ್ರರಿಗೆ ಗಾಬರಿಯಾಗಿರುವುದೆಂದು ತಿಳಿಸಿದರು ಆ ಜನರು ಯಾವಾಗಲೂ ಮಿಲಿಟರಿ ಕೂಟ ಮತ್ತು ಪ್ರತಿ ಕೂಟಗಳ ದೃಷ್ಟಿಯನ್ನೇ ಹೊಂದಿರುವರೆಂದು ನೆಹರೂರವರು ಹೇಳಿ, ಭಾರತವು ಯಾವ ಶಿಬಿರ, ಅಥವಾ ಕೂಟಕ್ಕೂ ಸೇರುವುದಿಲ್ಲವೆಂದು ಆ ರಾಷ್ಟ್ರಗಳಿಗೆ ಭರವಸೆಯಿತ್ತರು ರಷ್ಯಾ ಭಾರತಗಳ ಸ್ನೇಹವು ಇತರ ಯಾವ ರಾಷ್ಟ್ರದ ವಿರುದ್ಧವಾಗಿಯೂ ಇಲ್ಲವೆಂದೂ, ಈ ಸ್ನೇಹದಿಂದ ಇಡೀ ವಿಶ್ವದಲ್ಲೇ ಸಕಲರ ಸಹಕಾರಕ್ಕೆ ಮಾರ್ಗವಾಗುವುದೆಂದೂ ನೆಹರೂರವರು ತಿಳಿಸಿದರು

ಕ್ರುಶ್ಚೇವರು ಭಾಷಣ ಮಾಡಿ, ಎರಡು ರಾಷ್ಟ್ರಗಳ ಪ್ರಜೆಗಳಿಗೆ ಇರುವ ಸ್ನೇಹದಿಂದ ಉಭಯರಿಗೂ ಭೌತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಲಾಭವಾಗುವುದೆಂದು ತಿಳಿಸಿದರು ಭಾರತ ಮತ್ತು ರಷ್ಯಗಳ ಸ್ನೇಹದಿಂದ ವಿಶ್ವದಲ್ಲಿ ಶಾಂತಿಯು ಸ್ಥಾಪನೆಯಾಗುವುದನ್ನು ಕಂಡು ಹಲವು ರಾಷ್ಟ್ರಗಳು [illegible] ಹೊಂದಿರುವುವೆಂದು ಅವರು ಹೇಳಿದರು ಗೋವಾ ಬಗ್ಗೆ ಭಾರತದ ನಿಲುವನ್ನು ಅವರು ಸಮರ್ಥಿಸಿ, ಮನುಷ್ಯನ ಶರೀರಕ್ಕೆ ಕೆಲವು ಕ್ರಿಮಿಗಳು ಅಂಟಿಕೊಂಡು ರಕ್ತವನ್ನು ಹೀರುವಂತೆ ಕೆಲವು ರಾಷ್ಟ್ರಗಳು ಇತರ ರಾಷ್ಟ್ರಗಳಲ್ಲಿ ಇವೆಯೆಂದೂ, ಪೋರ್ಚುಗಲ್ಲು ಸಹಾ ಅಂತಹ ಒಂದು ರಾಷ್ಟ್ರವೆಂದೂ ಅವರು ತಿಳಿಸಿ ಗೋವಾವು ವಿಮೋಚನೆ ಹೊಂದುವುದು ಶತಸ್ಸಿದ್ಧವೆಂದು ಹೇಳಿದರು

ಕವಿ ವಾಸ್ವಾನಿಯವರಿಗೆ ೬೫ ಸಾವಿರ ರೂ. ನಿಧಿ

ಸಾಧು ಟಿ ಎಲ್ ವಾಸ್ವಾನಿಯವರಿಗೆ ಕಳೆದ ೨೫ನೇ ತಾರೀಕು ಪೂನಾ ನಿವಾಸಿಗಳು ೬೫ ಸಾವಿರ ರೂ ಗಳ ನಿಧಿಯನ್ನು ಅವರ ೭೬ನೇ ವರ್ಧಂತಿ ಸಂದರ್ಭದಲ್ಲಿ ಅರ್ಪಿಸಿದರು ಈ ಹಣವನ್ನು ಅವರು ಬಡವರ ಸಹಾಯಕ್ಕಾಗಿ ಏರ್ಪಡಿಸಲಾಗಿರುವ ಸರ್ವೋದಯ ಸಂಸ್ಥೆಗೆ ಒಪ್ಪಿಸಿದರು

ಭಾರತಕ್ಕೆ ಆಸ್ಟ್ರೇಲಿಯದಿಂದ ಆಸ್ಪತ್ರೆ ನೌಕೆ ದಾನ

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಉಪಯೋಗಿಸುವುದಕ್ಕಾಗಿ ೧೦೦ ಟನ್ನು ತೂಕದ ಆಸ್ಪತ್ರೆ ನೌಕೆಯೊಂದನ್ನು ಆಸ್ಟ್ರೇಲಿಯವು ಭಾರತಕ್ಕೆ ಕೊಟ್ಟಿರುತ್ತದೆ ಕೊಲಂಬೊ ಯೋಜನೆಯ ಪ್ರಕಾರ ಇದನ್ನು ಕೊಡಲಾಗಿದೆ ಹಡಗಿನ ಬೆಲೆ ೫೦ ಸಾವಿರ ಪೌಂಡು

"ವೀರವಾಣಿ' ವಾರಪತ್ರಿಕೆಯ ಆರಂಭೋತ್ಸವ

ಮೈಸೂರು ೧

ನಗರದ ಸಂತೆಪೇಟೆಯ ಮೋತಿಖಾನೆ ಕಟ್ಟಡದಲ್ಲಿರುವ ವಿಷ್ಣು ಪವರ್ ಪ್ರೆಸ್ಸಿನಲ್ಲಿ "ವೀರವಾಣಿ' ವಾರಪತ್ರಿಕೆಯ ಆರಂಭೋತ್ಸವವು ನಿನ್ನೆ ಬೆಳಿಗ್ಗೆ ನಡೆಯಿತು ವರ್ತಮಾನ ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎನ್ ತಿಮ್ಮಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ ಎಲ್ ಸುಶೀಲರವರಿಂದ ಪ್ರಾರ್ಥನೆಯೂ, ಸಂಪಾದಕರಾದ ಶ್ರೀ ಎನ್ ಎಸ್ ನಾರಾಯಣಸ್ವಾಮಿಯವರಿಂದ ಸ್ವಾಗತವೂ ಆದನಂತರ ಪ್ರಧಾನ ಸಂಪಾದಕ ಶ್ರೀ ಕೆ ಎನ್ ಸೀತಾರಾಮರವರು ಗೃಹ ಮಂತ್ರಿ ಹೆಚ್ ಸಿದ್ದವೀರಪ್ಪ ಮತ್ತು ನ್ಯಾಯ ಮಂತ್ರಿ ಆರ್ ನಾಗನಗೌಡರಿಂದ ಬಂದಿದ್ದ ಶುಭ ಸಂದೇಶಗಳನ್ನು ಓದಿದರು ಪಿ ಸಿ ಕೃಷ್ಣಮೂರ್ತಿ ಮತ್ತು ಪಾರ್ಟಿಯವರಿಂದ ಸುಶ್ರಾವ್ಯವಾದ ವೀಣಾ ವಾದನವಾಯಿತು

ಶ್ರೀ ಆಗರಂ ರಂಗಯ್ಯನವರು ಪತ್ರಿಕೆಯ ಆರಂಭೋತ್ಸವವನ್ನು ನೆರವೇರಿಸಿ, ನಗರದಲ್ಲಿ ಪತ್ರಿಕೋದ್ಯಮದ ಇತಿಹಾಸವನ್ನು ವಿವರಿಸಿ ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳ ಕರ್ತವ್ಯವನ್ನು ನಿರೂಪಿಸಿದರು ಮತ್ತು ನೂತನ ಉದ್ಯಮಕ್ಕೆ ಯಶಸ್ಸನ್ನು ಹಾರೈಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪತ್ರಿಕಾ ವೃತ್ತಿಯ ಘನತೆಯನ್ನು ವಿವರಿಸಿ ವೀರವಾಣಿ ಪತ್ರಿಕೆಗೆ ಶುಭವನ್ನು ಕೋರಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹಿಂದಿ ಪ್ರಚಾರ ಸಭೆ ಶಾಖಾ ಅಧಿಕಾರ ವರ್ಗದ ಚುನಾವಣೆ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಚಾಮರಾಜಪುರ ಕೇಂದ್ರದಲ್ಲಿ ಹಿಂದಿ ಪ್ರೇಮಿಗಳ ಸಭೆಯು ನೆನ್ನೆ ಶ್ರೀ ಎಚ್ ಜಿ ಶಿತಿಕಂಠಶಾಸ್ತ್ರಿ ಯವರ ಅಧ್ಯಕ್ಷತೆಯಲ್ಲಿ ನಡೆದು ಕಾರ್ಯಕಾರಿ ಸಮಿತಿಯ ಚುನಾವಣೆಗಳು ಆದವು ಶ್ರೀ ಎಂ ಎಸ್ ಕೃಷ್ಣಮೂರ್ತಿಯವರು ಅಧ್ಯಕ್ಷರಾಗಿಯೂ ಶ್ರೀಗಳಾದ ಟಿ ಜಿ ಕೇಶವ ಮತ್ತು ಎನ್ ವಿ ಅನಂತಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀಮತಿಗಳಾದ ಟಿ ವಿಜಯಮಾಲಿ, ವಿಶಾಂತಬಾಯಿ, ರಮಾಕುಮಾರಿ, ರಾಧ, ಭಾಗ್ಯಲಕ್ಷ್ಮಿ ಮತ್ತು ಶ್ರೀಗಳಾದ ವೆಂಕಟಕೃಷ್ಣ ರಾಮುಲು, ಜಯದೇವರಾಜೆ ಅರಸ್ ಮತ್ತು ಕೃಷ್ಣೇ ಅರಸ್ ರವರುಗಳು ಸದಸ್ಯರಾಗಿಯೂ ಆರಿಸಲ್ಪಟ್ಟಿರುತ್ತಾರೆ

ನಗರದ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಭೆ

ನಗರದ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಸಂಘದ ಸಭೆಯು ಕಳೆದ ಶನಿವಾರ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಹೆಚ್ ವಿ ಶ್ರೀ ರಂಗರಾಜುರವರ ಅಧ್ಯಕ್ಷತೆಯಲ್ಲಿ ನಡೆಯಿತು ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಎಂ ಸಿ ಸುಬ್ಬಪ್ಪನವರು ಸ್ವಾಗತ ಭಾಷಣ ಮಾಡಿದರು ಮಹಾರಾಜಾ ಕಾಲೇಜಿನ ಶ್ರೀ ಎಂ ಯಾಮುನಾಚಾರ್ಯರು ಉಪಾಧ್ಯಾಯ ವೃತ್ತಿಯ ಘನತೆ ಬಗ್ಗೆ ಭಾಷಣ ಮಾಡಿದರು ವಿವಿಧ ವಿನೋದಾವಳಿಯೂ ಏರ್ಪಾಡಾಗಿತ್ತು

ಗೋ ಸಂವರ್ಧನ ದಿನಾಚರಣೆ

ಹುಣಸೂರು ನಗರದಲ್ಲಿ ಗೋ ಸಂವರ್ಧನ ಸಪ್ತಾಹವನ್ನು ಕಳೆದ ಸೋಮವಾರ ತಾರೀಕು ಸೆಂಟರ್ ಗೂಡು ಸಬ್ ಡಿವಿಷನ್ ಆಫೀಸರ್ ಶ್ರೀ ಸಿ ಎಸ್ ರಾಜಶೇಖರಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು ಈ ಸಪ್ತಾಹದ ಉದ್ದೇಶವನ್ನು ಕುರಿತು ವೆಟರಿನರಿ ಇನ್ಸ್‌ಪೆಕ್ಟರ್ ಶ್ರೀ ಆರ್ ಎನ್ ಕೃಷ್ಣಮೂರ್ತಿಯವರು, ಅಮಲ್ದಾರ್ ಶ್ರೀ ಕೆ ವೆಂಕಟಸ್ವಾಮಿಯವರು ಮತ್ತು ಮುನಿಸಿಪಲ್ ಪ್ರೆಸಿಡೆಂಟ್ ಶ್ರೀ ಅನ್ವರ್ ಪಾಷಾ ಸಾಹೇಬರು ಭಾಷಣ ಮಾಡಿದರು ದನಗಳ ಪ್ರದರ್ಶನಕ್ಕೆ ಒಂದಿದ್ದ ಉತ್ತಮ ರಾಸುಗಳಿಗೆ ಬಹುಮಾನವನ್ನು ಅಧ್ಯಕ್ಷರು ವಿನಿಯೋಗ ಮಾಡಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಜಮೀನು ಹಿಡುವಳಿ ಪರಮಾವಧಿ ನಿಗದಿ ಪ್ರಶ್ನೆ

ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಸಚಿವರ ಹೇಳಿಕೆ

ಮೈಸೂರು ೧

ಸಂಸ್ಥಾನದಲ್ಲಿ ವೈಯಕ್ತಿಕವಾಗಿ ಜಮೀನು ಹಿಡುವಳಿ ಹೊಂದುವವರ ಪರಮಾವಧಿಯನ್ನು ಗೊತ್ತುಪಡಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿಯೂ, ಈ ಸಂಬಂಧವಾಗಿ ಖಾನೇಷುಮಾರಿಯನ್ನು ನಡೆಸಲಾಗಿದೆಯೆಂದೂ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಕೆಳಗಿನ ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ ಜಮೀನು ಹಿಡುವಳಿಯು ಒಬ್ಬೊಬ್ಬ ವ್ಯಕ್ತಿಗೆ ಎಷ್ಟಿರಬೇಕೆಂಬುದನ್ನು ಇನ್ನೂ ನಿಶ್ಚಯಿಸಿಲ್ಲವೆಂದು ಸಚಿವರು ನುಡಿದಿರುವರು

ಭೂದಾನ ಅಭಿಮಾನಿಗಳ ಸಭೆ

ನಗರದ ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಸರ್ವೋದಯ ವಿಚಾರ, ಹಾಗೂ ಆಚಾರ್ಯ ವಿನೋಬಾರವರ ನೇತೃತ್ವದಲ್ಲಿ ದೇಶಾದ್ಯಂತ ನಡೆಯುತ್ತಿರುವ ಭೂಮಿಕ್ರಾಂತಿಯ ಬಗ್ಗೆ ಕ್ರಿಯಾತ್ಮಕ ಆಸಕ್ತಿಯನ್ನು ಪ್ರಚೋದಿಸಲು ವಿಚಾರ ವಿನಿಮಯ ನಡೆಸಿ, ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಲು ಸಂಬಂಧಪಟ್ಟ ಅಭಿಮಾನಿಗಳ ಸಭೆಯನ್ನು ನಾಳೆ ಸಂಜೆ ೫-೩೦ ಗಂಟೆಗೆ ದಸರಾ ವಸ್ತು ಪ್ರದರ್ಶನಾಲಯದ ಆವರಣದಲ್ಲಿರುವ ವಿದ್ಯಾವರ್ಧಕ ಹೈಸ್ಕೂಲಿನಲ್ಲಿ ಏರ್ಪಡಿಸಲಾಗಿದೆ

ಕರ್ನಾಟಕ ಸಾಮ್ರಾಜ್ಯ ಸಂಸ್ಕೃತಿ ಮೇಲೆ ಉಪನ್ಯಾಸ

ರಾಜಧಾನಿಯ ಡಿ ಬನುಮಯ್ಯನವರ ಪ್ರೌಢಶಾಲೆಯಲ್ಲಿ ನಾಳಿದ್ದು ಬೆಳಿಗ್ಗೆ ೯-೩೦ ಗಂಟೆಗೆ ಕನ್ನಡ ಪಂಡಿತರ ಶಾಲಾ ಅಧ್ಯಾಪಕರಾದ ಶ್ರೀ ಎಂ ಎಸ್ ಭೀಮಸೇನಾಚಾರ್ಯರು ಸಂಸ್ಕೃತಿ ಪ್ರಚಾರ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಸಾಮ್ರಾಜ್ಯ ಸಂಸ್ಕೃತಿಯ ವೈಭವ ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು ಶ್ರೀ ವಿ ಕೆ. ಶ್ರೀನಿವಾಸರವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ

ಹರಿಕಥಾ ಕಾಲಕ್ಷೇಪ

ರಾಜಧಾನಿಯ ಮಹಿಳಾ ಸದನದ ಸಂಸ್ಥಾಪಕರಾದ ಶ್ರೀ ಎಂ ವಿ ಗೋಪಾಲ ಚಾರ್ಯರ ಸ್ಮಾರಕ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಧಾರ್ಮಿಕ ಕಾಲಕ್ಷೇಪದ ಅಂಗವಾಗಿ ನಾಳೆ ಭಾನುವಾರ ಸಂಜೆ ೫-೩೦ ಘಂಟೆಗೆ ಕುಮಾರಿಯರಾದ ಸುಭದ್ರ ಮತ್ತು ರುಕ್ಮಿಣಿಯವರಿಂದ ಶ್ರೀಮತೀ ಪರಿಣಯ ಎಂಬ ಹರಿಕೀರ್ತನೆಯು ನಡೆಯುವುದು ಮಹಿಳೆಯರೆಲ್ಲರಿಗೂ ಸ್ವಾಗತವಿದೆ

ಭೂದಾನ-ವಿದ್ಯಾದಾನ ಅಧಿಕಾರಿಯ ನೇಮಕ

ಮೈಸೂರು ಟೊಬ್ಯಾಕೊ ಕಂಪೆನಿಯ ಜನರಲ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿರುವ ವ್ಯವಸಾಯ ಇಲಾಖಾ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಎಂ ಎಲ್ ಸುಬ್ಬಣ್ಣನವರನ್ನು ಸಂಸ್ಥಾನದಲ್ಲಿ ಕೈಗೊಳ್ಳಲಾಗಿರುವ ಭೂದಾನ ವಿದ್ಯಾದಾನ ಯೋಜನೆ ಸಂಬಂಧದಲ್ಲಿ ಶಾಲಾ ಭೂಮಿ ಉಪಯೋಗದ ಅಧಿಕಾರಿಯಾಗಿ ನೇಮಿಸಲಾಗಿದೆ ಕೂಡಲೇ ಈ ಆಜ್ಞೆಯು ಜಾರಿಗೆ ಬರುವುದು

ಇಂದಿನಿಂದ ಎಸ್.ಆರ್.ಸಿ. ರದ್ದು

ಸಂಸ್ಥಾನ ಪುನರ್ವಿಂಗಡಣಾ ಸಮಿತಿಯು ಇಂದಿನಿಂದ ರದ್ದಾಗುವುದು. ಸಮಿತಿ ಸದಸ್ಯರಾದ ಫಜಲ್ ಅಲಿ ಮತ್ತು ಸರ್ದಾರ್ ಪಣಿಕ್ಕರ್‌ರವರು ರಜಾ ಮೇಲೆ ಹೋಗುವರು ರಜಾ ಮುಗಿದನಂತರ ಫಜಲ್ ಅಲಿಯವರು ಒರಿಸ್ಸಾ ಗೌರ್ನರರಾಗಿ ಪುನಃ ಹೋಗುವುದಿಲ್ಲ ಪಂಡಿತ ಕುಂಜ್ರುರವರು ರಾಜ್ಯ ಸಭೆಯಲ್ಲಿ ಸದಸ್ಯರಾಗಿರುವರು

ಶಾಂತಿ ಕಾರ್ಯಗಳಿಗೆ ಅಣುವಿನ ಬಳಕೆಗಾಗಿ ಭಾರತಕ್ಕೆ ರಷ್ಯಾ ನೆರವು

ಅಣು ಶಕ್ತಿಯನ್ನು ಶಾಂತಿಯುತ ಕಾರ್ಯಗಳಿಗಾಗಿ ಬಳಸಲು ಭಾರತಕ್ಕೆ ರಷ್ಯದ ವಿಜ್ಞಾನಿಗಳು ಅವಶ್ಯಕವಾದಂತಹ ಎಲ್ಲ ವಿಷಯಗಳನ್ನೂ ತಿಳಿಸಲು ಒಪ್ಪಿರುತ್ತಾರೆ

ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಹಾಸನ ಜಿಲ್ಲಾ ಬಸವಾಪಟ್ಟಣದ ಜಿಲ್ಲಾ ಬೋರ್ಡ್ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ಶನಿವಾರ ವಿಧಾನ ಪರಿಷತ್ತಿನ ಸದಸ್ಯ ಶ್ರೀ ಗೊರೂರು ರಾಮಸ್ವಾಮಿಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಸೇವಾ ದಳದವರಿಂದ ಪ್ರದರ್ಶನವೂ, ಶಾಲಾ ಬಾಲಿಕೆಯರಿಂದ ಪ್ರಾರ್ಥನೆಯೂ ಆದನಂತರ, ಮುಖ್ಯೋಪಾಧ್ಯಾಯರಾದ ಶ್ರೀ ಬಿ ವಿ ಸೂರ್ಯನಾರಾಯಣರಾಯರು ಸ್ವಾಗತ ಭಾಷಣ ಮಾಡಿದರು ವಿವಿಧ ವೇಷ ಪ್ರದರ್ಶನಗಳೂ, ಕಾರ್ಯದರ್ಶಿ ಶ್ರೀ ಜನರಾಯಿಯವರಿಂದ ವರದಿಯೂ ಆದನಂತರ ಅಧ್ಯಕ್ಷರು ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗಿಸಿದರು

ಮಹಾರಾಜಾ ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ॥ ಎಂ ವಿ. ಕೃಷ್ಣರಾಯರು ಮುಖ್ಯ ಭಾಷಣ ಮಾಡಿ, ಅವಿನಾಶವಾದ ಮತ್ತು ಚಿರಂತನವಾದ ಧರ್ಮಕ್ಕೂ ಮೂಢ ನಂಬಿಕೆಗೂ ಇರುವ ಅಂತರವನ್ನು ಚಾರಿತ್ರಿಕ ದೃಷ್ಟಿಯಿಂದ ವಿವರಿಸಿ, ಸನ್ಯಾಸದ ಜೀವನದಲ್ಲಿ ಉಂಟಾಗಿರುವ ವಿರಕ್ತ ಭಾವನೆಯೂ ಸಹ ಭಾರತದ ಪಾರತಂತ್ರಕ್ಕೆ ಒಂದು ಕಾರಣವೆಂದು ತಿಳಿಸಿದರು ಮತ್ತು ಮೂಲಭೂತ ಧರ್ಮಗಳ ಆಧಾರದ ಮೇಲೆ ರಚನಾತ್ಮಕ ಕಾರ್ಯಗಳು ನಡೆಯಬೇಕೆಂದು ಸೂಚಿಸಿದರು

ಅಧ್ಯಕ್ಷರ ಉಪಸಂಹಾರ, ಇಂಗ್ಲೀಷ್ ಹಿಂದಿ, ಕನ್ನಡ ನಾಟಕಗಳು ಮತ್ತು ಶ್ರೀ ಪಿ ಎಸ್ ಸತ್ಯನಾರಾಯಣರವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ರಣಜಿತ್ ಟಾಕೀಸ್

2—12 55 ರಿಂದ · ಪ್ರಾರಂಭ

ಶಕುಂತಲಾ, ಶೇಖರ್ ಮತ್ತು ಮುಮ್ತಾಜ್ ನಟಿಸಿರುವ ಹಿಂದಿ ಚಿತ್ರ

★ ಬಿಂದಿಯಾ ★

(BINDIYA)

ಒಲಂಪಿಯಾ ಟಾಕೀಸ್

1 12 55 ರಿಂದ ಅಮೋಘ ಪ್ರಾರಂಭ

ನವಕೇತನರ

ಹೌಸ್ ನಂ. 44

ಪಾತ್ರ ದೇವ್ ಆನಂದ್, ಕಲ್ಪನಾ ಕಾರ್ತಿಕ್, ಕೆ ಎನ್ ಸಿಂಗ್

— ಬೆಳಗಿನ ಪ್ರದರ್ಶನ —

1-12-55 ರಿಂದ 4 ದಿನಗಳು ಮಾತ್ರ

ಶೀಲಾರಮಣಿ ಮತ್ತು ನರ್ಗೀಸ್ ಅಭಿನಯಿಸಿರುವ

ರೈಲ್ವೆ ಪ್ಲಾಟ್ ಫಾರಂ

ಪೋರ್ಚುಗೀಸರ ಪುನರ್ವಿ[illegible] ದಿನಾಚರಣೆಯಲ್ಲಿ ಗುಂಡಿ[illegible]

ಪೋರ್ಚುಗೀಸರು ಗೋವಾದ ಇತ[illegible] ಬರ್ ಒಂಬತ್ತನೇ ತಾರೀಕು ಗೋವಾವನ್ನು [illegible] ಗೆದ್ದುಕೊಂಡ ಸಂಬಂಧದಲ್ಲಿ ಕಡೆಯತ್ತ[illegible] ಪರ್ವಜಯ ದಿನಾಚರಣೆಯನ್ನು ಪ್ರತಿಭಟ[illegible] ಸ್ತೀಯರು ಕಳೆದ ಶುಕ್ರವಾರ ಆಚರಿಸಿದ "[illegible] ದಿನ" ದಂದು ರಾಷ್ಟ್ರೀಯರ ಮೇಲೆ [illegible] ಗೀಸ್ ಪೊಲೀಸರು ಗುಂಡು ಹಾರಿಸಿದರ[illegible] ಮಧುಕರ್ ಫಲಾರಿ ಎಂಬ ಯುವಕನ [illegible] ಮತ್ತು ಎದೆಗೆ ಗುಂಡುಗಳು ತಗುಲಿದು[illegible] ವರದಿಯಾಗಿದೆ. ೨೦ ಮಂದಿ ರಾಷ್ಟ್ರೀಯ[illegible] ಬಂಧಿಸಲಾಗಿದೆ ಆ ಪೈಕಿ ಪಟ್ಟದ ಕ[illegible] ವರ್ಮ ಎಂಬ ಭಾರತೀಯ ಪ್ರಜೆಯೂ ಇರು[illegible] ಆತನನ್ನು ಪೊಲೀಸರು ಹೊಡೆದು ಕುಂಡರ[illegible] ಳಿಯನ್ನು ಮುರಿದಿರುವರೆಂದು ಹೇಳಲಾಗಿ[illegible] ಬ್ಬ ಮಹಿಳೆಯನ್ನೂ ಬಂಧಿಸಲಾಗಿದೆ

ಮೈಸೂರು ಪೇಟೆ ಧಾರ[illegible]

	ರೂ	ಆಣೆ	ಪೈ	ರೂ [illegible]
ಕಡಲೆಕಾಯಿ	೧೮	೦	೦	೧೯ [illegible]
ಕೊಬ್ಬರಿ	೩೭	೦	೦	
ಹರಳುಬೀಜ	೨೫	೪	೦	
ಹುರುಳಿ	೩೩	೨	೮	೩೪ [illegible]
ತೊಗರಿ	೩೪	೧೦	೦	೩೯ [illegible]
ಹಲಸಂದೆ	೩೦	೦	೦	೨೫ [illegible]
ತೊಗರಿ	೨೪	೧೪	೦	೨೭ [illegible]
ಉದ್ದು	೩೦	೦	೦	
ಸಿಂಗದಬೀಜ	೧೩	೦	೦	೩೩ [illegible]
ಹುಣಸೇಹಣ್ಣು	೨	೧೧	೦	೭ [illegible]
ಸೀಗೆಕಾಯಿ	೫	೧೦	೦	
ಮೆಣಸಿನಕಾಯಿ	೬	೬	೦	೧೩ [illegible]
ತೆಂಗಿನಕಾಯಿ ೧,೧೦೦	೧೪೧	೮	೦	೨೦೭ [illegible]

ರಾಜಕಮಲ್ ಟಾಕೀ[illegible]

ಮೈಸೂರು

2-12-55 ರಿಂದ . ಅಮೋಘ ಪ್ರಾ[illegible]

ದಿನವಹಿ ಮೂರು ಪ್ರದರ್ಶನಗಳು

ಪ್ರಕಾಶ್‌ರವರ ತೆಲುಗು ಚಿತ್ರ

ಅಂತೇ ಕಾವ[illegible]

ಭೂಮಿಕೆ ಜಿ ವರಲಕ್ಷ್ಮಿ, ಜಮುನ, ಲಕ್ಷ್ಮಿಕಾ[illegible] ಶ್ರೀರಾಂ, ಸಿ ಎಸ್ ಆರ್., ಜೋಗರಾ[illegible]

SREE GAYATHI[illegible]

TALKIES

From 2-12-55 · For 3 D[illegible]

Daily 3 Shows

Paramount's funniest comedy pic[illegible]

In Technicolor

WE'RE NO ANGELS

With — Humphrey Bogart

Edited, Printed and Publi[illegible] by A K Nagarajan at Sad[illegible] Press, D.Subbiah Road, Mys[illegible]

ಮೈಸೂರು ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟರ ಕಛೇರಿ, ಲಾಲ್‌ಬಾಗ್, ಬೆಂಗಳೂರು, ತಾ॥ 26ನೇ ನವೆಂಬರ್ 1955

ಪ್ರಕಟಣೆ

ಮೈಸೂರಿನ ಹಲವಾರು ಉದ್ಯಾನವನ ಮತ್ತು ತೋಟಗಳಲ್ಲಿರುವ ಹುಣಸೇ ಫ[illegible] ಮೈಸೂರು ಸರ್ಕಾರಿ ಪಾರ್ಕ್ ಮತ್ತು ಗಾರ್ಡನ್ಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂ[illegible] 1955 ನೇ ಡಿಸೆಂಬರ್ 20 ನೇ ತಾರೀಕು ಬೆಳಿಗ್ಗೆ 10 ಗಂಟೆಗೆ ಬಹಿರಂಗವಾಗಿ ಹ[illegible] ಜು ಹಾಕಲ್ಪಡುವುದೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ ಹ[illegible] ಜು ಮೈಸೂರಿನಲ್ಲಿರುವ ಸರ್ಕಾರಿ ಪಾರ್ಕ್ ಮತ್ತು ಗಾರ್ಡನ್ಸ್ ಅಸಿಸ್ಟೆಂಟ್ ಸೂಪರಿಂ[illegible] ಡೆಂಟರ ಕಛೇರಿಯಲ್ಲಿ ನಡೆಸಲ್ಪಡುವುದು

ಮರಗಳ ವಿವರಗಳು	ಮರಗಳ ಸಂಖ್ಯೆ	ಮರಗಳ ವಿವರಗಳು	ಮರಗಳ ಸಂ[illegible]
ಪಿ ಕೆ ಟಿ ಸ್ಯಾನಟೋರಿಯಂ	1	ಗಾರ್ಡನ್ ಹರ್ಸರಿ	19
ನಿಶಾದ್‌ಬಾಗ್	10	ಕೃಷ್ಣರಾಜೇಂದ್ರ ಆಸ್ಪತ್ರೆ ತೋಟ	2
ಜೂ ಗಾರ್ಡನ್ಸ್	30	ಪಶುವೈದ್ಯ ಶಾಲೆ	1
ವಿಶ್ವವಿದ್ಯಾಲಯ ಕಛೇರಿ ತೋಟ	1	ಕುರುಡ ಮೂಕರ ಶಾಲೆ	2
ಮೆಡಿಕಲ್ ಕಾಲೇಜು ಹಾಸ್ಟೆಲ್	1	ಗೌರ್ನಮೆಂಟ್ ಹೌಸ್	5
ಇಂಡಿಯನ್ ಗೆಸ್ಟ್ ಕ್ವಾರ್ಟರ್ಸ್	1	ಟ್ರೈನಿಂಗ್ ಕಾಲೇಜು	1
ಗಾರ್ಡನ್ ಪಾರ್ಕ್	8	ಫೇರ್ ಲಾನ್	1

ಹೆಚ್ಚಿನ ವಿವರಗಳನ್ನು ಮೈಸೂರು ಸರ್ಕಾರಿ ಪಾರ್ಕ್ ಮತ್ತು ಗಾರ್ಡನ್ಸ್ ಅಸಿಸ್ಟೆ[illegible] ಸೂಪರಿಂಟೆಂಡೆಂಟರಿಂದ ಪಡೆಯಬಹುದು.

ಎಂ. ಹೆಚ್. ಮರಿಗೌಡ, ಸೂಪರಿಂಟೆಂಡೆಂಟು

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ • ೧೪] SADHVI . FRIDAY 2-12-1955 ಮೈಸೂರು ಶುಕ್ರವಾರ ೨-೧೨-೧೯೫೫ [ಸಂಚಿಕೆ : ೦೦೬

ಕರ್ನಾಟಕ ಪ್ರಾಂತ್ಯಕ್ಕೆ ಉಭಯ ಶಾಸನಸಭೆಗಳ ಒಪ್ಪಿಗೆ

ಕರ್ನಾಟಕ ಪ್ರಾಂತ ರಚನೆಗೆ ಉಭಯ ಶಾಸನಸಭೆಗಳ ಸಮ್ಮತಿ

ಕೆಳ ಸಭೆಯಲ್ಲಿ ಹಲವಾರು ಸದಸ್ಯರ ಪ್ರಾಟೆಸ್ಟ್

ಬೆಂಗಳೂರು ೨

ಸಂಯುಕ್ತ ಕರ್ನಾಟಕ ಪ್ರಾಂತ ರಚನೆಯ ಒಪ್ಪಂದಂತೆ ಸೂಚಿಸಲಾಗಿದ್ದ ನಿರ್ಣಯವ ಸಂಸ್ಥಾನದ ಉಭಯ ಶಾಸನ ಸಭೆಗಳು, ನಾಲ್ಕು ಚರ್ಚೆಯನಂತರ, ನೆನ್ನೆ ಅಂಗೀಕರಿಸಿತು. ಮೇಲಿನ ಸಭೆಯಲ್ಲಿ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಆದರೆ ಕೆಳಗಿನ ಸಭೆಯಲ್ಲಿ ಅಭಿಪ್ರಾಯ ಭೇದ ಒಂದಾಗಿ ದಿ ನಿರ್ಣಯದ ಪರವಾಗಿಯೂ ನಸು ವಿರೋಧವಾಗಿಯೂ ಓಟು ಕೊಟ್ಟ ರ್ಕ ಕರ್ನಾಟಕಕ್ಕೆ ವಿರೋಧವನ್ನು ವ್ಯಕ್ತಪಡಿಸಿದ ಹತ್ತು ಮಂದಿ ಕಾಂಗ್ರೆಸ್ ಸದಸ್ಯರು ಏಕೀಕರಣ ಪೂರ್ವಕವಾದ ಅಸ್ತ್ರವನ್ನು ಮಂಡಿಸಲು ತಟಸ್ಥರಾಗಿದ್ದರು.

ಒಗ್ಗೆ ನಡೆದ ಚರ್ಚೆಗೆ ಮುಖ್ಯ ಮಂತ್ರಿಯವರು ಉತ್ತರಗಳತ್ತು ಕರ್ನಾಟಕದ ರಚನೆ ಬಗ್ಗೆ ಸದಸ್ಯರನ್ನು ತಾವು ವೇಗವಾಗಿ ಮುಂದಾಗಿ ಬಳಿನ ಆಶ ವನಗಳನ್ನು ಪ್ರಸ್ತಾಪಿಸಿ ಈ ಮೈ ದೇವರು ಇರುವನೆಂದು ತಪ್ಪ ಭಾವಿಸಿಯಾಗಿಯೂ, ತಾವು ಎಂದಿಗೂ ಯಾರಿಗೂ ಮೋಸ ಮಾಡಿದವರಲ್ಲವೆಂದೂ, ಹೊಸ ಪಾಲಿ ಒಂದು ಕರ್ನಾಟಕ ಅಥವಾ ಕರ್ನಾಟಕಗಳನ್ನು ಮಾಡಿಕೊಡುವುದಾಗಿ ಹೇಳಿಲ್ಲವೆಂದೂ ತಿಳಿಸಿದರು

ನೆನ್ನೆ ಮುಂಚೆ ಶ್ರೀ ಹುಚ್ಚ ಮಾಸ್ತಿಗೌಡರು ಹಿ ಮುಖ್ಯ ಮಂತ್ರಿಯವರು ಜನರ ವಿಶ್ವಾಸವನ್ನು ಕಳೆದುಕೊಂಡು, ತಮ್ಮ ಸ್ಥಾನವ ಬಿಗಿಹಿಡಿದುಕೊಳ್ಳುವುದಕ್ಕಾಗಿ ಈಗ ಹೊಸ ನಾಟಕವನ್ನು ಬೆಳೆಸಲು ಹೊರಟಿರುವುದಾಗಿ ಹೇಳಿ ಸ್ವಸಂಸ್ಥಾನವನ್ನು ಮಿಶ್ರ ಭಾಷಾ ಸಂಸ್ಥಾನವಾಗಿರಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ರಾಜ್ಯ ಪುನರ್ವಿಂಗಡಣೆ ಸಮಿತಿ ವರದಿಯ ಶಿಫಾರಸುಗಳ ಜಾರಿಗೆ ತರಬಾರದೆಂದು ಸೂಚಿಸಿ

ಮತಕ್ಕೆ ತೆಗೆದುಕೊಂಡಾಗ ನಿರ್ಣಯದ ವಿರೋಧಿಗಳಾದ ಬಿ ವಿ ನಾರಾಯಣರೆಡ್ಡಿ, ಗೋವಿಂದರೆಡ್ಡಿ ಮತ್ತು ಎಸ್ ಎಂ ಯರೆಡ್ಡಿಯವರು ಮತವಿತ್ತರು

ತಟಸ್ಥರಾದ ಎಸ್ ಹೆಚ್ ತಮ್ಮಯ್ಯನವರು, ಪಟ್ಟಪ್ಪ ಹೆಚ್ ಕೆ ವೀರಣ್ಣಗೌಡ, ಎಂ ರಾಮಯ್ಯರೆಡ್ಡಿ, ಕೆ ಪುಟ್ಟಸ್ವಾಮಿ, ಬಿ ಚಿ ನವರು, ಜಿ ನಾರಾಯಣಗೌಡ, ಜೆ ಗೌಡ, ಕೆ ಜಿ ತಿಮ್ಮಪ್ಪಗೌಡ, ಡಿ ದೇವರಾಜ ಅರಸ್, ಎಸ್ ಆರ್ ನಾಗಪ್ಪ ವಿ ಎ ಗೋವಿಂದರಾಜುಲು, ಆರ್ ಮುನಿಯಪ್ಪ (ಹರಿಜನ), ಬಿ ಎಂ ಬೋರೇಗೌಡ, ಡಿ ಆರ್ ಕರೀಗೌಡ, ಜಿ ಎ ಗೌಡ, ಎ ವಿ ನರಸಿಂಹರೆಡ್ಡಿ, ಜಿ ಪಾ ಮುನಿಯಪ್ಪ (ಹರಿಜನ), ಜೆ ಕಾರಾ (ಹರಿಜನ) ಎಂ ಹುಚ್ಚಮಾಸ್ತಿಗೌಡ, ಚೆನ್ನಪ್ಪ, ಕೆ ಸಿಂಗಾರಿಗೌಡ, ಎಸ್

ಮೈಸೂರಿನಲ್ಲಿ ಸಂಗೀತದ ಕಾಲೇಜಿನ ಸ್ಥಾಪನೆ

ಪರಿಶೀಲನೆಯಲ್ಲಿರುವುದಾಗಿ ವಿದ್ಯಾ ಮಂತ್ರಿಗಳ ಹೇಳಿಕೆ

ಬೆಂಗಳೂರು ೨

ನೆನ್ನೆ ವಿಧಾನ ಪರಿಷತ್ತಿನಲ್ಲಿ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಶ್ರೀ ಟಿ ತಾ ಪಮ್ಮನವರ ಪ್ರಶ್ನೆಗೆ ಉತ್ತರವಿತ್ತು, ಮೈಸೂರು ನಗರದಲ್ಲಿ ಸಂಗೀತದ ಕಾಲೇಜನ್ನು ಸ್ಥಾಪಿಸುವ ವಿಷಯವು ಪರಿಶೀಲನೆಯಲ್ಲಿರುವುದೆಂದೂ, ಸಂಗೀತದ ಕಾಲೇಜನ್ನು ಸ್ಥಾಪಿಸುವ ಸಂಬಂಧ ವಿದ್ವಾಂಸರ ನೆರವನ್ನು ಪಡೆದುಕೊಳ್ಳಲಾಗುವುದೆಂದೂ ತಿಳಿಸಿದರು. ಈ ನಾ ಹೈ ಸ್ಕೂಲುಗಳಲ್ಲಿ ಸಂಗೀತದ ಉಪಾಧ್ಯಾಯರುಗಳನ್ನು ನೇಮಿಸಲಾಗಿರುವುದೆಂದೂ ಹೇಳಿದರು. ಇದಲ್ಲದೆ ಸಾಂಸ್ಕೃತಿಕ ಸಮಾಜ ಕೇಂದ್ರಗಳಲ್ಲೂ ಆಹ್ವಾನಿತ ಸಂಗೀತ ವಿದ್ವಾಂಸರನ್ನು ನೇಮಿಸಲಾಗಿರುವುದೆಂದೂ, ಸಂಗೀತ ಕಲೆ ಮತ್ತು ಸಂಗೀತಗಾರರ ಅಭಿವೃದ್ಧಿಗಾಗಿ ಸಂಸ್ಥಾನದ ನೃತ್ಯ, ನಾಟಕ ಮತ್ತು ಸಂಗೀತ ಅಕಾಡೆಮಿಯ ಕೃಪೆ ಕೈಗೊಳ್ಳುತ್ತಿರುವರೆಂದೂ ಸಚಿವರು ಹೇಳಿದರು

ದಶವರ್ಷಾಂತ ಸಾಲಗಳು

ಇನ್ನೆರಡು ವರ್ಷಗಳಲ್ಲಿ ಚಲಾವಣೆಗೆ ಬರಲಿರುವ ದಶವರ್ಷಾಂತ ಸಾಲಗಳನ್ನು ಈ ರೀತಿ ಕರೆಯಲಾಗುವುದು: ರೂಪಾಯಿ ನಾಣ್ಯಕ್ಕೆ ರೂಪಾಯಿ ಅಥವಾ ನೂರು ನಯೇ ಪೈಸೆ, ಅರ್ಧ ರೂಪಾಯಿಗೆ ಐವತ್ತು ನಯೇ ಪೈಸೆ, ಪಾವಲಿಗೆ ೨೫ ನಯೇ ಪೈಸೆ, ಇದಲ್ಲದೆ ೧೦ ನಯೇ ಪೈಸೆ, ೫ ನಯೇ ಪೈಸೆ ಮತ್ತು ಒಂದು ನಯಾಪೈಸಾ

ಎಂ ಲಿಂಗಪ್ಪ, ವಿ ವೈ ಹುಲ್ಲೇಗೌಡ, ಆರ್ ಕೆ ಪ್ರಸಾದ್, ಮಾಲಿ ಮರಿಯಪ್ಪ, ಎಸ್ ಕರಿಯಪ್ಪ, ಜಿ ಎಸ್. ಬೊಮ್ಮೇಗೌಡ, ಶಿವನಂಜೇಗೌಡ, ವಿ ಎಂ ಸೀನಪ್ಪ ಮುನಿಸ್ವಾಮಯ್ಯ, ಹೆಚ್ ಕೆ ಸಿದ್ದಯ್ಯ ಮತ್ತು ಶ್ರೀಮತಿ ವಿ ಎಲ್ ಸುಬ್ಬಮ್ಮನವರು ತಟಸ್ಥರಾದವರು

ಅವರುಗಳ ಹೆಸರನ್ನು ಸಭಾ ವರದಿಯಲ್ಲಿ ಸೇರಿಸಲು ಪ್ರಯತ್ನ ನಡೆಯಿತು, ಆದರೆ ಅಧ್ಯಕ್ಷರು ಅನುಮತಿ ಕೊಡಲಿಲ್ಲ

ಹಿರಿಯ ಸಭೆಯಲ್ಲಿ ನಿರ್ಣಯದ ಅಂಗೀಕಾರ

ಕನ್ನಡ ಮಾತನಾಡುವ ಪ್ರದೇಶಗಳು ಒಂದು ಸಂಸ್ಥಾನವಾಗಬೇಕೆಂದು ಸೂಚಿಸಿ ತಂದಿದ್ದ ನಿರ್ಣಯವನ್ನು ವಿಧಾನ ಪರಿಷತ್ತು ಸರ್ವಾನುಮತದಿಂದ ಅಂಗೀಕರಿಸಿತು. ಮೈಸೂರು ಸಂಸ್ಥಾನವು ಈಗಿರುವಂತೆಯೇ ಮುಂದುವರಿಯಬೇಕೆಂದು ಶ್ರೀ ಕೆ ಸಂಜೀವರೆಡ್ಡಿಯವರು ಚರ್ಚೆಯ ಕಾಲದಲ್ಲಿ ಹೇಳಿದರು. ಎಸ್ ಆರ್ ಸಿ ವರದಿಯನ್ನು ೧೫-೨೦ ವರ್ಷಗಳ ವರೆಗೆ ತಳ್ಳಬೇಕೆಂದೂ ಅವರು ಅಭಿಪ್ರಾಯಪಟ್ಟರು. ಶ್ರೀ ಟಿ ಚೌಡಯ್ಯನವರು ಕರ್ನಾಟಕವಾದರೆ ರಾಜಪ್ರಮುಖರ ಸ್ಥಾನಕ್ಕೆ ಧಕ್ಕೆ ಉಂಟಾಗುವುದೆಂದೂ, ಆದ್ದರಿಂದ ಮೈಸೂರು ಈಗ ಇರುವಂತೆಯೇ ಇರಬೇಕೆಂದೂ ತಿಳಿಸಿದರು

ಎ. ಜಿ. ರಾಮಚಂದ್ರರಾಯರ ರಾಜೀನಾಮೆ ಇಲ್ಲ

ಕರ್ನಾಟಕ ಸಂಸ್ಥಾನದ ರಚನೆ ಬಗ್ಗೆ ಓಟಿನಲ್ಲಿ ತಾಟಸ್ಥ್ಯ

ಬೆಂಗಳೂರು ೨

ಕರ್ನಾಟಕ ಪ್ರಾಂತ ರಚನೆ ಬಗ್ಗೆ ನೆನ್ನೆ ವಿಧಾನ ಸಭೆಯಲ್ಲಿ ಮತದಾನ ತೆಗೆದುಕೊಂಡಾಗ, ಮುಖ್ಯ ಮಂತ್ರಿಯವರ ನಿರ್ಣಯದ ಪರವಾಗಿ ಓಟು ನೀಡದೆ ತಟಸ್ಥರಾಗಿದ್ದ ಒಬ್ಬರೇ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು, ಮಂತ್ರಿ ಮಂಡಲದ ಸದಸ್ಯತ್ವಕ್ಕೆ ತಾವು ರಾಜೀನಾಮೆ ಕೊಡುವುದಿಲ್ಲವೆಂದು ತಿಳಿಸಿದ್ದಾರೆ

ಮಂತ್ರಿಮಂಡಲದ ಜಂಟಿ ಜವಾಬ್ದಾರಿಯ ತತ್ವದ ಪ್ರಕಾರ ವಿದ್ಯಾ ಮಂತ್ರಿಯವರು ಮಂತ್ರಿ ಮಂಡಲದ ಇತರ ಸದಸ್ಯರಂತೆ ಓಟು ಕೊಡುತ್ತಾರೆಂದು ನಿರೀಕ್ಷಿಸಲಾಗಿತ್ತೆಂದು ಮುಖ್ಯ ಮಂತ್ರಿಯವರು ತಿಳಿಸಿದ್ದರು. ಆದರೆ ಶ್ರೀ ರಾಮಚಂದ್ರರಾಯರು ಈ ವಿಷಯದಲ್ಲಿ ತಮ್ಮ ಅಂತಃಕರಣ ಪ್ರಶ್ನೆ ಇರುವ ಅಭ್ಯಂತರವಿರುವುದರಿಂದ ಮುಖ್ಯ ಮಂತ್ರಿಯವರ ಸಲಹೆಯಂತೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ್ದಾಗಿಯೂ ಗೊತ್ತಾಗಿದೆ

ಏನೆಂದರೆ ವರ್ತಕರಿಗೆ ತಿಳಿದು ಬಂದಂತೆ ಪ್ರತಿಭಟಿಸುತ್ತಿದ್ದ ಉಳಿದ ಇಬ್ಬರು ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪ ಮತ್ತು ಶ್ರೀ ಟಿ ಚನ್ನಯ್ಯನವರ ಕಡೇ ಘಳಿಗೆಯಲ್ಲಿ ಇತರ ಮಂತ್ರಿಗಳೊಡನೆ ಸೇರಿ ನಿರ್ಣಯದ ಪರವಾಗಿ ಓಟು ನೀಡಿದರು

ಅಮೃತಸರದಲ್ಲಿ ಪುನಃ ಘರ್ಷಣೆ

ಅಮೃತಸರದಲ್ಲಿ ಮೊನ್ನೆ ಪುನಃ ಅಕಾಲಿ ಸಿಕ್ಕರಿಗೂ, ಮಹಾ ಪಂಜಾಬಿ ವಾದಿಗಳಿಗೂ ಘರ್ಷಣೆಯಾಗಿ, ಪೋಲೀಸರು ೩ ಸಲ ಅಶ್ರುವಾಯು ಪ್ರಯೋಗ ನಡೆಸಿದರೆಂದು ವರದಿಯಾಗಿದೆ. ಹಿಂದೆ ನಡೆದ ಘರ್ಷಣೆಯ ಪರಿಣಾಮವಾಗಿ ನಿಷೇಧಿಸಲ್ಪಟ್ಟ ಪ್ರತಾಪಸಿಂಗ್ ಎಂಬವರ ದೇಹವನ್ನು ಮೆರವಣಿಗೆಯಲ್ಲಿ ಸಿಕ್ಕರು ತೆಗೆದುಕೊಂಡು ಹೋಗುತ್ತಿದ್ದಾಗ ಒಂದು ಕಡೆ ಪರಸ್ಪರ ವಿರುದ್ಧ ಘೋಷಣೆಗಳಾಗಿ ಕಲ್ಲುಗಳನ್ನು ಬೀರಲಾಯಿತು. ಸಿಕ್ಕರ ಮೆರವಣಿಗೆಯಲ್ಲಿ ಮಾಸ್ಟರ್ ತಾರಾಸಿಂಗರೂ ಇದ್ದರು. ೧೭ ಜನರಿಗೆ ಗಾಯವಾಗಿದೆ. ಅಲ್ಲಿ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ. ಸಿಕ್ಕರ ಮುಂದಾಳುಗಳಿಗೆ ಹೊರಡುವ ಮುನ್ನ ಮಾಸ್ಟರ್ ತಾರಾಸಿಂಗರು ಶಾಂತಿಯಿಂದ ವರ್ತಿಸುವಂತೆ ಅವರನ್ನು ಕೋರಿದ್ದರು

ಫ್ರಾನ್ಸಿನಲ್ಲಿ ಜನವರಿ ತಿಂಗಳು ಹೊಸ ಚುನಾವಣೆ

ಎಡ್ಗಾರ್ ಫೌರರವರ ಮಂತ್ರಿಮಂಡಲಕ್ಕೆ ಸಭೆಯಲ್ಲಿ ಸೋಲಾದ ಮೇಲೆ ಫ್ರಾನ್ಸಿನ ರಾಷ್ಟ್ರೀಯ ಸಭೆಯನ್ನು ವಿಸರ್ಜಿಸಲೂ ಮತ್ತು ಮಹಾ ಚುನಾವಣೆಗಳನ್ನು ನಡೆಸಲೂ ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ. ಬರುವ ತಿಂಗಳೊಳಗೆ ಚುನಾವಣೆಗಳನ್ನು ನಡೆಸುವಂತೆ ಸರ್ಕಾರವು ಅಧ್ಯಕ್ಷರಿಗೆ ಶಿಫಾರಸು ಮಾಡಿದೆ.

ವಿಧಾನ ಪರಿಷತ್ತಿನಲ್ಲಿ ಸಭಾತ್ಯಾಗದ ಪ್ರಕರಣ

ಮುಖ್ಯಮಂತ್ರಿಯವರ "ಸರ್ವಾಧಿಕಾರ" ನೀತಿಗೆ ಪ್ರತಿಭಟನೆ

ಬೆಂಗಳೂರು ೨

ವಿಧಾನ ಪರಿಷತ್ತಿನಲ್ಲಿ ನೆನ್ನೆ ಸಭಾತ್ಯಾಗದ ಪ್ರಕರಣವೊಂದು ನಡೆಯಿತು. ಶ್ರೀಗಳಾದ ಬಿ ಕೆ ಪುಟ್ಟರಾಮಯ್ಯ, ಶಿವಪ್ಪ, ಕೆ ಸಂಜೀವರೆಡ್ಡಿ, ಮತ್ತು ಎಂ ಪಿ. ಗೋವಿಂದಗೌಡರು ಮುಖ್ಯ ಮಂತ್ರಿಯವರ "ಸರ್ವಾಧಿಕಾರ" ವರ್ತನೆಯನ್ನು ಪ್ರತಿಭಟಿಸಿ ಸಭೆಯಿಂದ ಎದ್ದುಹೋದರು. ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣೆ ಸಮಿತಿ ವರದಿಯ ಚರ್ಚೆ ಮುಗಿದನಂತರ ಮೇಲ್ಕಂಡ ಪ್ರಸಂಗವು ಜರುಗಿತು

ರಂಗೂನಿನಲ್ಲಿ ರಷ್ಯದ ನಾಯಕರು

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೇವರು ನೆನ್ನೆ ಕಲ್ಕತ್ತದಿಂದ ರಂಗೂನಿಗೆ ಪ್ರಯಾಣ ಮಾಡಿದರು. ಬರ್ಮಾದಲ್ಲಿ ಅವರು ೬ ದಿನಗಳ ವರೆಗೆ ಇರುವರು. ಕಲ್ಕತ್ತಾ ಬಿಡುವ ಮುನ್ನ ರಷ್ಯ ಪ್ರಧಾನಿಗೆ ಒಬ್ಬ ಹುಡುಗಿಯು ರಷ್ಯಾ ಮತ್ತು ಭಾರತ ಧ್ವಜಗಳನ್ನು ಕೆತ್ತಿರುವ ಒಂದು ಚಿಂಗಿ ಮತ್ತು ಪತಾಯಿಯ ಸೂಟನ್ನು ಕೊಟ್ಟಳು. ಅವನ್ನು ತಾವು ಸದಾ ಇಟ್ಟುಕೊಳ್ಳುವುದಾಗಿ ಪ್ರಧಾನಿಯವರು ನುಡಿದರು

ರಂಗೂನಿನಲ್ಲಿ ನಾಯಕರಿಗೆ ಅದ್ಭುತ ಸ್ವಾಗತವು ದೊರೆಯಿತು. ವಿಮಾನ ನಿಲ್ದಾಣದಲ್ಲಿ ಅಲ್ಲಿನ ಪ್ರಧಾನಿ ಉ ನೂರವರು ಸ್ವಾಗತಿಸಿದರು. ಅ ಸಮಯ ಉಡುಪುಗಳನ್ನು ಧರಿಸಿ ಆರು ಬರ್ಮಾ ತರುಣೆಯರು ನಾಯಕರಿಬ್ಬರಿಗೂ ಪುಷ್ಪಗಳನ್ನಿತ್ತರು

ಅಣು ಶಸ್ತ್ರಗಳ ಪ್ರಯೋಗಗಳು ನಿಲ್ಲಬೇಕು

ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಭಾರತದ ನಿರ್ಣಯ

ಅಣು ಶಕ್ತಿಯಿಂದ ತಯಾರಿಸುವ ಅಣು ಮತ್ತು ಜಲಜನಕ ಬಾಂಬುಗಳ ಸಿಡಿತವನ್ನು ನಿಲ್ಲಿಸಲು ಸಂಬಂಧಪಟ್ಟ ರಾಷ್ಟ್ರಗಳು ಸಂಧಾನವನ್ನು ಪ್ರಾರಂಭಿಸಬೇಕೆಂದು ಭಾರತವು ವಿಶ್ವ ಸಂಸ್ಥೆಯ ರಾಜಕೀಯ ಸಮಿತಿ ಮುಂದೆ ನೆನ್ನೆ ನಿರ್ಣಯವನ್ನು ಮಂಡಿಸಿತು. ಅಂತರ ರಾಷ್ಟ್ರೀಯ ಶಸ್ತ್ರ ಸನ್ಯಾಸದ ಒಪ್ಪಂದವಾಗುವವರೆಗೆ ಶಸ್ತ್ರಾಸ್ತ್ರ ತಯಾರಿಕೆ ಬಗ್ಗೆ ಮಧ್ಯಕಾಲದ ಒಪ್ಪಂದವಾಗಲು ಶಸ್ತ್ರ ಸನ್ಯಾಸ ಸಮಿತಿಯು ಸೂಚನೆಯಾಗಬೇಕೆಂದೂ ಭಾರತವು ಕೋರಿದೆ

೭ನೇ ತಾ॥ ನಾದಿ ಅರೇಬಿಯದ ದೊರೆಗಳಿಗೆ ಪೌರ ಮಾನಪತ್ರ

ಮೈಸೂರು ೨

ನಗರಕ್ಕೆ ಇದೇ ೭ನೇ ತಾರೀಕು ಬರಲಿರುವ ಸಾದಿ ಅರೇಬಿಯ ದೊರೆ ಇಬ್ನ್ ಸಾವದರಿಗೆ ೭ನೇ ತಾರೀಕು ಬೆಳಿಗ್ಗೆ ೯ ಗಂಟೆಗೆ ಪುರಸಭೆಯವರು ಟೌನ್ ಹಾಲಿನಲ್ಲಿ ಮಾನ ಪತ್ರವನ್ನು ಅರ್ಪಿಸುವರು

ಹೆಂಗಸಿನ ಮಾನಭಂಗ ಯತ್ನಕ್ಕಾಗಿ ಶಿಕ್ಷೆ

ಮೈಸೂರು ೨

ರಾಜಧಾನಿಯ ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಕೂಲಿ ಕೆಲಸ ಮಾಡುತ್ತಿರುವ ರಂಗನಾಥಸ್ವಾಮಿಯ ಪತ್ನಿ ಲಕ್ಷ್ಮಮ್ಮ ಎಂಬಾಕೆಯು ಕಳೆದ ಮೇ ತಿಂಗಳು ೪ನೇ ತಾರೀಕು ಸಂಜೆ ಪ್ರಿನ್ಸೆಸ್ ರಸ್ತೆಯಲ್ಲಿ ಬರುತ್ತಿದ್ದಾಗ ವಾಣಿವಿಲಾಸ ಮೊಹಲ್ಲದ ಬಸವಯ್ಯನ ಮಗ ಸೀತಾರಾಮಯ್ಯ, ದೊಡ್ಡ ತಮ್ಮಯ್ಯನ ಮಗ ಶ್ರೀಕಂಠ, ವಳ್ಳಾಳ ಸಿದ್ದಯ್ಯನ ಮಗ ನಾರಾಯಣ, ಚೌಡಯ್ಯನ ಮಗ ರಾಧಾಕೃಷ್ಣ ಮತ್ತು ನಂಜಯ್ಯನ ಮಗ ಪುಟ್ಟ ಎಂಬುವರು ಆಕೆಯ ಬಗ್ಗೆ ಅವಾಚ್ಯ ಶಬ್ದಗಳನ್ನಾಡಿ ಅವಿವೇಕದಿಂದ ವರ್ತಿಸಿ ಮಾನಭಂಗ ಮಾಡಲೆತ್ನಿಸಿದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರಾದ ಶ್ರೀ ಹೆಚ್. ಆರ್. ಮಹಾಂತಯ್ಯನವರು ಮೊನ್ನೆ ತೀರ್ಪಿತ್ತು, ಮೊದಲನೇ ಅಪರಾಧಿ ಸೀತಾರಾಮಯ್ಯನಿಗೆ ೭೫೦ ರೂ. ಜುಲ್ಮಾನೆ, ತಪ್ಪಿದರೆ ೧ ತಿಂಗಳು ಸಾದಾ ಸಜೆಯನ್ನೂ, ೪ನೇ ಅಪರಾಧಿ ರಾಧಾಕೃಷ್ಣನಿಗೆ ೧ತಿಂಗಳು ಸಾದಾ ಸಜಾ ಮತ್ತು ೩೦೦ ರೂ. ಜುಲ್ಮಾನೆ, ತಪ್ಪಿದರೆ ಇನ್ನೊಂದು ತಿಂಗಳು ಸಜಾವನ್ನೂ ವಿಧಿಸಿ, ಇತರರನ್ನು ಖುಲಾಸೆ ಮಾಡಿರುತ್ತಾರೆ

ಫಿಲೋಮಿನಾ ಕಾಲೇಜು ವಿದ್ಯಾರ್ಥಿಗಳಿಂದ 'ಮಕ್ಕಳ ದಿನಾಚರಣೆ'

ಸೆಂಟ್ ಫಿಲೋಮಿನಾ ಕಾಲೇಜಿನ ಸಮಾಜ ಸೇವಾ ಸಂಘದ ವಿದ್ಯಾಭ್ಯಾಸ ತಂಡದ ಸದಸ್ಯರು ಕಳೆದ ೧೪ನೇ ತಾರೀಕು ಹಾಡಿಯೊಂದರ ಪರಿಸರದಲ್ಲಿ ನೆಹರೂರವರ ಜಯಂತಿ ಅಂಗವಾಗಿ ಮಕ್ಕಳ ದಿನಾಚರಣೆಯನ್ನು ನಡೆಸಿದರು. ಅಲ್ಲಿನ ಜ್ಞಾನ ಶಾಲೆಯೊಂದನ್ನು ತೆರೆಯಲಾಯಿತು ಮಕ್ಕಳಿಗೆ ಆಟಪಾಟ, ವಿಹಾರ, ನೃತ್ಯ ಮತ್ತು ಮಹಿಳೆಯರಿಗೆ ಸೂಜಿದಾರದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು ಜಯಶಾಲಿಗಳಾದವರಿಗೆ ಬಹುಮಾನಗಳನ್ನು ಕೊಡಲಾಯಿತು ಮಕ್ಕಳು ಉತ್ತಮ ಪೋಷಾಕು ಧರಿಸಿದ್ದರು ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಎಸ್. ಕೃಷ್ಣಮೂರ್ತಿಯವರು ದಿನಾಚರಣೆಯ ಮಹತ್ವವನ್ನು ಕುರಿತು ಭಾಷಣ ಮಾಡಿದರು ಸಿಹಿ ತಿಂಡಿ ಮತ್ತು ಹಣ್ಣನ್ನು ಮಕ್ಕಳಿಗೆ ವಿನಿಯೋಗಿಸಲಾಯಿತು ಬಾಣ ಬಿರುಸುಗಳನ್ನು ಏರ್ಪಡಿಸಲಾಗಿತ್ತು

ರಾಮಕೃಷ್ಣ ವಿದ್ಯಾ ಶಾಲಾ ದಿನಾಚರಣೆ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ತೃತೀಯ ಶಾಲಾ ದಿನಾಚರಣೆಯು ಇದೇ ೪ನೇ ತಾರೀಕು ೫.೩೦ ಗಂಟೆಗೆ ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು

ವಿದ್ಯಾವರ್ಧಕ ಪ್ರೌಢಶಾಲಾ ಹಿರಿಯ ವಿದ್ಯಾರ್ಥಿಗಳ ಸಭೆ

ರಾಜಧಾನಿಯ ವಿದ್ಯಾವರ್ಧಕ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿಗಳೆಲ್ಲರೂ ನಾಳೆ ಸಂಜೆ ೫.೩೦ ಗಂಟೆಗೆ ಶಾಲೆಯ ಆವರಣದಲ್ಲಿ ಸಭೆ ಸೇರಬೇಕಾಗಿ ಕಾರ್ಯದರ್ಶಿಗಳು ಕೋರಿರುತ್ತಾರೆ

ಇಂಟರ್‌ಮೀಡಿಯೆಟ್ ಪರೀಕ್ಷಾ ಶುಲ್ಕ ಕಟ್ಟಲು ಅವಧಿ ಹೆಚ್ಚಿಸಬೇಕು

ಇಂಟರ್‌ಮೀಡಿಯೆಟ್ ಪರೀಕ್ಷಾ ಶುಲ್ಕವನ್ನು ಕಟ್ಟಲು ಇದೇ ೬ನೇ ತಾರೀಕು ಕಡೆಯ ದಿನ ಸೌಲಭ್ಯವಿರುವ ಕೆಲವು ವಿದ್ಯಾರ್ಥಿಗಳು ಆ ದಿನದೊಳಗೆ ಕಟ್ಟಲು ಸಾಧ್ಯವಾಗುತ್ತದೆ ಆದರೆ ಬಹುತೇಕವಾಗಿ ಬಡ ವಿದ್ಯಾರ್ಥಿಗಳಿಗೆ ಇದು ಸಾಧ್ಯವಿಲ್ಲ ಏಕೆಂದರೆ ವೇತನ ಪಡೆಯುವ ಬಡ ಉಪಾಧ್ಯಾಯರು ಮುಂಬರುವವರೆಗೆ ಬರುವ ಎರಡು ತಿಂಗಳಿನ ವೇತನ ಹಣವೂ ಸೇರಿಸಿ ಶುಲ್ಕಕ್ಕೆ ಕಟ್ಟಲು ಸಾಲದಾಗುವುದು. ಸಪ್ಲಿಮೆಂಟರಿ ಫಲಿತಾಂಶಗಳನ್ನು ಕಳೆದ ೧೦ನೇ ತಾರೀಕು ಪ್ರಕಟಿಸಿದುದೂ ಸಹ ಮತ್ತೊಂದು ತೊಂದರೆಯಾಗಿದೆ ಈ ಅಲ್ಪ ಅವಧಿಯಲ್ಲಿ ಬಡ ವಿದ್ಯಾರ್ಥಿಗಳು ಹಣವನ್ನು ಹೊಂದಿಸಿಕೊಳ್ಳಲು ಸಾಧ್ಯವಾಗಿಲ್ಲ ಆದ್ದರಿಂದ ವಿಶ್ವವಿದ್ಯಾಲಯದ ಅಧಿಕಾರಿಗಳು ಈ ಅವಧಿಯನ್ನು ಸ್ವಲ್ಪ ಕಾಲವಾದರೂ ಹೆಚ್ಚಿಸಬೇಕು-ಎಂಬುದಾಗಿ ಹಲವರು ವಿದ್ಯಾರ್ಥಿಗಳು ಪತ್ರ ಬರೆದು ಪ್ರಾರ್ಥಿಸಿದ್ದಾರೆ.

ನಗರದ ಬಸ್ಸು ಹರಿದು ಸೈಕಲ್ಲಿಗೆ ಜಖಂ

ಕಾಲೇಜು ನೌಕರರೊಬ್ಬರಿಗೆ ಗಾಯ

ಮೈಸೂರು ೨

ಕಳೆದ ೨೮ನೇ ತಾರೀಕು ರೈಲ್ವೆ ನಿಲ್ದಾಣದ ಬಳಿ ನಂಜನಗೂಡು ಕಡೆ ಹೋಗುವ ಮಾರ್ಗದಲ್ಲಿರುವ ಅಂಡರ್ ಬ್ರಿಡ್ಜ್ ಸಮೀಪದಲ್ಲಿ ನಗರದ ಸರ್ಕಾರಿ ಬಸ್ಸು (ನಂ. ೪೮೯೬) ಹರಿದು, ಯುವರಾಜಾ ಕಾಲೇಜಿನಲ್ಲಿ ಗುಮಾಸ್ತರಾಗಿರುವ ಶ್ರೀ ಕೆ ಎಸ್ ನಾರಾಯಣರಾಯರಿಗೆ ಮೈ ಕೈಕಾಲುಗಳ ಮೇಲೆ ತುಂಬಾ ಗಾಯಗಳಾದುವೆಂದೂ, ಅವರ ಸೈಕಲ್ಲು ಮುರಿಯಿತೆಂದೂ ವರದಿಯಾಗಿದೆ ಶ್ರೀ ನಾರಾಯಣರಾಯರು ಒಂಟಿಕೊಪ್ಪಲಿನಿಂದ ಬರುತ್ತಿದ್ದಾಗ ಅಂಡರ್ ಬ್ರಿಜ್ ಇಳಿಜಾರಿನಲ್ಲಿ ಹಿಂದುಗಡೆಯಿಂದ ಬಂದ ಬಸ್ಸು ಸೈಕಲ್ಲನ್ನು ಸುಮಾರು ೫೦ ಅಡಿ ದೂರ ತಳ್ಳಿಕೊಂಡು ಹೋಯಿತೆಂದೂ, ನಂತರ ಸೈಕಲ್ಲು ಮುರಿಯಿತೆಂದೂ, ಗುಮಾಸ್ತರು ಕೆಳಗೆ ಬಿದ್ದರೆಂದೂ ಹೇಳಲಾಗಿದೆ. ಅವರಿಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತು ಟ್ರಾಫಿಕ್ ಪೋಲೀಸರು ಸೈಕಲ್ಲನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿರುವರು

ಗೋವಾದಲ್ಲಿ ಇದುವರೆಗೆ ೧೭೦ ಭಾರತೀಯರ ಬಂಧನ

ಪೋರ್ಚುಗೀಸರ ಪ್ರದೇಶವನ್ನು ಪ್ರವೇಶಿಸಿದುದಕ್ಕಾಗಿ ಕಳೆದ ೭ ತಿಂಗಳಲ್ಲಿ ೧೭೦ ಜನರನ್ನು ಅಲ್ಲಿನ ಅಧಿಕಾರಿಗಳು ಬಂಧಿಸಿರುವುದಾಗಿ ಹೊರದೇಶ ವ್ಯವಹಾರಗಳ ಉಪಮಂತ್ರಿ ಎ ಕೆ ಚಂದಾರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ ಶಿಕ್ಷೆಗೆ ಒಳಗಾದ ಭಾರತೀಯರ ಬಗ್ಗೆ ಭಾರತ ಸರ್ಕಾರದವರು ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ಅವರು ಹೇಳಿರುವರು ಭಾರತೀಯ ಖೈದಿಗಳ ಹಿತವನ್ನು ಗೋವಾದಲ್ಲಿರುವ ಬ್ರೆಜಿಲ್ ಅಧಿಕಾರಿಗಳು ನೋಡಿಕೊಳ್ಳುತ್ತಿರುವುದಾಗಿಯೂ ನುಡಿಯಲಾಯಿತು

ಚೀಣದಲ್ಲಿ ೭೦೦ ಮಂದಿ ಜಪಾನ್ ಯುದ್ಧ ಖೈದಿಗಳ ಖುಲಾಸೆ

ಸದ್ಯದಲ್ಲೇ ಚೀಣಾ ಸರ್ಕಾರದವರು ಬಂಧನದಲ್ಲಿರುವ ೭೦೦ ಮಂದಿ ಜಪಾನ್ ಯುದ್ಧ ಖೈದಿಗಳನ್ನು ಖುಲಾಸೆ ಮಾಡಲಿರುವರೆಂದು ಜಪಾನಿನ ಮಾಜಿ ಪ್ರಧಾನಿ ಟೆಟ್ಸು ಕಟಯಾಮಾರವರು ತಿಳಿಸಿರುತ್ತಾರೆ ಚೀಣದ ಅಧ್ಯಕ್ಷ ಮಾವೊತ್ಸೆ ಟುಂಗರು ೧,೦೬೯ ಜಪಾನ್ ಖೈದಿಗಳನ್ನು ಬಿಡುವುದಾಗಿ ತಿಳಿಸಿದುವರೆಂದು ಅವರು ಹೇಳಿರುತ್ತಾರೆ. ಜಪಾನ್ ಸರ್ಕಾರಕ್ಕೆ ಈ ಬಗ್ಗೆ ಏನೂ ತಿಳಿದುಬಂದಿಲ್ಲ

ರೈಲು ದೀಪದ ಡೈನಮೊ ತಯಾರಿಕಾ ಕಾರ್ಖಾನೆ

ಕಲ್ಕತ್ತದಲ್ಲಿ ಖಾಸಗೀ ಸಂಸ್ಥೆಯೊಂದು ರೈಲು ದೀಪಗಳ ಡೈನಮೊ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲಿದೆ. ತಯಾರಿಸಲ್ಪಡುವ ವಸ್ತುಗಳಲ್ಲಿ ಒಂದು ಭಾಗವನ್ನು ಭಾರತ ಸರ್ಕಾರದವರು ಕೊಳ್ಳಲಿರುವರು ದೇಶದಲ್ಲೇ ಉತ್ಪತ್ತಿಯಾಗುವ ವಸ್ತುಗಳಿಗೆ ಉತ್ತೇಜನ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆ

ರಷ್ಯದ ನಾಯಕರಿಗೆ ಬಹುಮಾನಗಳ ದಿನವಹಿ ಸಾಗಾಣಿಕೆ

ಭಾರತದಲ್ಲಿ ಪ್ರವಾಸ ಕೈಗೊಂಡ ರಷ್ಯದ ನಾಯಕರಿಗೆ ಕೊಡಲಾದ ಬಹುಮಾನಗಳನ್ನು ನಿತ್ಯವೂ ಒಂದು ರಷ್ಯದ ವಿಮಾನದಲ್ಲಿ ಮಾಸ್ಕೊ ನಗರಕ್ಕೆ ಕಳುಹಲಾಗುತ್ತಿದೆ. ಈ ವಿಮಾನವು ನಾಯಕರ ಟಪಾಲು ಮತ್ತು ವರ್ತಮಾನ ಪತ್ರಿಕೆಗಳನ್ನು ದಿನವಹಿ ಮಾಸ್ಕೊವಿನಿಂದ ತರುವುದು ಉತ್ತರ ಪ್ರದೇಶ ಪ್ರಾಂತಕ್ಕೆ ಅವರು ಭೇಟಿಯಿತ್ತಿದ್ದಾಗ ಬರೈಲಿಯಲ್ಲಿ ಒಂದು ಹುಲಿ ಮರಿಯನ್ನು ಬುಲ್ಗಾನಿನ್ನರಿಗೆ ಕೊಡಲಾಗಿತ್ತು ಬೊಂಬಾಯಿ ಸರ್ಕಾರದವರು ಸುಂದರವಾಗಿ ಅಲಂಕರಿಸಿದ ಸೋಫಾ ಸೂಟನ್ನು ನಾಯಕರುಗಳಿಗೆ ಕೊಟ್ಟಿದ್ದರು

ಗೋವಾ ಬಿಡುವುದಿಲ್ಲವೆಂದು ಪೋರ್ಚುಗೀಸ್ ಮಂತ್ರಿ ಹೇಳಿಕೆ

ಅಮೆರಿಕಕ್ಕೆ ತೆರಳಿರುವ ಪೋರ್ಚುಗೀಸ್ ವಿದೇಶಾಂಗ ಮಂತ್ರಿ ಡಾ|| ಕುನ್ಹಾರವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ ಭಾರತದಲ್ಲಿರುವ ತಮ್ಮ ವಸಾಹತುಗಳನ್ನು ಪೋರ್ಚುಗೀಸರು ಬಿಟ್ಟುಬಿಡುವ ಯೋಚನೆಯನ್ನು ಹೊಂದಿಲ್ಲವೆಂದು ತಿಳಿಸಿರುತ್ತಾರೆ ಪೋರ್ಚುಗೀಸರು ಈ ಬಗ್ಗೆ ತಾಳಿರುವ ದೃಢ ನೀತಿಯನ್ನೇ ಇತರ ಪಶ್ಚಿಮ ರಾಷ್ಟ್ರಗಳೂ ಹೊಂದಬೇಕೆಂದೂ, ಭಾರತದಲ್ಲಿ ಪೋರ್ಚುಗೀಸರು ಇರುವುದರಿಂದ ಪಶ್ಚಿಮ ರಾಷ್ಟ್ರಗಳ ಹಿತಸಾಧನೆಯಾಗುವುದೆಂದೂ ಅವರು ಹೇಳಿರುವರು ಬುಲ್ಗಾನಿನ್ನರು ಗೋವಾ ಬಗ್ಗೆ ಮಾಡಿದ ಟೀಕೆಗಳನ್ನು ಪ್ರಸ್ತಾಪಿಸಿ, ರಷ್ಯವು ಅನೇಕ ರಾಷ್ಟ್ರಗಳನ್ನು ದಾಸ್ಯವೃತ್ತಿಯಲ್ಲಿಟ್ಟಿರುವುದೆಂದೂ, ಆದ್ದರಿಂದ ನಾಗರಿಕತೆ ಬಗ್ಗೆ ಬುಲ್ಗಾನಿನ್ನರು ಮಾತನಾಡಲು ಹೊರಡುವುದು ಅಸಂಬದ್ಧವೆಂದೂ ತಿಳಿಸಿರುವರು. ಈ ಪತ್ರಿಕಾ ಸಮ್ಮೇಳನದಲ್ಲಿ ಭಾರತೀಯ ಪತ್ರಿಕೋದ್ಯಮಿಗಳಿಗೆ ಅವಕಾಶವಿರಲಿಲ್ಲ

ಲೋಕ ಸಭೆಯಲ್ಲಿ ಸರ್ಕಾರದ ನಿರ್ಣಯಕ್ಕೆ ಅಂಗೀಕಾರ ಸಿಗಲಿಲ್ಲ

ಪ್ರಾಂತಗಳ ಪುನರ್ವಿಂಗಡಣೆ ಬಗ್ಗೆ ಸಮಿತಿಯವರ ಶಿಫಾರಸಿನ ಮೇಲೆ ಸಂಸತ್ತಿನ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಲು ಕಾಲಮಿತಿಯನ್ನು ನಿಗದಿ ಮಾಡಲು ಮಂಡಿಸಲಾಗಿದ್ದ ರಾಜ್ಯಾಂಗದ ಐದನೇ ತಿದ್ದುಪಡಿ ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಬೇಕೆಂಬ ಸೂಚನೆಗೆ ಸಾಕಷ್ಟು ಬೆಂಬಲ ದೊರೆಯದೆ ಅದು ಅಂಗೀಕಾರವಾಗಲಿಲ್ಲ ಲೋಕ ಸಭೆಯ ಸದಸ್ಯರ ಸಂಖ್ಯೆಗೆ ಕೋರಮ್ ಗುಣವಾದನ್ನು ಮಂದಿ ಸಭೆಯಲ್ಲಿರದಿದ್ದುದೇ ಇದಕ್ಕೆ ಕಾರಣ

ಶತಮಾನೋತ್ಸವದ ದಿನ ಬಾಲ್ಯ ಸ್ನೇಹಿತಳೊಡನೆ ವಿವಾಹ

ನೇಪಲ್ಸ್ ನಗರದ ಬಳಿ ಪ್ರಿಯಾನೊ ಎಂಬ ಹಳ್ಳಿಯಲ್ಲಿರುವ ಕ್ರೈಸ್ತ ದೇವಾಲಯದ ಸೇವಕನಾಗಿಯಾನ್ನಿ ರೂಚೊ ಎಂಬ ೯೯ ವರ್ಷದವನು ತನ್ನ ಶತಮಾನೋತ್ಸವದ ದಿನ, ಬಾಲ್ಯದಿಂದಲೂ ತನ್ನ ಸ್ನೇಹಿತಳಾಗಿರುವ ಮೇರಿಯಾ ಮಡೋಲಾ ಎಂಬಾಕೆಯನ್ನು ವಿವಾಹವಾಗಲಿರುವನು ಆಕೆಗೆ ಈಗ ೭೦ ವರ್ಷ ವಯಸ್ಸಾಗಿದೆ ಅವನನ್ನು ವರಿಸಲು ಆಕೆಯು ಇನ್ನೊಂದು ವರ್ಷ ಕಾಯಲು ಸಿದ್ಧವಾಗಿದ್ದಾಳೆ.

ಬೆಂಗಳೂರು ರೇಡಿಯೋವಿನ ಸಂಗೀತ ಕಾರ್ಯಕ್ರಮದ ಅಧಿಕಾರಿಗಳು

ವೈಣಿಕ ವಿದ್ವಾನ್ ಶ್ರೀ ವಿ ದೊರೆಸ್ವಾಮಿ ಅಯ್ಯಂಗಾರ್ಯರನ್ನು ೪೫೦ ರೂ ತಲಬಿನ ಮೇಲೆ ಬೆಂಗಳೂರು ರೇಡಿಯೋ ಸಂಗೀತ ಕಾರ್ಯಕ್ರಮದ ನಿರ್ವಾಹಕರಾಗಿ ನೇಮಿಸಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಡಿಸೆಂಬರ್ ೩ ಜಿ ಎಸ್ ಅಂಡೇಶ ಪಟವರ್ಧನರು ೭.೩೦ ಸಂಗೀತ ೮.೧೫ ಜಿ ಎಸ್. ಆದಿಶೇಷ ಕನ್ನಡ ಗೀತೆಗಳು ಮಧ್ಯಾಹ್ನ ೧೨ ೩. ಟಿ. ಶ್ರೀನಿವಾಸಮೂರ್ತಿ-ಕೊಳಲು ೧೨.೪೦ ರಿಕಾರ್ಡು, ೧ ಬಾಲಜನರ-ಮಕ್ಕಳ ಕಾರ್ಯಕ್ರಮ. ೧.೩೦ ಮುಖ ನೀಡೆ ಸಂಜೆ ೫.೪೫ ಸಂಗೀತ ೬.೧೫ ವಚನ ಗಾನ ೭.೪೦ ವಿಜ್ಞಾನದ ಮುನ್ನಡೆ ೩ ಶ್ರೀನಿವಾಸರಾವ್ ಭಾಷಣ ೮ ಮಹಿಳೆಯರಿಗಾಗಿ ಕಥಾ ಕಾಲಕ್ಷೇಪ ಟಿ ವಿ ಗೋಪಿನಾಥದಾಸರವರಿಂದ ೯-೧೫ ಕನ್ನಡ ಸಣ್ಣ ಕಥೆ. ೯-೪೦ ರಾಷ್ಟ್ರೀಯ ಕಾರ್ಯಕ್ರಮ ಕೃಷ್ಣರಾವ್ ಮತ್ತು ದೇವೇಂದ್ರ ಠಾಕೂರ್ ಸಂಗೀತ ವಿಷಲಿ ಪುನಃಪ್ರಸಾರ.

ಚಾ ಮುಂ ಡೇ ಶ್ವ ರಿ

ಟಾಕೀಸ್

2 12 55 ರಿಂದ : ಯಶಸ್ವೀ 2ನೇ ವಾರ

ಪ್ರತಿದಿನ ಮೂರು ಪ್ರದರ್ಶನಗಳು

ಮೈರಾಜ್ ಫಿಲಂಸ್‌ರವರ ಮಹೋನ್ನತ ಕನ್ನಡ ಪೌರಾಣಿಕ ಚಿತ್ರ

ಭಕ್ತ ಮಲ್ಲಿಕಾರ್ಜುನ

ಪಾತ್ರ – ಪಂಢರಿಬಾಯಿ, ಅಶ್ವತ್ಥ್, ರಾಘವೇಂದ್ರರಾವ್, ಬಾಲಕೃಷ್ಣ

ತುರ್ಕಿಯ ಮಂತ್ರಿಮಂಡಲದಲ್ಲಿ ಬಿಕ್ಕಟ್ಟು

ತುರ್ಕಿಯ ಮಂತ್ರಿಗಳೆಲ್ಲರೂ ರಾಜೀನಾಮೆ ಸಲ್ಲಿಸಿರುತ್ತಾರೆ ಅಲ್ಲಿನ ಆಡಳಿತ ಪಕ್ಷವಾದ ಡೆಮೊಕ್ರಾಟಿಕ್ ಪಾರ್ಲಿಮೆಂಟರಿ ಪಕ್ಷದಲ್ಲಿ ಗೊಂದಲವು ನಡೆದು ರಾಜೀನಾಮೆಗಳಾದುವು ಪ್ರಧಾನಿ ಅಡ್ನಾನ್ ಮೆಂಡೆರೆಸ್‌ರವರು ಹೊಸ ಮಂತ್ರಿಗಳನ್ನು ನೇಮಕ ಮಾಡಿಕೊಳ್ಳಲಿರುವರು

ಚಲನ ಚಿತ್ರಗಳಿಗೆ ಬಹುಮಾನ

ದೆಹಲಿಯಲ್ಲಿರುವ ಸಂಗೀತ ನಾಟಕ ಅಕಾಡೆಮಿಯವರು ನೃತ್ಯ, ನಾಟಕ ಮತ್ತು ಸಂಗೀತಗಳಿಗೆ ಕೊಟ್ಟಿರುವಂತೆ ಉತ್ತಮ ಚಲನಚಿತ್ರಗಳಿಗೂ ಪ್ರತಿ ವರ್ಷ ಬಹುಮಾನ ಕೊಡಲು ನಿರ್ಧರಿಸಿರುತ್ತಾರೆ. ಬರುವ ಮಾರ್ಚಿಯಲ್ಲಿ ಇತರ ಬಹುಮಾನಗಳನ್ನೀಯುವಾಗ ಎರಡು ಫಿಲಂ ಬಹುಮಾನಗಳನ್ನು ಅತ್ಯುತ್ತಮ ಫೀಚರ್ ಫಿಲಂ ಡೈರೆಕ್ಟರ್ ಅಥವಾ ತಯಾರಕರಿಗೂ, ಅತ್ಯುತ್ತಮ ನಟ ಅಥವಾ ನಟಿಗೂ ಕೊಡಲಾಗುವುವು.

ಭಾರತದ ಸಂಸ್ಥೆಗಳಿಗೆ ಇಬ್ನ್‌ಸಾದರ ಧನ ಸಹಾಯ

ಸಾದಿ ಅರೇಬಿಯಾ ದೊರೆ ಇಬ್ನ್‌ಸಾದರು ಭಾರತದ ಪ್ರಧಾನಿಯವರ ಪರಿಹಾರ ನಿಧಿಗೆ ೧ ಲಕ್ಷ ರೂ ಗಳನ್ನು ಕೊಟ್ಟಿರುತ್ತಾರೆ ದೆಹಲಿಯ ಜುಮ್ಮಾ ಮಸೀದಿ, ಲಕ್ನೋವಿನ ನದ್ವತ್ ಉಲ್ ಉಲೇಮಾ, ಅಖಿಲ ಭಾರತ ಅಹ್ಲೆ ಹಾಡೀಸ್ ಸಮ್ಮೇಳನ, ದೇವಬಂದ್ ನಗರದ ದಾರುಲ್ ಉಲೂಂ ಸಂಸ್ಥೆಗಳಿಗೆ ತಲಾ ೨೫,೦೦೦ ರೂ ಗಳನ್ನು ಕೊಟ್ಟಿರುವರು

ಕೂದಲುಗಳಿಂದ ಮಾಡಿದ ಶಾಂತಿ ವಿಗ್ರಹ

ಜಗತ್ತಿನ ಶಾಂತಿ ಸೂಚಕ ಮೂರ್ತಿಯೊಂದನ್ನು ಟೋಕಿಯೊದಲ್ಲಿ ನಿರ್ಮಿಸಲಾಗಿದೆ. ಜಪಾನ್ ಮತ್ತು ಭಾರತದ ೧,೮೯,೦೦೦ ಜನ ನಾಯಕರ ತಲೆ ಕೂದಲುಗಳಿಂದ ಅದನ್ನು ತಯಾರಿಸಲಾಗಿದೆ ನೆಹರೂರವರ ಕೂದಲೂ ಅದರಲ್ಲಿ ಸೇರಿದೆ. ಜಪಾನಿನ ಬೌದ್ಧರು ತಮ್ಮ ಶಾಂತಿ ಪ್ರಿಯತೆಯನ್ನು ತೋರಲು ಅದನ್ನು ಮಾಡಿಸಿದ್ದಾರೆ.

ಸಾದಿ ಅರೇಬಿಯಕ್ಕೆ ನೆಹರೂ ಭೇಟಿ

ಸಾದಿ ಅರೇಬಿಯಕ್ಕೆ ಭೇಟಿಯಾಗಬೇಕೆಂದು ಅಲ್ಲಿನ ದೊರೆ ಇಬ್ನ್‌ಸಾದರು ಕೊಟ್ಟ ಆಹ್ವಾನವನ್ನು ನೆಹರೂರವರು ಅಂಗೀಕರಿಸಿರುತ್ತಾರೆ ದೊರೆಯು ಜೆಡ್ಡಾ ನಗರಕ್ಕೆ ಹಿಂದಿರುಗಿದನಂತರ ನೆಹರೂರವರ ಭೇಟಿ ದಿನವನ್ನು ಗೊತ್ತುಪಡಿಸಲಾಗುವುದು

ಮೈಸೂರು ಪೇಟೆ ಧಾರಣೆ

	ರೂ	ಅಂದೆ	ರೂ	ವರೆ
ಕಡಲೆಕಾಯಿ	೧೨	೨ ೦	೧೪	೮
ಹರಳುಬೀಜ	೨೫	೨ ೦		
ಹುರುಳಿ	೨೯	೦ ೦	೩೩	
ಹೆಸರು	೩೧	೬ ೦	೪೦	
ಹಲಸಂದೆ	೩೪	೦ ೦	೪೯	೦
ತೊಗರಿ	೨೫	೪ ೦	೩೫	೨
ಉದ್ದು	೪೬	೦ ೦	೫೪	೦
ಕಡಲೆಬೇಳೆ	೧೮	೨ ೦	೨೯	೧೯
ಧನಿಯ	೪೨	೦ ೮		
ಹುಣಸೇಹಣ್ಣು	೨	೧೩ ೦		
ಮೆಣಸಿನಕಾಯಿ	೬	೦ ೦	೧೬	
ತೆಂಗಿನಕಾಯಿ ೧,೦೦೦	೧೩೩	೮ ೦	೨೦೮	

ಶ್ರೀ ಗಣೇಶ್ ಟಾಕೀಸ್

೨-೧೨-೫೫ ರಿಂದ ಅಮೋಘ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ದಿ ಮ್ಯಾರ್ ಫ್ರಂ — — ಲಾರಮಿ

(ಸಿನಿಮಾಸ್ಕೋಪ್-ಟೆಕ್ನಿಕಲರ್)

ಮುಖ್ಯ ಪಾತ್ರ — ಜೇಂಸ್ ಸ್ಟುವರ್ಟ್, ಆರ್ಥರ್ ಕೆನಡಿ, ಅಲೆಕ್ಸ್ ನಿಕೋಲ್ ಮತ್ತು ಡೊನಾಲ್ಡ್ ಕ್ರಿಸ್ಪ್

Edited, Printed and Published by A. R. Nagarajan at Sadhvi Press, D Subbiah Road, Mysore

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಈ ದಿನದ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೦] SADHVI : SATURDAY 3-12-1955 ಮೈಸೂರು ಶನಿವಾರ ೩-೧೨-೧೯೫೫ [ಸಂಚಿಕೆ : ೧೮೯

ಅಫ್ಘಾನಿಸ್ತಾನದ ಯುದ್ಧಮಂತ್ರಿ ವಜಾ ಮತ್ತು ಬಂಧನ?

ಗೋವಾದಲ್ಲಿ ಭಾರಿ ವಿಮೋಚನಾ ಚಳುವಳಿ

ಗೋವಾ ಆಜಾದ್ ಗೋಮಾಂತಕ ದಳದ ... ರಾದ ಏ ಎಲ್. ಲಾವಂಡೆಯವರು ... ಯಲ್ಲಿ ಹೇಳಿಕೆಯೊಂದನ್ನಿತ್ತು, ... ಗೋವಾದಲ್ಲಿ ಸಾಮೂಹಿಕ ಪ್ರದರ್ಶನ ಮತ್ತು ಕಂದಾಯ ನಿರಾಕರಣೆ ಚಳುವಳಿ ... ಆರಂಭಿಸಲಾಗುವುದೆಂದು ತಿಳಿಸಿರುತ್ತಾ... ಈ ಸಪ್ತಾಹದಲ್ಲಿ ೬೦೦ ಮಂದಿ ಅಜ್ಞಾತ ... ಗಾರರೂ, ೩,೦೦೦ ಇತರರೂ ಇರುವ... ಗೊತ್ತಾಗಿದೆ ಗೋವಾದಲ್ಲಿ ಪೋರ್ಚುಗೀಸರ ಅಧಿಕಾರ ನಡೆಸಲು ಅಶಕ್ತರಾಗು... ಮಾಡಲಾಗುವುದೆಂದು ಹೇಳಲಾಗಿದೆ ಈ ... ವಲ್ಲಿ ನಿರಾಶ್ರಿತರಾದ ೩,೦೦೦ ಗೋವಾ ... ಸೇರುವರು

... ಆಗಸ್ಟ್ ೧೫ ರಿಂದ ಗೋವಾದಲ್ಲಿ ಚ... ಯು ಹೊರಗಡೆ ಕಾಣಬರದಿದ್ದರೂ, ಅದು ... ರಂಗವಾಗಿ ಬೆಳೆಯುತ್ತಿದೆಯೆಂದು ಲಾವಂ... ಡೆಯವರು ಹೇಳಿರುವರು ಗೋವಾ ಜನರ ಪ್ರತಿ... ಯು ಹೆಚ್ಚುತ್ತಿರುವುದನ್ನು ಕಂಡು, ಪೋರ್ಚುಗೀಸ್ ಅಧಿಕಾರಿಗಳು ಅಲ್ಲಿಗೆ ೧೨-೧೪ ಸಾ... ಸೈನಿಕರನ್ನು ಕರೆಸಲಿರುವರೆಂದೂ ... ಲಾಗಿದೆ

ಈ ದಿನ ರಾಷ್ಟ್ರಾಧ್ಯಕ್ಷರಿಗೆ ೭೧ ವರ್ಷ ತುಂಬುವುದು

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರಿಗೆ ... ವರ್ಷ ತುಂಬುವುದು. ಆ ಸಂಬಂಧ... ಗಿ ದೆಹಲಿಯ ರಾಷ್ಟ್ರಪತಿ ಭವನದಲ್ಲಿ ವಿಶೇಷ ... ವಾಗಿ, ರಾಷ್ಟ್ರಾಧ್ಯಕ್ಷರು ಸೆಲ್ಯೂಟ್ ಸ್ವೀಕರಿಸುವ ಕಾರ್ಯಕ್ರಮವಿದ್ದು ಮಧ್ಯಾಹ್ನ ... ರ ಗೌರವಾರ್ಥವಾಗಿ ನೆಹರೂರವರು ... ಕೂಟವನ್ನು ಏರ್ಪಡಿಸಿದ್ದಾರೆ ದೆಹಲಿ ... ಬಾಲಕ ಬಾಲಕಿಯ... ರಾಷ್ಟ್ರಾಧ್ಯಕ್ಷರು ವಿತರಿಸುವರು

ಮಹಾರಾಜಾ ಹೈಸ್ಕೂಲಿನಲ್ಲಿ ಭಾರತ ಸಮಾಜ ಶಿಕ್ಷಣ ವಾರ

... ಮಹಾರಾಜಾ ಹೈಸ್ಕೂಲಿನಲ್ಲಿ ಸಮಾಜ ಶಿಕ್ಷಣ ವಾರವನ್ನು ಮುಖ್ಯೋಪಾಧ್ಯಾಯರಾದ ಶ್ರೀ ಕೆ ಎಸ್ ರಾಜಯ್ಯಂಗಾರ್ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ... ರ ಸಮಿತಿಯ ಪ್ರಾಂತ್ಯಾಧಿಕಾರಿಗಳಾದ ಶ್ರೀ ಕೆ ಎಸ್ ಮುನಿಸ್ವಾಮಿಯವರು ... ರಾದ ಭಾಷಣ ಮಾಡಿದರು ಈ ... ದಲ್ಲಿ ಕೆಲವು ಚಲನಚಿತ್ರಗಳನ್ನೂ ... ಸಲಾಯಿತು ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ವ್ಯಾಸಂಗವಾದ ಮೇಲೆ ತನ್ನ ... ಗೆ ಸಮಾಜ ಸೇವೆ ಮತ್ತು ಅಕ್ಷರ ಪ್ರಚಾರ ಮಾಡಿದರೆ ದೇಶವು ಉತ್ತಮಗೊಳ್ಳುವುದೆಂದು ... ಉಪನ್ಯಾಸಕರು ಹೇಳಿದರು. ಬರೀ ಪದವಿ ... ಪಡೆದರೆ ದೇಶದ ಸ್ಥಿತಿಯು ಅಭಿವೃದ್ಧಿ ... ಹೊಂದುವುದಿಲ್ಲವೆಂದು ಹೇಳಿ, ರಷ್ಯಾ ದೇಶದಲ್ಲಿ ವಿದ್ಯಾರ್ಥಿಗಳಿಂದಲೇ ಶಿಕ್ಷಣಾ ಕೇಂದ್ರಗಳ ... ರತೆಯನ್ನು ಹೋಗಲಾಡಿಸಲಾಯಿತೆಂದು ... ತಿಳಿಸಿದರು

ಹರಿಜನರು ಎಲ್ಲದಕ್ಕೂ ಸರ್ಕಾರವನ್ನೇ ಅವಲಂಬಿಸಬಾರದು

ನಗರದ ಹರಿಜನರ ಸಭೆಯಲ್ಲಿ ಜಗಜೀವನರಾಂ ಭಾಷಣ

ಮೈಸೂರು ೨

ಕೇಂದ್ರ ಮಾರ್ಗ-ಸಾರಿಗೆ ಮಂತ್ರಿ ಶ್ರೀ ಜಗಜೀವನರಾಂರವರು ನೆನ್ನೆ ಮಧ್ಯಾಹ್ನ ನಗರಕ್ಕೆ ಆಗಮಿಸಿದರು ... ಪ್ರಮುಖರನ್ನು ಭೇಟಿ ಮಾಡಿ ... ನಡೆಸಿದರು ಕೇಂದ್ರ ಆಹಾರ ಸಂಶೋಧನಾಲಯಕ್ಕೂ, ... ದಾನಕ್ಕೂ ಭೇಟಿ ಕೊಟ್ಟರು

ಸಂಜೆ ಅಶೋಕಪುರದಲ್ಲಿ ಹರಿಜನರ ಸಭೆಯೊಂದರಲ್ಲಿ ಅವರು ಭಾಷಣ ಮಾಡಿ, ಹರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಜನರು ... ಎತ್ತಬೇಕೆಂದೂ, ಎಲ್ಲದಕ್ಕೂ ಸರ್ಕಾರವನ್ನೇ ಅವಲಂಬಿಸಬಾರದೆಂದೂ ತಿಳಿಸಿದರು ... ಕಲ್ಲಿ ಓದುತ್ತಿರುವ ಪ್ರತಿ ವಿದ್ಯಾರ್ಥಿಗೂ ಕೇಂದ್ರ ಸರ್ಕಾರದವರು ವಿದ್ಯಾರ್ಥಿವೇತನ ಕೊಡುತ್ತಿರುವುದಾಗಿಯೂ, ಸಂಸ್ಥಾನ ಸರ್ಕಾರದವರು ... ವಿದ್ಯಾಭ್ಯಾಸ ಸೌಕರ್ಯ ... ಕಲ್ಪಿಸಿರುವರಾದರೂ, ಅದು ಸಾಕಾಗದೆಂದು ... ಹೇಳಿದರು ಹರಿಜನರು ಹಿಂದೆ ಬಿದ್ದಿರುವುದಕ್ಕೆ ... ಪ್ರತಿಯೊಂದಕ್ಕೂ ... ವುದೇ ಕಾರಣವೆಂದು ನುಡಿದರು ಸವರ್ಣ ಹಿಂದೂಗಳು ಹರಿಜನರ ಬಗ್ಗೆ ತಮ್ಮ ಭಾವನೆಯನ್ನು ಬದಲಾಯಿಸಬೇಕೆಂದು ಮನವಿ ಮಾಡಿದರು ಹರಿಜನರು ಕಾಂಗ್ರೆಸ್ಸನ್ನು ಬಲಪಡಿಸಬೇಕೆಂದೂ ಸೂಚಿಸಿದರು

ಅಧ್ಯಕ್ಷತೆ ವಹಿಸಿದ್ದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಸನಾತನಾದಿ ಮೈಸೂರಿನ ಪ್ರಜೆಗಳು ಈಗ ... ಪ್ರಾಂತಕ್ಕೆ ಸೇರಬೇಕಾಗಿದೆಯೆಂದೂ, ಅವರ ಮತ್ತು ... ಬಗ್ಗೆ ... ಸಹಾನುಭೂತಿಯ ಪರಿಶೀಲನೆಗೆ ಜಗಜೀವನರಾಂರವರು ಸಹಾಯ ಮಾಡಬೇಕೆಂದೂ ಕೋರಿದರು

ಮದ್ರಾಸ್ ಪ್ರಾಂತದಲ್ಲಿ ಬಿರುಗಾಳಿಯಿಂದ ಭಾರಿ ನಷ್ಟ

ಕೋರಮಂಡಲ ತೀರದಲ್ಲಿ ಗಂಟೆಗೆ ೬೦ ಮೈಲಿ ವೇಗದ ಬಿರುಗಾಳಿ ಮತ್ತು ಭಾರಿ ಮಳೆಯ ಪರಿಣಾಮವಾಗಿ ವಿಪರೀತ ನಷ್ಟವಾಗಿದೆ. ತಂಜಾವೂರು, ತಿರುಚಿ, ಮದುರೆ ಮತ್ತು ರಾಮನಾಡು ಜಿಲ್ಲೆಗಳಲ್ಲಿ ತುಂಬಾ ನಷ್ಟ ಸಂಭವಿಸಿದೆ ... ಯ ... ಮೈಲಿ ... ರೈಲು ರಸ್ತೆ ಮೇಲೆ ... ಅಡಿ ನೀರು ನಿಂತಿದೆ ... ರೈಲು ನಿಲ್ದಾಣಕ್ಕೆ ನೀರು ನುಗ್ಗಿದೆ ಮದ್ರಾಸಿನಲ್ಲಿ ಹಡಗುಗಳಿಂದ ಸಾಮಾನು ಎತ್ತಿಳಿಸುವುದು ಮತ್ತು ಅವಕ್ಕೆ ಸಾಮಾನು ತುಂಬುವ ಕೆಲಸದಲ್ಲಿ ಅವ್ಯವಸ್ಥೆಯಾಗಿದೆ. ಬೇರು ಸಹಿತ ಕಿತ್ತ ಮರಗಳಿಂದ ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳು ಕತ್ತರಿಸಿರುವುದು ದಕ್ಷಿಣದ ಒಂದು ಹಳ್ಳಿಯಲ್ಲಿ ೫೦೦ ಮಂದಿ ನಿರಾಶ್ರಿತರಾಗಿರುವರು ಹಲವಾರು ಕಡೆಗಳಿಗೆ ರೈಲು ಓಡಾಟ ನಿಲ್ಲಿಸಲಾಗಿದೆ

ಅಫ್ಘಾನಿಸ್ತಾನದ ಯುದ್ಧ ಮಂತ್ರಿಯ ವಜಾ; ದಸ್ತಗಿರಿ

ಪಾಕಿಸ್ತಾನದ ಸುದ್ದಿ ಸಂಸ್ಥೆಯ ವರದಿಯ ಪ್ರಕಾರ, ಅಫ್ಘಾನಿಸ್ತಾನದ ಯುದ್ಧ ಮಂತ್ರಿಯೂ, ಪ್ರಧಾನ ಸೇನಾಪತಿಯೂ ಆದ ಜನರಲ್ ಮಹಮದ್ ಅರೀಫ್‌ರವರನ್ನು ಪ್ರಧಾನಿ ದಾವೂದ್ ಖಾನ್‌ರವರು ವಜಾ ಮಾಡಿರುತ್ತಾರೆ. ... ಆಜ್ಞಾನುಸಾರ ಅರೀಫ್‌ರನ್ನು ಬಂಧಿಸಲಾಗಿದೆ ... ಮಂದಿ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ ಇವರಲ್ಲಿ ... ಮತ್ತು ಇತರ ಮುಖ್ಯ ಪಟ್ಟಣಗಳಲ್ಲಿ ... ದಸ್ತಗಿರಿಯಾಗುವ ಸಂಭವವೂ ಇದೆ ... ಅಫ್ಘಾನ್ ... ಯುದ್ಧ ಮಂತ್ರಿಯ ವಜಾ ಮತ್ತು ದಸ್ತಗಿರಿ ವಿಷಯವು ತಿಳಿಯಿತೆಂದು ಹೇಳಲಾಗಿದೆ

ನಾಲ್ಕು ಅಂತಸ್ತಿಗಿಂತ ದೊಡ್ಡ ಭವನ ಕಟ್ಟಬಾರದು

ಪ|| ಬಂಗಾಳ ಮುಖ್ಯ ಮಂತ್ರಿಗೆ ಕೃಶ್ಚೇವರ ಸಲಹೆ

ಕಲ್ಕತ್ತದಲ್ಲಿ ರಷ್ಯದ ನಾಯಕ ಕೃಶ್ಚೇವರು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಯವರೊಡನೆ ಮಾತನಾಡುತ್ತ, ೪ ಅಂತಸ್ತುಗಳಿಗಿಂತಲೂ ದೊಡ್ಡದಾದ ಭವನಗಳನ್ನು ಈ ಅಣುಶಕ್ತಿ ಯುಗದಲ್ಲಿ ನಿರ್ಮಿಸಬಾರದೆಂದು ತಿಳಿಸಿದರು ... ರಷ್ಯ ಮತ್ತು ಬ್ರಿಟನ್ನಿನ ಪ್ರವಾಸ ... ಅವೇ ... ತಿಳಿಯುತ್ತಿರುವುದಾಗಿಯೂ ಅವರು ಹೇಳಿದರು

ಭಾರತಕ್ಕೆ ಚೀಣದ ಉಪಾಧ್ಯಕ್ಷಿಣಿ ಸನ್‌ಯಾತ್‌ಸೆನ್ನರ ಭೇಟಿ

ಚೀಣದ ಉಪಾಧ್ಯಕ್ಷಿಣಿ ಶ್ರೀಮತಿ ಸನ್‌ಯಾತ್‌ಸೆನ್‌ರವರು ಬರ್ಮಾ ಮಾರ್ಗವಾಗಿ ಭಾರತಕ್ಕೆ ಭೇಟಿ ಕೊಡಲಿರುವರೆಂದು ವರದಿಯಾಗಿದೆ ಅವರು ಈಗ ಚೀಣದ ... ಪ್ರಾಂತದಲ್ಲಿ ಪರಿಶೀಲನಾ ಪ್ರವಾಸ ನಡೆಸುತ್ತಿರುವರು ... ವರ್ಷ ನೆಹರೂರವರು ಚೀಣಕ್ಕೆ ... ಶ್ರೀಮತಿಯವರನ್ನು ಭಾರತಕ್ಕೆ ಆಹ್ವಾನಿಸಿದ್ದರು

ಮಹಾ ಪಂಜಾಬು ಅಧ್ಯಕ್ಷರ ಬಂಧನ

ಮಹಾ ಪಂಜಾಬು ರಂಗ' ಎಂಬ ಸಂಸ್ಥೆಯ ಅಧ್ಯಕ್ಷರಾದ ಡಾ|| ... ಅವರನ್ನು ನೆನ್ನೆ ಲೂಧಿಯಾನಾದಲ್ಲಿ ... ಶಾಸನದ ಪ್ರಕಾರ ಬಂಧಿಸಲಾಯಿತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಧಾನ್ಯಗಳ ಕನಿಷ್ಠ ಬೆಲೆ ನಿಗದಿ

ಅಧಿಕಾರಿಗಳ ಸಭೆಯಲ್ಲಿ ಪರಿಶೀಲನೆ

ಸ್ವಂ ಮು ತಂತಿ] ಬೆಂಗಳೂರು ೩.

ಈ ಸಲ ಒಕ್ಕಲಿಯ ಬೆಳೆಯು ಅಗಲಿರುವ ದೃಷ್ಟಿಯಿಂದ ರಾಗಿ, ಜೋಳ ಮತ್ತು ಭತ್ತದ ಕೊಳ್ಳುವ ಕನಿಷ್ಠ ಬೆಲೆಯನ್ನು ನಿಗದಿ ಮಾಡುವ ವಿಷಯವು ನೆನ್ನೆ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಪರಿಶೀಲಿಸಲ್ಪಟ್ಟಿತೆಂದು ಗೊತ್ತಾಗಿದೆ

ಅಧಿಕಾರಿಗಳು ತಮ್ಮ ಅಭಿಪ್ರಾಯಗಳನ್ನು ಮುಕ್ತ ... ಉನ್ನತಾಯಕ ... ತಿಳಿದುಬಂದಿದೆ

ಕೆರೆ ನೀರಿಯಿಂದ ಬಸ್ಸು ಮುಗುಚಿಕೊಂಡರೂ ಜನರು ಪಾರು

ಬೆಂಗಳೂರು ಬಳಿ ಕೃಷ್ಣರಾಜಪುರದ ಸಮೀಪದಲ್ಲಿ ನೆನ್ನೆ ಬಸ್ಸೊಂದು ಹೊಸಕೋಟೆಯಿಂದ ಬರುತ್ತಿದ್ದಾಗ ಒಂದು ಏರಿ ಮೇಲಿನಿಂದ ಒಳಗೆ ... ಮುಗುಚಿಕೊಂಡಿತೆಂದೂ, ಅದರಲ್ಲಿದ್ದ ಮೂರು ಮಕ್ಕಳು ಮತ್ತು ಒಂದು ಶಿಶುವು ಸೇರಿ ೨೨ ಮಂದಿ ಪ್ರಯಾಣಿಕರು ಪಾರಾದರೆಂದೂ ವರದಿಯಾಗಿದೆ ಎದುರುಗಡೆ ಬರುತ್ತಿದ್ದ ಲಾರಿಗೆ ದಾರಿ ಕೊಡಲು ಹೋಗಿ ಬಸ್ಸು ೪ ಅಡಿ ಆಳದ ನೀರಿನಲ್ಲಿ ಬಿದ್ದಿತು

ರೋಗಿಯಿಂದ ಇಬ್ಬರು ವೈದ್ಯರ ಕೊಲೆ: ಒಬ್ಬರಿಗೆ ತೀವ್ರ ಗಾಯ

ಅಮೇರಿಕದ ನ್ಯೂಇಂಗ್ಲೆಂಡ್ ಪ್ರಾಂತದ ಪ್ರ... ನಗರದಲ್ಲಿ ನೆನ್ನೆ ಕಾರಲ್‌ಕಾಸ್ಟ್ ಎಂಬ ... ವರ್ಷದ ಮಾಜಿ ರೋಗಿಯು ತನ್ನ ಚಿಕಿತ್ಸೆ ನಡೆಸಿದ ಇಬ್ಬರು ವೈದ್ಯರನ್ನು ಗುಂಡಿನಿಂದ ಹೊಡೆದು ಕೊಂದು ಮತ್ತೊಬ್ಬರನ್ನು ತೀವ್ರ ಗಾಯಗೊಳಿಸಿದನು.

ಪ್ರಾರ್ಥನಾ ಸಭೆ ಮತ್ತು 'ಅಂಬರ್' ಚರಕದ ಬಗ್ಗೆ ವಿಚಾರ ಗೋಷ್ಠಿ

ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯಲ್ಲಿರುವ ... ಸೇವಾ ದಳದ ಕಛೇರಿಯಲ್ಲಿ, ಅಖಿಲ ಭಾರತ ಸರ್ವ ಸೇವಾ ಸಂಘದವರು ಪ್ರಚಾರಕ್ಕೆ ತಂದಿರುವ "ಅಂಬರ್ ಚರಕ"ದ ಬಗ್ಗೆ ಶ್ರೀ ಕೆ ವಿ ಶ್ರೀಕಂಠಯ್ಯನವರು ನಾಳೆ ಬೆಳಗ್ಗೆ ... ಗಂಟೆಗೆ ವಿವರಣೆಗಳನ್ನಿತ್ತು, ವಿಚಾರ ಗೋಷ್ಠಿ ನಡೆಸುತ್ತಾರೆ ಧಾನುವಾರದ ಪ್ರಾರ್ಥನಾ ಸಭೆಯೂ ನಾಳೆ ಬೆಳಗ್ಗೆ ... ರಿಂದ ... ರವರೆಗೆ ನಡೆಯುತ್ತದೆ ಸರ್ವರೂ ಭಾಗವಹಿಸಬೇಕಾಗಿ ಕೋರಲಾಗಿದೆ

ಸರ್ಕಾರಿ ವ್ಯವಸಾಯ ಇಲಾಖಾಧಿಕಾರಿಯ ಆತ್ಮಹತ್ಯೆ

ಸ್ವಂ.ಮು ತಂತಿ] ಬೆಂಗಳೂರು ೩

ವ್ಯವಸಾಯ ಇಲಾಖೆಯ ಅಸಿಸ್ಟೆಂಟ್ ಎಂಟಮಾಲಜಿಸ್ಟರಾದ ಶ್ರೀ ... ರವರು ಜಯನಗರದ ತಮ್ಮ ಮನೆಯ ಬಾವಿಯಲ್ಲಿ ಬಿದ್ದು ಈ ದಿನ ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದುಬಂದಿದೆ. ಮೂಲ ವ್ಯಾಧಿಗೆ ಶಸ್ತ್ರ ಚಿಕಿತ್ಸೆಯಾಗಿ ನೋವನ್ನು ಸಹಿಸಲಾರದೆ ಅವರು ಪ್ರಾಣ ನೀಗಿಕೊಂಡರೆಂದು ಹೇಳಲಾಗಿದೆ ಅವರಿಗೆ ೫೫ ವರ್ಷ ವಯಸ್ಸಾಗಿತ್ತು

...ಷ್ಟ ಮೊಟ್ಟೆಗಳ ಮಾರ್ಗ...

ಸ್ಥಾಪನೆ

[illegible]

ರಕ್ಷಾ ನಿಯೋಗದವರಿಂದ ತಾಂಬೂಲದ ಸೇವನೆ

ಜಾಯಮಾಕ್ರೂರಿನಲ್ಲಿ ... ಪ್ರಖ್ಯಾತವಾದ ವೀಳ್ಯದೆಲೆ ... ಸುಗಂಧಪೂರಿತವಾದ ... [illegible]

೧೦೦ ವರ್ಷದ ವೃದ್ಧರಾಯ ... ಸನ್ಯಾಸಿ

[illegible]

ಗಾಯಗೊಂಡ ಬಾಲಕಿಗೆ ಇಬ್ಬ ಸಾವಿರ ಬಹುಮಾನ

[illegible] ... ರಾಜ್ಯ ಸರ್ಕಾರದವರು ... ಬಹುಮಾನ ... ಕೊಟ್ಟಿರುತ್ತಾರೆ ... ಚಿಕಿತ್ಸೆ ನಡೆಸಲು ... [illegible]

ಚುನಾವಣೆಗಳಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ತಪ್ಪಿಸಬೇಕು

ವಿಶ್ವವಿದ್ಯಾಲಯಗಳು ಮತ್ತು ಪ್ರಾಂತ ಸರ್ಕಾರಗಳಿಗೆ ಸೂಚನೆ

... ಚುನಾವಣೆಗಳಲ್ಲಿ ಚಿಕ್ಕ ವಯಸ್ಸಿನ ವಿದ್ಯಾರ್ಥಿ... ರಾಷ್ಟ್ರೀಯ ದೃಷ್ಟಿಯಿಂ... ಅವನ್ನು ತಪ್ಪಿಸಬೇಕೆ... ಕೇಂದ್ರ ಸರ್ಕಾರದ ವಿದ್ಯಾ ಇಲಾಖೆಯವ... ಚುನಾವಣೆಗಳಲ್ಲಿ ವಿದ್ಯಾ... ಶಿಕ್ಷಣ ಪದ್ಧತಿಯಲ್ಲಿ ಸ್ವಾ... ಉಪಾಧ್ಯಾಯರ ಅಲ್ಪ ವೇತನ ವಿದ್ಯಾರ್ಥಿಗಳ ಶಕ್ತಿ ವಿನಿಯೋಗಕ್ಕೆ ಸರಿಯಾದ ಮಾರ್ಗವಿಲ್ಲದಿರುವುದು — ಈ ಹಲವು ಕಾರಣಗಳಿಂದ ವಿದ್ಯಾರ್ಥಿಗಳಲ್ಲಿ ಅಶಿಸ್ತುಂಟಾಗಲು ಅವಕಾಶವಾಯಿತೆಂದು ಕೇಂದ್ರ ವಿದ್ಯಾ ಇಲಾಖಾ ಉಪಮಂತ್ರಿ ... ತಿಳಿಸಿರುತ್ತಾರೆ ... ಸಂಸ್ಥೆಗಳಲ್ಲಿರುವ ಆಡಳಿತ ಸಮಿತಿಗಳನ್ನು ... ಸೂಚನೆಯಾಯಿತೆಂದೂ ಅವರು ಹೇಳಿರುವರು

ಸಾಮೂಹಿಕ ಯೋಜನೆ ಸ್ವಯಂ ಸೇವಕರಿಗಾಗಿ ಶಿಕ್ಷಣಕೇಂದ್ರಗಳು

ದಿಲ್ಲಿಯ ... ಯೋಜನೆ ಕಾಲ... ಅಭಿವೃದ್ಧಿ ಕಾರ್ಯಗ... ಹಲವರಿಗೆ ತರಬೇತು ... ಶಿಬಿರಗಳನ್ನು ... ನಡೆಸಲಾಗುವುದು

ಕಣಿಯರ ಸಮ್ಮೇಳನ

... ಕಣಿಯರ ಸ... ಆರಂಭೋತ್ಸ... ಶ್ರೀ ವೆಂಕಟೇಶ ಭಜನ ಮಂದಿ... ಆರಂಭೋತ್ಸವವನ್ನು ... ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು ... ಅಧ್ಯಕ್ಷತೆ ವಹಿಸುವರು

ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾಸ್ಪರ್ಧೆ

... ವಿದ್ಯಾರ್ಥಿ ನಿಲಯದ ... ಶ್ರೀ ಕೃಷ್ಣಸ್ವಾಮಿರಾವ್ ... ಕರ್ನಾಟಕ ಅಂತರ ವಿದ್ಯಾರ್ಥಿ ... ಕನ್ನಡ ಚರ್ಚಾಸ್ಪರ್ಧೆಯನ್ನು ಏರ್ಪಡಿ... ವಿದ್ಯಾರ್ಥಿ ನಿಲಯಗಳು ... ವಿಶ್ವವಿದ್ಯಾಲಯ ... ಡಾ|| ಎಂ. ವಿ. ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಆಹ್ವಾನವುಂಟು

ಸಾದಿ ಅರೇಬಿಯಾ ದೊರೆಗೆ ಪೌರಸನ್ಮಾನಕ್ಕೆ ೫,೦೦೦ ರೂ ವೆಚ್ಚ

ಸಾದಿ ಅರೇಬಿಯಾ ದೊರೆಗೆ ಬೆಂಗಳೂರು ಪೌರಸಭೆಯವರು ಕೊಡಲಿರುವ ಸನ್ಮಾನಕ್ಕೆ ... ರೂ ವೆಚ್ಚ ಮಾಡಲಾಗುವುದು

ಎಮೆರಿಕದ ಸಹಾಯಕ್ಕೆ ಭಾರತದಲ್ಲಿ ಸಾಕಾದಷ್ಟು ಮನ್ನಣೆಯಿಲ್ಲ

ಕೆನಡಾ ಮಂತ್ರಿಯ ಹೇಳಿಕೆ

ಕೆನಡದ ವಿದೇಶಾಂಗ ಮಂತ್ರಿ ಲೆಸ್ಟರ್ ಪಿಯರ್ಸನ್ನರು ರಷ್ಯಾ ನಾಯಕರಿಗೆ ಭಾರತದಲ್ಲಿ ದೊರೆತ ಸ್ವಾಗತವನ್ನು ಕುರಿತು ತಮ್ಮ ಅಭಿಪ್ರಾಯವನ್ನಿತ್ತು, ರಷ್ಯವು ಹಣ ತೆಗೆದುಕೊಂಡು ಭಾರತಕ್ಕೆ ಕೊಟ್ಟ ಒಂದು ಉಕ್ಕಿನ ಗಿರಣಿಗಾಗಿ ಭಾರತದ ಪ್ರಜೆಗಳ ಅನುರಾಗವು ರಷ್ಯಕ್ಕೆ ವಿಪರೀತ ಹೆಚ್ಚಾಗಿ ದೊರೆತಿರುವುದೆಂದೂ ಅದರೆ ಅಮೆರಿಕವು ... ಅಮೆರಿಕದ ಸಹಾಯ ಮಾಡಿರುವುದನ್ನು ಅಷ್ಟು ಗಣನೆಗೆ ತಂದಿಲ್ಲವೆಂದೂ ತಿಳಿಸಿರುತ್ತಾರೆ ಆಗ್ನೇಯ ಏಷ್ಯಕ್ಕೆ ಅಮೆರಿಕವು ಒಂದೇ ಮನಸ್ಸಿನ ಔದಾರ್ಯವನ್ನು ತೋರಿರುವುದೆಂದೂ ಆರ್ಥಿಕವಾಗಿ ರಷ್ಯವು ಯಾವ ಸಹಾಯವನ್ನು ನೀಡಿಲ್ಲವೆಂದೂ ಅವರು ಹೇಳಿರುವರು

ನೂತನ ಮಧ್ಯ ಪ್ರದೇಶಕ್ಕೆ ಭೂಪಾಲ್ ರಾಜಧಾನಿ

ಕಾಂಗ್ರೆಸ್ ಹೈಕಮಾಂಡಿನ ... ಉಪ ಸಮಿತಿಯು ನೂತನ ಮಧ್ಯ ಪ್ರದೇಶ ಸಂಸ್ಥಾನಕ್ಕೆ ಭೂಪಾಲ್ ನಗರವು ರಾಜಧಾನಿಯಾಗಿರಬೇಕೆಂದು ನಿರ್ಧರಿಸಿರುತ್ತದೆ ಸಂಸ್ಥಾನ ಪುನರ್ವಿಂಗಡಣಾ ಸಮಿತಿಯವರು ಜಬ್ಬಲ್ಪುರವು ರಾಜಧಾನಿಯಾಗಿರಬೇಕೆಂದು ಶಿಫಾರಸು ಮಾಡಿದ್ದರು ಭೂಪಾಲ್ ಸಂಸ್ಥಾನವು ... ಪ್ರಾಂತವನ್ನು ಐಕ್ಯವಾಗುವುದಕ್ಕೆ ... ಸೃಷ್ಟಿಸಿರುತ್ತದೆ

ಲಿಸ್ಬನ್ ಪೋಲೀಸರಿಂದ ಗೋವಾ ವಿದ್ಯಾರ್ಥಿಯ ಕೊಲೆ

ಲಿಸ್ಬನ್ ನಗರದ ವೈದ್ಯಕೀಯ ಕಾಲೇಜೊಂದರಲ್ಲಿ ... ಡಿಸೋಜಾ ಎಂಬ ಗೋವಾ ವಿದ್ಯಾರ್ಥಿಯನ್ನು ಭಾರತದ ಪರ ... ಅಲ್ಲಿನ ಪೋಲೀಸರು ... ಗುಂಡು ಹೊಡೆದು ಕೊಂದುಹಾಕಿರುವುದಾಗಿ ವರದಿಯಾಗಿದೆ

ನ್ಯಾಯಶಾಸ್ತ್ರದ ಪ್ರಥಮ ಪರೀಕ್ಷಾ ಫಲಿತಾಂಶಗಳು

ಕಳೆದ ಅಕ್ಟೋಬರಿನಲ್ಲಿ ನಡೆದ ನ್ಯಾಯಶಾಸ್ತ್ರದ ... ಪರೀಕ್ಷಾ ಫಲಿತಾಂಶಗಳು ... ಪ್ರಥಮ ಮತ್ತು ದ್ವಿತೀಯ ತರಗತಿ... ತೃತೀಯ ... [illegible] ... ಡಿಪಾರ್ಟ್‌ಮೆಂಟ್ ... ಮತ್ತು ...

ನೌಕರರಿಗೆ ಕಾರ್ಮಿಕರಿಗೆ ೩೦೫ ರೂ ಪರಿಹಾರ

... ಬಡಾವಣೆಯಲ್ಲಿರುವ ಬನಶಂಕರಿ ನೇಯ್ಗೆ ಕಾರ್ಖಾನೆ ಮಾಲೀಕರು ತಮ್ಮಲ್ಲಿದ್ದ ಕೆಲಸದಿಂದ ತೆಗೆಯಲ್ಪಟ್ಟ ... ಕೃಷ್ಣಪ್ಪ ... ಮುದಲಿಯಾರ್, ನರಸಿಂಹಯ್ಯ ಮತ್ತು ... ರಾಮುರವರಿಗೆ ಕ್ರಮವಾಗಿ ... ರೂ ಗಳ ಪರಿಹಾರ ದ್ರವ್ಯವನ್ನು ... ಲೇಬರ್ ಕಮಿಷನರರ ... ವಿಧಿಸಿರುತ್ತಾರೆ

ಮಹಿಳೆಯರು ಸಮಾನಹಕ್ಕು ಕೋರಬಾರದು

ವಿನೋಬಾ ಭಾವೆಯವರ ...

ಪಾರ್ಲಿಮೆಂಟಿನ ಮುಂದೆ ... ಉತ್ತರಾಧಿಕಾರ ಮಸೂದೆಯ ಬಗ್ಗೆ ... ಭಾವೆಯವರು ಮಾತನಾಡುತ್ತಾ, ... ಮಹಿಳೆಯರಿಗೆ ಸಮ ಭಾಗವನ್ನು ಕೊ... ಹಿಂದುಗಳಿಗೆ ... ಹಿಂದೂ ಧರ್ಮ ಶಾಸ್ತ್ರಗಳಲ್ಲಿ ಮಹಿಳೆಯರು... ಪುರುಷರಿಂತಲೂ ಹೆಚ್ಚಿನ ಸ್ಥಾನ ... ವುದೆಂದೂ ತಿಳಿಸುತ್ತಾರೆ ... ಯರು ಪಶ್ಚಿಮ ರಾಷ್ಟ್ರಗಳ ಹೆಂಗಸರ ... ಸಮಾನಹಕ್ಕು ... ದೂ, ಆದರಿಂದ ಅವರ ಸ್ಥಾನ ಮತ್ತು ... ಳು ಕಡಿಮೆಯಾಗುತ್ತವೆಂದೂ ಅವರು ... ವರು

ಮಹಾ ಪುರುಷರ ಜನ್ಮ ದಿನ ಮತ್ತು ... ದ ದಿನಗಳಲ್ಲಿ ರಜಾ ಕೊಡುವ ... ಯ್ಯವೆಂದೂ, ಭಾರತದಲ್ಲಿ ... ದಿ ಮಹಾತ್ಮರು ಹುಟ್ಟಿದ್ದರೆಂದೂ, ... ಕೊಡುತ್ತಾ ಹೋದರೆ ಪ್ರತಿ ದಿನವೂ ... ರಜೆ ... ಭಾವೆಯವರು ... ವರು

ಭಾರತ ಆಯುರ್ವೇದ ಕಾಂಗ್ರೆಸ್ ... ಪಾರ್ಥಸಾರಥಯ್ಯಂಗಾರ್ ...

ಕರ್ನೂಲಿನಲ್ಲಿ ಈ ತಿಂಗಳು ... ಇನೇ ತಾರೀಖು ಸೇರುವ ಅಖಿಲ ಭಾ... ಯುರ್ವೇದ ಸಮ್ಮೇಳನಕ್ಕೆ ಬೆಂಗಳೂರಿನ ... ಚಾಮರಾಜೇಂದ್ರ ಆಯುರ್ವೇದ ... ಡಾ|| ವೈ. ಪಾರ್ಥಸಾರಥಯ್ಯಂಗಾರ್ ... ರಿಸಲ್ಪಟ್ಟಿರುತ್ತಾರೆ

ನಗರದಲ್ಲಿ ಕೇಳಿಕ ... ಸೇವಿಸುವವರು

ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ... ಇಲಾಖೆಗೆ ಸಂಬಂಧಪಟ್ಟ ... ಯ ಅಂಕಿಅಂಶಗಳ ಅಧಿಕಾರಿಗಳು ... ನಡೆಸಿದ ... ಸರ್ವೆ ಪ್ರಕಾರ ... ಮಂದಿ ಕಾಫಿಯನ್ನೂ, ... ಮಂದಿ ... ನ್ನೂ ಸೇವಿಸುವರೆಂದೂ ಗೊತ್ತಾಗಿದೆ ... ಗಳು ... ಸಂಸಾರಗಳಲ್ಲಿ ಸರ್ವೆ ... ಸ್ಥಾರೆ ನಗರದಲ್ಲಿರುವ ... ಳಲ್ಲಿ ಒಂದು ದಿನಕ್ಕೆ ... ಹಾಲನ್ನು ಕುಡಿಯುತ್ತಾರೆ ತಿಂಗಳಿಗೆ ... ಪೌಂಡು ಸಕ್ಕರೆ ಖರ್ಚಾಗುತ್ತದೆ ... ಕ ಸ್ಥಿತಿಯನ್ನೂ ಸದರಿ ಅಧಿಕಾರಿಗಳು ... ಮಾಡಿರುವರು ತಿಂಗಳಿಗೆ ... ರಿಂದ ... ವರೆಗೆ ವರಮಾನ ಬರುವವರು ಶೇಕಡ ... ಮಂದಿಯೂ ... ರಿಂದ ... ರೂ ... ಮುಂದಿಯೂ, ... ಕ್ಕೆ ಹೆಚ್ಚು ... ಸುವವರು ಶೇಕಡ ... ಮತ್ತು ... ರೂ ... ಡಿಮೆ ಸಂಪಾದಿಸುವವರು ... ಇರುವರೆಂದು ಗೊತ್ತಾಗಿದೆ

ಗರ್ಭಪಾತವು ಕ್ರಮಬದ್ಧವೆಂದು ... ಕಾರದವರು ಕಾನೂನು ಮಾಡಿರುತ್ತಾ... ವರ್ಷಗಳಿಂದಲೂ ಅಲ್ಲಿ ಗರ್ಭಪಾತಕ್ಕೆ ... ಹಾಕಲಾಗಿತ್ತು

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

4 12 55 ರಿಂದ ಅನೋಖ ೩ನೇ ವಾರ ... ದಿನವೂ ೩ ಪ್ರದರ್ಶನ

ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ ★ ಮಹೇಶ್ವರಿ

ಪಾತ್ರ ... ಜೆಮಿನಿ ಗಣೇಶನ್ ಸಾವಿತ್ರಿ, ತಂಗವೇಲು

Edited Printed and Published by A R Nagarajan at S... Press D Subbiah Road Mysore

ಲಕ್ಷ್ಮಿ ★ 4—12 55 ನೇ ಭಾನುವಾರದಿಂದ ಯಶಸ್ವೀ ೩ನೇ ವಾರ ದಿನವೂ ಮೂರು ಪ್ರದರ್ಶನ

... ತಾರಾಗಣದ ... ಚಿತ್ರ ...

ಈ ವಾರವೆಲ್ಲ ಬೋರ್ಡ್ ಎಂಟರ್‌ಟೈನ್‌ಮೆಂಟ್ಸ್ ಮತ್ತು ಪ್ಯಾಸ್ ಗಳಿಗೆ ಪ್ರವೇಶವುಂಟು

★ ಕಣ್ವನಿ ಕಾದಲಿ ★

[A NANDI RELEA...

ಟೆಲಿಫೋನ್ ನಂ 792

ಸಂಸ್ಥಾನದ ಪತ್ರಿಕೆಗಳಲ್ಲೇ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಈ ದಿನದ ಪತ್ರಿಕೆ ೬ ಕಾಸು

ಚಂದಾದರ — ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ; ಅಂಚೆ ಮೂಲಕ ತಿಂಗಳಿಗೆ ಒಂದು ರೂ; ಬಿಡಿ ಪತ್ರಿಕೆ ಮೂರು ಕಾಸು

ಪುಟ ೮೪] SADHVI SUNDAY 4-12-1955 ಮೈಸೂರು ಭಾನುವಾರ ೪-೧೨-೧೯೫೫ [ಸಂಚಿಕೆ : ೧೧೦

ಗೋವಾ ಬಗ್ಗೆ ಬುಲ್ಗಾನಿನ್ ಭಾಷಣಕ್ಕೆ ಅಮೆರಿಕಾ ಆಕ್ಷೇಪ

ದ್ವಿತೀಯ ಯೋಜನೆಯಲ್ಲಿ ಬೆಳವಣಿಗೆಗೆ ೭೫ ಕೋಟಿರೂ

ಟೆಲಿಗ್ರಾಫ್ ನೌಕರರ ಸಭೆಯಲ್ಲಿ ಜಗಜೀವನರಾಂ ಭಾಷಣ

ಬೆಂಗಳೂರು ೪

ಹುಣಸೆ	[illegible]	[illegible]
ಹೆಸರು	[illegible]	[illegible]
ಹಲಸಂದೆ	[illegible]	[illegible]
ಧನಿಯ	[illegible]	[illegible]
ಕೆಂಪು ಮೆಣಸು	[illegible]	[illegible]
ತೊಗರಿ	[illegible]	[illegible]
ಉದ್ದು	[illegible]	
ಕುಸುಬೆ	[illegible]	[illegible]
ಮೆಣಸಿನಕಾಯಿ	[illegible]	[illegible]
ಹತ್ತಿ (೫೦ ಪೌಂಡು)	[illegible]	[illegible]
ಕೊಬ್ಬರಿ	[illegible]	[illegible]

MODERN DAIRY FARM

ಕ್ಷೀರ ಕ್ಷೇತ್ರ

[illegible]

ರಣಜಿತ್ ಟಾಕೀಸ್

23 2 55 ರಿಂದ ಅನೇಕ ಪ್ರಾರಂಭ

★ ಸೀಮ ★

[SEEMA]

SREE GAYATRI TALKIES

Happy Christmas to all our [illegible]

Now Showing

BROKEN LAN[illegible]

From 27 12—55

THE ROB[illegible]

Bench Shows on 31st [illegible] Morning [illegible]

SPANISH MA[illegible]

Edited, Printed and Pub[illegible] by A R Nagarajan at [illegible] Press, D Subbiah Road [illegible]

ಲಕ್ಷ್ಮಿ ★ 24 12—55 ರಿಂದ ಅನೇಕ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

[illegible] Movies Rel[illegible]

[ಶ್ರೀ ಸಾಯಂಗಳಲ್ಲಿ 3 ವಾರ ಮುಕ್ತಾಯ ಮಾಡಲಾಗಿದೆ]

★ ಟ್ರಾಕ್ ಬಸ್

ರಿಜಿಸ್ಟ್ರೇಷನ್ ನಂ 7..

ಸಂಸ್ಥಾನದ ಪತ್ರಿಕೆಗಳಲ್ಲೆಲ್ಲಾ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
...ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಈ ದಿನ ಪತ್ರಿಕೆ 3 ಕಾಸು

ಗೌರಿ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
[illegible]
M.V. ಭೋಜಯ್ಯ
... & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

[ಸಂಪುಟ ..] SADHVI MONDAY 26 12 1955 ಮೈಸೂರು ಸೋಮವಾರ [ಸಂಚಿಕೆ : ...]

ಏಪ್ರಿಲಿನಲ್ಲಿ ಸಂಸ್ಥಾನದ ಜಿಲ್ಲಾ ಬೋರ್ಡುಗಳ ಚುನಾವಣೆ

ಸಂಯುಕ್ತ ಕರ್ನಾಟಕ ...ದಲ್ಲಿ ಸಾಹಿತಿಗಳ ಹೊಣೆ

... ಸಮ್ಮೇಳನದಲ್ಲಿ 'ಶ್ರೀ ರಂಗರ' ಅಧ್ಯಕ್ಷ ಭಾಷಣ

ಆನೆ ಜೋಡಿ ಎತ್ತುಗಳ ರಥದಲ್ಲಿ ಅಧ್ಯಕ್ಷರ ಮೆರವಣಿಗೆ

ರಾಯಚೂರು ...

[illegible] ... ಸಮ್ಮೇಳನವು ಸೇರಿತು ಶ್ರೀ ಆದ್ಯ ರಂಗಾಚಾರ್ಯ (ಶ್ರೀರಂಗ) ಅಧ್ಯಕ್ಷತೆ ವಹಿಸಿದ್ದರು ... ಮಾಡಿದರು ಅವರನ್ನು ... ಜೋಡಿ ... ದಿವ್ಯಾಲಂಕೃತ ರಥದಲ್ಲಿ ... ಮೆರವಣಿಗೆ ... [illegible]

... ಅಧ್ಯಕ್ಷರಾದ ... ಕರ್ನಾಟಕದ ಪ್ರಕೃತಿ ... [illegible]

... ದಿನ ... ಮಂತ್ರಿ ... ಭಾಷಣ ಮಾಡಿ ಕನ್ನಡ ... ಬುದ್ಧಿವಂತ ... ವಿದ್ಯಾವಂತ ಮತ್ತು ... ಸಾಹಿತ್ಯವನ್ನು ... ಕನ್ನಡ ಸಂಸ್ಥಾ... ಕನ್ನಡ ಸಾಹಿತ್ಯ ಪರಿಷತ್ತಿನ ... ಮೂಲಕ ದೇಶದ ಐಕ್ಯತೆಯ ... ಕಳಕಳಿ ಮಾಡಿದರು [illegible]

...ಕ್ಷರು ಭಾಷಣ ಮಾಡಿ ಕನ್ನಡ ... ಈಗ ... ಹೇಳಿದರು ... ಈಗಿನ ವ್ಯಕ್ತಿ ಸ್ವಾತಂತ್ರ್ಯದ ದಿನಗಳಲ್ಲಿ ... ಸಾಹಿತಿ ಅಥವಾ ಬರಹಗಾರರೆಂದು ... ಸಾಹಿತ್ಯದ ಮಟ್ಟವು ಹೆಚ್ಚಿದೆ ... ಅಥವಾ ಕಡಿಮೆಯಾಗಿದೆ ... ಬರಹಗಾರರು ... ಎಂದೂ ಅವರು ತಿಳಿಸಿದರು [illegible]

...ಡ ಸಂಸ್ಥಾನದ ರಚನೆಯನ್ನು ಅವರು ... ಸ್ವಾಗತಿಸಿ, ಅದರ ... ಸಂಸ್ಥಾನದ ಹೆಸರನ್ನು ಕುರಿತು ... ಮಾತನಾಡಿ ... ಮೈಸೂರು ಎಂಬ ... [illegible]

ಏಪ್ರಿಲಿನಲ್ಲಿ ಸಂಸ್ಥಾನದ ಜಿಲ್ಲಾ ಬೋರ್ಡುಗಳ ಚುನಾವಣೆ

ಬೆಂಗಳೂರು ...

[illegible] ... ಜಿಲ್ಲಾ ಬೋರ್ಡುಗಳ ಚುನಾವಣೆಗಳನ್ನು ಏಪ್ರಿಲ್ ... ಸರ್ಕಾರದವರು ... ಜಿಲ್ಲಾ ಬೋರ್ಡುಗಳ ... [illegible]

ಕೆಂಪು ಚೀಣದೊಡನೆ ಸಂಧಾನ ನಿಲ್ಲಿಸುವಂತೆ ಅಮೆರಿಕಕ್ಕೆ ಕರೆ

[illegible] ... ನಗರದಲ್ಲಿ ... [illegible]

ಫಾರ್ಮೊಸಾ ಮೇಲೆ ಕೆಂಪುಚೀಣದ ಭಾವಿ ಧಾಳಿಯ ನಿರೀಕ್ಷೆ

ಫಾರ್ಮೊಸಾ ಮೇಲೆ ಕೆಂಪು ... ಪ್ರಮಾಣದ ಧಾಳಿಯನ್ನು ... [illegible]

... ಹೊಸ ಪ್ರಾಂತದ ರಚನೆಯಾದ ಮೇಲೆ ಕನ್ನಡ ಸಾಹಿತಿಗಳ ಹೊರೆಯು ಹೆಚ್ಚುವುದೆಂದು ... [illegible] ... ಸಾಹಿತಿಗಳ ... [illegible]

ರಷ್ಯಾ ನಾಯಕರ ಭೇಟಿಯಿಂದ ಭಾರತದ ನೀತಿಯಲ್ಲಿ ವ್ಯತ್ಯಾಸವಿಲ್ಲ

ಶಕ್ತಿ ರಾಷ್ಟ್ರಗಳ ಒಂದು ಗುಂಪಿಗೆ ಭಾರತ ಸೇರುವುದಿಲ್ಲವೆಂದು ನೆಹರೂ ಹೇಳಿಕೆ

ಪ್ರಧಾನಿ ನೆಹರೂರವರು ... [illegible] ... ರಷ್ಯಾ ನಾಯಕರು ... [illegible]

ಈಜಿಪ್ಟಿನ ಶಾಸನವನ್ನು ಪ್ರತಿಭಟಿಸಲು ಚರ್ಚುಗಳ ಬಂದ್

[illegible] ... ಮತ್ತು ... [illegible]

ಗೋವಾದಲ್ಲಿ ಅನೇಕ ರೈಲ್ವೆ ನೌಕರರ ಬಂಧನ

ದಕ್ಷಿಣ ರೈಲ್ವೆಗೆ ಸೇರಲು ... ಗೋವಾದ ಅನೇಕ ರೈಲ್ವೆ ನೌಕರರನ್ನು ಅಲ್ಲಿನ ಅಧಿಕಾರಿಗಳು ದಸ್ತಗಿರಿ ಮಾಡಿರುವರೆಂದು ವರದಿಯಾಗಿದೆ ... ಗಡಿ ದಾಟಿ ಭಾರತಕ್ಕೆ ಬರಲು ... [illegible] ... ದಕ್ಷಿಣ ರೈಲ್ವೆಗೆ ಸೇರಿ ... ನೌಕರರು ಗೋವಾ ಬಿಡುವುದಿಲ್ಲವೆಂದು ... ಅವರನ್ನು ಅಧಿಕಾರಿಗಳು ... ಹೇಳಲಾಗಿದೆ

ಕಲ್ಲಿದ್ದಲು ಉತ್ಪತ್ತಿಗಾಗಿ ರಷ್ಯಾ ಸಹಾಯಕ್ಕೆ ಭಾರತದ ನಿರಾಕರಣೆ

ಕಲ್ಲಿದ್ದಲು ... ಬಗ್ಗೆ ರಷ್ಯವು ... ಭಾರತ ಸರ್ಕಾರದವರು ... [illegible]

ಚೀಣಾ ಮತ್ತು ಪೂರ್ವ ಜರ್ಮನಿಗಳಿಗೆ ಒಪ್ಪಂದ

... ಪೂರ್ವ ಜರ್ಮನಿ ... ಒಪ್ಪಂದವಾಗಿದೆ ... ಪ್ರಧಾನಿಗಳು ... ಚೀಣದಲ್ಲಿ ವ್ಯವಸಾಯಕ್ಕೆ ... [illegible]

... ಹುಟ್ಟು ಹಬ್ಬ

... ಅಧ್ಯಕ್ಷ ಶ್ರೀ ಎಸ್ ... ಅಧ್ಯಕ್ಷತೆಯಲ್ಲಿ ... ಬೆಂಗಳೂರಿನ ಶ್ರೀ ... [illegible]

ಹಸುಮಕ್ಕಳ ... ಕಾರ್ಯಕ್ರಮ

[illegible]

ಜವಳಿ ವರ್ತಕರ ಸಂಘದ ಸಭೆ

ಮೈಸೂರು ೧೬

ನಗರದ ಜವಳಿ ವರ್ತಕರ ಸಂಘದ ಮನ್ನೆರಡ ನೇ ವಾರ್ಷಿಕೋತ್ಸವವು ನೆನ್ನೆ ಬೆಳಗ್ಗೆ ವಸ್ತು ಪ್ರದರ್ಶನದ ಭವನದಲ್ಲಿ ನಡೆಯಿತು. ಪೌರಸಭಾ ಕಮೀಷನರಾದ ಶ್ರೀ ಎ. ವಿಶ್ವನಾಥ್‌ರವರು ಅಧ್ಯಕ್ಷತೆ ವಹಿಸಿದ್ದರು

ಉಪಾಹಾರಾನಂತರ, ಸಂಘದ ಅಧ್ಯಕ್ಷರಾದ ಶ್ರೀ ಆರ್. ಎಸ್. ನಾಗಪ್ಪಶೆಟ್ಟರು ಸ್ವಾಗತ ಭಾಷಣ ಮಾಡಿದ ಮೇಲೆ, ಕಾರ್ಯದರ್ಶಿ ಶ್ರೀ ಸಿ. ಎಲ್. ಸುಂದರನಾರಾಯಣ ಶ್ರೇಷ್ಠಿಯವರು ವರದಿಯನ್ನು ಒಪ್ಪಿಸಿದರು. ಸಂಘಕ್ಕೆ ಒಂದು ಕಟ್ಟಡಕ್ಕಾಗಿ ಧನ್ವಂತರಿ ರಸ್ತೆಯಲ್ಲಿ ಸ್ಥಳವನ್ನು ಕೊಡಬೇಕೆಂದು ಶ್ರೀ ಯು. ಎಲ್. ರಾಮಚಂದ್ರರಾಯರು ಕೋರಿ ಭಾಷಣ ಮಾಡಿದರು.

. ಅಧ್ಯಕ್ಷರು ಮಾತನಾಡಿ, ಸಂಘದ ಪುರೋಭಿವೃದ್ಧಿಗಾಗಿ ಮೆಚ್ಚುಗೆಯನ್ನು ಸೂಚಿಸಿದರು ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯಲು ಮಹಾಜನರು ತೆರಿಗೆಗಳನ್ನು ಕೊಡಬೇಕೆಂದೂ, ಎರಡನೇ ಪಂಚ ವಾರ್ಷಿಕ ಯೋಜನೆಯನ್ನು ಸಾಧಿಸಲು ಪ್ರಜೆಗಳು ಇನ್ನೂ ಹೊರೆಯನ್ನು ಹೊರಬೇಕಾಗುವುದೆಂದೂ ನುಡಿದರು. ಅದುದರಿಂದ ತೆರಿಗೆಗಳನ್ನು ಯಾವ ವಿಧದಲ್ಲೂ ಕಡಿಮೆ ಮಾಡುವ ಸಂಭವವಿಲ್ಲವೆಂದೂ ಸಹ ಅವರು ಸೂಚಿಸಿದರು.

..ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಮಾತೃ ಮಂಡಳಿಯ ವಿದ್ಯಾ ಶಾಲಾ ವಾರ್ಷಿಕೋತ್ಸವ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಮಾತೃ ಮಂಡಲಿಯ ವಿದ್ಯಾ ಶಾಲಾ ವಾರ್ಷಿಕೋತ್ಸವವು ನೆನ್ನೆ ಮಂಡಲಿಯಲ್ಲಿ ನೆರವೇರಿತು ರಾಮಕೃಷ್ಣಾಶ್ರಮದ ಶ್ರೀ ಸೋಮನಾಥಾನಂದರವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯಾದನಂತರ ಮಂಡಲಿಯ ಅಧ್ಯಕ್ಷಿಣಿ ಶ್ರೀಮತಿ ಸುನಂದಮ್ಮನವರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ಮಾಲಿನಿಯವರ ಸಂಗೀತ ಮತ್ತು ಕಾರ್ಯದರ್ಶಿ ಶ್ರೀಮತಿ ಪಾರ್ವತಮ್ಮ ರಾಮಯ್ಯಂಗಾರ್ಯರಿಂದ ವರದಿಗಳಾದನಂತರ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಅವರು ಭಾಷಣ ಮಾಡಿ ಪೋಷಕರು, ಬೋಧಕರು ಮತ್ತು ವಿದ್ಯಾರ್ಥಿಗಳ ಕರ್ತವ್ಯವನ್ನು ತಿಳಿಸಿದರು ಮಂಡಲಿಯು ಶಾಲೆಯನ್ನು ಮುಚ್ಚಬೇಕೆಂದು ಸದಸ್ಯರಲ್ಲಿ ಹುಟ್ಟಿಗಿದ್ದ ಅಭಿಪ್ರಾಯವನ್ನು ಮರೆತು, ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ನಿಜ ರೀತಿಯಲ್ಲಿ ತಮ್ಮ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಜನಸೇವೆಯಲ್ಲಿ ತೊಡಗಬೇಕೆಂದು ಸೂಚಿಸಿದರು. ನಾಟಕ, ನೃತ್ಯಗಳಾದನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ನಗರದಲ್ಲಿ ಜನಸಂಘದವರ ಸಮ್ಮೇಳನ

ನಗರದ ಜನ ಸಂಘದ ಸ್ಥಾನೀಯ ಸಮಿತಿಗಳ ಸದಸ್ಯರ ಸಭೆಯು ನೆನ್ನೆ ಡಾ॥ ಎಸ್. ಆರ್. ವೆಂಕಟಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿತ್ತು. ಈ ತಿಂಗಳು ೩೧ ಮತ್ತು ಜನವರಿ ೧ನೇ ತಾರೀಕು ಉಡುಪಿಯಲ್ಲಿ ನಡೆಯುವ ಪ್ರಾಂತೀಯ ಸಭೆಗೆ ಪ್ರತಿನಿಧಿಗಳನ್ನು ಕಳುಹಲು ನಿರ್ಧರಿಸಲಾಯಿತು. ಬರುವ ತಿಂಗಳು ೫ನೇ ತಾರೀಕು ನಗರದಲ್ಲಿರುವ ಜನ ಸಂಘದವರ ಸಮ್ಮೇಳನವನ್ನು ನಡೆಸಬೇಕೆಂದು ನಿಶ್ಚಯಿಸಲಾಯಿತು. ಅಖಿಲ ಭಾರತ ಜನ ಸಂಘದ ಉಪಾಧ್ಯಕ್ಷರಾದ ದೇವಪ್ರಸಾದ ಘೋಷರು ಅದರ ಆರಂಭೋತ್ಸವವನ್ನು ನೆರವೇರಿಸುವಂತೆ ಪ್ರಾರ್ಥಿಸಲು ತೀರ್ಮಾನಿಸಲಾಯಿತು

ಗಾಯತ್ರಿಪುರಕ್ಕೆ ನೀರಿನ ಸೌಲಭ್ಯ

ನಗರದ ಪೂರ್ವ ಭಾಗದಲ್ಲಿರುವ ಮ್ಯುನಿಸಿಪಲ್ ನಗರದ ಹಿಂಭಾಗದ ಗಾಯತ್ರಿಪುರಕ್ಕೆ ಪೌರಸಭೆಯವರು ಕಳೆದ ೨೧ನೇ ತಾರೀಕು ನೀರಿನ ಅನುಕೂಲತೆಗಳನ್ನು ಮಾಡಿಕೊಟ್ಟಿರುತ್ತಾರೆ. ಅಲ್ಲಿನ ನಿವಾಸಿಗಳಿಗೆ ನೀರಿನ ತೊಂದರೆಯು ಈಗ ತಪ್ಪಿರುವುದೆಂದೂ, ಆ ಪ್ರದೇಶದಲ್ಲಿರುವ ನಿವೃತ್ತ ಸ್ತ್ರೀಯರ ಕಾಲೊನಿಯ ಪ್ರಾರಂಭೋತ್ಸವವನ್ನು ನೆರವೇರಿಸುವಂತೆ ಪೌರಸಭಾಧ್ಯಕ್ಷರನ್ನು ಕೋರಲಾಗಿರುವುದೆಂದೂ ತಿಳಿದುಬಂದಿದೆ.

ವಿದ್ಯಾರ್ಥಿಗಳ ಅಶಿಸ್ತಿಗೆ ವೈಯಕ್ತಿಕ ಸಂಪರ್ಕವಿಲ್ಲದುದೇ ಕಾರಣ

ಡಾ॥ ರಾಧಾಕೃಷ್ಣರವರ ಭಾಷಣ

ರೇಣಿಗುಂಟದ ಪೇಥರ್ ಸ್ಮಾರಕ ಪ್ರೌಢಶಾಲೆಯ ೭೫ನೇ ಜೂಬಿಲಿ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಉಪಾಧ್ಯಕ್ಷ ಡಾ॥ ರಾಧಾಕೃಷ್ಣನ್‌ರವರು ವಿದ್ಯಾರ್ಥಿಗಳಲ್ಲಿ ಅಶಿಸ್ತು ಇರುವುದಕ್ಕೆ, ವ್ಯಾಸಂಗ ಮಾಡುವವರ ಸಂಖ್ಯೆಯು ವಿಪರೀತವಾಗಿ, ಅದರಿಂದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಸಂಪರ್ಕದ ಕೊರತೆಯುಂಟಾಗಿರುವುದೇ ಕಾರಣವೆಂದು ತಿಳಿಸಿದರು. ಪ್ರವೇಶಗಳನ್ನು ಮಿತಿಗೊಳಿಸಿ, ಶಕ್ಯವಾದ ಉಪಾಧ್ಯಾಯರನ್ನು ನೇಮಿಸಿದ ಹೊರತು ಯುವಕರನ್ನು ಸರಿಯಾದ ದಾರಿಯಲ್ಲಿ ಕರೆದೊಯ್ಯಲು ಸಾಧ್ಯವಾಗುವುದಿಲ್ಲವೆಂದು ಅವರು ತಿಳಿಸಿರುತ್ತಾರೆ.

ರಷ್ಯಾ ಮತ್ತು ಚೀಣಾ ಭಾಷೆ ಕಲಿಯಲು ನೆಹರೂ ಸಲಹೆ

ಹಿಂದಿ, ಬಂಗಾಳಿ, ತೆಲುಗು, ತಮಿಳು ಭಾಷೆಗಳಲ್ಲಿ ಎಷ್ಟೇ ಪಾಂಡಿತ್ಯ ಪಡೆದು ಸುಸಂಸ್ಕೃತರಾದರೂ ವಿದೇಶೀ ಭಾಷೆಗಳನ್ನು-ಮುಖ್ಯವಾಗಿ ಇಂಗ್ಲಿಷ್, ಮರೆತರೆ ಭಾರತವು ಎರಡನೇ ದರ್ಜೆಯದಾಗುವುದೆಂದು ನೆಹರೂರವರು ಅಭಿಪ್ರಾಯಪಟ್ಟಿರುವರು. ಭಾರತದ ನೆರೆಯ ರಾಷ್ಟ್ರಗಳಾದ ರಷ್ಯಾ ಮತ್ತು ಚೀಣಾ ಭಾಷೆಗಳನ್ನೂ ಅರಿಯಬೇಕೆಂದು ಅವರು ಸಲಹೆ ಮಾಡಿರುತ್ತಾರೆ

ವಿದ್ಯಾವಂತ ನಿರುದ್ಯೋಗಿಗಳಿಗೆ ೫ ಕೋಟಿ ರೂ. ಯೋಜನೆ

ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ೫॥ ಲಕ್ಷವಿರುವುದೆಂದು ಹೇಳಲಾಗಿದೆ. ವಿದ್ಯಾವಂತ ನಿರುದ್ಯೋಗಿಗಳಿಗಾಗಿ ೫ ಕೋಟಿ ರೂ. ವೆಚ್ಚದಿಂದ ವಿಶೇಷ ಕಾರ್ಯಕ್ರಮಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆ ಅಂಗವಾಗಿ ಕೈಗೊಳ್ಳಲಾಗುವುದು.

ಮಲಯದಲ್ಲಿ ಸರ್ಕಾರಕ್ಕೂ ಕಮ್ಯೂನಿಸ್ಟರಿಗೂ ಒಪ್ಪಂದ

ಮಲಯದಲ್ಲಿ ಹಲವಾರು ವರ್ಷಗಳಿಂದಲೂ ಸರ್ಕಾರಕ್ಕೂ ಕಮ್ಯೂನಿಸ್ಟರಿಗೂ ನಡೆಯುತ್ತಿದ್ದ ಕಾಳಗಗಳು ಮುಕ್ತಾಯವಾಗಲು ಬರುವ ವಾದ ಸಂಧಾನ ನಡೆಸುವುದಕ್ಕಾಗಿ ಉಭಯ ಪಕ್ಷಗಳ ಪ್ರತಿನಿಧಿಗಳಿಗೂ ಮೊನ್ನೆ ಒಪ್ಪಂದವಾಯಿತು.

ನ್ಯಾಷನಲ್ ಲೀಗ್ ಸಂಸ್ಥೆಯ ವಾರ್ಷಿಕೋತ್ಸವ

ಇಲ್ಲಿನ ನ್ಯಾಷನಲ್ ಲೀಗ್ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭವು ಸುಪ್ರಸಿದ್ಧ ಸಾಹಿತಿ ಶ್ರೀ ತ ರಾ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ, ಸಹಕಾರ ಭವನದಲ್ಲಿ ಮೊನ್ನೆ ಸಂಜೆ ನೆರವೇರಿತು • ಶ್ರೀಮತಿ ರಾಜಮ್ಮನವರಿಂದ ಪ್ರಾರ್ಥನೆಯಾದಮೇಲೆ ಶ್ರೀಮತಿ ಶಾಂತಾದೇವಿಯವರಿಂದ ನೃತ್ಯವಾಯಿತು. ಶ್ರೀಮತಿ ಪದ್ಮ ಮತ್ತು ಪಾರ್ಟಿಯವರಿಂದ ಸುಶ್ರಾವ್ಯವಾದ ಸಂಗೀತವು ನಡೆಯಿತು ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಹಿತ ನುಡಿಗಳನ್ನಾಡಿದರು. ಇಂದಿನ ವಿದ್ಯಾರ್ಥಿಗಳಲ್ಲಿ ಉತ್ತಮ ಶಿಸ್ತು, ಸಂಯಮ ಮತ್ತು ನಡತೆಗಳಿರಬೇಕೆಂದು ಸೂಚಿಸಿದರು. ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವರ್ಗದವರಿಂದ "ಬಲಿಯಾದ ಹೆಣ್ಣು" ಎಂಬ ಸಾಮಾಜಿಕ ನಾಟಕವೂ ವಿದ್ಯಾರ್ಥಿನಿಯರಿಂದ 'ಆಫೀಸಿನಲ್ಲಿ ಹುಲಿ, ಮನೆಯಲ್ಲಿ ಇಲಿ' ಎಂಬ ನಾಟಕವೂ ಅಭಿನಯಿಸಲ್ಪಟ್ಟವು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫೮ ವ ವಸಂತ ಸಂಗೀತ. ಮಧ್ಯಾಹ್ನ ೧೨ ೫ ಆರ್. ಗೋವಿಂದಸ್ವಾಮಿ ಪಿಳ್ಳೆಲು. ೧ ಮಹಿಳೆಯರ ಕಾರ್ಯಕ್ರಮ. ೮ ೩೦ ಮತ್ತು ೧-೫೦ ಕೊಳಲು ಸಂಜೆ ೫ ೩೦ ಬಾಲ ಜಗತ್. ಮಕ್ಕಳ ಕಾರ್ಯಕ್ರಮ. ೬-೧೫ ಎಂ ಇಂದಿರಾಬಾಯಿ ಶಾಸ್ತ್ರ ಪಾಠ. ೭-೩೦ ಎ. ಎಂ ಕೃಷ್ಣರಾಯರಿಂದ ಗಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಗಳ ವಿಮರ್ಶೆ. ೮ ಸಂಗೀತೋತ್ಸವದ ಪ್ರಸಾರ. ೯-೧೫ ಉರ್ದು ಗೀತೆಗಳು. ೯ ೩೦ ರಿಂದ ೧೧ ಸಂಗೀತೋತ್ಸವದ ಪ್ರಸಾರ.

ದೊಡ್ಡ ಸಂಸ್ಥಾನಗಳಿರುವುದು ಸೂಕ್ತವೆಂದು ನೆಹರೂ ಅಭಿಮತ

ಪ್ರಧಾನಿ ನೆಹರೂರವರು ರಾಜ್ಯ ಸಭೆಯಲ್ಲಿ ಮೊನ್ನೆ ಭಾಷಣ ಮಾಡಿ, ಕಿರಿಯ ಸಂಸ್ಥಾನಗಳಿರುವುದು ಉತ್ತಮವೆಂದು ತಾವು ಮೊದಲು ಭಾವಿಸಿದ್ದುದಾಗಿಯೂ, ಆದರೆ ಈ ಬಗ್ಗೆ ವಿಶೇಷ ಪರಿಶೀಲನೆ ನಡೆಸಿದನಂತರ, ದೊಡ್ಡ ಸಂಸ್ಥಾನಗಳಿರುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬಂದಿರುವುದಾಗಿಯೂ ವ್ಯಕ್ತಪಡಿಸಿದರು. ಯೋಜನೆಗಳನ್ನು ಹಾಕುವುದಕ್ಕೂ ಮತ್ತು ಆರ್ಥಿಕ ಸಮಸ್ಯೆಗಳನ್ನು ನಿವಾರಿಸುವುದಕ್ಕೂ, ಸಣ್ಣ ಸಂಸ್ಥಾನಗಳಿಂದ ಅಡಚಣೆಗಳು ಬರುವುವೆಂದೂ, ಚಿಕ್ಕ ಸಂಸ್ಥಾನಗಳು ಇದ್ದಷ್ಟೂ ಯೋಜನೆಗಳನ್ನು ಹಾಕುವುದು ತುಂಬಾ ಕಷ್ಟಕರವೆಂದೂ ನೆಹರೂರವರು ಅಭಿಪ್ರಾಯಪಟ್ಟರು ಪ್ರಾದೇಶಿಕ ಮಂಡಲಗಳು ಸ್ಥಾಪಿತವಾದರೆ ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳ ನಡುವೆ ಸಮ ತೂಕವುಂಟಾಗುವುದೆಂದೂ ಅವರು ಹೇಳಿದರು.

ನೃತ್ಯವು ಧರ್ಮದ ಅಂಗವಾಗಬೇಕೆಂದು ರಾಜಾಜಿ ಸಲಹೆ

ಮದ್ರಾಸಿನಲ್ಲಿ ಕಲಾ ಕ್ಷೇತ್ರದ ಕಲಾ ಹಬ್ಬವನ್ನು ಆರಂಭಿಸುತ್ತಾ, ಸಿ. ರಾಜಗೋಪಾಲಾಚಾರಿಯವರು ಮಾತನಾಡಿ, ನೃತ್ಯ ಕಲೆಯು ಅಭಿವೃದ್ಧಿಗೊಂಡು ಸಜೀವ ಶಕ್ತಿಯುಳ್ಳದ್ದಾಗಬೇಕಾದರೆ ದೇವರು ಮತ್ತು ಧರ್ಮದ ಭಕ್ತಿಯೊಡನೆ ಅದು ಪುನಃ ಬೆರೆಯಬೇಕೆಂದು ತಿಳಿಸಿರುತ್ತಾರೆ. ಅಂತಹ ಸಂಗೀತ ಮತ್ತು ನೃತ್ಯವೇ ಅತ್ಯಂತ ಉತ್ತಮ ಅಸ್ತ್ರವೆಂದೂ ಅವರು ಹೇಳುತ್ತಾರೆ ನೃತ್ಯ ಕಲೆಯನ್ನು ಉದ್ಯೋಗಕ್ಕಾಗಿ ಮಾವರ್ತಿ ಸಿಕೊಳ್ಳುವುದಕ್ಕೆ ಅವರು ತೀವ್ರ ವಿರೋಧವನ್ನು ಸೂಚಿಸಿರುವರು.

ನೆಹರೂ- ಚೀಣಾ ಉಪಾಧ್ಯಕ್ಷಿಣಿಗೆ ಮಂಗಳೂರಿನವರ ಸನ್ಮಾನ

ಈ ತಿಂಗಳು ೨೮ರಂದು ಪ್ರಧಾನಿ ನೆಹರೂರವರಿಗೆ ಮಂಗಳೂರಿನ ಪೌರಸಭೆಯವರೂ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರೂ ಮಾನಪತ್ರಗಳನ್ನು ಅರ್ಪಿಸುವರು. ೩೦ನೇ ತಾರೀಕು ಪೌರಸಭೆಯವರು ಚೀಣದ ಉಪಾಧ್ಯಕ್ಷಿಣಿ ಮೆಡೇಂ ಸೂಂಗ್ ಚಿಂಗ್‌ಲಿಂಗ್‌ರವರಿಗೆ ಮಾನಪತ್ರವನ್ನು ಒಪ್ಪಿಸುವರು ಸೂಂಗ್‌ಚಿಂಗ್‌ಲಿಂಗರು ಅಲ್ಲಿ ಸೇರುವ ಅಖಿಲ ಭಾರತ ಮಹಿಳಾ ಸಮ್ಮೇಳನದಲ್ಲಿ ಹಾಜರಿರುವರು

ರಷ್ಯದಿಂದ ಬಂದ ವಿಮಾನಕ್ಕೆ ಮೇಘದೂತ್ ಎಂದು ಹೆಸರು

ರಷ್ಯದ ಪ್ರಧಾನಿ ಬುಲ್ಗಾನಿನ್ನರು ನೆಹರೂರವರಿಗೆ ಬಹುಮಾನವಾಗಿ ಕೊಟ್ಟಿರುವ ಇಲ್ಯೂಷಿನ್-೧೪ ನಂಬರಿನ ವಿಮಾನಕ್ಕೆ ನೆಹರೂರವರು ಮೇಘದೂತ್ ಎಂದು ನಾಮಕರಣ ಮಾಡಿರುತ್ತಾರೆ. ಇದೇ ಮಾದರಿ ವಿಮಾನದಲ್ಲಿ ಬುಲ್ಗಾನಿನ್ ಮತ್ತು ಕ್ರುಶ್ಚೇವರು ದಕ್ಷಿಣ ಏಷ್ಯಾ ಪ್ರವಾಸ ಮಾಡಿದ್ದರು.

ರಿಕ್ರಿಯೇಷನ್ ಕ್ಲಬ್ಬಿನ ಆರಂಭೋತ್ಸವ

ಮಂಡಿ ಮೊಹಲ್ಲಾಯ ೬ನೇ ಕ್ರಾಸಿನ ಬಡಾವಣೆಯಲ್ಲಿರುವ ಚಾಮರಾಜ ರಿಕ್ರಿಯೇಷನ್ ಕ್ಲಬ್ಬಿನ ಆರಂಭೋತ್ಸವವನ್ನು ನೆನ್ನೆ ಬೆಳಗ್ಗೆ ಪೌರಸಭಾ ಸದಸ್ಯ ಶ್ರೀ ಎಂ. ಕೆ. ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು.

ಅಂಧಕಾಸುರ ಸಂಹಾರ

ಇದೇ ಮಾರ್ಗಶಿರ ಶುದ್ಧ ಚತುರ್ದಶಿ ಬುಧವಾರ ರಾತ್ರಿ ೮॥ ಗಂಟೆಗೆ ಶ್ರೀ ತ್ರಿನಯನೇಶ್ವರ ಸ್ವಾಮಿಯವರ ದೇವಸ್ಥಾನದ ಅಂಧಕಾಸುರ ಸಂಹಾರ ಉತ್ಸವವು ಅರಮನೆಯ ಮುಂಭಾಗದಲ್ಲಿ ಜರುಗುತ್ತದೆ.

ದೇಶದಲ್ಲಿ ಮಾಂಸಾಹಾರಿಗಳ ಸಂಖ್ಯೆ ಶೇಕಡ ೭೮

ದೇಶದಲ್ಲಿರುವ ಜನಗಣತಿಯ ಪ್ರಕಾರ ೧೦೦ಕ್ಕೆ ೭೮ ಮಂದಿ ಮಾಂಸಾಹಾರಿಗಳಿರುವರೆಂಬುದು ವ್ಯಕ್ತವಾಗುವುದೆಂದೂ, ಆಹಾರಾಭಾವ ಕಾಲದಲ್ಲಿ ಇದರಿಂದ ಅನುಕೂಲವೇ ಆಯಿತೆಂದೂ ಬೆಂಗಳೂರಿನಲ್ಲಿ ಗೃಹ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಫಲಪುಷ್ಪ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದಾಗ ತಿಳಿಸಿದರು.

ಸಮಾನತೆ ಮೇಲೆ ನಿ[...] ಸಮಾಜವಾದಿ ಸಮಾಜ [...]

ಭಾರತದ ಪ್ರಜಾ ಸಮಾಜವಾ[...] ನೂತನ ಗುರಿ

ಭಾರತದ ಪ್ರಜಾ ಸಮಾಜವಾದಿ [...] ರ್ಯಕಾರಿ ಸಮಿತಿಯವರು ತಮ್ಮ [...] ಬಂಧಪಟ್ಟ ಹೇಳಿಕೆಯೊಂದನ್ನು ಹೊ[...] ಪ್ಪದಲ್ಲಲ್ಲಾ ಸ್ವತಂತ್ರ, ಜನರ ನ[...] ತ್ರ್ಯ, ಸಮಾನತೆ ಮತ್ತು ಸ್ವಯ[...] ಕಾರಗಳುಳ್ಳ ಸಮಾಜದ ಸ್ಥಾಪನೆ[...] ವಾದದ ಗುರಿಯೆಂದು ತಿಳಿಸಿರುತ್ತಾ[...] ವಿರ ಪದಗಳುಳ್ಳ ಈ ಹೇಳಿಕೆಯನ್ನು [...] ಗಯಾ ನಗರದಲ್ಲಿ ಆರಂಭವಾಗುವ [...] ಳ ಅಧಿವೇಶನದಲ್ಲಿ ಮಂಡಿಸಲಾಗು[...]

ಅಂತರ ರಾಷ್ಟ್ರೀಯ ಕಮ್ಯೂನಿ[...] ನ್ನು ವಿಸರ್ಜಿಸಬೇಕೆಂದು ಹೇಳಿಕೆಯ[...] ಷ್ಯದಲ್ಲಿ ಮಾರ್ಕ್ಸ್ ತತ್ವವನ್ನು ಆ[...] ಸಮಾಜವಾದವನ್ನಾಗಿಯೂ, ಕ್ರ[...] ಕ್ರಾಂತಿಯನ್ನೂ ಮತ್ತು ಅವರ ಸ[...] ಷ್ಟೂ ಹಲವರ ಕೈಯಲ್ಲಿರುವ ಅಧಿ[...] ಯೂ ಪರಿವರ್ತಿಸಲಾಗಿರುವುದೆಂದು[...] ಅಂತರರಾಷ್ಟ್ರೀಯ ಸಮಾಜವಾ[...] ರಾಜತಾಂತ್ರಿಕ ಮತ್ತು ರಾಜ್ಯ ವಿಸ್ತ[...] ಹದ ಹೊದಿಕೆಯಾಗಿರುವುದೆಂದೂ [...] ಷ್ಟ್ರೀಯ ಸಮಿತಿಯವರು ಹಂಚಿ[...]

ದ್ವಿತೀಯ ಯೋಜನೆಯಲ್ಲಿ [...] ಸ್ತ್ರೀಯರಿಗೆ ಉದ್ಯೋ[...]

ದ್ವಿತೀಯ ಪಂಚ ವಾರ್ಷಿಕ ಯೋ[...] ಧಿಯಲ್ಲಿ ೨ ಲಕ್ಷ ಮಂದಿ ಸ್ತ್ರೀಯರಿ[...] ಗ ಕಲ್ಪಿಸಲು ೬॥ ಕೋಟಿ ರೂ. ವೆ[...] ನಾ ತೆರನಾದ ಯೋಜನೆಗಳನ್ನು [...] ಮಾಜಿಕ ಕಲ್ಯಾಣ ಸಮಿತಿಯವರು [...] ಲಿರುವರೆಂದು ಸಮಿತಿಯ ಅಧ್ಯಕ್ಷಿ[...] ಬಾಯಿ ದೇಶಮುಖ್‌ರವರು ತಿಳಿ[...] ದ್ವಿತೀಯ ಯೋಜನೆ ಅಂಗವಾಗಿ [...] ಮಾಂತರ ಕಲ್ಯಾಣ ಪ್ರಾಜೆಕ್ಟುಗಳ[...] ಕ್ಕಲಾಗುವುದೆಂದೂ, ೫೦ ಸಾವಿರ [...] ಸಾವಿರ ಮಹಿಳೆಯರಿಗೆ ಜೀವನ[...] ಲಭಿಸುವುದೆಂದೂ ತಿಳಿಸಿರುತ್ತಾರೆ [...] ಯೋಜನೆಯಲ್ಲಿ ಅನೀತಿ ವ್ಯಾಪಾ[...] ವ ಮಹಿಳೆಯರನ್ನು ರಕ್ಷಿಸಿ ಜೀವನ [...] ಸಗ ಮಾಡಲಾಗುವುದೆಂದೂ [...] ವರು

ಸಂಸ್ಕೃತವೇ ರಾಷ್ಟ್ರ ಭಾಷೆ[...] ಲೆಂದು ಎ. ಆರ್ ಮುದಲಿ[...]

ಹಿಂದಿಯ ಬದಲು ಸಂಸ್ಕೃತವ[...] ಭಾಷೆಯಾಗಿ ಅಂಗೀಕರಿಸಿದರೆ, ಈ[...] ಕವು ಎದುರಿಸಬೇಕಾಗಿರುವ ಅನೇಕ [...] ಳು ಪರಿಹಾರವಾಗುವುವೆಂದು ಅ[...] ವಿಶ್ವವಿದ್ಯಾಲಯದ ವೈಸ್ ಚಾನ್ಸ[...] ಎ ರಾಮಸ್ವಾಮಿ ಮುದಲಿಯಾ[...] ತ್ತಾರೆ. ಭಾರತದ ೩,೦೦೦ ವರ್ಷ[...] ಯು ಉಳಿದಿದ್ದರೆ ಅದು ಸಂಸ್ಕೃತ [...] ಲೇ ಎಂದು ಅವರು ಹೇಳಿರುವರು

ಅರ್ಜೆಂಟೈನಾದಲ್ಲಿ ಕ[...] ಬಂಧನ

ಅರ್ಜೆಂಟೈನಾದಲ್ಲಿ ಮಾಜಿ ಅಧ್ಯ[...] ರ ಪರವಾಗಿ ದಂಗೆಯಾಗುವ ಸಂ[...] ದೂ, ಈ ಬಗ್ಗೆ ನೂರಾರು ಜನರ[...] ಲಾಗಿದೆಯೆಂದೂ ವರದಿಯಾಗಿದೆ [...] ನ್ನತ ಅಧಿಕಾರಿಗಳೂ ಬಂಧಿತರಾ[...]

ಚಿನ್ನದ ಗಣಿ ಅಕಸ್ಮಿ[...] ಒಬ್ಬನ ಮರಣ

ಕೋಲಾರದ ನಂದಿದುರ್ಗ ಚಿ[...] ಲ್ಲಿ ಬಂಡೆಯೊಂದು ಕುಸಿದುಬಿದ್ದ[...] ಗಿ ಅಸಿಸ್ಟೆಂಟ್ ಫೋರ್ಮನ್ ಸಿ. [...] ರ್ಡಿಚ್‌ರವರು ಸ್ವಾಕರಿಷ್ಟರುತ್ತಾ[...] ಕಾರ್ಮಿಕರಿಗೆ ಗಾಯವಾಗಿದೆ.

Edited, Printed and P[...]
by A. K. Nagarajan a[...]
Press, D Subbiah Road[...]

ರಿಜಿಸ್ಟರ್ ನಂ. ೭೪೩

ಸುಸ್ಥಾಪಿತ ಪತ್ರಿಕೆಗಳಲ್ಲೊಂದಾಗಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿಪ್ರತಿ ಪತ್ರಿಕೆ ೩ ಕಾಸು

ಚಂದಾ ದರ — ಏಜಂಟರುಗಳ ಮೂಲಕ ತಿಂಗಳಿಗೆ ಒಂದು ರೂ. ಅಂಚೆ ಮೂಲಕ ತಿಂಗಳಿಗೆ ಒಂದು ರೂ. ಬಿಡಿ ಪತ್ರಿಕೆ ಮೂರು ಕಾಸು

ಸಂ: ೦೪] SADHVI : TUESDAY 27-12-1955 ಮೈಸೂರು ಮಂಗಳವಾರ : ೨೭-೧೨-೧೯೫೫ [ಸಂಚಿಕೆ : ೧೩೦

ಭಾರತದೊಳಗೆ ಪಾಕಿಸ್ತಾನ್ ವಿಮಾನಗಳ ಅಕ್ರಮ ಪ್ರವೇಶ

ಸಮಾಜ ಸೇವೆಗೆ ಮಹಿಳೆಯರು ಮುಂದೆ ಬರಬೇಕು

ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯಲ್ಲಿ ಪುಟ್ಟಮ್ಮ ಪಾಟೀಲರ ಭಾಷಣ

ರಾಯಚೂರಿನಲ್ಲಿ ಮೊನ್ನೆ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನೆನ್ನೆ ಸಂಜೆ ಮಹಿಳಾ ಗೋಷ್ಠಿಯು ನಡೆಯಿತು. ಬೊಂಬಾಯಿ ವ್ಯವಸಾಯ ಮಂತ್ರಿ ಪಾಟೀಲ ಕಲ್ಲನಗೌಡರ ಪತ್ನಿ ಶ್ರೀಮತಿ ಪುಟ್ಟಮ್ಮ ಪಾಟೀಲರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ನಳಿನಿದೇವಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಪುಟ್ಟಮ್ಮನವರು ತಮ್ಮ ಭಾಷಣದಲ್ಲಿ, ಕರ್ನಾಟಕ ಮಹಿಳೆಯರು ಸಮಾಜ ಸೇವಾ ಕಾರ್ಯದಲ್ಲಿ ಆಸಕ್ತಿ ವಹಿಸಬೇಕೆಂದೂ, ರೋಗಿಗಳು ಅನೀತಿ ವ್ಯಾಪಾರದಲ್ಲಿ ನಿರತರಾಗಿರುವ ಯುವತೀ ಮುಂತಾದವರನ್ನು ಉತ್ತಮ ಸ್ಥಿತಿಗೆ ತರಲು ಪ್ರಯತ್ನಿಸಬೇಕೆಂದೂ ಸೂಚಿಸಿದರು. ಮಹಿಳೆಯರು ಸಂಯುಕ್ತ ಕರ್ನಾಟಕ ಮತ್ತು ಸ್ವತಂತ್ರ ಭಾರತಗಳಿಗೆ ಸೇವೆ ಸಲ್ಲಿಸಲು ಮುಂದೆ ಬರಬೇಕೆಂದು ಅವರು ನುಡಿದರು.

ಗ್ರಾಮಾಂತರದಲ್ಲಿ ಅನಕ್ಷರಸ್ಥೆಯರಾದ ಮಹಿಳೆಯರಿಗೆ ಅಕ್ಷರ ಜ್ಞಾನವನ್ನು ತಂದುಕೊಡುವುದು ಅವಶ್ಯವೆಂದೂ, ಈ ಕಾರ್ಯದಲ್ಲಿ ಸಾಹಿತಿಗಳ ನೆರವು ಅವಶ್ಯಕವೆಂದೂ ಅವರು ಹೇಳಿದರು. ಪಾಶ್ಚಾತ್ಯ ಪ್ರಭಾವಗಳಿಗೆ ಭಾರತೀಯ ಮಹಿಳೆಯರು ಒಳಗಾಗುತ್ತಿರುವ ಬಗ್ಗೆ ಸಂತೋಷವ ವ್ಯಕ್ತಪಡಿಸಿ, ಪರಂಪರಾನುಗತ ಪದ್ಧತಿ ಮತ್ತು ಪಾಶ್ಚಾತ್ಯ ಪ್ರಭಾವಗಳ ನಡುವೆ ಸಿಕ್ಕಿರುವ ಆಧುನಿಕ ಮಹಿಳೆಯರು ಈಗ ತಮ್ಮ ನಿಜವಾದ ಧ್ಯೇಯವನ್ನು ಅರಿಯುವುದು ಅಗತ್ಯವೆಂದು ಹೇಳಿದರು.

ಇತರ ಶ್ರೀಮತಿಗಳಾದ ಇಂದಿರಾ, ವಿನೋದಿನಿ, ವಿಮಲಾಬಾಯಿ ಮೇಲ್ಕೋಟೆ, ಶ್ರೀ ಶಾರದಮ್ಮ ಮುಂತಾದವರು ಭಾಷಣ ಮಾಡಿದರು.

ಕಾಲೇಜು ಶಾಖೆಯ ಆರಂಭೋತ್ಸವ

...ಯಲ್ಲಿರುವ ಆದಿಜಾಂಬವರ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಹರಿಜನ ಸೇವಾದಳದ ಶಾಖೆಯೊಂದರ ಪ್ರಾರಂಭೋತ್ಸವವನ್ನು ನೆರವೇರಿಸಲಾಗುವುದು. ಶ್ರೀ ...ಯ್ಯನವರು ಅದರ ಆರಂಭ ಮಾಡುವರು. ...ಯ ಪತ್ರಿಕೆ ಸಂಪಾದಕ ಶ್ರೀ ಎ. ರಾ...ರು ಅಧ್ಯಕ್ಷತೆ ವಹಿಸುವರು.

ವಿದ್ಯಾಲಯದ ಅಧ್ಯಾಪಕರ ಸಮ್ಮೇಳನ

...ರು ವಿಶ್ವವಿದ್ಯಾಲಯದ ಅಧ್ಯಾಪಕರ ಸಮ್ಮೇಳನವು ಬೆಂಗಳೂರಿನಲ್ಲಿ ಬರುವ ...ಕು ಸೇರುವುದು. ಮುಖ್ಯ ಮಂತ್ರಿ ...ಮಂತಯ್ಯನವರು ಅದರ ಆರಂಭೋತ್ಸವ ನೆರವೇರಿಸುವರು. ವೈಸ್ ಛಾನ್ಸೆಲರ್ ...ಎಲ್. ಡಿಸೋಜಾರವರು ಅಧ್ಯಕ್ಷತೆ ...ರು. ಮೈಸೂರು ವಿಶ್ವವಿದ್ಯಾಲಯದ ಮತ್ತು ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ...ವನ್ನು ಸಮ್ಮೇಳನವು ಪರಿಶೀಲಿಸು...

ನೂತನ ಕನ್ನಡ ಪ್ರಾಂತವನ್ನು ಕರ್ನಾಟಕವೆಂದು ಕರೆಯಬೇಕು

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ

ರಾಯಚೂರಿನಲ್ಲಿ ಸಮಾವೇಶಗೊಂಡಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನೂತನ ಕನ್ನಡ ಪ್ರಾಂತವನ್ನು ಕರ್ನಾಟಕ ಎಂದು ಕರೆಯುವುದು ಸೂಕ್ತವೆಂದು ಅಭಿಪ್ರಾಯ ಸೂಚಿಸುವ ನಿರ್ಣಯವನ್ನು ನೆನ್ನೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಅಖಿಲ ಭಾರತ ಪ್ರಜಾ ಸಮಾಜವಾದಿಗಳ ಸಮ್ಮೇಳನ

ಪ್ರಜಾ ಸಮಾಜವಾದಿ ಪಕ್ಷದ ದ್ವಿತೀಯ ರಾಷ್ಟ್ರೀಯ ಸಮ್ಮೇಳನವು ನೆನ್ನೆ ಗಯಾ ನಗರದಲ್ಲಿ ಆರಂಭವಾಯಿತು. ಮಂಗಳೂರಿನ ಶ್ರೀ ಕೆ. ಆರ್. ಕಾರಂತರು ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನ ವನ್ನು ಸುಂದರವಾಗಿ ಅಲಂಕರಿಸಿದ್ದ ಮಂಟಪದಲ್ಲಿ ಏರ್ಪಡಿಸಲಾಗಿತ್ತು. ೭೦೦ ಪ್ರತಿನಿಧಿಗಳೂ ೫೦ ಸಾವಿರ ಪ್ರೇಕ್ಷಕರೂ ಭಾಗವಹಿಸಿದ್ದರು. ಕೆಂಪು ಬಣ್ಣದ ಟೋಪಿ ಧರಿಸಿದ್ದ ಜಿಲ್ಲೆಯ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕರ್ತರು ಬಹಿರಂಗ ಸಭೆಯಲ್ಲಿ ಬಂದು ಸೇರಿ "ಗಾಂಧೀಜಿಯವರ ಪಕ್ಷೆಯುಕ್ತ ಕಾಂಗ್ರೆಸ್ಸನ್ನು ಖಂಡಿಸಿ" ಎಂದು ಘೋಷಣೆ ಮಾಡಿದರು.

ಅಧ್ಯಕ್ಷತೆ ವಹಿಸಬೇಕಾಗಿದ್ದ ನರೇಂದ್ರ ದೇವರು ವೈದ್ಯರ ಸಲಹೆ ಪ್ರಕಾರ ಗಯಾಕ್ಕೆ ಹೋಗದಿದ್ದ ಕಾರಣ ಅವರ ಭಾಷಣವನ್ನು ಓದಲಾಯಿತು. ಅವರ ಭಾಷಣದಲ್ಲಿ ಪಕ್ಷದ ಮುಂದಿನ ಕಾರ್ಯಕರ್ತರ ಮುಖ್ಯ ಗುರಿಯಾಗಬಾರದೆಂದೂ, ವಿವೇಚನಾತ್ಮಕ ಟೀಕೆ ಮಾಡಬೇಕೆಂದೂ ಸೂಚಿಸಿದ್ದರು. ಈ ಪ್ರಾಂತದ ಭೂಮಿಯಲ್ಲಿ ನೂತನ ಸಮಾಜವಾದ ಸಮಾಜವನ್ನು ಸ್ಥಾಪಿಸುವುದು ಅಗತ್ಯವೆಂದು ಅವರು ತಿಳಿಸಿದರು.

ಮಂಡ್ಯ ಸಮ್ಮೇಳನದ ಕಾರ್ಯಕ್ರಮ

ಮಂಡ್ಯದಲ್ಲಿ ಬರುವ ತಿಂಗಳು ೧ನೇ ತಾರೀಕು ಮೈಸೂರು ಪ್ರಾಂತ ವಿರೋಧ ಸಮ್ಮೇಳನವು ಅಲ್ಲಿನ ಸಾರ್ವಜನಿಕ ವಿದ್ಯಾರ್ಥಿನಿಲಯದ ಆವರಣದಲ್ಲಿ ನಡೆಯುವುದು. ಶಾಸನ ಸಭಾ ಸದಸ್ಯರಾದ ಶ್ರೀ ಕೆ. ಲಕ್ಕಪ್ಪನವರು ಅಧ್ಯಕ್ಷತೆ ವಹಿಸುವರು. ಬೆಳಿಗ್ಗೆ ೮-೩೦ ಗಂಟೆಗೆ ಶ್ರೀ ಹೆಚ್. ಕೆ. ವೀರಣ್ಣಗೌಡರು ಧ್ವಜಾರೋಹಣ ಮಾಡುವರು. ೧೦ ಗಂಟೆಗೆ ಅಧ್ಯಕ್ಷರ ಮೆರವಣಿಗೆಯು ಇದೆ. ಸಮ್ಮೇಳನವು ೧೧-೩೦ ಗಂಟೆಗೆ ಪ್ರಾರಂಭವಾಗಿ ಮಧ್ಯಾಹ್ನ ೧ ಗಂಟೆವರೆಗೂ, ನಂತರ ೩ ಗಂಟೆಯಿಂದ ೫ರ ವರೆಗೂ ನಡೆಯುವುದು.

ರಕ್ಷಣಾ ಇಲಾಖಾ ವೆಚ್ಚದಲ್ಲಿ ಖೋತಾ

ರಷ್ಯಾ ಸರ್ಕಾರದವರು ರಕ್ಷಣಾ ವೆಚ್ಚವನ್ನು ಈ ಸಾರಿ ಶೇಕಡ ೧೦ರಷ್ಟು ಕಡಿಮೆ ಮಾಡಿರುತ್ತಾರೆ. ೧೯೫೬ ರಲ್ಲಿ ೧,೦೫೫ ಕೋಟಿ ರೂಬಲ್‌ಗಳನ್ನು ವೆಚ್ಚ ಮಾಡಬೇಕೆಂದು ಮೊದಲು ಗೊತ್ತಾಗಿತ್ತು. ಅದನ್ನು ೯೫೦ ಕೋಟಿ ರೂಬಲ್‌ಗೆ ಇಳಿಸಲಾಗಿದೆ.

ವಿಮಾನ ಕಾರ್ಖಾನೆಯ ಸಂಸ್ಥಾಪಕರ ದಿನೋತ್ಸವ

ಮಹಾರಾಜರ ಅಧ್ಯಕ್ಷ ಭಾಷಣ

ಬೆಂಗಳೂರು ೨೭

ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಸಂಸ್ಥಾಪಕರ ೧೫ನೇ ವರ್ಷದ ದಿನೋತ್ಸವದ ಅಧ್ಯಕ್ಷತೆ ವಹಿಸಿ ನೆನ್ನೆ ಮೈಸೂರಿನ ರಾಜಪ್ರಮುಖರು ಭಾಷಣ ಮಾಡಿ, ರಾಷ್ಟ್ರದ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಕಾರ್ಖಾನೆಯು ನಡೆಸುತ್ತಿರುವ ಕಾರ್ಯಗಳಿಗಾಗಿ ಮೆಚ್ಚಿಗೆಯನ್ನು ಸೂಚಿಸಿದರು. ವಿಮಾನ ಕಾರ್ಖಾನೆಯಲ್ಲಿ ನಿರ್ಮಾಣವಾದ ಶಿಕ್ಷಣ ವಿಮಾನದ ಬಗ್ಗೆ ನೆರೆಯ ರಾಷ್ಟ್ರಗಳು ಪ್ರಶಂಸಿಸಿರುವುದನ್ನು ಅವರು ತಿಳಿಸಿದರು. ಸಂಸ್ಥಾಪಕ ವಾಲ್‌ಚಂದ್ ಹೀರಾಚಂದರ ದೂರದರ್ಶಿತ್ವವನ್ನು ಪ್ರಶಂಸಿಸಿದರು.

ಕಾರ್ಖಾನೆಯ ಜನರಲ್ ಮ್ಯಾನೇಜರರು ಭಾಷಣ ಮಾಡಿ, ಬರುವ ವರ್ಷದಲ್ಲಿ ಜೆಟ್ ಇಂಜಿನ್, ವೇಗವಾಗಿ ಚಲಿಸಬಲ್ಲ ಕಾದಾಟದ ವಿಮಾನ ಮತ್ತು ಶಿಕ್ಷಣ ವಿಮಾನಗಳನ್ನು ತಯಾರಿಸಲಾಗುತ್ತದೆಂದು ಸೂಚಿಸಿದರು. ಪ್ರಧಾನಿ ನೆಹರೂರವರು ಸಂದೇಶವನ್ನು ಕಳುಹಿಸಿ, ಕಾರ್ಖಾನೆಗೆ ಉತ್ತಮ ಭವಿಷ್ಯವಿರುವುದಾಗಿ ಹೇಳಿರುವರು. ವಿಮಾನ ಹಾರಾಟದ ಪ್ರದರ್ಶನವೂ ನಡೆಯಿತು.

ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ನಾಟಕ ಗೋಷ್ಠಿ

ರಾಯಚೂರಿನಲ್ಲಿ ಸೇರಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಾಟಕ ಗೋಷ್ಠಿಯು ನೆನ್ನೆ ಬೆಳಿಗ್ಗೆ ಮೈಸೂರು ರಾಜ್ಯ ನಾಟಕ ಸಂಘದ ನಾಟಕಕಾರ ಹೆಚ್. ವೀರಣ್ಣನವರ ಅಧ್ಯಕ್ಷತೆಯಲ್ಲಿ ಕೂಡಿತು. ಶ್ರೀ ಎಂ. ಎಗ್. ಚೌಡಪ್ಪನವರು ರಂಗಭೂಮಿ ಎಂಬ ವಿಷಯವಾಗಿಯೂ ಶ್ರೀ ಎಗ್. ಕೆ. ಕುಲಕರ್ಣಿಯವರು ಪ್ರಯೋಗಾತ್ಮಕ ನಾಟಕಗಳು ಎಂಬ ವಿಷಯವಾಗಿಯೂ ಭಾಷಣ ಮಾಡಿದರು. ಶ್ರೀ ಆರ್. ಗುರುರಾಜರಾಯರಿಂದ 'ನಾಟಕ ಪ್ರದರ್ಶನಗಳ ಸಂವಿಧಾನ' ಎಂಬ ವಿಷಯವಾಗಿ ಬರೆಯಲಾದ ಲೇಖನವನ್ನು ಶ್ರೀ ಜಿ. ವೆಂಕಟಸುಬ್ಬಯ್ಯನವರು ಓದಿದರು. ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಸಭೆಗೆ ದಯಮಾಡಿಸಿ ಭಾಷಣ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಲಕ್ಕೆ ತಕ್ಕಂತೆ ಹೊಸ ನಾಟಕಗಳು ಬಂದರೆ ನಮ್ಮ ಪ್ರಾಚೀನ ಸಂಸ್ಕೃತಿಯ ಅಭಿಮಾನ ಸಫಲವಾಗುವುದೆಂದು ತಿಳಿಸಿದರು. ಸಮಾಜದ ಪ್ರಗತಿಗನುಗುಣವಾದ ಸಾಮಾಜಿಕ, ಚಾರಿತ್ರಿಕ ಮತ್ತು ಪೌರಾಣಿಕ ನಾಟಕಗಳನ್ನು ಬರೆಯಲು ಸಾಹಿತಿಗಳಿಗೆ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ಅವರು ಹೇಳಿ ನಾಟಕ ಕಲೆಯ ಅಭಿವೃದ್ಧಿಗೆ ಹಲವು ಸಲಹೆಗಳನ್ನು ನೀಡಿದರು.

ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಪೂರ್ವ ಜರ್ಮನಿಯ ಪ್ರಧಾನಿ ಆಟ್ಟೋ ಗ್ರೋಟ್‌ವಾಲ್‌ರವರು ಗೋವಾ ಬಗ್ಗೆ ಭಾರತದ ನಿಲುವಿಗೆ ತಮ್ಮ ಬೆಂಬಲವನ್ನು ಸೂಚಿಸಿರುತ್ತಾರೆ.

ಸಮಾಜ ಸೇವೆಯಲ್ಲಿ ಮಹಾತ್ಮ ಗಾಂಧಿಯವರ ಆದರ್ಶ

೩ನೇ ಭಾರತೀಯ ಸಮಾಜ ಸೇವಾ ಸಮ್ಮೇಳನದಲ್ಲಿ ಮಹಾರಾಜರ ಭಾಷಣ

ಸ್ವಂ. ವ. ಪ್ರೋ] ಬೆಂಗಳೂರು ೨೭

೩ನೇ ಭಾರತೀಯ ಸಮಾಜ ಸೇವಾ ಸಮ್ಮೇಳನವು ಈ ಸಂಜೆ ಮೈಸೂರು ರಾಜಪ್ರಮುಖರಿಂದ ಆರಂಭಗೊಳಿಸಲ್ಪಟ್ಟಿತು. ಶ್ರೀಮತಿ ಹಂಸಾ ಮೆಹತಾರವರು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ಸ್ವಾಗತ ಭಾಷಣ ಮಾಡಿದರು. ಆಂಧ್ರದ ಮುಖ್ಯ ಮಂತ್ರಿ ಬಿ. ಗೋಪಾಲರೆಡ್ಡಿ, ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶ ಶ್ರೀ ಎ. ಎಸ್. ಪಿ. ಅಯ್ಯರ್, ಆಚಾರ್ಯ ಜುಗುಲ್‌ಕಿಶೋರ್, ವಿಶ್ವಸಂಸ್ಥೆಯ ಪ್ರತಿನಿಧಿ ಡಾ|| ಕೆ. ಹೆಚ್. ಕಾಮ ಮುಂತಾದ ೮೦೦ ಪ್ರತಿನಿಧಿಗಳು ಆಗಮಿಸಿರುವರು.

ಶ್ರೀಮನ್ಮಹಾರಾಜರು ಭಾಷಣ ಮಾಡಿ, ಸಮಾಜ ಸೇವಾ ಕಾರ್ಯವನ್ನು ನಡೆಸಲು ಮಹಾತ್ಮಾ ಗಾಂಧಿಯವರು ಭಾರತೀಯರಿಗೆ ಮೊದಲು ದಾರಿ ತೋರಿದರೆಂದೂ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಜೊತೆಗೆ ಸಾಮಾಜಿಕ ಅನ್ಯಾಯಗಳನ್ನು ತೊಡೆದುಹಾಕುವಂತೆ ಸೂಚಿಸಿದ್ದರೆಂದೂ ತಿಳಿಸಿದರು. ಅದರಿಂದ ರಾಷ್ಟ್ರವು ಪುನರುಜ್ಜೀವನಗೊಳ್ಳುವುದೆಂದೂ ತಿಳಿಸಿದರು.

ಭಾರತದ ಮೇಲೆ ಪಾಕಿಸ್ತಾನದ ವಿಮಾನಗಳ ಅಕ್ರಮ ಹಾರಾಟ

ಅಮೃತಸರಕ್ಕೆ ೩೦ ಮೈಲಿ ದೂರದಲ್ಲಿರುವ ಪಾ... ಎಂಬ ಊರಿನ ಬಳಿ ಭಾರತದ ಗಡಿಯೊಳಗೆ ಪಾಕಿಸ್ತಾನದ ಎರಡು ವಿಮಾನಗಳು ಕಳೆದ ಬುಧವಾರ ಅಕ್ರಮ ಪ್ರವೇಶ ಮಾಡಿ ಹಾರಿದುವೆಂದೂ, ೩ ವ ಗತಿಯಿಂದ ಭಾರತದೊಳಗೆ ಒಂದು ಮೈಲಿ ದೂರದವರೆಗೂ ಬಂದುದಾಗಿಯೂ ವರದಿಯಾಗಿದೆ. ಈ ವಿಷಯವನ್ನು ಸ್ಥಳೀಯ ಅಧಿಕಾರಿಗಳು ಕೇಂದ್ರ ಮತ್ತು ಪ್ರಾಂತ ಸರ್ಕಾರಕ್ಕೆ ತಿಳಿಸಿರುತ್ತಾರೆ. ಪಾಕಿಸ್ತಾನ ಸರ್ಕಾರಕ್ಕೆ ಈ ಬಗ್ಗೆ ಪ್ರತಿಭಟನೆಯನ್ನು ಸೂಚಿಸಲಾಗುವುದೆಂದು ನಿರೀಕ್ಷಿಸಲಾಗಿದೆ. ಪಾಕಿಸ್ತಾನದ ಸೈನ್ಯ ಮತ್ತು ವಿಮಾನ ಬಲಗಳು ಗಡಿ ಬಳಿ ಪ್ರದರ್ಶನಗಳನ್ನು ನಡೆಸುತ್ತಿದ್ದುವೆಂದು ಹೇಳಲಾಗಿದೆ.

ಕನ್ನಡ ಮತ್ತು ಹಿಂದಿ ಪಂಡಿತರಿಗೆ ಶಿಕ್ಷಣ

ಭಾರತ ಸರ್ಕಾರದವರು ಮೈಸೂರಿನ ಉಪಾಧ್ಯಾಯರ ಕಾಲೇಜಿನಲ್ಲಿ ಏರ್ಪಡಿಸಿರುವ ಎಕ್ಸ್‌ಟೆನ್‌ಶನ್ ಸೇವಾ ಇಲಾಖೆಯವರು ಕನ್ನಡ ಪಂಡಿತರು ಮತ್ತು ಹಿಂದಿ ಉಪಾಧ್ಯಾಯರುಗಳ ರಜಾ ಕಾಲದ ಶಿಕ್ಷಣಕ್ಕಾಗಿ ನೆನ್ನೆಯಿಂದ ತರಗತಿಗಳನ್ನು ಏರ್ಪಡಿಸಿರುತ್ತಾರೆ. ವಿದ್ಯಾಭ್ಯಾಸ ಇಲಾಖೆಯವರು ೨೦ ಜನ ಕನ್ನಡ ಮತ್ತು ೩೦ ಜನ ಹಿಂದಿ ಅಧ್ಯಾಪಕರುಗಳನ್ನು ಇದಕ್ಕಾಗಿ ಕಳುಹಿಸಿರುತ್ತಾರೆ. ಶಿಕ್ಷಣವು ೫ ವಾರ ಕಾಲ ನಡೆಯುವುದು. ಸಂಸ್ಥಾನದಲ್ಲಿ ಈ ಬಗೆಯ ತರಗತಿಗಳು ನಡೆಯುವುದು ಇದೇ ಮೊದಲೆಂದು ಹೇಳಲಾಗಿದೆ.

ಭಾರತದಲ್ಲಿ ಮುಸ್ಲಿಂ ಲೀಗಿಗೆ ಸ್ಥಾನವಿಲ್ಲ

ನೆಹರೂರವರ ಸ್ಪಷ್ಟೋಕ್ತಿ

ಮುಸ್ಲಿಂ ಲೀಗ್ ಮುಂತಾದ [illegible] ಸಂಸ್ಥೆಗಳಿಗೆ ಭಾರತದಲ್ಲಿ ಅವಕಾಶವಿಲ್ಲವೆಂದು ಪ್ರಧಾನಿ ನೆಹರೂರವರು [illegible] ತಿಳಿಸಿದರು [illegible] ಅವನ್ನು [illegible] ಬೆಳೆಸಿಕೊಂಡಿರಲು ಬಿಡುವುದಿಲ್ಲ, ಅವರು ವ್ಯಕ್ತಪಡಿಸಿದರು ಭಾರತದಲ್ಲಿ ಮುಸ್ಲಿಂ ಲೀಗು [illegible] ಹೆಸರನ್ನು [illegible] ಕಾರಣವಾಯಿತೆಂದೂ ಅವರು ವ್ಯಕ್ತಪಡಿಸಿದರು [illegible] ಮುಸ್ಲಿಂ ಲೀಗು [illegible] ಲೀಗನ್ನು ಪುನಃ ಸ್ಥಾಪಿಸಬಹುದೆಂಬ [illegible] ಅವರು ತೀಳಿದುವರು

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನಿಯಮಿತ ಉಡುಪು

ನಾಗಪುರದ ವಿಶ್ವವಿದ್ಯಾಲಯದವರು [illegible] ಸಮಾರಂಭಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಧರಿಸಬೇಕಾದ ಉಡುಪಿನ ವಿಧಾನವನ್ನು ನಿರ್ಧರಿಸಿರುತ್ತಾರೆ ನೀಲಿ ಬಣ್ಣದ [illegible] ಧೋತಿ ಅಥವಾ ಪಯಜಾಮವನ್ನು ವಿದ್ಯಾರ್ಥಿಗಳೂ, ನೀಲಿ ಸೀರೆ ಮತ್ತು [illegible] ವಿದ್ಯಾರ್ಥಿನಿಯರೂ ಧರಿಸಬೇಕು ಈ ಉಡುಪು [illegible] ವಿದ್ಯಾಲಯದವರೇ [illegible] ತಯಾರಿಸುವರೆಂದು ಗೊತ್ತಾಗಿದೆ ಬಡ ವಿದ್ಯಾರ್ಥಿಗಳಿಗೆ [illegible] ಸಹಾ ತೋರಿಸಲಾಗುವುದು

ಬೆಂಗಳೂರಿನಲ್ಲಿ ಬರುವ ವರ್ಷದಿಂದ ಇಂಟೆಗ್ರಲ್ ಗಾಡಿ ತಯಾರಿಕೆ

ಬರುವ ವರ್ಷದಿಂದ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ರೈಲ್ವೆಯ ಇಂಟೆಗ್ರಲ್ ಗಾಡಿಗಳನ್ನು ತಯಾರಿಸಲಾಗುವುದು ಈ ಬಗ್ಗೆ ಬ್ರಿಟಿಷ್ ಕಂಪೆನಿಯೊಡನೆ ನಡೆಯುತ್ತಿರುವ ಮಾತುಕತೆಗಳು ಯಶಸ್ವಿಯಾದರೆ ಮುಂದಿನ ವರ್ಷದಲ್ಲೇ ತಯಾರಿಕೆಯು ಆರಂಭವಾಗಲಿದೆ ಇಮವರೆಗೆ ಕಾರ್ಖಾನೆಯಲ್ಲಿ ೨೦೦ ರೈಲು ಗಾಡಿಗಳನ್ನು ತಯಾರಿಸಲಾಗಿದೆ

ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ಗೀತಾ ಜಯಂತಿ

ಕಳೆದ ಭಾನುವಾರ ಸಂಜೆ ಕುಂಚಿಟಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ಗೀತಾ ಜಯಂತಿಯು ಶ್ರೀ ಟಿ ಎ [illegible] ನೇತೃತ್ವದಲ್ಲಿ ನೆರವೇರಿತು ಗೀತೆಗಳೂ, ಉಪನ್ಯಾಸಗಳೂ ನಡೆದುವು

ಕಾವ್ಯ ವಾಚನ ಮತ್ತು ಉಪನ್ಯಾಸ

ಗೀತಾ ಜಯಂತಿ ಸಪ್ತಾಹದ ಪ್ರಯುಕ್ತ ರಂಗಾಚಾರ್ಲು ಸ್ಮಾರಕ ಪುರಭವನದಲ್ಲಿ ಈ ಸಂಜೆ ನಾಟ್ಯ ಕಲಾ ವಿಶಾರದ ಶ್ರೀ ಎಂ ಸಿ ಮಹದೇವಸ್ವಾಮಿ ಮತ್ತು ವಿ|| ಎಂ [illegible] ಗೀತೋಪದೇಶದ ಕಾವ್ಯ ವಾಚನವೂ, ಶ್ರೀ ಕೆ ವೆಂಕಟರಾಮಯ್ಯನವರಿಂದ ಭಕ್ತಿ ಯೋಗದ ವಿಷಯವಾಗಿ ಉಪನ್ಯಾಸವೂ ನಡೆಯುವವು. ನಾಳೆ ಸಂಜೆ ಶ್ರೀಮತಿ ಗಿರಿಜಮ್ಮನವರಿಂದ ಕಾವ್ಯ ವಾಚನವೂ, ಶ್ರೀ ಜಿ ಪಿ ರಾಜರತ್ನಂರವರಿಂದ 'ಗೀತಾ ಸೌಂದರ್ಯ' ಎಂಬ ವಿಷಯವಾಗಿ ಉಪನ್ಯಾಸವೂ ಏರ್ಪಾಡಾಗಿವೆ

ಗೀತಾ ಜಯಂತಿ ಉಪನ್ಯಾಸಗಳು

ಗೀತಾ ಜಯಂತಿ ಅಂಗವಾಗಿ [illegible] ಸ್ಥಾನಯಲ್ಲಿರುವ ಗೀತಾ ಪ್ರಚಾರಿಣಿ ಸಭೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ [illegible] ರವರಿಂದ ತತ್ವ ಶಾಸ್ತ್ರ ಮತ್ತು ಗೀತೆ ಎಂಬ ವಿಷಯವಾಗಿಯೂ, ನಾಳಿದು ಸಂಜೆ ಶ್ರೀ ಯು ಕೆ. ಸುಬ್ಬರಾಯಾಚಾರ್ಯರಿಂದ ಕರ್ಮಯೋಗದ ವಿಷಯವಾಗಿಯೂ ಮತ್ತು ಶ್ರೀ ಎಂ ಎಲ್ ನಂಗಣ್ಣನವರಿಂದ ಭಕ್ತಿಯೋಗದ ವಿಷಯವಾಗಿಯೂ ಉಪನ್ಯಾಸಗಳು ನಡೆಯುವುವು

ಕಾಣಿಕೆಯ ಸ್ವೀಕಾರ

ನಗರದ ಶ್ರೀ ಗಣೇಶ ಹೋಟೇಲಿನ ಮಾಲೀಕರಾದ ಶ್ರೀ ವೈ ಸೋಮಯ್ಯನವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ

ರಷ್ಯದಲ್ಲಿ ವಿಶ್ವದ ಅತ್ಯಂತ ಭಾರಿ ವಿದ್ಯುದ್ಯೋಜನೆ

ವಿಶ್ವದಲ್ಲೇ ಅತ್ಯಂತ ಹಿರಿಯದಾದ ನೀರಾವರಿ ಮತ್ತು ವಿದ್ಯುದ್ಯೋಜನೆಯನ್ನು ರಷ್ಯವು ಮಧ್ಯ ಸೈಬೀರಿಯದ ಅಂಗಾರಾ ನದಿ ಮೇಲೆ ಭರಟ್ಸ್ಕ್ಯಾ ಎಂಬಲ್ಲಿ ಕಟ್ಟುತ್ತಿರುವುದೆಂದು ಗೊತ್ತಾಗಿದೆ ವರ್ಷಕ್ಕೆ ೧,೬೦೦ ಕೋಟಿ ಕಿಲೊವಾಟ್ ಗಂಟೆ ವಿದ್ಯುಚ್ಛಕ್ತಿಯು ಅಲ್ಲಿ ತಯಾರಾಗುತ್ತಿರುವುದೆಂದೂ, ವಿದ್ಯುಚ್ಛಕ್ತಿ ತಯಾರಿಕೆಯಲ್ಲಿ ೧ನೇ ಸ್ಥಾನವನ್ನು ಗಳಿಸಿದ್ದ ರಷ್ಯವು ಈಗ ದ್ವಿತೀಯ ಸ್ಥಾನವನ್ನು ಪಡೆದಿರುವುದೆಂದೂ ಹೇಳಲಾಗಿದೆ ಅಮೆರಿಕದಲ್ಲಿ [illegible] ಕೋಟಿ ಕಿಲೊವಾಟ್ ಗಂಟೆಯಷ್ಟು ಶಕ್ತಿಯು ತಯಾರಾಗುತ್ತಿರುವುದೆಂದು ಗೊತ್ತಾಗಿದೆ ಹೊಸ ಯೋಜನೆಯಿಂದ ರಷ್ಯವು ೩೦ ಲಕ್ಷ ಕಿಲೊವಾಟ್ ಶಕ್ತಿಯನ್ನು ಉತ್ಪತ್ತಿ ಮಾಡುವುದೆಂದು ಅಂದಾಜಾಗಿದೆ

ವಿದ್ಯಾರ್ಥಿಗಳಿಂದ ಶಿಕ್ಷಣದ ವೆಚ್ಚಿಗೆ

ಮದ್ರಾಸಿನ ಕೀಲ್ಪಾಕ್ ಎಂಬಲ್ಲಿ ಸ್ಥಾಪಿಸಲಾಗಿರುವ ಆಯುರ್ವೇದ ಕಾಲೇಜಿನಲ್ಲಿ ನಡೆಯುತ್ತಿರುವ ಪಾಠಕ್ರಮಗಳನ್ನು ಆಕ್ಷೇಪಿಸಿ ವಿದ್ಯಾರ್ಥಿಗಳು ಬದಲಾಗಿ ಮೆಚ್ಚಿ ತಮ್ಮ [illegible] ಹೊರಡುವುದಕ್ಕೆ [illegible] ಕಲಿಯಲು ಅವಕಾಶವನ್ನು [illegible] ಸರ್ಕಾರದವರು ಒಪ್ಪಿ ನಮ್ಮತಿಸಿರುತ್ತಾರೆಯೂ [illegible] ಮಂತ್ರಿ ಶ್ರೀ ಎ ವಿ [illegible] ತಿಳಿಸಿರುತ್ತಾರೆ

ಸರಸ್ವತಿ ಪೂಜೆ

ಶ್ರೀರಂಗಪಟ್ಟಣದಲ್ಲಿರುವ ಈಸ್ಟರ್ನ್ ಪ್ರೈಮರಿ ಬಾಲಕಿಯರ ಶಾಲೆಯಲ್ಲಿ ಕಳೆದ [illegible] ತಾರೀಖು ಸರಸ್ವತಿ ಪೂಜೆಯನ್ನು ತಾಲ್ಲೂಕು ವಿದ್ಯಾಧಿಕಾರಿಗಳಾದ ಶ್ರೀ ಎ ಟಿ ತಿಮ್ಮಯ್ಯ ಗೌಡರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಮಕ್ಕಳಿಂದ ನೃತ್ಯ, ಕೋಲಾಟ, ಲೆಜಿಂ ಪ್ರದರ್ಶನಗಳೂ ಮತ್ತು ಮುಖ್ಯೋಪಾಧ್ಯಾಯನಿ ಶ್ರೀಮತಿ ಅನ್ನಪೂರ್ಣಮ್ಮನವರಿಂದ ರಚಿಸಲ್ಪಟ್ಟ ಸ್ತ್ರೀ ನೀತಿ ಎಂಬ ನಾಟಕವನ್ನು ಅಭಿನಯಿಸಲಾಯಿತು ಕುಮಾರಿ [illegible] ಕಥಕ್ ನೃತ್ಯವೂ ಇತ್ತು ಶಾಲಾ ಉಪಾಧ್ಯಾಯಿ ಶ್ರೀ ಪಿ. ವಿ ಕೃಷ್ಣಪ್ಪನವರು ವರದಿಯನ್ನು ಒಪ್ಪಿಸಿದರು ಅಧ್ಯಕ್ಷರು ಬಹುಮಾನ ನೀಡಿ, ಶಾಲೆಯು ಅಭಿವೃದ್ಧಿ ಹೊಂದುತ್ತಿರುವ ಒಗ್ಗೆ ಮೆಚ್ಚಿಗೆಯನ್ನು ಸೂಚಿಸಿದರು ಮಕ್ಕಳಿಗೆ ಸಿಹಿ ತಿಂಡಿಯನ್ನು ವಿನಿಯೋಗಿಸಲಾಯಿತು ವಂದನಾರ್ಪಣೆಯೊಡನೆ ಸಮಾರಂಭವು ಕೊನೆಗೊಂಡಿತು

ಶಿವ ಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಧರ್ಮದರ್ಶಿ ರಂಗಯ್ಯನವರ ಮನೆಯಲ್ಲಿ ಹನುಮಜ್ಜಯಂತಿ ಪ್ರಯುಕ್ತ ಡಾ|| ಬಿ ಜಿ ದಾಸ್‌ರವರ ನೇತೃತ್ವದಲ್ಲಿ ಈ ರಾತ್ರಿ ೯ ಘಂಟೆಗೆ ಭಿವ್ಯಾಪತಿಯ ಶ್ರೀ ವೆಂಕಟೇಶದಾಸರಿಂದ ಹೇಮರೆಡ್ಡಿ ಮಲ್ಲಮ್ಮ ಎಂಬ ಶಿವಕಥೆ ನಡೆಯುತ್ತೆ ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	೧೨ ೦ ೦	೧೮ ೧೨ ೦
ಎಳ್ಳು	೩೧ ೧೨ ೦	
ಹರಳುಬೀಜ	೨೮ ೬ ೦	೨೬ ೦ ೦
ಹುಚ್ಚೆಳ್ಳು	೩೬ ೮ ೦	೪೨ ೦ ೦
ಹುರುಳಿ	೨೪ ೦ ೦	೨೮ ೦ ೦
ಹೆಸರು	೭೪ ೦ ೦	೪೪ ೧೦ ೦
ಹಲಸಂದೆ	೩೮ ೨ ೦	೪೭ ೪ ೦
ಉದ್ದು	೪೮ ೧೪ ೦	
ಕಿಣದಿನಬೀಜ	೩೩ ೦ ೦	೩೩ ೧೨ ೦
ಧನಿಯ	೩೬ ೧೨ ೦	೩೮ ೮ ೦
ತೊಗರಿ	೨೨ ೯೨ ೦	೩೮ ೪ ೦
ಹುಣಸೇಹಣ್ಣು	೨ ೪ ೦	೩ ೨ ೦
ಮೆಣಸಿನಕಾಯಿ	೪ ೦ ೦	೧೭ ೧೨ ೦
ಹತ್ತಿ (೨೮ ಪೌಂಡು)	೧೦ ೩ ೦	
ತೆಂಗಿನಕಾಯಿ ೧,೦೦೦	೧೩೦ ೦ ೦	೨೩೦ ೪ ೦

ನೆಹರೂ-೨೦ನೇ ಶತಮಾನದ "ಅವತಾರ ಪುರುಷ"

ನೆಹರೂರವರನ್ನು ಬಹಳ ಹತ್ತಿರದಿಂದ ದರ್ಶನ ಮಾಡಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ ವೃದ್ಧ ಮಹಿಳೆಗೆ ಮೊನ್ನೆ ಪ್ರಧಾನಿಯು ಕೊಯಮತ್ತೂರಿಗೆ ಭೇಟಿಯಿತ್ತಾಗ, ತನ್ನ ಇಷ್ಟಾರ್ಥ ನೆರವೇರಿಸಿಕೊಳ್ಳಲು ಸಾಧ್ಯವಾಯಿತು ಪಡಮದುರೆಯ ೮೦ ವರ್ಷದ ಚಿನ್ನಮ್ಮ ಎಂಬಾಕೆಯು ವೈಕುಂಠ ಏಕಾದಶಿ ದಿನ ೨೦ನೇ ಶತಮಾನದ ಅವತಾರ ಪುರುಷನನ್ನು ನೋಡಿದರೆ ತನಗೆ ಮೋಕ್ಷ ಲಭ್ಯವಾಗುವುದೆಂದು ಹೇಳುತ್ತಿದ್ದಳು ಆಕೆಯು ದೇವಾಲಯದಲ್ಲಿ ಕುಳಿತು ಉಪವಾಸ ಮತ್ತು ಧ್ಯಾನ ಮಾಡುತ್ತಿದ್ದಾಗ, ನೆಹರೂ ಬರುವ ಸುದ್ದಿ ಮುಟ್ಟಿ, ಆಕೆಯ ಇಷ್ಟಾರ್ಥ ಕೈಗೂಡಿತು

ಜಾತಿ ಸೂಚಕ ನಾಮಧೇಯ ತ್ಯಜಿಸಲು ಪಟ್ಟಾಭಿ ಸಲಹೆ

ಜನರು ತಮ್ಮ ಹೆಸರುಗಳ ಕಡೆಯಲ್ಲಿರುವ ಜಾತಿ ಸೂಚಕ ನಾಮಧೇಯಗಳನ್ನು ತ್ಯಜಿಸುವಂತೆ ಮಧ್ಯಪ್ರದೇಶದ ಗೌರ್ನರ್ ಡಾ|| ಪಟ್ಟಾಭಿಸೀತಾರಾಮಯ್ಯನವರು ಸಲಹೆ ಮಾಡಿರುತ್ತಾರೆ ಅಯ್ಯರ್, ಅಯ್ಯಂಗಾರ್, ಮುದಲಿಯಾರ್, ಪಿಳ್ಳೆ, ನಾಯ್ಡು, ನಾಯಕರ್, ವರ್ಮ, ಶರ್ಮ ಮುಂತಾದುವು ಜಾತಿ ಸೂಚಕ ಹೆಸರುಗಳೆಂದೂ, ಅವುಗಳನ್ನು ತೆಗೆದುಹಾಕಲು ಶಾಸನ [illegible] ಮಾಡಬೇಕೆಂದೂ ಅವರು ಸೂಚಿಸಿರುವರು

ಹನುಮಜ್ಜಯಂತಿ ಸಂಗೀತ

ನಾಳೆ ವಿ|| ಬಿ ದೇವೇಂದ್ರಪ್ಪನವರ ಶ್ರೀ ಮಾರುತಿ ಮಂದಿರದಲ್ಲಿ ಹನುಮಜ್ಜಯಂತಿ ಪ್ರಯುಕ್ತ ನಾಳೆ ಮಧ್ಯಾಹ್ನ ೪ ಗಂಟೆಗೆ ವಿ|| ಅಂಜನಪ್ಪನವರ ಸಂಗೀತವೂ, ೫|| ಗಂಟೆಗೆ ವಿ|| ಎಂ ಎಸ್ ಗೋವಿಂದಸ್ವಾಮಿಯವರ ಗಾಯನವೂ ನಡೆಯುವುವು

ಚಿದಂಬರರಾಯರ ಭಾವಚಿತ್ರದ ಅನಾವರಣವನ್ನೇರ್ಪಡಿಸಬೇಕು

ಮೊನ್ನೆ [illegible] ಶಾಲಿನಲ್ಲಿ ಶಿವಛತ್ರಪತಿ ಸಹಕಾರ ಸಂಘದ ರಜತೋತ್ಸವವು ನಡೆಯಿತಷ್ಟೆ ಸಂಸ್ಥೆಯ ಸಂಸ್ಥಾಪಕರೂ ಮತ್ತು ಅದರ ಪುರೋಭಿವೃದ್ಧಿಗೆ ಕಾರಣರೂ ಆದ ಶ್ರೀ ಚಿದಂಬರರಾಯರ ಸೇವೆಯನ್ನು ಸ್ಮರಿಸಲು ಅವರ ಭಾವಚಿತ್ರವನ್ನು ಸಂಘದಲ್ಲಿ ರಜತೋತ್ಸವದ ಸಮಯದಲ್ಲಿ ಅನಾವರಣ ಮಾಡಿದ್ದರೆ ಚೆನ್ನಾಗಿತ್ತು ಇನ್ನು ಮುಂದೆ ವರೂ ಅವರ ಮತ್ತು ಸಂಸ್ಥೆಗಾಗಿ ದುಡಿದ ಇತರರ ಭಾವಚಿತ್ರಗಳನ್ನು ಅನಾವರಣ ಮಾಡುವುದು ಸೂಕ್ತ—ಎಂಬುದಾಗಿ [illegible] ಶ್ರೀ ಎಂ ರಾಮರಾಯರು ತಿಳಿಸಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible] ರೇಡಿಯೋ ಸಂಗೀತ [illegible] ರೋಜಾದೇವಿ ಗಾಯನ [illegible] ಹಿಂದೂಸ್ಥಾನಿ ಸಂಗೀತ [illegible] ಸಂಗೀತ [illegible] ಮತ್ತು [illegible] ಸಿತಾರ್ [illegible] ಕೃಷ್ಣಮಾಚಾರ್ ಮತ್ತು ಎಂ ವಿ ನಾಗೇಂದ್ರಪ್ಪನವರ ಪಿಟೀಲು ಮತ್ತು [illegible] ಕೇಶವಯ್ಯ ಸಂಗೀತ [illegible] ಕನ್ನಡ ಗೀತೆಗಳು [illegible] ಸಂಗೀತೋತ್ಸವ—ಮದ್ರಾಸ್ ಕಾರ್ಯಕ್ರಮದ [illegible] ಕಾರ್ಯಕ್ರಮ [illegible] ಕನ್ನಡ ಗೀತೆಗಳು [illegible] ಸಂಗೀತೋತ್ಸವ—ಮದ್ರಾಸ್ ರಿಲೆ

ಆನ ಸೇವೆಯೇ ಜನಾರ್ದನ ಸೇವೆ

MODERN DAIRY FARM

ಕ್ಷೀರ ಕ್ಷೇತ್ರ

(ರಾಘವೇಂದ್ರಸ್ವಾಮಿಗಳ ಮಠದ ಪಕ್ಕ)

139 ನಾರಾಯಣಶಾಸ್ತ್ರಿ ರೋಡ್, ಮೈಸೂರು.

ಮಹಾಶಯರೇ, ನಿಮಗೆ ಅಪ್ಪಟ ಪರಿಶುದ್ಧವಾದ, ಸ್ಥಳದಲ್ಲೇ ಕರೆಸಿದ ಹಾಲು ಮತ್ತು ಘಟ್ಟಿ ಕೆನೆ ಮೊಸರು ಮತ್ತು ಬೆಣ್ಣೆ ಬೇಕಾದರೆ ಇಂದೇ ಮೇಲ್ಕಂಡ ಸ್ಥಳಕ್ಕೆ ಭೇಟಿ ಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ

ಹಾಲು, ಮೊಸರು, ಬೆಣ್ಣೆ ಇತ್ಯಾದಿಗಳನ್ನು ಚಿಲ್ಲರೆಯಾಗಿಯೂ ಮತ್ತು ಒಟ್ಟಾಗಿಯೂ, ಮದುವೆ ಮೊದಲಾದ ದೊಡ್ಡದೊಡ್ಡ ಸಮಾರಂಭಗಳಿಗೆ ಆರ್ಡರ್ ಮೂಲಕ ಒದಗಿಸಲಾಗುತ್ತದೆ.

ಹಾಲು ಮತ್ತು ಮೊಸರು ರೂ ೧ ಗೆ 4½ ಪೌಂಡು

ಜಪಾನಿಗಳಿಂದ ಭಾರ[ತೀಯ] ನೃತ್ಯದ ಅಭ್ಯಾಸ

ಜಪಾನಿನಲ್ಲಿ ೨,೦೦೦ ವಿದ್ಯಾರ್ಥಿಗ[ಳು] ತದ ಶಾಸ್ತ್ರೀಯ ನೃತ್ಯ ಕಲೆಯನ್ನು [illegible] ದಾಗಿ ಗೊತ್ತಾಗಿದೆ ಪ್ರೊಫೆಸರ್ [illegible] ರು ತಮ್ಮ ಶಾಲೆಯಲ್ಲಿ ಭರತ ನಾಟ್ಯ [illegible] ಕುಣಿಪುರಿ ನೃತ್ಯವನ್ನು ಕಲಿಸುತ್ತಿರುವ[ರು]

ದೇಶದ್ರೋಹಕ್ಕಾಗಿ ಪ[ಶ್ಚಿಮ] ಜರ್ಮನ್ ಶ್ರೇಷ್ಠಾಧಿಕಾರಿ [illegible]

ದೇಶದ್ರೋಹದ ಸಂಶಯಕ್ಕಾಗಿ [illegible] ರ್ಮನಿಯ ಮಾಜಿ ಭದ್ರತಾ ಇಲಾಖಾ[ಧಿಕಾರಿ] ಧಿಕಾರಿ ಡಾ|| ಒಟೊ ಜಾನರವರನ್ನು [illegible] ಮಾಡಲಾಗಿದೆ ೧೭ ತಿಂಗಳವರೆಗೆ [illegible] ರ್ಮನಿಯಲ್ಲಿದ್ದು ಅವರು ಈಗ ಪಶ್ಚಿ[ಮಕ್ಕೆ] ಹೋಗಿರುವರು ಅವರು ಪುನಃ ಓಡಿ[illegible] ದೆಂದು ಶಂಕಿಸಿ ಅವರನ್ನು ಬಂಧಿಸಲಾ[ಗಿದೆ]

ರಾ ಜಾ ಜಿ ಯ ವ ರ [illegible] ಮೈಸೂರು ವಿದ್ಯಾರ್ಥಿಗಳ[illegible]

ಮದ್ರಾಸಿಗೆ ತೆರಳಿರುವ ಮೈಸೂ[ರು] ರಾಜಾ ಕಾಲೇಜಿನ ರಾಜ್ಯಶಾಸ್ತ್ರ ವಿದ್ಯಾ[ರ್ಥಿಗಳಿ]ಗೆ ಮೊನ್ನೆ ರಾಜಾಜಿಯವರು ಭೇಟಿ[illegible] ರ್ಷದಿಂದ ಮಾತನಾಡಿದರು ಮಹಾ[ರಾಜಾ] ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. [illegible] ರನ್ನು ಅವರು ವಿಚಾರಿಸಿದರು ಮತ್ತು [illegible] ಗಳು ತಲಾ ಐದು ರೂಪಾಯಿಸಂತೆ [illegible] ಧಿಗೆ ಸಹಾಯ ಮಾಡಿದನಂತರ, [illegible] ಸ್ತಾಕ್ಷರಗಳನ್ನು ಇತ್ತರು. ವಿದ್ಯಾರ್ಥಿಗಳು [illegible] ಉನ್ನತಿಯನ್ನು ಆದರ್ಶವಾಗಿಟ್ಟು[ಕೊಳ್ಳಬೇಕೆಂ]ದೂ ತಿಳಿಸಿ, ವಿದ್ಯಾರ್ಥಿಗಳ ಪ್ರವಾ[ಸ]ವನ್ನು ಕೋರಿದರು

ಚಾರ್ಲಿ ಚಾಪ್ಲಿನ್ನನ ಛ[ತ್ರಿ] ೧,೩೩೧೦ ರೂ.

ಫ್ರಾನ್ಸಿನ ನಿವೃತ್ತ ನಟ ನಟಿಯ[illegible] ಯಾರ್ಥವಾಗಿ ಪ್ಯಾರಿಸ್ಸಿನಲ್ಲಿ ನಡೆದ [illegible] ವರ್ಷದಲ್ಲಿ ಸುಪ್ರಸಿದ್ಧ ಹಾಸ್ಯ ನಟ [illegible] ಚಾಪ್ಲಿನ್ನನ ಛತ್ರಿಯನ್ನು ಹರಾಜು [illegible] ಅದಕ್ಕೆ ೧ ಲಕ್ಷ ಫ್ರಾಂಕುಗಳು [illegible] ಗೊತ್ತಾಗಿದೆ (೧೩೩೦ ರೂ.) [illegible] ಯರ್ ಎಂಬ ಮತ್ತೊಬ್ಬ ನಟನ [illegible] ರಾಜು ಹಾಕಿದುದರಿಂದ ಇನ್ನೂ [illegible] ಬಂದಿತು ವಿನೊ.ರೋಸಿ ಎಂಬ [illegible] ನ ಗಿಟಾರ್ ವಾದ್ಯಕ್ಕೆ ೧೧,೦೦೦ [illegible] ಯೂ, ಮಾರ್ಟಿನ್ ಕರೋಲ್ ಎಂ[illegible] ಕುಸಿಗೆ ೬೬೫ ರೂಪಾಯಿಯೂ [illegible]

ಗೋಮಟೇಶ್ವರ ವಿಗ್ರಹದ [illegible] ಕಾರ್ಯಕ್ರಮ

ಶ್ರವಣಬೆಳಗೊಳದಲ್ಲಿರುವ ಪ್ರಸಿ[ದ್ಧ] ಶ್ರೀ ಗೋಮಟೇಶ್ವರನ ವಿಗ್ರಹದ ರಕ್ಷ[ಣೆ]ಯ ಕಾರ್ಯಕ್ರಮಗಳನ್ನು ಭಾರತ ಸರ್ಕಾರ [illegible] ಕೈಗೊಂಡಿರುತ್ತಾರೆ ಆ ಬಗ್ಗೆ [illegible] ಕಾದ ಆವಶ್ಯಕವಿಲ್ಲವೆಂದು ಹೇಳಲಾಗಿದೆ ಮತ್ತು ಇತರ ಕಡೆ ಆಗಿದ್ದ ಬಿರುಕು[ಗಳನ್ನು] [illegible]ಚ್ಚಲಾಗಿದೆ ವಿಗ್ರಹದಲ್ಲಿ ಬಿರುಕುಗ[ಳು] ಸೇರದಂತೆ ಮಾಡಲು ಒಂದು ವಿಧಾ[ನ]ಕವನ್ನು ಬಳಿಯಲಾಗಿದೆ.

SREE GAN[ESH]
TALKIES
To-day & Tomorrow
THEODORA—THE [SLAVE]
EMPRESS

From 29-12-55 For 2 D[ays]
CAIRO ROA[D]
Starring Eric Port[man]
(It is a ceaseless war a[gainst]
smugglers of drugs in [illegible]

Edited, Printed and P[ublished]
by A K Nagarajan a[t]
Press, D.Subbiah Roa[d]

ಬೆಂಗಳೂರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪು. ೧೯] SADHVI : WEDNESDAY 28-12-1955 ಮೈಸೂರು ಬುಧವಾರ : ೨೮-೧೨-೧೯೫೫ [ಸಂಚಿಕೆ : ೮೩

ಗೋವಾ ರಾಷ್ಟ್ರೀಯ ಸೈನ್ಯದ ಗೆರಿಲ್ಲಾ ಕಾದಾಟ ಆರಂಭ

...ಜ ಸೇವಾ ಕಾರ್ಯಗಳಿಗಾಗಿ ...ಂತ್ರಿ ಇಲಾಖೆಯು ಅಗತ್ಯ

...ತಿ ಹಂಸಾ ಮೆಹ್ತಾರವರ ಸೂಚನೆ

ಬೆಂಗಳೂರು ೨೮

...ಾಜ ಸೇವೆಯ ಅನೇ ಭಾರತೀಯ ಸ...ವು ನೆನ್ನೆ ಇಲ್ಲಿ ಆರಂಭವಾಯಿತು ಅ...ನಗಳ ಕಾಲ ನಡೆಯುವುದು ಮೈಸೂ...ಜಕ್ರಮುಖರು ಆರಂಭೋತ್ಸವವನ್ನು ನೆ...ವರು ಶ್ರೀಮತಿ ಹಂಸಾ ಮೆಹತಾರವ...ಕ್ಷತೆ ವಹಿಸಿದ್ದರು
...ತಿ ಚನ್ನಮ್ಮನವರಿಂದ ಸಂಗೀತವಾದ ... ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ...ಲಿಂಗಯ್ಯನವರು ಭಾಷಣ ಮಾಡಿ, ಮ...ರು ಸಂಸ್ಥಾನದ ಪ್ರಥಮ ಸಮಾಜ ಸೇ...ು ಹೇಳಿದರು
...ುನ್ಯಹಾರಾಜರು ಆರಂಭ ಭಾಷಣ ಮಾ...ನ ಕೈಗಾರಿಕೆಗಳ ಈ ಯುಗದಲ್ಲಿ ಸಾ... ನಿರಕ್ಷರತೆ, ಬಡತನ ಮತ್ತು ಅನಾ...ಗಳಿರುವುದು ನಮ್ಮ ಪ್ರಜಾ ಸತ್ತಾತ್ಮಕ ...ವ್ಯಕ್ಕೆ ತಕ್ಕದಲ್ಲವೆಂದೂ, ರಾಷ್ಟ್ರೀಯ ...ಭಿವೃದ್ಧಿ ಯಾಗಬೇಕಾದರೆ ಆದ ಯೋಗ...ೂ, ಪ್ರತಿಯೊಬ್ಬ ನಾಗರಿಕನಿಗೂ ಕನಿ...ದ ತಿಳುವಳಿಕೆ, ಜೀವನ ನಡೆಸಲು ಬವ...ರೋಗ್ಯ ಮತ್ತು ಭದ್ರತೆಯು ಅವಶ್ಯಕ ... ಸೂಚಿಸಿದರು ಹಿಂದೆ ಈ ಏಕೀಯ...ವಸ್ಥೆಗೆ, ಇಲಾಖೆಗಳಲ್ಲಿ ನಿಶ್ಚಿತ ಕೆಲಸಗೆ...ಸಿದರೆ ಸಾಕೆಂಬ ಭಾವನೆಯಿದ್ದುದಾಗಿ ...ಗೆ ಅತ್ಯಂತ ಹೆಚ್ಚಿನ ಸಮಾಜ ಸೇವೆ...ಕಾಗಿರುವುದರಿಂದ ಉತ್ತಮ ಸೇವೆ ಮ...ತ್ಸಾಹಕ್ಕೆ ಹೆಚ್ಚು ಅವಕಾಶವಿರುವುದೆಂ...ು ಹೇಳಿದರು
...ರು ತಮ್ಮ ಭಾಷಣದಲ್ಲಿ, ದೇಶದಲ್ಲಿ ...ಸಮಸ್ಯೆಯು ಇತರ ಎಲ್ಲ ಪ್ರಶ್ನೆಗಳಿಗಿಂ...ಗಾಢವಾಗಿ, ಅದನ್ನು ಪರಿಹರಿಸಲು ಸಾ... ಇದೆಯೆಂದೂ, ೩೦-೪೦ ಲಕ್ಷ ಜನ ...ವೃತ್ತಿಯಲ್ಲಿರುವರೆಂದೂ, ಈ ವೃತ್ತಿಯ ...ದನೆಯು ಹಳ್ಳಿ,ಪಕ್ಕಪುಕ್ಕಗಳವರೂ ...ಅವಲಂಬಿಸಿರುವರೆಂದೂ ತಿಳಿಸಿದರು. ...ದುಃಖ, ರೋಗ ಮತ್ತು ಕೊಳಕುಗ...ಕ್ಷತೆಯೇಮೂಲ ಕಾರಣವೆಂದೂ, ಅ...ನಿರ್ಮೂಲಮಾಡಲು ಗ್ರಾಮಾಂತರದಲ್ಲಿ ...ಶಿಕ್ಷಣವನ್ನೇರ್ಪಡಿಸುವುದು ಸ್ವಾಗ...ದೂ ಅವರು ನುಡಿದರು
...ಲ್ಲಿ ಕೊಲೆ, ಜಗಳ, ಕಳ್ಳತನ, ...ವು ತಪ್ಪಬೇಕಾದರೆ ಅವುಗಳಲ್ಲಿ ತೊ...ನ್ನು ಉತ್ತಮ ಮಾರ್ಗದಲ್ಲಿ ತರಬೇ...ಪೊಲೀಸು ಇಲಾಖೆಗೆ ವಿಶ್ವ ಮಾಡು...ನ್ನು ಇಂತಹವರ ಪುನರುಜ್ಜೀವನಕ್ಕೆ ...ಮಾಡುವುದು ಒಳ್ಳೆಯದೆಂದೂ ಸೂಚಿ...

...ಸೇವಾ ಕಾರ್ಯಗಳನ್ನು ನಡೆಸಲು ...ಮಂತ್ರಿ ಇಲಾಖೆಯೊಂದರ ವ್ಯವಸ್ಥೆ...ಂದೂ, ಅದಕ್ಕಾಗಿ ಪ್ರಧಾನಿಯವರ...ುನ್ನು ಅರ್ಪಿಸಲಾಗುವುದೆಂದೂ ಅವ...ರು

ಈಜಲು ಹೋಗಿ ಬಾಲಕನ ಮರಣ

ಮೈಸೂರು ೨೮

ಕುಕ್ಕರಹಳ್ಳಿ ಕೆರೆಯಲ್ಲಿ ನೆನ್ನೆ ಈಜಲು ಹೋಗಿದ್ದ ಕರಿವಾರಹಳ್ಳಿಯ ಎಸವಣ್ಣ ಎಂಬ ೧೩ ವರ್ಷದ ಬಾಲಕನು ಮುಳುಗಿ ಮೃತಪಟ್ಟನೆಂದು ವರದಿಯಾಗಿದೆ

ಮೂಟೆ ಬಿದ್ದು ಮರಣ

ತಲಕಾಡಿನಲ್ಲಿ ರಂಗೇಗೌಡ ಎಂಬುವನು ದಿನಸಿ ಮೂಟೆಗಳನ್ನು ಇಳಿಸುತ್ತಿದ್ದಾಗ ಮೂಟೆಗಳು ಉರುಳಿ ಬಿದ್ದು, ಅವನನ್ನು ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗದೆ, ನೆನ್ನೆ ಮೃತಪಟ್ಟನು

ಗಡಿಯಾರದ ಕಳುವಿಗಾಗಿ ಮೂವರ ಬಂಧನ

ನಗರದ ಹಲವು ಕಡೆಗಳಲ್ಲಿ ಗಡಿಯಾರಗಳನ್ನು ಕಳುವು ಮಾಡಿದ ... ತಮ್ಮ ಶ್ರೀಕಂಠ ಮತ್ತು ಅಸ್ಗರ್‌ಖಾನ್ ಎಂಬುವರನ್ನ ಬಂಧಿಸಲಾಗಿದೆ ೨೦೦ ರೂ ಬೆಲೆ ... ಗಡಿಯಾರಗಳು ಸಿಕ್ಕಿವೆ

ದತ್ತಾತ್ರೇಯ ವಿಗ್ರಹದ ಸ್ಥಾಪನೆ

ಈದಿನ ಒಂಟಿಕೊಪ್ಪಲು ಕಟ್ಟಡದ ... ದ ಪಕ್ಕದಲ್ಲಿರುವ ಶ್ರೀ ... ಶ್ರೀರಾಮ ಮಂದಿರದಲ್ಲಿ ... ಕಳೆದ ... ತಾರೀಖಿನಿಂದ ಬರುವ ತಿಂಗಳು ... ತಾರೀಖಿನವರೆಗೆ ಧನುರ್ಮಾಸದ ಪೂಜೆಗಳ ಏರ್ಪಾಡಾಗಿವೆ ನಾಳೆ ದತ್ತ ಜಯಂತಿ ಪ್ರಯುಕ್ತ ಬೆಳ್ಳಿಯ ದತ್ತಾತ್ರೇಯ ವಿಗ್ರಹವನ್ನು ಸ್ಥಾಪನೆ ಮಾಡಲಾಗುವುದಲ್ಲದೆ ಅಖಂಡ ಗುರುಭಜನೆ, ದತ್ತ ಮೂಲಮಂತ್ರ ಅನುಷ್ಠಾನ ಮತ್ತು ಮಹಾ ಪೂಜೆಗಳನ್ನು ಏರ್ಪಡಿಸಲಾಗಿದೆ

○ ಮಂಡಕಳ್ಳಿ ವಿಮಾನ ನಿಲ್ದಾಣದ ಅಧಿಕಾರಿಗಳಾಗಿರುವ ಶ್ರೀ ... ಯರ ಮನೆಯಲ್ಲಿ ನೆನ್ನೆ ೨೦ ರೂ ಬೆಲೆಯ ಒಂದು ರಗ್ಗನ್ನು ಕದಿಯುತ್ತಿದ್ದಾಗ ಕ್ರಿಬಿಯ ಸದಾಶಿವ ಎಂಬುವನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುವರು

ಬೊಂಬಾಯಿ ಉಪ ಮಂತ್ರಿ ನರವಣೆಯವರ ರಾಜೀನಾಮೆ

ಮುಖ್ಯ ಮಂತ್ರಿಗಳ ಒತ್ತಾಯದ ಪರಿಣಾಮ

ಬೊಂಬಾಯಿ ಸರ್ಕಾರದ ಪಾನನಿರೋಧ ಇಲಾಖಾ ಉಪ ಮಂತ್ರಿ ಡಾ॥ ಟಿ ಆರ್ ನರವಣೆಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ ಡಾ॥ ಟಿ ಆರ್ ನರವಣೆಯವರಿಗೆ ಅಲ್ಲಿನ ಮುಖ್ಯ ಮಂತ್ರಿಯವರು ಪತ್ರ ಬರೆದು ಅವರ ನಡವಳಿಕೆ ಬಗ್ಗೆ ಸಮಜಾಯಿಷಿ ಕೇಳಿ, ಅವರು ತಮ್ಮ ಚಟುವಟಿಕೆಗಳನ್ನು ನಿಲ್ಲಿಸಬೇಕು, ಅಥವಾ ರಾಜೀನಾಮೆ ಕೊಡಬೇಕೆಂದು ಸೂಚಿಸಿದ್ದರು ಮಂತ್ರಿಯೊಬ್ಬರಿಗೆ ಈ ರೀತಿ ಸೂಚನೆ ಕೊಟ್ಟಿದ್ದು ಬೊಂಬಾಯಿ ಸರ್ಕಾರದ ಇತಿಹಾಸದಲ್ಲಿ ಇದೇ ಮೊದಲೆಂದು ಹೇಳಲಾಗಿದೆ ಬೊಂಬಾಯಿ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಚಳುವಳಿಗೆ ಅವರು ಬೆಂಬಲದಾಗಿದ್ದರು

ರೈಲಿಗೆ ಸಿಕ್ಕಿ ಕಾಲು ಜಖಂ

ಮೈಸೂರು ೨೮

ನಂಜನಗೂಡಿನಿಂದ ಬೆಳಿಗ್ಗೆ ೯-೩೦ಕ್ಕೆ ಬರುವ ರೈಲು ಈ ದಿನ ಚಾಮರಾಜಪುರಂ ನಿಲ್ದಾಣದಿಂದ ಹೊರಟಾಗ ಅದನ್ನು ಹತ್ತಲು ಹೋದ ರೈಲ್ವೆ ನೌಕರ ಸುಬ್ಬರಾವ್ ಎಂಬುವರ ಕಾಲು ಗಾಡಿ ಚಕ್ರಕ್ಕೆ ಸಿಕ್ಕಿಕೊಂಡು ಕತ್ತರಿಸಲ್ಪಟ್ಟಿತೆಂದೂ, ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಗಿದೆಯೆಂದೂ ವರದಿಯಾಗಿದೆ ಈ ಬಗ್ಗೆ ಸಿಟಿ ರೈಲ್ವೆ ಸ್ಟೇಷನ್ನಿಗೆ ವೈದ್ಯಕೀಯ ಸಹಾಯ ಒದಗಿಸುವಂತೆ ಫೋನು ಮೂಲಕ ತಿಳಿಸಲಾಗಿತ್ತಾದರೂ ಯಾವ ಸೌಲಭ್ಯವನ್ನೂ ಒದಗಿಸಲಿಲ್ಲವೆಂದು ತಿಳಿಸಿ, ಚಾಮರಾಜಪುರದ ನಿಲ್ದಾಣದಲ್ಲಿ ಹೆಚ್ಚು ಜನ ಪ್ರಯಾಣಿಕರು ಇರುವುದರಿಂದ ಅಲ್ಲಿ ರೈಲುಗಳು ಸ್ವಲ್ಪ ಹೆಚ್ಚು ಕಾಲ ನಿಲ್ಲುವಂತೆ ಏರ್ಪಡಿಸಬೇಕೆಂದು ವಾಚಕರೊಬ್ಬರು ಕೋರಿರುತ್ತಾರೆ

ಗೀತಾ ಜಯಂತಿ ಉಪನ್ಯಾಸ ಮತ್ತು ಕಾವ್ಯ ವಾಚನ

ಗೀತಾ ಜಯಂತಿ ಸಪ್ತಾಹದ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ... ದಲ್ಲಿ ಬ್ರಹ್ಮಶ್ರೀ ... ಶಾಸ್ತ್ರಿ ... ಅವರು "ಗೀತಾಸಾರ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಶ್ರೀ ವಿ ಜೆ ವಿ ಸುಬ್ರಹ್ಮಣ್ಯಶಾಸ್ತ್ರಿಯವರಿಂದ ಕಾವ್ಯ ವಾಚನವೂ ನಡೆಯುವುದು

ಸಾಹಿತ್ಯ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿ

ಅಧ್ಯಕ್ಷ ನಿರಂಜನರವರ ಕರೆ

ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನೆನ್ನೆ ಲೇಖಕರ ಗೋಷ್ಠಿಯು ನಡೆಯಿತು ಶ್ರೀ ನಿರಂಜನರವರು ಅಧ್ಯಕ್ಷತೆ ವಹಿಸಿದ್ದರು ಅವರು ಭಾಷಣ ಮಾಡಿ ಸಮಾಜದ ಕಲ್ಯಾಣವೇ ಲೇಖಕರ ಗುರಿಯಾಗಿರಬೇಕೆಂದೂ, ನೃಪತುಂಗನು ಹಿಂದೆ ಹೇಳಿದ್ದಂತೆ "ಅವನೀ ಭುವನ ಹಿತಂಗಳಪ್ಪ" ಸಾಹಿತ್ಯವು ಸಾಧಿಸಬೇಕೆಂದೂ, ಕಾಲ ಧರ್ಮವನ್ನು ಪ್ರತಿಬಿಂಬಿಸಿ, ಬದುಕಿನಿಂದ ಚಿಮ್ಮಿದ, ಮಾನವರ ಬಗ್ಗೆ ಒಡನಾಟ ಬೋಧೆಯನ್ನು ಹೆಚ್ಚಿಸಿದ ಸಾಹಿತ್ಯವೇ ಚಿರಕಾಲ ಬಾಳಬಲ್ಲದೆಂದೂ ಸೂಚಿಸಿದರು. ಮನೋರಂಜನೆಯೊಂದೇ ಸೃಷ್ಟಿ ಸಾಹಿತ್ಯದ ಗುರಿಯೆಂದು ಹಲವರು ವಾದಿಸುವರೆಂದೂ, ಅವರ ದೃಷ್ಟಿಯಲ್ಲಿ ಕತೆ, ಕಾದಂಬರಿಗಳು ಕಾಲಹರಣದ ಸಾಧನಗಳು ಮಾತ್ರವೆಂದೂ ಅವರು ಹೇಳಿ,ವಿಚಾರ ಸಾಹಿತ್ಯಕ್ಕೆ ಇರುವ ಹೆಚ್ಚಿನ ಮಹತ್ವವನ್ನು ತಿಳಿಸಿದರು

ಶ್ರೀಗಳಾದ ಜಿ ವೆಂಕಟಸುಬ್ಬಯ್ಯ ಮತ್ತು ಕೆ ಎಂ ಇನಾಂದಾರ್‌ರವರು ಗದ್ಯ ಕಾವ್ಯದ ಬಗ್ಗೆ ಭಾಷಣ ಮಾಡಿದರು ಟಿ ಎಸ್ ಶ್ರೀಕಂಠಯ್ಯ, ನರಸಿಂಗರಾವ್ ಮಾಸ್ತಿ, ರಾಮಚಂದ್ರಶರ್ಮ, ಮಾಣಿಕ್ಯರಾವ್ ಮುಂತಾದವರೂ ಭಾಷಣ ಮಾಡಿದರು

○ ಕನ್ಯಾಕುಮಾರಿಯಿಂದ ಒರಿಸ ... ಮುಂದಿನ ತಾರೀಖು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಭೂದಾನ ಪಾದಯಾತ್ರೆಯನ್ನು ಆರಂಭಗೊಳಿಸುವರು

ಗೋವಾದಲ್ಲಿ ಅಂತರಂಗ ಸೈನ್ಯದಿಂದ ಗೆರಿಲ್ಲಾ ಕಾರ್ಯಾಚರಣೆ

ಠಾಣೆಯಿಂದ ಶಸ್ತ್ರಾಸ್ತ್ರ ಅಪಹಾರ, ಕದನದಲ್ಲಿ ಒಬ್ಬ ಪೊಲೀಸನ ಮರಣ

ಗೋವಾ ರಾಷ್ಟ್ರೀಯರ ಅಂತರಂಗ ಸೈನ್ಯವು ಪೋರ್ಚುಗೀಸರ ಆಡಳಿತವನ್ನು ಕಿತ್ತೊಗೆಯಲು ಗೆರಿಲ್ಲಾ ಕಾರ್ಯಾಚರಣೆಯನ್ನು ಆರಂಭಿಸಿರುವರೆಂದು ಸುದ್ದಿ ಬಂದಿದೆ ಕಳೆದ ... ತಾರೀಖು ಬಿಚೋಲಿಂ ಎಂಬಲ್ಲಿ ಒಂದು ಪೊಲೀಸು ಠಾಣೆಯ ಮೇಲೆ ಅಂತರಂಗ ದಳದವರು ಧಾಳಿ ಮಾಡಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ದೋಚಿಕೊಂಡುಹೋದರೆಂದು ಹೇಳಲಾಗಿದೆ ಆ ಸಮಯದಲ್ಲಿ ಪೊಲೀಸರಿಗೂ ಅವರಿಗೂ ಕಾದಾಟ ನಡೆದು, ಒಬ್ಬ ಪೋರ್ಚುಗೀಸ್ ಪೊಲೀಸನು ಹತನಾಗಿ ಮೂವರಿಗೆ ಗಾಯವಾಯಿತೆಂದು ಗೊತ್ತಾಗಿದೆ ಆ ವೈಕಿ ಒಬ್ಬನು ಆಸ್ಪತ್ರೆಯಲ್ಲಿ ಮೃತಪಟ್ಟಿರಬಹುದೆಂದೂ ತಿಳಿದುಬಂದಿದೆ

ಪೊಲೀಸು ಠಾಣೆಗೆ ಬೆಂಕಿ ಹತ್ತಿಸುವ ಪ್ರಯತ್ನವು ಗಸ್ತುಪಡೆ ಬಂದ ಕಾರಣ ವಿಫಲವಾದುದಾಗಿಯೂ, ... ಜನ ಸಂಶಯಗ್ರಸ್ತರನ್ನು ಬಂಧಿಸಲಾಗಿದೆಯೆಂದೂ ಹೇಳಲಾಗಿದೆ

ಕಳೆದ ವರ್ಷ ... ದಲ್ಲಿ ಗೆರಿಲ್ಲಾ ಸೈನ್ಯವು ಸ್ಥಾಪಿಸಲ್ಪಟ್ಟಿತು ... ಅದರಲ್ಲಿ ಪೊಲೀಸರು, ಪುಂಡರು ... ಮತ್ತು ... ಗಾಡುಗಳು ಇರುವರು.

ಲಕ್ಷ ದ್ವೀಪದಲ್ಲಿ ಇಲಿಗಳ ಹಾವಳಿ

ಅರಬ್ಬೀ ಸಮುದ್ರದಲ್ಲಿರುವ ಲಕ್ಷ ದ್ವೀಪಗಳಲ್ಲಿ ಇಲಿಗಳ ಹಾವಳಿಯು ವಿಪರೀತವಾಗಿದೆ ಇಲಿಗಳ ನಾಶಕ್ಕಾಗಿ ಒಂದು ಕತ್ತಾಯದ ಸೈನ್ಯವನ್ನು ನಿರ್ಮಾಣ ಮಾಡಲಾಗಿದೆ ಅದಕ್ಕೆ ಸೇರದೆ ಇರುವವರಿಗೆ ೨ ರೂ ದಂಡವನ್ನು ವಿಧಿಸಲಾಗುತ್ತಿದೆ ವಿಶ್ವದಲ್ಲೆಲ್ಲೂ ಇಲ್ಲದಿರುವಷ್ಟು ಇಲಿ ಹಾವಳಿ ಇಲ್ಲವೆಂದು ಹೇಳಲಾಗಿದೆ

ಇಂಡಿಯನ್ ಬ್ಯಾಂಕ್ ನೌಕರರಿಂದ ೧ ಗಂಟೆ ಕಾಲ ಮುಷ್ಕರ

ಮೈಸೂರು ೨೮

ನಗರದಲ್ಲಿರುವ ಇಂಡಿಯನ್ ಬ್ಯಾಂಕಿನ ೧೩ ಮಂದಿ ನೌಕರರು ಈ ದಿನ ಬೆಳಿಗ್ಗೆ ೧೦॥ ಗಂಟೆಯಿಂದ ೧೧॥ ವರೆಗೆ ಮುಷ್ಕರ ನಡೆಸಿ, ಸಂಬಳವನ್ನು ಕಡಿಮೆ ಮಾಡಬೇಕೆಂದು ಬಂದಿರುವ ಸೂಚನೆ ಬಗ್ಗೆ ಪ್ರತಿಭಟಿಸಿದರು. ಬ್ಯಾಂಕಿನ ಮ್ಯಾನೇಜರ್ ಮತ್ತು ಅಕೌಂಟೆಂಟರು ಮಾತ್ರ ಇದಕ್ಕೆ ಸೇರಲಿಲ್ಲ

ಲಕ್ಷಾರ್ಚನೆ ಉತ್ಸವದಲ್ಲಿ ವಾದ್ಯ ಗೋಷ್ಠಿ

ಚಾಮುಂಡಿ ಬಡಾವಣೆಯ ನಿರಂಜನರಾವ್ ಅರಸಿನವರ ತೋಟದಲ್ಲಿರುವ ಸತ್ಯನಾರಾಯಣ ಮಂದಿರದಲ್ಲಿ ಕಳೆದ ಶನಿವಾರದಿಂದ ೧೦ ದಿನಗಳು ಲಕ್ಷಾರ್ಚನೆಯನ್ನು ಏರ್ಪಡಿಸಲಾಗಿದೆ ಈ ಸಂಬಂಧವಾಗಿ ನಾಳೆ ಸಂಜೆ ೬ ಗಂಟೆಗೆ ಮಾಸ್ಟರ್ ನರಸಿಂಹನ್, ನಾರಾಯಣ ಮತ್ತು ಮುರಳಿಯವರಿಂದ ವಾದ್ಯ ಗೋಷ್ಠಿಯು ನಡೆಯುವುದು ಸರ್ವರಿಗೂ ಸ್ವಾಗತವಿದೆ.

ವಿವಿಧ ಮತಗಳ ಸಹಕಾರಕ್ಕಾಗಿ ರಾಧಾಕೃಷ್ಣನ್ನರ ಮನವಿ

ಅಣ್ಣಾಮಲೆ ನಗರದಲ್ಲಿ ನೆನ್ನೆ ಡಾ|| ರಾಧಾಕೃಷ್ಣನ್‌ರವರು ಅಖಿಲ ಭಾರತ ಪೌರ್ವಾತ್ಯ ಸಮ್ಮೇಳನವನ್ನು ಆರಂಭಗೊಳಿಸುತ್ತಾ, ಧರ್ಮವಾದಿ ಮತಧರ್ಮವೇ ಮನುಷ್ಯನಿಗೆ ಶ್ರೇಯಸ್ಸು ಮತ್ತು ಶಾಂತಿಯನ್ನು ಕೊಡಬಲ್ಲವೆಂದು ತಿಳಿಸಿದರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಹೂದ್ಯ ಕ್ರಿಸ್ತ ಮತ್ತು ಮುಸ್ಲಿಂ ಧರ್ಮಗಳು ಹೇಗೆ ಪ್ರಾಗ್ವರ್ತಿಗಳಾಗಿವೆಯೋ ಹಾಗೆಯೇ ಪೂರ್ವ ರಾಷ್ಟ್ರಗಳಲ್ಲಿ ಹಿಂದೂ ಧರ್ಮ, ಬೌದ್ಧಮತ ಮುಂತಾದವು ಇರುವುವೆಂದೂ, ಪೂರ್ವ ಮತ್ತು ಪಶ್ಚಿಮದ ಮತ ಧರ್ಮಗಳ ಸಂಯೋಜನದಿಂದ ವಿಶ್ವದ ಧಾರ್ಮಿಕ ಮಟ್ಟವನ್ನು ಮುಟ್ಟಬಹುದೆಂದೂ ಅವರು ಸೂಚಿಸಿದರು. ಧಾರ್ಮಿಕವಾಗಿ ಪ್ರಪಂಚವು ಒಂದಾಗಬೇಕಾದರೆ, ಯಾವುದೇ ಒಂದು ಮತದ ಹೆಸರಿನಲ್ಲಿ ಅದು ಸಾಧ್ಯವಾಗುವುದಿಲ್ಲವೆಂದೂ, ವಿವಿಧ ಮತಗಳ ಸಹಕಾರದ ಮೂಲಕವೇ ಅದು ಸಾಧ್ಯವೆಂದೂ ಅವರು ಸ್ಪಷ್ಟಪಡಿಸಿದರು.

೨೪ ಜನ ಮಕ್ಕಳಿರುವ ಕಾರ್ಮಿಕ

ಅಮೆರಿಕದ ಓಹಿಯೊ ಸಂಸ್ಥಾನದ ಕ್ಲೀವ್ಲೆಂಡಿನ ಕೋರ್ಟಿನಲ್ಲಿ ಹಾಜರಾದ ಕಾರ್ಮಿಕನೊಬ್ಬನು ತನಗೆ ಇನ್ನೂ ೨೨ ಮಕ್ಕಳಿರುವುದರಿಂದ ತನ್ನ ಒಬ್ಬಳೇ ಪತ್ನಿಯಲ್ಲಿ ಜನಿಸಿದ ಇಬ್ಬರು ಮಕ್ಕಳನ್ನು ಸಲಹಲು ಅಸಹಾಯನಾಗಿರುವುದಾಗಿ ತಿಳಿಸಿರುವನೆಂದು ಗೊತ್ತಾಗಿದೆ. ಆ ವ್ಯಕ್ತಿಗೆ ೯ ಮಕ್ಕಳು ಪೋಲೆಂಡಿನಲ್ಲೂ, ೬ ಜನರು [illegible] ದೇಶದಲ್ಲೂ ಮತ್ತು ಆರು ಮಂದಿ ಅಮೆರಿಕದಲ್ಲೂ ಇರುವರೆಂದೂ, ತನಗೆ ಒಟ್ಟು ಇರುವ ಮಕ್ಕಳ ಸ್ಥಿತಿ ಇನ್ನುಳಿದವರಲ್ಲಿ ವಾಸಿಸುತ್ತಿರುವರೋ ಎಂಬುದು ಗೊತ್ತಿಲ್ಲವೆಂದೂ ಅವನು ಹೇಳುತ್ತಾನೆ. ನ್ಯಾಯಾಧೀಶರು ೧ ವರ್ಷ ಸೆರೆ ವಿಧಿಸಿ ಶಿಕ್ಷೆಯನ್ನು ಸಸ್ಪೆಂಡ್ ಮಾಡಿರುವರಲ್ಲದೆ ಇಬ್ಬರು ಮಕ್ಕಳ ಪಾಲನೆಗಾಗಿ ಮಾಸಿಯಾನ ೬೦ ರೂಗಳನ್ನು ಕೊಡಬೇಕೆಂದು ಸೂಚಿಸಿರುವರು.

ಪೊಲೀಸರ ಮೇಲೆ ಸೈಕಲ್ ಕಳ್ಳನ ಸೇಡು

ಜುನಾಗಡದಲ್ಲಿ ಅಡಿ ಇಸ್ಮೈಲ್ ಎಂಬುವನೊಬ್ಬನಿಂದ, ಪೊಲೀಸರು ೭೩ ಕಳುವಾದ ಬೈಸಿಕಲ್ಲುಗಳನ್ನು ವಶಪಡಿಸಿಕೊಂಡಿರುವುದಾಗಿ ಗೊತ್ತಾಗಿದೆ. ಅವನು ಕಳೆದ ೫ ತಿಂಗಳಿಂದಲೂ ದಿನವಹಿ ಒಂದು ಅಥವಾ ಎರಡು ಸೈಕಲ್ಲುಗಳನ್ನು ಕದಿಯುತ್ತಿದ್ದನೆಂದೂ, ತನ್ನ ಮನೆಯನ್ನು ನಿರಾಶ್ರಿತ ಇಲಾಖೆಯವರು ಹತೋಟಿಗೆ ತೆಗೆದುಕೊಂಡುದಕ್ಕೆ ಪ್ರತಿಭಟಿಸಲೂ, ಈ ಬಗ್ಗೆ ಪೊಲೀಸರು ನಡೆಸಿದ ಕ್ರಮಕ್ಕಾಗಿ ಸೇಡು ತೀರಿಸಿಕೊಳ್ಳಲೂ ಅವನು ಹಾಗೆ ಮಾಡಿದುದಾಗಿ ಗೊತ್ತಾಗಿದೆ.

ಮೈಸೂರು ವಿದ್ವಾಂಸರಿಗೆ ಸನ್ಮಾನ

ಮಹಾಕವಿ ವಳ್ಳತ್ತೋಳ್‌ರವರಿಂದ ಸ್ಥಾಪಿಸಲ್ಪಟ್ಟಿರುವ ಕೇರಳ ಕಲಾ ಮಂಡಲದ ರಜತೋತ್ಸವವು ಮೊನ್ನೆ ಪ್ರಧಾನಿ ನೆಹರೂರವರಿಂದ ಚೆರುತುರತಿಯಲ್ಲಿ ನೆರವೇರಿಸಲ್ಪಟ್ಟಿತು. ಆ ಸಂಬಂಧದಲ್ಲಿ ಮೈಸೂರಿನ ಆ|| ಸಂಗೀತ ವಿದ್ವಾಂಸರಾದ ಗಾ|| ವಿ|| ಬಿ ದೇವೇಂದ್ರಪ್ಪ, ಪಿಟೀಲು ವಿದ್ವಾನ್ ಮುತ್ತಣ್ಣ, ಆ|| ವಿ|| ವೆಂಕಟೇಶದೇವರು ಮುಂತಾದವರಿಂದ ಘನವಾದ ಸಂಗೀತ ಕಛೇರಿಯು ೩ ಗಂಟೆ ಕಾಲ ನಡೆಯಿತು. ಸಹಸ್ರಾರು ಜನರು ಸೇರಿದ್ದರು. ಕಲಾ ಮಂಡಲಿಯ ವ್ಯವಸ್ಥಾಪಕರು ಸಂಗೀತ ವಿದ್ವಾಂಸರ ಪ್ರೌಢಿಮೆಯನ್ನು ಪ್ರಶಂಸಿಸಿ ಸನ್ಮಾನಿಸಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕನ್ನಡ ಗೀತೆಗಳು ೭-೩೦ ಎ ಕೆ ಸುಬ್ಬರಾವ್ ಕೊಳಲು [illegible] ವಿಶ್ವನಾಥ್ ಸಂಗೀತ ಮಧ್ಯಾಹ್ನ ೧೨ ಮತ್ತು ೧ ಸಿ [illegible] ಸರಸತಿ ಸಂಗೀತ ೧-೩೦ ವಾದ್ಯ ಸಂಗೀತ ೧-೩೦ ಮತ್ತು ೧-೫೦ ದಿಲ್ರುಬಾ [illegible] ಎಸ್ [illegible] ಸಂಜೆ [illegible] ಎ ಕೆ ಸುಬ್ಬರಾವ್ ಕೊಳಲು [illegible] ವಿಶ್ವನಾಥ್–ಸಂಗೀತ [illegible] ರೆಕಾರ್ಡ್ ಸಂಗೀತ [illegible] ಮದ್ರಾಸ್ ರಿಲೆ ಸಂಗೀತೋತ್ಸವ [illegible] ಮದ್ರಾಸ್ ರಿಲೆ–ಸಂಗೀತೋತ್ಸವ

ಧರ್ಮಗಳ ಸಹ ಜೀವನಕ್ಕೆ ರಾಧಾಕೃಷ್ಣನ್‌ರವರ ಕರೆ

ತಿರುವನಂತಪುರದಲ್ಲಿ ನಡೆದ ಕೇರಳ ಹಿಂದೂ ಮಿಷನ್ ಸಂಸ್ಥೆಯ ೨೦ನೇ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಡಾ|| ರಾಧಾಕೃಷ್ಣನ್‌ರವರು ವಹಿಸಿ ಭಾಷಣ ಮಾಡಿ ಜಗತ್ತಿನ ಎಲ್ಲ ಮತಗಳೂ ಸಹಜೀವನದಿಂದ ಬಾಳುವ ಧ್ಯೇಯವನ್ನು ಅನುಷ್ಠಾನಕ್ಕೆ ತರಬೇಕೆಂದು ಮನವಿ ಮಾಡಿದರು. ಭಗವಂತನಲ್ಲಿ ಮಾನವನ ಜೀವನವು ಕೇಂದ್ರೀಕರಿಸಲ್ಪಡುವಂತೆ ಮಾಡುವುದೇ ಎಲ್ಲ ಧರ್ಮಗಳ ಗುರಿಯೆಂದು ಅವರು ಹೇಳಿದರು. ಈ ಗುರಿಯನ್ನು ಸಾಧಿಸಲು ಮಾರ್ಗಗಳು ಬೇರೆಬೇರೆಯಾಗಿರಬಹುದಾದರೂ, ಪ್ರತಿಯೊಬ್ಬರಿಗೂ ತಮ್ಮ ತಮ್ಮ ಮಾರ್ಗವನ್ನು ಅನುಸರಿಸಲು ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಅವರು ತಿಳಿಸಿದರು. ಸಮನ್ವಯಗೊಳಿಸುವುದೇ ಧರ್ಮ, ಭೇದವುಂಟುಮಾಡುವುದೇ ಅಧರ್ಮ–ಎಂದು ಅವರು ಹೇಳಿ ಹಿಂದೂ ಸಮಾಜವನ್ನು, ತನ್ಮೂಲಕ ವಿಶ್ವಸಮಾಜವನ್ನು ಸಂಘಟಿಸಬೇಕೆಂದು ನುಡಿದರು.

ಪ್ರಾಥಮಿಕ ಶಾಲೆಗಳಲ್ಲಿ ಸರದಿ ವಿದ್ಯಾಭ್ಯಾಸ ಪದ್ಧತಿ

ಭಾರತದ ಯೋಜನಾ ಮಂಡಲಿಯ ವಿದ್ಯಾಭ್ಯಾಸ ಸಮಿತಿಯವರು ಮಾಡಿರುವ ಶಿಫಾರಸಿನ ಪ್ರಕಾರ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವು ಜಾರಿಯಲ್ಲಿಲ್ಲದ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಹಲವು ತರಗತಿಗಳಲ್ಲಾದರೂ ಓದಲು ಅವಕಾಶವಿರಬೇಕೆಂದು ಸೂಚಿಸಲಾಗಿದೆ. ೬ ರಿಂದ ೧೧ ವರ್ಷ ವಯಸ್ಸಿನೊಳಗಿರುವ ಮಕ್ಕಳಿಗೆ ಷಿಫ್ಟ್ (ಸರದಿ) ಪದ್ಧತಿ ವಿದ್ಯಾಭ್ಯಾಸವನ್ನು ಏರ್ಪಡಿಸುವುದು ಅಗತ್ಯವೆಂದು ಸಮಿತಿಯವರು ಸೂಚಿಸಿರುವರು. ಇದರಿಂದ ಮಾತಾಪಿತೃಗಳು ತಮ್ಮ ಮಕ್ಕಳನ್ನು ಉದ್ಯೋಗಗಳಿಗೆ ಕಳಿಸಿಕೊಂಡರೂ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶವಾಗುವುದೆಂದು ಸಮಿತಿಯವರು ಭಾವಿಸಿರುವರು.

೧|| ಕೋಟಿ ಜನರಿಗೆ ಉದ್ಯೋಗ ಅಗತ್ಯ

ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ೧|| ಕೋಟಿ ಮಂದಿಗಾದರೂ ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸುವುದು ಅಗತ್ಯವೆಂದು ಯೋಜನಾ ಮಂಡಲಿಯವರು ಸೂಚಿಸಿರುತ್ತಾರೆ. ಗ್ರಾಮಾಂತರದಲ್ಲಿ ೬೦ ಲಕ್ಷ ಮತ್ತು ನಗರಗಳಲ್ಲಿ ೨೦ ಲಕ್ಷ ಮಂದಿ ಹೊಸಬರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗುವುದೆಂದೂ, ದೇಶದಲ್ಲಿ ನಿರುದ್ಯೋಗವು ತೀವ್ರವಾಗುತ್ತಿರುವುದೆಂದೂ ತಿಳಿದುಬಂದಿದೆ.

ಬೆಂಗಳೂರಿನಲ್ಲಿ ಏರೋ ಇಂಜನ್ ತಯಾರಿಕೆ ಯೋಜನೆ

ಬೆಂಗಳೂರಿನಲ್ಲಿ ಏರೋ ಇಂಜನ್ನುಗಳ ತಯಾರಿಕೆ ಬಗ್ಗೆ ಬ್ರಿಟನ್ನಿನ ಬ್ರಿಸ್ಟಲ್ಸ್ ಕಂಪೆನಿಯೊಡನೆ ನಡೆಯುತ್ತಿರುವ ಮಾತುಕತೆಗಳು ಆಖೈರಾಗಿಲ್ಲವೆಂದೂ, ಈ ಬಗ್ಗೆ ಒಡಂಬಡಿಕೆಯಾದರೆ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲೇ ಅವುಗಳನ್ನು ತಯಾರಿಸಬಹುದೆಂದೂ ಕಾರ್ಖಾನೆಯ ಜನರಲ್ ಮ್ಯಾನೇಜರರು ತಿಳಿಸಿರುತ್ತಾರೆ.

ಹನುಮಜ್ಜಯಂತಿ ಸಂಗೀತ

— ಶ್ರೀ ಬಿ ದೇವೇಂದ್ರಪ್ಪನವರ ಶ್ರೀ ಮಾರುತಿ [illegible] ದಿನದಲ್ಲಿ ಹನುಮಜ್ಜಯಂತಿ ಅಂಗವಾಗಿ ನಾಳೆ ಮಧ್ಯಾಹ್ನ ೪ ಗಂಟೆಗೆ ಶ್ರೀ ಬಿ ಡಿ ಲಕ್ಷ್ಮಣ್‌ರವರ ಸಂಗೀತವೂ, ಸಂಜೆ ೭|| ಗೆ ವಿ|| ಮುನಿರಾಮಯ್ಯನವರ ಗಾಯನವೂ ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುವು.

ನೆಹರೂರವರಿಗೆ ಪ್ರಜಾ ಮಂಡಲದ ಅಭಿನಂದನಾ ತಂತಿ

ರಾಜಧಾನಿಯ ಪ್ರಜಾ ಮಂಡಲದ ಸಂಚಾಲಕರಾದ ಶ್ರೀ ಎ ಎಸ್ ವೆಂಕಟಸುಬ್ಬಯ್ಯನವರು ಪ್ರಧಾನಿ ನೆಹರೂರವರಿಗೆ ತಂತಿ ಕಳುಹಿಸಿ, ಭಾರತವನ್ನು [illegible]ವಾಗಿ ವಿಂಗಡಿಸಲು ಉದ್ದೇಶಿಸಿರುವುದನ್ನು ಪ್ರಶಂಸಿಸಿರುತ್ತಾರೆ. ಎಸ್ ಆರ್ ಸಿ ಯವರ ವರದಿಯನ್ನು ಕಡೆಗಣಿಸಿ, ರಾಜಪ್ರಮುಖರ ಹುದ್ದೆಗಳನ್ನು ಉಳಿಸಬೇಕೆಂದೂ ಅವರು ಕೋರಿರುತ್ತಾರೆ.

ರಾಧಾಕೃಷ್ಣನ್‌ರವರಿಗೆ ಜರ್ಮನಿಯ ಉನ್ನತ ಪ್ರಶಸ್ತಿ

ಜರ್ಮನಿಯ ಚಕ್ರವರ್ತಿ ಫ್ರೆಡರಿಕ್ ದಿ ಗ್ರೇಟ್ ಎಂಬುವರು ೧೭೪೦ನೇ ಇಸವಿಯಲ್ಲಿ ಸ್ಥಾಪಿಸಿದ ಭಾರಿ ಗೌರವ ಪ್ರಶಸ್ತಿಯೊಂದನ್ನು ಕಳೆದ ವಾರ ನವದೆಹಲಿಯಲ್ಲಿ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರಿಗೆ ಜರ್ಮನಿಯ ರಾಯಭಾರಿಗಳಾದ ಡಾ| ಮೇಯರ್‌ರವರು ಸಮಾರಂಭವೊಂದರಲ್ಲಿ ಸಮರ್ಪಿಸಿದರು. ಸುಪ್ರಸಿದ್ಧ ವಿದ್ವಾಂಸರುಗಳಾದ ವಾಲ್ಟೇರ್, ಡಾರ್ವಿನ್ ಮತ್ತು ಕಾರ್ಲೈಲ್‌ರವರುಗಳಿಗೆ ಹಿಂದೆ ಈ ಪ್ರಶಸ್ತಿಯನ್ನು ಕೊಡಲಾಗಿತ್ತು.

ಬಿ. ಸಿ. ಜಿ. ತನಿಖೆಗಾಗಿ ಮಧ್ಯ ಪ್ರದೇಶದಲ್ಲಿ ಸಮಿತಿ

ಬಿ ಸಿ ಜಿ ವ್ಯಾಕ್ಸಿನೇಷನ್ನಿನಿಂದ ಉಂಟಾಗುವುದೆಂದು ಹೇಳಲಾದ ಪರಿಣಾಮಗಳ ಬಗ್ಗೆ ತನಿಖೆ ನಡೆಸಿ ವರದಿ ಮಾಡಲು ಮಧ್ಯ ಪ್ರದೇಶ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿರುತ್ತಾರೆ. ಸಂಸ್ಥಾನದ ಎಲ್ಲಾ ವೈದ್ಯರುಗಳೂ ಈ ಸಂಬಂಧವಾಗಿ ತಮ್ಮ ಅನುಭವಗಳನ್ನು ಸಮಿತಿಗೆ ತಿಳಿಸುವಂತೆ ಅಪ್ಪಣೆ ಮಾಡಲಾಗಿದೆ. ಸಮಿತಿಯಲ್ಲಿ ದೊಡ್ಡದೊಡ್ಡ ವೈದ್ಯಾಧಿಕಾರಿಗಳೂ, ಅಧ್ಯಾಪಕರೂ ಮತ್ತು ಖಾಸಗಿ ವೈದ್ಯರೂ ಇರುವರು.

ರಾಮಸ್ವಾಮಿ ನಾಯಕರಿಗೆ ಮೋಟಾರಿನ ಬಹುಮಾನ

ದ್ರಾವಿಡ ಕಳಗಂ ಸಂಸ್ಥೆಯ ನಾಯಕರಾದ ಇ ವಿ ರಾಮಸ್ವಾಮಿ ನಾಯಕರಿಗೆ ಕಳೆದ ಶನಿವಾರ ಪೆರಂಬೂರಿನಲ್ಲಿ ನಡೆದ ಒಂದು ಸಭೆಯಲ್ಲಿ ಒಂದು ಮೋಟಾರು ವ್ಯಾನನ್ನೂ ಮತ್ತು ಭಾಷಣಗಳನ್ನು ರೆಕಾರ್ಡು ಮಾಡುವ ಯಂತ್ರವನ್ನೂ ಬಹುಮಾನವಾಗಿ ಕೊಡಲಾಯಿತು. ಇದಕ್ಕಾಗಿ ೧೯ ಸಾವಿರ ರೂ ಗಳನ್ನು ಚಂದಾ ಎತ್ತಲಾಗಿತ್ತು. ವ್ಯಾನಿನಲ್ಲಿ ಸಂಚಾರ ಕಾಲಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಲಾಗಿದೆ.

ಮೈಸೂರು ಪೇಟೆ ಧಾರಣೆ

	ರೂ. ಇಂದ			ರೂ. ವರೆಗೆ		
ಕಡಲೆಕಾಯಿ	೧೨	೦	೦	೧೭	೨	೦
ಹರಳುಬೀಜ	೨೬	೨	೦	೨೭	೦	೦
ಹುಚ್ಚೆಳ್ಳು	೩೬	೨	೦	೪೯	೦	೦
ಹುರುಳಿ	೨೨	೦	೦	೨೫	೪	೦
ಹೆಸರು	೪೩	೧೦	೦	೪೪	೪	೦
ಹಲಸಂದೆ	೪೧	೦	೦	೪೭	೦	೦
ಉದ್ದು	೫೦	೦	೦			
ಅವರೆ	೩೦	೦	೦			
ತೊಗರಿ	೨೮	೦	೦	೪೪	೦	೦
ಧನಿಯ	೩೭	೧೪	೦	೩೮	೧೨	೦
[illegible]	೩೧	೧೨	೦	೩೬	೧೪	೦
ಹುಣಸೇಹಣ್ಣು	೨	೪	೨	೩	೧೧	೦
ಸೀಗೆಕಾಯಿ	೮	೬	೦	೯	೪	೦
ಮೆಣಸಿನಕಾಯಿ	೫	೦	೦	೧೭	೪	೦
ಹತ್ತಿ (೨೪ ಪೌಂಡು)	೯	೦	೦			
ತೆಂಗಿನಕಾಯಿ ೧,೦೦೦	೧೩೨	೦	೦	೧೩೨	೦	೦

MYSORE GOVERNMENT LIFE INSURANCE,
BANGALORE

Application having been received for the issue of a duplicate of Policy No 31778/C on the Life of Sri K Nanjunda Sastry, Purohit, Srirangapatna, it is notified that the duplicate will be issued unless valid objection therefor is received by the undersigned within one month from this date

C. Narasimhamurthy,
Secretary

Edited, Printed and Published by A R Nagarajan at Sadhvi Press, D Subbiah Road, Mysore

ಅಗ್ಗವಾದ, ಉತ್ತಮ … ಗ್ರಂಥಗಳ ರಚನೆಯಾ…

ಸಾಹಿತ್ಯ ಸಮ್ಮೇಳನದಲ್ಲಿ … ಮುಖ್ಯ …

ರಾಯಚೂರಿನಲ್ಲಿ ಸೇರಿದ್ದ ಕನ್ನ… ಸಮ್ಮೇಳನವು ನೆನ್ನೆ ರಾತ್ರಿ ಮುಕ್ತಾ…ತು. ಅಧ್ಯಕ್ಷ ಶ್ರೀ ಆದ್ಯ ರಂಗಾಚಾ… ಷಣ ಮಾಡಿ, ಜನರಿಗೆ ಅಗ್ಗವಾದ … ದ ಮತ್ತು ಬೋಧಾತ್ಮಕ ಗ್ರಂಥಗಳ… ವಂತೆ ಪ್ರಕಟಣಕಾರರು ಮಾಡಬೇ… ಟಿಸಿದರು.

ಅಧಿವೇಶನದಲ್ಲಿ ಹಲವಾರು … ಕವನಗಳನ್ನು ಓದಿದರು. ಸಮ್ಮೇ… ಪ್ರತಿನಿಧಿಗಳು ಕನ್ನಡ ನಾಡಿನ … ಯಿಂದ ಆಗಮಿಸಿದ್ದರು.

ಸಮ್ಮೇಳನಾರಂಭವಾದಾಗ … ಚೆಲುವ ಕನ್ನಡ ನಾಡು' ಗೀತ… ಲಾಯಿತು

ಜನತಾ ಚೀಣದ … ಧಾಳಿಗಾಗಿ ಸಿದ್ಧ…

ಚೀಣದ ಮುಖ್ಯ ಭೂಭಾಗವನ್ನು … ಕೊಳ್ಳಲು ರಾಷ್ಟ್ರೀಯರು ಸಿದ್ಧ… ಷ್ಟ್ರೀಯ ಚೀನಾ ಅಧ್ಯಕ್ಷ ಚಿಯಾಂ… ವರು ಸೂಚಿಸುತ್ತಾರೆ. ರಾಷ್ಟ್ರೀ… ವಲ್ಲೇ ಧಾಳಿ ಮಾಡಬಹುದೆಂದೂ … ಯುತ್ತಾರೆ

ಅಮೆರಿಕದಲ್ಲಿ ಕ್ರಿಸ್ಮಸ್ … ಘಟನೆಗಳಲ್ಲಿ ೫೦೦ …

ಈ ಸಾರಿ ಕ್ರಿಸ್ಮಸ್ ಹಬ್ಬದ ದಿನ… ರಿಕದಲ್ಲಿ ಟ್ರಾಫಿಕ್ ಘಟನೆಗಳ … ೫೦೦ ಮಂದಿ ಮೃತಪಟ್ಟಿರುವರೆಂ… ಗಿದೆ

[illegible]ದಲ್ಲಿ ಎನ್ ಸಿ …

ಮೈಸೂರು ನಗರಕ್ಕೆ ಸಮೀಪದ… ರಪಾಳ್ಯದಲ್ಲಿ ಎನ್ ಸಿ ಸಿಯ ಪ್ರ… ಶಿಕ್ಷಣ ಶಿಬಿರವು ಕಳೆದ ಭಾನುವಾ… ಯಿತು ಅದು ಎರಡು ವಾರ … ವುದು. ಅದರಲ್ಲಿ ೫೬ ಮಂದಿ ಅಧಿ… ೧,೬೦೦ ಕೆಡೆಟ್ಟುಗಳು ಇರುವರು … ಗಳ ಹಲವಾರು ಕಾಲೇಜು … ಭಾಗವಹಿಸಿರುವರು ಮೇಜರ್ … ಗೌಡರು ಶಿಬಿರಾಧಿಪತಿಗಳಾಗಿದ್ದಾ…

WANTE…

A full-time Manag… monthly salary of Rs… Grade 75 5 125 The c… will be on probation … year

Qualification B Com … with experience … operative and B… Institutions. (e…

Age Between 30 & … but may be … the discretion … Board of Dire…

Security – A cash … Rs. 500 …

Applications should … the undersigned on … 5th January 1956

A NAGAPP…
Honorary Secretary
The Mysore University Co…
Society, Ltd., My…

N B -1. Candidates … pear for interview … own cost if called …
2 Those who have applied need not ap…

ರಿಜಿಸ್ಟರ್ ನಂ. 792

ಇಂದಿನ ಪತ್ರಿಕೆ 3 ಕಾಸು

ಸ್ಥಾನಿಕ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

೦೯] SADHVI THURSDAY 29-12-1955 ಮೈಸೂರು ಗುರುವಾರ . ೨೯-೧೨-೧೯೫೫ [ಸಂಚಿಕೆ : ೦೩೩

ಬೊಂಬಾಯಿ ನಗರ ಭಾರತದ ವ್ಯಾಪಾರಿ ರಾಜಧಾನಿ ?

ಭತ್ತದ ಮೆದೆಗೆ ಬೆಂಕಿ ಹಾಕಿದವರ ಬಂಧನ

ಮೈಸೂರು ೨೮

ಚಾಮರಾಜನಗರದ ತಾಲ್ಲೂಕು ಚಿಕ್ಕವಡ್ಡರ ಪಟೇಲ್ ಶಿವಪ್ಪನವರ ಭತ್ತದ ಮೆದೆಗೆ ಭಾನುವಾರ ಬೆಂಕಿ ಹಾಕಿದರೆಂದು ಆ ಗ್ರಾಮದ ವೀರಪ್ಪ, ಪುಟ್ಟಪ್ಪ ಮತ್ತು ಹೊಟ್ಟೆ [illegible]ನ್ನು ಸಾಲಿಗ್ರಾಮದ ಪೋಲೀಸರು ಬಂಧಿಸಿದ್ದು ಸುಮಾರು ೧| ಸಾವಿರ ರೂಪಾಯಿ ನಷ್ಟವಾಗಿದೆಯೆಂದು ಹೇಳಲಾಗಿದೆ

ಢಿಕ್ಕಿ ಹೊಡೆಸಿದುದಕ್ಕಾಗಿ ದಂಡ

ಮೈಸೂರಿನ ಲಾರಿ ಡ್ರೈವರ್ ಮುಕ್ತಿಯಾರ್ ಎಂಬುವನು ಕಳೆದ ೧೭ನೇ ತಾರೀಖು ಚಾಮರಾಜನಗರ-ಮೈಸೂರು ರಸ್ತೆಯಲ್ಲಿ ಬೈಸಿಕಲ್ ಸವಾರನಿಗೆ ಢಿಕ್ಕಿ ಹೊಡೆಸಿದುದಕ್ಕಾಗಿ ಅವನಿಗೆ ಕೃಷ್ಣರಾಜನಗರದ ನ್ಯಾಯಾಧೀಶರು ೫೦ ರೂ ಜುಲ್ಮಾನೆ ವಿಧಿಸಿದರು

ಪ್ರೌಢ ಶಿಕ್ಷಣ ಸಮಿತಿಗೆ ಬಂಗಾಳಾ ಮಂತ್ರಿಗಳ ಭೇಟಿ

ಪಶ್ಚಿಮ ಬಂಗಾಳದ ಗುಪ್ತಾಂಗ [illegible] ಜನರ [illegible] ಮಂತ್ರಿ ರಾಧಾಗೋವಿಂದರಾಯ್ ಮ[illegible] ಮಂತ್ರಿ ಟಿ ವ್ಹಂಗಿಡೆಯವರು ಪಂ[illegible] ಪ್ರವಾಸಾರ್ಥವಾಗಿ ನಗರಕ್ಕೆ ಆಗಮಿಸಿ[illegible] ಬಂದು ಸನ್ನೆ ಬೆಳಿಗ್ಗೆ ಇಲ್ಲಿನ ವಯಸ್ಕರ ಶಿಕ್ಷಣ ಸಮಿತಿಯ ಕೇಂದ್ರ ಕಛೇರಿಗೆ ಭೇಟಿ [illegible] ಸಮಿತಿಯವರು ನಡೆಸುತ್ತಿರುವ ಕಾರ್ಯ[illegible]ಪಟ್ಟಿಗಳ ಪರಿಚಯ ಮಾಡಿಕೊಂಡರು. ಸಮಿತಿಯ [illegible] ಪ್ರಧಾನಾಧಿಕಾರಿ[illegible]ದ ಶ್ರೀ ಕೆ ಎಸ್ ಮುನಿಸ್ವಾಮಿಯವರು ಅವರನ್ನು ಸ್ವಾಗತಿಸಿದರು ಸಮಿತಿಯವರಿಂದ ತಯಾರಾದ ಚಲನಚಿತ್ರದ ಪ್ರದರ್ಶನವೂ ನಡೆಯಿತು

[illegible] ೯ನೇ ತಾ|| ಕಾಲೇಜುಗಳಿಗೆಲ್ಲಾ ರಜಾ

ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಉಪಾ[illegible]ಗಳ ಸಮ್ಮೇಳನವು ಬರುವ ೨ನೇ ತಾರೀಖಿನಿಂದ ನಡೆಯಲಿರುವುದರಿಂದ, ಜನವರಿ ೨ ಮತ್ತು [illegible]ರ ತಾರೀಖು ಹಾಸಗಿಯವೂ ಸೇರಿ, ಎಲ್ಲ ಕಾಲೇಜುಗಳಿಗೂ ರಜಾ ಕೊಡಲಾಗಿದೆ

ರಾಮಚಂದ್ರ ಶಾಸ್ತ್ರಿಯವರ ನಿಧನ

[illegible] ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಶ್ರೀ ಎಸ್ ರಾಮಚಂದ್ರಶಾಸ್ತ್ರಿಯವರು [illegible] ದಿನಗಳ ಹಿಂದೆ ಇಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೬ ಗಂಡು [illegible] ಹೆಣ್ಣು ಮಕ್ಕಳು ಇರುವರು ಮೈ[illegible] ಅವರು ಹಲವು ಕಾಲ ಜಿಲ್ಲಾ ಜಡ್ಜ್

[illegible]ಊರ್ ಮನೆತನದವರಿಂದ [illegible]೦೦ ಎಕರೆ ಭೂದಾನ

[illegible]ದ ಶೀಲಂಟೂರ್ ಅರಮನೆಯವರು [illegible] ಜಿಲ್ಲೆಗೆ ೧೦೦೦ ಎಕರೆ ಜಮೀನನ್ನು ಭೂದಾನ ನೆಹರೂರವರಿಗೆ ಕೊಟ್ಟಿರುತ್ತಾರೆ ಅಲ್ಲಿನ ೨೫೦ ರೈತರಿಗೆ ಹಂಚಲಾಗುವುದು [illegible]ರೂರವರು ಅರಮನೆಯವರ ಔದಾರ್ಯವನ್ನು ಪ್ರಶಂಸಿಸಿರುತ್ತಾರೆ

ಬೊಂಬಾಯಿ ಭಾರತದ ವ್ಯಾಪಾರಿ ರಾಜಧಾನಿಯಾಗುವುದೇ ?

ಬೊಂಬಾಯಿ ನಗರವನ್ನು ಭಾರತದ ವ್ಯಾಪಾರದ ಮುಖ್ಯ ಪಟ್ಟಣವನ್ನಾಗಿ ಪರಿವರ್ತಿಸುವ ಆಲೋಚನೆಯು ಈಗ ಮೂಡಿದೆ ಪ್ರಧಾನಿ ನೆಹರೂರವರು ಬೊಂಬಾಯಿಯ ಮುಖ್ಯ ಮಂತ್ರಿ ಮೊರಾರ್ಜಿ ದೇಸಾಯಿಯವರನ್ನು ಭೇಟಿ ಮಾಡಿ ಈ ವಿಷಯವನ್ನು ತಿಳಿಸಿರುವರಿ ಈ ನಗರವು ಕೇಂದ್ರ ಸರ್ಕಾರದ ಆಡಳಿತದಲ್ಲಿರುವುದೆಂದೂ ಹೇಳಲಾಗಿದೆ ವಿದರ್ಭ ಹೊರತು ಮಹಾರಾಷ್ಟ್ರ ಮತ್ತು ಗುಜರಾತನ್ನು ರಚಿಸುವ ವಿಷಯವು ನೆಹರೂ-ಮೊರಾರ್ಜಿ ಭೇಟಿ ಕಾಲದಲ್ಲಿ ವಿಚಾರಿಸಲ್ಪಡುವುದೆಂದು ಗೊತ್ತಾಗಿದೆ

ಜಯಪುರದಲ್ಲಿ ಸಣ್ಣ ಜಮೀನುದಾರರ ಪ್ರದರ್ಶನ

ಜಯಪುರದಲ್ಲಿ [illegible] ಸುಮಾರು [illegible] ಮಂದಿ ಸಣ್ಣ ಜಮೀನುದಾರರು [illegible] ಪ್ರದರ್ಶನ ಮಾಡಲಾಯಿತು [illegible] ಸೇವಕರು [illegible] ವ್ಯವಹಾರ [illegible] ಜಮೀನುಗಳನ್ನು ಮುರಿದ [illegible] ತಮ್ಮ ಹಕ್ಕುಗಳನ್ನು ಕಾಪಾಡಬೇಕೆಂದು [illegible] ಅವರು ಒಳಗೆ [illegible] ಪ್ರವೇಶಿಸಿದ [illegible] ಅವುಗಳನ್ನು ನೋಡಿದರೆಂದೂ ಹೇಳಲಾಗಿದೆ ಪೋಲೀಸರು ಕೂಡಲೆ [illegible] ಪರಿಸ್ಥಿತಿಯನ್ನು ಹತೋಟಿಗೆ ತಂದರು ತಮ್ಮ ಬೇಡಿಕೆಗಳನ್ನು ಪ್ರಕಟಪಡಿಸಿಕೊಂಡನಂತರ ಜಮೀನುದಾರರ ಪ್ರದರ್ಶನಕಾರರು [illegible] ಶಾಂತವಾಗಿ ಚದುರಿದರೆಂದು [illegible] ಸ್ವಾಮಿಗಳು ಒತ್ತಾಯಪಡಿಸುತ್ತಿದ್ದರು

ಅಜಂತಾ ಗುಹೆ ಬಳಿ ಉದ್ಯಾನ ವನ

ಭಾರತದ ಪ್ರಮುಖ ಪ್ರವಾಸಿ ಕ್ಷೇತ್ರಗಳಲ್ಲಿ ಒಂದಾದ ಅಜಂತಾ ಗುಹೆ ಬಳಿ ಸುಂದರವಾದ ಉದ್ಯಾನವನವನ್ನು ನಿರ್ಮಿಸಲು ಯೋಜನಾ ಮಂಡಲಿಯವರು ಕಾರ್ಯಕ್ರಮವನ್ನು ಹಾಕಿರುತ್ತಾರೆ ಈ ಕಾರ್ಯವನ್ನು [illegible]ರಲ್ಲಿ ನಡೆಸಲಾಗುವುದೆಂದು ಗೊತ್ತಾಗಿದೆ

ಗೀತಾ ಜಯಂತಿ ಉಪನ್ಯಾಸ ಮತ್ತು ಕಾಲಕ್ಷೇಪ

ಗೀತಾ ಜಯಂತಿ ಅಂಗವಾಗಿ ನಾಳೆ ಸಂಜೆ ೫|| ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀಗಳಾದ ಎಂ ಸಿ ಮಹದೇವಸ್ವಾಮಿ ಮತ್ತು ಸಿ ನಂಜುಂಡಾಚಾರ್ಯರಿಂದ ಗಮಕ ಕಾರ್ಯಕ್ರಮವೂ, ಪ್ರಸ್ಸ್ ಶ್ರೀ ವೈ ಚಂದ್ರಶೇಖರ ಶಾಸ್ತ್ರಿಗಳವರಿಂದ ಭಗವದ್ಗೀತೆಯ ಹಿರಿಮೆ ಎಂಬ ವಿಷಯವಾಗಿ ಉಪನ್ಯಾಸವೂ ನಡೆಯುವುವು

ವಿದ್ಯುಚ್ಛಕ್ತಿ ನೌಕರರ ಬಗ್ಗೆ ಶೀಘ್ರದಲ್ಲೇ ನಿರ್ಧಾರ

ಸಂಸ್ಥಾನದ ವಿದ್ಯುಚ್ಛಕ್ತಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರದವರು ಶೀಘ್ರದಲ್ಲೇ ನಿರ್ಧಾರವನ್ನು ತೆಗೆದುಕೊಳ್ಳುವರೆಂದು ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿರುತ್ತಾರೆ

ಜಪಾನಿನಲ್ಲಿ ಬಿರುಗಾಳಿಯಿಂದ ೭೮ ಜನರ ಮರಣ

ಪೂರ್ವ ಜಪಾನಿನ ತೀರದಲ್ಲಿ ಕಳೆದ ಎರಡು ದಿನಗಳಲ್ಲಿ ಭಾರಿ ಬಿರುಗಾಳಿ ಮಳೆಯಿಂದ [illegible] ಮಂದಿ ನಾವಿಕರು ಮೃತಪಟ್ಟಿರುವರೆಂದು ವರದಿಯಾಗಿದೆ [illegible] ಹಡಗುಗಳು [illegible] ಮುಳುಗಿವೆ [illegible] ಹಡಗುಗಳನ್ನು ರಕ್ಷಿಸಲಾಗಿದೆ ಇನ್ನು ನಾಲ್ಕು ಪತ್ತೆಯಿಲ್ಲ [illegible] ಜನ ನಾವಿಕರನ್ನು ರಕ್ಷಿಸಲಾಗಿದೆ

೬೭ ಜನ ಅಂತರ ಸಂಸ್ಥಾನ ಡಕಾಯಿತರ ಮೇಲೆ ಮೊಕದ್ದಮೆ

ಮದ್ರಾಸ್ ಪ್ರಾಂತದ ಜಿಲ್ಲಾವರಿಷ್ಠನ ವಿಶೇಷ ಪ್ರಥಮ ನ್ಯಾಯಾಧಿಕಾರಿ ಕೋರ್ಟಿನಲ್ಲಿ ಅಂತರ ಸಂಸ್ಥಾನ ಡಕಾಯಿತಿಗಳನ್ನು ನಡೆಸಿದರೆಂದು [illegible] ಜನರ ಮೇಲೆ ಮೊಕದ್ದಮೆಯನ್ನು [illegible] ಮದ್ರಾಸ್ [illegible] ಮೈ[illegible] ಪ್ರದೇಶ ಮತ್ತು [illegible] ಪ್ರಾಂತಗಳಲ್ಲಿ [illegible]ಗಳನ್ನು ನಡೆಸಿದ್ದರೆಂದು [illegible] ೧೦೦ [illegible] ಈ [illegible] ಮತ್ತು [illegible]ಗಳನ್ನು ಆಪಾದಿಸಿ [illegible] ನಗಗಳನ್ನು ವಶಪಡಿಸಿಕೊಳ್ಳಲಾಗಿದೆ ಭಾರತದ ಇತ್ತೀಚಿನ ಇತಿಹಾಸದಲ್ಲೇ ಇದೊಂದು ಅತ್ಯಂತ ಭಾರಿ [illegible] ಈ ಮೊಕದ್ದಮೆಯಲ್ಲಿ [illegible] ಸಾಕ್ಷಿಗಳನ್ನು ವಿಚಾರಿಸಲಾಗುವುದು

ಶೃಂಗೇರಿ ಸ್ವಾಮಿಗಳವರ ದಕ್ಷಿಣ ಭಾರತ ಯಾತ್ರೆ

ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರು ಬರುವ ಫಾಲ್ಗುಣ ಮಾಸದಲ್ಲಿ ದಕ್ಷಿಣ ದೇಶದ ಯಾತ್ರೆಯನ್ನು ಕೈಗೊಳ್ಳುವರೆಂದು ಗೊತ್ತಾಗಿದೆ ಅವರಿಗೆ ಮುಂಚೆ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಸಮಾಧಿ ಪೂಜೆ ಕುಂಭಾಭಿಷೇಕೋತ್ಸವವನ್ನು ಅವರು ಪೂರೈಸುವರು

ವಾರ್ಷಿಕ ಯಲ್ಲಿ ವಿಶ್ವವಿದ್ಯಾಲಯ ಪರೀಕ್ಷೆಗಳು

೧೯೫೬ನೇ ಸಾಲಿನ ವಿಶ್ವವಿದ್ಯಾಲಯದ ಪರೀಕ್ಷೆಗಳು ಬರುವ ಮಾರ್ಚ್ ೧ ರಿಂದ ಆರಂಭವಾಗುವುವೆಂದು ತಿಳಿದುಬಂದಿದೆ ವಿದ್ಯಾಭ್ಯಾಸ ಸುಧಾರಣೆಗಳಿಗೆ [illegible] ಮೂರು ವರ್ಷಗಳನ್ನು [illegible] ನಡೆಯಬೇಕಾದ ಕ್ರಮಕ್ರಮವಾಗಿ ಪರೀಕ್ಷೆಗಳನ್ನು ಹಿಂದಿನ ತಿಂಗಳುಗಳಿಗೆ ಹಾಕುವುದಕ್ಕೆ ಏರ್ಪಾಡಾಗಿರುವುದಾಗಿ ಗೊತ್ತಾಗಿದೆ

ವಿದ್ಯುಚ್ಛಕ್ತಿ ಸ್ಟೌವಿನಲ್ಲಿ ರೇಡಿಯೋ ಶ್ರವಣ

ಬರ್ಲಿನ್ನಿನ ಒಬ್ಬರ ಮನೆಯಲ್ಲಿರುವ ಅಡಿಗೆ ನಾಳದವರು ವಿದ್ಯುಚ್ಛಕ್ತಿ ಸ್ಟೌವಿನಲ್ಲಿ ರೇಡಿಯೋ ಪ್ರಸಾರವೂ ಸದಾ ಕೇಳಬರುತ್ತಿದೆ ಮನೆಯ ಹೆಂಗಸು ಅಡಿಗೆ ಮಾಡುತ್ತಿರುವಾಗಲೇ ಪ್ರಸಾರವನ್ನೂ ಸದಾ ಕೇಳಬಹುದು ರೇಡಿಯೋ ಪ್ರಸಾರದ ಪ್ರಸಂಗಕ್ಕೆ ವಿಚಿತ್ರ ಸಾಧನಗಳ [illegible] ಎರಡನೆಯದು

ಗೋವಾ ಬಗ್ಗೆ ಡಲ್ಲೆಸ್-ಕುನ್ಹಾ ಹೇಳಿಕೆಯ ಖಂಡನೆ

ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರ ಭಾಷಣ

ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಗೃಹ ಮಂತ್ರಿ ಪಂಡಿತ ಪಂತರು ನೆನ್ನೆ ಭಾಷಣ ಮಾಡಿ, ಗೋವಾವನ್ನು ಪೋರ್ಚುಗಲ್ಲಿನ ಒಂದು ಪ್ರಾಂತವೆಂದು ಕರೆಯುವುದು ಅಸಂಬದ್ಧವೆಂದೂ, ಹಾಗೆ ಹೇಳುವವರಿಗೆ ನಿಜಸ್ಥಿತಿಯ ಬಗ್ಗೆ ಪೂರ್ಣ ಜ್ಞಾನವಿರುವುದಿಲ್ಲವೆಂದೂ, ದ್ವೇಷವು ಇರುವುದೆಂದೂ ಸೂಚಿಸಿದರು ಗೋವಾವು ಭಾರತದ ಒಳಗಿನ ಭಾಗವೆಂದೂ, ಸಣ್ಣ ಸಣ್ಣ ವಸಾಹತುಗಳಿಂದ ವಿದೇಶೀ ಆಳ್ವಿಕೆಯನ್ನು ನಿರ್ಮೂಲಗೊಳಿಸಿದ್ದರೆ ಭಾರತದ ಸ್ವಾತಂತ್ರ್ಯವು ಪೂರ್ಣವಾಗುವುದಿಲ್ಲವೆಂದೂ ಅವರು ಹೇಳಿ, ಪಾಶ್ಚಿಮಾತ್ಯರು ಸ್ವಲ್ಪಮಟ್ಟಿಗೆ ಅರಿಯುವ [illegible] ಸರ್ವಾಧಿಕಾರಿ ಆಳ್ವಿಕೆಯ ಕೈ ಕೆಳಗೆ ಗೋವಾವು ಇನ್ನೂ ತೊಳಲುತ್ತಿರುವುದಾಗಿ ತಿಳಿಸಿದರು

ದೆಹಲಿಯಲ್ಲಿ ಮುಖ್ಯ ಮಂತ್ರಿಗಳ ಸಮ್ಮೇಳನ

[illegible] ತಿಂಗಳು ೬ ಮತ್ತು ೭ ರಂದು ದೆಹಲಿಯಲ್ಲಿ ಸಂಸ್ಥಾನಗಳ ಮುಖ್ಯಮಂತ್ರಿಗಳ ಸಮ್ಮೇಳನವು ನಡೆಯುವುದು ಪುನರ್ವಿಂಗಡಣಾ ಸಮಿತಿಯ ವರದಿ ಬಗ್ಗೆ [illegible]ನೇ ತಾರೀಖು ಅಖೈರು ನಿರ್ಧಾರವಾಗುವುದೆಂದೂ, ನಂತರ ಮಸೂದೆಯ ಕರಡನ್ನು ಸಿದ್ಧಗೊಳಿಸಲಾಗುವುದೆಂದೂ ಗೊತ್ತಾಗಿದೆ

ಗೀತಾ ಜಯಂತಿ ಸಪ್ತಾಹದ ಪರಿಷತ್ತು ಮತ್ತು ಉಪನ್ಯಾಸ

ಅರಸೀಕೆರೆ ರಸ್ತೆಯಲ್ಲಿರುವ ಗೀತಾ ಪ್ರಚಾರಿಣಿ ಸಭೆಯಲ್ಲಿ ಜಯಂತಿ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಬೆಂಗಳೂರಿನ ಸ್ವಾಮಿ ಹರಿಹರಾನಂದ ಭಾರತಿಯವರಿಂದ ರುಕ್ಮಿಣಿ ಕಲ್ಯಾಣವೆಂಬ ಹರಿಕಥೆಯೂ ನಾಳಿದ್ದು ಸಂಜೆ ೬ ಗಂಟೆಗೆ ಸ್ವಾಮಿ ಶಂಕರಾನಂದ ಭಾರತಿಯವರಿಂದ ಸನ್ಯಾಸ ಯಾವಾಗ ಮುಗಿಯುತ್ತೆ" ಎಂಬ ವಿಷಯವಾಗಿ ಉಪನ್ಯಾಸವೂ ನಡೆಯುವುವು

ಪೇಜಾವರ ಸ್ವಾಮಿಗಳವರ ಪ್ರವಾಸ

ಉಡುಪಿ ಶ್ರೀ ಪೇಜಾವರ ಮಠದ ಸ್ವಾಮಿಗಳಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಕೊಯಮುತ್ತೂರಿಗೆ ತೆರಳಿ, ಅಲ್ಲಿ ಬರುವ ಏಪ್ರಿಲ್ ತಿಂಗಳಲ್ಲಿ ಅಖಿಲ ಭಾರತ ಮಾಧ್ವ ಮಹಾ ಮಂಡಲದ ಸಮ್ಮೇಳನವು ನಡೆಯಲು ವ್ಯವಸ್ಥೆ ಮಾಡಿ ನೆನ್ನೆ ಸಂಜೆ ರಾಜಧಾನಿಗೆ ಬಂದಿರುಗಿದರು ಈ ದಿನ ಬೆಳಗ್ಗೆ ಅವರು ಶ್ರೀ ಕೆ ಗೋಪಾಲಾಚಾರ್ಯರ ಗೋವಿಂದ ಧರ್ಮಾಲಯದಲ್ಲಿ ಭಿಕ್ಷೆ ಮತ್ತು ಪಾದ ಪೂಜೆಯನ್ನು ಸ್ವೀಕರಿಸಿ ಉಡುಪಿ ಮಾರ್ಗವಾಗಿ ಪ್ರಯಾಣ ಬೆಳೆಸಿದರು

ಕರ್ನಾಟಕದಲ್ಲಿ ಸ್ತ್ರೀಯರಿಗಾಗಿ ವಿಶ್ವವಿದ್ಯಾಲಯ ಬೇಕು

ರಾಯಚೂರು ಗೋಷ್ಠಿಯಲ್ಲಿ ಕರೆ

ರಾಯಚೂರಿನಲ್ಲಿ ಸೇರಿದ್ದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾದ ಮಹಿಳಾ ಗೋಷ್ಠಿಯಲ್ಲಿ ಅಧ್ಯಕ್ಷೆಯಾಗಿದ್ದ ಶ್ರೀಮತಿ ಪುಟ್ಟಮ್ಮ ಪಾಟೀಲರು ಭಾಷಣ ಮಾಡಿ, ಮೊಂಬಾಯಿಯಲ್ಲಿರುವಂತೆ ಕರ್ನಾಟಕದಲ್ಲೂ ಸ್ತ್ರೀಯರಿಗಾಗಿ ಒಂದು ವಿಶ್ವವಿದ್ಯಾಲಯವನ್ನು ಏರ್ಪಡಿಸುವುದು ಅಗತ್ಯವೆಂದು ಸೂಚಿಸಿರುತ್ತಾರೆ ಕರ್ನಾಟಕದಲ್ಲಿ ಈಗಿರುವ ಎರಡು ವಿಶ್ವವಿದ್ಯಾಲಯಗಳನ್ನು ನಡೆಸಿಕೊಂಡುಬರುವುದೇ ಸ್ವಲ್ಪ ಕಷ್ಟಕರವಾಗಿ ಕಂಡುಬಂದರೂ, ಒಳ್ಳೆಯ ಧ್ಯೇಯವಿರುವ ಸಂಸ್ಥೆಗಳಿಗೆ ಸಂಪತ್ತನ್ನು ಒದಗಿಸುವುದು ಅಸಾಧ್ಯವಲ್ಲವೆಂದು ತಿಳಿಸಿರುವರು

ಗೋವಾ ಶಾಸನ ಸಭೆ ಅಧಿವೇಶನ ಹಠಾತ್ತನೆ ಮುಂದಕ್ಕೆ

ಕಳೆದ ವಾರ ಸೇರಿದ ಗೋವಾ ಶಾಸನ ಸಭೆಯಲ್ಲಿ ಅಮೋಂಡು ಪ್ರಬಾರೆಸ್ ಡಿಕಾಸ್ಟ್ರೋರವರು ನಿರ್ಣಯವೊಂದನ್ನು ಮಂಡಿಸಿ, ಗೌರ್ನರ್ ಜನರಲ್ಲರ ಕಛೇರಿಯವರು ಸಿದ್ಧಗೊಳಿಸಿದ ಆಯವ್ಯಯ ಪಟ್ಟಿಯನ್ನು ಬದಲಾಯಿಸಲು ಸಭೆಗೆ ಹಕ್ಕಿರಬೇಕೆಂದು ಸೂಚಿಸಿದಸಂಬಂಧವಾಗಿ ಸಭೆಯನ್ನು ಹಠಾತ್ತಾಗಿ ಮುಂದೆ ಹಾಕಲಾಯಿತು ಗೋವಾ ಗೌರ್ನರ್ ಜನರಲ್ಲರು ಅಧ್ಯಕ್ಷತೆ ವಹಿಸಿದ್ದರು ಡಿಕಾಸ್ಟ್ರೋರವರ ಮನಸ್ಸನ್ನು ತಿರುಗಿಸಲು ಗೌರ್ನರ್ ಜನರಲ್ಲರು ಪ್ರಯತ್ನಿಸಿ ವಿಫಲರಾದರು ಮತ್ತೊಬ್ಬ ಸದಸ್ಯರು ಭಾಷಣ ಮಾಡಿ ಪೋರ್ತುಗೀಸರನ್ನು ಟೀಕಿಸುತ್ತಾ, ಗೋವಾ ಪ್ರಜೆಗಳ ಸ್ಥಿತಿಯು ಅತ್ಯಂತ ಶೋಚನೀಯವಾಗಿರುವುದೆಂದೂ ತಿಳಿಸಿದರು

ವಿದ್ಯಾರ್ಥಿಗಳಿಗೆ ಪಶುಪಾಲನಾ ಶಿಕ್ಷಣ

ವಿದ್ಯಾಧಿಕಾರಿಗಳ ಸೂಚನೆ

ತಿಪ್ಪಸಂದ್ರದಲ್ಲಿ ಕಳೆದ ವಾರ ಹಸುಗಳ ಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭವನ್ನು ನೆರವೇರಿಸುತ್ತ, ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಎಚ್ ಎಸ್ ಹಿರಣ್ಣಯ್ಯನವರು ಭಾಷಣ ಮಾಡಿ ಅಮೆರಿಕದಲ್ಲಿರುವಂತೆ ಪಶುಪಾಲನೆ ಮತ್ತು ವ್ಯವಸಾಯ ಅಭಿವೃದ್ಧಿಗಾಗಿ ಸಂಸ್ಥಾನದ ಪ್ರೌಢಶಾಲೆಗಳಲ್ಲಿ ಶಿಕ್ಷಣ ಪದ್ಧತಿಯನ್ನು ಏರ್ಪಡಿಸುವ ವಿಷಯವು ಇಲಾಖೆಯವರ ಪರಿಶೀಲನೆಯಲ್ಲಿರುವುದಾಗಿ ತಿಳಿಸಿರುತ್ತಾರೆ ಉತ್ತಮ ತಳಿಯ ಹಸುಗಳನ್ನು ಹೊಂದಲು ಪ್ರತಿ ವರ್ಷವೂ ಸ್ಪರ್ಧೆಗಳನ್ನು ಏರ್ಪಡಿಸಲ ಗುವುದೆಂದೂ, ಇದರಿಂದ ಗ್ರಾಮಾಂತರ ಜನರಿಗೆ ಉಪಯೋಗವಾಗುವುದಲ್ಲದೆ, ವಿದ್ಯಾರ್ಥಿಗಳಿಗೆ ಉತ್ತರೋತ್ತರ ಉತ್ತಮ ತರಬೇತು ದೊರೆಯುವುದೆಂದೂ ಅವರು ಹೇಳಿರುವರು

ಹುಬ್ಬಳ್ಳಿಯಲ್ಲಿ ಮೈಸೂರಿನ ಪತ್ರಿಕೋದ್ಯಮ ವಿದ್ಯಾರ್ಥಿಗಳು

ಶೈಕ್ಷಣಿಕ ಪ್ರವಾಸ ಕೈಗೊಂಡಿರುವ ಮೈಸೂರು ವಿದ್ಯಾರ್ಥಿಗಳು ಕಳೆದ ಶುಕ್ರವಾರ ಹುಬ್ಬಳ್ಳಿಯನ್ನು ತಲಪಿದರು ಅವರು ಅಲ್ಲಿನ ಪ್ರಮುಖ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ವಿಶಾಲ ಕರ್ನಾಟಕ, ಪ್ರಪಂಚ ಪತ್ರಿಕೆಗಳ ಕಾರ್ಯಾಲಯಗಳಿಗೆ ಭೇಟಿಯಿತ್ತರು ಸಂಯುಕ್ತ ಕರ್ನಾಟಕ ಪತ್ರಿಕೆಯವರು ಅವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಸಂಪಾದಕ ಶ್ರೀ ಮೊಹರೆ ಹನುಮಂತರಾಯರೊಡನೆ ವಿದ್ಯಾರ್ಥಿಗಳು ವಿಚಾರವಿನಿಮಯ ಮಾಡಿದರು ಪ್ರಪಂಚ ಪತ್ರಿಕೆಯ ಶ್ರೀ ಪಾಟೀಲ ಪುಟ್ಟಪ್ಪನವರೂ ಸಹ ವಿದ್ಯಾರ್ಥಿಗಳನ್ನು ಸತ್ಕರಿಸಿದರು ಧಾರವಾಡಕ್ಕೆ ಅವರು ತೆರಳಿ, ಅಲ್ಲಿ ವಿಶ್ವವಿದ್ಯಾಲಯದ ಪುಸ್ತಕ ಭಂಡಾರ ಮತ್ತು ಕರ್ನಾಟಕ ಕಾಲೇಜನ್ನು ನೋಡಿ ವೈಸ್ ಛಾನ್ಸಲರ್ ಮತ್ತು ಪ್ರೊಫೆಸರ್ ವಿ ಕೆ ಗೋಕಾಕ್‌ರವರ ಭೇಟಿ ಪಡೆದು, ಮಾರನೇ ದಿನ ಪುಣೆಗೆ ತೆರಳಿದರು

Edited, Printed and Published by A R Nagarajan at Sadhvi Press, D Subbiah Road, Mysore

ಪಾಕಿಸ್ತಾನದಿಂದ ಹಿಂದೂಸ್ತಾನದ ದೈವ ನಿಲ್ದಾಣಗಳ ನಾಶ

ಪಶ್ಚಿಮ ಪಾಕಿಸ್ತಾನದ ರಾಷ್ಟ್ರೀಯ ವಾದಿಗಳು ಅನೇಕ ಘಾತಕಗಳನ್ನು ನಡೆಸಿ ಪಾಕಿಸ್ತಾನದ ಪೊಲೀಸು ಠಾಣೆಗಳು ಮತ್ತು ರೈಲ್ವೆ ನಿಲ್ದಾಣಗಳನ್ನು ನಾಶಪಡಿಸಿರುವುದಾಗಿಯೂ ಒಂದು ನಿಲ್ದಾಣಕ್ಕೆ ಬೆಂಕಿ ಹತ್ತಿಸಲಾಯಿತೆಂದೂ, ಪಸ್ನಿ ಎಂಬಲ್ಲಿ ಟೆಲಿಫೋನು ಲೈನನ್ನು ಕತ್ತರಿಸಿ, ನಾಷ್ಕಿಯಲ್ಲಿ ಸರ್ಕಾರಿ ಕಛೇರಿ ಮೇಲೆ ಧಾಳಿ ಮಾಡಲಾಗಿರುವುದೆಂದೂ ವರದಿಯಾಗಿದೆ ಶೀರಾ ಪ್ರದೇಶದ ವಾದಿಗಳು ಗಡಿ ಪೊಲೀಸು ಠಾಣೆ ಮೇಲೆ ಧಾಳಿ ಮಾಡಿದರು ಅಸ್ತಕೋಟ್ ಎಂಬಲ್ಲಿ ಸೇತುವೆಯನ್ನು ನಾಶಪಡಿಸಲಾಗಿದೆ ಪಾಕಿಸ್ತಾನದ ಬಿಲೂಚಿಸ್ತಾನ ಪ್ರದೇಶದ ಬಾಯುಕ್ತಿರುವ ಖಾನ್ ಗುಲ್ ರಾಗಾಯ ಮೇಲೆ ಮಹಮ್ಮದ್ ಗುಡ್ಡಗಾಡಿನವರು ಧಾಳಿ ಮಾಡಿದರು ಪೊಲೀಂಗ್ ಬಳಿ ರೈಲು ಹಳಿಗೆ ಬೆಂಕಿ ಹತ್ತಿಸಲಾಗಿದೆ ಮಷೀನ್ ಇಟ್ಟಿದ್ದ ಜಾಗಗಳನ್ನು ನಾಶಪಡಿಸಲಾಗಿದೆ ಪುಷ್ತೂನಿಸ್ತಾನದಲ್ಲಿ ಪಾಕಿಸ್ತಾನದ ಸೈನ್ಯದ ಅಧಿಕಾರಿ ಕ್ಯಾಪ್ಟನ್ ಹಿದಾ ಮಹಮದ್ ಎಂಬಾತನಿಗೆ ಗುಂಡಿನೇಟಿನಿಂದ ಗಾಯಗೊಳಿಸಲಾಗಿದೆ

ಹನುಮಜ್ಜಯಂತಿ ಸಂಗೀತ

ಗಾಲಿ ಬೀದಿ ಶ್ರೀಪತಿ ಅಪ್ಪಸ್ವಾಮಿರವರ ಶ್ರೀ ಮಾರುತಿ ಮಂದಿರದಲ್ಲಿ ಹನುಮಜ್ಜಯಂತಿ ಅಂಗವಾಗಿ ನಾಳೆ ಮಧ್ಯಾಹ್ನ ... ಗಂಟೆಗೆ ಮೈಸೂರು ಸಹೋದರರ ... ಗಾಯನ ... ಗಂಟೆಗೆ ವಿದ್ವಾನ್ ... ವೀಣಾ ಕಚೇರಿ ನಡೆಯುವುವು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಕನ್ನಡ ಗೀತೆಗಳು ... ಸಂಗೀತ ... ಮಧ್ಯಾಹ್ನ ... ಎಂ ಎಸ್ ... ಸಂಗೀತ ... ಸಂಜೆ ... ಸಂಗೀತ ... ಎಂ ಎಸ್ ಲಕ್ಷ್ಮಣ ಸಿಂಹಾಚಾರ್ ಸಂಗೀತ ... ಗೀತೆ ... ಕನ್ನಡ ಕವನ ವಾಚನ ... ಸಂಗೀತೋತ್ಸವ-ಮದ್ರಾಸ್ ರಿಲೆ ... ಕನ್ನಡ ಗೀತೆಗಳು ... ಸಂಗೀತೋತ್ಸವ-ಮದ್ರಾಸ್ ರಿಲೆ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಪ್ರಿನ್ಸಿಪಾಲರ ಕಛೇರಿ, ಮೈಸೂರು, ತಾ 22 1 -1955

ಟೆಂಡರ್ ನೋಟಿಫಿಕೇಷನ್

1956ನೇ ಇಸವಿಯಲ್ಲಿ (1956 ನೇ ಜನವರಿ 1 ನೇ ತಾರೀಖಿನಿಂದ 1956ರ ಡಿಸೆಂಬರ್ 31 ನೇ ತಾರೀಖುವರೆಗೆ, ಎರಡು ದಿನಗಳೂ ಸೇರಿ) ಈ ಶಾಲೆಗೆ ಬೇಕಾಗುವ ಗಿಡ ಮೂಲಿಕೆಗಳು ಮತ್ತು ಔಷಧಿಗಳ ಸರಬರಾಜಿಗಾಗಿ ಅರ್ಹರಾದವರಿಂದ ಪ್ರೊಫಾರ್ಮದಲ್ಲಿ ನಾಲ್ಕು ಪ್ರತಿಗಳುಳ್ಳ ಮೊಹರಾದ ಟೆಂಡರುಗಳನ್ನು ಕೆಳಗೆ ರುಜು ಮಾಡಿರುವವರು ತಮ್ಮ ಕಛೇರಿಯಲ್ಲಿ 1956 ನೇ ಜನವರಿ 15 ನೇ ತಾರೀಖು ಬುಧವಾರ ಬೆಳಗ್ಗೆ 10-30 ಗಂಟೆಗೆ ಸ್ವೀಕರಿಸುವರೆಂದು ಈ ಮೂಲಕ ತಿಳಿಯಪಡಿಸಲಾಗಿದೆ

ಮೇಲೆ ಕೊಟ್ಟಿರುವ ವಿವರಗಳನ್ನು ಟೆಂಡರಿನ ಮೇಲೆ ಬರೆದಿರಬೇಕು

ಟೆಂಡರಿನ ಒಟ್ಟು ಮೊತ್ತದ ಮುಂದಿನ ನೂರು ರೂಪಾಯಿಗಳಿಗೆ ಶೇಕಡ 5 ರಷ್ಟು ಹಣವನ್ನು ಡಿಪಾಜಿಟ್ ಮಾಡಿದ ಬಗ್ಗೆ ಟ್ರೆಜರಿ ಚಲನ್ ಲಗತ್ತಿಸದೆ ಮತ್ತು ವಿವರವಾದ ಟೆಂಡರು ಪ್ರಕಟಣೆಯ ಪತ್ರಿಯನ್ನು ಇತರ ಸರ್ಟಿಫಿಕೇಟುಗಳನ್ನು ಒಳಗೊಳ್ಳದೆ ಬರುವ ಯಾವ ಟೆಂಡರನ್ನೂ ಪರಿಶೀಲಿಸುವುದಿಲ್ಲ ಟೆಂಡರಿನ ಪ್ರಕಟಣೆಯನ್ನು ಕೆಳಗೆ ರುಜು ಮಾಡಿರುವವರ ಕಛೇರಿಯಲ್ಲಿ ಇದೇ 29-12-1955 ರಿಂದ 17-1-1956 ರವರೆಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು

ಸಿ ದ್ವಾರಕಾನಾಥ್, ಪ್ರಿನ್ಸಿಪಾಲ್, ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಮತ್ತು ಆಸ್ಪತ್ರೆ ಮೈಸೂರು

ಗಾಂಧಿಜಿಯವರ ವಿಗ್ರಹ ಸ್ಥಾಪನೆ ಬಗ್ಗೆ ಮದ್ರಾಸ್ ಸರ್ಕಾರದ ಸೂಚನೆ

ಗಾಂಧಿಜಿಯವರ ಪ್ರತಿಮೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿಸುವುದಕ್ಕೆ ಮೊದಲು ಆಯಾ ಜಿಲ್ಲಾಧಿಕಾರಿಗಳ ಅನುಮತಿ ಪಡೆದಿರಬೇಕೆಂದು ಮದ್ರಾಸ್ ಸರ್ಕಾರದವರು ಸೂಚಿಸಿರುತ್ತಾರೆ ಈಗ ಪ್ರತಿಷ್ಠಿಸಲಾಗಿರುವ ಹಲವಾರು ವಿಗ್ರಹಗಳು ಗಾಂಧಿಜಿಯವರನ್ನು ಹೋಲದಿರುವುದೇ ಇದಕ್ಕೆ ಕಾರಣ ಅನಾವರಣವಾಗಬೇಕಾದ ಮೂರ್ತಿಗಳನ್ನು ಜಿಲ್ಲಾ ಕಲೆಕ್ಟರುಗಳು ಚೆನ್ನಾಗಿ ಪರಿಶೀಲಿಸುವಂತೆ ಸೂಚಿಸಲಾಗಿದೆ

ಅರಬ್ಬಿ ಭಾಷೆಯಲ್ಲಿ ಭಾರತದ ಪವಿತ್ರ ಗ್ರಂಥಗಳು

ಮಧ್ಯ ಪೂರ್ವ ನಾಡುಗಳಿಗೆ ಒದಗಿಸುವ ಸಲುವಾಗಿ ರಾಮಾಯಣ ಮತ್ತು ಮಹಾಭಾರತ ಗ್ರಂಥಗಳನ್ನು ಅರಬ್ಬಿ ಭಾಷೆಗೆ ತರ್ಜುಮೆ ಮಾಡಲು ಏರ್ಪಾಡಾಗಿರುತ್ತದೆ ಈಗಾಗಲೇ ಒಬ್ಬ ಭಾರತೀಯ ವಿದ್ವಾಂಸರು ಮಹಾಭಾರತವನ್ನು ಭಾಷಾಂತರಿಸುತ್ತಾರೆ ಅದರ ಪ್ರತಿಯನ್ನು ಈಜಿಪ್ಟ್ ಸರ್ಕಾರಕ್ಕೆ ಭಾರತದ ರಾಯಭಾರಿಯು ಒಪ್ಪಿಸಲಿರುವರು ರಾಮಾಯಣ, ಭಗವದ್ಗೀತೆ ಮುಂತಾದುವುಗಳ ತರ್ಜುಮೆಯೂ ಆಗುತ್ತಿದೆ ಇದಾದ ಬಳಿಕ ಅರಬ್ಬಿ ಗ್ರಂಥಗಳನ್ನೂ ಭಾರತೀಯ ಭಾಷೆಗಳಿಗೆ ಅನುವಾದಿಸಲಾಗುವುದು

ನೂತನ ವರ್ಷದ ಶುಭಾಶಯ

ರಾಜಧಾನಿಯ ಪ್ರತಿಷ್ಠಿತ ಸಂಸ್ಥೆಯಲ್ಲಿರುವ ಶ್ರೀ ಗಾಯತ್ರಿ ರೇಡಿಯೋ ಕಾರ್ಪೋರೇಷನ್ನಿನ ಶ್ರೀ ಎಸ್. ವಿ ಪಂಡಿತ್ ಅವರು ಮತ್ತು ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಎಂ ಸಿದ್ದಲಿಂಗಪ್ಪನವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ

ಕೃತಜ್ಞತಾ ಸೂಚನೆ

ತಮ್ಮ ಪತ್ನೀ ವಿಯೋಗದ ಸಂದರ್ಭದಲ್ಲಿ ಸಂತಾಪ ಸೂಚಿಸಿದವರೆಲ್ಲರಿಗೂ ಪಂಡಿತ ಪಿ ಚೆಚ್. ಚಂದ್ರಭಾನುಸಿಂಗರು ಈ ಮೂಲಕ ಕೃತಜ್ಞತೆಯನ್ನು ಸೂಚಿಸುತ್ತಾರೆ

SREE GAYATHRI TALKIES
LAST DAY
THE ROBE

From 30-12-1955
THE DARK AVENGER
Starring Errol Flynn & Joan Dru

MORNING SHOWS
On Saturday & Sunday
SPANISH MAIN
(No concessions for this show)

ನಮಗೂ ಯಾರೆಂಬುದನ್ನು ತಿಳಿಯದ ಜನ

ಒರಿಸ್ಸಾ ಪ್ರಾಂತದ ಥೋಟಾ ... ವಾಸವಾಗಿರುವ ಜನರಿಗೆ ಪ್ರಧಾನಿ ನೆಹರೂ, ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ... ಮೂ, ಬ್ರಿಟಿಷರು ಭಾರತವನ್ನು ಏಕೆ ಬಿಟ್ಟರೆಂಬುದೂ ಗೊತ್ತಿಲ್ಲವೆಂದು ಆಚಾರ್ಯ ... ನಿಯವರು ತಿಳಿಸಿರುತ್ತಾರೆ ... ಆ ಪ್ರದೇಶದಲ್ಲಿ ಭೂದಾನ ಯಾತ್ರೆ ... ಗೆ ಮೇಲ್ಕಂಡ ಸಂಗತಿಯು ಅವರಿಗೆ ... ಯಿತು ಈ ವಿಷಯವನ್ನು ಅವರು ... ಮಾಜವಾದಿಗಳ ಸಮ್ಮೇಳನದಲ್ಲಿ ... ಭಾರತದಲ್ಲಿ ಸಾಮೂಹಿಕ ಅವಿದ್ಯೆ ... ಪ್ರತಿಯೊಬ್ಬರಿಗೂ ಮತದಾನದ ಹಕ್ಕು ... ದು ಆಶ್ಚರ್ಯಕರವೆಂದು ಹೇಳಿರುವರು

ಹಸುಗೋಗೆ ಯಲ್ಲಿ ಮಾಧ್ವ ಮಹಾಮಂಡಲದ ಶಾಖೆ

ಕೃಷ್ಣರಾಜನಗರ ತಾಲ್ಲೂಕು ಹಸುಗೋಗೆಯಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲದ ಶಾಖೆಯೊಂದನ್ನು ಸ್ಥಾಪಿಸಲಾಗಿದೆ ... ನಾಡಿಗಾರ್ ಶ್ರೀ ಜಿ ಕೃಷ್ಣಪ್ಪನವರು ... ಗಿಯೂ, ಶ್ರೀ ಹೆಚ್ ಎಸ್ ಸೀತಾರಾಮ... ಯ್ಯರು ಖಜಾಂಚಿ ಮತ್ತು ಕಾರ್ಯದರ್ಶಿಯೂ ಆರಿಸಲ್ಪಟ್ಟಿರುತ್ತಾರೆ

ಮೈಸೂರು ಪೇಟೆ ಧಾರಣೆ

	ರೂ	ಆಣೆ	[illegible]
ಕಡಲೆಕಾಯಿ	೧೧	೪ ೦	[illegible]
ಹರಳುಬೀಜ	೨೭	೪ ೦	
ಹುಚ್ಚೆಳ್ಳು	೪೫	೦ ೦	[illegible]
ಹುರುಳಿ	೨೩	೪ ೦	[illegible]
ಹೆಸರು	೪೧	೮ ೦	[illegible]
ಹಲಸಂದೆ	೪೬	೦ ೦	[illegible]
ತೊಗರಿ	೨೬	೦ ೦	[illegible]
ಕೊಬ್ಬರಿಬೀಜ	೪೦	೦ ೦	[illegible]
ಧನಿಯ	೪೫	೩ ೦	[illegible]
ಹುಣಸೇಹಣ್ಣು	೪	೫ ೦	[illegible]
ಮೆಣಸಿನಕಾಯಿ	೫	೧೦ ೦	[illegible]
ಹತ್ತಿ (೨೮ ಪೌಂಡು)	೧೦	೫ ೦	

ಜನ ಸೇವೆಯೇ ಜನಾರ್ದನ ಸೇವೆ!
MODERN DAIRY FA[RM]
ಕ್ಷೀರ ಕ್ಷೇತ್ರ
(ರಾಘವೇಂದ್ರಸ್ವಾಮಿಗಳ ಮಠದ ...)
139 ನಾರಾಯಣಶಾಸ್ತ್ರಿ ರೋಡ್ ಮೈಸೂರು

ಮೈಸೂರಿನ ಜನರಿಗೆ ಅಪ್ಪಟ ಹಸುವಿನ ... ಸ್ವಚ್ಛವಾದ ಹಾಲು ಮತ್ತು ... ಮೊಸರು ಮತ್ತು ಬೆಣ್ಣೆ ಬೇಕಾದರೆ ... ಸ್ಥಳಕ್ಕೆ ಭೇಟಿ ಕೊಟ್ಟು ಪರೀಕ್ಷಿಸಬೇಕಾಗಿ ...
ಹಾಲು, ಮೊಸರು, ಬೆಣ್ಣೆ ಇತ್ಯಾದಿಗಳನ್ನು ... ರೆಯಾಗಿಯೂ ಮತ್ತು ಒಟ್ಟಾಗಿಯೂ, ... ಮೊದಲಾದ ದೊಡ್ಡ ದೊಡ್ಡ ಸಮಾರಂಭಗಳಿಗೆ ... ರ ಮೂಲಕ ಒದಗಿಸಲಾಗುತ್ತದೆ
ಹಾಲು ಮತ್ತು ಮೊಸರು ರೂ ...

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
30 12-55 ನೇ ಶುಕ್ರವಾರದಿಂದ ಅಮೋಘ ಪ್ರಾ[ರಂಭ]
ಸ್ಟಾರ್ ಆಡೆಲ್ ... ತೆಲುಗು ಚಿತ್ರ ★ ಜಗತಲಪ್ರತಾಪ್
ಪಾತ್ರ - ಪಿ ಯು ಚಿನ್ನಪ್ಪ, ಸರೋಜಿನಿ, ಕೃಷ್ಣನ್, ಮಧುರಂ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್, ಮೈಸೂರು
30-12-55ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟ
ನ್ಯೂ ಅಡ್ವೆಂಚರ್ಸ್ ಆಫ್ ಬ್ಯಾಟ್‌ಮನ್ ಅಂಡ್ ರಾಬಿನ್ ದಿ ವಂಡರ್ ಬಾಯ್
NEW ADVENTURES OF BATMAN & ROBIN THE WONDER BOY
ಕೊಲಂಬಿಯಾರವರ ರೋಮಾಂಚಕರ ದೃಶ್ಯಗಳಿಂದ ಕೂಡಿದ ನೂತನ ಸೀರಿಯಲ್
MORNING SHOWS On 31st & 1st January 56 For 2 Days
WINGS OF THE HAWK

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಹೆಚ್ಚು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

[illegible] ೧೪] SADHVI . FRIDAY 30-12-1955 ಮೈಸೂರು ಶುಕ್ರವಾರ : ೩೦-೧೨-೧೯೫೫ [ಸಂಚಿಕೆ : ೧೪೪

[ಬೆ]ಂಗಳೂರಿನಲ್ಲಿ ಚೀಣದ ಉಪಾಧ್ಯಕ್ಷಿಣಿ ಸೊಯಾತ್‌ಸೇ

[ಕರ್ನಾ]ಟಕ ಪ್ರಾಂತ ನಿರ್ಮಾಣಕ್ಕೆ ಸ್ವಾಗತ

ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ

[illegible]ಚೂರಿನಲ್ಲಿ ಸೇರಿದ್ದ ಕನ್ನಡ ಸಾಹಿತ್ಯ [illegible]ನದಲ್ಲಿ ಕರ್ನಾಟಕ ಪ್ರಾಂತ ರಚನೆಯಾ[illegible] ಪುನರ್ವಿಂಗಡಣಾ ಸಮಿತಿಯವ[illegible] ಶಿಫಾರಸಿಗಾಗಿ ಅಭಿನಂದನೆಯನ್ನು ಕರ್ನಾಟಕ ಪ್ರಾಂತವ ಉದಯಕ್ಕಾಗಿ [illegible]ವನ್ನು ವ್ಯಕ್ತಪಡಿಸಲಾಯಿತು ನಿರ್ಣ[illegible] ವ್ಯಾಕರಣ ತೀರ್ಥ ಚಂದ್ರಶೇಖರ ಶಾ[illegible] ಮಂಡಿಸಿ, ಶ್ರೀ ಬಿ ಶಂಕರಭಟ್ಟರು ಅನು[illegible]ದರು

[illegible]ರಿಯ ಎಲ್ಲ ತಾಲ್ಲೂಕುಗಳೂ ಕರ್ನಾ[illegible] ಉಳಿಯಬೇಕಲ್ಲದೆ ಇತರ ಕನ್ನಡ [illegible]ನೂ ನೂತನ ಕನ್ನಡ ಪ್ರಾಂತಕ್ಕೆ ಸೇರ[illegible]ಬಾರು, ಆದವಾನಿ ಮತ್ತು ರಾಯದು[illegible] [illegible]ಗಳು ಬರಬೇಕು

[illegible]ದಲ್ಲಿ ತೈಸೂಪ್ಯಪಿಸ ತಯಾರಿಕೆಗಾಗಿ [illegible]ರಣೆ ಮಾಗಬೇಕು, ಕನ್ನಡ ಪ್ರಾಂತ[illegible]ವಾಗುವ ಗ್ರಂಥಗಳ ಪಟ್ಟಿ ಪ್ರಕಟಣೆ[illegible]ಕು, ಕರ್ನಾಟಕಕ್ಕಾಗಿಯೇ ಪ್ರತ್ಯೇಕ [illegible]ಂಶೋಧನಾ ಕೇಂದ್ರವನ್ನು ಸ್ಥಾಪಿಸ[illegible] [illegible]ವ ಸಾಧ್ಯವಿದ್ದ [illegible] ಕಾಲದಲ್ಲಿ [illegible]ವಾಗಬೇಕು—ಇವೇ ಮುಂತಾದ ನಿ[illegible]ನ್ನು ಅಂಗೀಕರಿಸಲಾಯಿತು

[illegible]ದ ಬಗ್ಗೆ ನಿರ್ಣಯವನ್ನು ಮಂಡಿಸಿದ [illegible]ರ್ಕೇಬರ ಶರ್ಮರವರು ಭಾಷಣ ಮಾ[illegible]ಗರ ಈ ಉದ್ದೇಶವು ಕೈಗೂಡದಿದ್ದಲ್ಲಿ [illegible] ನಡೆಸಬೇಕಾಗಬಹುದೆಂದು ಹೇಳಿದ[illegible] [illegible]ಳವ ಮಂಜಯ್ಯನವರು ಡಾ|| [illegible] ನಾರಾಯಣಶಾಸ್ತ್ರಿ ಮತ್ತು ಎಸ್ [illegible]ಯವರ ನಿಧನಕ್ಕಾಗಿ ಸಂತಾಪವನ್ನು [illegible]ಯಿತು

[ಮೈ]ಸೂರಿನಲ್ಲಿ ಸೈಕಲ್ ತೆರಿಗೆ [ತಿ]ಂಗಳಿಗೆ ಎಂಟಾಣೆ

[illegible]ನ ಪೌರಸಭೆಯವರು ವಿಧಿಸಿರುವ [illegible]ಗೆಯನ್ನು ವರ್ಷಕ್ಕೆ ೬ ರೂ ನಿಂದ [illegible]ಂಸುವಂತೆ ಅಲ್ಲಿನ ಆಯುಕ್ತರು [illegible]ಬರುತ್ತಾರೆ. ಸೈಕಲ್ಲು ಬಡವರ ವಾ[illegible] ಆದ್ದರಿಂದ ಬಡವರಿಗೆ ನಷ್ಟವೇ [illegible]ದಲ್ಲವೆಂದೂ ಅವರು ಸೂಚಿಸಿ, ೬ರಿಂ[illegible] ಆಣೆಯಂತೆ ಎರಡು ಕಂತುಗಳ[illegible]ನ್ನು ವಸೂಲ್ಮಾಡಬೇಕೆಂದೂ ಸಲ[illegible]ರು. ಸೈಕಲ್ ಬಳ್ಳಿಗಾಗಿ ೨ ಆಣೆ [illegible]ಕೊಳ್ಳಬೇಕೆಂದು ಸೂಚಿಸಲಾಗಿದೆ

[ಸಂ]ಧಾನ ಭಂಗ

[illegible] ಸರ್ಕಾರ ಮತ್ತು ಅಲ್ಲಿನ ಬಹಿಷ್ಕೃತ [illegible] ಮುಖಂಡ ಡೆಂಗ್ ಡೆಂಗ್‌ರವ[illegible]ಗೆ ನಡೆಯುತ್ತಿದ್ದ ಮಾತುಕತೆ [illegible]ವಾಗದೇ ಭಂಗವಾದುವು ಕಮ್ಯು[illegible]ಂದರು ತಮ್ಮ ಪಕ್ಷಕ್ಕೆ ಮನ್ನಣೆ [illegible] ಹಾಕಿದ್ದ ಷರತ್ತನ್ನು ಸರ್ಕಾರವರ [illegible]ಯವರು

ಸಂಸ್ಥಾನಗಳಲ್ಲಿ ಕೈಗಾರಿಕಾ ಸಹಕಾರ ಸಂಸ್ಥೆಗಳ ಸ್ಥಾಪನೆ

ಕೇಂದ್ರ ಕೈಗಾರಿಕಾ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಮೊನ್ನೆ ಮದ್ರಾಸಿನಲ್ಲಿ ಮೈಸೂರು ಮದ್ರಾಸು ಆಂಧ್ರ ಮತ್ತು ತಿರುವಾಂಕೂರು ಸರ್ಕಾರಗಳ ಪ್ರತಿನಿಧಿಗಳನ್ನು [illegible] ಮಾತನಾಡಿ [illegible] ಸ್ಥಾಪಿಸುವುದು ಅಗತ್ಯವೆಂದು ಸೂಚಿಸಿದರು [illegible] ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲು ದ್ವಿತೀಯ ಯೋಜನೆ ಅವಧಿಯಲ್ಲಿ [illegible] ಕೋಟಿ ರೂ ಕೇಂದ್ರದಿಂದ ಬರುವುದೆಂದು ಅವರು ತಿಳಿಸಿದರು ಮೈಸೂರು ಆಂಧ್ರ ಮತ್ತು [illegible] ಸಂಸ್ಥಾನಗಳಲ್ಲಿ ಈ ವರ್ಷವೇ [illegible] ಕೈಗಾರಿಕಾ ಎಸ್ಟೇಟನ್ನು ನಿರ್ಮಿಸಲಾಗುವುದೆಂದು ಗೊತ್ತಾಗಿದೆ

ಸಂಸ್ಥಾನದ ಖಾದಿ ಮತ್ತು ಗ್ರಾಮ ಕೈಗಾರಿಕಾ ಸಮಿತಿಯ ಪುನರ್ರಚನೆ

ಸಂಸ್ಥಾನದ ಖಾದಿ ಮತ್ತು ಗ್ರಾಮ ಕೈಗಾರಿಕಾ ಸಮಿತಿಯನ್ನು ಸರ್ಕಾರದವರು [illegible] ಪುನರ್ರಚಿಸಿ, ಕೆಳಗೆ ಕಂಡವರನ್ನು ಸದಸ್ಯರನ್ನಾಗಿ ನೇಮಿಸಿರುತ್ತಾರೆ—ಖಾದಿ ಮತ್ತು ಗ್ರಾಮೋದ್ಯೋಗ ಡೈರೆಕ್ಟರು ಅಧ್ಯಕ್ಷರು, ಗ್ರಾಮ ಕೈಗಾರಿಕಾ [illegible] ಡೆಪ್ಯುಟಿ ಡೈರೆಕ್ಟರ್ [illegible] ಡೈರೆಕ್ಟರು—[illegible] ಶ್ರೀಗಳು [illegible] ಎಸ್ [illegible], ಮಾದಾಪುರದ ಎಸ್ ಪುಟ್ಟನಂಜಪ್ಪ, ದಾವಣಗೆರೆಯ ಎಚ್ ಕೃಷ್ಣಸ್ವಾಮಿ, ಶಿವಮೊಗ್ಗದ ಎಸ್ ಆರ್ ನಾಗಪ್ಪಶೆಟ್ಟಿ, ನಂಜನಗೂಡಿನ ಕೆ ವಿಶ್ವೇಶ್ವರಯ್ಯ, [illegible] ಕೆ ಲಿಂಗೇಗೌಡ ಬಿ ಮರಿಯಪ್ಪ, ಕೆ ಸುಬ್ಬರಾಮಯ್ಯ, [illegible] ಹಜಾರಿ ಚನ್ನಬಸವನಗೌಡ, ಆರ್ ಚನ್ನಿಗರಾಮಯ್ಯ, ತುಮಕೂರಿನ ಆರ್ ಎಸ್ [illegible], ಮರಿಯಪ್ಪ, [illegible] ಮತ್ತು ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರು

ಗೀತಾ ಜಯಂತಿ ಉಪನ್ಯಾಸ ಮತ್ತು ಕಾಲಕ್ಷೇಪ

ಗೀತಾ ಜಯಂತಿ ಸಪ್ತಾಹದ ಅಂಗವಾಗಿ [illegible] ಭವನದಲ್ಲಿ ನಾಳೆ ಸಂಜೆ [illegible] ಗಂಟೆಗೆ ಶ್ರೀ ಬಿ [illegible] ರಂಗಾಚಾರ್ಯರಿಂದ ಪ್ರೈಮಾರಿ ಭಾರತದ [illegible] ಪ್ರವಾಸದ ಬಗ್ಗೆ ಅಧ್ಯಾಯದ ವಾಚನವೂ, ಡಾ|| ಎ ಎಲ್ ನರಸಿಂಹಯ್ಯನವರಿಂದ ಭಗವದ್ಗೀತೆಯ ಪ್ರಯೋಜನ ಎಂಬ ವಿಷಯವಾಗಿ ಉಪನ್ಯಾಸವೂ ನಡೆಯುವುವು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಬೊಂಬಾಯಿ ಭಾರತದ ೨ನೇ ರಾಜಧಾನಿಯಾಗುವುದು

ನಗರದ ಭವಿಷ್ಯದ ಬಗ್ಗೆ ನೆಹರೂ ಸೂಕ್ತ ಸಲಹೆ

ಬೊಂಬಾಯಿ ನಗರವನ್ನು ಭಾರತದ ಎರಡನೇ ರಾಜಧಾನಿಯನ್ನಾಗಿ ಮಾಡಿ ಅದನ್ನು ಕೇಂದ್ರ ಸರ್ಕಾರದ ನೇರ ಆಡಳಿತಕ್ಕೆ ಒಳಪಡಿಸಬೇಕೆಂಬ ನೆಹರೂರವರ ಸಲಹೆಯನ್ನು ಬೊಂಬಾಯಿ ಮುಖ್ಯಮಂತ್ರಿ ಮೊರಾರ್ಜಿ ದೇಸಾಯಿಯವರು [illegible] ಒಪ್ಪಲಾಯಿತೆಂದು ಗೊತ್ತಾಗಿದೆ [illegible] ಪರಿಸ್ಥಿತಿಯಲ್ಲಿ ಒಪ್ಪಂದ [illegible] ಈ ರೀತಿ ಆದರೆ, ಪ್ರತಿ ವರ್ಷ [illegible] ಒಂದು ಅಧಿವೇಶನವು [illegible] [illegible] ಮತ್ತು ಕೈಗಾರಿಕೆ, ಸ್ವಾಭಾವಿಕ ಸಂಪತ್ತು ಮತ್ತು [illegible] [illegible]

[illegible] ಕೇಂದ್ರ ಕಛೇರಿಯೂ ಸಹ ಇರುವುದೆಂದು ಹೇಳಲಾಗಿದೆ

ಟಿಕೆಟ್ ಇಲ್ಲದ ಪ್ರಯಾಣಿಕರ ಜೋಳಿ ಗುಂಡಿನೇಟು

ಇಪ್ಪತ್ತರ ಮರಣ, ಹನ್ನೆರಡು ಜನರಿಗೆ ಗಾಯ

[illegible] ಟಿಕೆಟ್ ಇಲ್ಲದ ಪ್ರಯಾಣಿಕರ ಗುಂಪು [illegible] ಗುಂಡು ಹಾರಿಸಿದ್ದರಿಂದಾಗಿ [illegible] ಇಪ್ಪತ್ತು ಜನ ಮೃತರಾದರು, ಹನ್ನೆರಡು ಮಂದಿಗೆ ಗಾಯವಾಯಿತು [illegible]

ಗೋವಾ ಮತ್ತು ಕಾಶ್ಮೀರದ ನೀತಿ ಬಗ್ಗೆ ಭಾರತಕ್ಕೆ ರಷ್ಯಾ ಬೆಂಬಲ

ಸೋವಿಯಟ್ ಪಾರ್ಲಿಮೆಂಟಿನಲ್ಲಿ ಬುಲ್ಗಾನಿನ್ನರ ಘೋಷಣೆ

ರಷ್ಯದ ಪ್ರಧಾನಿ ಬುಲ್ಗಾನಿನ್ನರು ನೆನ್ನೆ ತಮ್ಮ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿ, ಕಾಶ್ಮೀರ ಮತ್ತು ಗೋವಾಗಳ ಬಗ್ಗೆ ಭಾರತದ ನೀತಿಗೆ ರಷ್ಯದ ಪೂರ್ಣ ಬೆಂಬಲವನ್ನು ಸೂಚಿಸಿದರು ಕಾಶ್ಮೀರದ ಸಮಸ್ಯೆಯನ್ನು ಅಲ್ಲಿನ ಪ್ರಜೆಗಳೇ ಬಗೆಹರಿಸಿರುವರೆಂದು ಅವರು ಹೇಳಿ, ಭಾರತದಲ್ಲಿ ತಾವು ಭೇಟಿ ಕೊಟ್ಟ [illegible] ಮಾತುಗಳನ್ನೇ ಮತ್ತೊಮ್ಮೆ ಹೇಳುವುದಾಗಿ [illegible]

○ ರಾಜಧಾನಿಯ ಗೀತಾ [illegible] ಕಾರ್ಖಾನೆಯ ಮ್ಯಾನೇಜರ್ ಬಿ ಆರ್ [illegible] ಎಂಬುವರು ಮೊನ್ನೆ ಹೃದಯ ಕ್ರಿಯೆ ನಿಂತು ಕಾರ್ಖಾನೆಯಲ್ಲೇ ಮೃತಪಟ್ಟರು

ಬೆಂಗಳೂರಿಗೆ ಸೊಯಾತ್ ಸೆನ್ನರ ಆಗಮನ

ವಿಮಾನ ನಿಲ್ದಾಣದಲ್ಲಿ ಸ್ವಾಗತ

ಸ್ವಂ. ವ. ವರದಿ] ಬೆಂಗಳೂರು ೨೦

ಚೀಣದ ಉಪಾಧ್ಯಕ್ಷಿಣಿ ಮೇಡಂ ಸೂಂಗ್ ಚಿಂಗ್ ಲಿಂಗ್ (ಸೊ ಸೊಯಾತ್ ಸೇನ್)ರವರು ಈ ಬೆಳಿಗ್ಗೆ ಮದ್ರಾಸಿನಿಂದ ವಿಮಾನದಲ್ಲಿ ಭಾರತ ಸರ್ಕಾರದ ಅಧಿಕಾರಿಗಳು ಮತ್ತು ಪರಿವಾರ ದೊಡನೆ ಇಲ್ಲಿಗೆ ಆಗಮಿಸಿದರು ಅವರನ್ನು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರು ಸ್ವಾಗತಿಸಿ, ಹೂವಿನ ಹಾರಗಳನ್ನು ಅರ್ಪಿಸಿದರು ಸಮಾಜ ಸೇವಾ ಸಮ್ಮೇಳನದ ಅಧ್ಯಕ್ಷಿಣಿ ಹನ್ನಿ ಮೆಹತಾ, ಕಾರ್ಯದರ್ಶಿ ಬಳ್ಳಿ ಸೋರಿಯಾ, ಶ್ರೀ ಟಿ ಸಿದ್ದಲಿಂಗಯ್ಯ ಮುಂತಾದವರೂ ಹೂವಿನ ಹಾರಗಳನ್ನು ಒಪ್ಪಿಸಿದರು ಪರಿಚಯಗಳ ನಂತರ ಸೊಯಾತ್ ಸೆನ್ನರು ಶ್ರೀ ಹನುಮಂತಯ್ಯನವರೊಡನೆ ರೇಸಿಡೆನ್ಸಿಗೆ ತೆರಳಿದರು.

ನಂತರ ಡಾ|| ರಾಮನರವರ ಇನ್ಸ್ಟಿಟ್ಯೂಟಿಗೂ, ಕುಶಲಕಲಾ ಪ್ರದರ್ಶನಾಲಯಕ್ಕೂ ಭೇಟಿ ಮತ್ತು ಸಮಾಜ ಸೇವಾ ಸಮ್ಮೇಳನದ [illegible] ಭಾಷಣ ಮಾಡುವರು

○ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಜನವರಿ ೪ನೇ ತಾರೀಖು ಚಂಗಲ್‌ಪೇಟೆಗೆ [illegible]

ಅಮೆರಿಕವು ಬ್ರಿಟನ್ನಿನ ಅಧೀನ ರಾಜ್ಯ: ಡಲ್ಲೆಸ್ ಬ್ರಿಟಿಷ್ ಪ್ರಜೆ!

ಗೋವಾ ಬಗ್ಗೆ ಡಲ್ಲೆಸ್ ಹೇಳಿಕೆಗೆ ಕೃಷ್ಣಮೆನನರ ವ್ಯಂಗ್ಯೋಕ್ತಿ

ಗೋವಾ ಬಗ್ಗೆ ಅಮೆರಿಕಾ-ಪೋರ್ಚುಗಲ್ಲಿನ ವಿದೇಶಾಂಗ ಮಂತ್ರಿಗಳ ಜಂಟಿ ಹೇಳಿಕೆಯನ್ನು ರಕ್ಷಣಾ ಮಂತ್ರಿ ವಿ ಕೆ ಕೃಷ್ಣಮೆನನರು ಟೀಕಿಸಿ, ೪೦೦ ವರ್ಷಗಳ ಹಿಂದೆ ಪೋರ್ಚುಗಲ್ಲು ಆಕ್ರಮಿಸಿಕೊಂಡ ಗೋವಾವನ್ನು ಪೋರ್ಚುಗಲ್ಲಿನದೇ ಎಂದು ಡಲ್ಲೆಸರು ವಾದಿಸಿರುವುದಾದರೆ, ಈ ವಾದವು ನ್ಯಾಯವಾದರೆ, ೧೭೦ ವರ್ಷಗಳ ಹಿಂದೆ ಬ್ರಿಟಿಷರ ವಸಾಹತಾಗಿದ್ದ ಅಮೆರಿಕವು ಬ್ರಿಟಿಷ್ ರಾಣಿಯವರ ಅಧೀನ ರಾಜ್ಯವಾಗಬೇಕಲ್ಲವೆ, ಡಲ್ಲೆಸರು ಬ್ರಿಟಿಷ್ ಪ್ರಜೆಯಾಗಬೇಕಾಗುವುದೆಂದು ಸೂಚಿಸಿದರು ಬ್ರಿಟನ್ನು [illegible] ಸ್ವಾತಂತ್ರ್ಯವನ್ನು [illegible] ಮತ್ತು ಇತಿಹಾಸ [illegible] ಜನರಿಗೆ ಹೇಳುವ ಮಾತೆಂದು [illegible] ಬ್ರಿಟಿಷರ ಆಳ್ವಿಕೆ [illegible] ಬುದ್ಧಿವಂತ [illegible] ಮುಂತಾದವನ್ನು ಭಾರತೀಯರು ಈಗ [illegible] ಬ್ರಿಟಿಷರು ಭಾರತದ ಅವನತಿಗೆ [illegible] ಬೆಂಬಲವನ್ನು [illegible] ಅವರು ತಿಳಿಸಿದರು

○ ತಾಂಡವಪುರದ ಶಿವನಂಜಯ್ಯ ಎಂಬುವರು ನೆನ್ನೆ ರಾತ್ರಿ ಒಂದು ಹಸು ಮತ್ತು ಕರುವನ್ನು [illegible] ತೋಟದಲ್ಲಿ ಹೊಡೆದುಕೊಂಡು ಹೋಗುತ್ತಿದ್ದಾಗ [illegible]

ಆಯುರ್ವೇದದ ಬಗ್ಗೆ ಕೇಂದ್ರ ಸರ್ಕಾರದ ಅಸಡ್ಡೆ ಸಲ್ಲದು

ಆಯುರ್ವೇದ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಪಾರ್ಥಸಾರಾಯಣ ಪಂಡಿತರ ಭಾಷಣ

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸು ನೆನ್ನೆ ತಿರು-ಕೊಚ್ಚಿ ಸಂಸ್ಥಾನದ ರಾಜಧಾನಿ ಎರ್ನಾಕುಲದಲ್ಲಿ ಸೇರಿತು. ಬೆಂಗಳೂರು ಶ್ರೀ ಚಾಮರಾಜೇಂದ್ರ ಆಯುರ್ವೇದ ಚಿಕಿತ್ಸೆ [illegible] ಗಳಾದ ಡಾ|| ಪೈ ಪಾರ್ಥಸಾರಾಯಣ ಪಂಡಿತರು ಅಧ್ಯಕ್ಷತೆ ವಹಿಸಿದ್ದರು. ಅವರು ಭಾಷಣ ಮಾಡಿ, ಆಯುರ್ವೇದವು ನಾನಾ ಮುಖದ ಸೇವೆಯನ್ನು ಕೈಗೊಳ್ಳಲು ಕೇಂದ್ರದಲ್ಲಿ ಒಂದು ಪ್ರತ್ಯೇಕ ಖಾತೆಯನ್ನು ಏರ್ಪಡಿಸಬೇಕೆಂದು ಸೂಚಿಸಿ, ಈ ವೈದ್ಯವು ರೋಗ ನಿವಾರಕ ಮತ್ತು ಪ್ರತಿಬಂಧಕ ತತ್ವಗಳನ್ನೊಳಗೊಂಡಿರುವ ವಿಜ್ಞಾನ ಶಾಸ್ತ್ರವೆಂಬುದಾಗಿ ಅಂಗೀಕರಿಸಲ್ಪಡಬೇಕೆಂದೂ, ದೇಶೀಯ ವೈದ್ಯಾಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಎಲ್ಲ ಯೋಜನೆಗಳಿಗೂ ದೇಶೀಯ ವೈದ್ಯರನ್ನೇ ಪ್ರಮುಖ ಸಲಹೆಗಾರರನ್ನಾಗಿ ನಿಯೋಜಿಸಬೇಕೆಂದೂ, ದೇಶಾದ್ಯಂತವೂ [illegible] ಗಳಲ್ಲಿ ಒಂದೇ ಬಗೆಯ ಪಠ್ಯಕ್ರಮವಿರಬೇಕೆಂದೂ ತಿಳಿಸಿದರು.

ಅನಾದಿಯಿಂದಲೂ ರಾಷ್ಟ್ರದ [illegible] ತ್ವದ ಆಯುರ್ವೇದವು ನಮ್ಮ ಹಲವಾರು ರಾಜಕೀಯ ರಾಷ್ಟ್ರದಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವುದಲ್ಲದೆ, ಬರಿಕೆ, ಸುಟ್ಟ [illegible] ತ ವಾಗ್ವಾದಗಳಲ್ಲಿ ಆದರವಾಗಿರುವ [illegible] ಯ ಮತ್ತಾವ ದೇಶದಲ್ಲಿಯೂ [illegible] ವೆಂದೂ ಹೇಳಿದರು.

ಆಯುರ್ವೇದದ ದುಃಸ್ಥಿತಿಯ ಮತ್ತು ಪ್ರಯೋಗ ಶಾಲೆಗಳ ಸ್ಥಾಪನೆಗೆ ಪ್ರಚೋದನೆ ಮತ್ತು ಆಡಳಿತದವರ ಪ್ರೋತ್ಸಾಹ ಮತ್ತು ಸಹಕಾರಗಳ ಆವಶ್ಯಕವೆಂದೂ, ಆಯುರ್ವೇದದಲ್ಲಿ ನಂಬಿಕೆಯಿಲ್ಲದ ಆಧುನಿಕ ವೈದ್ಯರೇ ಕೇಂದ್ರ ಮಂತ್ರಿಗಳಿಂದ ಬಂದ ಸಲಹೆಗಾರರಾಗಿರುವುದರಿಂದ ಅವರುಗಳು ಆಯುರ್ವೇದ ವೃತ್ತಿಯನ್ನು ಬಹಿಷ್ಕರಿಸಬೇಕೆಂದು ಒತ್ತಾಯಪಡಿಸುತ್ತಿರುವರೆಂದೂ ಅಧ್ಯಕ್ಷರು ತಿಳಿಸಿದರು.

ಕೇಂದ್ರ ಆರೋಗ್ಯ ಇಲಾಖೆಯ ಕಾರ್ಯಕ್ಷೇತ್ರಗಳಲ್ಲಿ ದೇಶೀಯ ವೈದ್ಯ ವಿಭಾಗವು ಪಟ್ಟ ಅಂಗವಾಗಿರುವುದೆಂದೂ, ಕೇಂದ್ರ ಆರೋಗ್ಯ ಮಂತ್ರಿಗಳು ಆಯುರ್ವೇದ ತಜ್ಞರನ್ನು ನೇಮಿಸಿಕೊಳ್ಳಬೇಕೆಂದೂ ಅವರು ಸಲಹೆ ಮಾಡಿದರು.

ಮೊದಲನೇ ಪಂಚ ವಾರ್ಷಿಕ ಯೋಜನೆಯಲ್ಲಿ ಇಡೀ ವೈದ್ಯಕೀಯ ವಿಭಾಗಕ್ಕೆ ೪೦.೩೭ ಕೋಟಿ ರೂ ಗಳನ್ನು ಒದಗಿಸಲಾಗಿತ್ತಾದರೂ, ದೇಶೀಯ ವೈದ್ಯ ಪದ್ಧತಿಗೆ ಕೇವಲ ೩೩ ಲಕ್ಷ ರೂಗಳನ್ನು ಗೊತ್ತು ಮಾಡಲಾಗಿತ್ತೆಂದೂ, ದ್ವಿತೀಯ ಯೋಜನೆಯಲ್ಲಾದರೂ ಹೆಚ್ಚು ಪ್ರೋತ್ಸಾಹವೀಯಲು ದೇಶೀಯ ವೈದ್ಯತಜ್ಞರುಳ್ಳ ಒಂದು ಉನ್ನತ ಸಮಿತಿಯನ್ನು ರಚಿಸಬೇಕೆಂದೂ ಸೂಚಿಸಿದರು.

ದೇಶದಲ್ಲಿ ಸುಮಾರು ೩ ಲಕ್ಷ ಆಯುರ್ವೇದೀಯ ವೈದ್ಯರಿರುವರೆಂದು ಅವರು ತಿಳಿಸಿ ಪ್ರತಿ ವರ್ಷ ಪ್ರತಿ ಕೇವಲ ಔಷಧಗಳಿಗಾಗಿ ಹೊರಕ್ಕೆ ೧೦ ಕೋಟಿ ರೂ ಗಳು ಸಾಗುತ್ತಿರುವುದರಿಂದ ದೇಶದ ಬಡತನಕ್ಕೆ ಹೆಚ್ಚಾಗಿ ಮಾಡಿಕೊಟ್ಟಂತಾಗಿದೆಯೆಂದೂ, ದೇಶದ ಸಂಪತ್ತನ್ನು ಉಳಿಸಿಕೊಳ್ಳಲು ಆಯುರ್ವೇದೀಯರಿಂದಲ್ಲೇ ಸಾಧ್ಯವೆಂದೂ ತಿಳಿಸಿದರು. ಮುಂಬಾಯಿ ಸರ್ಕಾರವು ಆಯುರ್ವೇದಕ್ಕೆ ಕೊಡುತ್ತಿರುವ ಉತ್ತೇಜನಕ್ಕಾಗಿ ಪ್ರಶಂಸೆಯನ್ನು ಸೂಚಿಸಿದರು.

ಲಾಹೋರು ಮತ್ತು ಢಾಕಾಗಳಲ್ಲಿ ಗೋವಾ ರಾಯಭಾರಿ ಕಛೇರಿ

ಪಾಕಿಸ್ಥಾನದ ಲಾಹೋರು ಮತ್ತು ಢಾಕಾ ನಗರಗಳಲ್ಲಿ ಗೋವಾ ಸರ್ಕಾರದವರು ಗೌರವ ಉಪ ರಾಯಭಾರಿ ಕಛೇರಿಗಳನ್ನು ತೆರೆಯಲು ಅಲ್ಲಿನ ಸರ್ಕಾರದವರ ಅನುಮತಿ ಬೇಡಿರುವರೆಂದೂ, ಅದು ಮಾನ್ಯವಾಗುವ ಸಂಭವವಿರುವುದಾಗಿಯೂ ಗೊತ್ತಾಗಿದೆ.

ಪಂತ್ ಮತ್ತು ಧೇಬರರೊಡನೆ ಕರ್ನಾಟಕ ಸಮಿತಿಯ ಭೇಟಿ

ಮೈಸೂರು ಸಂಸ್ಥಾನದ ಕರ್ನಾಟಕ ಪ್ರಾಂತ ರಚನಾ ಸಮಿತಿಯ ನಿಯೋಗವೊಂದು ಬರುವ ಮಂಗಳವಾರ ಕೇಂದ್ರ ಗೃಹ ಮಂತ್ರಿ ಪಂಡಿತ ಜಿ ಬಿ ಪಂತರವರನ್ನು ಭೇಟಿ ಮಾಡಿ ಮೈಸೂರು ಮಹಾರಾಜರವರನ್ನು ಕರ್ನಾಟಕ ಪ್ರಾಂತದ ಗೌರ್ನರರನ್ನಾಗಿ ಮಾಡಬೇಕೆಂದು ಸೂಚಿಸಿತು. ನಿಯೋಗದವರು ಧೇಬರ್‌ರವರನ್ನೂ ಭೇಟಿ ಮಾಡಿದ್ದರು. ಕನ್ನಡಿಗರಿರುವ ಎಲ್ಲ ಗಡಿ ಪ್ರದೇಶಗಳನ್ನೂ ಕರ್ನಾಟಕಕ್ಕೆ ಸೇರಿಸುವಂತೆ ಒತ್ತಾಯಪಡಿಸಲಾಯಿತು. ಮೈಸೂರಿಗೆ ಹಿಂದಿರುಗಿದ [illegible] ವಲ್ಲಭ ಪಂತ್‌ರವರು ಭೇಟಿ ಕೊಡಲಿರುವರು.

ನಾನಾ ಕಡೆ ಬ್ಯಾಂಕು ನೌಕರರ ಸಾಂಕೇತಿಕ ಮುಷ್ಕರ

ಭಾರತಾದ್ಯಂತ ನೆನ್ನೆ ಬ್ಯಾಂಕು ನೌಕರರು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಿ ಬ್ಯಾಂಕು ತೀರ್ಪಿನ ಬಗ್ಗೆ [illegible] ಸಂಬಳದ ವಿಷಯದ ಬಗ್ಗೆ ಪ್ರತಿಭಟಿಸಿದರು. ಮುಂಬಾಯಿಯಲ್ಲಿ ೩೦ ಬ್ಯಾಂಕುಗಳಲ್ಲಿ ಕೆಲಸ ನಡೆಯಲಿಲ್ಲ. ಮದ್ರಾಸು, ಮದುರೆ, ರಾಮನಾಥಪುರ, ಕೊಯಮುತ್ತೂರು ತಿರುನಲ್ವೇಲಿ, ವಿಜಯವಾಡ, ಮತ್ತು ಬೆಂಗಳೂರುಗಳಲ್ಲೂ [illegible] ನಡೆಯಿತು. ಜನವರಿ ೬ ಮತ್ತು ೭ನೇ ತಾರೀಖುಗಳಲ್ಲೂ ಮುಷ್ಕರ ನಡೆಸಲಾಗುತ್ತದೆ.

ಸನ್ಯೋಗದಿಂದ ಶುಭ ಪ್ರಸವ

ಸನ್ಯೋಗದ [illegible] ವನ್ನು ಎದುರಿಸುತ್ತಿರುವ [illegible] ತನ್ನ ಪತಿಯ ಮೇಲೆ [illegible] ವನ್ನು ಪ್ರಯೋಗಿಸಿದ ಪರಿಣಾಮವಾಗಿ ಗರ್ಭವತಿಯಾದ [illegible] ಮಗುವೊಂದನ್ನು ಪಡೆದಿರುವ [illegible] ಪ್ರಸವಿಸಿದಂತೆ ವರದಿಯಾಗಿದೆ. ಆಕೆ ಗೆ ಸ್ವಲ್ಪವೂ [illegible] ಕಾಣಿಸಲಿಲ್ಲವೆಂದು ವರದಿ ಇದೆ.

ಹನುಮಜ್ಜಯಂತಿ ಕಾರ್ಯಕ್ರಮಗಳು

ಶಿಕ್ಷೆ [illegible] ಮನಾಮುಖಿ ರಸ್ತೆ [illegible] ಬದಿಯಲ್ಲಿ ಪಕ್ಕದಲ್ಲಿರುವ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಶ್ರೀ ಹನುಮಜ್ಜಯಂತಿ ಉತ್ಸವವನ್ನು ಕಳೆದ ಮಂಗಳವಾರದಿಂದ ೧೦ ದಿನಗಳವರೆಗೆ ಏರ್ಪಡಿಸಲಾಗಿದೆ. ನಿತ್ಯವೂ ಪೂಜೆ, ವಾಯು ಸ್ತುತಿ, ಪಂಚಾಮೃತ [illegible] ಸಂಜೆ ಗಂಟೆಗೆ ಸಂಗೀತ, ಹರಿಕಥೆ ಇತ್ಯಾದಿಗಳು ಜರುಗುವುವು. ಈ ಸಂಜೆ ೬।। ಕ್ಕೆ [illegible] ದೀಕ್ಷಿತಾಚಾರ್ಯರ ವೇಣುವಾದನವೂ ನಾಳೆ ಸಂಜೆ ಬ್ರಹ್ಮಶ್ರೀ ಸೀತಾರಾಮಾಚಾರ್ಯರಿಂದ ಹಿ [illegible] ಸ್ವಯಂವರದ ವಿಷಯವಾಗಿ ಹರಿಕಥೆಯೂ ನಡೆಯುವುವು.

ನಾಳೆ ೨।। ಬಿ ಡಿ ವೇಂಕಟಪ್ಪನವರ ಶ್ರೀ ಸೀತಾಪತಿ ಮಂದಿರದಲ್ಲಿ ನಾಳೆ ಮಧ್ಯಾಹ್ನ ೪ ಗಂಟೆಗೆ ಡಾ|| ಆರ್ ಎಸ್ ಕೇಶವಮೂರ್ತಿಯವರ [illegible], ಸಂಜೆ ೬ ಗಂಟೆಗೆ ವಿ|| ಟಿ ಪುಟ್ಟಸ್ವಾಮಯ್ಯನವರ ಸಂಗೀತಗಳು ನಡೆಯುವುವು.

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ವಾರ್ಷಿಕೋತ್ಸವವು ನಾಳೆ ಬೆಳಿಗ್ಗೆ ೧೧ ಗಂಟೆಗೆ ಪುರಭವನದಲ್ಲಿ ಸೇರುವುದು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು. ಸಮಾಜ ಮಂತ್ರಿ ಶ್ರೀ ಟಿ ಮರಿಯಪ್ಪನವರು ಭಾಷಣ ಮಾಡುವರು.

ಜನಸಂಘದ ಪ್ರಾಂತೀಯ ಸಮ್ಮೇಳನಕ್ಕೆ ನಗರದ ಪ್ರತಿನಿಧಿಗಳು

ಉಡುಪಿಯಲ್ಲಿ ಸೇರಲಿರುವ ಭಾರತೀಯ ಜನಸಂಘದ ಪ್ರಾಂತೀಯ ಸಮ್ಮೇಳನಕ್ಕೆ ನಗರದ ಶಾಖಾ ಸಹ ಕಾರ್ಯದರ್ಶಿ ಶ್ರೀ ರಾ ನಾ ರಾಮಚಂದ್ರ ಮತ್ತು ಶ್ರೀ ಸಿದ್ಧಪ್ರಭುರವರನ್ನು ಪ್ರತಿನಿಧಿಗಳಾಗಿ ಚುನಾಯಿಸಲಾಗಿದೆ. ಬರುವ ೨ನೇ ತಾರೀಖು ನಗರದಲ್ಲಿ ಸೇರಬೇಕೆಂದು ಗೊತ್ತಾಗಿದ್ದ ಸಮ್ಮೇಳನವು ಪ್ರಾಂತೀಯ ಶಾಖೆಯವರ ಸೂಚನೆ ಪ್ರಕಾರ ತಾತ್ಕಾಲಿಕವಾಗಿ ರದ್ದುಗೊಳಿಸಲ್ಪಟ್ಟಿದೆ.

ಪ್ರಾಥಮಿಕ ವಿದ್ಯಾಭ್ಯಾಸ ಸುಧಾರಣೆಗೆ ಹೆಚ್ಚು ಗಮನ ಅವಶ್ಯಕ

ರಾಷ್ಟ್ರಾಧ್ಯಕ್ಷರ ಸೂಚನೆ

ದೆಹಲಿಯಲ್ಲಿ ೩೦ನೇ ಅಖಿಲ ಭಾರತ ವಿದ್ಯಾಭ್ಯಾಸ ಸಮ್ಮೇಳನವನ್ನು ಆರಂಭಿಸುತ್ತಾ ನೆನ್ನೆ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಮಾತನಾಡಿ, ಈಗಿನ ವಿದ್ಯಾಭ್ಯಾಸ ಪದ್ಧತಿಯು ಆಧುನಿಕ ಕಾಲ ಮತ್ತು ಜೀವನಕ್ಕೆ ತಕ್ಕದ್ದಾಗಿಲ್ಲವೆಂದು ಅಭಿಪ್ರಾಯಪಟ್ಟರು. ಸ್ವತಂತ್ರ ಭಾರತದ ಅವಶ್ಯಕತೆಗೆ ತಕ್ಕಂತೆ ವಿದ್ಯಾಭ್ಯಾಸದ ಸುಧಾರಣೆಯು ಆಗಬೇಕಾಗಿದೆಯೆಂದೂ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದೂ ಅವರು ತಿಳಿಸಿದರು.

ಗುಣಾಂಬಾ ಸಂಸ್ಥೆಗೆ ಡಾ|| ಕಾಗಲ್‌ಕರರ ಭೇಟಿ

ದೆಹಲಿಯ ರೆಡ್ ಕ್ರಾಸ್ ಸಂಸ್ಥೆಯ ಹರಿಗೆ ಮತ್ತು ಶಿಶು ಕಲ್ಯಾಣ ಡೈರೆಕ್ಟರರಾದ ಡಾ|| ಎಂ ಬಿ ಕಾಗಲ್‌ಕರರು ಸಂಸ್ಥಾನದ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಅಮ್ಮಿ ಕೃಷ್ಣಸ್ವಾಮಿಯವರೊಡನೆ ನಗರದ ಗುಣಾಂಬಾ ಟ್ರಸ್ಟಿನ [illegible] ಮತ್ತು ಶಿಶು [illegible] ಕೇಂದ್ರಗಳನ್ನು ಸಂದರ್ಶಿಸಿ [illegible]

[illegible] ವಿಷಯದಲ್ಲಿ ತೀವ್ರ [illegible] ಸಂಸ್ಥೆಯವರು ನಡೆಸುತ್ತಿರುವ ಕಾರ್ಯಗಳನ್ನು ಪ್ರಶಂಸಿಸಿ, ಎಲ್ಲದರ ಪಾಲನೆಯನ್ನು ನಿರ್ವಹಿಸುವಂತೆ ಸಲಹೆ ಮಾಡಿದರು.

ಬೆಂಗಳೂರಿಗೆ ಭಾಷಾ ಸಮಿತಿಯವರ ಭೇಟಿ

ಎ ಜಿ [illegible] ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಅಧಿಕೃತ ಭಾಷಾ ಸಮಿತಿಯವರು ಜನವರಿ [illegible] ಬೆಂಗಳೂರಿಗೆ ಬಂದು [illegible] ಸಾಕ್ಷ್ಯಗಳನ್ನು ತೆಗೆದುಕೊಳ್ಳುವರು.

SRI RAGHAVENDRA TECHNICAL INSTITUTE,
(S [illegible])
100 Feet Road Mysore
Expert Training in [illegible] phy and Hindi 6 months course
Tuition fees Rs 25 & admission fee of Rs 5 only
Join at once and better your prospects

ಟೆಲಿಫೋನ್ ಕಛೇರಿಯ ಆರಂಭೋತ್ಸವ

[ಸ್ವಂ ಸು] ಚಾಮರಾಜನಗರ,

ಅಂಚೆ ಇಲಾಖಾ ವಿದ್ಯುಚ್ಛಕ್ತಿ ಸಬ್ ಡಿವಿಷನಲ್ ಅಧಿಕಾರಿಗಳಾದ ಶ್ರೀ ವಿ ಎನ್ [illegible] ರು ನೆನ್ನೆ ಇಲ್ಲಿ ಸಾರ್ವಜನಿಕ ಟೆಲಿಫೋನ್ ಕಛೇರಿ ತೆರೆಯಿಸಿದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಪೌರಸಭಾಧ್ಯಕ್ಷ ಶ್ರೀ ಅನ್ವರ್ ಪಾಷಾರವರು ಅಧ್ಯಕ್ಷತೆ ವಹಿಸಿದ್ದರು.

ಚಾಮರಾಜೇಶ್ವರ ದೇವಾಲಯದ ಹೊರ ಪ್ರಾಕಾರದ ಬಾಗಿಲು ಶಿಥಿಲ

ಇಲ್ಲಿನ ಚಾಮರಾಜೇಶ್ವರ ದೇವಾಲಯದ ಹೊರ ಪ್ರಾಕಾರದ ಬಾಗಿಲಿನ ತಗಡುಗಳು ಕಿತ್ತು ಹೋಗಿ ಜನರು ಹೋಗಿಬರುವುದಕ್ಕೆ ಅಡಚಣೆಯಾಗಿದೆ. ಜನರ ಉಡುಪುಗಳು ಹರಿದುಹೋಗುವ ಸಂಭವವಿದೆ. ಕಾಲಿಗೆ ತಗಡಿನ ಏಟು ತಗಲಿ ಗಾಯಗಳಾಗಿರುವುದೂ ಉಂಟು. ನಾಲ್ಕೈದು ತಿಂಗಳಿಂದಲೂ ಇದು ರಿಪೇರಿಯೇ ಆಗದೆ ಇದೆ. ಅಧಿಕಾರಿಗಳು ಈ ಬಗ್ಗೆ ಗಮನವಿತ್ತು, ರಿಪೇರಿ ಕಾರ್ಯವನ್ನು ನಡೆಸುವರೆಂದು ನಂಬಲಾಗಿದೆ.

ಮೈಸೂರು ಪೇಟೆ ಧಾರಣೆ

	ರೂ ಆ ಪೈ	ರೂ ಆ
ಕಡಲೆಕಾಯಿ	[illegible] ೬ ೦	೦೬ ೯
ಹರಳುಬೀಜ	[illegible] ೧ ೦	
[illegible]	[illegible] ೬ ೦	೪೯ ೧೨
ಗುರೆಳ್ಳು	೨೪ ೬ ೦	೨೫ ೧೨
[illegible]	೪೪ ೦೦ ೦	೪೪ [illegible]
[illegible]	೩೪ ೧೨ ೦	೪೬ ೯
ಹುರುಳಿ	೩೯ ೦೦ ೦	೩೦ ೦
[illegible]	೯೦ ೬ ೦	
[illegible]	೩೦ ೦ ೦	೩೩ [illegible]
ಕೊಬ್ಬರಿ	೩೨ ೦ ೦	೪೪ ೦
ಮೆಣಸಿನಕಾಯಿ	೨ ೪ ೦	೨ [illegible]
ಹುಣಸೆಹಣ್ಣು	೫ ೧೪ ೦	೧೬ ೧೨
ತೆಂಗಿನಕಾಯಿ ೧,೦೦೦ಕ್ಕೆ	೧೬೯ ೦ ೦	[illegible]

SREE GANESH
TALKIES
[illegible] RELEASE On 31-12-55
New Year's Special Attraction
SIX BRIDGES TO CROSS
[illegible] Tony Curtis
Julie Adams and George Nader
(Based on the best selling Collier's Novel about the amazing
2½ Millions Boston Robbery)

Edited, Printed and Published by A. R. Nagarajan at Sadhvi Press, D. Subbiah Road, Mysore

ಚಾಮುಂಡೇಶ್ವರಿ ಟಾಕೀಸ್, ಮೈಸೂರು
30-12-55ರಿಂದ ಜವೇಳದ ಪ್ರಾರಂಭ ಪ್ರತಿ ದಿನ 3 ಆಟಗಳು
ನ್ಯೂ ಅಡ್ವೆಂಚರ್ಸ್ ಆಫ್ ಬ್ಯಾಟ್‌ಮನ್ ಅಂಡ್ ರಾಬಿನ್ ದಿ ವಂಡರ್ ಬಾಯ್
NEW ADVENTURES OF BATMAN & ROBIN THE WONDER BOY
[illegible]
MORNING SHOWS On 31st & 1st January 56 For 2 Days only
WINGS OF THE HAWK

ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)
30-12-55 ನೇ ಶುಕ್ರವಾರದಿಂದ ಜನೇಳದ ಪ್ರಾರಂಭ
ಪದ್ಮರಾಜಾರವರ ತಮಿಳು ಚಿತ್ರ
★ ಜಗತಲಪ್ರತಾಪನ್ ★
ಪಾತ್ರ - ಪಿ ಯು ಚಿನ್ನಪ್ಪ, ಸರೋಜಿನಿ, ಕೃಷ್ಣ, ಮಧುರಂ ಮುಂತಾದವರು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ ೩ ಕಾಣಿ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೯] SADHVI : SATURDAY 31-12-1955 ಮೈಸೂರು ಶನಿವಾರ : ೩೧-೧೨-೧೯೫೫ [ಸಂಚಿಕೆ : ೬೩೩

– ಪೌರಸಭೆಯ ಅಧಿಕಾರದ ಮೊಟಕಿಗಾಗಿ ಪ್ರತಿಭಟನೆ –

ಪುರಸಭೆಯ ಮೇಲೆ ಜಿಲ್ಲಾಧಿಕಾರಿಗಳ ಹತೋಟಿ

ಸರ್ಕಾರಿ ಆಜ್ಞೆಗಾಗಿ ಪುರಸಭೆಯ ಅಸಮಾಧಾನ

ಮೈಸೂರು ೩೦

ಮೈಸೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ಜಿಲ್ಲಾ ಕಲೆಕ್ಟರುಗಳು ಸಂಸ್ಥಾನದ ಮುನಿಸಿಪಾಲಿಟಿಗಳ ಶಾಸನದ ೨೦೬, ೨೦೭ ಮತ್ತು ೨೦೮ನೇ ವಿಧಿಗಳ ಪ್ರಕಾರ ಕ್ರಮ ಕೈಗೊಳ್ಳಲು ಅವರಿಗೆ ಅಧಿಕಾರವಿತ್ತು ಸರ್ಕಾರದವರು ಮಾಡಿರುವ ಆಜ್ಞೆಯು ನೆನ್ನೆ ಪುರಸಭಾಧಿವೇಶನದಲ್ಲಿ ಚರ್ಚಿಸಲ್ಪಟ್ಟಿತು. ಈ ಬಗ್ಗೆ ಅಧ್ಯಕ್ಷರು ಮೈಸೂರು ಪುರಸಭೆಯು ಇದನ್ನು ಖಂಡಿತ ಒಪ್ಪುವುದಿಲ್ಲವೆಂದು ತಿಳಿಸಿ, ತಾವು ಮುಖ್ಯ ಮಂತ್ರಿಗಳಿಗೆ ಪ್ರಬಲ ಕಾಗದ ಬರೆಯುವುದಾಗಿ ಹೇಳಿದರು.

ಶ್ರೀ ಎಸ್. ಲಿಂಗಣ್ಣನವರು ಮಾತನಾಡಿ ಪ್ರಜಾಪ್ರಭುತ್ವದ ಈ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಕಿತ್ತುಕೊಳ್ಳಲು ಯತ್ನಿಸುವಂತಹ ಆಜ್ಞೆಯನ್ನು ಮಾಡಿರುವುದಕ್ಕಾಗಿ ಸರ್ಕಾರಕ್ಕೆ ಪ್ರತಿಭಟನೆಯನ್ನು ಸೂಚಿಸಬೇಕೆಂದು ಒತ್ತಾಯ ಮಾಡಿದರು. ಅಧ್ಯಕ್ಷರು ಈ ಬಗ್ಗೆ ಸರ್ಕಾರಕ್ಕೆ ಪುನಃ ಬರೆಯಬೇಕೆಂದು ತೀರ್ಮಾನಿಸಲಾಯಿತು.

ಮೇಲ್ಕಂಡ ಆಜ್ಞೆಯ ಪ್ರಕಾರ ಜಿಲ್ಲಾಧಿಕಾರಿಗಳು ಪುರಸಭೆಯ ಆಜ್ಞೆಗಳನ್ನು ರದ್ದು ಮಾಡಬಹುದು, ಅಲ್ಲದೆ ವಿಶೇಷ ಸಂದರ್ಭಗಳಲ್ಲಿ ಪುರಸಭೆಯು ಮಾಡಬೇಕಾದ ಕೆಲಸಗಳನ್ನು ನಿರ್ವಹಿಸಬಹುದು ಮತ್ತು ಮುಖ್ಯವಾದ ಪುರಸಭೆಯ ಫೈಲುಗಳನ್ನು ತರಿಸಿಕೊಂಡು ಪರಿಶೀಲಿಸಬಹುದು.

ಗಾಯತ್ರಿ ಲಲಿತ ಕಲಾ ಸಂಘದಲ್ಲಿ ಗೀತಾ ಜಯಂತಿ

ವಾಣಿವಿಲಾಸ ರಸ್ತೆಯ ಗಾಯತ್ರಿ ಲಲಿತ ಕಲಾಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ೩೦ ಘಂಟೆಗೆ ಪ್ರಜಾವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಬಿ. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ "ಗೀತಾ ಜಯಂತಿಯನ್ನು" ಆಚರಿಸಲಾಗುವುದು. ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ವಿ. ಟಿ. ತಿರುನಾರಾಯಣ ಐಯ್ಯಂಗಾರ್‌ರವರು ಭಗವದ್ಗೀತೆಯ ವಿಷಯವಾಗಿ ಭಾಷಣ ಮಾಡುವರು.

ಬೊಂಬಾಯಿ ಬಗ್ಗೆ ನೆಹರೂ ಸೂತ್ರಕ್ಕೆ ಮಹಾರಾಷ್ಟ್ರರು ಒಪ್ಪಿಲ್ಲ

ಬೊಂಬಾಯಿ ನಗರವನ್ನು ಭಾರತದ ವ್ಯಾಪಾರದ ರಾಜಧಾನಿಯಾಗಿ ಪರಿವರ್ತಿಸುವ ಬಗ್ಗೆ ನೆಹರೂರವರ ಸೂತ್ರವು ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಪರಿಶೀಲನೆಗೆ ಬರಲಿಲ್ಲವೆಂದೂ, ಎಲ್ಲ ವಿಚಾರತು ಮತ್ತು ಬೊಂಬಾಯಿ ಸಂಸ್ಥಾನದ ರಾಜಧಾನಿಯಾಗುಳ್ಳ ದ್ವಿಭಾಷಾ ಪ್ರಾಂತ ರಚನೆಯನ್ನೇ ಮಹಾರಾಷ್ಟ್ರದವರು ಅಪೇಕ್ಷಿಸಬಹುದೆಂದೂ ಗೊತ್ತಾಗಿದೆ. ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಅಧ್ಯಕ್ಷ ಶಂಕರರಾವ್ ದೇವ್‌ರವರು ಪಂಡಿತ ನೆಹರೂರೊಡನೆ ಮಾತುಕತೆ ನಡೆಸಲು ದೆಹಲಿಗೆ ತೆರಳಿರುತ್ತಾರೆ. ಬೊಂಬಾಯಿ ನಗರವನ್ನು ಪ್ರಾಂತದ ರಾಜಧಾನಿಯಾಗಿಯೇ ಉಳಿಸಿಕೊಳ್ಳಲು ಮಹಾರಾಷ್ಟ್ರರು ಗುಜರಾತಿಗಳಿಗೆ ಯಾವ ಭರವಸೆಯನ್ನಾದರೂ ಕೊಡಲು ಸಿದ್ಧರಿರುವರೆಂದೂ ಹೇಳಲಾಗಿದೆ.

ಫೆಬ್ರವರಿಯಲ್ಲಿ ಶಾಸನ ಸಭೆಗಳ ಆಯವ್ಯಯ ಅಧಿವೇಶನ

ಬೆಂಗಳೂರು ೩೦

ಸಂಸ್ಥಾನದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ಆಯವ್ಯಯ ಅಧಿವೇಶನವು ಫೆಬ್ರವರಿ ತಿಂಗಳ ಪ್ರಥಮ ವಾರದಲ್ಲಿ ಆರಂಭವಾಗಲಿದೆ. ಸಾಮಾನ್ಯವಾಗಿ ಮಾರ್ಚಿಯಲ್ಲಿ ಈ ಅಧಿವೇಶನವು ಸೇರುತ್ತಿತ್ತು. ಸಂಸ್ಥಾನಗಳ ಪುನರ್ವಿಂಗಡಣಾ ಸಮಿತಿಯ ವರದಿ ಮಾರ್ಚಿ ಒಳಗೆ ಫೆಬ್ರವರಿಯೊಳಗೆ ಸಂಸ್ಥಾನ ಸರ್ಕಾರದ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕಾಗಿರುವುದರಿಂದ ಮುಂಚೆಯೇ ಸಭೆಗಳು ಸೇರಲಿವೆ.

ಅಧಿವೇಶನದ ಪ್ರಾರಂಭದ ದಿನಗಳಲ್ಲಿ ಕರ್ನಾಟಕ ಪ್ರಾಂತ ರಚನೆ ಒಗ್ಗಟ್ಟಿನ ಪ್ರಶ್ನೆ ಪ್ರಾಮುಖ್ಯವಾಗಿ ಚರ್ಚೆಯಾಗುವ ಸಂಭವವಿದೆ ಮತ್ತು ತಿದ್ದುಪಡಿಗಳಾವುವಾದರೂ ಇದ್ದರೆ ಆ ಸಮಯದಲ್ಲಿ ಸಲ್ಲಿಸಬಹುದು.

ಅಧಿವೇಶನವು ಮಾರ್ಚಿ ತಿಂಗಳ ಕಡೆಯವರೆಗೂ ನಡೆಯುವ ನಿರೀಕ್ಷೆಯಿದೆ.

ಕಾರ್ಮಿಕ ಅಪಿಲೇಟ್ ನ್ಯಾಯಮಂಡಲಿಕ್ಕೆ ನೂತನ ಮೆಂಬರ್

ಮದ್ರಾಸಿನಲ್ಲಿರುವ ಲೇಬರ್ ಅಪಲೇಟ್ ನ್ಯಾಯಮಂಡಲಿಕ್ಕೆ ಬೆಂಗಳೂರಿನ ಸಿಟಿ ಜಡ್ಜ್, ಮಾಜಿ ಮಂತ್ರಿಯೂ ಆದ ಮಹಮೂದ್ ಷರೀಫ್‌ರವರನ್ನು ನೇಮಿಸಲಾಗಿದೆ. ಅವರು ಜನವರಿ ೧ನೇ ತಾರೀಕು ಅಧಿಕಾರ ವಹಿಸಿಕೊಳ್ಳುವರು.

ಬಿ. ಎಸ್. ಪುಟ್ಟಸ್ವಾಮಿ ಮತ್ತು ಕೆ. ಚಿಕ್ಕಲಿಂಗಯ್ಯನವರು ಕಾಂಗ್ರೆಸ್ಸಿಗೆ

ಸಂಸ್ಥಾನದ ನಿವೃತ್ತ ಕಾರ್ಮಿಕ ಕಮಿಷನರಾದ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರೂ, ಮಂಡ್ಯದ ಶ್ರೀ ಕೆ. ಚಿಕ್ಕಲಿಂಗಯ್ಯನವರೂ, ಕಾಂಗ್ರೆಸ್ಸಿಗೆ ಸದಸ್ಯರಾಗಿ ಸೇರಿರುವರು.

ಬ್ಯಾಂಕ್ ನೌಕರರ ಮುಷ್ಕರ ಅಕ್ರಮವೆಂದು ಸರ್ಕಾರದ ಮತ

ಬ್ಯಾಂಕ್ ನೌಕರರ ಮುಷ್ಕರವು ಅಕ್ರಮವೆಂದು ಭಾರತ ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ಮೊನ್ನೆ ಬ್ಯಾಂಕ್ ನೌಕರರು ನಡೆಸಿದ ಸಾಂಕೇತಿಕ ಮುಷ್ಕರದ ವಿಷಯವಾಗಿ ಬ್ಯಾಂಕ್ ಸಂಘದ ಅಧ್ಯಕ್ಷರು ಸರ್ಕಾರಕ್ಕೆ ಪತ್ರ ಬರೆದಿದ್ದರು.

ಫಜಲ್ ಅಲಿಯವರಿಗೆ ಬಿಹಾರ್ ಗೌರ್ನರ್‌ಗಿರಿ

ಸಂಸ್ಥಾನದ ಪುನರ್ವಿಂಗಡಣಾ ಸಮಿತಿ ಅಧ್ಯಕ್ಷರಾಗಿದ್ದ ಫಜಲ್‌ಅಲಿಯವರನ್ನು ಬಿಹಾರ್ ಗೌರ್ನರರಾಗಿ ಮಾಡುವ ಸಂಭವವಿರುವುದೆಂದು ಗೊತ್ತಾಗಿದೆ. ಅಲ್ಲಿನ ಗೌರ್ನರ್ ಆರ್. ಆರ್. ದಿವಾಕರ್‌ರವರು ಉತ್ತರಪ್ರದೇಶದ ಗೌರ್ನರ್ ಆಗಲಿರುವರೆಂದೂ ಹೇಳಲಾಗಿದೆ. ವಿಂಧ್ಯ ಪ್ರದೇಶದ ಲೆಫ್ಟಿನೆಂಟ್ ಗೌರ್ನರ್ ಕೆ. ಸಂತಾನಂರವರ ಸ್ವಂತ ಅಪೇಕ್ಷೆ ಪ್ರಕಾರ ಅವರು ಹುದ್ದೆಯಿಂದ ನಿವೃತ್ತರಾಗಲು ಅನುಮತಿ ದೊರೆತಿದೆಯೆಂದೂ ಕೇಂದ್ರ ಸರ್ಕಾರದಲ್ಲಿ ಹಿಂದೆ ಉಪ ಮಂತ್ರಿಯಾಗಿದ್ದ ಎಂ. ತಿರುಮಲರಾಯರು ಸಂತಾನಂರವರ ಸ್ಥಾನದಲ್ಲಿ ಬರುವ ತಿಂಗಳು ಮಧ್ಯಭಾಗದಲ್ಲಿ ಗೌರ್ನರ್ ಆಗುವರೆಂದೂ ಗೊತ್ತಾಗಿದೆ.

ಭಾರತ-ಚೀಣಗಳ ಅಭ್ಯುದಯಕ್ಕಾಗಿ ಪರಸ್ಪರ ಸಹಕಾರ ಅಗತ್ಯ

ಸಮಾಜ ಸೇವಾ ಸಮ್ಮೇಳನದಲ್ಲಿ ಚೀಣದ ಉಪಾಧ್ಯಕ್ಷಿಣಿಯ ಭಾಷಣ

ಸ್ವ ಮಂ ಫೋ॥] ಬೆಂಗಳೂರು ೩೦

ಚೀಣದ ಉಪಾಧ್ಯಕ್ಷಿಣಿ ಮೇಡಂ ಸೂಂಗ್ ಚಿಂಗ್‌ಲಿಂಗ್‌ರವರು ಇಲ್ಲಿ ಸೇರಿರುವ ಸಮಾಜ ಸೇವಾ ಭಾರತೀಯ ಸಮ್ಮೇಳನದಲ್ಲಿ ನೆನ್ನೆ ಭಾಷಣ ಮಾಡಿ, ಅಂತರ ರಾಷ್ಟ್ರೀಯ ಶಾಂತಿಯನ್ನು ಕಾಪಾಡಲೂ ಎರಡು ರಾಷ್ಟ್ರಗಳ ಅಭ್ಯುದಯವನ್ನು ಸಾಧಿಸಲೂ ಭಾರತ ಮತ್ತು ಚೀಣಗಳ ಪರಸ್ಪರ ಸಹಕಾರವು ಅಗತ್ಯವೆಂದು ಸೂಚಿಸಿದರು. ಎರಡು ರಾಷ್ಟ್ರಗಳ ಬಾಂಧವ್ಯವು ನಿಕಟವಾಗುತ್ತಿರುವುದೆಂದೂ, ಉಭಯರಾಗ ಒಂದೇ ವಿಧದ ಸಮಸ್ಯೆಗಳುಂಟಾಗಿರುವುದಾಗಿಯೂ ಅವರು ಹೇಳಿದರು. ಜನತಂತ್ರ ಮಾರ್ಗವನ್ನು ನಡೆಸಿಕೊಂಡಿದೆಯೆಂದು ಚೀಣದಲ್ಲಿ ೬೦ ಕೋಟಿ ಜನರು ದುಡಿದು ಮಾಡಿರುವ ಪ್ರಗತಿಯನ್ನು ತೋರಿಸಲಾಗುವುದೆಂದೂ, ಚೀಣಕ್ಕೆ ಅಂತರರಾಷ್ಟ್ರೀಯ ಶಾಂತಿಯ ಅವಶ್ಯಕತೆಯಿದೆ ಎಂದು ಅವರು ಹೇಳಿದರು. ಆರು ವರ್ಷಗಳಲ್ಲಿ ಸ್ತ್ರೀ ಚೀಣವು ಹಲವು ಬದಲಾವಣೆಗಳನ್ನು ಮಾಡಿರುವುದಾಗಿಯೂ ಅವರು ತಿಳಿಸಿದರು. ಅಲ್ಲಿ ಅಸ್ಪೃಶ್ಯತಾ ನಿವಾರಣೆಯನ್ನು ತೊಡೆದುಹಾಕಲಾಗಿರುವುದೆಂದೂ, ಚೀಣದಲ್ಲಿ ಗಂಡು ಹೆಂಡತಿಯನ್ನು ಹೊಡೆಯುವುದೇ ಅಪರೂಪವೆಂದೂ ನುಡಿದರು.

ಚೀಣದಲ್ಲಿ ಇನ್ನೂ ಹಲವಾರು ಪಂಚ ವಾರ್ಷಿಕ ಯೋಜನೆಗಳ ನಂತರವೇ ಪೂರ್ಣ ಅಭ್ಯುದಯ ಸಾಧ್ಯವಾಗಲಿದೆಯೆಂದು ಅವರು ತಿಳಿಸಿ, ಭಾರತ ಮತ್ತು ಚೀಣಗಳು ಈ ಕೆಲಸಗಳಲ್ಲಿ ಒಟ್ಟುಗೂಡಬೇಕೆಂದು ಸೂಚಿಸಿದರು.

ಮೇಡಂ ಸೂಂಗ್ ಚಿಂಗ್ ಲಿಂಗ್‌ರವರು ಈ ದಿನ ಬೆಳಿಗ್ಗೆ ವಿಮಾನದಲ್ಲಿ ತಿರುವನಂತಪುರಕ್ಕೆ ಪ್ರಯಾಣ ಮಾಡಿದರು. ನಿಲ್ದಾಣದಲ್ಲಿ ಮುಖ್ಯ ಮಂತ್ರಿಗಳೂ, ಸಚಿವರುಗಳೂ ಮತ್ತು ಮೇಯರೂ ಅವರನ್ನು ಬೀಳ್ಕೊಟ್ಟರು.

ಮದ್ರಾಸಿನ ಬಿರುಗಾಳಿ ಸಂತ್ರಸ್ತರಿಗೆ ೪ ಕೋಟಿ ರೂ. ಅವಶ್ಯಕ

ಮದ್ರಾಸು ಪ್ರಾಂತದ ದಕ್ಷಿಣ ಭಾಗದಲ್ಲಿ ಇತ್ತೀಚೆಗೆ ಸಂಭವಿಸಿದ ಬಿರುಗಾಳಿ ಅನಾಹುತದಿಂದ ನೊಂದ ಜನರ ಪರಿಹಾರಾರ್ಥವಾಗಿ ೪ ಕೋಟಿ ರೂ. ಅನ್ನು ಒದಗಿಸಬೇಕಾಗುವುದೆಂದು ಅಲ್ಲಿನ ಹಣಕಾಸಿನ ಮಂತ್ರಿ ಸಿ. ಸುಬ್ರಹ್ಮಣ್ಯಂರವರು ತಿಳಿಸಿರುವರು.

ಮಂಡ್ಯದ ಸಮ್ಮೇಳನಕ್ಕಾಗಿ ನಾಳೆ ವಿಶೇಷ ರೈಲು ವ್ಯವಸ್ಥೆ

ನಾಳೆ ಮಂಡ್ಯದಲ್ಲಿ ಸೇರುವ ಮೈಸೂರು ವಿಲೀನ ವಿರೋಧ ಸಮ್ಮೇಳನಕ್ಕೆ ಹೋಗುವವರ ಸೌಕರ್ಯಕ್ಕಾಗಿ ವಿಶೇಷ ರೈಲು ಬೆಳಿಗ್ಗೆ ೮ ಗಂಟೆಗೆ ಇಲ್ಲಿಂದ ಹೊರಟು ರಾತ್ರಿ ೮ ಗಂಟೆಗೆ ಮಂಡ್ಯದಿಂದ ವಾಪಸು ಬರುವಂತೆ ಏರ್ಪಡಿಸಲಾಗಿದೆಯೆಂದೂ ಅವಶ್ಯ ರಿಯಾಯಿತಿ ಪಡೆಯಬೇಕಾದವರು ಈ ದಿನ ಸಂಜೆ ೫ರಿಂದ ೮ ಘಂಟೆವರೆಗೆ ಮೈಸೂರು ಪತ್ರಿಕೆ ಕಛೇರಿಯಲ್ಲಿ ತಮ್ಮನ್ನು ನೋಡಬಹುದೆಂದೂ ಶ್ರೀ ಎಂ. ಸಿ. ನರಸಿಂಹಯ್ಯನವರು ತಿಳಿಸಿರುತ್ತಾರೆ.

ಪ್ರಾದೇಶಿಕ ಸಲಹಾ ಸಮಿತಿಗಳಿಗೆ ಆಡಳಿತಾಧಿಕಾರ ಇರಬೇಕು

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿಗಳ ಸೂಚನೆ

ಸ್ವಂ ಮ ಫೋ॥] ಬೆಂಗಳೂರು ೩೦

ಭಾರತವನ್ನು ೫ ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿ ಸಲಹಾ ಸಮಿತಿಗಳನ್ನು ನೇಮಿಸಬೇಕೆಂದು ಪ್ರಧಾನಿ ನೆಹರೂರವರು ಮಾಡಿರುವ ಸಲಹೆಯನ್ನು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ ಬೆಳಿಗ್ಗೆ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಸ್ವಾಗತಿಸಿ ಕೇವಲ ಸಲಹಾ ಸಮಿತಿಗಳು ಸಾಲವೆಂದೂ, ಅವಕ್ಕೆ ಕೇಂದ್ರ ಹಾಗೂ ಸಂಸ್ಥಾನ ಸರ್ಕಾರಗಳ ಕೆಲವು ಅಧಿಕಾರಗಳನ್ನು ಕೊಡಬೇಕೆಂದೂ ತಿಳಿಸಿದರು.

ಕರ್ನಾಟಕವೆಂದು ಹೆಸರಿಡಬೇಕೆಂಬುದಾಗಿ ರಾಯಚೂರು ಸಾಹಿತ್ಯ ಸಮ್ಮೇಳನದಲ್ಲಿ ಮಾಡಿರುವ ನಿರ್ಣಯವನ್ನು ಅವರು ಪ್ರಸ್ತಾಪಿಸಿ ಅದು ಸಾಮಾಮೂಲಿನಂತೆ ಮಾಡಿರುವ ನಿರ್ಣಯವೆಂದೂ, ಮೈಸೂರಿನ ಸ್ವಾತಂತ್ರ್ಯ ಸ್ವರೂಪವನ್ನು ಗಣನೆಗೆ ತೆಗೆದುಕೊಂಡು ಸಾಹಿತ್ಯ ಪರಿಷತ್ತಿನವರು ತಮ್ಮ ನಿರ್ಣಯವನ್ನು ಪುನರಾಲೋಚಿಸಬೇಕೆಂದೂ ಸೂಚಿಸಿದರು.

ಮೈಸೂರು ಮೈಸೂರಾಗಿ ಉಳಿಯಬೇಕೆಂಬ ವಾದವು ಹಳೆಯದಾಗಿಹೋಯಿತೆಂದೂ, ಪ್ರಾದೇಶಿಕ ಸಲಹಾ ಸಮಿತಿಗಳ ನೇಮಕ ಮುಂತಾದ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಮಂಡ್ಯ ಸಮ್ಮೇಳನದವರು ಸರಿಯಾದ ನಿಲುವನ್ನು ಕೈಗೊಳ್ಳುವರೆಂದೂ ಆಶಿಸಿದರು.

ಭಾರತ ಮತ್ತು ಇಂಡೊನೇಷ್ಯಾ ಸಾಂಸ್ಕೃತಿಕ ಒಪ್ಪಂದ

ಭಾರತ ಮತ್ತು ಇಂಡೊನೇಷ್ಯಗಳ ನಡುವೆ ಸ್ನೇಹ ಮತ್ತು ಸಾಂಸ್ಕೃತಿಕ ಸಂಬಂಧದ ಒಪ್ಪಂದವಾಗಿದೆ. ಕೇಂದ್ರ ವಿದ್ಯಾ ಮಂತ್ರಿ ಮೌಲಾನಾ ಆಜಾದರೂ, ದೆಹಲಿಯಲ್ಲಿರುವ ಇಂಡೊನೇಷ್ಯಾ ರಾಯಭಾರಿ ಡಾ॥ ಸುಬಾರ್ಡ್‌ರವರೂ ಅದಕ್ಕೆ ರುಜು ಮಾಡಿರುವರು. ವಿಶ್ವವಿದ್ಯಾಲಯದ ಉಪಾಧ್ಯಾಯರು ಮತ್ತು ವೈಜ್ಞಾನಿಕ ಪ್ರವೀಣರ ವಿನಿಮಯ ಮುಂತಾದ ವಿಷಯಗಳನ್ನು ಒಪ್ಪಂದವು ಒಳಗೊಂಡಿದೆ. ಅದು ೧೦ ವರ್ಷ ಕಾಲ ಜಾರಿಯಲ್ಲಿರುವುದು.

ನೃತ್ಯ ಪ್ರದರ್ಶನ

ಗಾಂಧಿ ವಿ. ವೆಂಕಟಕೃಷ್ಣನವರ ಶ್ರೀ ಕೃಷ್ಣ ಮಂದಿರದಲ್ಲಿ ಈ ರಾತ್ರಿ ೯½ ಗಂಟೆಗೆ ಶ್ರೀ ಎಂ. ಸಿ. ವೀರ್ ಮತ್ತು ಪಾರ್ಟಿಯವರಿಂದ ನೃತ್ಯ ಪ್ರದರ್ಶನವು ಶ್ರೀ ಎಂ. ಹೆಚ್. ಅಂಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವುದು.

○ ಮಂಡಿ ಮೊಹಲ್ಲಾದ ರಂಗಯ್ಯನ ಮಗ ವೆಂಕಟಸ್ವಾಮಿ ಎಂಬುವನು ಈ ದಿನ ಬೆಳಿಗ್ಗೆ ಸೈಕಲ್ಲೊಂದನ್ನು ಅಪಹರಿಸಿಕೊಂಡುಹೋಗುತ್ತಿದ್ದಾಗ ಕ್ರೈಂ ಬ್ರಾಂಚ್ ಪೋಲೀಸರು ಅವನನ್ನು ಮಾಲು ಸಹಿತ ವಶ್ಯಗಿರಿ ಮಾಡಿರುತ್ತಾರೆ.

○ ಪ್ರವಾಹ, ಕ್ಷಾಮ, ಭೂಕಂಪ ಮುಂತಾದ ಪ್ರಾಕೃತಿಕ ಸಂಕಟಗಳು ಉಂಟಾದಾಗ ಅವನ್ನು ತಡೆಗಟ್ಟುವುದಕ್ಕಾಗಿಯೂ, ದೇಶಾದ್ಯಂತ ಪರಿಹಾರ ಒದಗಿಸಲೂ ಭಾರತ ಸರ್ಕಾರದವರು ಒಂದು ಕಾಯಂ ಸಂಸ್ಥೆಯನ್ನು ಏರ್ಪಡಿಸಲಿರುವರು.

ಮದ್ರಾಸಿನಲ್ಲಿ ಬಿರುಗಾಳಿಯಿಂದ ನೊಂದವರಿಗಾಗಿ ೨ ಸಾವಿರ ರೂ.

ನಗರದ ಪೌರಸಭೆಯ ತೀರ್ಮಾನ

ಮೈಸೂರು ೩೦

ಇತ್ತೀಚೆಗೆ ಚಂಡ ಮಾರುತದ ಹಾವಳಿಯಿಂದ ನೊಂದ ಮದ್ರಾಸ್ ಪ್ರಾಂತದ ಜನರ ಪರಿಹಾರ ನಿಧಿಗಾಗಿ ೨ ಸಾವಿರ ರೂ ಗಳನ್ನು ಕೊಡಲು ನೆನ್ನೆ ನಗರದ ಪುರಸಭೆಯ ಸಾಮಾನ್ಯ ಅಧಿವೇಶನದಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಶ್ರೀ ಕೆ ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸಿದರು

ನಗರದ ಅಶೋಕಪುರ, ಚಿಸ್ತಗೇರಿ ಮಾನಂದವಾಡಿ ರಸ್ತೆ ಮತ್ತು ಮಂಡಿಮೊಹಲ್ಲಾಗಳ ಮತ್ತು [illegible] ಬ್ಲಾಕುಗಳಲ್ಲಿ [illegible] ರೂ ಗಳ ಖರ್ಚಿನಲ್ಲಿ ಒಳಚರಂಡಿ ವ್ಯವಸ್ಥೆ ಮಾಡಲು ತೀರ್ಮಾನಿಸಲಾಯಿತು ಚಲುವಾಂಬಾ ಅಗ್ರಹಾರ, [illegible] ಬೀದಿ, ಡಿ ಸುಬ್ಬಯ್ಯ ರಸ್ತೆ ಕೊತ್ವಾಲ ರಾಮಯ್ಯನವರ ಬೀದಿ, ಮತ್ತು ಶಾಲಿವಾಹನ ರಸ್ತೆ [illegible] ಸುಮಾರು [illegible] ರೂ ಗಳ ಖರ್ಚಿನಲ್ಲಿ ರಿಪೇರಿ ಮಾಡಿಸುವುದನ್ನು ಅಂಗೀಕರಿಸಲಾಯಿತು ಪುರಸಭೆಯ ನೌಕರರಿಗೆ ಚಿಸ್ತಗೇರಿಯಲ್ಲಿ ವಸತಿ ಗೃಹಗಳನ್ನು ಕಟ್ಟಿಕೊಡಲು ನಿರ್ಧರಿಸಲಾಯಿತು

ಚಾಮರಾಜನಗರ-ಸತ್ಯಮಂಗಲ ರೈಲ್ವೆ ವಿಚಾರವು ಏನಾಗಿದೆಯೆಂದು ತಿಳಿದು ಅದನ್ನು ಗಟ್ಟಿ ಒತ್ತಾಯಪಡಿಸಬೇಕೆಂದು ಕಾರ್ಪೊರೇಟರ್ ಶ್ರೀ ಎಂ ಕೆ ಲಿಂಗಯ್ಯನವರು ಕೋರಲು ಅಧ್ಯಕ್ಷರು ಈ ಬಗ್ಗೆ ಸೂಕ್ತ ಏರ್ಪಾಡು [illegible] ನಗರದ ಅನೇಕ ಫಲಹಾರ ಮಂದಿರಗಳಲ್ಲಿ ನೈರ್ಮಲ್ಯವನ್ನು ಕಾಪಾಡುತ್ತಿಲ್ಲವೆಂದು ಶ್ರೀ ಲಿಂಗಯ್ಯನವರು ತಿಳಿಸಿದರು

ವಿಪರೀತವಾಗಿರುವ ಸೊಳ್ಳೆ ಕಾಟವನ್ನು ತಪ್ಪಿಸಬೇಕೆಂದು ಶ್ರೀ ಎಂ ಎನ್ ತಿಮ್ಮಯ್ಯನವರೂ ಪ್ರಮುಖ ಹಬ್ಬ ಮತ್ತು ದಿನಗಳ ಆಚರಣೆ ಕಾಲದಲ್ಲಿ ಪ್ರಾಣಿವಧೆಯನ್ನು ತಪ್ಪಿಸಬೇಕೆಂದು ಡಾ॥ ಬಿ ಜಿ ಹಾಸರೂ ಕೋರಿದರು ಈಗ ಉಪಯೋಗವಿಲ್ಲದೆ ಇರುವ ಸೂಯೆಜ್ ಫಾರ್ಮಿನಲ್ಲಿ ಸರ್ಪ ಮರಗಳನ್ನು ನೆಡಿಸಬೇಕೆಂದು ಶ್ರೀ ದೊಡ್ಡ ತಿಮ್ಮೇಗೌಡರು ಸೂಚಿಸಿದರು

ಅನಂತರ ಸಾಮಾನ್ಯ ಸಭೆಯ [illegible] ಯಾಯಿತು ಸೂಯೆಜ್ ಫಾರ್ಮಿನ ಮ್ಯಾನೇಜರ್ ಹುದ್ದೆಗೆ ಶ್ರೀ ಎಂ ಪದ್ಮನಾಭಶೆಟ್ಟಿ, ನಗರದ ಎಕ್ಸಿಕ್ಯುಟಿವ್ ಇಂಜನಿಯರ್ ಆಗಿ ಶ್ರೀ ಕೃಷ್ಣಪ್ಪ ಮತ್ತು ಅಸಿಸ್ಟೆಂಟ್ ಇಂಜನಿಯರುಗಳಾಗಿ ಶ್ರೀಗಳಾದ [illegible] ಮತ್ತು [illegible] ರನ್ನು ನೇಮಕ ಮಾಡಿಕೊಳ್ಳಲು ಸಭೆಯು ಒಪ್ಪಿತು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಮಾನಪತ್ರವನ್ನು ಅರ್ಪಿಸಿದ ಸಂದರ್ಭದಲ್ಲಿ ಉಂಟಾದ ಹೆಚ್ಚುವರಿ ಖರ್ಚಿಗೆ ಸಭೆಯು ೩೦೦ ರೂ ಗಳನ್ನು ಮಂಜೂರು ಮಾಡಿತು ಶ್ರೀ ಬಿ ಕೆ ಪುಟ್ಟಯ್ಯನವರು ಮಾತನಾಡಿ ಹೊಸ ಕಾರ್ಯಕ್ರಮದ ಬಗ್ಗೆ ಅಧ್ಯಕ್ಷರು [illegible] ಸಮಿತಿಯೊಡನೆ ಸಮಾಲೋಚಿಸಲಿಲ್ಲವೆಂದು ಆಕ್ಷೇಪಿಸಿದರು

ಕೊನೆಯಲ್ಲಿ ಶ್ರೀಗಳಾದ ಟಿ ನರಸಿಂಹಯ್ಯಂಗಾರ್, ಗೋವಿಂದಯ್ಯ, ಯು ಎಲ್ ರಾಮಚಂದ್ರರಾವ್, ಬಿ ಎಲ್ ರಾಮಸ್ವಾಮಿಶೆಟ್ಟಿ ಎಚ್ ಎನ್ ಮುದ್ದಯ್ಯ, ಕೆಂಪೇಗೌಡ, ಎ ಕೃಷ್ಣಮೂರ್ತಿರಾವ್, ಬಿ ಕೆ ಪುಟ್ಟಯ್ಯ, ಎ ಜಿ ದಾಸ್, ದೊಡ್ಡತಿಮ್ಮೇಗೌಡ, ಎ ಕೆ ರಾಮಕೃಷ್ಣಯ್ಯ ಮತ್ತು ಎಸ್ ಲಿಂಗಣ್ಣನವರು ಮಾತನಾಡಿ ನಿವೃತ್ತರಾಗಲಿರುವ ಅಧ್ಯಕ್ಷ ಉಪಾಧ್ಯಕ್ಷರ ಸೇವೆಯನ್ನು ಪ್ರಶಂಸಿಸಿದರು ಶ್ರೀ ಪುಟ್ಟಸ್ವಾಮಿ ಮತ್ತು ಶ್ರೀ ಸಂಜೀವಯ್ಯನವರು ಉತ್ತರವಿತ್ತು ಕೃತಜ್ಞತೆಯನ್ನು ಸೂಚಿಸಿದರು

ಕಳ್ಳತನಗಳು

ಕೃಷ್ಣರಾಜೇಂದ್ರ ಆಸ್ಪತ್ರೆ, ನರ್ಸ್ ಕ್ವಾರ್ಟರ್ಸಿನಲ್ಲಿ ಶ್ರೀಮತಿ [illegible] ಎಂಬುವರ [illegible] ರೂ ಬಾಳುವ ಕೈ ಗಡಿಯಾರವನ್ನೂ, ಲಕ್ಷ್ಮೀಪುರದಲ್ಲಿರುವ [illegible] ವಿದ್ಯಾರ್ಥಿ ನಿಲಯದ ಬೀಗ ಮುರಿದು [illegible] ರೂ ಬಾಳುವ ಬಟ್ಟೆ ಮುಂತಾದುವನ್ನೂ ಮೊನ್ನೆ ಅಪಹರಿಸಲಾಗಿದೆ

ಭೂದಾನಕ್ಕೆ ಪೂರ್ಣ ಸ್ವತ್ತಿನ ದಾನ

ಹೈದರಾಬಾದಿನ ಖಮ್ಮಮೆಟ್ ಜಿಲ್ಲೆಯ ಯಲ್ಲಂದು ಎಂಬ ಹಳ್ಳಿಗೆ ಆಚಾರ್ಯ ವಿನೋಬಾ ಭಾವೆಯವರು ಹೋಗಿದ್ದಾಗ ಅವರಿಗೆ ಆತಿಥ್ಯ ನೀಡಿದ ಜಿ ಸೂರ್ಯನಾರಾಯಣರಾವ್ ಎಂಬುವರು ಸತ್ಯನಾರಾಯಣಪುರಂ ಎಂಬ ಹಳ್ಳಿಯಲ್ಲಿದ್ದ ತಮ್ಮ ೪೦೦ ಎಕರೆ ಜಮೀನೆಲ್ಲವನ್ನೂ ಭೂದಾನ ಯಜ್ಞಕ್ಕೆ ಒಪ್ಪಿಸಿ ಆಚಾರ್ಯ ವಿನೋಬಾರವರಿಗೆ ದಾನ ಪತ್ರ ಬರೆದುಕೊಟ್ಟರೆಂದು ವರದಿಯಾಗಿದೆ

ಕೋಲಾರದ ಚಿನ್ನದ ಗಣಿ ಬಳಿ ಹೆಚ್ಚು ಖನಿಜ ಸಂಪತ್ತು

ಬರುವ ೫ ವರ್ಷಗಳಲ್ಲಿ ಭಾರತದ ಭೂಗರ್ಭ ಸರ್ವೆ ಇಲಾಖೆಯವರು ಕೈಗೊಳ್ಳಲಿರುವ ವಿವರವಾದ ಭೂ ಸಂಶೋಧನೆಯ ಪರಿಣಾಮವಾಗಿ ಕೋಲಾರದ ಚಿನ್ನದ ಗಣಿಗಳ ಸುತ್ತಲೂ ಇರುವ ಪ್ರದೇಶದ [illegible] ಹೊಸ [illegible] ಖನಿಜ ಸಂಪತ್ತು ಪ್ರದೇಶಗಳು ಪತ್ತೆಯಾಗುವುವೆಂದು ತಿಳಿಯಲಾಗಿದೆ

ಗೀತಾಜಯಂತಿ ಸಪ್ತಾಹದ ಕಾವ್ಯವಾಚನ ಮತ್ತು ಉಪನ್ಯಾಸ

ರಾಮಾನುಜ [illegible] ರಸ್ತೆಯಲ್ಲಿರುವ ಗೀತಾಪ್ರಚಾರಿಣೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಎಂ ಸಿ ಮಹದೇವಸ್ವಾಮಿಯವರಿಂದ [illegible] ವಾಚನವೂ ಡಾ॥ ವಿ ಎಂ ಜಿ ನಂಜುಂಡಾರಾಧ್ಯರಿಂದ ವ್ಯಾಖ್ಯಾನವೂ, ನಾಳಿದ್ದು ಸಂಜೆ ೬ ಗಂಟೆಗೆ ಶ್ರೀ [illegible] ರವರಿಂದ ಗೀತೆಯ [illegible] ವಿಚಾರದ ಬಗ್ಗೆ ಉಪನ್ಯಾಸವೂ ನಡೆಯುವುವು

ಹನುಮಜ್ಜಯಂತಿ ಸಂಗೀತ

ಗ [illegible] ವಿ ಪದ್ಮಪ್ಪನವರ ಶ್ರೀ ಮಾರುತಿ ಮಂದಿರದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ವಿ॥ ಕೆ ಎಸ್ [illegible] ಜೆ ಎಸ್ ವಿಜಯಲಕ್ಷ್ಮಿಯವರ ಸಂಗೀತವೂ, ವಿ॥ ಟಿ ವೆಂಕಟರಾಮಯ್ಯರಿಂದ ವೀಣಾ ವಾದನವೂ ಮತ್ತು ವಿ॥ ವಿ ದೇವೇಂದ್ರಪ್ಪನವರ ಗಾಯನವೂ ನಡೆಯುವುವು

[illegible] ರಸ್ತೆ ಅನೆಕರೆಹಟ್ಟಿ [illegible] ದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯದಲ್ಲಿ ನಾಳೆ ಸಂಜೆ ೭ ಗಂಟೆಗೆ ವಿ॥ ಎಸ್ ಎನ್ ಮರಿಯಪ್ಪನವರ ಸಂಗೀತವು ಇದೆ

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಹುಲುಸಂದೆ	[illegible]	[illegible]
ಧನಿಯ	[illegible]	[illegible]
ತೊಗರಿ	[illegible]	[illegible]
ಸೂರ್ಯಕಾಂತಿಬೀಜ	[illegible]	[illegible]
ಹುಣಿಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ಉತ್ತು (೨೪ ಪೌಂಡು)	[illegible]	[illegible]
ತೆಂಗಿನಕಾಯಿ ೧,೦೦೦	[illegible]	[illegible]

SREE GANESH

TALKIES

GALA RELEASE On 31-12-55

New Year's Special Attraction

SIX BRIDGES TO CROSS

Starring Tony Curtis, Julia Adams and George Nader

(Based on the best selling Collier's Novel about the amazing 2½ Millions Boston Robbery)

Edited, Printed and Published by A. K. Nagarajan at Sadhvi Press, D Subbiah Road, Mysore

ಬಹುಮಾನ ಸ್ಪರ್ಧೆಗಳ ಪರಮಾವಧಿ ಮತ್ತು ಕನಿಷ್ಠಾಂಶದ ಶುಲ್ಕ

[illegible] ಬಹುಮಾನ ಸ್ಪರ್ಧೆಗಳ ಶಾಸನದ ಪ್ರಕಾರ ಸರ್ಕಾರದವರು ಕರಡು ನಿಬಂಧನೆಗಳನ್ನು ರಚಿಸಿ, ಪರಮಾವಧಿ ಮತ್ತು ಕನಿಷ್ಠಾಂಶ ಶುಲ್ಕಗಳು ೧ ರೂಪಾಯಿ ಮತ್ತು ೪ ಆಣೆಯಿರಬೇಕೆಂದೂ ಬಹುಮಾನದ ಮೊಬಲಗು ೫೦೦ ರೂ ಗೆ [illegible] ಸಾವಿರ ರೂ ಒಳಗೆ ಇರುವ ಸ್ಪರ್ಧೆಗಳಿಗೆ ೧ ರೂ ಶುಲ್ಕ ಇರಬೇಕೆಂದೂ, ೫೦೦ ರೂ ಗೆ ಒಳಪಟ್ಟು ಇದ್ದರೆ ೮ ಆಣೆ ಮತ್ತು ೫೦ ರೂ ಗಿಂತ ಕಡಿಮೆಯಾದರೆ ೪ ಆಣೆಯಿರಬೇಕೆಂದೂ ಸೂಚಿಸಿರುತ್ತಾರೆ

ಮಂಡ್ಯದ ಸಮ್ಮೇಳನ ಕ್ರಮವಾದುದೆಂದು ಎ ರಾಮಣ್ಣನವರ ಹೇಳಿಕೆ

ವಿಜಯ ಪತ್ರಿಕೆ ಸಂಪಾದಕರೂ, ಕಾರ್ಮಿಕ ಮುಂದಾಳುಗಳೂ ಆದ ಶ್ರೀ ಎ ರಾಮಣ್ಣನವರು ಮಂಡ್ಯದಲ್ಲಿ ನಾಳೆ ಸೇರಲಿರುವ ಮೈಸೂರು ವಿಲೀನ ಸಮ್ಮೇಳನವು ನ್ಯಾಯವಾದುದೆಂದೂ ಕಾಂಗ್ರೆಸ್ಸಿನವರು ಅದರಲ್ಲಿ ಭಾಗವಹಿಸುವುದರಿಂದ ಯಾವ ತಪ್ಪೂ ಆಗುವುದಿಲ್ಲವೆಂದೂ ತಿಳಿಸಿರುತ್ತಾರೆ ಸಮ್ಮೇಳನದಲ್ಲಿ ಭಾಗವಹಿಸದಿರುವಂತೆ ಹಲವು ಕಾಂಗ್ರೆಸ್ಸಿನವರಿಗೆ ಪ್ರದೇಶ ಸಮಿತಿಯವರು ಪತ್ರ ಬರೆದಿರುವ ಬಗ್ಗೆ ಆಶ್ಚರ್ಯವನ್ನು ಸೂಚಿಸಿರುತ್ತಾರೆ ಶ್ರೀ ಎಸ್ ಚನ್ನಯ್ಯನವರು ಈ ವಿಷಯವಾಗಿ ತೊಟ್ಟಿರುವ ನೀತಿಯನ್ನು ಅವರು ಟೀಕಿಸಿ, ಮೊದಲು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ತಿಳಿಸಿರುತ್ತಾರೆ

ನೂತನ ವರ್ಷದ ಶುಭಾಶಯಗಳು

ರಾಜಧಾನಿಯ ಹಳೇ ಪೋಸ್ಟ್ ಆಫೀಸು ರಸ್ತೆಯಲ್ಲಿರುವ ರತ್ನ ಶ್ರೀ ಯ ಮುದ್ರಣಾಲಯದ ಶ್ರೀ ಎಸ್ ಪಿ ಸುರೇಂದ್ರನಾಥ್ ಮತ್ತು ಸಹೋದರರೂ, ದೇವರಾಜ ಮಾರ್ಕೆಟ್ಟಿನ ನಾಟಿಗ್ಯಸ್ಟೋರ್ಸಿನ ಮಾಲೀಕರಾದ ಶ್ರೀ ಎನ್ ಗೋಪಾಲರಾಯರೂ ಮತ್ತು ಆಯುರ್ವೇದ ವೈದ್ಯರಾದ ಶ್ರೀ ವಿ ಆರ್ ಎಸ್ ರಾಯರೂ ಮತ್ತು ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಸೋಮ ರಾಫಿ ವರ್ಕ್ಸಿನ ಶ್ರೀ ಸೋಮಣ್ಣನವರೂ ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಬಂಗ್ಲೆ ಸೈಟುಗಳು?

ಲಕ್ಷ್ಮೀಪುರಂ, ಯಾದವಗಿರಿ, ಜಯಲಕ್ಷ್ಮೀಪುರಂ

★

ವಿವರಗಳಿಗೆ ಆಫೀಸಿಗೆ ದಯಮಾಡಿ

ಬಿ. ಎಸ್. ಸುಬ್ಬರಾವ್,

ಜಗನ್ಮೋಹನ್ ಬಂಗ್ಲಾ ಬೀದಿ, ಮೈಸೂರು

ಪ್ರಜಾ ಸಮಾಜವಾದಿ ಪಕ್ಷ[illegible] ಪುನಃ ನರೇಂದ್ರದೇವ್ ಅಧ್ಯಕ್ಷ[illegible]

ಆಚಾರ್ಯ ನರೇಂದ್ರ ದೇವರನ್ನು ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿಯೂ, [illegible] ಕಸಿಂಗ್‌ರವರನ್ನು ಕಾರ್ಯದರ್ಶಿಯನ್ನಾಗಿ[illegible] ಚುನಾಯಿಸಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯ[illegible]

ಬೆಳಿಗ್ಗೆ ೬-೫ ಕನ್ನಡ ಪದಗಳು ೭ ೩೦ [illegible] ಸಂಗೀತ ೮ ೧೫ ನಾಟಕ-ಯಮುನ [illegible] ಧ್ಯಾಹ್ನ ೧೨ ೫ ವೆಂಕಟೇಶ್-ಸಂಗೀತ [illegible] ವಾದ್ಯ ಸಂಗೀತ ೧ ರಿಕಾರ್ಡು ೧ ೪೦ [illegible] ೧ ೫೦ ಸುಕನ್ಯಾ ಸ್ವಾಮಿನಾಥನ್ ಸಂಗೀ[illegible] ಸಂಜೆ ೫-೪೦ ಕೆ ವೆಂಕಟೇಶ್. ಸಂಗೀತ [illegible] ನಾವು ಮತ್ತು ನಮ್ಮವರು ೭ ೪೦ ವಿಶಂಗರು[illegible] ಕೃ ೮ ಸಂಗೀತೋತ್ಸವ ಮದ್ರಾಸ್ ರಿಲೆ [illegible] ಬೋಧನ ರಾಷ್ಟ್ರೀಯ ಕಾರ್ಯಕ್ರಮ ಭಾಷಣ [illegible] ಸಂಗೀತೋತ್ಸವ-ಮದ್ರಾಸ್ ರಿಲೆ ೯ ೧೫ [illegible] ಗೀತೆಗಳು ೯ ೪೦ ಸಂಗೀತೋತ್ಸವ ಮದ್ರಾಸ್ [illegible]

ಒಲಂಪಿಯಾ ಟಾಕೀಸ್[illegible]

ಹೊಸ ವರ್ಷದ ಅತ್ಯುತ್ತಮ ಚಿತ್ರ ಪ್ರದರ್ಶ[illegible]

1-1-56ನೇ ಭಾನುವಾರದಿಂದ

ಅನೋಖಿ ಪ್ರಾರಂಭ

ಜೆ ಆಂಡ್ ಜೆ ಫಿಲಸ್‌ರವರ ಪರಿಚಯ[illegible]

ಪಾತ್ರ - ಪಂಡರಿಬಾ, ಪ್ರತಾಪಸಿಂಹ[illegible], ಅಶ್ವತ್ಥನಾರಾಯಣ, ಸಜ್ಜನ್

ಜನ ಸೇವೆಯೇ ಜನಾರ್ದನ ಸೇವೆ!

MODERN DAIRY FAR[illegible]

ಕ್ಷೀರ ಕ್ಷೇತ್ರ

(ಗಾಯತ್ರೀ ದೇವಿ ಪ್ರಸನ್ನಮ್ಮನವರ [illegible])

139 ನಾರಾಯಣಶಾಸ್ತ್ರಿ ರೋಡ್, ಮೈಸೂ[illegible]

ಮನೆಯಲ್ಲಿಯೇ, ನಿಮಗೆ ಅಚ್ಚುಕಟ್ಟಾಗಿ ಶುದ್ಧವಾ[illegible] ಸ್ಥಳದಲ್ಲೇ ಕರೆದ ಹಾಲು ಮತ್ತು ಶುದ್ಧ ಕೆನೆ[illegible] ಸರು ಮತ್ತು ಬೆಣ್ಣೆ ಬೇಕಾದರೆ ಇಂದೇ ಮೇಲ[illegible] ಸ್ಥಳಕ್ಕೆ ಭೇಟಿ ಕೊಟ್ಟು ಪರೀಕ್ಷಿಸಬೇಕಾಗಿ ವಿನಂ[illegible] ಹಾಲು, ಮೊಸರು, ಬೆಣ್ಣೆ ಇತ್ಯಾದಿಗಳನ್ನು [illegible] ಶಿಯಾಗಿಯೂ ಮತ್ತು ಒಟ್ಟಾಗಿಯೂ, ಮ[illegible] ಸೊಡಲಾದ ದೊಡ್ಡದೊಡ್ಡ ಸಮಾರಂಭಗಳಿ[illegible] ರ್ ಮೂಲಕ ಒದಗಿಸಲಾಗುತ್ತದೆ

ಹಾಲು ಮತ್ತು ಮೊಸರು ಸೇರಿಗೆ 4| [illegible]

31-12-55 [illegible]

ಲಕ್ಷ್ಮೀ ಚಿತ್ರ ★ ಅನೋಖಿ ವಾರ 2 ನೇ ವಾರ

ಎಂ ಎ ವಿ ಪಿಕ್ಚರ್ಸ್‌ರವರ ತಮಿಳು ಚಿ[illegible]

★ ಟೌನ್ ಬಸ್ [illegible]

ಪಾತ್ರ ಅಂಜಲಿದೇವಿ, ಎಂ ಎನ್ ರಾ[illegible] ಮುತ್ತುಲಕ್ಷ್ಮಿ, ಅಂಗಮುತ್ತು, ಕರುಣಾ[illegible] ಟಿ ಕೆ ರಾಮಚಂದ್ರನ್, ಎನ್ ಎನ್ ಕಣ್ಣ[illegible] ಮುಂತಾದವರು

[Zenith Movies Rel[illegible]

NOTICE

We hereby announce that Messrs BOMBAY ANAND BHAVAN STORES, New Statue Square, are no longer the agents for Devidayal Stainless Steel Products in Mysore City and feel pleasure in announcing to open a new agency office under the proprietorship of Shree SATYAPALL AGARWAL in Mysore shortly. For your ready requirements, please contact –

DEVIDAYAL STAINLESS STEEL AGENCY,

364 Chickpet, Bangalore-2

PHONE 5034 Branch—MALLESWARAM

ಪ್ರಕಟಣೆ

ಮೆಸರ್ಸ್ ಬಾಂಬೆ ಆನಂದ ಭವನ ಸ್ಟೋರ್ಸ್, ನ್ಯೂ ಸ್ಟ್ಯಾಚ್ಯೂ ಸ್ಕ್ವೇರ್ ಇವರು ಇನ್ನು ಮುಂದೆ ಮೈಸೂರು ನಗರದಲ್ಲಿ ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಪದಾರ್ಥಗಳಿಗೆ ಏಜೆಂಟರಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ ಮತ್ತು ಸದ್ಯದಲ್ಲೇ ಸತ್ಯಪಾಲ್ ಅಗರ್‌ವಾಲ್‌ರವರ ಮಾಲೀಕತ್ವದಲ್ಲಿ ಏಜೆನ್ಸಿ ಕಛೇರಿಯೊಂದನ್ನು ಮೈಸೂರು ನಗರದಲ್ಲಿ ಆರಂಭಿಸಲಿರುವೆವೆಂದು ತಿಳಿಸಲು ಹರ್ಷಿಸುತ್ತೇವೆ

ನಿಮ್ಮ ತುರ್ತಿನ ಅವಶ್ಯಕತೆಗಳಿಗೆ ದಯವಿಟ್ಟು ಬರೆಯಿರಿ

ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಏಜೆನ್ಸಿ,

364. ಚಿಕ್ಕಪೇಟೆ :: ಬೆಂಗಳೂರು-2

ಫೋನ್ : 5034 ಶಾಖೆ : ಮಲ್ಲೇಶ್ವರಂ